ಮಂಗಳೂರು ವಿಶ್ವವಿದ್ಯಾನಿಲಯ
ದೂರ ಶಿಕ್ಷಣ ಕೇಂದ್ರ , ಮಂಗಳಗಂಗೋತ್ರಿ 574 199

ಕೋರ್ಸ್–2

# ಸಮಕಾಲೀನ ಭಾರತ ಮತ್ತು ಶಿಕ್ಷಣ

## (ಶಿಕ್ಷಣದ ದೃಷ್ಟಿಕೋನಗಳು)

## ಬ್ಲಾಕ್ಸ್ 1, 2, 3 & 4

## ಬಿ.ಎಡ್. ಪದವಿ ಕಾರ್ಯಕ್ರಮ

(ಮುಕ್ತ ಮತ್ತು ದೂರ ಕಲಿಕೆ)

## ಪ್ರಥಮ ವರ್ಷ ಬಿ.ಎಡ್.

ಪ್ರಕಾಶಕರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ 574 199

**Contemporary India and Education :** Self learning Material for B.Ed. Degree Programme (Open and Distance Learning) of First Year prepared by Dr. Asha B.N., and Ms. Janaki A. translated by Prof. Nagarathna K.R. and Dr. Shashikala A. Published by The Registrar, Mangalore University, Mangalagangothri - 574 199, Karnataka.
**Year 2018-19**

**Developed by:**
**The Director,**
**Centre for Distance Education, Mangalore University,**
**Mangalagangothri - 574 199, Karnataka.**

**Course Co-ordinator**
**Dr. Chidananda A.L., B.Ed.(ODL) Programme,**
**Centre for Distance Education, Mangalore University,**
**Mangalagangothri - 574 199, Karnataka.**

Printed at Datacon Technologies, #31/10, Left of Magadi Main Road,
Behind Saraswathi Convention Centre, Bangalore - 560 079, Bangalore.
© The Registrar, Mangalore University
DTP at: Sagar Offset Printers, Alake , Mangalore

| | | |
|---|---|---|
| **ಸಮಕಾಲೀನ ಭಾರತ ಮತ್ತು ಶಿಕ್ಷಣ (ಶಿಕ್ಷಣದ ದೃಷ್ಟಿಕೋನಗಳು)** | : | **ಪ್ರಥಮ ವರ್ಷದ ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಅಧ್ಯಯನ ಸಾಮಗ್ರಿ** |
| **ರಚನಕಾರರು** | : | ಡಾ. ಆಶಾ ಬಿ.ಎನ್. ಮತ್ತು ಶ್ರೀಮತಿ ಜಾನಕಿ ಎ. |
| **ಅನುವಾದಕರು** | : | ಪ್ರೊ. ನಾಗರತ್ನ ಕೆ.ಆರ್. ಮತ್ತು ಡಾ. ಶಶಿಕಲ ಎ. |
| **ಪ್ರಕಾಶಕರು** | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ – 574 199, ಕರ್ನಾಟಕ |
| **ವರ್ಷ** | : | 2018–19 |
| **© ಹಕ್ಕುಗಳು** | : | ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ |
| **ಸಿದ್ಧಪಡಿಸಿದವರು** | : | **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ** |
| **ಕೋರ್ಸ್ ಸಂಯೋಜಕರು** | : | **ಡಾ. ಚಿದಾನಂದ ಎ.ಎಲ್.** ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |
| **ಡಿ.ಟಿ.ಪಿ.** | : | ಸಾಗರ್ ಆಫ್‌ಸೆಟ್ ಪ್ರಿಂಟರ್ಸ್, ಅಳಕೆ, ಮಂಗಳೂರು ಮೊಬೈಲ್ : 9480228399 |
| **ಮುದ್ರಕರು** | : | ಡಾಟಾಕಾನ್ ಟೆಕ್ನಾಲಜೀಸ್, # 31/10, ಮಾಗಡಿ ಮುಖ್ಯರಸ್ತೆ ಎಡಭಾಗ, ಸರಸ್ವತಿ ಕನ್ವೆನ್ಷನ್ ಸೆಂಟರ್ ಹಿಂಭಾಗ, ಬೆಂಗಳೂರು – 560 079 |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

## ಕೋರ್ಸ್–2

# ಸಮಕಾಲೀನ ಭಾರತ ಮತ್ತು ಶಿಕ್ಷಣ

**(ಶಿಕ್ಷಣದ ದೃಷ್ಟಿಕೋನಗಳು)**


**ಕುಲಸಚಿವರು** — **ಪ್ರಕಾಶಕರು**
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199



**ಕೋರ್ಸ್ ಲೇಖಕರು**

**ಡಾ. ಆಶಾ ಬಿ.ಎನ್.** : ಬ್ಲಾಕ್ – 1
**ಶ್ರೀಮತಿ ಜಾನಕಿ ಎ.** : ಬ್ಲಾಕ್ – 2, 3 & 4

**ಕೋರ್ಸ್ ಅನುವಾದಕರು**

**ಪ್ರೊ. ನಾಗರತ್ನ ಕೆ.ಆರ್.** : ಬ್ಲಾಕ್ – 1
**ಡಾ. ಶಶಿಕಲ ಎ.** : ಬ್ಲಾಕ್ – 2, 3 & 4

(* ಶ್ರೀ ಹೆರ್ಲೆ ಜಿ., ಡಾ. ಶಿವಕುಮಾರ್, ಶ್ರೀಮತಿ ಜಾನಕಿ, ಡಾ. ವೆಂಕೋಬರಾವ್ ಎಂ., ಡಾ. ಕೆ.ಚ್. ಪ್ರಭು, ಶ್ರೀಮತಿ ಪೂರ್ಣಿಮಾ ಹೆಗಡೆ, ಶ್ರೀ ಸುರೇಶ್ ಕೆ., ಶ್ರೀ ಮೋಹನ್ ಕುಮಾರ್ ಟಿ.ವಿ., ಶ್ರೀ ಶ್ರೀನಿವಾಸ ಮೂರ್ತಿ ಹೆಚ್.ಟಿ. ಇವರುಗಳು ಬ್ಲಾಕ್–2, 3 ಮತ್ತು 4ರ ಅನುವಾದ ಕಾರ್ಯದಲ್ಲಿ ಸಹಕರಿಸಿದ್ದಾರೆ.)

**ಕೋರ್ಸ್ ಪರಿಶೀಲಕರು**

**ಡಾ. ಶಶಿಕಲ ಎ.**
ಸಲಹೆಗಾರರರು
ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ
(ಮುಕ್ತ ಮತ್ತು ದೂರ ಕಲಿಕೆ)
ದೂರ ಶಿಕ್ಷಣ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ –574 199

**ಸಂಪಾದನ ಸಹಾಯಕರು**

**ಡಾ. ಚಿದಾನಂದ ಎ.ಎಲ್.**

## ವಿಷಯ ಸೂಚಿ

### ಕೋರ್ಸಿ ಪಕ್ಷಿನೋಟ


**ಬ್ಲಾಕ್–1 : ಸಮಕಾಲೀನ ಭಾರತ**

ಘಟಕ–1 : ಸಾಮಾಜಿಕ ಸ್ತರೀಕರಣ: ವಿಧಗಳು ಮತ್ತು ಕಾರ್ಯಗಳು, ಜಾತಿ ಮತ್ತು ವರ್ಗ, ಪ್ರದೇಶ ಮತ್ತು ಧರ್ಮ 1

ಘಟಕ–2 : ಸಮಾಜದ ವಿಧಗಳು: ಬುಡಕಟ್ಟು, ಕೃಷಿ, ಕೈಗಾರಿಕಾ ನಂತರದ ಸಮಾಜ 13

ಘಟಕ–3 : ಭಾರತದ ಶೈಕ್ಷಣಿಕ ಸನ್ನಿವೇಶ: ಶೈಕ್ಷಣಿಕ ಅವಕಾಶಗಳು, ಧರ್ಮ, ಜಾತಿ, ವರ್ಗ, ಲಿಂಗ, ಭಾಷೆ, ಪ್ರದೇಶ ಬುಡಕಟ್ಟು ಇವುಗಳಿಗೆ ಸಂಬಂಧಿಸಿದ ವಿಭಿನ್ನತೆಗಳು 26

ಘಟಕ–4 : ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವಲ್ಲಿನ ಸವಾಲುಗಳು 32

ಘಟಕ–5 : ಶಿಕ್ಷಣವನ್ನು ಕುರಿತ ವಿಭಿನ್ನ ಗುಂಪುಗಳ ಬೇಡಿಕೆಗಳು 38

ಘಟಕ–6 : ಶಿಕ್ಷಣದ ಮೇಲೆ ನಗರೀಕರಣ, ಕೈಗಾರಿಕೀಕರಣ, ಜಾಗತೀಕರಣ, ಆಧುನೀಕರಣ, ಆರ್ಥಿಕ ಉದಾರೀಕರಣ, ಡಿಜಿಟಲೀಕರಣ – ಇವುಗಳ ಪ್ರಭಾವ 52

**ಬ್ಲಾಕ್–2 : ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು**

ಘಟಕ–1 : ರಾಷ್ಟ್ರೀಯ ಆದರ್ಶಗಳನ್ನು ಬಿಂಬಿಸುವ ಸಂವಿಧಾನಾತ್ಮಕ ಪ್ರಾವಧಾನಗಳು 69

ಘಟಕ–2 : ಪ್ರಜಾಪ್ರಭುತ್ವ ಮತ್ತು ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಇತರರ ಯೋಗಕ್ಷೇಮದ ಕಾಳಜಿ, ಜಾತ್ಯತೀತತೆ, ಮಾನವ ಘನತೆ ಮತ್ತು ಹಕ್ಕುಗಳಿಗೆ ಗೌರವ – ಈ ಮೌಲ್ಯಗಳು 80

ಘಟಕ–3 : ವಿಕಾಸಶೀಲ ರಾಷ್ಟ್ರವಾಗಿ ಭಾರತ : ಕಾಣ್ಕೆ, ಸ್ವರೂಪ ಮತ್ತು ಪ್ರಮುಖ ಲಕ್ಷಣಗಳು : ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ರಾಜಕೀಯ, ಫೆಡರಲ್ ವ್ಯವಸ್ಥೆ – ಶೈಕ್ಷಣಿಕ ನಿಹಿತಾರ್ಥಗಳು 99

ಘಟಕ–4 : ಪೌರರ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು 110

ಘಟಕ–5 : ಶಿಕ್ಷಣದ ಸಾರ್ವತ್ರೀಕರಣ ಮತ್ತು ಶಿಕ್ಷಣದ ಹಕ್ಕು ಕಾಯ್ದೆ (RTE) 2009 ಇವುಗಳ ಕುರಿತು ಸಂವಿಧಾನಿಕ ಹಸ್ತಕ್ಷೇಪ 129

ಘಟಕ–6 : ಶಿಕ್ಷಣದ ಬೆಳವಣಿಗೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಪಾತ್ರ 141

**ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು**

ಘಟಕ–1 : ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ಶೈಕ್ಷಣಿಕ ಸುಧಾರಣೆಯ ಪಕ್ಷಿನೋಟ 150

ಘಟಕ–2 : ಸರ್ವ ಶಿಕ್ಷಾ ಅಭಿಯಾನ 159

ಘಟಕ–3 : ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ 170

ಘಟಕ–4 : ಶಾಲಾ ಮಕ್ಕಳಿಗಾಗಿ ವಿಶೇಷ ಯೋಜನೆಗಳು 177

ಘಟಕ–5 : ಶಾಲಾ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ : ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ (National Repositiory of Open Educatonal Resources – NROER) 184

ಘಟಕ–6 : ಶಿಕ್ಷಕ ಮತ್ತು ಬೋಧನೆಯ ಕುರಿತು ಪಂಡಿತ ಮದನ ಮೋಹನ ಮಾಲವೀಯ ರಾಷ್ಟ್ರೀಯ ಮಿಶನ್ 195

**ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ : ಕಾಳಜಿಗಳು ಮತ್ತು ವಿಚಾರಗಳು**

ಘಟಕ–1 : ಆರ್.ಟಿ.ಇ. ಕಾಯಿದೆ 2009ರ ಅನುಷ್ಠಾನಕ್ಕೆ ಸಂಬಂಧಿಸಿದ ಸವಾಲುಗಳು 204

ಘಟಕ–2 : ಶಿಕ್ಷಣದ ಹಕ್ಕು ಮತ್ತು ಸಾರ್ವತ್ರಿಕ ಅವಕಾಶ 213

ಘಟಕ–3 : ಶೈಕ್ಷಣಿಕ ಅವಕಾಶಗಳ ಸಮಾನತೆ 220

ಘಟಕ–4 : ಶಿಕ್ಷಣದಲ್ಲಿ ಅಸಮಾನತೆ 228

ಘಟಕ–5 : ಶಾಲಾ ಶಿಕ್ಷಣದಲ್ಲಿ ಅಸಮಾನತೆ : ಸರ್ಕಾರಿ–ಖಾಸಗಿ ಶಾಲೆಗಳು, ಗ್ರಾಮ–ನಗರ ಶಾಲೆಗಳು, ಏಕೋಪಾಧ್ಯಾಯ ಶಾಲೆಗಳು, ಹಾಗೂ ಇತರ ರೀತಿಯ ಅಸಮಾನತೆಗಳು ಮತ್ತು ಈ ಅಸಮಾನತೆಗೆ ಕಾರಣವಾದ ಪ್ರಕ್ರಿಯೆಗಳು 239

ಘಟಕ–6 : ಶಿಕ್ಷಣ ಮತ್ತು ಶೈಕ್ಷಣಿಕ ಅವಕಾಶಗಳ ಸಮಾನತೆಯ ನಿಹಿತಾರ್ಥಗಳು 248

***********

# ಕೋರ್ಸಿನ ಪಕ್ಷಿನೋಟ

ಪ್ರೀತಿಯ ವಿದ್ಯಾರ್ಥಿ/ ವಿದ್ಯಾರ್ಥಿನಿಯರೇ,

ಭಾರತೀಯ ಸಮಾಜ ಮತ್ತು ಶಿಕ್ಷಣದ ಕುರಿತಾದ ಅಧ್ಯಯನದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಸಹಾಯಮಾಡುವುದು ಈ ಪತ್ರಿಕೆಯ ಉದ್ದೇಶ. ಈ ಪ್ರಕ್ರಿಯೆಯಲ್ಲಿ ವಿಭಿನ್ನ ಸಮುದಾಯಗಳ ಮಕ್ಕಳು ಮತ್ತು ಶಾಲೆಗಳ ವಿಶ್ಲೇಷಣೆಗೆ ಅಗತ್ಯವಾದ ಸಮಾಜಶಾಸ್ತ್ರೀಯ ವಿಶ್ಲೇಷಣೆಯ ಪರಿಕಲ್ಪನಾತ್ಮಕ ಸಾಧನಗಳನ್ನು ಕುರಿತ ಅರಿವನ್ನು ನೀವು ಪಡೆಯುತ್ತೀರಿ. ಈ ಪತ್ರಿಕೆಯು ಪ್ರಮುಖವಾಗಿ ಎರಡು ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸಿದೆ. ಒಂದು, ಭಾರತದ ಸಮಾಜದಲ್ಲಿನ ವೈವಿಧ್ಯತೆ, ಅಸಮಾನತೆ ಮತ್ತು ಸಮಾಜದ ಅಂಚಿನಲ್ಲಿಡುವಿಕೆ ಮತ್ತು ಇವುಗಳ ಶೈಕ್ಷಣಿಕ ನಿಹಿತಾರ್ಥಗಳು ಮತ್ತು ಎರಡನೆಯದಾಗಿ, ಭಾರತದಲ್ಲಿ ಸಾರ್ವಜನಿಕ ಶಿಕ್ಷಣದ ನೀತಿಚೌಕಟ್ಟು ಮತ್ತು ಅವುಗಳ ಅನ್ವಯ.

ಸಮಾಜದ ವೈವಿಧ್ಯತೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡುವಾಗ ಈ ವೈವಿಧ್ಯತೆಗಳು ಬದುಕನ್ನು ಶ್ರೀಮಂತಗೊಳಿಸುವ ರೀತಿ, ಅದೇ ಸಮಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಒಡ್ಡುವ ಸವಾಲುಗಳನ್ನು ಕುರಿತು ನೀವು ವಿಮರ್ಶಿಸಲಿದ್ದೀರಿ. ವಿಭಿನ್ನ ಸಮುದಾಯಗಳ ಮಕ್ಕಳು ವಿಭಿನ್ನ ರೀತಿಯ ಜ್ಞಾನ ಮತ್ತು ಅನುಭವಗಳ ಹಿನ್ನೆಲೆಯೊಂದಿಗೆ ಶಾಲೆಯನ್ನು ಪ್ರವೇಶಿಸುತ್ತಾರೆ. ಆ ಕಾರಣದಿಂದಾಗಿ ಅವರ ಶೈಕ್ಷಣಿಕ ಬೇಡಿಕೆಗಳೂ ಭಿನ್ನವಾಗಿರುತ್ತವೆ. ಈ ಬೇಡಿಕೆಗಳನ್ನು ಅರ್ಥಮಾಡಿಕೊಳ್ಳುವುದರ ಮೂಲಕ, ಶಿಕ್ಷಣವು ವಿದ್ಯಾರ್ಥಿಗಳಲ್ಲಿ ವಿಭಿನ್ನತೆಯ ಕುರಿತಾದ ಗೌರವವನ್ನು ಬೆಳೆಸಬೇಕಾದ ಅಗತ್ಯ,ಜೊತೆಗೆ ಕೂಡಿ ಬಾಳುವುದಕ್ಕೆ ಬೇಕಾದ ಸಾಮಾಜಿಕ ಚೌಕಟ್ಟನ್ನು ಹುಟ್ಟುಹಾಕಬೇಕಾದ ವಿಶಿಷ್ಟ ಜವಾಬ್ದಾರಿ ಇವುಗಳನ್ನು ಪರಿಗಣಿಸಬೇಕಾದ ಆವಶ್ಯಕತೆಯನ್ನೂ ಅದನ್ನು ನಿರ್ವಹಿಸಬಹುದಾದ ರೀತಿಗಳನ್ನೂ ನೀವು ವಿಮರ್ಶಿಸುವಿರಿ.

ಈ ಪತ್ರಿಕೆಯು ನಮ್ಮ ಸಂವಿಧಾನದ ವಿವಿಧ ಅಂಶಗಳನ್ನು, ಅದರಲ್ಲೂ ಪ್ರಮುಖವಾಗಿ ಸಂವಿಧಾನದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು ಮತ್ತು ಪೌರರ ಕರ್ತವ್ಯಗಳು ಇವುಗಳನ್ನು ಪರಿಚಯಿಸುತ್ತದೆ. ಇದರ ಜೊತೆಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ 'ಸಂವಿಧಾನಾತ್ಮಕ ಮೌಲ್ಯಗಳ'ನ್ನು ನೀವು ವಿಮರ್ಶಿಸುವ ಆವಶ್ಯಕತೆ ಇದೆ. ಈ ನಿಟ್ಟಿನಲ್ಲಿ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಡ್ಡಿಯಾಗುವ, ಹಾಗೆಯೇ ಸಂವಿಧಾನದ ಗುರಿಗಳಾದ ಸ್ವಾತಂತ್ರ್ಯ, ನ್ಯಾಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳಿಗೆ ಬಾಧಕವಾಗುವ ಅಸಮಾನತೆ, ತಾರತಮ್ಯ, ಸಮಾಜದ ಅಂಚಿನಲ್ಲಿಡುವಿಕೆ ಮುಂತಾದ ವಿಚಾರಗಳನ್ನು ನೀವು ವಿಶ್ಲೇಷಿಸುವಿರಿ.

ಭಾರತದಲ್ಲಿ ಸಾರ್ವಜನಿಕ ಶಿಕ್ಷಣದ ನೀತಿ ಚೌಕಟ್ಟನ್ನು ಅಭ್ಯಾಸ ಮಾಡುವ ಸಂದರ್ಭದಲ್ಲಿ ಹಲವಾರು ವರ್ಷಗಳಿಂದ ಚರ್ಚೆಗೆ ಒಳಗಾಗಿ ರೂಪುಗೊಂಡಿರುವ ಅನೇಕ ಶೈಕ್ಷಣಿಕ ನೀತಿನಿಯಮಗಳನ್ನೂ ವಿವಿಧ ಕ್ಷೇತ್ರಗಳಲ್ಲಿ ಅವುಗಳ ಅನ್ವಯ, ಸಾರ್ಥಕತೆಗಳನ್ನೂ ವಿಶ್ಲೇಷಿಸಲಿದ್ದೀರಿ. ಇದರ ಜೊತೆಗೆ ಈ ಶೈಕ್ಷಣಿಕ ನೀತಿಗಳ ಹಿನ್ನೆಲೆಯಲ್ಲಿ ಅನುಷ್ಠಾನಗೊಂಡಿರುವ ಸರ್ವಶಿಕ್ಷಾ ಅಭಿಯಾನ ಮುಂತಾದ ಕಾರ್ಯಕ್ರಮಗಳು 'ಶಿಕ್ಷಣದ ಹಕ್ಕು' ಮುಂತಾದ ನಿಯಮಗಳು ಎಷ್ಟರಮಟ್ಟಿಗೆ ಸಫಲವಾಗಿವೆ ಎಂಬುದನ್ನೂ ಗುರುತಿಸಲಿದ್ದೀರಿ. ಈ ಕಾರ್ಯಕ್ರಮಗಳು, ನೀತಿಚೌಕಟ್ಟುಗಳ ಸಾಧಕ ಬಾಧಕಗಳನ್ನೂ

ಚರ್ಚಿಸಲಿದ್ದೀರಿ.

ಮೇಲಿನ ಅಂಶಗಳಿಗೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತುತ ಸ್ವಕಲಿಕಾ ಸಾಮಗ್ರಿಯಲ್ಲಿ ನಾಲ್ಕು ಬ್ಲಾಕ್‌ಗಳಲ್ಲಿ ವಿವರಿಸಲಾಗಿದೆ. ಮೊದಲನೇ ಬ್ಲಾಕ್‌ನಲ್ಲಿ, ಭಾರತದ ಸಮಕಾಲೀನ ಸಾಮಾಜಿಕ ಸನ್ನಿವೇಶ, ಸಮಾಜದಲ್ಲಿರುವ ವೈವಿಧ್ಯತೆಗಳು, ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ಸಾಮಾಜಿಕ ವರ್ಗಗಳ ಬೇಡಿಕೆಗಳು ಇವುಗಳನ್ನು ಚರ್ಚಿಸಲಾಗಿದೆ. ಭಾರತ ಸಂವಿಧಾನದ ಆದರ್ಶಗಳು, ರಾಷ್ಟ್ರೀಯ ಕಾಣ್ಕೆ, ಮೌಲ್ಯಗಳು, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಇವುಗಳನ್ನೊಳಗೊಂಡಂತೆ, ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಅವಕಾಶಗಳನ್ನು ಎರಡನೆಯ ಬ್ಲಾಕ್‌ನಲ್ಲಿ ಗಮನಿಸಲಾಗಿದೆ. ಮೂರನೆಯ ಬ್ಲಾಕ್‌ನಲ್ಲಿ ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ರೂಪಿಸಿಕೊಂಡ ನೀತಿನಿಯಮಗಳು ಮತ್ತು ಕಾರ್ಯಚೌಕಟ್ಟು ಹಾಗೂ ಅವುಗಳ ಸಾಧಕಬಾಧಕಗಳನ್ನು ಗುರುತಿಸಲಾಗಿದೆ. ನಾಲ್ಕನೇ ಬ್ಲಾಕ್‌ನಲ್ಲಿ ' ಶಿಕ್ಷಣದ ಹಕ್ಕು' ಕಾಯಿದೆ ಮತ್ತು ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ, ಇತರ ನೀತಿನಿಯಮಗಳು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡಂತೆ ಸಮಕಾಲೀನ ಭಾರತದ ಶೈಕ್ಷಣಿಕ ಕಾಳಜಿಗಳು ಮತ್ತು ವಿಚಾರಗಳನ್ನು ವಿಶ್ಲೇಷಿಸಲಾಗಿದೆ.

ಒಟ್ಟಿನಲ್ಲಿ ಈ ಪತ್ರಿಕೆಯು ಸಮಕಾಲೀನ ಭಾರತದಲ್ಲಿನ ಶೈಕ್ಷಣಿಕ ಸ್ಥಿತಿಗತಿಗಳ ಸಮಗ್ರಚಿತ್ರವನ್ನು ಗುರುತಿಸಿಕೊಳ್ಳಲು ಸಹಾಯಮಾಡುತ್ತದೆ. ಈ ಕಲಿಕಾ ಸಾಮಗ್ರಿಯನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಪ್ರಸ್ತುತ ಶೈಕ್ಷಣಿಕ ಸನ್ನಿವೇಶದ ಸವಾಲುಗಳನ್ನು ಎದುರಿಸಲು ಅಗತ್ಯವಾದ ಅರಿವು ಕಟ್ಟಿಕೊಳ್ಳಲು ಪ್ರಯತ್ನಿಸಿ.

***************

# ಬ್ಲಾಕ್–1 : ಸಮಕಾಲೀನ ಭಾರತ

## ಘಟಕ–1 : ಸಾಮಾಜಿಕ ಸ್ತರೀಕರಣ: ವಿಧಗಳು ಮತ್ತು ಕಾರ್ಯಗಳು, ಜಾತಿ ಮತ್ತು ವರ್ಗ, ಪ್ರದೇಶ ಮತ್ತು ಧರ್ಮ

### ಘಟಕದ ರಚನೆ


1.1.1. ಕಲಿಕೆಯ ಉದ್ದೇಶಗಳು

1.1.2. ಪೀಠಿಕೆ

1.1.3. ಕಲಿಕೆಯ ಅಂಶಗಳು ಹಾಗೂ ಕಲಿಕೆಯ ಚಟುವಟಿಕೆಗಳು

1.1.3.1. ಸಾಮಾಜಿಕ ಶ್ರೇಣೀಕರಣದ ಅರ್ಥ ಮತ್ತು ವ್ಯಾಖ್ಯೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1.1.3.2. ಸಾಮಾಜಿಕ ಶ್ರೇಣೀಕರಣದ ಸ್ವರೂಪಗಳು ಮತ್ತು ಕಾರ್ಯಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

1.1.4. ಸಾರಾಂಶಿಸೋಣ

1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

1.1.6. ಘಟಕಾಂತ್ಯ ಅಭ್ಯಾಸಗಳು

1.1.7. ಪರಾಮರ್ಶನ ಸೂಚಿ


### 1.1.1. ಕಲಿಕೆಯ ಉದ್ದೇಶಗಳು

- ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;
- ಸಾಮಾಜಿಕ ಶ್ರೇಣೀಕರಣದ ಪರಿಕಲ್ಪನೆಯನ್ನು ವಿವರಿಸುವರು;
- ಶ್ರೇಣೀಕರಣದ ವಿವಿಧ ರೂಪಗಳು ಮತ್ತು ಕಾರ್ಯಗಳನ್ನು ವಿಶ್ಲೇಷಿಸುವರು;
- ವರ್ಗ ಮತ್ತು ಜಾತಿ ವ್ಯವಸ್ಥೆಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವರು; ಮತ್ತು
- ಸಾಮಾಜಿಕ ಶ್ರೇಣೀಕರಣದ ವಿವಿಧ ಪ್ರಕಾರಗಳು ಮತ್ತು ಲಕ್ಷಣಗಳನ್ನು ವಿವರಿಸುವರು.

### 1.1.2. ಪೀಠಿಕೆ

ಭಾರತವು ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ. ಅಸಂಖ್ಯಾತ ಸಣ್ಣ ಸಮಾಜಗಳನ್ನೊಳಗೊಂಡ ಭಾರತವು ಒಂದು ರಾಷ್ಟ್ರವಾಗಿ ಅತಿ ದೊಡ್ಡ ಸಮಾಜವನ್ನು ಪ್ರತಿಬಿಂಬಿಸುತ್ತದೆ. ಸಮಾಜವೆಂದರೆ, ನಿರಂತರವಾಗಿ ಪರಸ್ಪರ ಸಂವಹನ ಮಾಡುವ ಜನರ ಸಮೂಹವನ್ನು ಒಳಗೊಂಡಿರುತ್ತದೆ. ನಾವು ಸಕ್ರಿಯವಾಗಿ ಪಾಲ್ಗೊಳ್ಳುವ ಸಾಮಾಜಿಕ ತಾಣಗಳ ಪರಿಚಯ ನಮಗಿರುತ್ತದೆ. ಉದಾಹರಣೆಗೆ, ಶಾಲೆ, ಕುಟುಂಬ, ಸ್ನೇಹಿತರ ಗುಂಪು, ವ್ಯಾಪಾರ ಸಂಸ್ಥೆಗಳು, ಆಸ್ಪತ್ರೆ, ದೇವಾಲಯಗಳು, ಇತ್ಯಾದಿ.

ಯಾವ ಸಮಾಜವೂ ಸಂಪೂರ್ಣವಾಗಿ ಏಕರೂಪಿಯಾಗಿರುವುದಿಲ್ಲ. ಒಂದು ಸಮಾಜವು ಮತ್ತೊಂದಕ್ಕಿಂತ ಭಿನ್ನವಾಗಿರುತ್ತದೆ ಎಂಬುದನ್ನು ನೀವು ಗಮನಿಸಿದ್ದೀರಿ. ಸಮಾಜದಲ್ಲಿ ಈ ವ್ಯತ್ಯಾಸಗಳು ಏಕೆ? ಈ ವ್ಯತ್ಯಾಸಗಳು

ಯಾವ ರೀತಿಯಾಗಿರುತ್ತದೆ? ಇದನ್ನು ತಿಳಿಯಲು ಕೆಳಕಂಡ ಚಟುವಟಿಕೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.

ಕೆಳಗೆ ಕೆಲವು ಉಲ್ಲೇಖಗಳನ್ನು ನೀಡಲಾಗಿದೆ. ಜಾಗರೂಕತೆಯಿಂದ ಅವುಗಳನ್ನು ಓದಿ, ಎಲ್ಲದರಲ್ಲೂ ಸಾಮಾನ್ಯವಾಗಿ ಕಂಡುಬರುವ ಅಂಶಗಳನ್ನು ಗುರುತಿಸಿ:

- ಖಾಸಗಿ ಶಾಲೆಯೊಂದರಲ್ಲಿ ಎಲ್ಲಾ ಸಿಬ್ಬಂದಿಗಳ ಸಾಮಾನ್ಯ ಸಭೆ ಕರೆಯಲಾಗಿತ್ತು. ಪ್ರಾಂಶುಪಾಲರಿಗೆ, ಬೋಧನಾ ಸಿಬ್ಬಂದಿ, ಕಚೇರಿ ಸಿಬ್ಬಂದಿ ಮತ್ತು ಗ್ರೂಪ್ ಡಿ ನೌಕರರಿಗೆ ಆಸನ ವ್ಯವಸ್ಥೆಗಳನ್ನು ಪ್ರತ್ಯೇಕವಾಗಿ ಮಾಡಲು ವಿಶೇಷ ಕಾಳಜಿಯನ್ನು ವಹಿಸಲಾಗಿತ್ತು.
- 2ನೇ ತಾರೀಖಿನಂದು ರಾಹುಲ್ ಬ್ಯಾಂಕ್‌ಗೆ ಹೋಗಿದ್ದನು. ತಿಂಗಳ ಪ್ರಾರಂಭವಾದ್ದರಿಂದ ಹೆಚ್ಚಿನ ಜನ ಸಮೂಹ ಇತ್ತು. ಅವನು ತನ್ನ ಸರದಿಗಾಗಿ ಕಾಯುತ್ತ ಸಾಲಿನಲ್ಲಿ ನಿಂತಿದ್ದನು. ಹೀಗೆ ನಿಂತಿರುವಾಗಲೇ ಕೆಳಕಂಡ ಅಂಶಗಳನ್ನು ಗಮನಿಸಿದನು. ಮ್ಯಾನೇಜರ್‌ಗೆ (ವ್ಯವಸ್ಥಾಪಕ) ಪ್ರತ್ಯೇಕ ಕೋಣೆಯಿತ್ತು. ಸಾರ್ವಜನಿಕರು ಅನುಮತಿಯ ಮೇರೆಗೆ ಅವರನ್ನು ಭೇಟಿ ಮಾಡುತಿದ್ದರು. ಅಧಿಕಾರಿಗಳು ಗುಮಾಸ್ತರಿಗಂತ ಹೆಚ್ಚಿನ ಜವಾಬ್ದಾರಿ ಹೊಂದಿದ್ದರು. ಒಂದು ಮೇಜಿನಿಂದ ಇನ್ನೊಂದು ಮೇಜಿಗೆ ಕಡತಗಳನ್ನು ವರ್ಗಾಯಿಸಲು ಗ್ರೂಪ್ 'ಡಿ' ನೌಕರರ ಸೇವೆಯನ್ನು ಪಡೆಯುವ ಸೌಲಭ್ಯ ಕ್ಲರ್ಕ್(ಗುಮಾಸ್ತ)ಗಳಿಗಿತ್ತು.
- ಸಂಸ್ಥೆಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ (ಅಭಿಯಂತರರು)ಗಳು ಚಹಾ ಸೇವಿಸುತ್ತಾ ಚರ್ಚಿಸುತ್ತಿದ್ದರು. 'ಸಂಬಳ ಏರಿಕೆ' ಅವರ ಚರ್ಚಾ ವಿಷಯವಾಗಿತ್ತು. ಕೊನೆಯಲ್ಲಿ ವಿವಿಧ ಹಂತಗಳವರಿಗೆ ವಿಭಿನ್ನ ಮೊತ್ತದ ಸಂಬಳದ ಏರಿಕೆ ಮಾಡಲಾಯಿತು.

  ಈ ಎಲ್ಲಾ ಸನ್ನಿವೇಶಗಳಲ್ಲಿ ನಿಮಗೆ ಯಾವ ಸಾಮಾನ್ಯ ಅಂಶ ಕಂಡುಬರುತ್ತದೆ?

  ಹೌದು, ಮೇಲ್ಕಂಡ ಪ್ರತಿಯೊಂದು ಉಲ್ಲೇಖಗಳಲ್ಲೂ ಅಸಮಾನತೆ ಹಾಗೂ ಶ್ರೇಣೀಕರಣವನ್ನು ನಾವು ಕಾಣಬಹುದು. ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಸಮಾಜದಲ್ಲಿ ಜನರು ವಿವಿಧ ಮಟ್ಟದ ಸ್ಥಾನ–ಮಾನಗಳನ್ನು ಹೊಂದಿದ್ದಾರೆ ಎಂಬುದನ್ನು ತಿಳಿಯಬಹುದು. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಈ ಶ್ರೇಣೀಕರಣವನ್ನು ಕುರಿತು ಈ ಘಟಕದಲ್ಲಿ ಕಲಿಯೋಣ.

## 1.1.3. ಕಲಿಕೆಯ ಅಂಶಗಳು ಮತ್ತು ಚಟುವಟಿಕೆಗಳು.

### 1.1.3.1. ಸಾಮಾಜಿಕ ಶ್ರೇಣೀಕರಣದ ಅರ್ಥ

ಸಮಾಜದಲ್ಲಿ ಅನೇಕ ರೀತಿಯ ವ್ಯತ್ಯಾಸಗಳಿರುವುದನ್ನು ನೀವು ಗಮನಿಸಿರುವಿರಿ. ಇವುಗಳಲ್ಲಿ ಕೆಲವು ಸಹಜವಾದವು ಅಥವಾ ನೈಸರ್ಗಿಕವಾದವು. ಕೆಲವು ನಾವೇ, ಅಂದರೆ ಸಮಾಜದ ಸದಸ್ಯರೇ ಮಾಡಿಕೊಂಡಿರುವ ವ್ಯತ್ಯಾಸಗಳು. ಉದಾಹರಣೆಗೆ, ಹಿರಿಯರಿಗೂ ಕಿರಿಯರಿಗೂ ವ್ಯತ್ಯಾಸಗಳಿವೆ. ಹಿರಿಯರು ವಿವೇಕವನ್ನು ಕಲಿಸುತ್ತಾರೆ, ಕಿರಿಯರು ಕಲಿಯುತ್ತಾರೆ. ಗಂಡಹೆಂಡಿರ ನಡುವೆ ಕೆಲವು ವ್ಯತ್ಯಾಸಗಳಿವೆ. ಗಂಡಹೆಂಡರ ನಡುವಿನ ಅನೇಕ ವ್ಯತ್ಯಾಸಗಳನ್ನು ನಾವು ಪಟ್ಟಿ ಮಾಡಬಹುದು. ಆದರೆ ಒಂದು ಕುಟುಂಬ ಸ್ಥಾಪನೆಯ ಕಾರ್ಯದಲ್ಲಿ ಅಂತಹ ಭಿನ್ನತೆಗಳು ಪೂರಕವಾಗುತ್ತದೆ. ಉದಾಹರಣೆಗೆ, ಹೆಂಡತಿಯರಿಗೆ ಮಾತ್ರ ಮಗುವಿಗೆ ಜನ್ಮ ನೀಡುವ ಸಾಮರ್ಥ್ಯವಿರುತ್ತದೆ. ಆದರೆ ಗಂಡಂದರಿಗೆ ಅದು ಸಾಧ್ಯವಿಲ್ಲ. ಇಂತಹ ಭಿನ್ನತೆಗಳು ಸಂಸಾರದಲ್ಲಿನ ಹಾಗೂ ಸಮಾಜದಲ್ಲಿನ ವ್ಯತ್ಯಾಸಗಳ ಕಲ್ಪನೆಯನ್ನು ನೀಡುತ್ತದೆ. ವಯಸ್ಸು, ಆರೋಗ್ಯ, ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಗುಣಗಳ ಕಾರಣದಿಂದ ಈ ಭಿನ್ನತೆಗಳು ಮೂಡುತ್ತವೆ. ಇವು ನೈಸರ್ಗಿಕವಾದದ್ದು. ಇವುಗಳನ್ನು ನೈಸರ್ಗಿಕ ಭಿನ್ನತೆಗಳೆಂದು ಕರೆಯಬಹುದು. ಹೀಗೆ ಭಿನ್ನತೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ಒಟ್ಟೊಟ್ಟಿಗೆ ಕಾಣಬಹುದಾದರೂ ಸಾಮಾಜಿಕ ಅಸಮಾನತೆಯ

ಅಸ್ತಿತ್ವವು ಭಿನ್ನತೆಗಳ ಅಸ್ತಿತ್ವವನ್ನು ಸೂಚಿಸುತ್ತದೆಯೇ ಹೊರತು ಭಿನ್ನತೆಯ ಅಸ್ತಿತ್ವವು ಸಾಮಾಜಿಕ ಅಸಮಾನತೆಯ ಅಸ್ತಿತ್ವವನ್ನು ಸೂಚಿಸುವುದಿಲ್ಲ ಎಂಬುದನ್ನು ಗಮನಿಸಿಕೊಳ್ಳಬೇಕು.

ಈ ವಿಭಿನ್ನತೆಗಳು ಸಮಾಜಗಳನ್ನು ವಿಭಿನ್ನ ಪದರಗಳಾಗಿ ಅಥವಾ ಸ್ತರಗಳಾಗಿ ವಿಭಜಿಸುತ್ತವೆ. ಇದನ್ನು ಸಮಾಜಶಾಸ್ತ್ರಜ್ಞರು 'ಸಾಮಾಜಿಕ ಶ್ರೇಣೀಕರಣ' ಅಥವಾ 'ಸಾಮಾಜಿಕ ಸ್ತರೀಕರಣ' ಎಂದು ಕರೆಯುತ್ತಾರೆ. ಸಮಾಜದ ಯಾವುದೇ ಎರಡು ಘಟಕಗಳು/ಗುಂಪುಗಳ ನಡುವಿನ ಅಸಮಾನತೆಯ ಕಾರಣದಿಂದ ಸಾಮಾಜಿಕ ಶ್ರೇಣೀಕರಣವು ಉಂಟಾಗುತ್ತದೆ.

'ಸಾಮಾಜಿಕ ಶ್ರೇಣೀಕರಣ' ಪದ್ಧತಿ ಅಸ್ತಿತ್ವಕ್ಕೆ ಬಂದಾಗ 'ಶ್ರೇಣೀಕರಣ'ಕ್ಕೆ ಸಂವಾದಿಯಾದ ಇಂಗ್ಲಿಷಿನ 'Stratification' ಎಂಬ ಪದವನ್ನು ಭೂ ವಿಜ್ಞಾನದಿಂದ ಎರವಲು ಪಡೆಯಲಾಯಿತು. ಆದರೆ, ಸಮಾಜಶಾಸ್ತ್ರಜ್ಞರು ಈ ಪದಕ್ಕೆ ಬೇರೆಯೇ ಅರ್ಥವನ್ನು ನೀಡಿದ್ದಾರೆ.

## ಸಾಮಾಜಿಕ ಶ್ರೇಣೀಕರಣದ ವ್ಯಾಖ್ಯೆಗಳು:

ರೇಮಂಡ್ ಡಬ್ಲ್ಯೂ ಮುರ್ರೆಯವರ ಪ್ರಕಾರ, 'ಮೇಲ್ವರ್ಗ ಹಾಗೂ ಕೆಳವರ್ಗಗಳಾಗಿ ಸಮಾಜದ ಅಡ್ಡ ವಿಭಜನೆಯೇ ಸಾಮಾಜಿಕ ಶ್ರೇಣೀಕರಣ'.

ಗಿಲ್ಬರ್ಟ್‌ರವರ ಪ್ರಕಾರ, 'ಶ್ರೇಷ್ಠತೆ ಮತ್ತು ಅಧೀನತೆಯ ಸಂಬಂಧದಲ್ಲಿ ಶಾಶ್ವತ ಗುಂಪುಗಳಾಗಿ ಅಥವಾ ವರ್ಗಗಳಾಗಿ ಸಮಾಜದ ವಿಭಜನೆಯೇ ಸಾಮಾಜಿಕ ಶ್ರೇಣೀಕರಣ'.

ಮೇಲಿನ ವ್ಯಾಖ್ಯೆಗಳಿಂದ, ಜಾತಿ, ಧರ್ಮ, ಆರ್ಥಿಕ ಸ್ಥಿತಿ, ರಾಜಕೀಯ ಶಕ್ತಿಯ ಮೇರೆಗೆ ಸಮಾಜವನ್ನು ವಿಭಜಿಸಲಾಗಿದೆ ಎಂದೂ ವಿವಿಧ ಸಾಮಾಜಿಕ ಸ್ಥಾನಮಾನದ ಜನರನ್ನು ಸಮಾಜದ ಪದರಗಳಾಗಿ ಜೋಡಿಸಲಾಗಿದೆ ಎಂದೂ ಹೇಳಬಹುದು.

ಸಾಮಾಜಿಕ ಅಸಮಾನತೆಯನ್ನು ಹೊಂದಿರುವ ಸಣ್ಣ ಸಮಾಜಗಳಿದ್ದರೂ ಪ್ರಧಾನವಾಗಿ ಕಾಣುವ ಸಾಮಾಜಿಕ ಅಸಮಾನತೆಯು ವಿವಿಧ ರೀತಿಯ ಸಾಮಾಜಿಕ ಶ್ರೇಣೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಈ ಸಾಮಾಜಿಕ ಶ್ರೇಣೀಕರಣದಿಂದ ಜೀವನ ರಕ್ಷಣೆಯ ಸಾಧ್ಯತೆಗಳಲ್ಲಿ ಅಥವಾ ಜೀವನ ಶೈಲಿಯಲ್ಲಿ ಬದಲಾವಣೆಗಳಾಗುವ ಸಾಧ್ಯತೆಗಳಿವೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ನಿಮ್ಮ ಸುತ್ತಮುತ್ತ ಕಾಣುವ ಸಾಮಾಜಿಕ ಅಸಮಾನತೆಯನ್ನು ಗುರುತಿಸಿ, ಅವುಗಳಿಗೆ ಕಾರಣಗಳನ್ನು ಆಲೋಚಿಸಿ. ಅಧ್ಯಾಪಕರಾಗಿ ಇಂತಹ ಸಂದರ್ಭದಲ್ಲಿ ನೀವೇನು ಮಾಡಲು ಸಾಧ್ಯವಿದೆ ಎಂದು ಗುರುತಿಸಿಕೊಳ್ಳಿ.

## 1.1.3.2. ಸಾಮಾಜಿಕ ಶ್ರೇಣೀಕರಣದ ಸ್ವರೂಪ ಮತ್ತು ಕಾರ್ಯಗಳು :

ಸಾಮಾಜಿಕ ಶ್ರೇಣೀಕರಣದ ಮುಖ್ಯ ಸ್ವರೂಪಗಳೆಂದರೆ ಜಾತಿ ಮತ್ತು ವರ್ಗ, ಧರ್ಮ ಮತ್ತು ಪ್ರದೇಶ, ಇವು ಸಾಮಾಜಿಕ ಚಲನಶೀಲತೆ ಹಾಗೂ ಆಯ್ಕೆಯ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಮಾಜದಲ್ಲಿ ಒಬ್ಬ ವ್ಯಕ್ತಿಯ ಸ್ಥಾನವನ್ನು ಈ ಅಂಶಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

i) ಸಾಮಾಜಿಕ ಶ್ರೇಣೀಕರಣದ ಜಾತಿಯ ವ್ಯವಸ್ಥೆ ಹಾಗೂ ಜಾತಿಯ ಗುಣ ಲಕ್ಷಣಗಳು :

ಜಾತಿ ಎಂಬುದಕ್ಕೆ ಸಂವಾದಿಯಾದ ಇಂಗ್ಲಿಷಿನ ಪದ 'caste' ಆಗಿದ್ದು ಇದರ ಮೂಲ ಪೋರ್ಚುಗೀಸ್ ಪದವಾಗಿದೆ. ಆ ಭಾಷೆಯಲ್ಲಿ ಆ ಪದದ ಅರ್ಥ 'race' ಎಂದರೆ 'ಜನಾಂಗ' ಅಥವಾ' Pure stock' ಎಂಬುದಾಗಿ. ಆದ್ದರಿಂದ ಈ ಪದಕ್ಕೆ ಒಂದೇ ಅರ್ಥವನ್ನು ನೀಡುವುದರಲ್ಲಿ ವಿಫಲರಾಗಿದ್ದೇವೆ. ಹಾಗಾಗಿ ಇದಕ್ಕೆ

ಹಲವಾರು ಕೋನಗಳಿಂದ ಅರ್ಥ ನೀಡಲಾಗಿದೆ. ಅವುಗಳಲ್ಲಿ 'ವರ್ಣ' ಮತ್ತು 'ಜಾತಿ' ಎಂಬ ಅರ್ಥಗಳು ಪ್ರಮುಖವಾಗಿವೆ.

## 'ಜಾತಿ'ಯ ವ್ಯಾಖ್ಯೆ

ತಮ್ಮ ಪೂರ್ವಕರಿಂದ ಅಥವಾ ದೈವೀಕತೆಯಿಂದ ಅಥವಾ ಅನುವಂಶೀಕರ ಕಾಲದಿಂದಲೂ ನಿರ್ದಿಷ್ಟ ಹೆಸರಿನಿಂದ ಕರೆಯಲಾಗುತ್ತಿರುವ, ಒಂದೇ ಕೌಟುಂಬಿಕ ಹೆಸರನ್ನು ಅನುಸರಿಸುತ್ತಿರುವ ಹಲವಾರು ಕುಟುಂಬಗಳ ಸಮೂಹವನ್ನು ಏಕರೂಪಿ ಸಮುದಾಯವೆಂದು ಪರಿಗಣಿಸಿ ಅದನ್ನು ಒಂದು ಜಾತಿ ಅಥವಾ ವರ್ಗವೆಂದು ರಿಸ್ಲೆಯವರು ವ್ಯಾಖ್ಯಾನಿಸಿದ್ದಾರೆ.

ಕೇಟ್ಕರ್‌ರವರ ಪ್ರಕಾರ, 'ಜಾತಿ ಎಂದರೆ ಎರಡು ಗುಣಲಕ್ಷಣಗಳನ್ನು ಹೊಂದಿರುವ ಒಂದು ಸಾಮಾಜಿಕ ಗುಂಪು'. ಆ ಲಕ್ಷಣಗಳೆಂದರೆ, ಸದಸ್ಯರಾಗಿ ಹುಟ್ಟಿದವರಿಗೂ ಹಾಗೂ ಮುಂದೆ ಹುಟ್ಟುವ ಎಲ್ಲರಿಗೂ ಸದಸ್ಯತ್ವವು ಸೀಮಿತವಾಗಿರುವುದು ಮತ್ತು ಅನ್ಯ ವರ್ಗದವರನ್ನು ಮದುವೆಯಾದವರ ಸದಸ್ಯತ್ವವನ್ನು ಸಾಮಾಜಿಕವಾಗಿ ನಿಷೇಧ ಮಾಡಲಾಗುವುದು.

ಜಾತಿ ಎಂಬುದು ಸದಸ್ಯರು ಹುಟ್ಟುವ ಸಾಮಾಜಿಕ ವರ್ಗ. ಅದರ ಸದಸ್ಯತ್ವವನ್ನು ಹಿಂತೆಗೆದುಕೊಳ್ಳುವುದು ಅಥವಾ ಅದರಿಂದ ಹೊರಬರುವುದು ಕಷ್ಟಸಾಧ್ಯವಾದದ್ದು. ಏಕೆಂದರೆ ಇದು ಒಂದು ವಿಧದ ಶ್ರೇಣೀಕರಣ ವ್ಯವಸ್ಥೆಯಾಗಿದ್ದು, ಇದರ ಚಲನಶೀಲತೆಯು ಅತ್ಯಂತ ಕಠಿಣವಾದದ್ದು, ಎಂದು ಲುನ್ಡಬೆಕ್ ತಿಳಿಸಿದ್ದಾರೆ.

ಜಾತಿ ಎಂಬ ಪದದ ಜೊತೆಯಲ್ಲೇ 'ವರ್ಣ' ಎಂಬ ಪದವನ್ನೂ ಗಮನಿಸಬಹುದು. ಭಾರತೀಯ ಸಮಾಜದಲ್ಲಿ ನಾಲ್ಕು ವರ್ಣಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, ಬ್ರಾಹ್ಮಣ (ಪುರೋಹಿತರು, ಶಿಕ್ಷಕರು), ಕ್ಷತ್ರಿಯ(ಯೋಧರು, ಆಡಳಿತಗಾರರು), ವೈಶ್ಯ (ರೈತರು, ವ್ಯಾಪಾರಿಗಳು, ವರ್ತಕರು), ಮತ್ತು ಶೂದ್ರ (ಕಾರ್ಮಿಕರು).

## ಜಾತಿ ಪದ್ಧತಿಯ ಗುಣಲಕ್ಷಣಗಳು

ಜಾತಿ ಎಂಬುದು ಹುಟ್ಟಿನಿಂದ ಬಂದಿದ್ದು (ಜನರು ಸ್ಥಾನ–ಮಾನವನ್ನು ಪಡೆದದ್ದು). ಜಾತಿಯಲ್ಲಿ ಆಹಾರದ ಅಭ್ಯಾಸಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಹಾಕಲಾಗುತ್ತದೆ. ಇದು ಸ್ವನಿಶ್ಚಿತವಲ್ಲ. ಅಂದರೆ ವ್ಯಕ್ತಿ ತನಗೆ ಬೇಕಾದ ಜಾತಿಯಲ್ಲಿ ಹುಟ್ಟುವುದಾಗಲೀ, ತನಗೆ ಬೇಕಾದ ಜಾತಿಗೆ ಸೇರುವುದಾಗಲೀ ಸಾಧ್ಯವಿಲ್ಲ. ಈ ಜಾತಿಯು ಶ್ರೇಣೀಕೃತ ಸಮಾಜಕ್ಕೆ ಎಡೆಮಾಡಿಕೊಡುತ್ತದೆ. ಸಾಮಾನ್ಯವಾಗಿ ಜಾತಿಯವರ ಉದ್ಯೋಗ ನಿಶ್ಚಯವಾಗಿರುತ್ತದೆ.

ಪ್ರಸ್ತುತ ಜಾತಿಪದ್ಧತಿಯು ವ್ಯಾಪಕ ಬದಲಾವಣೆಗೆ ಒಳಗಾಗಿದೆ. ಈ ಬದಲಾವಣೆಗಳಿಗೆ ಕಾರಣವೇನು? ನಿಮ್ಮ ಮಿತ್ರರೊಂದಿಗೆ ಚರ್ಚಿಸಿ ನೀವು ಅರ್ಥೈಸಿಕೊಂಡಿದ್ದನ್ನು ಹಂಚಿಕೊಳ್ಳಿ.

## ಜಾತಿ ಪದ್ಧತಿಯಲ್ಲಿನ ಬದಲಾವಣೆಗೆ ಕಾರಣವಾದ ಅಂಶಗಳು:

ಜಾತಿ ಪದ್ಧತಿಯಲ್ಲಾಗಿರುವ ಬದಲಾವಣೆಗಳಿಗೆ ಅನೇಕ ಕಾರಣಗಳಿವೆ. ಜನರ ಮನೋಭಾವದಲ್ಲಿ ಪಲ್ಲಟಗಳಾಗಿವೆ. ಬ್ರಿಟಿಷರು ಪರಿಚಯಿಸಿದ ಏಕರೂಪಿ ಕಾನೂನು ವ್ಯವಸ್ಥೆಯು "ಎಲ್ಲಾ ವ್ಯಕ್ತಿಗಳೂ ಕಾನೂನಿನ ಮುಂದೆ ಸಮಾನರು" ಎಂಬ ಮನೋಭಾವವನ್ನು ಹುಟ್ಟುಹಾಕಿದೆ. ಸ್ವತಂತ್ರ ಭಾರತವು ಜಾತಿ ಭೇದವಿಲ್ಲದೆ ಎಲ್ಲರಿಗೂ ವಿದ್ಯಾಭ್ಯಾಸವನ್ನು ಒದಗಿಸಿಕೊಟ್ಟ ಕಾರಣ ಎಲ್ಲರಲ್ಲೂ ವಿವೇಚನಾತ್ಮಕ ಚಿಂತನೆ ಹುಟ್ಟಿಕೊಂಡು, ಸಮತೆ ಮತ್ತು ಸಮಾನತೆಯ ಆಲೋಚನೆಗಳು ಮೂಡಿವೆ. ಕೈಗಾರಿಕೀಕರಣ, ನಗರೀಕರಣ ಹಾಗೂ ಪಾಶ್ಚಿಮಾತ್ಯೀಕರಣಗಳು ಹಲವಾರು ಕೃಷ್ಯೇತರ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ, ಪಾಶ್ಚಿಮಾತ್ಯರ ಆಲೋಚನೆ ಮತ್ತು ಶೈಲಿಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸಿದೆ. ಇದರಿಂದಾಗಿ, ಆಧುನಿಕ ಸಾರಿಗೆ ಹಾಗೂ ಮೇಲ್ಜಾತಿಯ ಮೇಲುಗೈ ವಿರುದ್ಧ ಚಳುವಳಿಗಳ ಬೆಳವಣಿಗೆ ಇತ್ಯಾದಿ ಪರಿಣಾಮಗಳಾಗಿವೆ.

## ii) ಸಾಮಾಜಿಕ ಶ್ರೇಣೀಕರಣದ ವರ್ಗ ಪದ್ಧತಿ

ಇದು ಸ್ಥಾನಮಾನದ ಗುಂಪು. ಆಧುನಿಕ ಸಮಾಜದಲ್ಲಿ ವರ್ಗ ಶ್ರೇಣೀಕರಣ ಹೆಚ್ಚು ಪ್ರಚಲಿತವಾಗಿರುವಂತಹುದು. ವರ್ಗ ಆಧಾರಿತ ಸಮಾಜದಲ್ಲಿ, ಒಂದು ಗುಂಪಿನ ಸ್ಥಾನಮಾನ ಮತ್ತೊಂದು ಗುಂಪಿನ ಸ್ಥಾನಮಾನಕ್ಕಿಂತ ಭಿನ್ನವಾಗಿರುತ್ತದೆ. ಇಂತಹ ಸಮಾಜಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಲಭ್ಯವಾಗುವ ಆರ್ಥಿಕ ಸಂಪನ್ಮೂಲದಲ್ಲಿ ಅಸಮಾನತೆ ಇರುತ್ತದೆ. ಇಲ್ಲಿ ವ್ಯಕ್ತಿಗೆ ಸಿಗುವ ಸ್ಥಾನಮಾನವು ಜಾತಿಯ ಸನ್ನಿವೇಶದಂತಲ್ಲದೆ ವ್ಯಕ್ತಿಯೇ ಗಳಿಸಿಕೊಳ್ಳುವಂತಹುದು. ವ್ಯಕ್ತಿಗೆ ತನ್ನ ಸಾಮರ್ಥ್ಯವನ್ನು ಬಳಸಿಕೊಳ್ಳುವ ಶಕ್ತಿಯ ಮೇಲೆ ಈ ಸ್ಥಾನಮಾನ ಅವಲಂಬಿತವಾಗಿರುತ್ತದೆ.

ಸಾಮಾಜಿಕ ಶ್ರೇಣೀಕರಣ ಎರಡು ಪ್ರಮುಖ ಪರಿಣಾಮಗಳನ್ನುಂಟುಮಾಡುತ್ತದೆ. ಅವೆಂದರೆ, 1) ಜೀವನ ಸಾಧ್ಯತೆಗಳು (2) ಜೀವನ ಶೈಲಿ. ಇವೆರೆಡರ ವ್ಯತ್ಯಾಸಗಳು ಹೀಗಿವೆ:

| ಜೀವನ ಸಾಧ್ಯತೆ | ಜೀವನ ಶೈಲಿ |
|---|---|
| ಬದುಕುಳಿಯುವ ಸಾಧ್ಯತೆಗಳು<br>(ಉತ್ತಮ ಭೌತಿಕ ಮತ್ತು ಮಾನಸಿಕ ಆರೋಗ್ಯದೊಂದಿಗೆ ಆರೋಗ್ಯಕರ ಮತ್ತು ತೃಪ್ತಿಕರ ಬದುಕಿಗೆ ಕಾರಣವಾಗುವ ಎಲ್ಲವೂ ವ್ಯಕ್ತಿಯನ್ನೇ ಅವಲಂಬಿಸಿರುತ್ತದೆ.)<br>ಶಿಕ್ಷಣ, ವೈವಾಹಿಕ ಸಂಘರ್ಷಣೆ, ವಿಚ್ಛೇದನ ಮುಂತಾದವುಗಳಿಗೆ ನ್ಯಾಯ ಪಡೆಯುವುದು – ಈ ಅವಕಾಶಗಳು ಲಭ್ಯ. | ವಿಶಿಷ್ಟವಾದ ಸಾಮಾಜಿಕ ಸ್ಥಿತಿ, ಸಾಮಾಜಿಕ ಸ್ಥಾನಮಾನ, ಸಾಮಾಜಿಕ ಸಂಸ್ಕೃತಿಯ ಚೌಕಟ್ಟಿನಲ್ಲಿರುವ ಉಪಸಂಸ್ಕೃತಿಯನ್ನು ಒಟ್ಟಾಗಿ ಜೀವನ ಶೈಲಿ ಎನ್ನಬಹುದು. ಅವು:<br>• ಪ್ರತಿ ಸಮುದಾಯದಲ್ಲಿರುವ ವಸತಿ ಪ್ರದೇಶಗಳು [ತಮ್ಮ ಪ್ರತಿಷ್ಠೆಯ ಆಧಾರದ ಮೇಲೆ]<br>• ವಸತಿಯ ಕ್ರಮಗಳು<br>• ಮನೋರಂಜನೆಯ ರೀತಿಗಳು<br>• ಉಡುಗೆ–ತೊಡುಗೆ ಹಾಗೂ ಓದುವ ಪುಸ್ತಕಗಳ ವಿಧಗಳು<br>• ಮಾಧ್ಯಮದಲ್ಲಿ ವೀಕ್ಷಿಸುವ ಕಾರ್ಯಕ್ರಮಗಳು (ದೂರದರ್ಶನ) |

ಗ್ರಾಮೀಣ ಹಾಗೂ ನಗರ ಸಮಾಜಗಳ ಸಾಮಾಜಿಕ ವರ್ಗಗಳಲ್ಲಿ ವ್ಯತ್ಯಾಸಗಳಿವೆ ಎಂದು ನಿಮಗನಿಸುತ್ತದೆಯೆ?
1) ನಿಮ್ಮ ಗೆಳೆಯರೊಂದಿಗೆ ಚರ್ಚಿಸಿ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಇರುವ ವಿವಿಧ ಸಾಮಾಜಿಕ ವರ್ಗಗಳ ಪಟ್ಟಿಯನ್ನು ತಯಾರಿಸಿ. ಅಂತಹ ಪ್ರದೇಶಗಳಲ್ಲಿನ ಪ್ರಮುಖ ಆರ್ಥಿಕ ಚಟುವಟಿಕೆಗಳಾವುವು? ಅವುಗಳ ಮುಖ್ಯ ಪಾತ್ರಧಾರಿಗಳು ಯಾರು? ಮುಂತಾದ ವಿಷಯಗಳನ್ನು ಗಮನಹರಿಸಿ ನಿಮ್ಮ ಮಿತ್ರರೊಂದಿಗೆ ಚರ್ಚಿಸಿ.


ಸಾಮಾಜಿಕ ವರ್ಗದ ರಚನೆಯು ಉತ್ಪಾದನೆಯ ಮಾರ್ಗಗಳು ಮತ್ತು ಮಾಲೀಕತ್ವಕ್ಕೆ ಸಂಬಂಧಪಟ್ಟುದಾಗಿರುತ್ತದೆ. ಈ ಎರಡು ಪರಿಕಲ್ಪನೆಗಳು ಅವುಗಳ ರಚನೆಯಲ್ಲಿ, ಸಮಾಜದಲ್ಲಿನ ಚಟುಚಟಿಕೆಗಳ ಸ್ವರೂಪದ ಆಧಾರದ ಮೇಲೆ ಬದಲಾಗುತ್ತವೆ.

ಗ್ರಾಮೀಣ ಹಾಗೂ ನಗರ ಸನ್ನಿವೇಶಗಳಲ್ಲಿನ ಸಾಮಾಜಿಕ ವರ್ಗದ ವಿವಿಧ ಪರಿಕಲ್ಪನೆಗಳನ್ನು ಸಂಬಂಧಿಸಿದ ಅಂಶಗಳನ್ನು ಮುಂದೆ ಗಮನಿಸಬಹುದು:

## ಗ್ರಾಮೀಣ ಭಾರತದ ಸಾಮಾಜಿಕ ವರ್ಗಗಳು:

**1) ಭೂಮಾಲೀಕರು.**

ಕೆಳಗಿನ ಚಿತ್ರಣ ಭೂಮಾಲೀಕರ ವರ್ಗವನ್ನು ವಿವರಿಸುತ್ತದೆ.




**2) ಮಾಲೀಕತ್ವವಿರುವ ರೈತರು**

ರೈತವಾರಿ ಒಪ್ಪಂದವು ಭೂಮಿಯ ಮಾಲೀಕತ್ವವನ್ನು ರೈತರಿಗೆ ನೀಡಲಾಗಿತ್ತು. ಈ ಒಪ್ಪಂದವು ಆಗಾಗ್ಗೆ ಬದಲಾವಣೆಗೆ ಒಳಗಾಗುತಿತ್ತು. ಆದಾಗ್ಯೂ, ರೈತರ ಒಡೆತನ ವ್ಯವಸ್ಥೆಯನ್ನು ಸ್ಥಾಪಿಸಲಾಗಲಿಲ್ಲ. ಆದ್ದರಿಂದ ಇವರು ಏಕರೂಪತೆಯನ್ನು ಹೊಂದಿಲ್ಲ. ಇವರಲ್ಲಿ ಕೆಳಕಂಡ ವರ್ಗಗಳನ್ನು ಕಾಣಬಹುದು.

**ಹಣವಂತ ರೈತರು**

ಇವರು ಭೂಮಿಯ ಗಣನೀಯ ಹಿಡಿತವನ್ನು ಹೊಂದಿತ್ತಾರೆ. ಬಲವಾದ ಬಂಡವಾಳ ಶಾಹಿ ರೈತರ ಗುಂಪು ರೂಪುಗೊಳ್ಳುತ್ತದೆ. ಸ್ವತಃ ಸಾಗುವಳಿ ಮಾಡದೆ, ಕೃಷಿಯ ಮೇಲ್ವಿಚಾರಣೆ ಮಾಡುತ್ತಾರೆ. ಭೂ ನಿರ್ವಹಣೆ ಮತ್ತು ಸುಧಾರಣೆಯಲ್ಲಿ ವೈಯಕ್ತಿಕ ಆಸಕ್ತಿ ತೋರುತ್ತಾರೆ.

**ಮಧ್ಯಮ ವರ್ಗದ ರೈತರು**

ಭೂಮಿಯಲ್ಲಿ ಭಾಗಶಃ ಹಿಡಿತವನ್ನು ಹೊಂದಿರುತ್ತಾರೆ. ಸ್ವತಃ ಸಾಗುವಳಿ ಮಾಡುತ್ತಾ ಇಡೀ ಕುಟುಂಬದ ಸದಸ್ಯರು ಸಾಗುವಳಿಗೆ ಸಹಾಯ ಮಾಡುತ್ತಾರೆ. ಸ್ವಂತ ಬಳಕೆಗೆ ಸಾಕಾಗುವಷ್ಟು ಮಾತ್ರ ಸಾಗುವಳಿ ಮಾಡುತ್ತಾರೆ.

**ಬಡ ರೈತರು**

ಹೆಚ್ಚಾಗಿ ಕಂಡು ಬರುವ ಕೃಷಿಕರು, ತಮ್ಮ ಕುಟುಂಬವನ್ನೂ ಪೋಷಿಸಲಾಗದ ಸ್ಥಿತಿ ಹೊಂದಿರುತ್ತಾರೆ, ಬಲವಂತದಿಂದ ಕಾರ್ಮಿಕರಾಗಿ ಅಥವಾ ಬೇರೆ ಕೆಲಸಗಳ ಮೂಲಕ ಪೂರಕ ಆದಾಯವನ್ನು ಗಳಿಸಿ ಸಂಸಾರ ನಿರ್ವಹಿಸುತ್ತಾರೆ.

**3) ಬಾಡಿಗೆದಾರರು :**

ಜಮೀನ್ದಾರರು ತಮ್ಮ ಭೂಮಿಯನ್ನು ಉಪ ಬಾಡಿಗೆಗೆ ನೀಡಿ ಅವರಿಂದ ಮಿತಿಮೀರಿದ ಬಾಡಿಗೆ ಪಡೆಯುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಜಮೀನ್ದಾರರು ಭೂಮಿಯನ್ನು ಗುತ್ತಿಗೆಗೆ ನೀಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಬಾಡಿಗೆದಾರರು ಗುತ್ತಿಗೆದಾರರ ಬಳಿ ಕೆಲಸಮಾಡುತ್ತಾರೆ.

### 4) ಕೃಷಿ ಕಾರ್ಮಿಕರು :

ಕೃಷಿ ಕಾರ್ಮಿಕರಲ್ಲಿ 3 ಬಗೆಯ ಕಾರ್ಮಿಕರಿದ್ದಾರೆ.

**ಕೃಷಿ ಕಾರ್ಮಿಕರು**

1. ಕಡಿಮೆ ಪ್ರಮಾಣದ ಸ್ವಂತ ಕೃಷಿ ಭೂಮಿ ಹೊಂದಿರುವವರು, ತಮ್ಮ ಕೆಲಸದ ಆದಾಯದಿಂದ ಜೀವನೋಪಾಯ ನಡೆಸುವವರು.
2. ಸ್ವಂತ ಭೂಮಿ ಇಲ್ಲದೆ ದಿನಗೂಲಿಗಾಗಿ ದುಡಿಯುವವರು.
3. ಜೀತದಾಳುಗಳಂತೆ ಕರಾರಿನ ಮೇಲೆ ದುಡಿಯುವವರು; 1972ರಲ್ಲಿ ಈ ಪದ್ಧತಿ ರದ್ದಾಗಿದ್ದರೂ ಕೆಲವು ಭಾಗಗಳಲ್ಲಿ ಅಸ್ತಿತ್ವದಲ್ಲಿದೆ.

ಕೃಷಿಯನ್ನು ಹೊರತುಪಡಿಸಿ ಬೇರೆ ಆರ್ಥಿಕ ಚಟುವಟಿಕೆಗಳನ್ನು ಹೊಂದಿರುವ ಇತರ ವರ್ಗಗಳೂ ಇವೆ. ಉದಾಹರಣೆಗೆ, ಕುಶಲ ಕರ್ಮಿಗಳು. ನೀವು ಗ್ರಾಮಕ್ಕೆ ಭೇಟಿ ನೀಡಿದರೆ ಆರ್ಥಿಕ ಆದಾಯವಿರುವ ಅನೇಕ ಕೃಷ್ಯೇತರ ಚಟುವಟಿಕೆಗಳನ್ನು ಕಾಣಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ಬಡಗಿ, ಕಮ್ಮಾರ, ಕುಂಬಾರ, ಇವರೆಲ್ಲರನ್ನೂ ಒಟ್ಟಾಗಿ ಕುಶಲಕರ್ಮಿಗಳೆನ್ನಬಹುದು. ಇವೆಲ್ಲವೂ ಗ್ರಾಮೀಣ ಸಮಾಜದ ಅವಿಭಾಜ್ಯ ಭಾಗವಾಗಿದೆ.

## ನಗರ ಭಾರತದ ಸಾಮಾಜಿಕ ವರ್ಗ

ಹಳ್ಳಿಯಿಂದ ಜನ ಕೆಲಸಕ್ಕಾಗಿ ನಗರಕ್ಕೆ ವಲಸೆ ಬಂದಿರುತ್ತಾರೆ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಭಾರತೀಯ ಮಾರುಕಟ್ಟೆಯು ಪ್ರವರ್ಧಮಾನಕ್ಕೆ ಬಂದಿತು. ಇದರಿಂದ ಭಾರತದ ಅಂತರ್–ಮಾರುಕಟ್ಟೆ ವಿಸ್ತಾರಗೊಂಡು ವಿಶ್ವ ಮಾರುಕಟ್ಟೆಯನ್ನು ಪ್ರವೇಶಿಸಿತು. ಇದು ಸಾಮಾಜಿಕ ವರ್ಗದ ರಚನೆಗೆ ಕಾರಣವಾಯಿತು. ವ್ಯಾಪಾರಿಗಳ ವರ್ಗವು ವಾಣಿಜ್ಯದ ಮಧ್ಯಮವರ್ಗಕ್ಕೆ ಪರ್ಯಾಯವಾಯಿತು. ಇದರಿಂದ ಉಂಟಾದ ವರ್ಗಗಳನ್ನು ಗಮನಿಸಿ.

**1) ಬಂಡವಾಳ ಶಾಹಿ (ವಾಣಿಜ್ಯ & ಕೈಗಾರಿಕೆ):** ಬ್ರಿಟಿಷರ ಆಳ್ವಿಕೆಯಲ್ಲಿ, ಭಾರತೀಯ ಮಾರುಕಟ್ಟೆಯ ಉತ್ಪನ್ನದ ಹೆಚ್ಚಳ, ಆಂತರಿಕ ಮಾರುಕಟ್ಟೆಯು ವಿಸ್ತರಣ,ಹಾಗೂ ವಿಶ್ವ ಮಾರುಕಟ್ಟೆಯ ಸಂಪರ್ಕಗಳಿಂದಾಗಿ ಹಲವಾರು ಪರಿಣಾಮಗಳು ಕಾಣಿಸಿಕೊಂಡವು. ಅವುಗಳಲ್ಲಿ ಕೆಲವು ಮುಖ್ಯವಾದವು. ಆಮದು ಮತ್ತು ರಫ್ತು ವ್ಯಾಪಾರದೊಂದಿಗೆ ವ್ಯಾಪಾರಿ ವರ್ಗದ ಬೆಳವಣಿಗೆ ಮತ್ತು ದೇಶದಲ್ಲಿ ಮಧ್ಯಮವರ್ಗದ ವಾಣಿಜ್ಯದ ಅಸ್ತಿತ್ವ. ಸಾರಿಗೆ ಮುಂದುವರೆದಂತೆ, ಈ ವರ್ಗದ ಜನರು ಇತರ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಿದ ಸರಕುಗಳಲ್ಲಿ ಹಾಗೂ ಆಧುನಿಕ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಲು ಪ್ರಾರಂಭಿಸಿ, ಗಿರಣಿ ಹಾಗೂ ಗಣಿ ಮಾಲೀಕರಾದರು. ಇದು ಅವರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪ್ರಬಲವರ್ಗಕ್ಕೆ ಸೇರುವಂತೆ ಮಾಡಿತು.


**2) ಕಾರ್ಪೋರೇಟ್ ವಲಯ :** ಸಾರ್ವಜನಿಕ ವಲಯದಿಂದ ಇದರ ವರ್ಗೀಕರಣವನ್ನು ಮಾಡಲಾಗುತ್ತದೆ. ಅದೆಂದರೆ, ಸಹಭಾಗಿತ್ವಕ್ಕೆ ಒತ್ತಾಯಿಸುವ ಸಂಸ್ಥೆಗಳು, ಹಿಂದೂ ಜಂಟೀ ಕುಟುಂಬ, ಜಾಯಿಂಟ್ ಸ್ಟಾಕ್ ಕಂಪನಿಗಳು (ಸಹಕಾರಿ ಕ್ಷೇತ್ರ), ಸಹಕಾರಿ ಸಂಘ. ಇವುಗಳಲ್ಲಿ ಪ್ರಮುಖವಾದದ್ದು ಜಂಟಿ ಷೇರು ಸಂಘಟನೆಯಾಗಿದ್ದು ಇದನ್ನು ಕಾರ್ಪೋರೇಟ್ ವಲಯ ಎಂದು ಸಾಮಾನ್ಯವಾಗಿ ಕರೆಯುತ್ತಾರೆ.

**3) ವೃತ್ತಿಪರ ವರ್ಗಗಳು :** ಕೈಗಾರಿಕಾ ಯುಗವು ಪರಿಣತ ವೃತ್ತಿಪರರೇ ಬೇಕೆಂಬ ಬೇಡಿಕೆಯನ್ನೊಡ್ಡಿದೆ. ಆದ್ದರಿಂದ ಆಧುನಿಕ ಕಾನೂನು, ತಂತ್ರಜ್ಞಾನ, ಔಷಧಿ, ಅರ್ಥಶಾಸ್ತ್ರ, ಆಡಳಿತ, ವಿಜ್ಞಾನದ ಕ್ಷೇತ್ರಗಳಲ್ಲಿ ತರಬೇತಿ ಪಡೆದ ಭಾರತೀಯರಿಗೆ ಹೆಚ್ಚಿನ ಬೇಡಿಕೆ ಇತ್ತು. ಆದ್ದರಿಂದ ಅವರು ಹೊಸ ಆರ್ಥಿಕ ಮತ್ತು ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತಂದರು. ಇದಕ್ಕೆ ವಿದ್ಯಾವಂತ ಭಾರತೀಯರನ್ನು ನೇಮಿಸಬೇಕಾಯಿತು. ಇದು ಆಧುನಿಕ ಉದ್ಯಮ,

ಕೃಷಿ, ವಾಣಿಜ್ಯ, ಹಣಕಾಸು, ಆಡಳಿತ, ಪತ್ರಿಕಾ, ಮತ್ತು ಸಾಮಾಜಿಕ ಜೀವನದ ಇತರ ಕ್ಷೇತ್ರಗಳೊಂದಿಗೆ ಸಂಬಂಧ ಹೊಂದಿದ ವೃತ್ತಿಪರ ವರ್ಗಕ್ಕೆ ಎಡೆಮಾಡಿಕೊಟ್ಟಿದೆ. ಹೀಗೆ ಮೂಡಿಬಂದ ಕೆಲವು ವರ್ಗಗಳೆಂದರೆ: ತಂತ್ರಜ್ಞರು, ವೈದ್ಯರು, ಶಿಕ್ಷಕರು, ಕೃಷಿ ವಿಜ್ಞಾನಿಗಳು, ವಕೀಲರು, ಪತ್ರಕರ್ತರು, ತಂತ್ರಜ್ಞರು ಇತ್ಯಾದಿ.

**4) ಚಿಲ್ಲರೆ ವ್ಯಾಪಾರಿಗಳು ಮತ್ತು ಅಂಗಡಿ ಇಟ್ಟು ಕೊಂಡಿರುವವರು :** ಆಧುನಿಕ ನಗರಗಳ ಬೆಳವಣಿಗೆಯೊಂದಿಗೆ, ಅಸಂಘಟಿತ ಕಾರ್ಮಿಕರ ಮತ್ತೊಂದು ವರ್ಗವೂ ಸಹ ನಗರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದೆ.

**5) ಕಾರ್ಮಿಕ ವರ್ಗಗಳು :** ಕಡಿಮೆ ಬೇಡಿಕೆ ಇರುವ ಕುಶಲ ಕರ್ಮಿಗಳು ಹಾಗೂ ದಿವಾಳಿಯಾದ ರೈತರು ಈ ವರ್ಗಕ್ಕೆ ಅನಿವಾರ್ಯವಾಗಿ ಸೇರುತ್ತಾರೆ. ಅವರು ತೋಟ, ಕಾರ್ಖಾನೆ, ಗಣಿಗಾರಿಕೆ ಉದ್ಯಮ, ರೈಲ್ವೆ, ಸಾರಿಗೆ, ಇತ್ಯಾದಿಗಳಲ್ಲಿ ಕೆಲಸ ಮಾಡುವವರಾಗಿರುತ್ತಾರೆ. ಗ್ರಾಮೀಣ ಹಾಗೂ ನಗರವನ್ನು ಹೋಲಿಸಿದರೆ ಎರಡೂ ಕಡೆಗಳಲ್ಲೂ ಒಂದೇ ರೀತಿಯ ಶ್ರೇಣಿ ವ್ಯವಸ್ಥೆಯು ಅಸ್ತಿತ್ವದಲ್ಲಿ ಇರುತ್ತದೆ. ಅದನ್ನು ಈ ಕೆಳಕಂಡಂತೆ ಚಿತ್ರಿಸಬಹುದು.




**ಪ್ರದೇಶ ಹಾಗೂ ಧರ್ಮಗಳೂ ಸಹ ಸಾಮಾಜಿಕ ಶ್ರೇಣೀಕರಣದ ಸ್ವರೂಪಗಳು**

ಧಾರ್ಮಿಕ ಶ್ರೇಣೀಕರಣವೆಂದರೆ ಧಾರ್ಮಿಕ ನಂಬಿಕೆಗಳು, ಸಂಬಂಧ, ನಂಬಿಕೆ, ಧಾರ್ಮಿಕ ಅಭ್ಯಾಸಗಳ ಮೇರೆಗೆ ಕ್ರಮಾನುಗತ ಪದರಗಳಾಗಿ ಸಮಾಜವನ್ನು ವಿಭಜಿಸುವುದು. ಸಾಮಾಜಿಕ ಶ್ರೇಣೀಕರಣಗಳು ತೆಗೆದುಕೊಳ್ಳಬಹುದಾದ ಅತ್ಯಂತ ಸಾಮಾನ್ಯ ಮತ್ತು ಮಹತ್ವದ ಸ್ವರೂಪಗಳಲ್ಲಿ ಧಾರ್ಮಿಕ ಶ್ರೇಣೀಕರಣವೂ ಒಂದು. ಇದು ಬಹುಪಾಲು ಧರ್ಮಗಳಲ್ಲಿ, ವೈವಿಧ್ಯಮಯ ಸಮಾಜದಲ್ಲಿ ಶಕ್ತಿಯುತವಾದ ನೈಸರ್ಗಿಕ ವಿದ್ಯಮಾನವೂ ಹೌದು. ಶಕ್ತಿಯುತವಾದ ಬಹುಮತದ ಧರ್ಮಗಳ ಪ್ರಭಾವಿ ವ್ಯಕ್ತಿಗಳು ಆಗಾಗ್ಗೆ ಇತರ ಧರ್ಮಗಳ ಮುಖ್ಯಸ್ಥರ ಮೇಲೆ ತಮ್ಮ ಅಧಿಕಾರ ಚಲಾಯಿಸುತ್ತಾರೆ. ಧರ್ಮ ಹಾಗೂ ಸಾಮಾಜಿಕ ಶ್ರೇಣೀಕರಣದ ನಡುವಿನ ಸಂಬಂಧವು ಸಂಕೀರ್ಣವಾದದ್ದು. ಕೆಲವು ಧರ್ಮಗಳು ಅಥವಾ ಧಾರ್ಮಿಕ ಗುಂಪಿನ ಸದಸ್ಯರಿಗೆ ಅಧಿಕಾರ, ಸವಲತ್ತು, ಪ್ರತಿಷ್ಠೆ, ಇತರೆ ಸೌಲಭ್ಯಗಳು ಹೆಚ್ಚಾದಾಗ ಧಾರ್ಮಿಕ ಶ್ರೇಣೀಕರಣವು ಉಂಟಾಗುತ್ತದೆ. ಅನೇಕ ಸಲ ಸಮಾಜದಲ್ಲಿ ಅಸಮಾನತೆ, ಅನ್ಯಾಯ ಇಂತಹ ಸಾಮಾಜಿಕ ತೊಂದರೆಗಳು ಧಾರ್ಮಿಕ ಸಂಸ್ಥೆಗಳ ವಲಯದೊಳಗೇ ಪ್ರತಿಬಿಂಬಿತವಾಗುತ್ತದೆ. [ಉದಾಹರಣೆಗೆ, ಜನಾಂಗ, ವರ್ಗ, ಗಂಡು–ಹೆಣ್ಣಿನ ಬೇಧಭಾವ].

ಸತಿ ಪದ್ಧತಿ ಹಾಗೂ ವಿಧವಾ ವಿವಾಹ ಈ ಎರಡೂ ಧಾರ್ಮಿಕ ನಂಬಿಕೆಗಳಾಗಿದ್ದು, ಇವುಗಳನ್ನು ನಂಬುವವರು ಹಾಗೂ ವಿರೋಧಿಸುವವರು ಎಂಬ ಎರಡು ಗುಂಪುಗಳಾಗಿ ಸಮಾಜವು ವಿಭಜನೆಗೊಂಡಿತು. ಇದು ಸಾಮಾಜಿಕ ಶ್ರೇಣೀಕರಣಕ್ಕೆ ನಾಂದಿಯಾಯಿತು. ಅಂತೆಯೇ, ಧಾರ್ಮಿಕ ಆಚರಣೆಗಳು ಹಾಗೂ ಪದ್ಧತಿಗಳು ಸಮಾಜದ ಪ್ರತಿ ವರ್ಗದ ಧಾರ್ಮಿಕ ಚೌಕಟ್ಟನ್ನು ವ್ಯಾಖ್ಯಾನಿಸುತ್ತದೆ. ನಮ್ಮದು ಹಾಗೂ ಅವರದು ಎಂಬ ಮನೋಭಾವ ಬೆಳಸುತ್ತದೆ. ಬಹುತೇಕ ಧರ್ಮಗಳು ಐತಿಹಾಸಿಕವಾಗಿ ಪಿತೃ ಪ್ರಭುತ್ವದ ಸ್ವರೂಪದಲ್ಲಿ ಇರುವುದರಿಂದ ಸ್ತ್ರೀ–ಪುರುಷರೆಂಬ ಬೇಧ–ಭಾವ ಹೆಚ್ಚಾಗಿ, ಪುರುಷರಿಗೆ ಅಧಿಕಾರವನ್ನು ಹಾಗೂ ಸ್ತ್ರೀಯರಿಗೆ ಅಧೀನ ಪಾತ್ರವನ್ನು ನಿಯೋಜಿಸಲಾಗಿರುತ್ತದೆ. ಅಂತಹ ಶ್ರೇಣೀಕರಣಕ್ಕೆ ಅನೇಕ ಕಾರಣಗಳಿರಬಹುದು. ಭಾರತವು ಧಾರ್ಮಿಕವಾದ ಹಾಗೂ ಬಹುಸಂಸ್ಕೃತಿಯ ದೇಶವಾಗಿರುವುದರಿಂದ ಇಲ್ಲಿ ಹಲವಾರು ಧರ್ಮಗಳು ಸಕ್ರಿಯವಾಗಿ ಸಮಾಜದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿವೆ. ಒಂದು ಧರ್ಮದವರಿಗೆ ಇತರ ಧರ್ಮಗಳ ಕುರಿತ ಪೂರ್ವಾಗ್ರಹ, ತನ್ನದು

ಉನ್ನತ, ಇತರರದ್ದು ಅಲ್ಲ ಇತ್ಯಾದಿ ಮನೋಭಾವ, ಶ್ರೇಣೀಕರಣಕ್ಕೆ ಕಾರಣವಾಗಬಹುದು. ಎಲ್ಲಾ ಧರ್ಮಗಳೂ ಸಮಾನವಾದ ಅಧಿಕಾರವನ್ನು ಪಡೆದುದೇ ಆದಲ್ಲಿ ಈ ಮೇಲಿನ ಯಾವುದೇ ಅಂಶವು ಸಾಮಾಜಿಕ ಶ್ರೇಣೀಕರಣವನ್ನು ಉಂಟುಮಾಡುವುದಿಲ್ಲ.

## ಸಾಮಾಜಿಕ ಶ್ರೇಣೀಕರಣದ ಕಾರ್ಯಗಳು

ವಿಲ್ಬರ್ಟ್ ಮೂರೆ ಮತ್ತು ಕಿಂಗ್ಸ್ಲೀ ಡೇವಿಸ್‌ರವರ ಪ್ರಕಾರ, ಕ್ರಿಯಾತ್ಮಕತೆಯ ಅವಶ್ಯಕತೆಯಿಂದಾಗಿ ಸಮಾಜದಲ್ಲಿ ಶ್ರೇಣೀಕರಣದ ವ್ಯವಸ್ಥೆಯು ವಿಕಸನಗೊಂಡಿತು. ಸಾಮಾಜಿಕ ಶ್ರೇಣೀಕರಣದ ಕಾರ್ಯಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡುವುದು: ಸಾಮಾನ್ಯವಾಗಿ, ಸಮಾಜದಲ್ಲಿ ಉಚ್ಚಜಾತಿ, ಕೆಳಜಾತಿ ಅಥವಾ ಮೇಲ್ವರ್ಗ, ಕೆಳವರ್ಗ ಎಂಬ ಗುಂಪುಗಳು ಪರೋಕ್ಷವಾಗಿ ನಿಯಂತ್ರಣವನ್ನು ಉಂಟುಮಾಡುತ್ತವೆ. ಉಚ್ಚಜಾತಿ ಮತ್ತು ಮೇಲ್ವರ್ಗದವರು ಅನುಭವಿಸುವ ಗೌರವ, ಸವಲತ್ತುಗಳು ಕೆಳವರ್ಗದವರನ್ನೂ ಆಕರ್ಷಿಸುತ್ತವೆ. ಇದು ಕೇವಲ ಹಣದಿಂದ ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಅದಕ್ಕೆ ಸಮಾಜ ಅಪೇಕ್ಷಿಸುವ ಬದುಕನ್ನೇ ಬದುಕಬೇಕು ಎಂಬುದು ಎಲ್ಲರಿಗೂ ಪ್ರಮುಖವಾಗಿ ಕೆಳವರ್ಗದವರಿಗೂ ತಿಳಿದಿರುತ್ತದೆ. ಈ ಅಪೇಕ್ಷೆಗಳು ಅವರಿಗಾಗಿ ಮಾತ್ರವಲ್ಲ; ಅವರ ಮಕ್ಕಳ ಕುಟುಂಬದವರ ದೃಷ್ಟಿಯಿಂದಲೂ ಅವರಿಗೆ ಬೇಕಾಗಿರುತ್ತದೆ. ಹಾಗಾಗಿ ಮೇಲ್ವರ್ಗದವರು ಅನುಭವಿಸುವ ಗೌರವ ಸವಲತ್ತುಗಳನ್ನು ಪಡೆಯಲು ಅವರೂ ಉತ್ಸುಕರಾಗಿ ಕಾರ್ಯೋನ್ಮುಖರಾಗುತ್ತಾರೆ.

2. ಸಮಾಜದ ವಿವಿಧ ಪಾತ್ರಗಳಲ್ಲಿ ಸಮರ್ಥರಾದವರನ್ನು ಇರಿಸುವುದು: ಸಮಾಜದಲ್ಲಿ ವಿವಿಧ ಪಾತ್ರಗಳನ್ನು ವಹಿಸುವವರಿಗೆ ಸೂಕ್ತವಾದ ಸಾಮರ್ಥ್ಯಗಳ ಅಗತ್ಯವಿರುತ್ತದೆ. ಅಂತಹ ಸಾಮರ್ಥ್ಯವುಳ್ಳವರನ್ನು ಸಮಾಜ ಗೌರವಿಸುತ್ತದೆ, ಅವರಿಗೆ ವಿಶಿಷ್ಟವಾದ ಸವಲತ್ತುಗಳನ್ನೂ ವರಮಾನವನ್ನೂ ಕೊಡುತ್ತದೆ. ಈ ಸಾಮರ್ಥ್ಯಗಳನ್ನು ಪಡೆಯಬೇಕಾದರೆ ಕಠಿಣ ಶ್ರಮ, ತರಬೇತಿಯೊಂದಿಗೆ ಗುರುತರವಾದ ಜವಾಬ್ದಾರಿಗಳನ್ನು ಎದುರಿಸಬೇಕಾಗುತ್ತದೆ. ಈ ಫಲಗಳು ಆಕರ್ಷಕವಾಗಿರುವುದರಿಂದ ಅದಕ್ಕೆ ಅಗತ್ಯವಾದ ಮಾರ್ಗಗಳನ್ನು ಅನುಸರಿಸಿ, ಸಮಾಜ ಬಯಸುವ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸ್ತರೀಕರಣ ಪ್ರಚೋದಿಸುವುದು.

3. ವರ್ಗ ಮತ್ತು ಜಾತಿಯ ಶ್ರೇಣೀಕರಣವು ಸಮಾಜದ ಒಪ್ಪಿಗೆಯನ್ನು ಖಚಿತಗೊಳಿಸುವುದು: ಕಷ್ಟಪಟ್ಟು ಕೆಲಸ ಮಾಡಲು ಹಾಗೂ ಮೌಲ್ಯಭರಿತ ಜೀವನ ನಡೆಸುವಂತೆ ಜನತೆಯನ್ನು ಪ್ರೇರೇಪಿಸುವುದೇ ವರ್ಗಗಳ ಶ್ರೇಣೀಕರಣದ ಮುಖ್ಯ ಕಾರ್ಯವಾಗಿರುತ್ತದೆ. ನಿರ್ದಿಷ್ಟವಾದ ಸಾಮಾಜಿಕ ಮೌಲ್ಯಗಳನ್ನು ಸಾಧಿಸುವವರು ಸಾಮಾನ್ಯವಾಗಿ ಹೆಚ್ಚಿನ ಪ್ರತಿಷ್ಠೆಯನ್ನು ಪಡೆಯುವುದಲ್ಲದೆ ಸಮಾಜದಲ್ಲಿ ಇತರರಿಂದ ಹೆಚ್ಚಿನ ಮಾನ್ಯತೆ ಪಡೆಯುತ್ತಾರೆ.

4. ಸಾಮಾಜಿಕ ಚಲನಶೀಲತೆಯನ್ನುಂಟುಮಾಡುವುದು: ಕೆಲವು ಉನ್ನತ ಸ್ಥಾನಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಹಾಗೂ ಪ್ರತಿಫಲಗಳನ್ನು ನೀಡಿದಾಗ ಜನರಲ್ಲಿ ಸ್ಪರ್ಧೆ ಉಂಟಾಗುತ್ತದೆ. ಈ ಪ್ರಕ್ರಿಯೆಯು ಪರಿಶ್ರಮದ ಮೂಲಕ ಅರ್ಹರು ಉನ್ನತ ಸ್ಥಾನಕ್ಕೇರಲು ಸಹಾಯ ಮಾಡುತ್ತದೆ. ಅಲ್ಲಿ ಅವರು ತಮ್ಮ ಸಾಮರ್ಥ್ಯವನ್ನು ಉತ್ತಮವಾಗಿ ಬಳಸಬಹುದು. ಇದು ಸಾಮಾಜಿಕ ಚಲನಶೀಲತೆಗೆ ಕಾರಣವಾಗುತ್ತದೆ.

5. ಕೌಶಲ್ಯಗಳನ್ನು ಹಾಗೂ ಮನೋಭಾವಗಳನ್ನು ಬಲಪಡಿಸಿ ಸ್ಥಿರಗೊಳಿಸುವುದು: ಯಾವುದೇ ಸಮಾಜದಲ್ಲಾದರೂ ಮೇಲ್ವರ್ಗದವರು ತಮ್ಮ ಸ್ಥಿರತೆಗೆ ಖ್ಯಾತರಾಗಿರುತ್ತಾರೆ. ಇದಕ್ಕೆ ಕಾರಣ ಈ ಸದಸ್ಯರ ಮನೋಭಾವನೆಗಳು ಒಂದೇ ರೀತಿಯಾಗಿರುತ್ತವೆ. ಒಂದೇ ರೀತಿಯ ಆಸಕ್ತಿ ಹಾಗೂ

ಮೌಲ್ಯಗಳನ್ನು ಹೊಂದಿರುವವರು ಅನ್ಯೋನ್ಯವಾಗಿರುತ್ತಾರೆ. ಅವರ ಮೌಲ್ಯಗಳು ಮತ್ತು ಹಿತಾಸಕ್ತಿಗಳು ಸಹವರ್ತಿ ವರ್ಗ ಸದಸ್ಯರ ನಡುವೆ ನಿಕಟವಾದ ಸಂಬಂಧಕ್ಕೆ ಪ್ರೇರಕವಾಗುತ್ತದೆ. ಅಂತಹ ಸಂಬಂಧವು ಮೇಲ್ವರ್ಗದವರ ಕೌಶಲ್ಯಗಳನ್ನು, ವರ್ತನೆಗಳನ್ನು ಸ್ಥಿರಪಡಿಸಿ ಬಲಗೊಳಿಸುತ್ತದೆ.

6. ವಿಭಿನ್ನ ವೃತ್ತಿಗಳನ್ನು ಅಥವಾ ಉದ್ಯೋಗಗಳನ್ನು ಮುಂದುವರಿಸಲು ಸಹಾಯ ಮಾಡುವುದು: ಸಮಾಜಕ್ಕೆ ವಿವಿಧ ಉದ್ಯೋಗವನ್ನು ಮಾಡುವ ಜನರ, ಕುಶಲಿಗಳ ಅಗತ್ಯವಿದೆ. ಕೌಶಲಗಳು ಪಾರಂಪರಿಕವಾಗಿ ಬರುವಾಗ ಕುಶಲತೆ ಹೆಚ್ಚು ಉನ್ನತಮಟ್ಟದ್ದಾಗುವ ಸಾಧ್ಯತೆಗಳಿವೆ. ಎಲ್ಲ ಉದ್ಯೋಗದವರೂ ಅವರವರ ಉದ್ಯೋಗವನ್ನು ಮುಂದುವರಿಸಿಕೊಂಡು ಸಮಾಜಕ್ಕೆ ಒತ್ತಾಸೆಯಾಗುವಂತೆ ಮಾಡುವಲ್ಲಿ ಸಮಾಜಕ್ಕೆ ತನ್ನದೇ ಆದ ಮಾರ್ಗಗಳಿವೆ. ಅದರಲ್ಲಿ ಸಾಮಾಜಿಕ ಸ್ತರೀಕರಣವೂ ಒಂದು.

7. ಆರ್ಥಿಕ ಕಾರ್ಯವನ್ನು ನಿರ್ವಹಿಸುವುದು: ಶ್ರೇಣೀಕರಣವು ವಿವಿಧ ಗುಂಪುಗಳಲ್ಲಿ ಒಂದು ರೀತಿಯ ಸ್ಪರ್ಧೆಯನ್ನು ಸೃಷ್ಟಿಸುತ್ತದೆ. ಈ ಅಂಶವು ಒಂದು ಬಗೆಯ ಆರ್ಥಿಕ ಕ್ರಿಯೆಯನ್ನು ಹೊಂದಿದ್ದು, ಅಡಗಿರುವ ಪ್ರತಿಭೆಯ ಪರಿಣಾಮಕಾರಿ ಬಳಕೆ ಮತ್ತು ಬೆಳವಣಿಗೆಗೆ ಸಹಾಯ ಮಾಡುತ್ತದೆ.

ಯಾವುದೇ ಸಮಾಜವು ವರ್ಗರಹಿತವಲ್ಲ. ಪ್ರಪಂಚದ ಎಲ್ಲಾ ಪ್ರಸಿದ್ಧಿ ಸ್ಥಾಪಿತ ಸಮಾಜಗಳು ಯಾವುದೋ ಒಂದು ರೀತಿಯಲ್ಲಿ ಶ್ರೇಣೀಕರಿಸಲ್ಪಟ್ಟಿವೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಸಾಮಾಜಿಕ ಶ್ರೇಣೀಕರಣದ ವಿವಿಧ ಕಾರ್ಯಗಳನ್ನು ಗುರುತಿಸಿ, ಅವುಗಳ ಪ್ರಯೋಜನಗಳನ್ನು ಆಲೋಚಿಸಿ. ಸಾಮಾಜಿಕ ಶ್ರೇಣೀಕರಣದ ಕೊರತೆಗಳನ್ನೂ ಶೈಕ್ಷಣಿಕ ನಿಹಿತಾರ್ಥಗಳನ್ನೂ ಪಟ್ಟಮಾಡಿ. ಚರ್ಚಿಸಿದ ವಿಷಯಗಳು ಮತ್ತು ಅದರ ಫಲವಾಗಿ ನೀವು ಕಂಡುಕೊಂಡ ಅಂಶಗಳ ವರದಿ ತಯಾರಿಸಿ.

## 1.1.4. ಸಾರಾಂಶಿಸೋಣ

- ಸಮಾಜದ ಯಾವುದೇ ಎರಡು ಗುಂಪುಗಳ/ಸಮೂಹಗಳ ನಡುವಿನ ಅಸಮಾನತೆಯ ಅಸ್ತಿತ್ವದ ಕಾರಣದಿಂದಾಗಿ ಸಾಮಾಜಿಕ ಶ್ರೇಣೀಕರಣವು ಅಸ್ತಿತ್ವದಲ್ಲಿದೆ. ರೇಮಂಡ್ ಡಬ್ಲ್ಯೂ ಮುರ್ರೆಯವರ ಪ್ರಕಾರ "ಸಾಮಾಜಿಕ ಶ್ರೇಣೀಕರಣವೆಂದರೆ ಸಮಾಜವನ್ನು 'ಮೇಲ್ವರ್ಗ' ಹಾಗೂ 'ಕೆಳವರ್ಗ'ಗಳೆಂಬ ಎರಡು ಸಮತಲವಾದ ಘಟಕಗಳನ್ನಾಗಿ ವಿಭಜಿಸುವುದು. ಸಾಮಾಜಿಕ ಶ್ರೇಣೀಕರಣ ಮುಖ್ಯ ಸ್ವರೂಪಗಳೆಂದರೆ ಜಾತಿ ಮತ್ತು ವರ್ಗ.
- ಜಾತಿಯ ಗುಣ ಲಕ್ಷಣಗಳು ಕೆಳಕಂಡಂತಿವೆ: ಜಾತಿ ಎಂಬುದು ಹುಟ್ಟಿನಿಂದ ಬಂದದ್ದು, ಆಹಾರ ಅಭ್ಯಾಸದಲ್ಲಿ ನಿರ್ಬಂಧ ವಿಧಿಸುತ್ತದೆ, ಜಾತಿ ಎಂಬುದು ನಿಶ್ಚಿತ, ಇದು ಕ್ರಮಬದ್ಧ ಸಾಮಾಜಿಕ ರಚನೆಗೆ ಕಾರಣವಾಗುತ್ತದೆ.
- ವರ್ಗ ಎಂಬುದು ಸಾಮಾಜಿಕ ಶ್ರೇಣೀಕರಣದ ಮತ್ತೊಂದು ರೂಪವಾಗಿದೆ. ಸಮಾಜದ ಪ್ರತಿ ವರ್ಗದಲ್ಲೂ ಪ್ರತಿಯೊಂದು ಗುಂಪಿನ ಸಾಮಾಜಿಕ ಸ್ಥಿತಿಯೂ ಇತರ ಗುಂಪುಗಳಿಗಿಂತ ಭಿನ್ನವಾಗಿರುತ್ತದೆ.
- ಭೂಮಾಲೀಕರು, ಮಾಲೀಕತ್ವವಿರುವ ರೈತರು, ಬಾಡಿಗೆದಾರರು, ಕೃಷಿ ಕಾರ್ಮಿಕರು–ಇವು ಗ್ರಾಮೀಣ ಭಾರತದ ಸಾಮಾಜಿಕ ವರ್ಗಗಳು.
- ಬಂಡವಾಳ ಶಾಹಿ, ಕಾರ್ಪೊರೇಟ್ ವಲಯ, ವೃತ್ತಿಪರ ವರ್ಗಗಳು, ಚಿಲ್ಲರೆ ವ್ಯಾಪಾರಿಗಳು ಮತ್ತು

ಅಂಗಡಿ ಇಟ್ಟು ಕೊಂಡಿರುವವರು, ಕಾರ್ಮಿಕ ವರ್ಗಗಳು ಇವು ನಗರ ಭಾರತದ ಸಾಮಾಜಿಕ ವರ್ಗಗಳು

- ಧಾರ್ಮಿಕ ಶ್ರೇಣೀಕರಣವೆಂದರೆ ಧಾರ್ಮಿಕ ನಂಬಿಕೆಗಳು, ಸಂಬಂಧ, ನಂಬಿಕೆ, ಧಾರ್ಮಿಕ ಅಭ್ಯಾಸಗಳ ಮೇರೆಗೆ ಕ್ರಮಾನುಗತ ಪದರಗಳಾಗಿ ಸಮಾಜವನ್ನು ವಿಭಜಿಸುವುದು. ಸಾಮಾಜಿಕ ಶ್ರೇಣೀಕರಣಗಳು ತೆಗೆದುಕೊಳ್ಳಬಹುದಾದ ಅತ್ಯಂತ ಸಾಮಾನ್ಯ ಮತ್ತು ಮಹತ್ವದ ಸ್ವರೂಪಗಳಲ್ಲಿ ಧಾರ್ಮಿಕ ಶ್ರೇಣೀಕರಣವೂ ಒಂದು.

- ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡುವುದು, ಸಮಾಜದ ವಿವಿಧ ಪಾತ್ರಗಳಲ್ಲಿ ಸಮರ್ಥರಾದವರನ್ನು ಇರಿಸುವುದು, ವರ್ಗ ಮತ್ತು ಜಾತೀಯ ಶ್ರೇಣೀಕರಣವು ಸಮಾಜದ ಒಪ್ಪಿಗೆಯನ್ನು ಖಚಿತಗೊಳಿಸುವುದು, ಸಾಮಾಜಿಕ ಚಲನಶೀಲತೆಯನ್ನುಂಟುಮಾಡುವುದು, ಕೌಶಲ್ಯಗಳನ್ನು ಹಾಗೂ ಮನೋಭಾವಗಳನ್ನು ಬಲಪಡಿಸಿ ಸ್ಥಿರಗೊಳಿಸುವುದು, ವಿಭಿನ್ನ ವೃತ್ತಿಗಳನ್ನು ಅಥವಾ ಉದ್ಯೋಗಗಳನ್ನು ಮುಂದುವರಿಸಲು ಸಹಾಯ ಮಾಡುವುದು, ಆರ್ಥಿಕ ಕಾರ್ಯವನ್ನು ನಿರ್ವಹಿಸುವುದು–ಇವು ಸಾಮಾಜಿಕ ಶ್ರೇಣೀಕರಣದ ಕಾರ್ಯಗಳು.

## 1.1.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು: 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ನಿಮ್ಮ ಆಲೋಚನೆಗಳನ್ನು/ಕಾಳಜಿಗಳನ್ನು ನಿಮ್ಮ ವೃತ್ತಿಬಾಂದವರೊಂದಿಗೆ ಹಂಚಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ನಿಮ್ಮ ಬರಹವನ್ನು ಉತ್ತಮಪಡಿಸಿ ಸಹೋದ್ಯೋಗಿಗಳೊಂದಿಗೆ/ ಸಹಪಾಠಿಗಳೊಂದಿಗೆ ಹಂಚಿಕೊಳ್ಳಿ.

## 1.1.6 ಘಟಕಾಂತ್ಯ ಅಭ್ಯಾಸಗಳು

1. ಭಾರತೀಯ ಸನ್ನಿವೇಶದ ಸಂದರ್ಭದಲ್ಲಿ ರಿಸ್ಲೆಯವರು ನೀಡಿದ ಜಾತಿಯ ವ್ಯಾಖ್ಯೆಯನ್ನು ವಿಶ್ಲೇಷಿಸಿ
2. ಸಾಮಾಜಿಕ ಶ್ರೇಣೀಕರಣದ ಸ್ವರೂಪವನ್ನೂ ಮತ್ತು ಅದರ ಕಾರ್ಯಗಳನ್ನು ವಿವರಿಸಿ.

## 1.1.7. ಪರಾಮರ್ಶನ ಸೂಚಿ


1. Kirti Singh, M., Religion and Culture of Manipur,Manas Publications, Delhi 1988, p.61.
2. http://www.differencebetween.info/
3. Religion and Social Stratification fromThe Scientific Study of Religion by Milton Yinger, and other sourcesMiltonYinger, The Scientific Study of Religion, 1970, p. 283.
4. A. T. Boisen, "Economic Distress and Religious Experience," Psychiatry, May, 1939, p. 194
5. University of Calicut, School of Distance Education B.A. Sociology-V Semester, Core Course, Indian Society And Social Change

6. Gordon Marshall (ed) A Dictionary of Sociology (Article: Sociology of Education), Oxford University Press, 1998

7. Jacob, A. (2001) Research links poverty and literacy, ABC Radio Transcript Foster, L. E. (1987) Australian Education: A Sociological Perspective(2nd Ed), Prentice Hall, Sydney

8. Furze, B. and Healy, P. (1997) “Understanding society and change” in Stafford, C. and Furze, B. (eds) Society and Change (2nd Ed), Macmillan Education Australia, Melbourne 65

9. CHEKKI, D. A.: Kinship and Modernizationin Northern Mysore" in K. Ishwaran (Ed.), Contributions to Asian Sociology. Toronto: York University.

10. GHURYE, G. S. Caste, Class and Occupation. Bombay: Popular Prakashan, 1961.

11. GOODE, WILLIAM J. "Family and Mobility" in ReinhardBendix and Seymour Martin Lipset (eds), Class, Status and Power: Social Stratification in Comparative Perspective, 1966.

12. International Journal of Humanities and Social Science Invention ISSN (Online): 2319 – 7722, ISSN (Print): 2319 – 7714 www.ijhssi.org Volume 2 Issue 12 ? December. 2013? PP.57-66 www.ijhssi.org

13. Revisiting Social Stratification in Indian Society: A Review and Analysis with Focus on Kashmiri Society Irshad, A.W., Ahrar, A.H. and Zuber, S.M. 1,TheHimalayan Ecological and Conservation Research Foundation, J&K 51/5, Lane 25 SwarnVihar, PO Muthi, Jammu – 180006, J&K, India

14. What is Social Stratification? – Meaning and Types Category: BlogOn January 16, 2017 By Teamwork

15. Religious stratification-From Wikipedia, the free encyclopedia

16. www.study.com : How Religious Stratification Impacts Social Status, Chapter48 / Lesson 7

17. http://www.shareyouressays.com a web platform to share your essay: Article shared by PranavDua on functions of social stratification

18. www.capesociology.org

**********

# ಬ್ಲಾಕ್–1 : ಸಮಕಾಲೀನ ಭಾರತ

## ಘಟಕ–2 : ಸಮಾಜದ ವಿಧಗಳು: ಬುಡಕಟ್ಟು, ಕೃಷಿ, ಕೈಗಾರಿಕಾ ನಂತರದ ಸಮಾಜ

### ಘಟಕದ ರಚನೆ


1.2.1. ಕಲಿಕೆಯ ಉದ್ದೇಶಗಳು

1.2.2. ಪೀಠಿಕೆ

1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.2.3.1. ಬುಡಕಟ್ಟು ಸಮುದಾಯ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1.2.3.2. ಕೃಷಿಕ ಸಮುದಾಯ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1.2.3.3. ಕೈಗಾರಕಾ ಸಮುದಾಯ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 3

1.2.3.4. ಕೈಗಾರಿಕೋತ್ತರ ಸಮುದಾಯ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 4

1.2.4. ಸಾರಾಂಶಿಸೋಣ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 4

1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

1.2.6. ಘಟಕಾಂತ್ಯ ಅಭ್ಯಾಸಗಳು

1.2.7. ಪರಾಮರ್ಶನ ಸೂಚಿ


### 1.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ವಿವಿಧ ಸಮುದಾಯಗಳ ಲಕ್ಷಣಗಳನ್ನು ಉಲ್ಲೇಖಿಸುವರು;
- ಸಮಾಜ ಜೀವನದಲ್ಲಿ ಬುಡಕಟ್ಟು ಜನಾಂಗದಿಂದ ಕೈಗಾರಿಕೋತ್ತರ ಸಮಾಜದ ಕಡೆಗೆ ಆದ ಪಲ್ಲಟವನ್ನು ಗುರುತಿಸುವರು; ಮತ್ತು
- ವಿವಿಧ ಸಮುದಾಯದ ವಿಶಿಷ್ಟ ಲಕ್ಷಣಗಳಲ್ಲಿನ ವ್ಯತ್ಯಾಸಗಳನ್ನು ತಿಳಿಸುವರು.

### 1.2.2. ಪೀಠಿಕೆ

ಇತಿಹಾಸದ ಪೂರ್ವ ಶಿಲಾಯುಗದಿಂದ ಇಂದಿನ ಮಾಹಿತಿ ಸಂವಹನ ತಂತ್ರಜ್ಞಾನದ ಕಾಲಘಟ್ಟದ ಕಡೆಗೆ ಒಮ್ಮೆ ಕಣ್ಣು ಹಾಯಿಸಿದರೆ ಸಾಕು, ಮಾನವನ ಸಾಮರ್ಥ್ಯದ ಅದ್ವಿತೀಯ ಸಾಧನೆ ನಮ್ಮನ್ನು ಮೂಕರಾಗಿಸುತ್ತದೆ. ಇಂದಿನ ಮಾನವ ಹಿಂದಿನ ಮಾನವನಿಗಿಂತ ಬಹಳಷ್ಟು ಭಿನ್ನವಾಗಿದ್ದಾನೆ. ಕಾರಣ ಅಂದಿನಿಂದ ಇಂದಿಗೆ ಸಮಾಜವೂ ಬದಲಾಗಿದೆ. ಹೀಗೆ ಸಮಾಜ ದಾಟಿ ಬಂದ ಇತಿಹಾಸವನ್ನು ವಿವಿಧ ಕಾಲಘಟ್ಟಗಳಾಗಿ ವರ್ಗೀಕರಿಸಿ

ಹಿಡಿದಿಡಲಾಗಿದೆ. ಅವೆಂದರೆ, ಬುಡಕಟ್ಟು ಸಮುದಾಯ, ಕೃಷಿಕ ಸಮುದಾಯ, ಕೈಗಾರಿಕ ಸಮುದಾಯ ಮತ್ತು ಕೈಗಾರಿಕೋತ್ತರ ಸಮುದಾಯ. ಈ ವಿವಿಧ ಕಾಲಘಟ್ಟಗಳಲ್ಲಿ ಸಮಾಜದ ಸ್ವರೂಪ ಹೇಗಿತ್ತು ಎಂಬುದನ್ನು ನಾವು ಈ ಘಟಕದಲ್ಲಿ ಚರ್ಚಿಸೋಣ.

## 1.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.2.3.1. ಬುಡಕಟ್ಟು ಸಮುದಾಯ

ಬುಡಕಟ್ಟು ಜನಾಂಗವನ್ನು ಸಮೀಪದಿಂದ ವೀಕ್ಷಿಸುವ ಅವಕಾಶ ಎಂದಾದರೂ ದೊರೆತಿದೆಯೇ? ಸಣ್ಣ ಗುಂಪುಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಈ ಅಲೆಮಾರಿಗಳನ್ನು ನೋಡುವ ಅವಕಾಶ ದುರ್ಲಭ.

ಬುಡಕಟ್ಟು ಸಮುದಾಯವು ಮಾನವ ಇತಿಹಾಸದ ಆರಂಭಿಕ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದ ಪ್ರಾಚೀನ ಸಮಾಜದ ಒಂದು ಸಮುದಾಯ ಎಂಬ ಅರಿವು ನಿಮಗಿರಬಹುದು. ಆದರೆ ಆಫ್ರಿಕಾ, ಏಷ್ಯಾ ಮತ್ತು ಯೂರೋಪ್ ಖಂಡಗಳಲ್ಲಿ ಅವನ್ನು ಇಂದಿಗೂ ಸಹ ಕಾಣಬಹುದಾಗಿದೆ. ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ ಈ ಬುಡಕಟ್ಟು ಜನಾಂಗವರನ್ನು ಕಾಣಬಹುದು.

ನೀವು ವಾಸಿಸುವ ಸ್ಥಳದ ಬಳಿ ಬುಡಕಟ್ಟು ಜನಾಂಗದವರು ವಾಸಿಸುತ್ತಿದ್ದಾರೆಯೇ? ಅವರೊಂದಿಗೆ ಸಂವಹನ ಮಾಡಿದ್ದೀರಾ? ಅಥವಾ ಇತರರ ಅನುಭವದ ಮೂಲಕ ಬುಡಕಟ್ಟು ಜನಾಂಗದವರ ವಿಷಯ ತಿಳಿದಿದ್ದೀರಾ? ಅವುಗಳನ್ನು ನೆನಪಿಸಿಕೊಳ್ಳಿ.

**ಬುಡಕಟ್ಟು ಜನಾಂಗದ ಗುಣಲಕ್ಷಣಗಳು:** ಕೆಳಕಂಡ ನಾಲ್ಕು ಶೀರ್ಷಿಕೆಗಳ ಅಡಿಯಲ್ಲಿ ಬುಡಕಟ್ಟು ಜನಾಂಗದವರ ಗುಣಲಕ್ಷಣಗಳನ್ನು ಪಟ್ಟಿ ಮಾಡಬಹುದು :

1. **ಧರ್ಮ:** ಬುಡಕಟ್ಟು ಸಮುದಾಯದವರು ಸಮಾನ ಪೂರ್ವಜರನ್ನು ಪೂಜಿಸುತ್ತಾರೆ. ಬುಡಕಟ್ಟಿನ ಕುಟುಂಬಗಳನ್ನು ಗುರುತಿಸಲು ಅತೀಂದ್ರಿಯವೆನಿಸಿದ ಚಿಹ್ನೆಗಳಿವೆ. ಮಾಂತ್ರಿಕ ಶಕ್ತಿಯ ಆರಾಧನೆಯ ಆಚರಣೆ ಇವರಲ್ಲಿದೆ.

2. **ಸಾಮಾಜಿಕ ಜೀವನ:** ಇವರ ಸಾಮಾಜಿಕ ಜೀವನ ಸರಳವಾದದು. ಇವರು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುತ್ತಾರೆ. ಏಕತೆಯ ಭಾವದಿಂದ ಬೆಸೆದ ಸಮುದಾಯವಿದು. ಈ ಸಮುದಾಯದವರು ಒಂದೇ ಹೆಸರಿನಿಂದ ಒಂದೇ ಪ್ರದೇಶದಲ್ಲಿ ವಾಸಿಸುತ್ತಾರೆ. ಸಮುದಾಯದ ನಡೆವಳಿಕೆ ಮತ್ತು ರೂಢಿಗಳು ಪ್ರತಿಯೊಬ್ಬ ಸದಸ್ಯನಿಗೂ ತಿಳಿದಿರುತ್ತದೆ. ಸ್ವಗೋತ್ರದಲ್ಲಿ ಮದುವೆಯಾಗುತ್ತಾರೆ. ಬೇಟೆ ಮತ್ತು ಅವಶ್ಯಕ ವಸ್ತುಗಳ ಸಂಗ್ರಹಣೆ ಇವರ ಆರ್ಥಿಕ ಚಟುವಟಿಕೆ. ಜೈವಿಕ ವ್ಯತ್ಯಾಸಗಳಿಗೆ ಹೊರತುಪಡಿಸಿ ಇವರಲ್ಲಿ ಶ್ರಮ ವಿಭಜನೆ ಇಲ್ಲ.

3. **ಕೌಟುಂಬಿಕ ಜೀವನ:** ಇವರ ಕುಟುಂಬಗಳಲ್ಲಿ ಪುರುಷರು ಮತ್ತು ಸ್ತ್ರೀಯರಿಗೆ ನಿರ್ದಿಷ್ಟವಾದ ಪಾತ್ರಗಳಿವೆ. ಪುರುಷರು ಬೇಟೆಯಾಡುವುದು, ಶತ್ರುಗಳೊಂದಿಗೆ ಹೋರಾಡುವುದು, ಬುಡಕಟ್ಟು ಸಮಾರಂಭಗಳಲ್ಲಿ ಭಾಗವಹಿಸುವುದು ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಸ್ತ್ರೀಯರು ಗೃಹಕೃತ್ಯಗಳಾದ ಆಹಾರ ತಯಾರಿ, ಮಕ್ಕಳ ಪೋಷಣೆ ಇವುಗಳ ಜವಾಬ್ದಾರಿ ವಹಿಸಿಕೊಂಡಿರುತ್ತಾರೆ.

4. **ಬುಡಕಟ್ಟು ಜನಾಂಗದವರಲ್ಲಿ ತಂತ್ರಜ್ಞಾನ:** ಇಂದಿನದು ತಾಂತ್ರಿಕ ಯುಗ. ಆದರೆ ಬುಡಕಟ್ಟು ಸಮಾಜದಲ್ಲೂ ಒಂದು ರೀತಿಯ ತಂತ್ರಜ್ಞಾನ ಅಸ್ತಿತ್ವದಲ್ಲಿತ್ತು. ಆದರೆ ಅದು ಅವರ ಆರ್ಥಿಕ ಹಾಗೂ ಗೃಹ ಚಟುವಟಿಕೆಗಳಿಗೆ ಸೀಮಿತವಾಗಿತ್ತು. ಬೇಟೆಯ ಕಲೆಯನ್ನು ಕಲಿಯುವುದು, ಪ್ರಾಣಿಗಳನ್ನು

ಆಹಾರಕ್ಕಾಗಿ ಸಂಸ್ಕರಿಸಿ ಹದಮಾಡುವುದು, ಗಿಡದ ನಾರು ಹಾಗೂ ತೊಗಟೆಯನ್ನು ಉಪಯೋಗಿಸಿ ವಸತಿ ಕಲ್ಪಿಸುವುದು, ಮರದ ಸಲಕರಣೆಗಳನ್ನು ತಯಾರಿಸುವುದು ಇವರಿಗೆ ತಿಳಿದಿತ್ತು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

ಬುಡಕಟ್ಟು ಸಮುದಾಯವನ್ನು ಕುರಿತಂತೆ 'ಸರಿ'ಯಾದ ಹೇಳಿಕೆಗಳನ್ನು ಅಡಿಗೆರೆ ಹಾಕಿ ಸೂಚಿಸಿ

1. ಬುಡಕಟ್ಟು ಸಮುದಾಯದವರು ವಿವಿಧ ದೇವತೆಗಳನ್ನು ಪೂಜಿಸುತ್ತಾರೆ.
2. ಅವರ ಜೀವನ ಸರಳವಾದುದು.
3. ಅವರು ಒಂದೇ ಸ್ಥಳದಲ್ಲಿ ವಾಸಿಸುತ್ತಾರೆ.
4. ಅವರು ಅತೀಂದ್ರಿಯವೆನಿಸಿದ ಸಂಕೇತಗಳನ್ನು ಹೊಂದಿರುತ್ತಾರೆ.
5. ಈ ಸಮುದಾಯದಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ನಿರ್ದಿಷ್ಟ ಪಾತ್ರಗಳಿವೆ.
6. ಇವರು ಸ್ವಗೋತ್ರದಲ್ಲಿ ಮದುವೆಯಾಗುವುದಿಲ್ಲ.

## 1.2.3.2. ಕೃಷಿ ಸಮುದಾಯ

ನವ ಶಿಲಾಯುಗದ ಕ್ರಾಂತಿಯ ನಂತರ ಸಮಾಜದ ಇತಿಹಾಸದಲ್ಲಿ ಹೆಚ್ಚಿನ ಬದಲಾವಣೆ ಕಂಡುಬಂತು. ಈ ಕ್ರಾಂತಿಯು ನಿಧಾನವಾಗಿ ಕೃಷಿ ಪದ್ಧತಿಗಳಿಗೆ ನಾಂದಿ ಹಾಡಿತು. ನಿಮಗೆ ತಿಳಿದಂತೆ ಮನುಷ್ಯನು ಪ್ರಾಣಿಗಳ ಸಾಕಣೆ ಮಾತ್ರವಲ್ಲದೆ ಸಸ್ಯಗಳನ್ನು ಬೆಳಸಲು ಆರಂಭಿಸಿದಾಗ ಕೃಷಿ ಆರಂಭವಾಯಿತು. ಉತ್ತಮ ಕೃಷಿಗೆ ಅನುಕೂಲವಾಗುವ ಸರಳ ಉಪಕರಣಗಳ ಆವಿಷ್ಕಾರವು ಕೃಷಿಕ ಸಮುದಾಯದ ಬೆಳವಣಿಗೆಗೆ ಕಾರಣವಾಯಿತು.

ಕೃಷಿಕ ಸಮುದಾಯದಲ್ಲಿ, ಕೃಷಿಯೇ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಈ ಸಮುದಾಯದವರು ವಿಭಿನ್ನ ರೀತಿಯ ಬೆಳೆಗಳನ್ನು ಬೆಳೆದವರು. ಕೃಷಿ ಸಮುದಾಯಗಳು 5000 ವರ್ಷಗಳ ಹಿಂದೆಯೇ ಅಸ್ತಿತ್ವಕ್ಕೆ ಬಂದವು. ಪ್ರಾಚೀನ ಈಜಿಪ್ಟ್, ಚೀನಾ, ಗ್ರೀಸ್, ರೋಮ್ ಹಾಗೂ ಭಾರತ ಇವೆಲ್ಲವೂ ಕೃಷಿ ಸಮಾಜಗಳೇ. ಈ ಸಮುದಾಯವು, ಸಸ್ಯಗಳನ್ನು ಬೆಳೆಸುವ (ಕೃಷಿ), ಪ್ರಾಣಿಗಳನ್ನು ಸಾಕುವ ಹಾಗೂ ಪಳಗಿಸುವ ಕಾರ್ಯಗಳನ್ನು ಅಳವಡಿಸಿಕೊಂಡಿತ್ತು.

**ಕೃಷಿಕ ಸಮುದಾಯದ ಗುಣಲಕ್ಷಣಗಳು:**

- ಈ ವ್ಯವಸ್ಥೆಯಲ್ಲಿ ಲಿಂಗ ಭೇದ ಹಾಗೂ ವಯೋಮಿತಿಯಂತಹ ಜೈವಿಕ ವ್ಯತ್ಯಾಸಕ್ಕೆ ಅನುಗುಣವಾಗಿ ಕೆಲಸಗಳಿದ್ದವೇ ಹೊರತು ವಿಶೇಷ ಕಾರ್ಮಿಕ ವ್ಯವಸ್ಥೆ ಇರಲಿಲ್ಲ. ಒಂದೇ ಸ್ವರೂಪದ ಸಮಗ್ರ ಸಮಾಜದಲ್ಲಿನ ಎಲ್ಲರೂ ಒಂದೇ ಕಸುಬಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದುಡಿಯುತ್ತಿದ್ದರು. ನೋಡಲು ಹೆಚ್ಚು ಕಡಿಮೆ ಎಲ್ಲರೂ ಒಂದೇ ರೀತಿ ಇದ್ದರು, ಒಂದೇ ರೀತಿಯ ಸಂಸ್ಕೃತಿಯನ್ನು ಅನುಸರಿಸುತ್ತಿದ್ದರು, ಸರಳ ಹಾಗೂ ಏಕರೂಪಿ ಜೀವನವನ್ನು ನಡೆಸುತ್ತಿದ್ದರು. ಕುಟುಂಬದ ಪಾತ್ರವು ಸಂತಾನೋತ್ಪತ್ತಿ ಹಾಗೂ ಮಗುವಿನ ಪಾಲನೆಗೆ ಮಾತ್ರ ಸೀಮಿತವಾಗದೆ ಅದು ಆರ್ಥಿಕ ಘಟಕವೂ ಆಗಿತ್ತು. ಕುಟುಂಬದಲ್ಲಿನ ವ್ಯಕ್ತಿಯ ಸ್ಥಾನಮಾನವು ಕುಟುಂಬದ ಸ್ಥಿತಿಯನ್ನು ನಿರ್ಧರಿಸುತ್ತಿತ್ತು. ಆದಾಗ್ಯೂ ತಂದೆಯು ಅಂತಿಮ ಅಧಿಕಾರ ಹೊಂದಿರುತ್ತಿದ್ದನು. ಹಾಗೂ ಕುಟುಂಬದ ಎಲ್ಲಾ

ಸಮಸ್ಯೆಗಳಿಗೆ ಸೂಕ್ತ ನಿರ್ಧಾರಗಳನ್ನು, ಪರಿಹಾರಗಳನ್ನು ಮಾಡುತ್ತಿದ್ದನು. ಈ ಸಮುದಾಯದಲ್ಲಿ ಮದುವೆ, ಧರ್ಮ ಮತ್ತು ಮನೋರಂಜನೆಗಳನ್ನು ಕುರಿತಂತೆ ಸ್ಥಾಪಿತ ಸಂಪ್ರದಾಯಗಳನ್ನು ಗುರುತಿಸಬಹುದು.

- ಕೃಷಿ ಸಮುದಾಯದಲ್ಲಿ ಪ್ರತಿ ಕುಟುಂಬಕ್ಕೆ ನೆರೆಕೆರೆ ಎಂಬುದು ಪ್ರಮುಖ ಘಟಕವಾಗಿತ್ತು. ಇದು ಏಕರೂಪ ಸಮಾಜವಾಗಿದ್ದು ಸಮಗ್ರತೆಯನ್ನು (ಭೌತಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ) ಹೊಂದಿದ್ದು ಈ ಸಮುದಾಯದ ಸದಸ್ಯರು ಪ್ರಪಂಚವನ್ನು ಒಂದು ಅನ್ಯಲೋಕವೆಂಬ ದೃಷ್ಟಿಕೋನದಿಂದ ನೋಡುತ್ತಿದ್ದರು. ಬಲವಾದ ಗುಂಪುಗಾರಿಕೆಯ ಭಾವನೆ ಇವರಲ್ಲಿತ್ತು. ಸದಸ್ಯರು ಬಲವಾದ ಐಕ್ಯತೆಯನ್ನು ಹೊಂದಿದ್ದು, ಒಂದು ಸಂಸ್ಥೆಯೆಂಬಂತೆ ಕೆಲಸ ಮಾಡುತ್ತಿದ್ದರು.

- ಕೃಷಿ ಚಟುವಟಿಕೆಯಲ್ಲಿ ಭೂಮಿಯನ್ನು ಉಳುವುದು ಮುಖ್ಯ ಚಟುವಟಿಕೆಯಾಗಿದ್ದರೂ ಅದನ್ನು ಭಿನ್ನ ರೀತಿಯಲ್ಲಿ ಮಾಡುತ್ತಿದ್ದರು. ಅದು ಮಾಲಿಕತ್ವದ ಮೇಲೆ ಅವಲಂಬಿತವಾಗಿತ್ತು:

| ಚಟುವಟಿಕೆಯ ವಿಧ | ಮಾಲಿಕತ್ವದ ಬಗೆ |
|---|---|
| 1. ಇತರರ ಭೂಮಿಯನ್ನು ಉತ್ತು ಬೆಳೆಯನ್ನು ಹಂಚಿಕೊಳ್ಳುತ್ತಿದ್ದವರು | 1. ಗುತ್ತಿಗೆ ಬೇಸಾಯಗಾರರು |
| 2. ಸ್ವಂತ ಭೂಮಿ ಇರುವವರು ತಾವೇ ಸ್ವತಃ ಉಳುಮೆ ಮಾಡದೆ, ಭೂಮಿಯನ್ನು ಗುತ್ತಿಗೆಗೆ ಕೊಡುತ್ತಿದ್ದವರು | 2. ಭೂ ಮಾಲೀಕರು |
| 3. ಬಾಡಿಗೆ ಕಾರ್ಮಿಕರ ಸಹಾಯದಿಂದ ತಮ್ಮ ಹೊಲಗಳನ್ನು ಉಳುತ್ತಿದ್ದವರು | 3. ಮೇಲ್ವಿಚಾರಕ ಬೇಸಾಯಗಾರರು |
| 4. ತಮ್ಮ ಹೊಲಗಳನ್ನು ತಾವೇ ಉಳುತ್ತಿದ್ದವರು | 4. ಬೇಸಾಯಗಾರರು |

- ಕೃಷಿ ಸಮುದಾಯದಲ್ಲಿ ಜನರು ಸ್ಥಿರ ನಿವಾಸಿಗಳಾದ ಕಾರಣ ಗ್ರಾಮೀಣ ಸಮುದಾಯವು ಹುಟ್ಟಿಕೊಂಡಿತು. ಅವರದು ಬಲವಾದ ಒಗ್ಗಟ್ಟಿನ ಬದುಕಾಗಿತ್ತು. ಪೂರ್ವನಿರ್ಧಾರಿತವಾದ ಜೀವನಶೈಲಿ ಇವರದು. ಇವರು ಹೊರಪ್ರಪಂಚವನ್ನು ಪರಕೀಯರಂತೆಯೇ ಗುರುತಿಸುತ್ತಿದ್ದರು. ಸ್ಥಿರವಾಗಿ ಒಂದು ನೆಲೆಯಲ್ಲಿ ಬದುಕಿದ ಬದುಕು ಇವರದು. ಸಮುದಾಯವೇ ಜನರ ರಕ್ಷಣೆಯ ಭಾರವನ್ನು ವಹಿಸಿಕೊಂಡಿತ್ತು. ಇವರು ಭೂಮಿಯನ್ನು ಅತ್ಯಂತ ಗೌರವದಿಂದ ಕಾಣುವವರು. 'ಭೂಮಿತಾಯಿ' ಎಂಬ ಪದ ಇವರಿಂದಲೇ ಬಂದಿರಬಹುದು. ಏಕೆಂದರೆ ಕೃಷಿಗೆ ಮೂಲವಾದ ಭೂಮಿಯೇ ಅವರ ಜೀವನಾಧಾರವಾಗಿತ್ತು. ಕೃಷಿಗೆ ಮಾನವನ ಶ್ರಮ ಮಾತ್ರವಲ್ಲದೆ ಪ್ರಕೃತಿಯ ಸಹಯೋಗವೂ ಅಗತ್ಯ. ಹಾಗಾಗಿ ಇವರು ನೈಸರ್ಗಿಕ ಶಕ್ತಿಗಳ ಮೇಲೆ ಭಯ, ಭಕ್ತಿ ಇಟ್ಟವರು. ಪ್ರಕೃತಿಗೆ ಸಂಬಂಧಿಸಿದ ಧರ್ಮ ದೇವತೆಗಳಲ್ಲಿ ಇವರಿಗೆ ನಂಬಿಕೆ ಇತ್ತು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ : 2

ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ ಕೃಷಿಕ ಸಮುದಾಯದ ಲಕ್ಷಣಗಳನ್ನು ಕುರಿತು ತಲಾ ಒಂದು ವಾಕ್ಯವನ್ನು ಬರೆಯಿರಿ

1. ಕಾರ್ಮಿಕ ವ್ಯವಸ್ಥೆ
2. ಕಸುಬು

3. ಸಂಸ್ಕೃತಿ

4. ಕುಟುಂಬದ ಪಾತ್ರ

5. ಕುಟುಂಬದಲ್ಲಿನ ವ್ಯಕ್ತಿಯ ಸ್ಥಾನಮಾನ

## 1.2.3.3. ಕೈಗಾರಿಕಾ ಸಮುದಾಯ

ಸಮಾಜದ ಇತಿಹಾಸದಲ್ಲಿ ಒಂದು ಪ್ರಮುಖ ಅಂಶವೆಂದರೆ ಕೈಗಾರಿಕಾ ಕ್ರಾಂತಿ. ಇದಕ್ಕೆ ಮುಂಚಿತವಾಗಿ ಹೆಚ್ಚಿನ ಕಾರ್ಮಿಕರು ತಮ್ಮ ಕಚ್ಚಾ ಸಾಮಗ್ರಿಗಳನ್ನು ಹಾಗೂ ಸ್ವಂತ ಸಾಧನಗಳನ್ನು ಹೊಂದಿದ್ದರು. ಅವರು ತಮ್ಮ ಸ್ವಂತ ಛಾವಣಿಯಡಿಯಲ್ಲಿ ತಮ್ಮದೇ ಆದ ಸಮುದಾಯದಲ್ಲಿ ದುಡಿಯುತ್ತಿದ್ದರು. ಉತ್ಪಾದಿಸಿದ ಸಾಮಗ್ರಿಗಳ ಗುಣಮಟ್ಟ ಹಾಗೂ ಪ್ರಮಾಣವನ್ನು ಅವರೇ ನಿರ್ಣಯಿಸುತ್ತಿದ್ದರು. ನಂತರ ಗ್ರಾಹಕರಿಗೆ ಸಿದ್ಧಪಡಿಸಿದ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರು. ಕಾರ್ಮಿಕರು ತಮ್ಮ ಉತ್ಪಾದನೆಗೆ ಖ್ಯಾತಿ ಹೊಂದಿದವರು. ಕೈಗಾರಿಕಾ ಕ್ರಾಂತಿಯು ಸಮುದಾಯಗಳ ರಚನೆಯ ಮೇಲೆ ಪರಿಣಾಮಬೀರಿದೆ.

ನೌಕರರು ತಮ್ಮ ಛಾವಣಿಯಡಿಯಲ್ಲಿ ಪ್ರತ್ಯೇಕವಾಗಿ ತಯಾರಿಸಿದ ಪ್ರತಿಯೊಂದು "ಉತ್ಪನ್ನ"ವೂ ಒಬ್ಬರ ಮಾಲಿಕತ್ವದಲ್ಲಿಯೇ ಲಭ್ಯವಾಗಲಿಲ್ಲ. ನಂತರದ ಹಂತಗಳಲ್ಲಿ ಒಬ್ಬ ಬುದ್ಧಿವಂತ ವ್ಯಕ್ತಿಯು ತನ್ನ ಉದ್ಯಮಿತ್ವವನ್ನು ವೈಯಕ್ತಿಕ ಬಂಡವಾಳಶಾಹಿಯಾಗಿ ಮಾರ್ಪಡಿಸುವುದರ ಆಕಾಂಕ್ಷೆ ವ್ಯಕ್ತಪಡಿಸಿ, ಕಾರ್ಖಾನೆಯನ್ನು ಸ್ಥಾಪಿಸಿ ಕೆಲವು ಕಾರ್ಯಾಚರಣೆಗಳನ್ನು ವಹಿಸಿಕೊಂಡನು. ಅವನು ಮಾರುಕಟ್ಟೆಯ ಅಗತ್ಯಗಳನ್ನು ಅಳೆಯಲು ಶಕ್ತನಾದ ಕಾರಣ, ತನ್ನ ಸ್ವಂತ ಸೂರಿನಡಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಕಾರ್ಖಾನೆಯಲ್ಲಿ ಕಚ್ಚಾ ಸಾಮಗ್ರಿಗಳನ್ನು ಒದಗಿಸಿ ಅವರಿಂದ "ಉತ್ಪನ್ನ" ಮಾಡಿಸಿ, ಅದನ್ನು ಲಾಭಕ್ಕಾಗಿ ಮಾರಾಟ ಮಾಡಿದನು.

ಇಲ್ಲಿ ನೀವು ಒಂದು ಪ್ರಮುಖ ಅಂಶವನ್ನು ಗಮನಿಸಿರಬೇಕು. ಈ ಪ್ರಕ್ರಿಯೆ ಕಾರ್ಮಿಕನನ್ನು ಉತ್ಪಾದನೆಯ ವಿಧಾನದಿಂದ ಬೇರ್ಪಡಿಸಿತು. ಕೆಲಸಗಾರನು ಕಟ್ಟಡ, ಉಪಕರಣ, ಕಚ್ಚಾವಸ್ತು, ಉತ್ಪನ್ನ ಇವಾವುದರ ಮಾಲೀಕತ್ವವನ್ನೂ ಹೊಂದಿರದೆ ಕೇವಲ ಕಾರ್ಮಿಕನಾಗಿ ಕೆಲಸ ಮಾಡಲು ಆರಂಭಿಸಿದನು. ಇದು ನಿಜವಾಗಿಯೂ ಒಂದು ಕ್ರಾಂತಿ! ಕಾರ್ಖಾನೆ, ಉತ್ಪಾದನೆ, ಸ್ಥಿರ ಬಂಡವಾಳ ಮತ್ತು ಮುಕ್ತ ಕಾರ್ಮಿಕರು ಇವು ಈ ಕ್ರಾಂತಿಯ ಗುಣಲಕ್ಷಣಗಳು. ಕೈಗಾರಿಕಾ ಸಮುದಾಯದ ವೈಶಿಷ್ಟ್ಯಗಳಿಂದ ದೊಡ್ಡ ಪ್ರಮಾಣದಲ್ಲಿ ಕೃಷಿಕ ಸಮುದಾಯಗಳು ಪ್ರಭಾವಿತವಾಗಿವೆ ಎಂಬುದನ್ನು ಗಮನಿಸಬಹುದು.

### ಕೈಗಾರಿಕಾ ಸಮುದಾಯದ ವಿಶೇಷ ಗುಣಲಕ್ಷಣಗಳು

#### (i) ಆಧುನಿಕ ಕುಟುಂಬದ ಹುಟ್ಟು :

ಸಾಂಪ್ರದಾಯಿಕ ಪಿತೃಪ್ರಭುತ್ವದ ಕುಟುಂಬದ ಸ್ಥಳದಲ್ಲಿ ಆಧುನಿಕ ಕುಟುಂಬ ಹುಟ್ಟಿದುದು ಕೈಗಾರಿಕಾ ಸಮುದಾಯದ ಮೊದಲ ಲಕ್ಷಣವಾಗಿದೆ. ಇದರ ವೈಶಿಷ್ಟ್ಯಗಳು ಇಲ್ಲಿವೆ.

- ಕೈಗಾರಿಕಾ ಸಮುದಾಯದಲ್ಲಿನ ಕುಟುಂಬವು ಒಂದು ಸಂಸ್ಥೆಯಂತಿರದೆ ಆತ್ಮೀಯ ಒಡನಾಟವಾಗಿ ಮಾರ್ಪಟ್ಟಿದೆ.
- ಮಹಿಳೆಯರು ಕೇವಲ ಪುರುಷರ ಆರಾಧಕರಾಗಿರದೆ ಸಮಾನ ಹಕ್ಕುಗಳೊಂದಿಗೆ ಜೀವನದಲ್ಲಿ ಸಮಾನ ಪಾಲುದಾರರಾಗಿದ್ದಾರೆ. ಉತ್ತಮ ಆದಾಯಗಳಿಸುವ ಸದಸ್ಯರ ಪ್ರತಿರೂಪವಾಗಿದ್ದಾರೆ.
- ಕುಟುಂಬವು ಉತ್ಪಾದನಾ ಘಟಕದಿಂದ ಬಳಕೆಯ ಘಟಕಕ್ಕೆ ಬದಲಾಗಿದೆ.
- ಯಂತ್ರಗಳು ಹಾಗೂ ಸಲಕರಣೆಗಳು ಅಡುಗೆ, ಸ್ನಾನ, ಪಾತ್ರೆ ತೊಳೆಯುವ ಹಾಗೂ ಸ್ವಚ್ಛಗೊಳಿಸುವ ಪರಿಶ್ರಮವನ್ನು ಕಡಿಮೆ ಮಾಡಿವೆ.

- ಮಕ್ಕಳ ಪಾಲನೆ ಪೋಷಣೆಗಳಿಗೆ ಪರ್ಯಾಯ ವ್ಯವಸ್ಥೆ ಒದಗಿಬಂದು ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕೈಗಾರಿಕಾ ಸಮುದಾಯದಲ್ಲಿನ ಕುಟುಂಬವು ಉತ್ಪಾದನಾ ಘಟಕದಿಂದ ಬಳಕೆಯ ಘಟಕಕ್ಕೆ ಬದಲಾಗಿದೆ. ಕೈಗಾರಿಕಾ ಸಮುದಾಯದ ಸದಸ್ಯರ ದೃಷ್ಟಿಕೋನವು ವ್ಯಕ್ತಿಗತವಾದದ್ದು ಹಾಗೂ ಕೃಷಿ ಸಮುದಾಯದ ಸದಸ್ಯರಿಗಿಂತ ವಿಭಿನ್ನವಾದದ್ದು.

### (ii) ಆರ್ಥಿಕ ಸಂಸ್ಥೆಗಳ ಹುಟ್ಟು :

ಕೃಷಿ ಮತ್ತು ಕೈಗಾರಿಕಾ ಸಮುದಾಯಗಳ ಆರ್ಥಿಕ ಸಂಸ್ಥೆಗಳ ರಚನೆಯ ನಡುವಿನ ಹೋಲಿಕೆಯು ಕೈಗಾರಿಕಾ ಹಾಗೂ ಪೂರ್ವ ಕೈಗಾರಿಕಾ ಸಮುದಾಯದ ನಡುವಿನ ಗಮನಾರ್ಹ ವ್ಯತ್ಯಾಸವನ್ನು ಚಿತ್ರಿಸುತ್ತದೆ. ಕೈಗಾರಿಕಾ ಸಮುದಾಯವನ್ನು ಈ ಕೆಳಕಂಡ ವೈಶಿಷ್ಟ್ಯಗಳಿಂದ ಗುರುತಿಸಲಾಗಿದೆ:

- ಎಲ್ಲಾ ಹೊಸ ವ್ಯವಸ್ಥೆಗಳು ಒಂದೇ ಸೂರಿನಡಿಯಲ್ಲಿ, ಅಂದರೆ ಉತ್ಪಾದನೆ, ವಿತರಣೆ ಹಾಗೂ ವಿನಿಮಯ ಎಲ್ಲವೂ ಒಂದೇ ಕಾರ್ಖಾನೆಯಲ್ಲಿದೆ.
- ಮನೆಗಳಲ್ಲಿ ನಡೆಯುತ್ತಿದ್ದ ಉತ್ಪಾದನೆಗಳು ಈಗ ಸಣ್ಣ ಸಣ್ಣ ಕಾರ್ಯಗಳಾಗಿ ವಿಭಾಗಿಸಲ್ಪಟ್ಟು ಕಾರ್ಖಾನೆಗಳಲ್ಲಿ ನಡೆಯುತ್ತದೆ.
- ದೊಡ್ಡ ದೊಡ್ಡ ಯಂತ್ರಗಳನ್ನು ಸ್ಥಾಪಿಸಲಾಗಿದೆ.
- ನಿಗಮಗಳು ಅಸ್ತಿತ್ವಕ್ಕೆ ಬಂದಿವೆ.
- ಮಾಲೀಕತ್ವವನ್ನು ನಿಯಂತ್ರಣದಿಂದ ಬೇರ್ಪಡಿಸಿ ಒಂದು ರೀತಿಯ ಒಡೆತನವಾಗಿ ಮಾರ್ಪಡಿಸಲಾಗಿದೆ.

ಒಂದು ಗಮನಾರ್ಹ ಉದಾಹರಣೆಯಾಗಿ ರಿಲಯನ್ಸ ಕಂಪನಿ ಹಾಗೂ ಬಜಾಜ್ ಗ್ರೂಪ್‌ಗಳಂತಹ ಸಂಸ್ಥೆಗಳನ್ನು ತೆಗೆದುಕೊಳ್ಳಿ. ಸಂಸ್ಥೆಯ ಮಾಲಿಕತ್ವವು ಒಬ್ಬರದೇ ಆಗಿರದೆ ಲಕ್ಷಾಂತರ ಜನರದ್ದಾಗಿದೆ. ಹೀಗೆ ಮಾಲಿಕತ್ವವನ್ನು ಹಂಚಿಕೊಂಡ ಶೇರುದಾರರು ತಮ್ಮ ಸ್ವಂತ ಕಂಪನಿಗಳನ್ನು ಹೊಂದಿದ್ದಾರೆ. ಆದರೆ ಅವರು ಅಧಿಕಾರದ ಪ್ರತಿನಿಧಿಗಳನ್ನು ಸಂಬಳಕ್ಕಾಗಿ ನಿಯೋಜಿಸುತ್ತಾರೆ.

ಕೈಗಾರಿಕೋದ್ಯಮದ ಪ್ರಮುಖ ಅಂಶವೆಂದರೆ ಬಂಡವಾಳಶಾಹಿತ್ವ. ಹೀಗಾಗಿ ಇದು ಖಾಸಗಿ ಸಂಸ್ಥೆ, ಕಾರ್ಮಿಕರ ವಿಭಾಗ ಲಾಭ, ಸ್ಪರ್ಧೆ, ವೇತನ ಮತ್ತು ನಂಬಿಕೆ ಇವುಗಳಿಂದ ಗುರುತಿಸಲ್ಪಟ್ಟಿದೆ. ಬಂಡವಾಳ ಶಾಹಿ ಒಡೆತನವೆಂದರೆ ಖಾಸಗಿ ಘಟಕಗಳ ಎರಡು ವಿಷಯಗಳನ್ನು ತಿಳಿಯಬೇಕು. ಅವೆಂದರೆ, ಅವರು ಉತ್ಪಾದನೆಯ ಅಂಶಗಳನ್ನು ನಿಯಂತ್ರಿಸಿತ್ತಾರೆ. ಅವರು ತಮ್ಮ ಆದಾಯವನ್ನು ತಮ್ಮ ಮಾಲೀಕತ್ವದಿಂದ ಪಡೆಯುತ್ತಾರೆ. ಇದು ಅವರಿಗೆ ತಮ್ಮ ಸಂಸ್ಥೆಗಳ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ನೀಡುತ್ತದೆ. ಲಾಭವನ್ನು ಹೆಚ್ಚಿಸಲು ಪ್ರೋತ್ಸಾಹ ನೀಡುತ್ತದೆ. ಕಾರ್ಮಿಕ ಸಂಘಗಳ ಬೆಳವಣಿಗೆ ಕೈಗಾರಿಕಾ ಸಮುದಾಯದ ಒಂದು ಪ್ರಮುಖ ಲಕ್ಷಣಮಾಗಿದೆ.

### (iii) ವ್ಯಾವಹಾರಿಕ ಉಪ–ಸಂಸ್ಕೃತಿಗಳ ಅಸ್ತಿತ್ವ :

ಹಿಂದೆ ಚರ್ಚಿಸಿದಂತೆ, ಕೈಗಾರಿಕಾ ಸಮುದಾಯದಲ್ಲಿ ಕಾರ್ಮಿಕರ ವರ್ಗೀಕರಣವು ಅತಿ ಹೆಚ್ಚು ಹಂತಗಳಲ್ಲಾಗಿದೆ. ಯಾವುದೇ ಕಾರ್ಖಾನೆಯಲ್ಲಿ ಸರಕುಗಳ ಉತ್ಪಾದನೆ ಮತ್ತು ಕಾರ್ಖಾನೆಯ ನಿರ್ವಹಣೆ ಎರಡೂ ಚಿಕ್ಕ ಕಾರ್ಯಗಳಾಗಿ ವಿಂಗಡಿಸಲ್ಪಟ್ಟಿವೆ. ಒಂದು ಕತ್ತರಿ ಅಥವಾ ಕೈಕವಚ ಇಂತಹ ವಸ್ತುಗಳನ್ನು ತಯಾರಿಸಲೂ ಕೂಡ ಅದರದ್ದೇ ಆದ ವಿಶಿಷ್ಟ ಘಟಕಗಳು, ಸಂಬಂಧಪಟ್ಟ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ. ಹಾಗೆಯೇ 'ವ್ಯವಸ್ಥಾಪನ ಕಾರ್ಯ'ಗಳನ್ನು ನಿರ್ವಹಿಸಲು ಕಚ್ಚಾ ವಸ್ತುಗಳ ಖರೀದಿ, ಯಂತ್ರೋಪಕರಣಗಳ ನಿರ್ವಹಣೆ, ಜಾಹಿರಾತು ಮತ್ತು ಪ್ರಕಟಣೆ/ಪ್ರಚಾರಗಳನ್ನು ನೋಡಿಕೊಳ್ಳಲು ನಿರ್ದಿಷ್ಟ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಈ ವಿಂಗಡಣೆಯು

ಸಂಬಂಧಪಟ್ಟ ಘಟಕಗಳಲ್ಲಿರುವವರಿಗೆ ಉಪ–ಸಂಸ್ಕೃತಿಯನ್ನು ಪರಿಚಯಿಸುತ್ತದೆ. ಅಂತಹ ವಿಭಜನೆಗಳು ಔದ್ಯೋಗಿಕ ವಿಶೇಷತೆಗೆ ದಾರಿ ನೀಡುತ್ತವೆ. ಪ್ರತಿ ಉದ್ಯೋಗವು ತನ್ನದೇ ಆದ ವೈಶಿಷ್ಯತೆಯನ್ನು ಹಾಗೂ ಔದ್ಯೋಗಿಕ ರೂಢಿಗಳನ್ನು ಹೊಂದಿದ್ದು ಅವು ಅನನ್ಯವಾಗಿರುತ್ತದೆ. ಎಲ್ಲರೂ ಅವರವರ ಶ್ರೇಣಿಯಲ್ಲಿ ಔದ್ಯೋಗಿಕ ವಿಶೇಷತೆಯನ್ನು ಹೊಂದಿರುತ್ತಾರೆ. ಅಂತಹ ಔದ್ಯೋಗಿಕ ಉಪ–ಸಂಸ್ಕೃತಿಗಳು ಮತ್ತೊಂದು ಉದ್ಯೋಗದ ಸದಸ್ಯರಿಂದ ತಮ್ಮ ಔದ್ಯೋಗಿಕ ಸದಸ್ಯರನ್ನು ನಿಯೋಜಿಸುತ್ತವೆ. ಮರಗೆಲಸದ ಕಾರ್ಯಾಗಾರವು ವೈದ್ಯರ ಸಮೂಹಕ್ಕೆ ಯಾವುದೇ ಅರ್ಥವನ್ನು ನೀಡುವುದಿಲ್ಲ! ಔದ್ಯೋಗಿಕ ಸಮಾಜವು ತೀವ್ರ ಔದ್ಯೋಗಿಕ ವಿಶೇಷತೆಗಳಿಂದ ಗುರುತಿಸಲಾದ ಕಾರಣ ಇದು ಔದ್ಯೋಗಿಕ ಉಪ–ಸಂಸ್ಕೃತಿಗಳಿಂದ ವಿಭಜನೆಯಾಗುತ್ತದೆ. ಭಾರತದ ಹಾಗೂ ಅಮೇರಿಕದ ಇಂಜಿನಿಯರ್‌ಗಳ ಚರ್ಚೆಯು ತಮ್ಮದೇ ಆದ ದೇಶದ ವಕೀಲರ ಚರ್ಚೆಗಿಂತ ಹೆಚ್ಚಾಗಿರುತ್ತದೆ. ಅದೇ ರೀತಿ ಭಾರತದ ಹಾಗೂ ವಿದೇಶಿ ಶಿಕ್ಷಕರ ಚರ್ಚೆಯು ತಮ್ಮದೇ ಕಾಲೇಜಿನ ಶಿಕ್ಷಣೇತರ ಸಿಬ್ಬಂದಿಗಳ ಚರ್ಚೆಗಿಂತ ಹೆಚ್ಚಾಗಿರುತ್ತದೆ.

### (iv) ಜನರ ವಿಭಾಗೀಯ ಪಾತ್ರಗಳು

ನಿಮ್ಮ ನಗರದಲ್ಲಿನ ನಿಮ್ಮ ಪರಿಚಯಸ್ತರ ಸುಮಾರು ಐದು ಕುಟುಂಬಗಳ ಸಮೀಕ್ಷೆ (ಮಾನಸಿಕ ಸಮೀಕ್ಷೆ) ನಡೆಸಿ ಅವರ ವಿವಿಧ ಉದ್ಯೋಗಗಳನ್ನು ತಿಳಿದುಕೊಂಡು ಕೆಳಕಂಡ ಶೈಲಿಯಲ್ಲಿ ಪಟ್ಟಿ ಮಾಡಿ

| ಕ್ರಮ ಸಂಖ್ಯೆ | ಸಂಸಾರದ ಸದಸ್ಯರು | ಉದ್ಯೋಗ |
|---|---|---|
| ಕುಟುಂಬ–1 | • ಸಂಸಾರದ ಮುಖ್ಯಸ್ಥರು<br>• ಹೆಂಡತಿ<br>• ಮಗ<br>• ಮಗಳು<br>• ಸೊಸೆ<br>•ಅಳಿಯ | |
| ಕುಟುಂಬ–2 | | |
| ಕುಟುಂಬ –3 | | |
| ಕುಟುಂಬ–4 | | |
| ಕುಟುಂಬ–5 | | |

ಸಮೀಕ್ಷೆಯ ನಂತರ ನೀವು ಮಾಹಿತಿಯನ್ನು ವಿಶ್ಲೇಷಿಸಿದಾಗ ಕುಟುಂಬದ ಸದಸ್ಯರು ನಡೆಸಿದ ಉದ್ಯೋಗಗಳು ಒಂದಕ್ಕೆ ಒಂದು ಸಂಬಂಧಿಸಿಲ್ಲ ಎಂಬುದನ್ನು ಕಂಡುಕೊಳ್ಳುವಿರಿ. ಅಂದರೆ, ವ್ಯಕ್ತಿಯ ಸದಸ್ಯತ್ವವು ಉದ್ಯೋಗ ಮತ್ತು ಶೈಕ್ಷಣಿಕ ಸಾಧನೆಯ ಬಗ್ಗೆ ಊಹಿಸಲು ನಿಮಗೆ ಸಹಾಯ ಮಾಡುತ್ತದೆ. ಸ್ಪಷ್ಟತೆಗಾಗಿ ಈ ಕೆಳಗಿನವುಗಳನ್ನು ಓದಿ:

- ಕುಟುಂಬದ ಸದಸ್ಯರು, ಕುಟುಂಬದ ಮುಖ್ಯಸ್ಥರು ಮಾಡುವ ಕೆಲಸಕ್ಕಿಂತ ವಿಭಿನ್ನ ಮಾರ್ಗದಲ್ಲಿ ತಮ್ಮ ಉದ್ಯೋಗ ಹೊಂದಿರಬಹುದು. ಉದಾಹರಣೆ: ತಂದೆಯು ಕೃಷಿಕನಾದಲ್ಲಿ, ಮಗನು ಕೃಷಿಕನಾಗಬೇಕಾಗಿಲ್ಲ.
- ಅವನ/ಅವಳ ಸದಸ್ಯತ್ವವನ್ನು ತಿಳಿದುಕೊಳ್ಳುವ ಮೂಲಕ ವ್ಯಕ್ತಿಯ ಉದ್ಯೋಗವನ್ನು ತಿಳಿದುಕೊಳ್ಳುವ ಸಾಧ್ಯತೆ ಇದೆ. ಅವನ/ಅವಳ ತಂದೆ ಮಾಡುವ ಉದ್ಯೋಗದಿಂದ ತಿಳಿದುಕೊಳ್ಳುವ ಸಾಧ್ಯವಿಲ್ಲ. ಉದಾಹರಣೆ: ವಿಜ್ಞಾನಿಗಳ ಮನೋರಂಜನ ಸಂಘದಲ್ಲಿನ ಎಲ್ಲಾ ಸದಸ್ಯರು ವಿಜ್ಞಾನಿಗಳೇ.

## (v) ಜನರಲ್ಲಿ ವ್ಯಕ್ತಿಗತವಲ್ಲದ ಸಂಬಂಧ :

ಪ್ರತಿಯೊಂದು ಉದ್ಯೋಗವು ಉಪ–ಸಂಸ್ಕೃತಿಯನ್ನು ಹೊಂದಿದೆ ಎಂಬುದನ್ನೂ ಹಾಗೂ ಜನರು ವಿಭಾಗೀಯ ಪಾತ್ರಗಳನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದನ್ನು ನೀವು ಈಗಾಗಲೇ ತಿಳಿದುಕೊಂಡಿದ್ದೀರಿ. ಇವುಗಳಿಗೆ ಮುಖ್ಯ ಕಾರಣ ವೃತ್ತಿಗಳ ತಜ್ಞತೆ (specialization). ಇದು ವ್ಯಕ್ತಿ–ವ್ಯಕ್ತಿಗಳ ನಡುವೆ ಅನ್ಯೋನ್ಯತೆ ಇಲ್ಲದ ಸಮಾಜವನ್ನುಂಟುಮಾಡುತ್ತದೆ. ಆದ್ದರಿಂದ ಕೈಗಾರಿಕಾ ಅಥವಾ ಉದ್ಯಮೀಯ ಸಮಾಜವು ಅವ್ಯಕ್ತೀಯ ಸಂಬಂಧಗಳಿಂದ ಗುರುತಿಸಲ್ಪಡುತ್ತವೆ. 'ವ್ಯಕ್ತಿಗತವಲ್ಲದ' ಎಂದರೆ ವ್ಯಕ್ತಿಗೆ ಮತ್ತೊಬ್ಬ ವ್ಯಕ್ತಿಯ ಕುರಿತ ಮಾನವೀಯ ಆತ್ಮೀಯ ಸಂಬಂಧವಿಲ್ಲದ ನಿಸ್ಪೃಹತೆ ಎಂದು ಹೇಳಬಹುದು. ಈ ಸಮಾಜದ ಸಂಘಸಂಸ್ಥೆಗಳ ಗೌಣ ಲಕ್ಷಣಗಳು, ಉದ್ಯೋಗಗಳ ಬಾಹುಳ್ಯ, ಕಾರ್ಯಗಳಲ್ಲಿನ ಮತ್ತು ಕಾರ್ಯಕ್ಷೇತ್ರಗಳಲ್ಲಿನ ಪ್ರಾವೀಣ್ಯತೆ ಮತ್ತು ಸ್ಪರ್ಧೆ ಇವು ಸಂಬಂಧಗಳನ್ನು ಶಿಥಿಲಗೊಳಿಸಿ ಸಮಾಜದೊಂದಿಗಿನ ಬೆಸುಗೆಯನ್ನು ಸಡಿಲಗೊಳಿಸುತ್ತದೆ.

## (vi) ಸ್ಥಾನಮಾನದ ವ್ಯವಸ್ಥೆಯಿಂದ ಒಪ್ಪಂದದ ವ್ಯವಸ್ಥೆಗೆ ವರ್ಗಾವಣೆ

ಕೃಷಿಕ ಸಮುದಾಯದಲ್ಲಿ ಇಡೀ ಸಮುದಾಯವನ್ನು ನಿಗದಿತ ಸ್ಥಾನಮಾನದ ಮೇಲೆ ರಚಿಸಲಾಗಿದೆ. ಅಂದರೆ ಜಮೀನ್ದಾರನ ಮಗ ಅವರಿಗಿರುವ ಸ್ಥಾನಮಾನ ಆಸ್ತಿಯ ಆಧಾರದ ಮೇಲೆ ಅವನು ಜಮೀನ್ದಾರನೇ ಆಗುತ್ತಾನೆ. ಅದು ಅವನ ಹಕ್ಕು. ಈ ಪದ್ಧತಿಯನ್ನು ಅಳಿಸಿ ಕೈಗಾರಿಕಾ ಸಮುದಾಯವು ಸ್ಥಾನಮಾನದ ವ್ಯವಸ್ಥೆಯನ್ನು ಬದಲಾಯಿಸಿ ಒಪ್ಪಂದದ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ನಿಮ್ಮ ಸುತ್ತಲಿನ ಸಮಾಜವನ್ನು ನೋಡಿದಾಗ ವೇತನದ ಒಪ್ಪಂದ, ಸಾಮಾಜಿಕ ಭದ್ರತೆಯ ಒಪ್ಪಂದ, ನಿರುದ್ಯೋಗ ವಿಮಾ ಕರಾರು ಮುಂತಾದವುಗಳನ್ನು ಕಾಣಬಹುದು. ಈ ಒಪ್ಪಂದದ ವ್ಯವಸ್ಥೆಯಲ್ಲಿ ಸ್ಥಾನಮಾನದ ವ್ಯವಸ್ಥೆಯಲ್ಲಿ ಇರುವಂತೆ ಪರಸ್ಪರ ಬಾಧ್ಯತೆಗಳಿರುವುದಿಲ್ಲ.

## (vii) ಸಾಮಾಜಿಕ ಚಲನಶೀಲತೆ

ಒಪ್ಪಂದ ವ್ಯವಸ್ಥೆಯ ಪರಿಣಾಮವಾಗಿ ಸಾಮಾಜಿಕ ಚಲನಶೀಲತೆ ಉಂಟಾಗಿದೆ. ಕೆಳಗಿನ ಎರಡು ಉಲ್ಲೇಖಗಳನ್ನು ಪರಿಗಣಿಸಿ.

**ಉಲ್ಲೇಖ–1**

- ಒಬ್ಬ ದಲಿತ, ಮೊದಲ ತಲೆಮಾರಿನ ವಿದ್ಯಾರ್ಥಿ ತನ್ನ ಪರಿಶ್ರಮದಿಂದ ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನಾಗುತ್ತಾನೆ

**ಉಲ್ಲೇಖ–2**

- ಒಬ್ಬ ಸಾಂಪ್ರದಾಯಿಕ ಹಿಂದೂ ಪುರೋಹಿತನ ಮಗ ತನ್ನ ತಂದೆಯ ಕೆಲಸವನ್ನು ಮುಂದುವರೆಸಲು ನಿರಾಕರಿಸಿದನು. ಕಾರಣ, ಸಂಸ್ಕೃತ ಶ್ಲೋಕಗಳನ್ನು ಹಾಗೂ ಸಾಂಪ್ರದಾಯಿಕ ಸಂಸ್ಕಾರಗಳ ಆಚರಣೆಯನ್ನು ಕಲಿಯಲು ಅವನಿಗಿದ್ದ ಅಸಂತೃಪ್ತಿ.

**ಈಗ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿ:**

- ಈ ಎರಡೂ ಸಂದರ್ಭಗಳಲ್ಲಿ ವ್ಯಕ್ತಿಗಳ ಹಿಂದಿನ ಸ್ಥಿತಿ ಏನು?
- ಪ್ರಸ್ತುತ ಸ್ಥಿತಿ ಏನು?
- ಎರಡೂ ಉಲ್ಲೇಖಗಳಲ್ಲಿ ಅವರಿಗಿದ್ದ ಹಾಗೂ ಅವರುಗಳಿಸಿದ ಸ್ಥಾನ ಯಾವುದು? ಇದರಿಂದ ನಿಮಗೆ ತಿಳಿದು ಬರುವುದೇನು?

ಕೈಗಾರಿಕಾ ಸಮಾಜದ ಸದಸ್ಯನು ತನ್ನ ಸಾಧನೆಯ ಮೂಲಕ ತನ್ನ ಜೀವಿತಾವಧಿಯಲ್ಲಿ ತನ್ನ ಸ್ಥಾನಮಾನ ಹೆಚ್ಚಿಸಿಕೊಳ್ಳಬಹುದು ಅಥವಾ ಕಡಿಮೆ ಮಾಡಿಕೊಳ್ಳಬಹುದು. ಆದ್ದರಿಂದ ಕೈಗಾರಿಕಾ ಸಮುದಾಯದಲ್ಲಿ ಸ್ಥಾನಮಾನ ನಿರ್ಧರಿಸುವುದರಲ್ಲಿ ಜಾತಿಯು ಮುಖ್ಯ ಪಾತ್ರ ವಹಿಸುವುದಿಲ್ಲ.

## (viii) ಮಹಿಳೆಯರ ಸ್ಥಾನ

ಕೃಷಿ ಸಮುದಾಯದಲ್ಲಿ ಮಹಿಳೆಯರಿಗೆ ಮೀಸಲಾದ ಪಾತ್ರವಿದ್ದಿತು. ಇದು ಮನೆಗೆಲಸಕ್ಕೆ ಸೀಮಿತವಾಗಿತ್ತು. ಮಕ್ಕಳನ್ನು ಹೆತ್ತು ಹೊತ್ತು ಸಾಕುವ ಜವಾಬ್ದಾರಿ, ಬಿತ್ತನೆ ಹಾಗೂ ಕಟಾವಿನ ಸಮಯದಲ್ಲಿ ಸಹಾಯ ಮಾಡುವುದು ಇತ್ಯಾದಿ. ಆದರೆ, ಕೈಗಾರಿಕಾ ಸಮುದಾಯದಲ್ಲಿ ಕೈಗಾರಿಕೀಕರಣ ಮತ್ತು ಜನರ ಪ್ರಾವೀಣ್ಯತೆಗಳು ಮಹಿಳೆಯರಿಗೆ ವಿಭಿನ್ನವಾದ ಆಯ್ಕೆಗಳನ್ನೇ ನೀಡಿವೆ. ಈ ಕಾಲದಲ್ಲಿ ಸಮಾಜದ ಸದಸ್ಯರು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಗೃಹಕಾರ್ಯಗಳಿಗೆ ಅವರನ್ನು ಸೀಮಿತಗೊಳಿಸದೆ ಹಿಂದಿನ ಪರಿಪಾಠದಿಂದ ಮುಕ್ತಗೊಳಿಸಿದರು. ಮಹಿಳೆಯರಿಗೆ ಅವರ ಆಸಕ್ತಿ ಹಾಗೂ ಕೈಗಾರಿಕಾ ಸಮಾಜದ ಬೇಡಿಕೆ ಇರುವ ನಿಟ್ಟಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಸಿಕ್ಕಿತು. ಕಾರ್ಖಾನೆಯ ಕಾರ್ಯಾಗಾರ ಹಾಗೂ ಇನ್ನಿತರ ಪ್ರಮುಖ ಔದ್ಯೋಗಿಕ, ರಾಜಕೀಯ ಸಂಸ್ಥೆಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 3

ಕೈಗಾರಿಕಾ ಸಮುದಾಯಕ್ಕೆ ಸಂಬಂಧಿಸಿದಂತೆ 'ಸರಿ'ಯಾದ ಹೇಳಿಕೆಗಳನ್ನು 'ಸರಿ' ಎಂದು ಗುರುತಿಸಿ.

1. ಆಧುನಿಕ ಕುಟುಂಬಗಳು ಹುಟ್ಟಿಕೊಂಡವು.
2. ಮಹಿಳೆಯರಿಗೆ ಪುರುಷರಿಗೆ ಸಮಾನವಾದ ಹಕ್ಕುಗಳು ದೊರೆತವು.
3. ಜೀವನವನ್ನು ಸುಗಮಗೊಂಡಿತು.
4. ಮಹಿಳೆಯರ ಕೆಲಸಗಳಿಗೆ ಪರ್ಯಾಯ ವ್ಯವಸ್ಥೆಗಳು ಹುಟ್ಟಿಕೊಂಡವು.
5. ಜನರ ನಡುವಿನ ಬಾಂಧವ್ಯ ಬಲಗೊಂಡಿದೆ.
6. ಪ್ರಾವೀಣ್ಯತೆಯ ಕಡೆಗೆ ಗಮನ ಹೆಚ್ಚಾಗಿದೆ.

## 1.2.3.4. ಕೈಗಾರಿಕೋತ್ತರ ಸಮುದಾಯ :

1960ರ ದಶಕದಲ್ಲಿ ಕೈಗಾರಿಕೋತ್ತರ ಸಮುದಾಯದ ಪರಿಕಲ್ಪನೆ ಅಮೇರಿಕಾದಲ್ಲಿ ಹೊರಹೊಮ್ಮಿತ್ತು. ಕೈಗಾರಿಕೋತ್ತರ ಸಮುದಾಯವು ಮೊಟ್ಟಮೊದಲ ಬಾರಿಗೆ 1973ರಲ್ಲಿ ಅಮೇರಿಕಾದ ಸಮಾಜಶಾಸ್ತ್ರಜ್ಞ 'ಡೇನಿಯಲ್ ಬೆಲ್'ರು ಬರೆದ 'ದ ಕಮಿಂಗ್ ಆಫ್ ಪೋಸ್ಟ್–ಇಂಡಸ್ಟ್ರಿಯಲ್ ಸೊಸೈಟಿ: ಎ ವೆಂಚರ್ ಇನ್ ಸೋಷಿಯಲ್ ಫೋರ್‌ಕಾಸ್ಟಿಂಗ್' ಎಂಬ ಪುಸ್ತಕದಿಂದ ಜನಪ್ರಿಯಗೊಂಡಿತು.

'ಬೆಲ್'ರವರ ಪ್ರಕಾರ ಆರ್ಥಿಕ ಬೆಳವಣಿಗೆಯ ಮೂರು ಹಂತಗಳಿವೆ. ಕೈಗಾರಿಕಾ ಪೂರ್ವ ಸಮುದಾಯದಲ್ಲಿ ಕೃಷಿ ಪ್ರಧಾನವಾಗಿತ್ತು. ಕೈಗಾರಿಕಾ ಸಮುದಾಯ ಸರಕುಗಳ ಉತ್ಪಾದನೆ ಪ್ರಮುಖವಾಗಿತ್ತು. ಕೈಗಾರಿಕೋತ್ತರ ಸಮುದಾಯದಲ್ಲಿ ಸೇವಾ ವೃತ್ತಿಯು ಪ್ರಬಲವಾಯಿತು. ಕೈಗಾರಿಕೋತ್ತರ ಸಮುದಾಯದಲ್ಲಿ ಸರಕುಗಳ ಉತ್ಪಾದನೆಗಿಂತ ಆಧುನಿಕ ತಂತ್ರಜ್ಞಾನ ಹಾಗೂ ಮಾಹಿತಿ ಸೇವೆಗಳು ಪ್ರಮುಖವಾಯಿತು. ಹೆಸರೇ ಸೂಚಿಸುವಂತೆ ಕೈಗಾರಿಕೋತ್ತರ ಸಮುದಾಯವು, ಕೈಗಾರಿಕೀಕೃತ ಸಮುದಾಯವನ್ನು ಅನುಸರಿಸುತ್ತದೆ.

ಕೈಗಾರಿಕೋತ್ತರ ಸಮುದಾಯವು ಸಮಾಜದ ಬೆಳವಣಿಗೆಯ ಹಂತವಾಗಿದೆ. ಈ ಹಂತದಲ್ಲಿ ಸರಕು, ಸೇವೆಗಳನ್ನು ಒದಗಿಸುವವರು ಪ್ರಾಥಮಿಕ ಸೇವೆಗಳನ್ನು ಒದಗಿಸುವವರಾಗಿ ಆದ ಆರ್ಥಿಕ ಪರಿವರ್ತನೆ ಕಾಣಬಹುದು. ಅಂದರೆ ಸೇವಾಧಾರಿತ ಕ್ಷೇತ್ರಗಳಲ್ಲಿರುವ ಶುಶ್ರೂಷಕರು, ಶಿಕ್ಷಕರು, ಸಂಶೋಧಕರು, ಸಾಮಾಜಿಕ ಕಾರ್ಯಕರ್ತರು, ಇತರರನ್ನೊಳಗೊಂಡ ಸೇವಾಕ್ಷೇತ್ರಗಳು ಉತ್ಪಾದನಾ ವಲಯಕ್ಕಿಂತ [ಅಂದರೆ ನಿರ್ಮಾಣ ಕಾರ್ಯಕರ್ತರು, ಜವಳಿ, ಗಿರಿಣಿ ಕೆಲಸಗಾರರು ಆಹಾರ ತಯಾರಕರು ಮತ್ತು ಉತ್ಪಾದನಾ ಕಾರ್ಮಿಕರು] ಹೆಚ್ಚಿನ ಆರ್ಥಿಕ ಬೆಳವಣಿಗೆ ಮತ್ತು ಸಂಪತ್ತನ್ನು ಹೊಂದಿದ್ದಾರೆ.

ಕೈಗಾರಿಕಾ ಪೂರ್ವದಿಂದ ಕೈಗಾರಿಕಾ ಸಮುದಾಯ ಹಾಗೂ ಕೈಗಾರಿಕಾ ಸಮುದಾಯದಿಂದ ಕೈಗಾರಿಕೋತ್ತರದಲ್ಲಿನ ಕಾರ್ಮಿಕರ ಶಕ್ತಿಯಲ್ಲಿ ಒಂದು ಐತಿಹಾಸಿಕ ಬದಲಾವಣೆ ಇದೆ. ಕೈಗಾರಿಕೋತ್ತರ ಸಮಾಜದೊಂದಿಗೆ ಸಂಬಂಧಿಸಿದ ಆರ್ಥಿಕ ರೂಪಾಂತರವು ತರುವಾಯ ಸಮಾಜವನ್ನು ಒಟ್ಟಾರೆಯಾಗಿ ಪರಿವರ್ತಿಸಿತು.

### ಬೃಹತ್ ಕಾರ್ಮಿಕ ಶಕ್ತಿಯ ಐತಿಹಾಸಿಕ ಬದಲಾವಣೆ

ಡೇನಿಯಲ್ ಬೆಲ್ರವರು ಕೈಗಾರಿಕೋತ್ತರ ಸಮಾಜದ ಉದಯಕ್ಕೆ ಅಗತ್ಯವಾದ ನಾಲ್ಕು ಶಕ್ತಿಗಳನ್ನು ಗುರುತಿಸಿದ್ದಾರೆ. ಅವು:

- ಆರ್ಥಿಕ ಬೆಳವಣಿಗೆ (ಲಾಭದೊಂದಿಗೆ ಹೆಚ್ಚು ಉತ್ಪಾದನೆ)
- ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ ಶಕ್ತಿಯ ಗರಿಷ್ಠ ಬಳಕೆ
- ಜ್ಞಾನ ಮತ್ತು ಮಾಹಿತಿ ಪ್ರಕ್ರಿಯೆಯ ಬಳಕೆ
- ಸಾಮಾಜಿಕ ರಚನೆಯಲ್ಲಿ ವ್ಯಾಪಕವಾದ ಬದಲಾವಣೆಗಳು

### ಕೈಗಾರಿಕೋತ್ತರ ಸಮಾಜದ ಗುಣಲಕ್ಷಣಗಳು

ಬೆಲ್‌ರವರು ತಮ್ಮ ಕೃತಿಯಲ್ಲಿ ಕೈಗಾರಿಕೋತ್ತರ ಸಮುದಾಯಕ್ಕೆ ಸಂಬಂಧಿಸಿದ ಆರು ಬದಲಾವಣೆಗಳನ್ನು ವಿವರಿಸಿದ್ದಾರೆ.

- ಸರಕುಗಳ ಉತ್ಪಾದಕರು ಸೇವಾಧಾರಿತ ಕ್ಷೇತ್ರಗಳಿಗೆ ತಮ್ಮನ್ನು ವರ್ಗಾಯಿಸಿಕೊಂಡಿದ್ದಾರೆ. ಸರಕುಗಳ ಉತ್ಪಾದನೆ (ಬಟ್ಟೆ ಹಾಗೂ ಶೂ ನಂತಹವು) ಕಡಿಮೆಯಾಗಿ, ಸೇವಾಕ್ಷೇತ್ರವು [ಶೀಘ್ರವಾಗಿ ಆಹಾರ ತಯಾರಿಸುವ ಅಂಗಡಿಗಳು, ಆಹಾರ ಕೇಂದ್ರಗಳು, ಫಿಟ್ನೆಸ್ ಕೋಚಿಂಗ್‌ನಂತಹವು] ಹೆಚ್ಚಾಗುತ್ತಿವೆ.
- ಕಾರ್ಮಿಕರ, ಕೈಕೆಲಸಗಾರರ ಬದಲಾಗಿ ವೃತ್ತಿಪರ ಹಾಗೂ ತಾಂತ್ರಿಕ ಉದ್ಯೋಗಿಗಳು ಬಂದಿದ್ದಾರೆ.
- ಪ್ರಾಯೋಗಿಕವಾಗಿ ಕೈಗೊಳ್ಳುವ ಕಾರ್ಯಗಳಿಗಿಂತ ಸೈದ್ಧಾಂತಿಕ ಜ್ಞಾನಕ್ಕೆ ಕೇಂದ್ರೀಕರಿಸುವ ಸ್ಥಿತ್ಯಂತರ (transition) ಇದೆ. ಸೈದ್ಧಾಂತಿಕ ಜ್ಞಾನವು ಹೊಸತಾದ ಮತ್ತು ಆವಿಷ್ಕಾರ ರೂಪದ ಪರಿಹಾರಗಳ ಸೃಷ್ಟಿಗೆ ಎಡೆ ಮಾಡುತ್ತದೆ. ಉದಾಹರಣೆಗೆ : ವೈದ್ಯರು ಸೃಷ್ಟಿಸಿದ ಜ್ಞಾನವು ಹೊಸತಾದ ಮತ್ತು ಪರಿಣಾಮಕಾರಿಯಾದ ರೋಗಿಗಳ ಸಂರಕ್ಷಣೆಯ ಮಾದರಿಗಳನ್ನು ರೂಪಿಸುತ್ತವೆ.
- ಹೊಸ ತಂತ್ರಜ್ಞಾನಗಳ ಪರಿಣಾಮಗಳು, ತಂತ್ರಜ್ಞಾನವನ್ನು ಯಾವಾಗ ಹೇಗೆ ಬಳಸಬೇಕು ಹಾಗೂ ನಿಯಂತ್ರಿಸಬೇಕು ಎಂಬುದರ ಮೇಲೆ ಹೆಚ್ಚಿನ ಗಮನವನ್ನು ಹೊಂದಿದೆ.
- ಹೊಸ ತಂತ್ರಜ್ಞಾನಗಳ ಪ್ರಭಾವವನ್ನು ನಿರ್ಣಯಿಸಲು ಸೈಬರ್ನೆಟಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನದಂತಹ ಹೊಸ ವೈಜ್ಞಾನಿಕ ವಿಷಯಗಳ ಸೃಷ್ಟಿಗೆ ಅಗತ್ಯತೆ ಹೆಚ್ಚಾಗುತ್ತಿದೆ.
- ಮುಂದಿನ ಉನ್ನತ ತಂತ್ರಜ್ಞಾನವನ್ನು ಸೃಷ್ಟಿಸಿ ನಿಯಂತ್ರಿಸುವಂತಹ ಪದವೀಧರರನ್ನು ಸಮಾಜಕ್ಕೆ ನೀಡುವಂತಹ ಉನ್ನತ ಶಿಕ್ಷಣ ಸಂಸ್ಥೆಗಳ, ವಿಶ್ವವಿದ್ಯಾನಿಲಯಗಳ ಅವಶ್ಯಕತೆಯಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 4

ಈವರೆಗೆ ನೀವು ಕಲಿತ ವಿಷಯಗಳ ಆಧಾರದ ಮೇಲೆ ಕೈಗಾರಿಕೋತ್ತರ ಸಮಾಜದ ಅಗತ್ಯಗಳನ್ನು '✓' ಗುರುತಿನಿಂದ ಸೂಚಿಸಿ.

1. ಸರಕುಗಳ ಉತ್ಪಾದಕರು

2. ತಂತ್ರಜ್ಞಾನವನ್ನು ಕಲಿಯುವ ಯುವಕರು

3. ತಾಂತ್ರಿಕ ಉದ್ಯೋಗಿಗಳು

4. ಪ್ರಾಯೋಗಿಕ ತಜ್ಞರು

5. ಸೈದ್ಧಾಂತಿಕ ಜ್ಞಾನ ಸೃಷ್ಟಿಕರ್ತರು

6. ಮಾಹಿತಿ ತಂತ್ರಜ್ಞಾನ

## 1.2.4. ಸಾರಾಂಶಿಸೋಣ

- ಪ್ರಾಚೀನದಿಂದ ಇತ್ತೀಚಿನವರೆಗೂ ವಿವಿಧ ರೀತಿಯ ಸಮುದಾಯಗಳಿವೆ. ಪ್ರಮುಖವಾಗಿ ನಾಲ್ಕು ವಿಧದ ಸಮುದಾಯಗಳಿವೆ.

- **ಬುಡಕಟ್ಟು:** ಇದು ವರ್ತನೆಯ ನಿಯಮಗಳನ್ನು ತಿಳಿದಿರುವ ಏಕರೂಪದ ಸದಸ್ಯರನ್ನು ಹೊಂದಿರುವ ಸಣ್ಣಗಾತ್ರದ ಒಂದು ಸಮುದಾಯ. ಇವುಗಳನ್ನು ಕಿರಿಯರಿಗೆ ತಿಳಿಸಿಕೊಡುವ ಜವಾಬ್ದಾರಿಯು ಹಿರಿಯರದ್ದು. ಇಲ್ಲಿ ಸ್ತ್ರೀ ಪುರುಷರಿಬ್ಬರೂ ಸಮಾನರು. ಆದರೆ ಅವರಲ್ಲಿನ ಜೈವಿಕ ವ್ಯತ್ಯಾಸಗಳು ಗಮನಾರ್ಹ (ಉದಾಹರಣೆಗೆ: ಪುರುಷರು ಬೇಟೆಗೆ ಹೊರಟರೆ, ಸ್ತ್ರೀಯರು ಸಂಗ್ರಹಣ ಕಾರ್ಯದಲ್ಲಿ ಇರುತ್ತಾರೆ)

- **ಕೃಷಿಕ:** ಕೃಷಿಕ ಸಮುದಾಯದಲ್ಲಿ ಕೃಷಿಯು ಪ್ರಮುಖ ಚಟುವಟಿಕೆಯಾಗಿದೆ. ಅವರು ಉತ್ತಮ ಬೆಳೆಯನ್ನು ಬೆಳೆಯುತ್ತಾರೆ. ಸುಮಾರು 5000 ವರ್ಷಗಳ ಹಿಂದೆ ಕೃಷಿಕ ಸಮುದಾಯವು ಅಸ್ತಿತ್ವಕ್ಕೆ ಬಂದಿತು.

- **ಕೈಗಾರಿಕಾ:** ಈ ಕೆಳಗಿನ ವೈಶಿಷ್ಟ್ಯಗಳಿಂದ ಕೈಗಾರಿಕಾ ಸಮುದಾಯವನ್ನು ಗುರುತಿಸಲಾಗಿದೆ: ಆಧುನಿಕ ಕುಟುಂಬದ ಹುಟ್ಟು, ಆರ್ಥಿಕ ಸಂಸ್ಥೆಗಳ ಹುಟ್ಟು, ವ್ಯಾವಹಾರಿಕ ಉಪ-ಸಂಸ್ಕೃತಿಗಳ ಅಸ್ತಿತ್ವ, ಜನರ ವಿಭಾಗೀಯ ಪಾತ್ರಗಳು, ಜನರ ಸಂಬಂಧದಲ್ಲಿ ಬದಲಾದ ವರ್ತನೆ, ಸಾಮಾಜಿಕ ಚಲನಶೀಲತೆ, ಮಹಿಳೆಯರ ಬದಲಾದ ಸ್ಥಾನ.

- **ಕೈಗಾರಿಕೋತ್ತರ :** ಕೈಗಾರಿಕೋತ್ತರ ಸಮುದಾಯವು ಸಮಾಜದ ಬೆಳವಣಿಗೆಯ ಹಂತವಾಗಿದೆ. ಈ ಹಂತದಲ್ಲಿ ಸರಕು, ಸೇವೆಗಳನ್ನು ಒದಗಿಸುವವರು ಪ್ರಾಥಮಿಕ ಸೇವೆಗಳನ್ನು ಒದಗಿಸುವವರಾಗಿ ಆದ ಆರ್ಥಿಕ ಪರಿವರ್ತನೆ ಪ್ರಮುಖವಾದುದು.

## 1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, 3 ಮತ್ತು 4

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1. ಬುಡಕಟ್ಟು ಸಮುದಾಯದವರು ವಿವಿಧ ದೇವತೆಗಳನ್ನು ಪೂಜಿಸುತ್ತಾರೆ. 2. ಅವರ ಜೀವನ ಸರಳವಾದುದು. 3. ಅವರು ಒಂದೇ ಸ್ಥಳದಲ್ಲಿ ವಾಸಿಸುತ್ತಾರೆ. 4. ಅವರು ಅತೀಂದ್ರಿಯವೆನಿಸಿದ ಸಂಕೇತಗಳನ್ನು ಹೊಂದಿರುತ್ತಾರೆ. 5. ಈ ಸಮುದಾಯದಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ನಿರ್ದಿಷ್ಟ ಪಾತ್ರಗಳಿವೆ. 6. ಇವರು ಸ್ವಗೋತ್ರದಲ್ಲಿ ಮದುವೆಯಾಗುವುದಿಲ್ಲ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ : 2

1. **ಕಾರ್ಮಿಕ ವ್ಯವಸ್ಥೆ :** ಲಿಂಗ ಬೇಧ ಹಾಗೂ ವಯೋಮಿತಿಯಂತಹ ಜೈವಿಕ ವ್ಯತ್ಯಾಸಕ್ಕೆ ಅನುಗುಣವಾಗಿ ಕೆಲಸಗಳಿದ್ದವೇ ಹೊರತು ವಿಶೇಷ ಕಾರ್ಮಿಕ ವ್ಯವಸ್ಥೆ ಇರಲಿಲ್ಲ.

2. **ಕಸುಬು :** ಒಂದೇ ಸ್ವರೂಪದ ಸಮಗ್ರ ಸಮಾಜದಲ್ಲಿನ ಎಲ್ಲರೂ ಒಂದೇ ಕಸುಬಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದುಡಿಯುತ್ತಿದ್ದರು.

3. **ಸಂಸ್ಕೃತಿ :** ಒಂದೇ ರೀತಿಯ ಸಂಸ್ಕೃತಿಯನ್ನು ಅನುಸರಿಸುತ್ತಿದ್ದರು, ಸರಳ ಹಾಗೂ ಏಕರೂಪಿ ಜೀವನವನ್ನು ನಡೆಸುತ್ತಿದ್ದರು.

4. **ಕುಟುಂಬದ ಪಾತ್ರ :** ಕುಟುಂಬದ ಪಾತ್ರವು ಸಂತಾನೋತ್ಪತ್ತಿ ಹಾಗೂ ಮಗುವಿನ ಪಾಲನೆಗೆ ಮಾತ್ರ ಸೀಮಿತವಾಗದೆ ಅದು ಆರ್ಥಿಕ ಘಟಕವೂ ಆಗಿತ್ತು.

5. **ಕುಟುಂಬದಲ್ಲಿನ ವ್ಯಕ್ತಿಯ ಸ್ಥಾನಮಾನ :** ಕುಟುಂಬದಲ್ಲಿನ ವ್ಯಕ್ತಿಯ ಸ್ಥಾನಮಾನವು ಕುಟುಂಬದ ಸ್ಥಿತಿಯನ್ನು ನಿರ್ಧರಿಸುತ್ತಿತ್ತು.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 3

1, 2, 3, 4 ಮತ್ತು 6 'ಸರಿ'

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 4

3,5,6-'✓'

## 1.2.6. ಘಟಕಾಂತ್ಯ ಅಭ್ಯಾಸಗಳು

1. ಬುಡಕಟ್ಟುಗಳವರು ಎಂದರೆ ಯಾರು? ಈ ಸಮುದಾಯದ ಪ್ರಮುಖ ಲಕ್ಷಣಗಳನ್ನು ವಿವರಿಸಿ
2. ಕೃಷಿಕ ಸಮುದಾಯದ ವಿಶಿಷ್ಟ ಗುಣಲಕ್ಷಣಗಳು ಯಾವುವು?
3. 'ಕೈಗಾರಿಕಾ ಸಮುದಾಯದ ಜನರು ಕೃಷಿಕ ಸಮುದಾಯದವರಿಗಿಂತ ವಿಭಿನ್ನವಾಗಿದ್ದಾರೆ' – ಚರ್ಚಿಸಿ
4. ಕೈಗಾರಿಕೋತ್ತರ ಸಮುದಾಯದ ವಿಶಿಷ್ಟ ಗುಣಲಕ್ಷಣಗಳನ್ನು ವಿವರಿಸಿ

## 1.2.7. ಪರಾಮರ್ಶನಸೂಚಿ

1. Bell, D. (Ed.). (1999). The coming of post-industrial society: A venture in social forecasting. New York, NY: Basic Books.
2. Brettell, C. B., & Sargent, C. F. (Eds.). (2009). Gender in cross-cultural perspective (5th ed.). Upper Saddle River, NJ: Prentice Hall.
3. Hassan, R. (2008). The information society: Cyber dreams and digital nightmares. Malden, MA: Polity.
4. TURNER, ROY (ed.) India's Urban Future. Berkeley: University of California Press 1962.
5. Singer Milton "The Modernization of Religious Beliefs" in Myron Weiner
6. (ed.), Modernization: The Dynamics of Growth. New York: Basic Books, 1966.
7. Singer Milton And Cohn Bernard (Eds.) Structure and Change in Indian
8. Society.Chicago: Aldine, 1968.

9. Srinivas, M. N. Caste in Modern India and other Essays. Bombay: Asia, 1962.
10. Nolan, P., &Lenski, G. (2009). Human societies: An introduction to macrosociology (11th ed.). Boulder, CO: Paradigm.
11. Wilson, W. J. (2009). The economic plight of inner-city black males. In E. Anderson (Ed.), Against the wall: Poor, young, black, and male (pp. 55–70). Philadelphia: University of Pennsylvania Press.
12. University Of Calicut, School Of Distance Education
13. B.A. Sociology-V Semester, Core Course, Indian Society And Social Change
14. www.bms.co.in: Explain types of societies & Advantages & Disadvantages of society in India
15. https://asiasociety.org/: Indian Society and Ways of Living
16. Organization of Social Life in India
17. https://www.studypool.com/: Introduction to types of Society in India : Tribal, Agrarian and Industrial.
18. http://www.sociologydiscussion.com/: Types of Society: Tribal, Agrarian and Industrial Society Article shared by : Shelly Shah
19. Social Implications of Industrialization and Urbanization in South Asia.Calcutta: UNESCO Research Centre, 1956.
20. Cultiavating Rice in India-A production update- images (by staff reporter)
21. Review Article: Tribes In Karnataka: Status Of Health Research
22. Subarna Roy, Harsha V. Hegde, Debdutta Bhattacharya, VinayakUpadhya&Sanjiva D. KholkuteRegional Medical Research Centre (ICMR), Belgaum, India (for images of Karnataka map and list of tribes in Karnataka)

************

# ಬ್ಲಾಕ್ –1 ಸಮಕಾಲಿನ ಭಾರತ

## ಘಟಕ–3 : ಭಾರತದ ಶೈಕ್ಷಣಿಕ ಸನ್ನಿವೇಶ: ಶೈಕ್ಷಣಿಕ ಅವಕಾಶಗಳು, ಧರ್ಮ, ಜಾತಿ, ವರ್ಗ, ಲಿಂಗ, ಭಾಷೆ, ಪ್ರದೇಶ ಬುಡಕಟ್ಟು ಇವುಗಳಿಗೆ ಸಂಬಂಧಿಸಿದ ವಿಭಿನ್ನತೆಗಳು

### ಘಟಕದ ರಚನೆ


1.3.1. ಕಲಿಕಾ ಉದ್ದೇಶಗಳು

1.3.2. ಪೀಠಿಕೆ

1.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.3.3.1. ಶಿಕ್ಷಣ ಪ್ರಗತಿಗಾಗಿ ನೀತಿ ಚೌಕಟ್ಟು ಮತ್ತು ಪಂಚವಾರ್ಷಿಕ ರಾಷ್ಟ್ರೀಯ ವಿಕಾಸ ಯೋಜನೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1.3.3.2. ಕಾರ್ಯತಂತ್ರದ ಮಾರ್ಗೋಪಾಯಗಳು ಮತ್ತು ಪ್ರಮುಖ ಮಧ್ಯವರ್ತನ ಕಾರ್ಯಕ್ರಮಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

1.3.4. ಸಾರಾಂಶಿಸೋಣ

1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, ಮತ್ತು 2

1.3.6. ಘಟಕಾಂತ್ಯ ಅಭ್ಯಾಸಗಳು

1.3.7. ಪರಾಮರ್ಶನ ಸೂಚಿ


### 1.3.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶೈಕ್ಷಣಿಕ ವಿಕಾಸಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ಶಿಕ್ಷಣನೀತಿಯ ಶಿಫಾರಸುಗಳನ್ನು ವಿವರಿಸುವರು;
- ಶೈಕ್ಷಣಿಕ ವಿಕಾಸಕ್ಕೆ ಸಂಬಂಧಪಟ್ಟಂತೆ ಪಂಚವಾರ್ಷಿಕ ಯೋಜನೆಗಳ ಗುರಿಗಳನ್ನು ಉಲ್ಲೇಖಿಸುವರು; ಮತ್ತು
- ಶಿಕ್ಷಣದ ಅವಕಾಶಗಳನ್ನು ಸಾಕಾರಗೊಳಿಸಲು ಭಾರತ ಸರ್ಕಾರವು ಕೈಗೊಂಡ ಪ್ರಯತ್ನಗಳನ್ನು ಪರಿಚಯಿಸುವರು.

### 1.3.2. ಪೀಠಿಕೆ

ಪ್ರಪಂಚದಲ್ಲೇ ಅತಿ ಹಳೆಯ ನಾಗರಿಕತೆ ಮತ್ತು ಅತಿ ಹೆಚ್ಚಿನ ವೈವಿಧ್ಯ ಹೊಂದಿರುವ ದೇಶ ಭಾರತ. ಇದು ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವೂ ಆಗಿದೆ. ಪ್ರಜಾಪ್ರಭುತ್ವದ ಯಶಸ್ಸು ಅದರ ಪ್ರಜೆಗಳ ಶಿಕ್ಷಣವನ್ನು ಅವಲಂಬಿಸಿದೆ. ದೇಶದ ಭಾಗವಾಗಿರುವ ಸಮಾಜವನ್ನು ಬಿಟ್ಟು ಆ ದೇಶದ ಶಿಕ್ಷಣ ವ್ಯವಸ್ಥೆಯು ಯಶಸ್ವಿಯಾಗದು. ಶಿಕ್ಷಣದಿಂದಲೇ ವ್ಯಕ್ತಿಯೊಬ್ಬ ಉನ್ನತ ಸ್ಥಾನಮಾನ ಮತ್ತು ಗಳಿಕೆಯನ್ನು ಪಡೆಯಬಲ್ಲ. ಇದಕ್ಕಾಗಿ ಪ್ರತಿ ವ್ಯಕ್ತಿ ಶಿಕ್ಷಣ ಪಡೆಯಲು

ಒಂದೇ ರೀತಿಯ ಅವಕಾಶಗಳನ್ನು ಪಡೆಯಬೇಕು. ಸಮಾಜದಲ್ಲಿರುವ ಶ್ರೇಣಿ ವ್ಯವಸ್ಥೆಯು ವಿವಿಧ ಸಾಮಾಜಿಕ ಸಮೂಹಗಳಲ್ಲಿ ಶ್ರೇಣಿಯನ್ನು ಸೃಷ್ಟಿಸಿ ಶಿಕ್ಷಣವನ್ನು ಒದಗಿಸುವಲ್ಲಿನ ಸಮಾನತೆ ಸಾಧಿಸಲು ಅಡ್ಡಿಯಾಗುವುವು. ಇದಕ್ಕೆ ಭಾರತವೂ ಹೊರತಲ್ಲ. ಶಿಕ್ಷಣದ ಅನಿವಾರ್ಯತೆಯನ್ನು ಮನಗಂಡ ನಮ್ಮ ಸರ್ಕಾರವು ಎಲ್ಲರಿಗೂ ಶಿಕ್ಷಣವನ್ನು ಒದಗಿಸುವಲ್ಲಿ ಮಹತ್ವದ ಪ್ರಯತ್ನಗಳನ್ನು ಮಾಡಿದೆ. ಆ ಪ್ರಯತ್ನಗಳ ಒಂದು ಹಕ್ಕಿನೋಟವನ್ನು ಈ ಘಟಕದಲ್ಲಿ ನಾವು ಕಾಣಲಿದ್ದೇವೆ. ಭಾರತದಲ್ಲಿನ ವಿವಿಧ ಶೈಕ್ಷಣಿಕ ಅವಕಾಶಗಳನ್ನು ಕೆಳಕಂಡ ಶೀರ್ಷಿಕೆಗಳ ಅಡಿಯಲ್ಲಿ ಅರ್ಥಮಾಡಿಕೊಳ್ಳಬಹುದು.

- ತಿದ್ದುಪಡಿ ಅಥವಾ ಸೇರ್ಪಡೆಯ ಮೂಲಕ ಸಂವಿಧಾನಿಕ ಸವಲತ್ತುಗಳು
- ಶಿಕ್ಷಣ ಪ್ರಗತಿಗಾಗಿ ನೀತಿ ಚೌಕಟ್ಟು
- ಪಂಚವಾರ್ಷಿಕ ರಾಷ್ಟ್ರೀಯ ವಿಕಾಸ ಯೋಜನೆಗಳು
- ಕಾರ್ಯತಂತ್ರದ ಮಾರ್ಗೋಪಾಯಗಳು
- ಪ್ರಮುಖ ಮಧ್ಯವರ್ತನ ಕಾರ್ಯಕ್ರಮಗಳು

ಇವುಗಳಲ್ಲಿ ಶಿಕ್ಷಣದ ಹಕ್ಕು ವಿಷಯವನ್ನೂ ಸೇರಿದಂತೆ ಶಿಕ್ಷಣಕ್ಕೆ ಸಂವಿಧಾನಾತ್ಮಕ ಸವಲತ್ತುಗಳನ್ನು ಮುಂದೆ ಪ್ರತ್ಯೇಕ ಘಟಕದಲ್ಲಿ ವಿವರವಾಗಿ ನೀವು ಕಲಿಯಲಿದ್ದೀರಿ. ಹಾಗಾಗಿ ಇತರ ವಿಷಯಗಳನ್ನು ಚರ್ಚಿಸೋಣ.

## 1.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.3.3.1. ಶಿಕ್ಷಣ ಪ್ರಗತಿಗಾಗಿ ನೀತಿ ಚೌಕಟ್ಟು ಮತ್ತು ಪಂಚವಾರ್ಷಿಕ ರಾಷ್ಟ್ರೀಯ ವಿಕಾಸ ಯೋಜನೆಗಳು

ಭಾರತದ ಗುರಿಯಾದ ಎಲ್ಲರಿಗೂ ಶಿಕ್ಷಣದ ಹಾದಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ(1986) ಒಂದು ಮೈಲಿಗಲ್ಲು. ಇದರ ಪ್ರಮುಖ ವಿಚಾರಗಳು ಹೀಗಿವೆ: ಸಮಾನತೆಯಿಂದ ವಂಚಿತರಾದವರ ನಿರ್ದಿಷ್ಟ ಅಗತ್ಯಗಳ ಬಗ್ಗೆ ನಿಗಾವಹಿಸಿ ತಾರತಮ್ಯ ಹೋಗಲಾಡಿಸಿ ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಕಲ್ಪಿಸುವಿಕೆ, ಸಂಶೋಧನೆ ಮತ್ತು ತಂತ್ರಜ್ಞಾನಕ್ಕೆ ಮಹತ್ವ, ಮಹಿಳಾ ಅನಕ್ಷರತೆ ನಿರ್ಮೂಲನ, ಪ್ರಾಥಮಿಕ ಶಾಲೆಗಳಲ್ಲಿ ಅವರಿಗೆ ಪ್ರವೇಶ ಮತ್ತು ಅವರನ್ನು ಉಳಿಸಿಕೊಳ್ಳುವುದರಲ್ಲಿ ಇರುವ ಅಡ್ಡಿಗಳ ನಿವಾರಣೆ, ಶಿಕ್ಷಣದ ಗುಣಮಟ್ಟ ಸುಧಾರಣೆ ಮತ್ತು ಸಾರ್ವತ್ರಿಕ ಪ್ರವೇಶ ಮತ್ತು ದಾಖಲಾತಿ, ಸಾರ್ವತ್ರಿಕವಾಗಿ 14 ವರ್ಷದವರೆಗೆ ಶಾಲೆಯಲ್ಲಿ ಮಕ್ಕಳ ಉಳಿಕೆ, ವೃತ್ತಿ ಮತ್ತು ಜೀವನದ ಬಗ್ಗೆ ಆರೋಗ್ಯಕರ ಧೋರಣೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ವೃತ್ತಿ ಶಿಕ್ಷಣ, ಆ ಮೂಲಕ ವ್ಯಕ್ತಿಯ ವೃತ್ತಿಸಾಮರ್ಥ್ಯದ ಹೆಚ್ಚಳ ಮತ್ತು ಅಪಹೊಂದಾಣಿಕೆ ಕಡಿಮೆ ಮಾಡುವಿಕೆ, ವಿಶೇಷವಾಗಿ ವಿಜ್ಞಾನ, ವಾಣಿಜ್ಯ ಮತ್ತು ಔದ್ಯೋಗಿಕ ವಿಭಾಗಗಳಲ್ಲಿ ಹೆಣ್ಣುಮಕ್ಕಳ, ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮಕ್ಕಳ ದಾಖಲಾತಿಗೆ ಒತ್ತು ನೀಡಿ ಸೆಕೆಂಡರಿ ಶಿಕ್ಷಣ ನೀಡುವಿಕೆ, ಸಮೂಹ ವಯಸ್ಕ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಶಿಕ್ಷಕ ಶಿಕ್ಷಣವನ್ನು ವ್ಯವಸ್ಥೆಯನ್ನು ಕೂಲಂಕಷವಾಗಿ ಪರಿಗಣಿಸಿ, ಡಯಟ್ (DIET) ಗಳನ್ನು ಸ್ಥಾಪಿಸಿ, ಆಯ್ದ ಸೆಕೆಂಡರಿ ಶಿಕ್ಷಕ ತರಬೇತಿ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸುವುದು.

**ಪೂರ್ವ ಬಾಲ್ಯಾವಸ್ಥೆಯ ಆರೈಕೆ ಮತ್ತು ಶಿಕ್ಷಣದ ಬಗ್ಗೆ ರಾಷ್ಟ್ರೀಯ ನೀತಿ :**

ಇದನ್ನು 2013 ರಲ್ಲಿ ಅಳವಡಿಸಿಕೊಳ್ಳಲಾಯಿತು. ಅಂತರ್ಗತ, ನ್ಯಾಯಸಮ್ಮತ ಮತ್ತು ಸಂದರ್ಭೋಚಿತ ಅವಕಾಶಗಳನ್ನು ಒದಗಿಸುವ ಮೂಲಕ ಆರು ವರ್ಷಕ್ಕಿಂತ ಕೆಳಗಿರುವ ಮಕ್ಕಳಲ್ಲಿ ಗರಿಷ್ಟ ವಿಕಾಸವನ್ನು ಮತ್ತು ಸಕ್ರಿಯ ಕಲಿಕಾ ಸಾಮರ್ಥ್ಯವನ್ನು ಬೆಳೆಸುವುದು ಇದರ ಆಶಯ.

**ರಾಷ್ಟ್ರೀಯ ಯುವನೀತಿ :** (NYP 2014) ರಾಷ್ಟ್ರದ ಯುವಜನತೆಯನ್ನು ಸಬಲೀಕರಣಗೊಳಿಸುವುದು ಇದರ ಉದ್ದೇಶ. ಈ ಹಿನ್ನೆಲೆಯಲ್ಲಿ ಇದು ಯುವಜನರ ಶಿಕ್ಷಣ, ಉದ್ಯೋಗ ಮತ್ತು ಕೌಶಲ ವಿಕಾಸ, ಉದ್ಯಮಶೀಲತೆ,

ಆರೋಗ್ಯ ಮತ್ತು ಸ್ವಸ್ಥ ಜೀವನ ಶೈಲಿ, ಕ್ರೀಡೆಗಳು, ಸಾಮಾಜಿಕ ಮೌಲ್ಯಗಳ ಪ್ರಚಾರ, ಸಮುದಾಯದೊಡನೆ ಬೆಸುಗೆ, ಆಡಳಿತ ಮತ್ತು ರಾಜಕೀಯದಲ್ಲಿ ಭಾಗವಹಿಕೆ, ಯುವಜನತೆಯನ್ನು ತೊಡಗಿಸಿಕೊಳ್ಳುವುದು, ಯುವಜನರ ಅಂತರ್ಗತತೆ (inclusion) ಮತ್ತು ಸಾಮಾಜಿಕ ನ್ಯಾಯ ಇವುಗಳಿಗೆ ಆದ್ಯತೆ ನೀಡುತ್ತದೆ.

### ಪಂಚವಾರ್ಷಿಕ ರಾಷ್ಟ್ರೀಯ ವಿಕಾಸ ಯೋಜನೆಗಳು

ಪಂಚವಾರ್ಷಿಕ ರಾಷ್ಟ್ರೀಯ ವಿಕಾಸ ಯೋಜನೆಗಳು ಭಾರತದಲ್ಲಿ ವಿಕಾಸ ಯೋಜನೆಗಳನ್ನು ಮಾರ್ಗದರ್ಶನ ಮಾಡಿವೆ. ಕಳೆದ ಮೂರು ಪಂಚ ವಾರ್ಷಿಕ ಯೋಜನೆ (FYPS)ಗಳು ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೈಗೊಂಡ ಹೆಚ್ಚು ಮಹತ್ವದ ಅಂಶಗಳನ್ನು ಹೀಗೆ ಗುರುತಿಸಬಹುದು: (ಆಧಾರ : Education for all – towards quality with Equity NWEPA)

**ಹತ್ತನೆಯ ಪಂಚವಾರ್ಷಿಕ ಯೋಜನೆ (2002–2007)ಯ ಆಶಯಗಳು :** ಈ ಯೋಜನೆಯ ಆಶಯಗಳು ಹೀಗಿವೆ: ಎಲ್ಲ ಮಕ್ಕಳೂ ಐದು ವರ್ಷಗಳ ಶಾಲಾ ಶಿಕ್ಷಣ ಮುಗಿಸುವಂತೆ ಮಾಡುವುದು, ಹೆಣ್ಣು ಮತ್ತು ಗಂಡು ಮಕ್ಕಳ ಸಾಕ್ಷರತೆಯ ಪ್ರಮಾಣದಲ್ಲಿ ಕೊನೆಯ ಪಕ್ಷ ಶೇಕಡಾ 50ರಷ್ಟು ಅಂತರ ಕಡಿಮೆ ಮಾಡುವುದು, ಒಟ್ಟು ಸಾಕ್ಷರತೆಯ ಪ್ರಮಾಣವನ್ನು ಶೇಕಡ 70ಕ್ಕೆ ಏರಿಸುವುದು.

**ಹನ್ನೊಂದನೆಯ ಪಂಚವಾರ್ಷಿಕ ಯೋಜನೆ(2007–2012)ಯ ಆಶಯಗಳು :** ಪ್ರಾಥಮಿಕ ಶಿಕ್ಷಣದಲ್ಲಿ 52.2% (2003–04) ಇದ್ದ ಶಾಲೆಯನ್ನು ಬಿಟ್ಟವರ ಸಂಖ್ಯೆಯನ್ನು 20% ಕ್ಕೆ ಇಳಿಸುವುದು, ಪ್ರಾಥಮಿಕ ಶಾಲೆಗಳಲ್ಲಿ ಶೈಕ್ಷಣಿಕ ಗಳಿಕೆಯ ಕನಿಷ್ಟ ಗುಣಮಟ್ಟವನ್ನು ವೃದ್ಧಿಸುವುದು, ಮತ್ತು ಗುಣಮಟ್ಟ ಕಾಪಾಡಲು ಶಿಕ್ಷಣದ ಪರಿಣಾಮಕಾರಿತ್ವದ ಮೇಲೆ ಗಮನವಿಡುವುದು, 7 ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ ಸಾಕ್ಷರತೆ ಮಟ್ಟವನ್ನು ಶೇಕಡ 85% ಕ್ಕೆ ಏರಿಸುವುದು, ಶೇಕಡ ಪ್ರತಿಶತ 10ರಷ್ಟು ಸಾಕ್ಷರತೆಯಲ್ಲಿನ ಲಿಂಗದ ಅಂತರ (gender gap)ವನ್ನು ಕಡಿಮೆ ಮಾಡುವುದು, ಯೋಜನೆಯ ಅಂತ್ಯದ ವೇಳೆಗೆ ಉನ್ನತ ಶಿಕ್ಷಣಕ್ಕೆ ಹೋಗುವವರ ಪ್ರಮಾಣವನ್ನು ಶೇಕಡ 10 ರಿಂದ ಶೇಕಡ 15ಕ್ಕೆ ಏರಿಸುವುದು.

**ಹನ್ನೆರಡನೆಯ ಪಂಚವಾರ್ಷಿಕ ಯೋಜನೆ (2012–17)ಯ ಆಶಯಗಳು:** ಶೀಘ್ರ, ಸುಸ್ಥಿರ ಮತ್ತು ಹೆಚ್ಚು ಅಂತರ್ಗತ ಬೆಳವಣಿಗೆ ಈ ಯೋಜನೆಯ ಪ್ರಮುಖ ಆಶಯ.

ಹನ್ನೆರಡನೆಯ ಯೋಜನೆಯ ಶಾಲಾ ಶಿಕ್ಷಣ ಮತ್ತು ಸಾಕ್ಷರತೆಯ ಗುರಿಗಳು : ಶಾಲೆಗೆ ಸಾರ್ವತ್ರಿಕ ಪ್ರವೇಶವನ್ನು ದೃಢಪಡಿಸುವುದು, RTE ಕಾಯಿದೆಯ ಉದ್ದೇಶ ಮತ್ತು ಸ್ಫೂರ್ತಿಯನ್ನು ಉಳಿಸುವುದು, 6–14 ವರ್ಷದ ಎಲ್ಲ ಮಕ್ಕಳಿಗೆ ಉತ್ತಮ ಗುಣಮಟ್ಟದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವುದು, ಹಾಜರಾತಿಯನ್ನು ಉತ್ತಮಪಡಿಸಿ ಶಾಲೆ ಬಿಡುವವರ ಸಂಖ್ಯೆಯನ್ನು ಶೇಕಡ 10ಕ್ಕಿಂತ ಕಡಿಮೆ ಮಾಡುವುದು ಮತ್ತು ಪ್ರಾಥಮಿಕ ಮಟ್ಟದಲ್ಲಿ ಶಾಲೆಯ ಹೊರಗಿರುವ ಮಕ್ಕಳಸಂಖ್ಯೆಯನ್ನು ಶೇಕಡ 2ಕ್ಕಿಂತ ಕೆಳಕ್ಕೆ ಇಳಿಸುವುದು. ಇದು ಎಲ್ಲ ಸಾಮಾಜಿಕ, ಆರ್ಥಿಕ ಮತ್ತು ಅಲ್ಪಸಂಖ್ಯಾತ ಮಕ್ಕಳಿಗೂ ಮತ್ತು ಎಲ್ಲಾ ರಾಜ್ಯಗಳಿಗೂ ಕೇಂದ್ರಾಡಳಿತ ಪ್ರದೇಶಗಳಿಗೂ ಅನ್ವಯಿಸುವುದು. ಮೇಲಿನ ಹಂತಗಳಲ್ಲಿ ದಾಖಲಾತಿಗಳನ್ನು ಹೆಚ್ಚಿಸಿ ಸೆಕೆಂಡರಿ ಹಂತಕ್ಕೆ ಒಟ್ಟು ದಾಖಲಾತಿ ಅನುಪಾತವನ್ನು ಶೇಕಡ 90ಕ್ಕೆ ಏರಿಸಿ, ಉನ್ನತ ಪ್ರೌಢಹಂತದಲ್ಲಿ ದಾಖಲಾತಿ ಶೇಕಡ 65ಕ್ಕೂ ಹೆಚ್ಚುವಂತೆ ಮಾಡುವುದು. ಪ್ರಾಥಮಿಕ ಶಾಲೆಗಳಲ್ಲಿ, ಅದರಲ್ಲೂ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಲ್ಲಿ, ಕೊನೆ ಪಕ್ಷ ಒಂದು ವರ್ಷ ಪೂರ್ಣ ಸಂಪನ್ಮೂಲಗಳೊಂದಿಗೆ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು, ಎರಡನೇ ತರಗತಿ ಮುಗಿಸುವ ವೇಳೆಗೆ ಎಲ್ಲ ಮಕ್ಕಳೂ ವಾಚನ ಕೌಶಲಗಳನ್ನು ಮತ್ತು ಸಂಖ್ಯಾ ಕೌಶಲಗಳನ್ನು ಮತ್ತು ಐದನೆ ತರಗತಿಯ ವೇಳೆಗೆ ವಿಮರ್ಶಾತ್ಮಕ ಚಿಂತನೆ, ಅಭಿವ್ಯಕ್ತಿ ಮತ್ತು ಸಮಸ್ಯಾ ಸಾಮರ್ಥ್ಯವನ್ನೂ ಪಡೆಯುವಂತಾಗಿ, ಅವುಗಳನ್ನು ಆಗಾಗ ತನಿಖೆ ಮಾಡಿ, ದಾಖಲು ಮಾಡುವುದು, ಶಿಕ್ಷಣದ ವಿಸ್ತರಿಸುವಿಕೆಗೆ ಹೆಚ್ಚಿನ ಆದ್ಯತೆ ನೀಡಿ, ಸಮಾಜದ ಎಲ್ಲಾ ಭಾಗದವರೆಗೆ ಶಿಕ್ಷಣ ಅವಕಾಶಗಳು ದೊರೆಯುವಂತೆ ಮಾಡುವುದು ಮತ್ತು ಗಣನೀಯ ಮಟ್ಟದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆಯನ್ನು ಖಚಿತಪಡಿಸುವುದು.

ರಾಷ್ಟ್ರೀಯ ಶಿಕ್ಷಣ ಯೋಜನೆ ಮತ್ತು ಆಡಳಿತಾತ್ಮಕ ವಿಶ್ವವಿದ್ಯಾನಿಲಯವು (NUEPA)ಯು ಶಿಕ್ಷಣವು ಗುಣಮಟ್ಟ ಮತ್ತು ಸಮತೆಯ ದಿಕ್ಕಿನಲ್ಲಿ ಸಾಗಲು 'ಎಲ್ಲರಿಗೂ ಶಿಕ್ಷಣ' ದಾಖಲೆಯಲ್ಲಿ ಶಿಕ್ಷಣದ ವಿಕಾಸಕ್ಕೆ ಒಂದು ಮಾರ್ಗೋಪಾಯವನ್ನು ವಿವರಿಸಿದೆ. ಅದು ನಾಲ್ಕು ಆದ್ಯತೆಯ ಅಂಶಗಳನ್ನು ಗುರುತಿಸಿದೆ. ಅವೆಂದರೆ: ವಿಸ್ತರಣೆ(expansion), ಅಂದರೆ ಎಲ್ಲ ಮಕ್ಕಳಿಗೂ ಶಿಕ್ಷಣ ಸೌಲಭ್ಯಗಳು ಮತ್ತು ಕಲಿಕೆಯ ಅವಕಾಶಗಳು ಸಿಗುವಂತೆ ಮಾಡುವುದು, ಅವಕಾಶವಂಚಿತರಾದ ಹೊರಗುಳಿದ, ಅಪೂರ್ಣ ಸೌಲಭ್ಯ ಪಡೆದ ಮತ್ತು ದುರ್ಬಲವರ್ಗದವರೆಲ್ಲರಿಗೂ ಅಂತರ್ಗತತೆಯ ಮೂಲಕ ಶಿಕ್ಷಣಕ್ಕೆ ಅವಕಾಶ ಮಾಡಿಕೊಡುವುದರ ಮೂಲಕ ಸಮತೆಯನ್ನು ಕಾಪಾಡುವುದು(equity and inclusion), ಮಕ್ಕಳು, ಯುವಕರು ನಿರೀಕ್ಷಿತ ಶೈಕ್ಷಣಿಕ ಗುಣಮಟ್ಟವನ್ನು ಸಾಧಿಸಲು ಅನುವು ಮಾಡಿಕೊಡುವುದರ ಮೂಲಕ ಉತ್ಕೃಷ್ಟತೆ(excellence)ಯನ್ನು ಸಾಧಿಸುವುದು, ಉದ್ಯೋಗಾರ್ಹತೆ (employability)ಯನ್ನು ಹೆಚ್ಚಿಸುವುದು.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ನಿಮ್ಮ ಶಾಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಅನ್ವಯಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಆಲೋಚಿಸಿ, ಒಂದು ಸಂಗ್ರಹವಾದ ಕರಡು ತಯಾರಿಸಿ.

### 1.3.3.2. ಕಾರ್ಯತಂತ್ರದ ಮಾರ್ಗೋಪಾಯಗಳು ಮತ್ತು ಪ್ರಮುಖ ಮಧ್ಯವರ್ತನ ಕಾರ್ಯಕ್ರಮಗಳು:

**ಸಂಯೋಜಿತ ಶಿಶು ವಿಕಾಸ ಸೇವೆಗಳು (Integrated Child Development Services):** ಶಾಲಾಪೂರ್ವ ಶಿಕ್ಷಣವನ್ನು ಒದಗಿಸುವ ಸವಾಲುಗಳಿಗೆ ಪ್ರತಿಕ್ರಿಯಿಸುವುದು ಇದರ ಗುರಿಯಾಗಿದೆ. ಮಕ್ಕಳನ್ನು ಅಪೌಷ್ಟಿಕತೆ, ಅಸ್ವಸ್ಥತೆ, ಕುಗ್ಗಿದ ಕಲಿಕಾ ಸಾಮರ್ಥ್ಯ ಮತ್ತು ಮರಣಗಳ ವಿಷ ಸುಳಿಯಿಂದ ಬಿಡಿಸಿ ಕಾಪಾಡುವುದನ್ನೂ ಇದು ಲಕ್ಷ್ಯದಲ್ಲಿಟ್ಟುಕೊಂಡಿದೆ.

**ಸರ್ವ ಶಿಕ್ಷಣ ಅಭಿಯಾನ (SSA) :** ಸಾರ್ವತ್ರಿಕ ಪ್ರವೇಶ ಮತ್ತು ದಾಖಲಾತಿಗೆ, ಸರ್ವ ಶಿಕ್ಷಣ ಅಭಿಯಾನದಿಂದ ಅನೇಕ ಮಧ್ಯವರ್ತನಗಳ ಬೆಂಬಲ ದೊರಕಿತು. ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಶಾಲಾ ಸೌಲಭ್ಯಗಳು ಗಣನೀಯವಾಗಿ ವಿಸ್ತರಿಸಲು ಇವು ಸಹಾಯ ಮಾಡಿದವು. ಈ ಕಾರ್ಯಕ್ರಮವು 2000–01 ರಿಂದ ಕಾರ್ಯಾಚರಣೆಯಲ್ಲಿದೆ. ಸರ್ವಶಿಕ್ಷಣ ಅಭಿಯಾನದ ಗುರಿಗಳು ಹೀಗಿವೆ: ಪ್ರಾಥಮಿಕ, ಉನ್ನತ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳನ್ನು ಹೆಚ್ಚಿಸುವುದು, ಪ್ರಾಥಮಿಕ ಮತ್ತು ಉನ್ನತ ಪ್ರಾಥಮಿಕ ಹಂತಗಳ ಶಿಕ್ಷಣದಲ್ಲಿ ಲಿಂಗ, ಸಾಮಾಜಿಕ ವರ್ಗಗಳ ನಡುವಣ ಅಂತರವನ್ನು ತುಂಬಲು ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

ಲಿಂಗ ಅಂತರವನ್ನು ತುಂಬಲು ಸರ್ವಶಿಕ್ಷಾ ಅಭಿಯಾನ ಅನೇಕ ಕಾರ್ಯಕ್ರಮಗಳನ್ನು ಯೋಜಿಸಿತು. ಅದರಲ್ಲಿ ಪ್ರಮುಖವಾದವು, ಬಾಲಕಿಯರ ಶಿಕ್ಷಣಕ್ಕೆ ಹೆಚ್ಚಿನ ಗಮನ, ಮಕ್ಕಳ ವಸತಿ ಸ್ಥಳದಿಂದ ಒಂದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆಗಳನ್ನು ಒದಗಿಸುವ ಭರವಸೆ, ಉನ್ನತ ಪ್ರಾಥಮಿಕ ಶಾಲೆಗಳನ್ನು ಮೂರು ಕಿಲೋಮೀಟರ್ ವ್ಯಾಪ್ತಿಯೊಳಗೆ ಒದಗಿಸುವುದು, ಶಾಲೆಗಳಲ್ಲಿ ಹೆಣ್ಣು ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಒದಗಿಸುವುದು, ಶೇಕಡ 50ರಷ್ಟು ಮಹಿಳಾ ಶಿಕ್ಷಕಿಯರನ್ನು ನೇಮಿಸುವುದು, ಆದಿ ಬಾಲ್ಯಾವಸ್ಥೆಯ ಆರೈಕೆ ಮತ್ತು ಶಿಕ್ಷಣ ಕೇಂದ್ರಗಳನ್ನು ಹತ್ತಿರದ ಶಾಲೆಗಳಲ್ಲಿ ಒದಗಿಸುವುದು, ಶಿಶು ವಿಕಾಸ ಸೇವೆಗಳ ಯೋಜನೆಗಳಿಂದ ಹೆಣ್ಣುಮಕ್ಕಳನ್ನು ತಮ್ಮ–ತಂಗಿಯರ ಆರೈಕೆಯ ಜವಾಬ್ದಾರಿಗಳಿಂದ ಮುಕ್ತರನ್ನಾಗಿಸುವುದು, ಶಾಲೆಯ ಹೊರಗಿರುವ ಬಾಲಕಿಯರನ್ನು ಮುಖ್ಯವಾಹಿನಿಗೆ ತರಲು ವಿಶೇಷ ತರಬೇತಿ ಒದಗಿಸುವುದು, ಬಾಲಕಿಯರಿಗೆ ಸಮಾನ ಕಲಿಕೆಯ ಅವಕಾಶಗಳನ್ನು ನೀಡಲು ಶಿಕ್ಷಕರಿಗೆ ಸಂವೇದನಾ ಕಾರ್ಯಕ್ರಮಗಳನ್ನು ನಡೆಸುವುದು.

ಇದರ ಅಡಿಯಲ್ಲಿ ವಿಶೇಷ ಅಗತ್ಯಗಳುಳ್ಳ ಮಕ್ಕಳಿಗೆ ಪ್ರತ್ಯೇಕವಾಗಿ ಮಧ್ಯವರ್ತನ ಕಾರ್ಯಕ್ರಮಗಳನ್ನು ಗುರುತಿಸಿಕೊಳ್ಳಲಾಯಿತು. ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಮೂಲವಾಹಿನಿಗೆ ತರುವ ಮಹತ್ವದ ಪ್ರಯತ್ನಗಳು ಈ ಕಾರ್ಯಕ್ರಮದ ಅಡಿಯಲ್ಲಿ ನಡೆದವು. ಅವರನ್ನು ಗುರುತಿಸುವುದು, ಅವರ ಸಾಮರ್ಥ್ಯದ ಮಾಪನ, ಅವರನ್ನು

ಉದ್ಯೋಗದಲ್ಲಿ ನೆಲೆಗೊಳಿಸುವುದು, ಅವರಿಗೆ ಬೋಧಿಸುವ ಶಿಕ್ಷಕ ತರಬೇತಿ, ಸಂಪನ್ಮೂಲ ಶಿಕ್ಷಕರ ಮತ್ತು ಚಿಕಿತ್ಸಕರ ನೇಮಕಾತಿ, ಅಸಮರ್ಥ ಮಕ್ಕಳಿಗೆ ವಿಶೇಷ ಬೆಂಬಲ ನೀಡಲು ಸಂಪನ್ಮೂಲ ಕೊಠಡಿಗಳ ಸ್ಥಾಪನೆ, ಅಸಮರ್ಥ ಸ್ನೇಹಿ ಶೌಚಾಲಯಗಳು, ಮೌಲ್ಯಮಾಪನ ಮತ್ತು ಉಸ್ತುವಾರಿ ಮತ್ತು ವಿಶೇಷ ಅಗತ್ಯವುಳ್ಳ ಬಾಲಕಿಯರ ಮೇಲೆ ವಿಶೇಷ ಗಮನ, ಗಂಭೀರ ಮತ್ತು ಪೂರ್ಣ ಪ್ರಮಾಣದ ಅಸಮರ್ಥತೆ ಹೊಂದಿರುವ ಮಕ್ಕಳಿಗೆ ಗೃಹ ಆಧಾರಿತ ಶಿಕ್ಷಣ, ಇವುಗಳು ಗಮನಾರ್ಹವಾದವು.

ಸಾರ್ವತ್ರಿಕ ಉಳಿಸಿಕೊಳ್ಳುವಿಕೆಗೆ ಸರ್ವಶಿಕ್ಷಾ ಅಭಿಯಾನ ವಿಶೇಷವಾಗಿ ಪ್ರಯತ್ನಿಸಿತು. ಸರ್ವಶಿಕ್ಷಾ ಅಭಿಯಾನದ ಮುಖ್ಯ ಗುರಿಯೇ ಸಾರ್ವತ್ರಿಕ ಉಳಿಸಿಕೊಳ್ಳುವಿಕೆ. ಅಂದರೆ ಒಂದನೇ ತರಗತಿಗೆ ದಾಖಲಾದ ಮಕ್ಕಳನ್ನು ಎಂಟು ವರ್ಷದ ಶಾಲಾ ಶಿಕ್ಷಣ ಮುಗಿಸುವಂತೆ ನೋಡಿಕೊಳ್ಳುವುದು. ಇದಕ್ಕಾಗಿ ಈ ಕೆಳಗಿನ ಕ್ಷೇತ್ರಗಳಲ್ಲಿ ಬಂಡವಾಳ ಹೂಡಲಾಯಿತು.

ಶಾಲಾ ಸೌಕರ್ಯಗಳ ವಿಸ್ತರಣೆ, ಲಿಂಗ ಮತ್ತು ಸಾಮಾಜಿಕ ವರ್ಗಗಳ ಅಂತರ ಕಡಿಮೆ ಮಾಡುವ ಮತ್ತು ಗುಣಮಟ್ಟ ಸುಧಾರಣೆಯ ಪ್ರಾರಂಭಿಕ ಕಾರ್ಯಾಚರಣೆ, ಶಾಲಾ ಮೂಲಸೌಕರ್ಯಗಳ ಸುಧಾರಣೆ, ಹೆಚ್ಚಿನ ಶಿಕ್ಷಕರನ್ನು ಒದಗಿಸುವುದು, ನಿರಂತರ ಶೈಕ್ಷಣಿಕ ಬೆಂಬಲ, ಮಧ್ಯಾಹ್ನದ ಊಟ ಕಾರ್ಯಕ್ರಮ, ಜಾಗೃತಿ ಕಾರ್ಯಕ್ರಮಗಳು, ಪಠ್ಯಕ್ರಮ ಪರಿಷ್ಕರಣೆ ಇತ್ಯಾದಿ.

**ಯುವಜನತೆ ಮತ್ತು ವಯಸ್ಕರಲ್ಲಿ ಕಲಿಕೆ ಮತ್ತು ಜೀವನ ಕೌಶಲಗಳನ್ನು ಬೆಳೆಸಲು ಪ್ರಮುಖ ಮಧ್ಯವರ್ತನಗಳು:**

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (RMSA) :** ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು, ಕೇಂದ್ರದಿಂದ ಪ್ರಾಯೋಜನೆಯಾದ ಕಾರ್ಯಕ್ರಮ. ಇದು ಮಾರ್ಚ್ 2009ರಲ್ಲಿ ಪ್ರಾರಂಭವಾಯಿತು. 14–15 ವರ್ಷದ ಮಕ್ಕಳಿಗೆ ಉತ್ತಮ ಗುಣಮಟ್ಟದ ಸೆಕೆಂಡರಿ ಶಿಕ್ಷಣವನ್ನು ಒದಗಿಸಿಕೊಡುವುದು ಇದರ ಉದ್ದೇಶ.

ಸೆಕೆಂಡರಿ ಶಿಕ್ಷಣವನ್ನು ವೃತ್ತಿಪರತೆಗೊಳಿಸುವ ಯೋಜನೆಯನ್ನು ನಮ್ಮ ಸರ್ಕಾರವು 2007ರಲ್ಲಿ ರಾಷ್ಟ್ರೀಯ ಕೌಶಲ ವಿಕಾಸ್ ಮಿಷನ್ (National skill development mission) ಮೂಲಕ ಸ್ಥಾಪಿಸಿತು.

**ಸಾಕ್ಷರ್ ಭಾರತ್ ಮಿಷನ್ ಅಡಿಯಲ್ಲಿ ನೀಡಲಾಗುವ ಕಾರ್ಯಕ್ರಮಗಳು :** ಶಾಲೆಯ ಹೊರಗಿರುವ ಹದಿಹರೆಯದವರ ಕಲಿಕೆಯ ಅಗತ್ಯಗಳನ್ನು ಪೂರೈಸಲು ರೂಪಿಸಿದ ಪ್ರಯತ್ನಗಳನ್ನು ಇದು ಬೆಂಬಲಿಸುತ್ತದೆ. ಅಲ್ಲದೆ ಮಹಿಳಾ ಸಾಕ್ಷರತೆ ಮತ್ತು ಯುವಜನತೆಯ ಕ್ರಿಯಾತ್ಮಕ ಸಾಕ್ಷರತೆ, ಮೂಲಶಿಕ್ಷಣ ಕಾರ್ಯಕ್ರಮ, ವೃತ್ತಿಪರ ಕೌಶಲ ವಿಕಾಸ ಕಾರ್ಯಕ್ರಮ ಮತ್ತು ಮುಂದುವರೆದ ಶಿಕ್ಷಣ ಕಾರ್ಯಕ್ರಮಗಳನ್ನೂ ಇದು ಕೈಗೊಳ್ಳುತ್ತದೆ.

ವಯಸ್ಕರ ಸಾಕ್ಷರತೆ ಸುಧಾರಿಸಲು ಭಾರತ ಸರ್ಕಾರ ಅನೇಕ ಮಧ್ಯವರ್ತನ ಕಾರ್ಯಕ್ರಮಗಳನ್ನು ರೂಪಿಸಿದೆ. 15ರಿಂದ 35 ವಯಸ್ಸಿನೊಳಗೆ ಇರುವ ಅನಕ್ಷರಸ್ಥರಿಗೆ ಕ್ರಿಯಾತ್ಮಕ ಸಾಕ್ಷರತೆ ಒದಗಿಸಲು ರಾಷ್ಟ್ರೀಯ ಸಾಕ್ಷರತಾ ಮಿಷನ್ (NLM) ಅನ್ನು 1988ರಲ್ಲಿ ನಿಗದಿತ ಕಾಲಾವಧಿಯಲ್ಲಿ ಪ್ರಾರಂಭವಾಯಿತು.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

ನಿಮ್ಮ ಶಾಲೆಯಲ್ಲಿ ಸರ್ವಶಿಕ್ಷಾ ಅಭಿಯಾನದ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಅನ್ವಯಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಆಲೋಚಿಸಿ, ಒಂದು ಸಂಗ್ರಹವಾದ ಕರಡು ತಯಾರಿಸಿ.

## 1.3.4. ಸಾರಾಂಶಿಸೋಣ

- ಸುಮಾರು 60 ವರ್ಷಗಳ ಹಿಂದೆಯೇ ಭಾರತವು ಮಕ್ಕಳು 14 ವರ್ಷ ತಲುಪುವವರೆಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಕೊಡಬೇಕೆಂದು ಸಾಂವಿಧಾನಿಕವಾಗಿ ಬದ್ಧವಾಗಿತ್ತು. ಅದು 1960 ರ ವೇಳೆಗೆ ಸಾಧಿತವಾಗಬೇಕೆಂದು ನಿರೀಕ್ಷಿಸಲಾಗಿತ್ತು. ಆದರೆ ಈಗಲೂ ಅದು ಭ್ರಮೆಯಾಗಿಯೇ ಉಳಿದಿದೆ.

- ಇತ್ತೀಚಿನ ವರ್ಷಗಳಲ್ಲಿ ಈ ಗುರಿಯನ್ನು ಸಾಧಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಗಿದೆ. ಶಿಕ್ಷಣದ ಗುರಿಗಳನ್ನು ನಿರ್ದಿಷ್ಟವಾಗಿ ಗುರುತಿಸಿಕೊಂಡು ಅದಕ್ಕಾಗಿ ಬಹಳಷ್ಟು ಚಿಂತನೆಗಳು ನಡೆದಿವೆ. ಅದಕ್ಕನುಗುಣವಾದ ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಅನುಷ್ಠಾನಗೊಳಿಸಲಾಗಿದೆ. ಇವು ಶಿಕ್ಷಣಕ್ಕೆ ತೆರೆದಿಟ್ಟಿರುವ ಅವಕಾಶಗಳನ್ನು ಸ್ಪಷ್ಟಪಡಿಸುತ್ತವೆ.
- ರಾಷ್ಟ್ರೀಯ ಶಿಕ್ಷಣ ನೀತಿ, ಮತ್ತು ಪಂಚವಾರ್ಷಿಕ ಯೋಜನೆಗಳು ಶಿಕ್ಷಣದ ಗುರಿಗಳನ್ನು ಮತ್ತೆ ಮತ್ತೆ ಸ್ಪಷ್ಟಪಡಿಸಿ, ಅವುಗಳು ಯಾವ ದಿಕ್ಕಿನಲ್ಲಿ ಸಾಗಬೇಕು ಎಂಬುದನ್ನು ಸ್ಪಷ್ಟಪಡಿಸಿವೆ.
- ಈ ಆಶಯಗಳಿಗನುಗುಣವಾಗಿ ಸರ್ವಶಿಕ್ಷಾ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮುಂತಾದ ಪ್ರಾಯೋಗಿಕ ಕಾರ್ಯಕ್ರಮಗಳು ಗುರಿಸಾಧಿಸಲು ಪ್ರಯತ್ನಿಸಿವೆ. ಈ ಕಾರ್ಯಕ್ರಮಗಳೂ ಸ್ವತಂತ್ರ ಭಾರತದ ಶೈಕ್ಷಣಿಕ ಅವಕಾಶಗಳನ್ನು ಮನಗಾಣಿಸುತ್ತವೆ.

## 1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ನೀವು ಮಾಡಿಕೊಂಡ ಟಿಪ್ಪಣಿಗಳನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು ಅದನ್ನು ಉತ್ತಮಪಡಿಸುವ ವಿಧಾನಗಳನ್ನು ಚರ್ಚಿಸಿ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

ನೀವು ಮಾಡಿಕೊಂಡ ಟಿಪ್ಪಣಿಗಳನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು ಅದನ್ನು ಉತ್ತಮಪಡಿಸುವ ವಿಧಾನಗಳನ್ನು ಚರ್ಚಿಸಿ

## 1.3.6. ಘಟಕಾಂತ್ಯ ಅಭ್ಯಾಸಗಳು

1. ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಪಂಚವಾರ್ಷಿಕ ಯೋಜನೆಗಳು ಶಿಕ್ಷಣದ ಯಾವ ಅವಕಾಶಗಳನ್ನು ಎತ್ತಿ ಹಿಡಿಯುತ್ತವೆ ಎಂಬುದನ್ನು ವಿವರಿಸಿ
2. ಭಾರತ ಸರ್ಕಾರವು ಜನತೆಗೆ ನೀಡಿರುವ ಅವಕಾಶಗಳನ್ನು ಸ್ಪಷ್ಟಪಡಿಸುವ ಕಾರ್ಯಕ್ರಮಗಳನ್ನು ವಿವರಿಸಿ.

## 1.3.7. ಪರಾಮರ್ಶನ ಸೂಚಿ


1. Achieving Universal Primary Education : A Collaborative Model, Faculty Contributor : Trilochan Sastry, Professor ; Student Contributors : Ankita Agarwal and Ayesha Jaggi
2. Enrolment of girls at primary level goes up : NCERT,All India Education Survey is the most comprehensive national- level survey covering the school education system GN Bureau | January 22,2013
3. Achieving Universal Elementary Education in India, Expanding Access with Equity # R.Govinda and M.Bandyopadhyay, National University of Educational Planning and Administration, New Delhi International Journal of Scientific and Research Publications, Volume 3, Issue 11, November 2013 1 ISSN 2250-3153


************

# ಬ್ಲಾಕ್–1 : ಸಮಕಾಲೀನ ಭಾರತ

## ಘಟಕ–4: ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವಲ್ಲಿನ ಸವಾಲುಗಳು

**ಘಟಕದ ರಚನೆ**


1.4.1. ಕಲಿಕಾ ಉದ್ದೇಶಗಳು

1.4.2. ಪೀಠಿಕೆ

1.4.3. ಕಲಿಕೆಯ ಅಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು

1.4.3.1. ಆಡಳಿತಾತ್ಮಕ ಮತ್ತು ಶಾಲಾ ಸಂಬಂಧಿ ಸವಾಲುಗಳು:

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1.4.3.2. ಪೋಷಕರಿಗೆ ಸಂಬಂಧಿಸಿದ ಸವಾಲುಗಳು ಮತ್ತು ಇತರ ಸವಾಲುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

1.4.4. ಸಾರಾಂಶಿಸೋಣ

1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

1.4.6. ಘಟಕಾಂತ್ಯ ಅಭ್ಯಾಸಗಳು

1.4.7. ಪರಾಮರ್ಶನ ಸೂಚಿ


### 1.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವುದರಲ್ಲಿ ಎದುರಿಸಬೇಕಾದ ಆಡಳಿತಾತ್ಮಕ ಸವಾಲುಗಳನ್ನು ವಿವರಿಸುವರು;
- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವುದರಲ್ಲಿ ಎದುರಿಸಬೇಕಾದ ಶಾಲಾ ಸಂಬಂಧಿ ಸವಾಲುಗಳನ್ನು ವಿಶ್ಲೇಷಿಸುವರು; ಮತ್ತು
- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವುದರಲ್ಲಿ ಎದುರಿಸಬೇಕಾದ ಇತರ ಸವಾಲುಗಳನ್ನು ವಿಶ್ಲೇಷಿಸುವರು.

### 1.4.2. ಪೀಠಿಕೆ

ರಾಷ್ಟ್ರದ ಮತ್ತು ವ್ಯಕ್ತಿಯ ಬೆಳವಣಿಗೆಗೆ ಶಿಕ್ಷಣ ಪರಮ ಅವಶ್ಯಕ ಎಂಬುದು ನಮಗೆ ತಿಳಿದಿದೆ. ಇದನ್ನು ಮನಗಂಡು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಅನೇಕ ಪ್ರಯತ್ನಗಳನ್ನು ಮಾಡಿರುವುದನ್ನೂ ನಾವು ಹಿಂದಿನ ಘಟಕದಲ್ಲಿ ನೋಡಿದ್ದೇವೆ. ಸ್ವಾತಂತ್ರ್ಯ ದೊರೆತ ಹತ್ತು ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವಾಗಬೇಕು ಎಂಬ ಕನಸನ್ನು ನಮ್ಮವರು ಕಟ್ಟಿಕೊಂಡಿದ್ದರು ಎಂಬುದೂ ನಮಗೆ ಸಂವಿಧಾನದ ದಾಖಲೆಯಿಂದ ಸ್ಪಷ್ಟವಾಗುತ್ತದೆ. ಹೀಗಿದ್ದರೂ ಸ್ವಾತಂತ್ರ್ಯ ಪಡೆದ 72 ವರ್ಷಗಳ ನಂತರವೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಇಂದಿಗೂ ಕನಸಾಗಿಯೇ ಉಳಿದಿದೆ. ಕಾರಣ ಇದನ್ನು ಸಾಧಿಸುವ ಪಥದಲ್ಲಿ ನಾವು ಇಂದಿಗೂ ಅನೇಕ ಸವಾಲುಗಳನ್ನು

ಎದುರಿಸುತ್ತಿದ್ದೇವೆ. ಅದನ್ನು ದಾಟಿ ಮುಂದುವರಿಯಲು ಪ್ರಯತ್ನಿಸುತ್ತಿದ್ದರೂ ಸವಾಲುಗಳು ಅತ್ಯಂತ ಜಟಿಲವೂ ವ್ಯಾಪಕವೂ ಆದುದರಿಂದ ಅದು ಸಾಧ್ಯವಾಗುತ್ತಿಲ್ಲ. ಶಿಕ್ಷಕರಾಗಿ ನೀವೂ ಇದನ್ನು ಕುರಿತ ಸವಾಲುಗಳನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೀರಿ. ಈ ದಿಶೆಯಲ್ಲಿ ನೀವು ಅನುಭವಿಸುತ್ತಿರುವ ನಾಲ್ಕು ಸವಾಲುಗಳನ್ನು ಪಟ್ಟಿಮಾಡಿ.

1.

2.

3.

4.

ನೀವು ಗುರುತಿಸಿರುವ ಸವಾಲುಗಳನ್ನು ಮತ್ತು ಇತರ ಸವಾಲುಗಳನ್ನು ಈ ಘಟಕದಲ್ಲಿ ಚರ್ಚಿಸಲಿದ್ದೇವೆ.

## 1.4.3. ಕಲಿಕೆಯ ಅಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು

### 1.4.3.1. ಆಡಳಿತಾತ್ಮಕ ಮತ್ತು ಶಾಲಾ ಸಂಬಂಧಿ ಸವಾಲುಗಳು :

**ಅಭ್ಯಾಸ : I**

ಯಾವುದಾದರೂ 20 ಮನೆಗಳಿಗೆ ಭೇಟಿ ಕೊಟ್ಟು ಕೆಳಗಿನ ಮಾಹಿತಿ ಸಂಗ್ರಹಿಸಿ.

- ಅವರ ಮನೆಗಳಿಂದ ಶಾಲೆ ಎಷ್ಟು ದೂರದಲ್ಲಿದೆ?
- ಶಾಲೆಗೆ ಬಾರದಿರುವ ಮಕ್ಕಳ ಸಂಖ್ಯೆ ಎಷ್ಟು?

ನಿಮ್ಮ ಸ್ನೇಹಿತರೂ ಈ ರೀತಿಯ ಸಮೀಕ್ಷೆ ಮಾಡಲಿ. ನೀವು ಸಂಗ್ರಹಿಸಿದ ದತ್ತಾಂಶ ಮತ್ತು ನಿಮ್ಮ ಸ್ನೇಹಿತರು ಸಂಗ್ರಹಿಸಿದ ದತ್ತಾಂಶಗಳನ್ನು ಹೋಲಿಸಿ ನೋಡಿ. ನಿಮ್ಮ ವಿಶ್ಲೇಷಣೆಯು ಕೆಲವು ಮಕ್ಕಳು ಶಾಲೆಗೆ ದಾಖಲಾಗಿಲ್ಲ ಎಂಬ ಸತ್ಯಾಂಶವನ್ನು ತಿಳಿಸಬಹುದು !!! ಕೆಲವು ಮಕ್ಕಳು ತಮ್ಮ ಮನೆಯಿಂದ ಶಾಲೆಗೆ ದೂರ ಹೆಚ್ಚಾಗಿದ್ದು ಸಂಚಾರ ಸಮಸ್ಯೆಯನ್ನು ಎದುರಿಸುತ್ತಿರಬಹುದು. ಕೆಲವು ಕಡೆ ಸಂಚಾರ ವಾಹನಗಳ ವ್ಯವಸ್ಥೆ ಇದ್ದರೂ ಪೋಷಕರು ಅದಕ್ಕೆ ಬೇಕಾಗುವ ವೆಚ್ಚವನ್ನು ಭರಿಸಲಾಗದಿರಬಹುದು. ಅಂದರೆ ಮಕ್ಕಳು ಶಾಲೆಗೆ ಬರಲು ಅಗತ್ಯವಾದ ಸೌಲಭ್ಯಗಳು ಇಲ್ಲದಿರುವ ಸನ್ನಿವೇಶ ಇಂದಿಗೂ ಇದೆ. ಈ ಸಮಸ್ಯೆಯನ್ನು ಪರಿಹರಿಸುವುದು ಒಂದು ಸವಾಲು. ಇದಕ್ಕೆ ಮುಖ್ಯವಾಗಿ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಜಾತಿ, ಮತ ಮತ್ತು ಲಿಂಗ ಭೇದವಿಲ್ಲದೆ ಶಾಲಾ ಸೌಲಭ್ಯಗಳನ್ನು ಒದಗಿಸಬೇಕು, ಶಾಲೆಗಳು ಮನೆಯಿಂದ ನಡೆದು ಹೋಗುವಷ್ಟು ದೂರದಲ್ಲಿರಬೇಕು. ಸಾಕಷ್ಟು ಪ್ರಮಾಣದ ಯಶಸ್ಸಿನೊಂದಿಗೆ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಿದ್ದರೂ ಶೇಕಡ 100 ಪ್ರಮಾಣದ ಯಶಸ್ಸು ಇನ್ನೂ ಕನಸಾಗಿಯೇ ಉಳಿದಿದೆ. ಶಾಲೆಗಳ ಸೌಲಭ್ಯಗಳ ಕೊರತೆ ಒಂದೇ ಕಾರಣವಲ್ಲ, ಏಕೆಂದರೆ, ಹಳ್ಳಿಗಳಲ್ಲೂ ಈಚೆಗೆ ಶಾಲೆಗಳು ಬಹುಸಂಖ್ಯೆಯಲ್ಲಿವೆ. ಸರಿಯಾದ ಪ್ರಯತ್ನಗಳನ್ನು ಮಾಡಿದರೆ ನಮ್ಮ ರಾಜ್ಯದಲ್ಲೇ ಅನೇಕ ಹಳ್ಳಿಗಳಲ್ಲಿ ಗುರುತಿಸಬಹುದಾದಷ್ಟು ದುರ್ಬಲ ಸೌಲಭ್ಯಗಳಿರುವ ಶಾಲೆಗಳಿವೆ. ಹೆಚ್ಚು ಸೌಲಭ್ಯಗಳನ್ನು ಒದಗಿಸಿದರೆ ದಾಖಲಾತಿ ಮತ್ತು ಉಳಿಕೆ ಉತ್ತಮಗೊಳ್ಳಬಹುದು.

ಪ್ರಾಥಮಿಕ ಹಂತದಲ್ಲಿ ಅಪವ್ಯಯವಾಗಲು ದುರ್ಬಲ ಆಡಳಿತ ನೀತಿಯೇ ಕಾರಣವಾಗಿದೆ, ಯಾವಾಗಲೂ ಶಾಲೆಗಳಲ್ಲಿ ನಿಗದಿಗೊಳಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ. ವಿದ್ಯಾರ್ಥಿ ನೇಮಕಾತಿ ವರ್ಷದಾದ್ಯಂತ ನಡೆಯುತ್ತಲೇ ಇರುತ್ತದೆ. ವರ್ಷದ ಮಧ್ಯದಲ್ಲೇ ಎಷ್ಟೋಂದು ಸಂಖ್ಯೆಯ ವಿದ್ಯಾರ್ಥಿಗಳು ಶಾಲೆಯನ್ನು ಬಿಡುತ್ತಾರೆ. ಪೂರ್ವ ಮಾಹಿತಿ ನೀಡದೆ ಶಿಕ್ಷಕರು ಕೆಲಸಕ್ಕೆ ಗೈರು ಹಾಜರಾಗುತ್ತಾರೆ. ಮೇಲ್ವಿಚಾರಕರ ಸಂಖ್ಯೆಯೂ ಕಡಿಮೆ. ಮೇಲ್ವಿಚಾರಣೆ ನಿಯತವಾಗಿರುವುದಿಲ್ಲ ಮತ್ತು ಶಿಸ್ತುಬದ್ಧವಾಗಿರುವುದಿಲ್ಲ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಸಾಧನೆಯಲ್ಲಿ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಸುಗಮವಾಗಿ ನಡೆಸುವುದರಲ್ಲಿ ತರಬೇತಿಯು ಒಂದು ಮುಖ್ಯ ಅಂಶವಾಗಿ ಪರಿಗಣಿತವಾಗಿದೆ. ಶಿಕ್ಷಕರ ತರಬೇತಿಯ ವಾಸ್ತವ ಅನುಷ್ಠಾನವು ದೇಶದೊಳಗೆ ರಾಜ್ಯದಿಂದ ರಾಜ್ಯಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ನೇಮಕಾತಿ ಕ್ರಮವೂ ದೇಶದಾದ್ಯಂತ ಒಂದೇ ರೀತಿಯಲ್ಲಿಲ್ಲ.

**ಸಮರ್ಪಕ ಸಂಖ್ಯೆಯಲ್ಲಿ ಶಿಕ್ಷಕರನ್ನು ಮತ್ತು ತರಬೇತಿ ಪಡೆದ ಶಿಕ್ಷಕರನ್ನು ನೇಮಕಾತಿ ಮಾಡುವ ಸವಾಲು :** ಇಂದಿಗೂ ನಮ್ಮ ಶಾಲೆಗಳಲ್ಲಿ ಸೂಕ್ತ ತರಬೇತಿ ಪಡೆದ ಅಧ್ಯಾಪಕರ ಕೊರತೆ ಇದೆ. ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಅಧ್ಯಾಪಕರ ನೇಮಕಾತಿಯಾಗಬೇಕಾಗಿದೆ. ಶಾಲೆಯಲ್ಲಿರುವ ಶಿಕ್ಷಕರೇ ಎಲ್ಲ ಶಿಕ್ಷಕರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಹಾಗಾಗಿ, ಅವರು ಈವರೆಗೆ ಕಲಿತಿರಲಿ, ಇಲ್ಲದಿರಲಿ, ಎಲ್ಲ ವಿಷಯಗಳ ಬೋಧನೆಯನ್ನೂ ಅವರು ಮಾಡುತ್ತಾರೆ. ಅಧ್ಯಾಪಕರು ನಿಜವಾಗಿ ಮಾಡಬೇಕಾದ ರೀತಿಯಲ್ಲಿ ಕೆಲಸಗಳಾಗದೆ, ನಿಭಾಯಿಸಿಕೊಂಡು ಹೋಗುವುದೇ ಅನಿವಾರ್ಯವಾಗುತ್ತದೆ. ಇದರಿಂದಾಗಿ ಮಕ್ಕಳನ್ನು ಶಾಲೆಗೆ, ಶಿಕ್ಷಣಕ್ಕೆ ಆಕರ್ಷಿಸಬೇಕಾದ ಸವಾಲು ಹುಟ್ಟಿಕೊಳ್ಳುತ್ತದೆ. ವಿದ್ಯಾರ್ಥಿ–ಶಿಕ್ಷಕರ ಅನುಪಾತದಲ್ಲಿನ ಅಸಮರ್ಪಕತೆಯನ್ನು ನಿರ್ವಹಿಸುವುದೇ ಪ್ರಮುಖವಾದ ಸವಾಲಾಗಿದೆ. ಭಾರತ ಇಂದಿಗೂ ಏಕೋಪಾಧ್ಯಾಯ ಶಾಲೆಗಳಿಂದ ಮುಕ್ತವಾಗಿಲ್ಲ ಎಂಬುದು ವಿಷಾದದ ಅಷ್ಟೇ ಆಶ್ಚರ್ಯಕರವಾದ ಸಂಗತಿ. ಇದು ಪ್ರಾಥಮಿಕ ಶಿಕ್ಷಣದ ಅತಿ ದೊಡ್ಡ ಸವಾಲು.

ವಿದ್ಯಾರ್ಥಿಗಳ ಸಾರ್ವತ್ರಿಕ ದಾಖಲಾತಿಯೂ ಒಂದು ಆಡಳಿತಾತ್ಮಕವಾದ ಸವಾಲು. 6 –14 ವರ್ಷದೊಳಗಿನ ಎಲ್ಲಾ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ದಾಖಲು ಮಾಡುವುದು ಮತ್ತೊಂದು ಅಗತ್ಯ ಹೆಜ್ಜೆಯಾಗಿದೆ. ಇದನ್ನು ಸಾಧಿಸಲು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ ಸಹಾಯಕ ಅಸ್ತ್ರವಾಗಿದೆ. ಆದಾಗ್ಯೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಹಳ್ಳಿಗಳಲ್ಲಿ ಸಾರ್ವತ್ರಿಕ ದಾಖಲಾತಿ ಇನ್ನೂ ಸಂಕೀರ್ಣವಾಗಿಯೇ ಉಳಿದಿದೆ. ಇದಕ್ಕೆ ಪರಿಹಾರವಾಗಿ ಅನೇಕ ಕಾರ್ಯಕ್ರಮಗಳು ಅಸ್ತಿತ್ವದಲ್ಲಿದ್ದರೂ ಇದು ಒಂದು ಸವಾಲಾಗಿಯೇ ಉಳಿದಿದೆ.

## ಶಾಲಾ ಸಂಬಂಧಿ ಸವಾಲುಗಳು

**ಮೂಲ ಸೌಕರ್ಯಗಳನ್ನು ನಿಭಾಯಿಸುವ ಸವಾಲು :** ನಮ್ಮ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಶಾಲಾ ಸಿಬ್ಬಂದಿಗೆ ಅಗತ್ಯವಾದ ಮೂಲ ಸೌಕರ್ಯಗಳ ಕೊರತೆಯನ್ನು ನಿಭಾಯಿಸುವುದೂ ಒಂದು ಸವಾಲಾಗಿಯೇ ಇದೆ. ಈ ಸೌಕರ್ಯಗಳಿಲ್ಲದೆ ಬೋಧನೆಯ ಗುಣಮಟ್ಟ ಕ್ಷೀಣವಾಗುತ್ತದೆ. ಇದೂ ಶಿಕ್ಷಣ ಅನಾಕರ್ಷಕವಾಗಲು ಕಾರಣವಾಗುತ್ತದೆ. ಈ ಕೊರತೆ ಶಿಕ್ಷಕರಲ್ಲೂ ಅನಾಸಕ್ತಿಯನ್ನುಂಟುಮಾಡುತ್ತದೆ. ವಿದ್ಯಾರ್ಥಿಗಳಿಗೆ ಅಗತ್ಯವಾದ ಮೂಲಸೌಕರ್ಯಗಳಿಲ್ಲದೆ ಶಾಲೆಗೆ ಬಾರದಿರಲು ಅದೇ ಪ್ರಮುಖ ಕಾರಣವೂ ಆಗಬಹುದು. ಗಂಡು–ಹೆಣ್ಣು ಮಕ್ಕಳಿಗೆ ಅಗತ್ಯವಾದ ವಿಶೇಷ ಸೌಕರ್ಯಗಳಿಲ್ಲದಿರುವ ಸಮಸ್ಯೆಯೂ ಹಲವು ಸವಾಲುಗಳನ್ನೊಡ್ಡುತ್ತದೆ.

**ಶಾಲೆಗೆ ಹಾಜರಾಗುವ ಮಕ್ಕಳಲ್ಲಿ ಸಾಧನೆಯ ಪ್ರಮಾಣದ ಕೊರತೆಯನ್ನು ಎದುರಿಸುವ ಸವಾಲು:** ಶಿಕ್ಷಣದ ಸಾರ್ವತ್ರೀಕರಣ ಒಂದು ಕೊರತೆಯಾದರೆ ಸಾರ್ವತ್ರೀಕರಣದ ಗುರಿಗಳನ್ನು ಸಾಧಿಸುವಲ್ಲಿಯೂ ಅನೇಕ ಸವಾಲುಗಳಿವೆ. ಶಾಲೆಗೆ ಹಾಜರಾಗುವ ಮಕ್ಕಳಲ್ಲಿ ಅಪೇಕ್ಷಿತ ಮಟ್ಟದ ಸಾಧನೆಯಾಗುತ್ತಿಲ್ಲ. ಕೆಲವರ್ಷಗಳ ಹಿಂದೆ ಎನ್.ಸಿ.ಇ.ಆರ್.ಟಿ ಸಂಸ್ಥೆಯು ದೇಶದಾದ್ಯಂತ **"ಬೇಸ್‌ಲೈನ್ ಸರ್ವೆ"** ಎಂಬ ಅಧ್ಯಯನದ ಮೂಲಕ ಪ್ರಾಥಮಿಕ ಶಾಲೆಗಳ ಮಕ್ಕಳ ವಿಜ್ಞಾನ, ಗಣಿತ ಮತ್ತು ಭಾಷಾಸಾಧನೆಯನ್ನು ಅಂದಾಜುಮಾಡಿದೆ. ಅದು ಕ್ರಮವಾಗಿ ಶೇ 50.30, 46.51. ಮತ್ತು 58.57 ಎಂದು ಕಂಡುಬಂದಿದೆ. ಸಾಧನೆಯ ಮಟ್ಟ ಕಡಿಮೆ ಇರುವುದು ಒಂದು ಸವಾಲಾದರೆ, ನಗರ ಮತ್ತು ಗ್ರಾಮೀಣ ಶಾಲೆಗಳ ಮಕ್ಕಳ ಸಾಧನೆಯಲ್ಲಿನ ಅಂತರ ಮತ್ತೊಂದು ಸವಾಲಾಗಿದೆ.

ಶಾಲೆಗಳು ಮಕ್ಕಳನ್ನು ಆಕರ್ಷಿಸುವಂತಿಲ್ಲದಿರುವುದು ಮತ್ತೊಂದು ಸವಾಲು. ಕಲಿಕೆ ಮಕ್ಕಳಿಗೆ ಆನಂದವನ್ನು, ಉತ್ತಮ ಅನುಭವಗಳನ್ನು ಸಂತೃಪ್ತಿಯನ್ನು ತಂದುಕೊಟ್ಟರೆ ಕಲಿಕೆಯನ್ನು ಮುಂದುವರಿಸಲು ಪ್ರೇರಣೆಯುಂಟಾಗುತ್ತದೆ. ಕಲಿಕೆ ಸಂಭ್ರಮಿಸುವ ವಿಷಯವಾಗುವಂತೆ ಶಾಲೆಗಳು, ಅಧ್ಯಾಪಕರು ಪ್ರಯತ್ನಿಸಬೇಕು. ಹೀಗೆ ಮಾಡುವುದು

ಹೇಗೆ ಎಂಬುದೇ ದೊಡ್ಡ ಸವಾಲು. ಪರೀಕ್ಷೆಗಳೇ ಮಕ್ಕಳನ್ನು ಅಳೆಯುವ ಅಂತಿಮ ಸಾಧನಗಳಾಗಿರುವುದರಿಂದ, ಮಕ್ಕಳು ಅದರ ಒತ್ತಡವನ್ನು ಸಹಿಸಲಾರದೆ ಶಾಲೆಯಿಂದ ಹೊರಬರುವ, ತಪ್ಪಿಸಿಕೊಳ್ಳುವ ಸನ್ನಿವೇಶಗಳೇ ಹೆಚ್ಚು. ಇದರಿಂದ ಸಾರ್ವತ್ರಿಕ ಉಳಿಕೆ ಸೋಲುತ್ತದೆ. ಈ ಎಲ್ಲ ಸವಾಲುಗಳೂ ಒಂದಕ್ಕೊಂದು ಸಂಬಂಧಪಟ್ಟವುಗಳೇ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ನಿಮ್ಮ ಶಾಲೆಯ ಪರಿಸರದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಕೆಳಗಿನ ಸಾಧನದ ಸಹಾಯದಿಂದ ಸಂಗ್ರಹಿಸಿ, ವಿಶ್ಲೇಷಿಸಿ.

| ಕ್ರಮ ಸಂಖ್ಯೆ | ಪ್ರಶ್ನೆಗಳು | ಹೌದು/ಇಲ್ಲ | 'ಇಲ್ಲ' ಎಂಬುದಕ್ಕೆ ಕಾರಣಗಳೇನು? | ಶಾಲಾ ಮಟ್ಟದಲ್ಲಿ ಏನು ಮಾಡಬಹುದು? |
|---|---|---|---|---|
| 1 | ನಮ್ಮ ಶಾಲಾ ಪರಿಸರದ ಎಲ್ಲ ಮಕ್ಕಳೂ ಶಾಲೆಗೆ ಬರುತ್ತಿದ್ದಾರೆಯೇ? | | | |
| 2 | ಎಲ್ಲ ಮಕ್ಕಳಿಗೂ ಸಮನಾದ ಗಮನ ನೀಡಲಾಗುತ್ತಿದೆಯೇ? | | | |
| 3 | ಎಲ್ಲ ಮಕ್ಕಳಿಗೂ ಶಿಕ್ಷಣಕ್ಕೆ ಅಗತ್ಯವಾದ ಶೈಕ್ಷಣಿಕ ಸೌಕರ್ಯಗಳಿವೆಯೇ? | | | |
| 4 | ಶಾಲಾ ಪರಿಸರ ಆಕರ್ಷಕವಾಗಿದೆಯೇ? | | | |
| 5 | ಮಕ್ಕಳು ತರಗತಿಗಳನ್ನು ಮೆಚ್ಚಿಕೊಳ್ಳುತ್ತಿದ್ದಾರೆಯೇ? | | | |
| 6 | ಮಕ್ಕಳು ಖುಷಿಯಿಂದ ಶಾಲೆಗೆ ಬರುತ್ತಿದ್ದಾರೆಯೇ? ಎಲ್ಲ ಮಕ್ಕಳ ಸಾಧನೆ ತೃಪ್ತಿಕರವಾಗಿದೆಯೇ? | | | |

## 1.4.3.2. ಪೋಷಕರಿಗೆ ಸಂಬಂಧಿಸಿದ ಸವಾಲುಗಳು ಮತ್ತು ಇತರ ಸವಾಲುಗಳು

**ಹೆತ್ತವರ ಒತ್ತಡವನ್ನು ಕಡಿಮೆಮಾಡಿ ಅರ್ಥಪೂರ್ಣ ಕಲಿಕೆಗೆ ಸಹಾಯಮಾಡುವ ಸವಾಲು:** ಮಕ್ಕಳ ಭವಿಷ್ಯದ ದಿನಗಳನ್ನು ಇಂದೇ ಕಲ್ಪಿಸಿಕೊಂಡು ಮಗುವು ಒಂದನೆಯ ತರಗತಿಯಿಂದಲೇ ಹೆಚ್ಚು ಅಂಕಗಳನ್ನು ಪಡೆಯಬೇಕೆಂಬ ಹೆತ್ತವರ ಒತ್ತಡ ಇಂದಿನ ಪ್ರಮುಖ ಸವಾಲುಗಳಲ್ಲಿ ಒಂದು. ಮಕ್ಕಳ ಕಲಿಕೆಯನ್ನು ಸಂಭ್ರಮಿಸಬೇಕೇ ಹೊರತು ಮಾಪನಮಾಡಬಾರದು ಎಂಬ ಅರಿವು ಅವರಿಗಿರಬೇಕು. ಇದನ್ನು ಅವರಿಗೆ ಮನಗಾಣಿಸುವುದೇ ಶಿಕ್ಷಣದ ಸಾರ್ವತ್ರೀಕರಣದ ಸವಾಲು. ಇದಲ್ಲದೆ ಬಡತನದ ಕಾರಣದಿಂದಾಗಿ ಮಗುವನ್ನು ಶಾಲೆಗೆ ಕಳುಹಿಸಿ ನಾಳೆಗಳನ್ನು ನಿರೀಕ್ಷಿಸುವುದಕ್ಕಿಂತ, ಇಂದಿನ ಇರವು ಮುಖ್ಯವಾಗಿ ಅವರು ದುಡಿದು ತರುವ ಚಿಕ್ಕ ಮೊತ್ತವೂ ಪೋಷಕರಿಗೆ ಅನಿವಾರ್ಯವಾಗುತ್ತದೆ. ಈ ಬಡತನದಿಂದ ಮುಕ್ತಿಗೊಳಿಸಿ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮಾಡುವುದೂ ಒಂದು ಸವಾಲಾಗಿದೆ.

ಗ್ರಾಮೀಣ ಪರಿಸರದಲ್ಲಿ ಹೆಣ್ಣುಮಕ್ಕಳಿಗೆ ಬೇಗನೆ ಮದುವೆ ಮಾಡಿಕೊಟ್ಟು ಜವಾಬ್ದಾರಿಯನ್ನು ಮುಗಿಸಿಕೊಳ್ಳಬಯಸುವ ಪೋಷಕರಿದ್ದಾರೆ. ಅನೇಕ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಹೆಣ್ಣುಮಕ್ಕಳಿಗೆ

ಆದಷ್ಟು ಬೇಗನೆ ಮದುವೆ ಮಾಡಿ ಕಳುಹಿಸುವುದು ಅವರ ಉದ್ದೇಶ. ಹೀಗೆ ಮದುವೆಯಾಗಿ ಹೋದ ಹೆಣ್ಣುಮಕ್ಕಳು ತರಗತಿಗೆ ಮರಳಿ ಬರುವುದು ಬಹಳ ಅಪರೂಪ. ಹೀಗಾಗಿ ಅತಿ ಚಿಕ್ಕ ವಯಸ್ಸಿನಲ್ಲೆ ಮನೆಬಿಟ್ಟ ಮಕ್ಕಳು ಶಾಲೆಯನ್ನೂ ಬಿಟ್ಟುಬಿಡುತ್ತಾರೆ.

ಬಡತನದ ಕಾರಣದಿಂದಾಗಿ ತಂದೆ ತಾಯಿಯರಿಬ್ಬರೂ ದುಡಿಯುವ ಪರಿಸ್ಥಿತಿ ಇರುತ್ತದೆ. ಈ ಕಾರಣದಿಂದಾಗಿ ಹಿರಿಯ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಕಿರಿಯ ಮಕ್ಕಳನ್ನು ನೋಡಿಕೊಳ್ಳುವ ಪರಿಸ್ಥಿತಿ ಇರುತ್ತದೆ. ಹೀಗಾಗಿ ಈ ಹಿರಿ ಮಕ್ಕಳಿಗೆ ಶಾಲೆಗೆ ಹೋಗುವ ಆಸೆ ಇದ್ದರೂ ಹೋಗಲಾಗದ ಪರಿಸ್ಥಿತಿ ಉಂಟಾಗುತ್ತದೆ. ಇದೂ ಒಂದು ಸವಾಲೇ.

**ಶಾಲೆಗೆ ಮೊದಲ ತಲೆಮಾರಿನ ವಿದ್ಯಾರ್ಥಿಗಳನ್ನು ಸೆಳೆಯುವುದು:** ಇದು ಅತಿ ದೊಡ್ಡ ಸವಾಲು. ಈಗಾಗಲೇ ಶಿಕ್ಷಣ ಪಡೆದಿರುವ ಪೋಷಕರಿಗೆ ಶಿಕ್ಷಣದ ಅಗತ್ಯ ಅಥವಾ ಪ್ರಯೋಜನಗಳ ಕುರಿತ ಒಂದು ಮಟ್ಟಿನ ತಿಳಿವಳಿಕೆ ಇರುತ್ತದೆ. ಆದರೆ ಕುಟುಂಬದಲ್ಲಿ ಮೊದಲ ಬಾರಿಗೆ ಮಗುವನ್ನು ಶಾಲೆಗೆ ದಾಖಲಾತಿ ಮಾಡಬೇಕಾದರೆ ಅನೇಕ ಸವಾಲುಗಳು ಕುಟುಂಬದ ಒಳಗೇ ಇರುತ್ತವೆ. 'ನಾವೆಲ್ಲಾ ಶಾಲೆಗೆ ಹೋಗಲಿಲ್ಲ; ಆದರೂ ಜೀವನ ಮಾಡಿಕೊಂಡಿಲ್ಲವೇ?' ಶಾಲೆ ಅಷ್ಟು ಅಗತ್ಯವೇ ಎಂಬ ವಿಚಾರದಲ್ಲೇ ಮಗುವಿನ ಭವಿಷ್ಯ ಮರೆಯಾಗಿ ಹೋಗುವ ಸಾಧ್ಯತೆಗಳಿವೆ. ಕಳುಹಿಸಿದರೂ ಕುಟುಂಬದಲ್ಲಿ ಏನಾದರೂ ಕಷ್ಟಬಂದಾಗ, ಅದನ್ನು ದಾಟಿಕೊಂಡು ಮಕ್ಕಳು ಶಾಲೆಗೆ ಹೋಗಬೇಕು ಎಂಬ ಅಭಿಪ್ರೇರಣೆ ನೀಡುವ ವಾತಾವರಣ ಇರುವುದಿಲ್ಲ. ಹೀಗಾಗಿ ಭಾರತದ ಅನೇಕ ಕುಟುಂಬಗಳಲ್ಲಿ ಇನ್ನೂ ಶಾಲೆಗೇ ಕಾಲಿಡದ ಸದಸ್ಯರನೇಕರು ಇರುವ ಸನ್ನಿವೇಶವಿದೆ. ಇದು ಪರಿಹಾರವಾಗುವವರೆಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಿಲ್ಲ.

**ಇತರ ಸವಾಲುಗಳು**

ದಾಖಲಾದ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದೂ ಒಂದು ಸವಾಲು. ದಾಖಲಾತಿ ಪ್ರಗತಿಯಲ್ಲಿ ಸಾಕಷ್ಟು ಉತ್ತಮ ಯಶಸ್ಸನ್ನು ಗಳಿಸಲು ಸಾಧ್ಯವಾದರೂ ಮಕ್ಕಳು ಪ್ರಾಥಮಿಕ ಶಿಕ್ಷಣ ಮುಗಿಸುವ ಮುನ್ನವೇ ಶಾಲೆ ಬಿಟ್ಟರೆ ಶಿಕ್ಷಣದ ಸಾರ್ವತ್ರೀಕರಣದ ಸಾಧನೆಯಲ್ಲಿ ಸೋತಂತೆಯೇ ಸರಿ. ದಾಖಲಾತಿಯನ್ನೇ ಒತ್ತಾಯದಿಂದ ಮಾಡಲು ಸಾಧ್ಯವಿಲ್ಲದಿರುವಾಗ ಉಳಿಸಿಕೊಳ್ಳುವಿಕೆಯನ್ನು ಬಾಹ್ಯ ಪ್ರಯತ್ನದಿಂದ ಮಾಡುವುದು ಸರಿಯಲ್ಲ. ಇದೂ ಅನೇಕ ಸಂಬಂಧಿತ ಅಂಶಗಳನ್ನು ಅವಲಂಬಿಸಿದೆ. ಉಳಿಕೆ ಸಾಧ್ಯವಾಗಬೇಕಾದರೆ ಮಕ್ಕಳನ್ನು ಪ್ರಾಥಮಿಕ ಶಿಕ್ಷಣ ಮುಗಿಸುವವರೆಗೂ ಕಾಯ್ದುಕೊಳ್ಳಬೇಕು. ಇದಕ್ಕಾಗಿ ಮಕ್ಕಳು ಪ್ರತಿ ವರ್ಷವೂ ನಿಯತವಾಗಿ ಪ್ರಗತಿಯನ್ನು ತೋರಬೇಕು. ಇಲ್ಲದಿದ್ದರೆ ಸಾರ್ವತ್ರಿಕ ಉಳಿಸಿಕೊಳ್ಳುವಿಕೆ ಸಾಧ್ಯವಾಗದು. ಉಳಿಸಿಕೊಳ್ಳಲಾಗದಿದ್ದರೆ ಇದು ಅಪವ್ಯಯ ಅಥವಾ ಕೊಳೆಯ ಸನ್ನಿವೇಶಗಳಾಗಬಹುದು. ಇದಕ್ಕೆ ಹೆತ್ತವರ ಅನಕ್ಷರತೆ, ವಿದ್ಯಾರ್ಥಿಯ ಅನಾರೋಗ್ಯ, ಆರ್ಥಿಕ ಅಂಶಗಳು, ಕೆಟ್ಟ ಪರಿಸರ, ಅನಾಕರ್ಷಕ ಶಾಲಾ ಪರಿಸರ ಇತ್ಯಾದಿ ಅನೇಕ ಅಂಶಗಳು ಕಾರಣವಾಗುತ್ತವೆ.

ಶಿಕ್ಷಣದ ಗುಣಾತ್ಮಕ ಸುಧಾರಣೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮತ್ತೊಂದು ಅಂಶ. ಮಕ್ಕಳನ್ನು ಶಾಲೆಗೆ ದಾಖಲು ಮಾಡುವಷ್ಟರಿಂದಲೇ ಶಿಕ್ಷಣದ ಸಾರ್ವತ್ರೀಕರಣವಾಯಿತೆನ್ನಲಾಗದು. ಗುಣಮಟ್ಟದ ಶಿಕ್ಷಣವನ್ನು ನೀಡಬೇಕು. ಅಪೇಕ್ಷಿತ ಗುರಿ ಮುಟ್ಟಲು ಕಡ್ಡಾಯ ಶಿಕ್ಷಣದ ಸಾರ್ವತ್ರೀಕರಣವು ಗುಣಮಟ್ಟ ಕಾಪಾಡುವಲ್ಲಿ ದುರ್ಬಲವಾಗಿರುವುದರಿಂದ ಶೇಕಡ ನೂರರಷ್ಟು ಯಶಸ್ಸುಗಳಿಸಿಲ್ಲ. ಪ್ರಮಾಣ ವರ್ಧನೆಯು ಗುಣಮಟ್ಟದ ವರ್ಧನೆಯೊಂದಿಗೆ ಜೊತೆ ಜೊತೆಯಾಗಿ ಸಾಗಬೇಕು, ಆದ್ದರಿಂದ ವಿಸ್ತರಣೆಯೊಂದಿಗೆ ಸಮನಾಗಿ ಬೆಳೆಯಬೇಕಾದರೆ ಪ್ರಮಾಣದೊಂದಿಗೆ ಗುಣಮಟ್ಟದ ಕಡೆಗೆ ಯೋಚಿಸಬೇಕಾದ್ದು ಅಗತ್ಯವಾಗಿದೆ. ಗುಣಮಟ್ಟದ ಶಿಕ್ಷಣ ಪ್ರತಿ ಮಗುವಿನ ಹಕ್ಕು. ನಾವು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಿಸಬೇಕೆಂಬುದರ ಬಗ್ಗೆ ಉತ್ಸುಕರಾಗಿದ್ದರೆ, ನಾವು ಶಿಕ್ಷಕರ ಸಾಮರ್ಥ್ಯ ಮತ್ತು ಮೂಲಸೌಕರ್ಯಗಳ ಬಗ್ಗೆ ಹೆಚ್ಚಿನ ಮಹತ್ವ ನೀಡಲೇಬೇಕು. ಗುಣಮಟ್ಟದ ಬಗ್ಗೆ ಕಾಳಜಿ ವಹಿಸಿದ್ದೇ ಆದರೆ ಇತರ ಸವಾಲುಗಳನ್ನು ಸ್ವಲ್ಪಮಟ್ಟಿಗೆ ಪರಿಹರಿಸಬಹುದು.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2**

ಹೆತ್ತವರಿಂದ ಉಂಟಾಗುತ್ತಿರುವ ಅಡಚಣೆಗಳನ್ನು ಪರಿಹರಿಸಲು ಅವರಿಗೆ ಒಂದು ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲು ಅಗತ್ಯವಾದ ಕಾರ್ಯಯೋಜನೆ ತಯಾರಿಸಿ.

## 1.4.4. ಸಾರಾಂಶಿಸೋಣ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗೆ ಕೆಳಗಿನವುಗಳು ಸವಾಲುಗಳಾಗಿವೆ

- **ಆಡಳಿತಾತ್ಮಕ ಸವಾಲುಗಳು:** ಸಾರ್ವತ್ರಿಕವಾಗಿ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು, ಸಮರ್ಥ ಆಡಳಿತ ನೀತಿಯನ್ನು ಒದಗಿಸುವುದು, ಅಧ್ಯಾಪಕರಿಗೆ ಉತ್ತಮ ತರಬೇತಿ, ಸಾರ್ವತ್ರಿಕ ದಾಖಲಾತಿ ಇತ್ಯಾದಿ
- **ಶಾಲಾ ಸಂಬಂಧಿ ಸವಾಲುಗಳು:** ಮೂಲ ಸೌಕರ್ಯಗಳನ್ನು ನಿಭಾಯಿಸುವುದು, ಸಾಧನೆಯ ಗುಣಮಟ್ಟವನ್ನು ಹೆಚ್ಚಿಸುವುದು, ಶಾಲೆ ಮತ್ತು ಕಲಿಕೆ ಎರಡನ್ನೂ ಆಕರ್ಷಕವಾಗಿಸುವುದು.
- **ಪೋಷಕರಿಗೆ ಸಂಬಂಧಿಸಿದ ಸವಾಲುಗಳು:** ಮಕ್ಕಳಿಂದ ಅತಿಯಾದ ಅಪೇಕ್ಷೆ, ಶಿಕ್ಷಣದ ಕೊರತೆ, ಸಾಮಾಜಿಕ ಮಾನಕಗಳಿಗೆ ಮೊರೆಹೋಗುವುದು, ಬಡತನದ ಸವಾಲುಗಳು
- **ಇತರ ಸವಾಲುಗಳು :** ಶಾಲೆಗಳಲ್ಲಿ ಮಕ್ಕಳ ಉಳಿಕೆ, ಗುಣಮಟ್ಟ ಸುಧಾರಣೆ, ಬಡತನ.

## 1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು :

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1**

ನಿಮ್ಮ ವಿಶ್ಲೇಷಣೆಯನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು ಕಾರ್ಯಗತವಾಗಲು ಒಂದು ಕಾರ್ಯಯೋಜನೆ ತಯಾರಿಸಿ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2**

ಕಾರ್ಯಯೋಜನೆಯನ್ನು ಶಾಲಾ ಸಿಬ್ಬಂದಿಯೊಡಗೂಡಿ ಅನುಷ್ಠಾನಗೊಳಿಸಿ.

## 1.4.6. ಘಟಕಾಂತ್ಯ ಅಭ್ಯಾಸಗಳು

1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಗಳನ್ನು ಸಾಧಿಸಲು ಇರುವ ವಿವಿಧ ಸವಾಲುಗಳನ್ನು ವಿವರಿಸಿ.

## 1.4.7. ಪರಾಮರ್ಶನಸೂಚಿ

1. Achieving Universal Primary Education : A Collaborative Model, Faculty Contributor : Trilochan Sastry, Professor ; Student Contributors : Ankita Agarwal and Ayesha Jaggi
2. Enrolment of girls at primary level goes up: NCERT,All India Education Survey is the most comprehensive national- level survey covering the school education system GN Bureau | January 22,2013
3. Achieving Universal Elementary Education in India, Expanding Access with Equity # R. Govinda and M.Bandyopadhyay, National University of Educational Planning and Administration, New Delhi International Journal of Scientific and Research Publications, Volume 3, Issue 11, November 2013 1 ISSN 2250-3153

*********

# ಬ್ಲಾಕ್–1 : ಸಮಕಾಲೀನ ಭಾರತ

## ಘಟಕ–5 : ಶಿಕ್ಷಣವನ್ನು ಕುರಿತ ವಿಭಿನ್ನ ಗುಂಪುಗಳ ಬೇಡಿಕೆಗಳು

**ಘಟಕದ ರಚನೆ :**


1.5.1 ಕಲಿಕಾ ಉದ್ದೇಶಗಳು

1.5.2. ಪೀಠಿಕೆ

1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.5.3.1. ಶೈಕ್ಷಣಿಕ ಭಾಗವಹಿಸುವಿಕೆಯ ಮೂರು ಪ್ರಧಾನ ನಿರ್ಧಾರಕಗಳು ಮತ್ತು ವಿವಿಧ ಬೇಡಿಕೆಗಳುಳ್ಳ ಸಾಮಾಜಿಕ ಸಮೂಹಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1.5.3.2. ಶಿಕ್ಷಣಕ್ಕಾಗಿ ವಿವಿಧ ಸಾಮಾಜಿಕ ಸಮೂಹಗಳ ಬೇಡಿಕೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

1.5.4. ಸಾರಾಂಶಿಸೋಣ

1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

1.5.6. ಘಟಕಾಂತ್ಯ ಅಭ್ಯಾಸಗಳು

1.5.7. ಪರಾಮರ್ಶನ ಸೂಚಿ


## 1.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶೈಕ್ಷಣಿಕ ಭಾಗವಹಿಸುವಿಕೆಗೆ ಅಗತ್ಯವಾದ ಪ್ರಧಾನ ನಿರ್ಣಾಯಕಗಳನ್ನು ವಿವರಿಸುವರು;
- ಶಿಕ್ಷಣಕ್ಕಾಗಿ ವಿಭಿನ್ನ ಬೇಡಿಕೆಗಳಿರುವ ಸಮೂಹಗಳನ್ನು ವಿಶ್ಲೇಷಿಸುವರು; ಮತ್ತು
- ಶಿಕ್ಷಣಕ್ಕಾಗಿ ವಿವಿಧ ಸಾಮಾಜಿಕ ಸಮೂಹಗಳ ಬೇಡಿಕೆಗಳು ಯಾವುವು ಎಂಬುದನ್ನು ಗುರುತಿಸಿ ಅವುಗಳನ್ನು ಪೂರೈಸುವಿಕೆಯ ಕುರಿತು ವಿಶ್ಲೇಷಿಸುವರು.

## 1.5.2. ಪೀಠಿಕೆ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಸಾಮಾನ್ಯ ಸವಾಲುಗಳನ್ನು ಹಿಂದಿನ ಘಟಕದಲ್ಲಿ ಚರ್ಚಿಸಿದ್ದೇವೆ. ಇಲ್ಲಿಗೆ ಎಲ್ಲ ಸವಾಲುಗಳನ್ನೂ ವಿಶ್ಲೇಷಿಸಿದಂತಾಯಿತು ಎಂದು ಹೇಳಲಾಗುವುದಿಲ್ಲ. ಶಿಕ್ಷಣದ ಸಾರ್ವತ್ರೀಕರಣವನ್ನು ಅತಿ ಶೀಘ್ರವಾಗಿ ಸಾಧಿಸುವ ಆಶಯ ನಮ್ಮದಾದರೂ ಅದು ಒದಗಿಬರಲು ಮತ್ತೂ ಅನೇಕ ಸವಾಲುಗಳನ್ನು ಎದುರಿಸಲೇಬೇಕು. ಭಾರತ ವೈವಿಧ್ಯತೆಗಳ ನಾಡು ಎಂದು ಹೇಳುತ್ತಲೇ ಬಂದಿದ್ದೇವೆ. ಈ ವೈವಿಧ್ಯತೆ, ಆರ್ಥಿಕ, ಸಾಮಾಜಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಸಂಭ್ರಮಿಸುವಷ್ಟರ ಮಟ್ಟಿನ ಧನಾತ್ಮಕ ಅಂಶಗಳನ್ನು ಹೊರಹಾಕಿದೆಯಾದರೂ ಈ ವೈವಿಧ್ಯತೆಗಳ ಅಸಮರ್ಪಕ ತಿಳುವಳಿಕೆಯಿಂದಾಗಿ ಕೆಲವು ಸಮಸ್ಯೆಗಳನ್ನೂ ಹುಟ್ಟುಹಾಕಿವೆ. ಈ ಅಸಮರ್ಪಕ ತಿಳಿವಳಿಕೆ ಭಾರತಕ್ಕೇ ವಿಶಿಷ್ಟವಾದ ಒಂದು ವಿಭಿನ್ನ ರೀತಿಯ ಶ್ರೇಣೀಕರಣವನ್ನೂ ಸೃಷ್ಟಿಸಿಹಾಕಿದೆ. ಇದರಿಂದಾಗಿ ಸಾಮಾಜಿಕ ಅಸಮಾನತೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಇದೇ ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆಗಳನ್ನೂ ಉಂಟುಮಾಡಿದೆ. ಹೀಗಾಗಿ ಇದನ್ನು ಸರಿದೂಗಿಸುವ ಪ್ರಯತ್ನಗಳನ್ನು ಕೈಗೆತ್ತಿಕೊಂಡಾಗ ವಿಭಿನ್ನ ಸಾಮಾಜಿಕ

ಸಮೂಹಗಳ ಶೈಕ್ಷಣಿಕ, ಮತ್ತು ಅದಕ್ಕೆ ಪೂರಕವಾದ ಬೇಡಿಕೆಗಳು ಭಿನ್ನ ರೀತಿಯಾಗಿರುವುದು ಕಾಣಬರುತ್ತದೆ. ಹೀಗೆ ವಿಭಿನ್ನ ಬೇಡಿಕೆಗಳನ್ನೊಡ್ಡುವ ಸಾಮಾಜಿಕ ಸಮೂಹಗಳು ಯಾವುವು, ಅವುಗಳ ಬೇಡಿಕೆಗಳೇನು ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ

## 1.5.3. ಕಲಿಕೆಯ ಅಂಶಗಳು ಮತ್ತು ಕಲಿಕೆಯ ಚಟುವಟಿಕೆಗಳು

### 1.5.3.1. ಶೈಕ್ಷಣಿಕ ಭಾಗವಹಿಸುವಿಕೆಯ ಮೂರು ಪ್ರಮುಖ ನಿರ್ಧಾರಕಗಳು ಮತ್ತು ವಿವಿಧ ಬೇಡಿಕೆಗಳುಳ್ಳ ವಂಚಿತ ಸಾಮಾಜಿಕ ಸಮೂಹಗಳು

ಶಿಕ್ಷಣದಲ್ಲಿ ಸಾರ್ವತ್ರಿಕ ಭಾಗವಹಿಸುವಿಕೆ ಭಾರತದಂತಹ ಪ್ರಗತಿಪರ ರಾಷ್ಟ್ರಗಳಲ್ಲಿ ಅತಿ ಸರಳವಾದ ವಿಷಯವೇನೂ ಅಲ್ಲ. ಅದು ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಅಂದರೆ ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರೂ ಭಾಗವಹಿಸುವಂತಾಗಲು ಅನೇಕ ಅಂಶಗಳು ಕಾರಣವಾಗುತ್ತವೆ. ಅವುಗಳನ್ನೇ ಇಲ್ಲಿ ಕಾರಕಗಳೆಂದು ಗುರುತಿಸಲಾಗಿದೆ. ಹೀಗೆ ಶಿಕ್ಷಣದ ಭಾಗವಹಿಕೆಯನ್ನುಂಟುಮಾಡುವ ಮೂರು ಪ್ರಮುಖ ಅಂಶಗಳಿವೆ. ಅವುಗಳೆಂದರೆ, ಸಾಮಾಜಿಕ ಕಾರಕಗಳು, ಶೈಕ್ಷಣಿಕ ಕಾರಕಗಳು ಮತ್ತು ಸಾಂಸ್ಕೃತಿಕ ಕಾರಕಗಳು.

ಮೊದಲೆರಡು ಅಂಶಗಳನ್ನು ಒಟ್ಟಾಗಿ ಸೇರಿಸಿ ಸಮಾಜೋ ಶೈಕ್ಷಣಿಕ ಕಾರಕಗಳು ಎಂದು ಹೇಳಬಹುದು. ಇವು ಗೃಹಕೃತ್ಯದ ಲಕ್ಷಣಗಳು ಅಂದರೆ, ಪೋಷಕರ ವರಮಾನ, ಸಂಪತ್ತು, ಕುಟುಂಬ ಸದಸ್ಯರ ಲಕ್ಷಣಗಳು, ಕುಟುಂಬದ ಸದಸ್ಯರ ವೃತ್ತಿ ಇವುಗಳನ್ನು ಒಳಗೊಳ್ಳುತ್ತದೆ. ಈ ಕಾರಣಗಳು ಕ್ಷುಲ್ಲಕ ಎಂದು ಕಂಡುಬಂದರೂ ಅವು ಪ್ರಬಲ ನಿರ್ಣಾಯಕಾಂಶಗಳಾಗಿ ಮಕ್ಕಳ ದಾಖಲಾತಿಯ ಮೇಲೆ ಪ್ರಭಾವಿಸುತ್ತವೆ. ಇದರ ಜೊತೆಗೆ ಇವು ಶೈಕ್ಷಣಿಕವಾದ ಮೂಲಸೌಕರ್ಯಗಳಿಗೆ ಸಂಬಂಧಿಸಿದ ಕಾರಕಗಳನ್ನೂ ಒಳಗೊಳ್ಳುತ್ತದೆ. ಮನೆಯ ಹತ್ತಿರದಲ್ಲೇ ಶಾಲೆಯ ಸೌಲಭ್ಯ, ಸಾಕಷ್ಟು ಪ್ರಮಾಣದಲ್ಲಿ ಮೂಲಸೌಕರ್ಯಗಳನ್ನು ಒದಗಿಸುವಿಕೆ, ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ಗುಣಮಟ್ಟದ ಶಿಕ್ಷಣ, ಸಾಕಷ್ಟು ಸಂಖ್ಯೆಯ ಶಿಕ್ಷಕರನ್ನು ಒದಗಿಸುವಿಕೆ, ಕುಡಿಯುವ ನೀರಿನ ಸೌಲಭ್ಯ, ಸುರಕ್ಷಿತ ಪರಿಸರ, ಉತ್ತಮ ಶಾಲಾಯೋಜನೆ, ಕೈಗೆಟಕುವ ದರದಲ್ಲಿ ಶಾಲೆಯ ಲಭ್ಯತೆ – ಈ ಪ್ರತಿಯೊಂದು ಅಂಶವೂ ಸಾರ್ವತ್ರಿಕ ದಾಖಲಾತಿಯ ಮೇಲೆ ಪರಿಣಾಮ ಬೀರುತ್ತದೆ. ಈ ಅಂಶಗಳು ಸಾರ್ವತ್ರಿಕ ದಾಖಲಾತಿಯೊಂದಿಗೆ ಧನಾತ್ಮಕ ಸಂಬಂಧವನ್ನು ಹೊಂದಿವೆ.

ಮೂರನೆಯದಾಗಿ ಸಾಂಸ್ಕೃತಿಕವಾದ ಕೆಲವು ಅಂಶಗಳು ಸಾರ್ವತ್ರೀಕರಣದ ಸಾಧನೆಗೆ ಕಾರಕಗಳಾಗುತ್ತವೆ. ಅವೆಂದರೆ, ಕುಟುಂಬದ ವಿಧಗಳು, ಸಾಂಪ್ರದಾಯಿಕತೆ, ಹೆತ್ತವರ ಶಿಕ್ಷಣ, ಮಹಿಳೆಯರ ಸ್ಥಾನ, ನಂಬಿಕೆಗಳ ವ್ಯವಸ್ಥೆ, ಜಾತೀಯತೆ, ಪದ್ಧತಿಗಳು ಇವೂ ವಿಶಿಷ್ಟ ಕಾರಕಗಳಾಗಿ ಸಾರ್ವತ್ರೀಕರಣದ ಸಾಧನೆಯ ಮೇಲೆ ಪರಿಣಾಮ ಬೀರುತ್ತವೆ. ಕೆಲವು ರೀತಿಯ ಕುಟುಂಬಗಳು ಸಾರ್ವತ್ರೀಕರಣಕ್ಕೆ ಪೂರಕವಾದರೆ ಕೆಲವು ಮಾರಕವಾಗುತ್ತವೆ. ಪುರುಷ ಪ್ರಧಾನ ಕುಟುಂಬಗಳು, ಅತ್ಯಂತ ಸಾಂಪ್ರದಾಯಿಕ ಕುಟುಂಬಗಳು, ಅವಿಭಕ್ತ ಕುಟುಂಬ ಇವು ಒಂದು ರೀತಿಯಲ್ಲಿ ಸಾರ್ವತ್ರೀಕರಣಕ್ಕೆ ಒತ್ತಾಸೆ ನೀಡುವುದಿಲ್ಲ. ಇಂತಹ ಕುಟುಂಬಗಳಲ್ಲಿ ಹೆಣ್ಣುಮಕ್ಕಳು, ಅಸಾಮರ್ಥ್ಯ ಉಳ್ಳವರು, ಇತ್ಯಾದಿ ಕೆಲವು ಗುಂಪುಗಳಿಗೆ ಶಿಕ್ಷಣವನ್ನು ಆದ್ಯತೆಯ ಮೇರೆಗೆ ನೀಡಲಾಗುವುದಿಲ್ಲ. ಹೆತ್ತವರು ಶಿಕ್ಷಿಣ ಪಡೆದಿದ್ದರೆ ಅವರಿಗೆ ಶಿಕ್ಷಣದ ಪ್ರಾಮುಖ್ಯತೆಯ ಅರಿವು ಇರುತ್ತದೆ. ಇಲ್ಲದಿದ್ದರೆ ಅವರು ಈ ಕುರಿತು ಅಜ್ಞಾನಿಗಳಾಗಿರುತ್ತಾರೆ. ಅಂತಹವುರು ಮಕ್ಕಳನ್ನು ಶಾಲೆಗೆ ತರುವಲ್ಲಿ ಉದಾಸೀನ ತೋರುತ್ತಾರೆ. ಮಹಿಳೆಯರಿಗೆ ಪುರುಷರಿಗೆ ಸಮಾನವಾದ ಸ್ಥಾನವಿಲ್ಲದಿರುವಲ್ಲಿ ಹೆಣ್ಣುಮಕ್ಕಳು ಶಾಲೆಗೆ ಬರುವುದು ಅತಿ ಅಪರೂಪವಾದ ವಿಷಯ. ಮತ್ತೆ ಕೆಲವು ನಂಬಿಕೆಗಳೂ ಶಿಕ್ಷಣದ ಸಾರ್ವತ್ರೀಕರಣದ ಮೇಲೆ ಪ್ರಭಾವಬೀರುತ್ತದೆ. ಉದಾಹರಣೆಗೆ, ಹೆಣ್ಣುಮಕ್ಕಳಿಗೆ ಶಿಕ್ಷಣದ ಅಗತ್ಯವಿಲ್ಲ ಎಂಬುದು ಕೆಲವರ ನಂಬಿಕೆ. ಅದು ನಂಬಿಕೆಯಷ್ಟೆ, ಸತ್ಯವಲ್ಲ. ಅವರು ಸತ್ಯಸಂಗತಿಯನ್ನು ಮನಗಂಡು ನಂಬಿಕೆಯನ್ನು ಬದಲಿಸಿಕೊಂಡರೆ ಮಾತ್ರ ಸಾರ್ವತ್ರೀಕರಣ ಸಾಧ್ಯವಿದೆ. ಸಾರ್ವತ್ರೀಕರಣವನ್ನು ಪ್ರಬಲವಾಗಿ ಪ್ರಭಾವಿಸುವ ಅಂಶ ಎಂದರೆ ಜಾತಿ ವ್ಯವಸ್ಥೆ. ಭಾರತದಂತಹ ದೇಶದಲ್ಲಿ ಇದು ಅತಿ ಪ್ರಬಲವಾಗಿದೆ. ಶಿಕ್ಷಣವೆಂಬುದು ಕೆಲವು ಜಾತಿಯವರಿಗೆ ಮಾತ್ರ ಸೀಮಿತವಾದುದು ಎಂಬ ನಂಬಿಕೆ

ಶಿಕ್ಷಣದ ಸಾರ್ವತ್ರೀಕರಣಕ್ಕೆ ಅತಿ ಅಪಾಯಕಾರಿಯಾದ ಅಡ್ಡಿ. ಸಂವಿಧಾನದ ಮೂಲಕವಾಗಿ ಈ ಮನೋಭಾವವನ್ನು ಹೋಗಲಾಡಿಸಲು ಸತತ ಪ್ರಯತ್ನಗಳಾಗುತ್ತಿವೆ. ಈ ಜಾತಿ ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ಕಾರಣದಿಂದಾಗಿ ಭಾರತದಲ್ಲಿ ಶಿಕ್ಷಣದಲ್ಲಿ ಅಸಮಾನತೆ ಅತಿ ಹೆಚ್ಚಿನ ಮಟ್ಟದಲ್ಲಿ ರಾರಾಜಿಸುತ್ತಿದೆ. ಈ ಮನೋಭಾವ ಬದಲಾಗದೇ, ಇದಕ್ಕೆ ಪೂರಕವಾದ ಅಂಶಗಳಲ್ಲಿ ಮಾರ್ಪಾಡು ಆಗದಿದ್ದರೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ಕಷ್ಟಸಾಧ್ಯವಾಗುತ್ತದೆ. ಈ ಕಾರಣದಿಂದಾಗಿ, ಸಮಾಜದ ಅಂಚಿನಲ್ಲಿರುವ, ದಲಿತರ, ಅಲ್ಪಸಂಖ್ಯಾತರ ಶಿಕ್ಷಣದಲ್ಲಿ ಭಾರತದಲ್ಲಿ ಏರು ಪೇರಾಗಿದೆ. ಕಳೆದ ಹಲವು ವರ್ಷಗಳಲ್ಲಿ ಸಮಾಜದ ಅಂಚಿನಲ್ಲಿರುವವರು, ಅಂದರೆ, ದಲಿತರು ಮತ್ತು ಶ್ರೇಣೀಕರಣದಲ್ಲಿ ಅತಿಕೆಳಗಿರುವವರು ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗಿದ್ದಾರೆ. ಇವರ ಶೈಕ್ಷಣಿಕ ಬೇಡಿಕೆಗಳು ಇತರ ಗುಂಪುಗಳ ಬೇಡಿಕೆಗಳಿಗಿಂತ ಭಿನ್ನವಾಗಿವೆ. ಹೀಗೆ ವಿಶೇಷ ಬೇಡಿಕೆಗಳನ್ನುಳ್ಳ ಗುಂಪುಗಳು ಯಾವುವು ಮತ್ತು ಅವರ ಬೇಡಿಕೆಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

## ಸೌಲಭ್ಯಗಳಿಂದ ವಂಚಿತರಾದ ಸಮಾಜದ ಅಂಚಿನಲ್ಲಿರುವ ಗುಂಪುಗಳು

ಈ ಗುಂಪಿನ ಜನರು ಸಾಮಾಜಿಕ ಜೀವನದಲ್ಲಿ ಪೂರ್ಣವಾಗಿ ಭಾಗವಹಿಸಲು ವಿಶೇಷವಾಗಿ ಹೋರಾಡಬೇಕಾಗುತ್ತದೆ. ಇವರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಕಾನೂನು ಬದ್ಧವಾಗಿ ಅಲಕ್ಷ್ಯಕ್ಕೆ ಒಳಗಾದವರು. ಈ ಅಲಕ್ಷ್ಯದಿಂದಾಗಿ ಇತರ ಋಣಾತ್ಮಕ ಪರಿಣಾಮಗಳನ್ನು ಅನುಭವಿಸುವಂತಹವರು. ಇವರು ಆರ್ಥಿಕ ಸುಭದ್ರತೆ, ಮಾನ–ಗೌರವ ಮತ್ತು ದೈಹಿಕ ರಕ್ಷಣೆಯ ದೃಷ್ಟಿಯಿಂದಲೂ ಕಡೆಗಣಿಸಲಾದವರು ಎಂದು ಹೇಳಬಹುದು. ಮತಧರ್ಮಗಳು, ದೇಶದಲ್ಲಿರುವ ಪುರುಷ ಪ್ರಾಧಾನ್ಯವುಳ್ಳ ಪರಿಸರ ಮತ್ತು ರಾಜಕೀಯಾತ್ಮಕ ಆರ್ಥಿಕತೆ ಇತ್ಯಾದಿ ಅಂಶಗಳು ನಿರ್ದಿಷ್ಟ ಸಮೂಹ ಅಥವಾ ವ್ಯಕ್ತಿಯನ್ನು ಅಂಚಿಗೆ ತಳ್ಳುವಂತೆ ಪ್ರಭಾವಿಸುತ್ತವೆ.

## ಸಮಾಜದ ಅಂಚಿನಲ್ಲಿರುವ ಗುಂಪುಗಳ ವಿಧಗಳು

ಇದು ವ್ಯಕ್ತಿಯು ಸಮಾಜದಲ್ಲಿ ಅರ್ಥಪೂರ್ಣವಾಗಿ ಭಾಗವಹಿಸದಂತೆ ಪರಿಣಮಿಸುತ್ತದೆ. ಸಮಾಜದ ಅಂಚಿನಲ್ಲಿರುವ ಗುಂಪುಗಳ ವಿಸ್ತಾರವಾದ ವಿಧಗಳನ್ನು ಗುರುತಿಸಲಾಗಿದೆ. ಅವೆಂದರೆ, ಸಾಮಾಜಿಕವಾಗಿ ವಂಚಿತರು, ಆರ್ಥಿಕವಾಗಿ ವಂಚಿತರು ಮತ್ತು ರಾಜಕೀಯವಾಗಿ ವಂಚಿತರು. ಇವುಗಳು ಒಂದಕ್ಕೊಂದು ಸಂಬಂಧಹೊಂದಿರುವಂತಹವು. ಒಂದರ ಪರಿಣಾಮ ಮತ್ತೊಂದರ ಮೇಲೆ ಆಗಬಹುದು. ಉದಾಹರಣೆಗೆ, ರಾಜಕೀಯವಾಗಿ ವಂಚಿತರಾದಾಗ ಅದು ಸಾಮಾಜಿಕ ಅವಕಾಶಗಳಿಂದ ವಂಚಿತವಾಗುವಂತೆ ಮಾಡುತ್ತದೆ.

ಸಾಮಾಜಿಕವಾಗಿ ವಂಚಿತವಾದ ಗುಂಪುಗಳ ಬೇಡಿಕೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಸಾಮಾಜಿಕ ತಳ್ಳಲ್ಪಡುವಿಕೆಯು ಒಂದು ರೀತಿ ಸಾಮಾಜಿಕ ತುಳಿತದಿಂದ ಹೊಸಗಿ ಹಾಕುವುದು ಅಥವಾ ವಿನಾಶ ಮಾಡುವ ಒಂದು ಪ್ರಕ್ರಿಯೆ. ಇದರಿಂದ ಸಮೂಹ ಮತ್ತು ವ್ಯಕ್ತಿ ಒಂದೇ ರೀತಿಯಲ್ಲಿ ಅನೇಕ ವಿಧದ ಸಾಮಾಜಿಕ ಕಾರ್ಯಗಳಿಂದ, ಸಾಮಾಜಿಕ ಸಂಬಂಧಗಳಿಂದ ದೂರ ಸರಿಯುವಂತಾಗುತ್ತದೆ. ಹೀಗೆ ಬಾಧಿತರಾದ ಜನರು ಸಮಾಜದಲ್ಲೇ ನಡೆಯುವ ಸಾಮಾನ್ಯ ಚಟುವಟಿಕೆಗಳಲ್ಲೂ ಭಾಗವಹಿಸುವುದನ್ನು ತಡೆದಂತಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ವ್ಯಕ್ತಿಗಳು ಬಲಿಷ್ಠರಿಂದ ಬಲವಂತವಾಗಿ ಶೋಷಣೆಗೊಳಗಾಗುತ್ತಾರೆ. ಅವರು ಸಾಮಾಜಿಕ ಅವಕಾಶಗಳಿಂದ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತಿತರ ಬೆಂಬಲಗಳಿಂದ ವಂಚಿತರಾಗುತ್ತಾರೆ. ಇದು ಸಾಮಾಜಿಕ ಪ್ರತ್ಯೇಕತೆಯನ್ನು ಉಂಟುಮಾಡಿ ಯಾವುದೇ ವಿಕಾಸಾತ್ಮಕ ಪ್ರಕ್ರಿಯೆಗಳಲ್ಲಿ ಭಾಗವಹಿಸದಂತೆ ಮಾಡುತ್ತದೆ.

i) **ಮಹಿಳೆಯರು :** ಮಹಿಳೆಯರು ಸಮಾಜದ ಅಂಚಿನಲ್ಲಿರುವ ಮತ್ತೊಂದು ವರ್ಗ. ಕೆಳಗಿನ ವರ್ಗ, ಜಾತಿಗಳಿಗೆ ಸೇರಿರುವ, ಅನಕ್ಷರಸ್ಥ ಮತ್ತು ಅತಿ ಬಡತನದಲ್ಲಿರುವ ಮಹಿಳೆಯರು ಇತರ ವರ್ಗದಲ್ಲಿರುವ ಮಹಿಳೆಯರಿಗಿಂತ ಹೆಚ್ಚು ಅಲಕ್ಷ್ಯಕ್ಕೆ ಒಳಗಾಗಿದ್ದಾರೆ.

ii) **ಅಸಾಮರ್ಥ್ಯವಿರುವವರು :** ಅಸಾಮರ್ಥ್ಯವಿರುವ ಜನರು ಶತಮಾನಗಳಿಂದ ಕುರುಡು ನಂಬಿಕೆಗಳು, ಅಪಾಯಕಾರಿ ಪಡಿಯಚ್ಚುಗಳು, ವಿವೇಕವಿಲ್ಲದ ಭಯಭೀತಿಗಳ ವಿರುದ್ಧ ಹೋರಾಟ ನಡೆಸುತ್ತಲೇ ಇದ್ದಾರೆ.

**iii) ಜನಾಂಗೀಯ ಅಲ್ಪಸಂಖ್ಯಾತರು :** ಪ್ರತಿಯೊಂದು ದೊಡ್ಡ ಸಮಾಜವು ಅನೇಕ ಜನಾಂಗೀಯ ಅಲ್ಪಸಂಖ್ಯಾತರನ್ನು ಹೊಂದಿರುತ್ತದೆ. ಅವರು ವಲಸಿಗರು, ದೇಶೀಯ ಅಥವಾ ಭೂಮಿಯಿಲ್ಲದ ಅಲೆಮಾರಿ ಸಮುದಾಯದವರು ಅಥವಾ ಮತೀಯ ಅಲ್ಪಸಂಖ್ಯಾತರಾಗಿ, ಬಹುಸಂಖ್ಯಾತರಿಂದ ಭಿನ್ನವಾದ ನಂಬಿಕೆ, ರಾಷ್ಟ್ರೀಯ ಅಥವಾ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವರು.

**iv) ಕೋಮು ಸಮೂಹಗಳು :** ಶುದ್ಧತೆ ಮತ್ತು ಮಾಲಿನ್ಯ ಎಂಬ ಭಾವನೆಯ ಆಧಾರದ ಮೇಲೆ ಕೋಮು ಅಥವಾ ಜಾತಿ ವ್ಯವಸ್ಥೆಯು ಕಟ್ಟುನಿಟ್ಟಾದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನೊಳಗೊಂಡಿದೆ. ಶ್ರೇಣಿಯ ಉತ್ತುಂಗದಲ್ಲಿ ಬ್ರಾಹ್ಮಣರು ಮತ್ತು ಶೂದ್ರ/ ದಲಿತ /ಪರಿಶಿಷ್ಟ ಜಾತಿಗಳು ಕೆಳಸ್ಥಾನದಲ್ಲಿರುವವರು ಎಂಬ ನಂಬಿಕೆ ಇದೆ. ಈಚೆಗೆ ಈ ವ್ಯವಸ್ಥೆ ಕ್ಷೀಣವಾಗುತ್ತಿದ್ದರೂ ಬಹಳ ಕಾಲದವರೆಗೆ ವರ್ಗದವರನ್ನು ದೈಹಿಕವಾಗಿ ಪ್ರತ್ಯೇಕವಾಗಿ ದೂರ ವಾಸಿಸುವ ವ್ಯವಸ್ಥೆ ಸರ್ವೇ ಸಾಧಾರಣವಾಗಿತ್ತು.

**v) ಬುಡಕಟ್ಟುಗಳು :** ಭಾರತದಲ್ಲಿ ಪರಿಶಿಷ್ಟ ಬುಡಕಟ್ಟಿನ ಜನ ಸಂಖ್ಯೆ 84.3 ಮಿಲಿಯನ್ ಇರಬಹುದು. ಅವರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಅನುಕೂಲ ವಂಚಿತ ಸಮೂಹ ಎಂದು ತಿಳಿಯಲಾಗಿದೆ. ಅವರು ಪ್ರಧಾನವಾಗಿ ಭೂಒಡೆತನ ಇಲ್ಲದವರು, ಸ್ವಲ್ಪ ಮಟ್ಟಿಗೆ ಜಲ, ನೆಲ ಮತ್ತು ಕಾಡಿನ ಸಂಪತ್ತು ಹೊಂದಿರುವವರು. ಅವರು ಹೆಚ್ಚಾಗಿ ವ್ಯವಸಾಯ ತೋಟ ಮತ್ತು ಕಾರ್ಖಾನೆಗಳಲ್ಲಿ ಕೆಲವೇ ಸಂದರ್ಭಗಳಲ್ಲಿ ದುಡಿಯುವ ಜನರಾಗಿರುತ್ತಾರೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

1. ಶಿಕ್ಷಣದಲ್ಲಿ ಸಾರ್ವತ್ರಿಕ ಭಾಗವಹಿಸುವಿಕೆಯ ಕಾರಕವಲ್ಲದುದು________________

   a) ಸಾಮಾಜಿಕ ಕಾರಕಗಳು

   b) ಶೈಕ್ಷಣಿಕ ಕಾರಕಗಳು

   c) ಸಾಂಸ್ಕೃತಿಕ ಕಾರಕಗಳು

   d) ವೈಯಕ್ತಿಕ ಕಾರಕಗಳು

2. ಸಮಾಜದ ಅಂಚಿನಲ್ಲಿರುವವರು ಎಂದರೆ________________

   a) ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಕಾನೂನು ಬದ್ಧವಾಗಿ ಅಲಕ್ಷ್ಯಕ್ಕೆ ಒಳಗಾದವರು.

   b) ಕಡಿಮೆ ಆದಾಯವುಳ್ಳವರು

   c) ಸಾಮಾಜಿಕವಾಗಿ ಕಡೆಗಣಿಸಲಾದವರು

   d) ಹಲವು ಸೌಲಭ್ಯಗಳಿಂದ ವಂಚಿತರಾದವರು

3. ಸವಾಜದ ಅಂಚಿನಲ್ಲಿರುವ ಗುಂಪುಗಳ ಸದಸ್ಯರಿಗೆ ಅನ್ವಯಿಸದ ವಿಷಯವೆಂದರೆ ________________

   a) ಬಲಿಷ್ಟರಿಂದ ಶೋಷಣೆಗೆ ಒಳಗಾಗುತ್ತಾರೆ

   b) ಸಮಾಜದಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುತ್ತಾರೆ

   c) ಸಾಮಾಜಿಕ ಪ್ರತ್ಯೇಕತೆಯನ್ನು ಅನುಭವಿಸುತ್ತಾರೆ

   d) ವಿಕಾಸಾತ್ಮಕ ಪ್ರಕ್ರಿಯೆಗಳಿಂದ ವಂಚಿತರಾಗುತ್ತಾರೆ

## 1.5.3.2. ವಂಚಿತ ಅಥವಾ ಸಮಾಜದ ಅಂಚಿನಲ್ಲಿರುವ ಗುಂಪಿನ ಜನರ ಬೇಡಿಕೆಗಳು

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬೇಡಿಕೆಗಳು.**

**ಬೇಡಿಕೆ 1**

ಈ ವರ್ಗದ ಬಹುತೇಕ ಮಕ್ಕಳು ಬಡ ಕುಟುಂಬದವರು ಮತ್ತು ಖಾಸಗಿ ಶಾಲೆಗಳಿಗೆ ಹೋಗಲಾಗದವರು. ಆದರೆ ಸರ್ಕಾರಿ ಶಾಲೆಗಳ ಸೌಲಭ್ಯಗಳಲ್ಲೂ ಕೊರತೆಯಿರುತ್ತದೆ. ಶಿಕ್ಷಣದ ಹಕ್ಕು ಕಾಯಿದೆ ಅನುಷ್ಠಾನ ನಂತರವೂ ಇದೇ ಪರಿಸ್ಥಿತಿ ಇದೆ. ಈ ಸಾಮಾಜಿಕ ಸಮೂಹಗಳಿಂದಲೂ ಭರಿಸಬಹುದಾದ ಗುಣಮಟ್ಟದ ಶಿಕ್ಷಣಕ್ಕೆ ಬೇಡಿಕೆ ಇದೆ, ಇದಕ್ಕಾಗಿ ಸರ್ಕಾರಿ ಶಾಲೆಗಳನ್ನು ಮೇಲೆತ್ತುವ ಅಥವಾ ಖಾಸಗಿ ಶಾಲೆಗಳು ಕೈಗೆಟುಕುವ ದರಕ್ಕೆ ಇಳಿಸುವುದು ಅಗತ್ಯವಾಗಿದೆ. ಬಡತನದ ರೇಖೆಗಿಂತ ಕೆಳಗಿರುವವರೂ ತಮ್ಮ ಮಕ್ಕಳನ್ನು ಉಚಿತ ಸರ್ಕಾರಿ ಶಾಲೆಗಳಿಗೆ ಕಳುಹಿಸವುದಕ್ಕಿಂತ, ಫೀಸು ಕಟ್ಟಬೇಕಾದ ಖಾಸಗಿ ಶಾಲೆಗಳಿಗೆ ಕಳುಹಿಸಬೇಕೆಂಬುವವರು ಹೆಚ್ಚಾಗುತ್ತಿದ್ದಾರೆ.

**ಬೇಡಿಕೆ 2**

ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಇಂಗ್ಲೀಷ್ ಭಾಷೆ ಪ್ರಾಬಲ್ಯ ಪಡೆಯುತ್ತಿದೆ. ಅಧಿಕೃತ ತ್ರಿಭಾಷಾ ಸೂತ್ರವು ಮರೆಯಾಗಿ ದ್ವಿಭಾಷಾವಾದ ಅಂದರೆ ಇಂಗ್ಲಿಷ್ ಮತ್ತು ಹಿಂದಿ ಅಥವಾ ಇಂಗ್ಲೀಷ್ ಮತ್ತು ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗುತ್ತದೆ. ಇಂಗ್ಲಿಷ್ ಮಾಧ್ಯಮ ಶಾಲೆಗಳು ಸರ್ಕಾರ ನಡೆಸುವ ಪ್ರಾದೇಶಿಕ ಭಾಷಾಮಾಧ್ಯಮದ ಶಾಲೆಗಳಿಗಿಂತ ಉನ್ನತವಾದುದೆಂದು ಪರಿಗಣಿತವಾಗುತ್ತದೆ. ಏಕೆಂದರೆ ಅವು ಉತ್ತಮ ಉದ್ಯೋಗಗಳಿಗೆ ಅನುವು ಮಾಡುತ್ತವೆ ಎಂಬುದು ಅನುಭವಕ್ಕೆ ಬರುತ್ತಿದೆ. ಕೆಳಹಂತದಲ್ಲಿರುವ ಬಹಳಷ್ಟು ಮಂದಿ ಆರ್ಥಿಕವಾಗಿ ಹಿಂದುಳಿದಿದ್ದರೂ ದುಬಾರಿಯಾದ ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಇಂಗ್ಲಿಷಿನಲ್ಲಿ ಮಾತನಾಡುವ ಸಾಮರ್ಥ್ಯವು ಅವರಿಗೆ ಗೌರವಯುತ ಉದ್ಯೋಗ ದೊರಕಿಸಿಕೊಳ್ಳುವಂತೆ ಮಾಡುವುದು ಎಂಬ ಭರವಸೆಯಲ್ಲಿರುತ್ತಾರೆ. ಈ ಪರಿಸ್ಥಿತಿಯಲ್ಲಿ ಮತ್ತೊಂದು ಅಡ್ಡಿ ಎಂದರೆ ಮನೆಯ ಭಾಷೆ ಮತ್ತು ಶಿಕ್ಷಣದ ಭಾಷೆ ಬೇರೆ ಬೇರೆಯಾಗಿರುವುದು ಭಾಷಾ ಅಲ್ಪಸಂಖ್ಯಾತರಿಗೆ ತೊಡಕಾಗಿದೆ. ಈ ಸನ್ನಿವೇಶದಲ್ಲಿ ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿ ಕಲಿತವರಿಗೂ ಉತ್ತಮ ವರಮಾನ ದೊರೆಯುವ ಉದ್ಯೋಗಗಳು ಸಿಗುವಂತಾಗಬೇಕು. ಕಡೆಯ ಪಕ್ಷ ಸೆಕೆಂಡರಿ ಹಂತದವರೆಗೆ ಮಾತೃಭಾಷಾ ಮಾಧ್ಯಮದಲ್ಲಿ ಕಲಿತರೆ ಮಾತ್ರ ಉತ್ತಮ ಶಿಕ್ಷಣ ಸಿಗಲು ಸಾಧ್ಯ ಎಂಬುದನ್ನು ಹೆತ್ತವರಿಗೆ ಮನಗಾಣಿಸಬೇಕು. ಶಾಲೆಗಳಲ್ಲಿ ಬಳಸುವ ಭಾಷೆ ಮಾಧ್ಯಮದ ಭಾಷೆಗಳ ನಡುವಿನ ವ್ಯತ್ಯಾಸ ಕಡಿಮೆ ಮಾಡಲು ಶಾಲೆಗಳಲ್ಲಿ ವ್ಯವಸ್ಥೆಯಾಗಬೇಕು. ವಿದ್ಯಾರ್ಥಿಗಳ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡು ಜಾಗತಿಕವಾಗಿ ಬೇಡಿಕೆ ಇರುವ ಭಾಷೆಯನ್ನು ಒಂದು ಭಾಷೆಯಾಗಿ ದೇಶೀಯ ಭಾಷೆಗಳು ಬೆಳೆಯುವ ಸನ್ನಿವೇಶವನ್ನು ಕಲ್ಪಿಸಬೇಕು.

**ಬೇಡಿಕೆ 3**

ಈ ಕೆಳವರ್ಗದ ಮಕ್ಕಳು ಅಧ್ಯಯನ ಮಾಡುವ ಹೆಚ್ಚಿನ ಶಾಲೆಗಳಲ್ಲಿ ಅನೇಕ ಏಕ ಮತ್ತು ದ್ವಿ ಉಪಾಧ್ಯಾಯ ಶಾಲೆಗಳಿವೆ. ಈ ಶಾಲೆಗಳು ಬಹು ದರ್ಜೆಗಳ ಬೋಧನೆ ಕೈಗೊಳ್ಳಬೇಕು, ಇದು ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯಗಳ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ. ಇದಲ್ಲದೆ ಅಲ್ಲಿ ಅಲ್ಪಾವಧಿ ಶಿಕ್ಷಕರೂ ಉಪ ಶಿಕ್ಷಕರೂ ಸೇವೆ ಸಲ್ಲಿಸುತ್ತಿದ್ದಾರೆ. ಉಪ ಶಿಕ್ಷಕರು ಎಂದರೆ ಪೂರ್ಣ ಅವಧಿ ಶಿಕ್ಷಕರಾಗಿದ್ದರೂ ಇತರ ಶಿಕ್ಷಕರಿಗಿಂತ ಕಡಿಮೆ ವೇತನ ತೆಗೆದುಕೊಳ್ಳುತ್ತಾರೆ ಮತ್ತು ಅವರು ಇತರ ಶಿಕ್ಷಕರಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿರುತ್ತಾರೆ. ದೊರಕುವ ಮಿತ ಹಣಕಾಸಿನ ಸೌಲಭ್ಯಗಳ ಅನುಸಾರ ಅಗತ್ಯ ಮೂಲ ಶಿಕ್ಷಣವನ್ನು ಪೂರೈಸಲು ನೇಮಕವಾಗಿರುತ್ತಾರೆ. ಅವರು ಬಹು ದರ್ಜೆಯ ಶಾಲೆಗಳಲ್ಲಿ ನೇಮಕಗೊಳ್ಳುತ್ತಾರೆ. ಈ ಸನ್ನಿವೇಶವನ್ನು ಸರಿಪಡಿಸಬೇಕು.

**ಬೇಡಿಕೆ 4**

ಈ ಶಾಲೆಗಳಲ್ಲಿ ಕನಿಷ್ಟ ಮೂಲ ಸೌಕರ್ಯಗಳೂ ಇಲ್ಲದಿರುವ ಸನ್ನಿವೇಶಗಳಿವೆ. ಮೂಲ ಸೌಕರ್ಯಗಳು ಮಾತ್ರವಲ್ಲದೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಬೇಕು.

**ಬೇಡಿಕೆ 5**

ದೂರದ, ವಿರಳ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ, ಅಲ್ಪ ಸಂಖ್ಯೆ ಮಕ್ಕಳು/ ವಿದ್ಯಾರ್ಥಿಗಳು ದೊರಕುವ ಕಡೆ ಸೆಕೆಂಡರಿ ಶಾಲೆಗಳನ್ನು ತೆರೆಯುವುದು ಕಷ್ಟವಾಗಬಹುದು. ಎರಡು ಆಯ್ಕೆಗಳನ್ನು ಜಾರಿ ಮಾಡಬಹುದು. ಅವೆಂದರೆ, ಸಣ್ಣ ವಸತಿ ಪ್ರದೇಶದಲ್ಲಿ ಶಾಲೆಗಳನ್ನು ಯೋಜಿಸುವುದು ಮತ್ತು ವಿರಳ ಜನಸಂಖ್ಯೆಯ ಹಲವು ಸಮೂಹಗಳು ಇರುವ ಕಡೆ ಸಾಕಷ್ಟು ಆಶ್ರಮ/ ವಸತಿ ಶಾಲೆಗಳನ್ನು ದಕ್ಷ ಶಿಕ್ಷಕರೊಂದಿಗೆ ಒದಗಿಸುವುದು.

**ಬೇಡಿಕೆ 6**

ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣಕ್ಕಾಗಿ, ಶಿಕ್ಷಣದ ಅವಕಾಶದಿಂದ ವಂಚಿತರಾದ ಸಮುದಾಯಗಳಿಂದ ಬರುವ ಮಕ್ಕಳಿಗೆ ವಸತಿನಿಲಯ ಅತಿ ಜರೂರಾಗಿರುತ್ತದೆ. ಈ ಅನುಕೂಲಗಳನ್ನು ವಿಸ್ತರಿಸಬೇಕು.

**ಬೇಡಿಕೆ 7**

ಅನೇಕ ಬುಡಕಟ್ಟು ಪ್ರದೇಶಗಳಲ್ಲಿ ಋತುಮಾನಕ್ಕನುಸಾರ ವಲಸೆ ಹೋಗುವುದು ಸಾಮಾನ್ಯ. ಆದ್ದರಿಂದ, ಆ ಕಾಲಕ್ಕೆ ಮಾತ್ರ ವಸತಿನಿಲಯ ಸೌಲಭ್ಯವನ್ನು ಎಲ್ಲಾ ಕ್ಷೇತ್ರಗಳಲ್ಲಿ, ಬ್ಲಾಕ್‌ಗಳಲ್ಲಿ ಒದಗಿಸಿ ಮಕ್ಕಳು ಹಳ್ಳಿಯಲ್ಲೇ (ಪೋಷಕರು ವಲಸೆಹೋದರೂ) ಉಳಿಯುವಂತೆ ಮಾಡಬೇಕು.

**ವಿಶೇಷವಾಗಿ ಬುಡಕಟ್ಟುಗಳವರ ಶಿಕ್ಷಣಕ್ಕಾಗಿ ಕೆಲವು ಬೇಡಿಕೆಗಳು ಹೀಗಿವೆ:**

- ಬುಡಕಟ್ಟು ಜನರ ಶ್ರೀಮಂತ ಸಂಸ್ಕೃತಿಯ ಅನನ್ಯತೆಯನ್ನು ಚಿತ್ರಿಸಿರುವಂತೆ, ಪಠ್ಯಕ್ರಮವನ್ನು, ಬೋಧನಾ ಸಾಮಗ್ರಿಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಪ್ರಾದೇಶಿಕ ಭಾಷೆಗೂ ಬದಲಿಸಿಕೊಳ್ಳುವ ಸೌಲಭ್ಯವಿರುವಂತೆ ಮಾಡುವುದು.
- ಬುಡಕಟ್ಟು ಯುವಜನತೆಗೆ ಉದ್ಯೋಗ ಖಾತರಿಯೊಂದಿಗೆ ಶಿಕ್ಷಕ ತರಬೇತಿ ಒದಗಿಸುವುದು ಅತಿ ಬೇಡಿಕೆಯಲ್ಲಿದೆ, ಆದ್ದರಿಂದ ಆಕೆ /ಆತ ಪರಿಣಾಮಕಾರಿಯಾಗಿ ಬೋಧಿಸಬಹುದು.
- ಬುಡಕಟ್ಟು ಕಲ್ಯಾಣ ಯೋಜನೆ, ಭತ್ಯೆಗಳ ಯೋಜನೆ, ಶಾಲೆಗಳಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿ ವೇತನ ನೀಡುವುದು, ಅಲ್ಲದೆ ತಾಂತ್ರಿಕ, ಔದ್ಯೋಗಿಕ ಮತ್ತು ಅರೆ ಔದ್ಯೋಗಿಕ ಕೋರ್ಸುಗಳಿಗೆ ಪ್ರಾಮುಖ್ಯತೆ ನೀಡಬೇಕು.
- ಶಾಸನಬದ್ಧ ಕ್ರಮಗಳು ಅವರನ್ನು ಅಂಚಿಗೆ ತಳ್ಳುವುದನ್ನು ನಿವಾರಿಸಬಹುದು ಮತ್ತು ಅವರ ಬಗ್ಗೆ ಸಾರ್ವಜನಿಕರ ಮನೋಭಾವ ಸುಧಾರಣೆಯಾಗಲು ಜಾಗೃತಿ ಮೂಡಿಸುವ ಪ್ರಯತ್ನಗಳಾಗಬೇಕು.

**ಮಹಿಳೆಯರ ಗುಂಪಿನ ಬೇಡಿಕೆಗಳು**

ಭಾರತದಲ್ಲಿ ಬಹಳಷ್ಟು ಹೆಣ್ಣುಮಕ್ಕಳು ಶಾಲೆಗೆ ಪ್ರವೇಶಿಸುವುದೇ ಒಂದು ಸವಾಲು. ಹಾಗೆ ಪ್ರವೇಶಿಸಿದರೂ ಏಳನೇ ತರಗತಿಯವರೆಗೆ ಶಾಲೆಯಲ್ಲಿ ಉಳಿಯುವುದು ಮತ್ತೂ ಹೆಚ್ಚಿನ ಸವಾಲು. ಇದರಲ್ಲಿ ತಾಯಂದಿರ ಶಿಕ್ಷಣ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ಗುಂಪಿನ ವಿಶೇಷ ಬೇಡಿಕೆಗಳು ಹೀಗಿವೆ:

**ಬೇಡಿಕೆ 1**

**ಹೆತ್ತವರಿಗಾಗಿ ಜಾಗೃತಿ ಕಾರ್ಯಕ್ರಮ**

ಹೆತ್ತವರು, ಅದರಲ್ಲೂ ತಾಯಿಯಂದಿರು ಶಿಕ್ಷಣ ಪಡೆದವರಾಗಿದ್ದರೆ ಅವರು ಶಿಕ್ಷಣದಿಂದ ಪಡೆದ ಶಕ್ತಿ ಸಾಮರ್ಥ್ಯ ಮತ್ತು ಒಳನೋಟಗಳನ್ನು ಬಳಸಿಕೊಂಡು ಅವರ ಮಕ್ಕಳು ಅದರಲ್ಲೂ ಹೆಣ್ಣುಮಕ್ಕಳು ಶಾಲೆಗೆ ಹೋಗುವಂತೆ ಮಾಡುವರು. ಹಾಗಾಗಿ ತಾಯಂದಿರಿಗೆ ಶಿಕ್ಷಣ ನೀಡುವುದು, ಇಲ್ಲವೇ ಅವರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಯೋಜಿಸಿ, ಶಿಕ್ಷಣದ ಅಗತ್ಯವನ್ನು ಮನವರಿಕೆ ಮಾಡುವುದು ಒಂದು ಬೇಡಿಕೆಯಾಗಿದೆ. ಹೆಚ್ಚು ಸ್ವತಂತ್ರವಾಗಿರುವ ಮಹಿಳೆಯರು ತಮ್ಮ ಮಕ್ಕಳ ಶಿಕ್ಷಣಕ್ಕೆ ಉತ್ತಮ ಸಾಧ್ಯತೆಗಳನ್ನು ಸೃಷ್ಟಿಸಬಹುದು.

**ಬೇಡಿಕೆ 2**

**ರೈತರ ಮತ್ತು ಇತರರ ಮನವೊಲಿಸುವಂತೆ ಮಾಡುವುದು**

ಹೆತ್ತವರು ರೈತರೋ ವ್ಯಾಪಾರಿಗಳೋ ಆಗಿದ್ದರೆ ಅವರು ಯಾವುದೇ ಉದ್ಯೋಗವನ್ನು ಅವಲಂಬಿಸಿಲ್ಲದಿರುವುದರಿಂದ, ಆ ವಿವಿಧ ಕ್ಷೇತ್ರಗಳಲ್ಲಿ ನೌಕರಿ ಪಡೆದು ಜೀವನವನ್ನು ಸುಧಾರಿಸಿಕೊಳ್ಳುವ ಮನೋಭಾವ ಮತ್ತು ಅಂತಹ ಅವಕಾಶಗಳ ಅರಿವು ಅವರಿಗಿರುವುದಿಲ್ಲ. ಹೀಗಾಗಿ, ಅವರು ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಬಂಡವಾಳ ಹಾಕುವುದರ ಅಗತ್ಯ ಕಡಿಮೆ ಎಂದು ಭಾವಿಸುತ್ತಾರೆ. ಶಿಕ್ಷಣದ ಈ ಬಂಡವಾಳ ಅವರಿಗೆ ದುಬಾರಿ ಎನಿಸುತ್ತದೆ. ಆ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡಿದರೆ ಉತ್ತಮ ಬದುಕು ಸಿಗುತ್ತದೆ ಎಂಬುದನ್ನು ಧೃಢ ಮಾಡಿಕೊಳ್ಳುವಂತೆ ಅವರ ಮನವೊಲಿಸುವ ಅಗತ್ಯವಿದೆ.

**ಬೇಡಿಕೆ 3**

**ಸುಲಲಿತವಾಗಿ ಶಾಲಾ ಜೀವನ ಸಾಗಿಸಲು ಅಗತ್ಯವಾದ ಭದ್ರತೆ ಮತ್ತು ಸೌಲಭ್ಯಗಳನ್ನು ಒದಗಿಸುವುದು.** ಇದಕ್ಕಾಗಿ ನಡೆದು ಹೋಗಬಹುದಾದಷ್ಟು ದೂರದಲ್ಲಿ ಶಾಲೆಗಳ ಲಭ್ಯತೆ ಮತ್ತು ಅಲ್ಲಿ ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಮಾಡಬೇಕು.ಶಾಲೆಯಲ್ಲಿರುವಾಗ, ಶಾಲೆಗೆ ಹೋಗಿಬರುವ ವೇಳೆಯಲ್ಲಿ ಅವರ ಹೆಣ್ಣು ಮಕ್ಕಳಿಗೆ ಸುರಕ್ಷತೆ ಒದಗಿಸಬೇಕು.

**ಬೇಡಿಕೆ 4**

**ಮಹಿಳಾ ಶಿಕ್ಷಕಿಯರ ನೇಮಕಾತಿ**

ಗ್ರಾಮೀಣ ಶಾಲೆಗಳಲ್ಲಿ ಅನೇಕ ಕಾರಣಗಳಿಗಾಗಿ ಗ್ರಾಮಸ್ಥರು ಇಂದಿಗೂ ತಮ್ಮ ಹೆಣ್ಣುಮಕ್ಕಳು ಹೋಗುವ ಶಾಲೆಗಳಲ್ಲಿ ಮಹಿಳೆಯರು ಶಿಕ್ಷಕರಾಗಿರಬೇಕೆಂದು ಬಯಸುತ್ತಾರೆ. ಹೀಗಾಗಿ, ಹೆಣ್ಣುಮಕ್ಕಳು ಹೆಚ್ಚು ಸಂಖ್ಯೆಯಲ್ಲಿರುವ ಶಾಲೆಗಳಲ್ಲಿ ಶಿಕ್ಷಣ ನೀಡಲು ಮಹಿಳೆಯರನ್ನೇ ನೇಮಿಸಬೇಕು. ಆ ಕಾರಣ, ಹುಡುಗಿಯರು ಹೆಚ್ಚು ಸಂಖ್ಯೆಯಲ್ಲಿರುವ ಶಾಲೆಗಳಲ್ಲಿ ಮಹಿಳಾ ಶಿಕ್ಷಕರನ್ನು ನೇಮಕ ಮಾಡಬೇಕು.

**ಬೇಡಿಕೆ 5**

**ಹೆಣ್ಣು ಮಕ್ಕಳ ದಾಖಲಾತಿ**

ಅನೇಕ ಸಂಶೋಧಕರ ಪ್ರಕಾರ, ಶಾಲೆಗೆ ಹೆಣ್ಣುಮಕ್ಕಳ ದಾಖಲಾತಿ ಮತ್ತು ಸಮಾಜದಲ್ಲಿ ಮಹಿಳೆಯ ಸ್ಥಾನ ಇವೆರಡರ ನಡುವೆ ಧನಾತ್ಮಕ ಸಂಬಂಧವಿದೆ. ಈ ಅಂಶವೇ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಶಿಕ್ಷಣದಲ್ಲಿ ಹೆಣ್ಣುಮಕ್ಕಳು ಹೆಚ್ಚು ಹೆಚ್ಚು ಭಾಗವಹಿಸುವಂತೆ ಪ್ರೋತ್ಸಾಹಿಸಲು ಕಾರಣವಾಗಿದೆ.

**ಬೇಡಿಕೆ 6**

**ಧನಾತ್ಮಕ ಮನೋಭಾವ**

ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ತೆರೆದಿಡುವುದರಿಂದ ಮಾತ್ರ ಅವರ ಶೈಕ್ಷಣಿಕ ಸಮಸ್ಯೆಗಳು ಪರಿಹಾರವಾಗದು.

ಕುಟುಂಬದಲ್ಲೂ ಅನೇಕ ಮಾರ್ಪಾಡುಗಳಾಗಬೇಕು. ಕೆಲವು ವರ್ಷಗಳ ಹಿಂದೆ ಶಾಲೆಯ ಎಲ್ಲಾ ವಿಷಯ ಪಠ್ಯ ಪುಸ್ತಕಗಳಲ್ಲಿರುವ ಚಿತ್ರಗಳಲ್ಲಿ ಹೆಂಗಸರನ್ನು ಅಡುಗೆಮನೆ /ಪೂಜಾ ಕೋಣೆ /ಹೂ ಕಟ್ಟುವ/ ಮಕ್ಕಳ ಪಾಲನೆ ಮಾಡುವ ಕೆಲಸಗಳಲ್ಲಿ ತೊಡಗಿರುವುದನ್ನು ತೋರಿಸಿದರೆ, ಗಂಡಸರನ್ನು ಕಛೇರಿ, ವ್ಯವಸಾಯ ಮುಂತಾದ ಸನ್ನಿವೇಶಗಳು ಚಿತ್ರಗಳಲ್ಲಿ ಬಿಂಬಿಸುತ್ತಿದ್ದವು. ಇವು ಸಮಾಜ ಅಪೇಕ್ಷಿಸುವಂತೆ ಹೆಂಗಸರು/ಗಂಡಸರು ವಹಿಸಬೇಕಾದ ಲಿಂಗಪಾತ್ರಗಳ ವ್ಯತ್ಯಾಸವನ್ನು ತಿಳಿಸುತ್ತಿತ್ತು. ಇಂದಿನ ಪಠ್ಯಪುಸ್ತಕಗಳಲ್ಲಿ ಇವುಗಳನ್ನು ಗಮನಕ್ಕೆ ತೆಗೆದುಕೊಂಡದ್ದರೂ ಜನರ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಗಳು ಆಗಿಲ್ಲ. ಭಾರತದ ಅನೇಕ ಕಡೆ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಹಾಗೇ ಇದೆ. ಕುಟುಂಬಗಳಲ್ಲಿ ಮತ್ತು ಸಮಾಜದಲ್ಲಿ ಸ್ತ್ರೀಯರು ವಹಿಸಬೇಕಾದ ಸೂಕ್ತ ಪಾತ್ರಗಳ ಬಗ್ಗೆ ನಿರ್ದಿಷ್ಟ ದೃಷ್ಟಿಕೋನಗಳಿವೆ. ಇದರಿಂದಾಗಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಹೂಡುವ ಹಣದ ಲಾಭ ಮದುವೆಯಾಗುವ ಗಂಡ ಅಥವಾ ಅವನ ಕುಟುಂಬಕ್ಕೆ ಹೋಗುತ್ತದೆ ಎಂಬ ಭಾವನೆಯೂ ಇಲ್ಲದಿಲ್ಲ. ಈ ಮನೋಭಾವಗಳನ್ನು ತಿದ್ದಬೇಕು. ಈ ವಿಷವರ್ತುಲವನ್ನು ಭೇದಿಸಿ ದೇಶದಲ್ಲಿ ಹೆಚ್ಚು ವಿದ್ಯಾವಂತ ಮಹಿಳೆಯರು ಇರುವಂತೆ ಮಾಡುವುದು ಇಂದಿನ ಬೇಡಿಕೆಯಾಗಿದೆ

## ಭಿನ್ನ ಸಾಮರ್ಥ್ಯ ಹೊಂದಿದ (ವಿಶೇಷ) ಮಕ್ಕಳ ಬೇಡಿಕೆಗಳು :

**ಬಡತನ ನಿರ್ಮೂಲನ**

ಅಸಾಮರ್ಥ್ಯವಿರುವ ಮಕ್ಕಳ ಬೇಡಿಕೆಗಳು ಇತರ ಯಾವುದೇ ಗುಂಪಿನ ಮಕ್ಕಳ ಬೇಡಿಕೆಗಳಿಗಿಂತ ಭಿನ್ನವಾಗಿರುತ್ತವೆ.

### ಬೇಡಿಕೆ 1

**ಬಡತನ ನಿರ್ಮೂಲನ :**

ಅಸಮರ್ಥತೆಯೊಂದಿಗೆ ಬಡತನದ ಸವಾಲುಗಳು ಜೊತೆಯಾಗುತ್ತವೆ. ಬಹುತೇಕ ಅಸಾಮರ್ಥ್ಯವುಳ್ಳ ಮಕ್ಕಳು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿಯೇ ಇರುತ್ತಾರೆ. ಭಾರತದಂತಹ ದೇಶದಲ್ಲಿ ಬಡತನವು ಅಸಾಮರ್ಥ್ಯವನ್ನು ಉಂಟು ಮಾಡುತ್ತದೆ, ಅಥವಾ ಅಸಾಮರ್ಥ್ಯವು ಬಡತನವನ್ನು ಉಂಟುಮಾಡುತ್ತದೆ. ಬಡತನ ಮತ್ತು ಅಸಾಮರ್ಥ್ಯವು ಒಂದುಗೂಡಿ "ಏಕಕಾಲಿದ ವಂಚಿತತೆಯನ್ನು" (Simultaneous deprivation) ಉಂಟುಮಾಡುತ್ತದೆ. ಇದರಿಂದ ನಿಯತವಾದ ಶಾಲಾ ಶಿಕ್ಷಣವೂ ಒಳಗೊಂಡಂತೆ ಸಮುದಾಯದ ವಿವಿಧ ಸಾಮಾನ್ಯ ದೈನಂದಿನ ಚಟುವಟಿಕೆಗಳಲ್ಲಿ ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಭಾಗವಹಿಸದಂತೆ ತಡೆಯುಂಟಾಗುವ ಸಾಧ್ಯತೆಗಳಿವೆ.

### ಬೇಡಿಕೆ 2

**ಸಾರ್ವಜನಿಕರಲ್ಲಿ ಆಳವಾಗಿ ಉಳಿದಿರುವ ಧೋರಣೆಗಳನ್ನು ಸುಧಾರಿಸುವ ಬೇಡಿಕೆ :**

ಸಾಮಾಜಿಕ ಸಂಘಟನೆಯಲ್ಲಿ ಅಸಾಮರ್ಥ್ಯವಿರುವವರನ್ನು ಕುರಿತ ಧೋರಣೆಯೇ ಅವರ ಪ್ರಗತಿಗೆ ಅಡ್ಡಿಯಾಗಿದೆ. ಗಂಭೀರವೂ ಎದ್ದು ಕಾಣುವಂತಹ ಊನತೆ ಇದ್ದರೆ ಅದು ಹರಡಬಹುದೆಂಬ ಭೀತಿ, ಇದರಿಂದ ಜನರಲ್ಲಿ ದುರ್ಬಲಗೊಂಡವರನ್ನು ಕುರಿತ ನಿರಾಕರಣೆಯ ಧೋರಣೆಗಳನ್ನು ಚಿವುಟಿ ಹಾಕಬೇಕು. ಕೆಲವೊಮ್ಮೆ ಧಾರ್ಮಿಕ ಸಂಸ್ಥೆಗಳು ಅಂತಹ ಧೋರಣೆಗಳಿಗೆ ಇಂಬು ನೀಡುವುದೂ ಉಂಟು. ಇಂತಹ ಧೋರಣೆಗಳಿದ್ದಲ್ಲಿ ಅಸಮರ್ಥ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಸೇರಿಸುವಲ್ಲಿ ತೊಂದರೆಯಾಗುವುದು. ಜನರ ಈ ರೀತಿಯ ಧೋರಣೆಗೆ ಅವರು ಚಿಂತಿಸುವ ರೀತಿ ಮತ್ತು ಕುರುಡು ನಂಬಿಕೆಗಳೇ ಕಾರಣ.

ಶಾಲಾ ಆಡಳಿತ ವರ್ಗವು ಅಂತಹ ಧೋರಣೆಗಳನ್ನು ಬದಲಿಸುವ ಗಂಭೀರವಾದ ಪ್ರಯತ್ನಗಳನ್ನು ಮಾಡಬೇಕು. ಆಗ, ಈ ಕುರಿತು ಇರುವ ಮೂಢನಂಬಿಕೆ ತೊಲಗಬಹುದು, ಅಂತಹ ಮಕ್ಕಳ ಬಗ್ಗೆ ಜನರಲ್ಲಿ ಈಗಲೂ ಇರುವ ಋಣಾತ್ಮಕ ಧೋರಣೆಗಳು ಬದಲಾಗಲು ಸಹಾಯವಾಗುವುದು, ಶಾಲಾ ವಾತಾವರಣವು

ಅಸಾಮರ್ಥ್ಯವಿರುವ ಮಕ್ಕಳನ್ನೂ ಸೇರಿದಂತೆ ಎಲ್ಲ ಮಕ್ಕಳಿಗೂ ಹಿತಕರವಾಗಬಹುದು.

**ಬೇಡಿಕೆ 3**

**ಸಾರ್ವಜನಿಕ ಶಿಕ್ಷಣ ಮತ್ತು ಪ್ರಸರಣ :**

ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣ ಮತ್ತು ಇತರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸಂವಿಧಾನಾತ್ಮಕ ಅವಕಾಶಗಳು ಮತ್ತು ಇತರ ಹಣಕಾಸು ವಿಷಯಕವಾದ ಮಾಹಿತಿಯ ಕೊರತೆ ಶಿಕ್ಷಕರಲ್ಲಿ ಮತ್ತು ಹೆತ್ತವರಲ್ಲಿ ಇಂದಿಗೂ ಇದೆ. ಹಾಗಾಗಿಯೇ ಪೋಷಕರು ಇಂತಹ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಹಿಂದಿದ್ದಾರೆ. ಈ ಮಾಹಿತಿಯನ್ನು ಶಿಕ್ಷಕರಿಗೆ ಮತ್ತು ಹೆತ್ತವರಿಗೆ ಮುಟ್ಟಿಸುವ ಜಾಗೃತಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಆಗಬೇಕಾಗಿದೆ.

**ಬೇಡಿಕೆ 4**

**ಶಿಕ್ಷಕ ತರಬೇತಿ :**

ಅಂತರ್ಗತ (inclusive) ಶಿಕ್ಷಣವನ್ನು ನಿರ್ವಹಿಸುವ ಶಿಕ್ಷಕರಿಗೆ ಪರಿಣಾಮಕಾರಿಯಾದ ತರಬೇತಿಯ ಬೇಡಿಕೆ ಇದೆ. ಶಾಲೆಗಳನ್ನು ಅಂತರ್ಗತ ಶಾಲೆಗಳಾಗಿ ಘೋಷಿಸಿಬಿಟ್ಟರೆ ಸಾಲದು. ಅಸಾಮರ್ಥ್ಯವಿರುವ ಮಕ್ಕಳ ಅಗತ್ಯಗಳನ್ನು ಕಂಡುಕೊಂಡು ಅವುಗಳಿಗೆ ಸ್ಪಂದಿಸಲು ಅಗತ್ಯವಾದ ಸಾಮರ್ಥ್ಯ, ಕೌಶಲ ಮತ್ತು ಮನೋಭಾವವನ್ನು ತುಂಬುವುದಕ್ಕಾಗಿ ಕಟ್ಟುನಿಟ್ಟಿನ ತರಬೇತು ನೀಡುವ ಬೇಡಿಕೆ ತುಂಬಾ ಮುಖ್ಯವಾದುದು. ಇಂತಹ ಶಿಕ್ಷಣವನ್ನು ಸಮರ್ಪಕವಾಗಿ ನೀಡುವ ಪ್ರಶಿಕ್ಷಕರ ಬೇಡಿಕೆಯೂ ಇದೆ.

**ಬೇಡಿಕೆ : 5**

**ಅಗತ್ಯಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಒದಗಿಸುವ ಬೇಡಿಕೆ :**

ಭಾರತದ ಬಹುತೇಕ ಶಾಲೆಗಳಲ್ಲಿ ಅಸಾಮರ್ಥ್ಯವಿರುವವರ ಶಿಕ್ಷಣಕ್ಕೆ ಅಗತ್ಯವಾದ ಸಾಮಗ್ರಿಗಳ ಪೂರೈಕೆ ಇಲ್ಲ. ಇದಲ್ಲದೆ ಅವರಿಗೆ ಅವಶ್ಯಕವಾದ ಇತರ ಅನುಕೂಲಗಳೂ ಇಲ್ಲ. ಅವರಿಗೆ ಮನೆಯಿಂದ ಶಾಲೆಗೆ ಸಂಚಾರ ಸೌಲಭ್ಯ, ಅವರಿಗೆ ತಕ್ಕುದಾದ ರೀತಿಯಲ್ಲಿ ಕಟ್ಟಡಗಳ ನಿರ್ಮಾಣ ಇವುಗಳ ಕೊರತೆ ಹಾಗೂ ಸಾಮಾಜಿಕ ಪೂರ್ವಾಗ್ರಹಗಳು ಅವರ ಶಿಕ್ಷಣಕ್ಕೆ ಅಡ್ಡಿಯಾಗಿವೆ. ಈ ಎಲ್ಲವನ್ನೂ ಸಕ್ರಮಗೊಳಿಸಬೇಕು. ಅಂಧರಿಗೆ ಬ್ರೈಲ್ ಲಿಪಿ, ಕಿವುಡರಿಗೆ ಶ್ರವಣ ಸಾಮಗ್ರಿಗಳು, ಇತರ ರೀತಿಯ ಅಸಾಮರ್ಥ್ಯವುಳ್ಳವರಿಗೆ ಇಳಿಜಾರು ನೆಲ, ಅಗತ್ಯವಾದ ಮೃದು ಸಾಮಗ್ರಿಗಳು ಇತ್ಯಾದಿ ಅಗತ್ಯವಿರುವ ಅನುಕೂಲತೆಗಳನ್ನು ಗ್ರಹಿಸಿ, ಅವುಗಳನ್ನು ಒದಗಿಸಿಕೊಡಬೇಕಾದ ಬೇಡಿಕೆ ಇದೆ. ಶಾಲೆಗಳಲ್ಲಿ ಸಂಯೋಜಿತ ಅಭ್ಯಾಸಗಳನ್ನು ಯಶಸ್ವಿಯಾಗಿ ಅಳವಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸಬೇಕಾಗಿದೆ.

**ಬೇಡಿಕೆ 6**

**ಮುಖ್ಯವಾಹಿನಿಗೆ ತರುವ ಪ್ರಕ್ರಿಯೆ :**

ಅಂದರೆ ಸಾಮಾನ್ಯ ಶಾಲಾ ತರಗತಿಗಳಿಗೆ ವಿಶೇಷ ವಿದ್ಯಾರ್ಥಿಯನ್ನು ಸಂಯೋಜಿಸುವುದು. ಈ ದಿಸೆಯಲ್ಲಿ ಅಡ್ಡಿಯಾಗಿರುವ ಋಣಾತ್ಮಕ ಧೋರಣೆ, ಮತ್ತು ಅಭ್ಯಾಸಗಳನ್ನು ಹೋಗಲಾಡಿಸಿ ಅಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರಬೇಕು. ಇದಕ್ಕಾಗಿ 14 ವರ್ಷ ತುಂಬುವವರೆಗೂ ಮಕ್ಕಳನ್ನು ನಿಯತವಾಗಿ ಶಾಲೆಗಳಿಗೆ ಕಳುಹಿಸಲು ಕುಟುಂಬಗಳಿಗೆ ಪ್ರೋತ್ಸಾಹಕಗಳನ್ನು ನೀಡಬೇಕು. ವರಮಾನ ಎಷ್ಟೇ ಆಗಿದ್ದರೂ ಎಲ್ಲಾ ಮಕ್ಕಳಿಗೂ ಮೆಟ್ರಿಕ್ ಪೂರ್ವ ಹಂತದವರೆಗೆ ವಿದ್ಯಾರ್ಥಿ ವೇತನ ನೀಡಬೇಕು, ಕೋರ್ಸ್‌ಗಳಿಗೆ ದಾಖಲಾತಿ, ಉಳಿಕೆಗೆ ಮತ್ತು ಯಶಸ್ವಿ ಮುಗಿಸುವಿಕೆಯ ಬಗೆಗೆ ಸೂಕ್ಷ್ಮ ಯೋಜನೆ ಮತ್ತು ಪರಿಶೀಲನೆ ಅಗತ್ಯ. ಮುಂದುವರಿದ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳನ್ನು ಹೆಚ್ಚಿಸಲು ಕಾರ್ಯಕ್ರಮಗಳನ್ನು ಯೋಜಿಸಬೇಕು. ವಿದ್ಯಾರ್ಥಿ ವಸತಿಗೃಹಗಳ

ಪೂರೈಕೆಯ ಬೇಡಿಕೆಯಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ಪೂರೈಸಬೇಕು.

## ನಗರದ ಕೊಳಗೇರಿಗಳಲ್ಲಿರುವ ಮಕ್ಕಳ ಬೇಡಿಕೆಗಳು

ಕೊಳಚೆ ಪ್ರದೇಶಗಳ ಕುರಿತು ಕೇಳಿದ್ದೀರಲ್ಲವೇ? ನಗರ ಭಾಗದ ಕೊಳಚೆ ಪ್ರದೇಶಗಳೆಂದರೇನು? ಎಂದಾದರೂ ರೈಲ್ವೆ ನಿಲ್ದಾಣದಲ್ಲಿ, ರೈಲ್ವೆ ಹಳಿಗಳ ಅಕ್ಕ ಪಕ್ಕ ಗಮನಿಸಿದ್ದೀರಾ? ದೊಡ್ಡ ನಗರಗಳಿಗೆ ಪ್ರತಿದಿನ ವಲಸಿಗರು ಬರುತ್ತಾರೆ, ಅವರಿಗೆ ಯಾವ ರೀತಿಯ ಆಸರೆಯೂ ಇರುವುದಿಲ್ಲ. ಅವರು ಇಲ್ಲಿ ಹೊಸದಾದ ಜೀವನ ಆರಂಭಿಸಬೇಕಾಗುತ್ತದೆ. ಶಿಕ್ಷಣವಿಲ್ಲದೆ, ಉದ್ಯೋಗ ಪಡೆಯಲು ಸೂಕ್ತ ಸಾಮರ್ಥ್ಯಗಳೂ ಇಲ್ಲದ ಬದುಕು ಇವರದು. ಇಂತಹವರಿಂದ ಕೊಳಗೇರಿಗಳು ಉದ್ಭವಿಸುವವು. ಇವರು ಅಲ್ಲಿ ಇಲ್ಲಿ ಬಿದ್ದಿರುವ ಅವಶೇಷಗಳನ್ನು ಆಯ್ದು ರಕ್ಷಣೆಗಾಗಿ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಅವರು ಯಾರೊಂದಿಗೂ ಯಾವುದೇ ಸ್ನೇಹಜಾಲವಿಲ್ಲದೆ ನಿರ್ಗತಿಕರಾದವರಿವರು. ಇವರ ಮಕ್ಕಳನ್ನು ಶಾಲೆಗೆ ಕಳುಹಿಸುವ ಸಾಧ್ಯತೆಗಳೇ ಕಡಿಮೆ. ಹೊತ್ತುಹೊತ್ತಿಗೆ ಆಹಾರ, ನೀರು, ವಸತಿಗಳನ್ನು ಒದಗಿಸಿಕೊಳ್ಳುವುದೇ ಇವರ ಮೂಲಭೂತ ಸವಾಲು. ಅಂತಹುದರಲ್ಲಿ ಶಿಕ್ಷಣದ ಆಲೋಚನೆಯಾದರೂ ಎಲ್ಲಿ? ಇಂತಹವರಿಗೆ ಹತ್ತಿರದಲ್ಲಿ ಶಾಲೆಗಳಿದ್ದರೂ ಅನೇಕ ಅಡಚಣೆಗಳಿರುತ್ತವೆ.

### ಬೇಡಿಕೆ 1

ಅಸ್ತಿತ್ವದಲ್ಲಿರುವ ನಗರದ ಕೊಳಗೇರಿ ಜನರಿಗೆ ಅಲ್ಲಿರಲು ಅಧಿಕಾರಾವಧಿಯನ್ನು (tenure) ನಿಗದಿ ಮಾಡುವುದರಿಂದ ಶಾಲೆಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. ಹೊಸದಾಗಿ ಕೊಳಗೇರಿ ನಿರ್ಮಿಸಿಕೊಳ್ಳುವವರು ಮೊದಲೇ ಅಧಿಕಾರಾವಧಿಯ ಅಪ್ಪಣೆ ಪಡೆದರೆ, ಶಿಕ್ಷಣ, ನೀರು ಪೂರೈಕೆ, ಸುರಕ್ಷಿತ ಮನೆ, ಚರಂಡಿ ವ್ಯವಸ್ಥೆ ಇಂತಹ ಆರೋಗ್ಯ ದೃಷ್ಟಿಯಿಂದ ಮುಖ್ಯವಾದ ಸೌಲಭ್ಯಗಳನ್ನು ಮೊದಲಿಗೇ ಪಡೆಯಬಹುದು.

### ಬೇಡಿಕೆ 2

ಹೊಸ ವಾಸ್ತವ್ಯ ಹೂಡುವ ಜನರಿಗೆ ಅಧ್ಯಕ್ಷರು ಅಧಿಕಾರಾವಧಿಯ ಭರವಸೆಯ ಕ್ರಮಗಳನ್ನು ಶೀಘ್ರವಾಗಿ ಒದಗಿಸುವ ಕ್ರಮವನ್ನು ಆರಂಭಿಸಬೇಕು. ಹೊಸ ಕೊಳಗೇರಿಗಳನ್ನು ಶೀಘ್ರವಾಗಿ ದಾಖಲು ಮಾಡುವಲ್ಲಿ ಮತ್ತು ಆ ಕೆಲಸ ಮುಂದುವರೆಯುವಲ್ಲಿ ನಿಗಾ ವಹಿಸುವುದು ಅಗತ್ಯ.

### ಬೇಡಿಕೆ 3

ನಗರ ಭಾಗದ ಶಾಲೆಗಳಿಗೂ ಗ್ರಾಮ ಭಾಗದ ಶಾಲೆಗಳಿಗೂ ನಡುವೆ ಇರುವ ಕಂದಕ ಕಡಿಮೆ ಮಾಡಲು ಹಳ್ಳಿಯ ಶಾಲೆಗಳಲ್ಲೂ ಸೌಕರ್ಯಗಳನ್ನು ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕು. ಇದರಿಂದ ಗ್ರಾಮದಿಂದ ನಗರ ಭಾಗಕ್ಕೆ ವಲಸೆ ಹೋಗುವುದನ್ನು ಕಡಿಮೆ ಮಾಡಿ ಕೊಳಗೇರಿಗಳನ್ನು ಕಡಿಮೆ ಮಾಡಬೇಕು.

### ಬೇಡಿಕೆ 4

ಕೊಳಗೇರಿಗಳ ಕುರಿತು ನಡೆದಿರುವ ಅಧ್ಯಯನ ಕಡಿಮೆ ಇರುವುದರಿಂದ ಕೊಳಗೇರಿಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸುವುದು ಕಷ್ಟವಾಗುವುದು. ಏಕೆಂದರೆ ನಗರ ಭಾಗದ ಸರ್ವೇಕ್ಷಣೆಗಳ ಮಾಹಿತಿ ದೊರಕುವುದು ಕಡಿಮೆ. ಇಂದು ಇಲ್ಲಿದ್ದವರು ನಾಳೆ ಇರುವುದಿಲ್ಲ. ಆದ್ದರಿಂದ ಈ ಬಗೆಗೆ ಪ್ರತ್ಯೇಕ ಸಂಶೋಧನೆ ಅಗತ್ಯ. ಕೊಳಗೇರಿಗಳಲ್ಲಿನ ಶಿಕ್ಷಣವನ್ನು ಶಕ್ತಿಯುತಗೊಳಿಸಲು ಸಂಬಂಧಿಸಿದ ಅಂಶಗಳನ್ನು ಸಂಶೋಧನೆಗಳ ಮೂಲಕ ಕಂಡುಕೊಳ್ಳಬೇಕು.

### ಬೇಡಿಕೆ 6

ಜಾಗತಿಕ ಶಿಕ್ಷಣ ಯೋಜನೆಗಳಲ್ಲಿ ಕೊಳಗೇರಿಗಳನ್ನು ನಿರ್ದಿಷ್ಟ ಗುರಿಯ ಕ್ಷೇತ್ರಗಳೆಂದು ಗುರುತಿಸುವ ಅಗತ್ಯವಿದೆ. ಆದ್ದರಿಂದ ಶಿಕ್ಷಣಕ್ಕೆ ಸಮಗ್ರ ವಿಧಾನವನ್ನು ಒದಗಿಸಲು ಅನುವು ಮಾಡಿಕೊಡುವ ಶಿಕ್ಷಣದ ಯೋಜನೆಗಳಿಗೆ

ಬೇಡಿಕೆ ಇದೆ. ಇದರಿಂದ ಇಲ್ಲಿಯ ಮಕ್ಕಳನ್ನು ಸಾಮಾನ್ಯ ಶಾಲೆಗಳಲ್ಲಿ ಸಮನ್ವಯಗೊಳಿಸಲು ಮತ್ತು ನಗರದ ಕೊಳಗೇರಿಗಳಿಗಾಗಿ ಪ್ರತ್ಯೇಕ ಮಾದರಿಯ ಶೈಕ್ಷಣಿಕ ಉಪಕ್ರಮಗಳನ್ನು ಮುಖ್ಯ ವಾಹಿನಿಗೆ ತರಲು ಸಾಧ್ಯವಾಗುವುದು. ಇದು ನಮ್ಯತೆಯುಳ್ಳ, ಕಡಿಮೆ ಬಂಡವಾಳದೊಂದಿಗೆ ನಡೆಸಿಕೊಂಡು ಹೋಗಬಹುದಾದ, ಹಾಗೂ ಪರಿಣಾಮಕಾರಿಯಾದ ಬೋಧನಾ ಮಾದರಿಗಳನ್ನು ಹುಡುಕುವ ಅಗತ್ಯವನ್ನುಂಟು ಮಾಡುತ್ತದೆ

**ಬೇಡಿಕೆ 7**

ಶಾಲೆ ಮತ್ತು ಶಿಕ್ಷಣ ಎಂಬುದು ಕೊಳಗೇರಿ ಮಕ್ಕಳಿಗೆ ಮಹತ್ವವಾದದ್ದು ಎಂದು ಅನಿಸದಿರಬಹುದು, ಅಪೌಷ್ಟಿಕತೆ, ಅಸ್ವಸ್ಥತೆ, ಅಭದ್ರತೆ, ನಿರ್ಲಕ್ಷ್ಯ ಮತ್ತು ಬಾಲಕಾರ್ಮಿಕ ಇಂತಹ ಸವಾಲುಗಳನ್ನು ಅವರು ಎದುರಿಸುತ್ತಿರುತ್ತಾರೆ. ಹಾಗಾಗಿ, ಈ ಜವಾಬ್ದಾರಿಯನ್ನು ಸಮಾಜ ಮತ್ತು ಸರ್ಕಾರವೇ ಕೈಗೆತ್ತಿಕೊಂಡು ನಿರ್ವಹಿಸಬೇಕಾಗಿದೆ.

**ಬೇಡಿಕೆ 8**

ಕೊಳಗೇರಿ ಮಕ್ಕಳಿಗೂ ಅನ್ವಯವಾಗುವ ಶಿಕ್ಷಣದ ಹಕ್ಕನ್ನು ಗಂಭೀರವಾಗಿ ಪರಿಗಣಿಸಿ ಇವರ ಅಗತ್ಯಗಳನ್ನು ಪರಿಗಣಿಸುವಲ್ಲಿ ಆಗಬೇಕಾದ ಎಲ್ಲ ಮಾರ್ಪಾಡುಗಳನ್ನೂ ಮಾಡಬೇಕಾಗಿದೆ.

## ಅಲ್ಪಸಂಖ್ಯಾತರ ಬೇಡಿಕೆಗಳು :

## ಮತೀಯ ಅಲ್ಪಸಂಖ್ಯಾತರ ಬೇಡಿಕೆಗಳು

103ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಜಿಲ್ಲೆಗಳಿವೆಯೆಂದು ಅಲ್ಪಸಂಖ್ಯಾತರ ವ್ಯವಹಾರ ಸಚಿವಾಲಯವು ಗುರುತಿಸಿದೆ. ಅಲ್ಲಿಯ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆ ಶೇ25ಕ್ಕೂ ಮೀರಿದೆ. ಇವುಗಳಲ್ಲಿ ಹಿಂದೂ,ಸಿಖ್, ಕ್ರೈಸ್ತ ಮುಂತಾದ ಭಿನ್ನಮತೀಯ ಅಲ್ಪಸಂಖ್ಯಾತ ಜಿಲ್ಲೆಗಳಿವೆ. ಇವುಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದವರೇ ಶೈಕ್ಷಣಿಕವಾಗಿ ಹೆಚ್ಚು ಹಿಂದುಳಿದವರು.

**ಬೇಡಿಕೆ 1**

ಅಲ್ಪಸಂಖ್ಯಾತ ಹರೆಯದ ಹೆಣ್ಣುಮಕ್ಕಳ ಶಿಕ್ಷಣವನ್ನು ಸುಗಮಗೊಳಿಸಲು ಮತ್ತು ಪ್ರಚಾರಗೊಳಿಸಲು, ಉನ್ನತ ಪ್ರಾಥಮಿಕ, ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಶಾಲೆಗಳನ್ನು ಅಲ್ಪಸಂಖ್ಯಾತರು ಇರುವ ಪ್ರದೇಶಗಳಲ್ಲಿ ಅದೂ ಮುಸ್ಲಿಂ ಜನಾಂಗ ಇರುವ ಪ್ರದೇಶಗಳಿಗೆ ಹತ್ತಿರವಾಗಿ ಒದಗಿಸಬೇಕಾದ ಅಗತ್ಯ ಇದೆ.

**ಬೇಡಿಕೆ 2**

ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಗಳಿಂದಾಗುವ ಅಡಚಣೆಗಳನ್ನು ನಿವಾರಿಸುವ ಸನ್ನಿವೇಶವಿಲ್ಲದಿದ್ದರೆ ಅಲ್ಪಸಂಖ್ಯಾತರ ಹೆಣ್ಣುಮಕ್ಕಳ ಸಾಮಾಜಿಕ ಚಲನಶೀಲತೆ ಕನಸಾಗಿಯೇ ಉಳಿಯಬಹುದು. ಇದನ್ನು ಸಾಧಿಸಲು ಶಿಕ್ಷಕರು ಶೈಕ್ಷಣಿಕ ಆಡಳಿತಗಾರರು, ಕಾರ್ಯಕ್ರಮ ನಿರ್ವಾಹಕರು ಹೆಚ್ಚಿನ ಮಟ್ಟದಲ್ಲಿ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ.

**ಬೇಡಿಕೆ 3**

ವಿದ್ಯಾರ್ಥಿವೇತನ ರೀತಿಯ ಪ್ರೋತ್ಸಾಹಕ ಕಾರ್ಯಕ್ರಮದಲ್ಲಿ ಸಾಮಾನ್ಯವಾಗಿ ಮತೀಯ ಅಲ್ಪಸಂಖ್ಯಾತರನ್ನು ಸೇರಿಸಿರುವುದಿಲ್ಲ. ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ ಎಂದು ಗುರುತಿಸಲಾಗಿರುವ ಜಿಲ್ಲೆಗಳಲ್ಲಿ ಉನ್ನತ ಪ್ರಾಥಮಿಕ ಹಂತದಲ್ಲಿ ಮತೀಯ ಅಲ್ಪಸಂಖ್ಯಾತರ ಮಕ್ಕಳಿಗೆ ವಿದ್ಯಾರ್ಥಿ ವೇತನದ ಬೇಡಿಕೆ ಇದೆ.

**ಬೇಡಿಕೆ 4**

ಅಗತ್ಯವಿರುವ ಪ್ರದೇಶದ ಶಾಲೆಗಳಲ್ಲಿ ಬೇಡಿಕೆ ಆಧರಿಸಿ ಉರ್ದು ಮಾಧ್ಯಮಕ್ಕೆ ಅವಕಾಶ ಮಾಡಿಕೊಡಬೇಕು. ಇತರ ಮುಸ್ಲಿಂ ಕೇಂದ್ರಿತ ಭಾಗಗಳಲ್ಲಿ ಬೇಡಿಕೆ ಇರುವಲ್ಲಿ ಉರ್ದು ಭಾಷೆಯನ್ನು ಒಂದು ಬೋಧನಾ ವಿಷಯವಾಗಿ ಪ್ರೋತ್ಸಾಹಿಸಬಹುದು.

**ಬೇಡಿಕೆ 5**

ಮದರಸದ ಮಕ್ಕಳನ್ನು ಪ್ರತಿನಿತ್ಯ ಶಾಲೆಗಳಿಗೆ ಕರೆತಂದು ಅವರು ಮುಖ್ಯವಾಹಿನಿಗೆ ಸೇರಲು ಅಗತ್ಯವಾದ ಸೇತುಬಂಧ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆ ಮಾಡುವುದು. ಅಗತ್ಯವಿದ್ದರೆ ಸಮಾನ ದರ್ಜೆಯ ಶಿಕ್ಷಣವನ್ನು ಖಾತರಿಪಡಿಸಲು ಸಾಮಾನ್ಯ ಪಠ್ಯಕ್ರಮವನ್ನು ಜಾರಿಗೊಳಿಸುವುದು. ಶಾಲೆಗೆ ಹೋಗಲಾಗದ ಹಿರಿಯ ಹೆಣ್ಣು ಹುಡುಗಿಯರಿಗೆ ಮತೀಯ ಬೋಧನೆ ನಂತರ ಶಾಲೆ/ ಬೋಧನ ಕೇಂದ್ರ (ಶಿಕ್ಷಕರ ವ್ಯವಸ್ಥೆಯೊಂದಿಗೆ) ಗಳನ್ನು ಏರ್ಪಡಿಸಿ ಕನಿಷ್ಠ ನಾಲ್ಕು ತಾಸಿನ ಕಾಲ ಅದೇ ಅವರಣದಲ್ಲಿ ಅಪರಾಹ್ನ/ ಮಧ್ಯಾಹ್ನ ಅಥವಾ ಮತೀಯ ಭೋಧನೆಯ ಮುನ್ನ ಅಥವಾ ಅನಂತರ ತರಗತಿಗಳನ್ನು ನಡೆಸಬಹುದು.

## ಭಾಷಾ ಅಲ್ಪಸಂಖ್ಯಾತರ ಬೇಡಿಕೆಗಳು

ವಿದ್ಯಾರ್ಥಿಗಳಿಗೆ ಅವರ ಭಾಷೆಯಲ್ಲಿ ಶಿಕ್ಷಣವನ್ನು ಒದಗಿಸುವ ಮೂಲತತ್ವವನ್ನು ಆದಷ್ಟೂ ಪ್ರಾಮಾಣಿಕವಾಗಿ ಜಾರಿಗೊಳಿಸಬೇಕು. ಭಿನ್ನ ಭಾಷಾ ಹಿನ್ನೆಲೆಯಲ್ಲಿರುವ ವಲಸಿಗರು ದಟ್ಟವಾಗಿರುವ ಪ್ರದೇಶಗಳಲ್ಲಿ ಮತ್ತು ಗಡಿಪ್ರದೇಶಗಳಲ್ಲಿ ಇದು ಮುಖ್ಯವಾದ ಸಮಸ್ಯೆಯಾಗಿರುತ್ತದೆ. ಮುಸ್ಲಿಮರಿಗೆ, ಕೆಲವು ರಾಜ್ಯಗಳಲ್ಲಿ ಉರ್ದು ಮಾಧ್ಯಮಕ್ಕೆ ಗಮನ ಅಗತ್ಯವಾಗುತ್ತದೆ. ಈ ಭಾಷೆಗಳಲ್ಲಿಯೇ ಪಠ್ಯಕ್ರಮ ಮತ್ತು ಪಠ್ಯಪುಸ್ತಕ ರಚನೆಯನ್ನು ದೃಢಪಡಿಸಬೇಕು. ಬೋಧನಾ–ಕಲಿಕಾ ಉಪಕರಣಗಳ ತಯಾರಿಕೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಅಂತಹ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಬಳಸಿದ ಭಾಷೆಗಳಲ್ಲಿ ನಿಯಮಿತವಾಗಿ ನಡೆಸಬೇಕು. ಸ್ಥಳೀಯ ಹಿನ್ನೆಲೆಯ ಭಾಷೆಗೆ ಹೊರತಾಗಿ ಬೇರೆ ಭಾಷಾ ಮಾಧ್ಯಮದಲ್ಲಿ ಬೋಧನೆ ಜರಗುವ ಶಾಲೆಗಳಲ್ಲಿ ಅಗತ್ಯವಿರುವ ವಿಶೇಷ ಶೈಕ್ಷಣಿಕ ಸಹಾಯವನ್ನು ಒದಗಿಸಬೇಕು ಹಾಗೂ ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲೆಲ್ಲ ಆ ನಿರ್ದಿಷ್ಟ ಭಾಷಾ ಹಿನ್ನೆಲೆಯಿರುವ ಹೆಚ್ಚಿನ ಸಂಪನ್ಮೂಲ ವ್ಯಕ್ತಿಗಳನ್ನು ಒದಗಿಸಬೇಕು.

ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು, ಶಾಲೆಯ ಭಾಷೆಯಾಗಬೇಕು ಎಂಬ ಅಂಶವನ್ನು ಪುನಃ ಪುನಃ ಸ್ಥಾಪಿಸಿ ಕಾರ್ಯಗತಗೊಳಿಸಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ಕೆಳಗೆ ವಿವಿಧ ಗುಂಪುಗಳನ್ನೂ ಮತ್ತು ಬೇಡಿಕೆಗಳನ್ನೂ ಕೊಡಲಾಗಿದೆ. ಗುಂಪುಗಳಿಗೆ ಅನುಗುಣವಾದ ಬೇಡಿಕೆಗಳನ್ನು ಹೊಂದಿಸಿರಿ.

| | ಗುಂಪುಗಳು | ಬೇಡಿಕೆಗಳು | |
|---|---|---|---|
| ಅ | ಭಾಷಾ ಅಲ್ಪಸಂಖ್ಯಾತರ ಬೇಡಿಕೆಗಳು | ಮುಖ್ಯವಾಹಿನಿಗೆ ಸೇರಲು ಅಗತ್ಯವಾದ ಸೇತುಬಂಧ ಶಿಕ್ಷಣವನ್ನು ಒದಗಿಸುವ ವ್ಯವಸ್ಥೆ ಮಾಡುವುದು. | 1 |
| ಆ | ಮತೀಯ ಅಲ್ಪಸಂಖ್ಯಾತರ ಬೇಡಿಕೆಗಳು | ಶಿಕ್ಷಣದ ಅವಕಾಶದಿಂದ ವಂಚಿತರಾದ ಸಮುದಾಯಗಳಿಂದ ಬರುವ ಮಕ್ಕಳಿಗೆ ವಸತಿ ನಿಲಯಗಳನ್ನು ಒದಗಿಸುವುದು | 2 |
| ಇ | ನಗರದ ಕೊಳಗೇರಿಗಳಲ್ಲಿರುವ ಮಕ್ಕಳ ಬೇಡಿಕೆಗಳು | ವಿದ್ಯಾರ್ಥಿಗಳಿಗೆ ಅವರ ಭಾಷೆಯಲ್ಲಿ ಶಿಕ್ಷಣವನ್ನು ಒದಗಿಸುವ ಮೂಲತತ್ವವನ್ನು ಆದಷ್ಟೂ ಪ್ರಾಮಾಣಿಕವಾಗಿ ಜಾರಿಗೊಳಿಸುವುದು | 3 |
| ಈ | ಮಹಿಳೆಯರ ಗುಂಪಿನ ಬೇಡಿಕೆಗಳು | ವಿಶೇಷ ಸಂಶೋಧನಾ ಅಧ್ಯಯನವನ್ನು ಕೈಗೊಂಡು ಅವರನ್ನು ಕುರಿತ ಮಾಹಿತಿ ಮತ್ತು ಅವರಿಗೆ ಸೂಕ್ತವಾದ ಬೋಧನಾ ವಿಧಾನಗಳನ್ನು ಗುರುತಿಸಿಕೊಳ್ಳುವುದು. | 4 |

| | | | |
|---|---|---|---|
| ಉ | ಭಿನ್ನ ಸಾಮರ್ಥ್ಯ ಹೊಂದಿದ (ವಿಶೇಷ) ಮಕ್ಕಳ ಬೇಡಿಕೆಗಳು | ಹೆತ್ತವರಿಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು. | 5 |
| ಊ | ಪರಿಶಿಷ್ಟ ಜಾತಿ ಮತ್ತು ಜನಾಂಗದವರ ಬೇಡಿಕೆಗಳು | ಅಡ್ಡಿಯಾಗಿರುವ ಋಣಾತ್ಮಕ ಧೋರಣೆ, ಮತ್ತು ಅಭ್ಯಾಸಗಳನ್ನು ಹೋಗಲಾಡಿಸಿ ಅಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು | 6 |

## 1.5.4. ಸಾರಾಂಶಿಸೋಣ

- ಭಾರತವು ವೈವಿಧ್ಯತೆಯ ಪ್ರದೇಶವಾದರೂ ಈ ವೈವಿಧ್ಯತೆಯನ್ನು ಹಲವು ಸಂದರ್ಭಗಳಲ್ಲಿ ಧನಾತ್ಮಕವಾಗಿ ಪರಿಗಣಿಸಲಾಗಿಲ್ಲ.
- ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಿಭಿನ್ನತೆಗಳ ಕಾರಣದಿಂದಾಗಿ ವಿವಿಧ ರೀತಿಯ ಗುಂಪುಗಳು ರೂಪುಗೊಂಡಿದ್ದು ಈ ಗುಂಪುಗಳಿಗೆ ಶೈಕ್ಷಣಿಕವಾದ ವಿಭಿನ್ನ ಅಗತ್ಯಗಳಿವೆ.
- ಈ ಗುಂಪುಗಳೆಂದರೆ ಪರಿಶಿಷ್ಟ ಜಾತಿ ಮತ್ತು ಪಂಗಡದವರು, ಕೆಳಮಟ್ಟದ ಸಮಾಜೋ ಆರ್ಥಿಕ ಪರಿಸ್ಥಿತಿಯಲ್ಲಿರುವ ಮಹಿಳೆಯರು, ಅಸಾಮರ್ಥ್ಯವಿರುವವರು, ಅಲ್ಪಸಂಖ್ಯಾತರು, ಕೊಳಗೇರಿ ನಿವಾಸಿಗಳು.
- ಇವರೆಲ್ಲರ ಶೈಕ್ಷಣಿಕ ಬೇಡಿಕೆಗಳು ವಿಭಿನ್ನವಾಗಿದ್ದು ಅವುಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ಅವುಗಳನ್ನು ಪೂರೈಸಬೇಕಾಗಿದೆ.

## 1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

1-d, 2- a, 3- b

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ಅ–3, ಆ–1, ಇ–4, ಈ–5, ಉ–6, ಊ–2

## 1.5.6. ಘಟಕಾಂತ್ಯ ಅಭ್ಯಾಸಗಳು

1. ಭಾರತದಲ್ಲಿರುವ ವಿವಿಧ ಸಾಮಾಜಿಕ ಸಮೂಹಗಳ ಶೈಕ್ಷಣಿಕ ದಾಖಲಾತಿಗೆ ಇರುವ ಮೂರು ಪ್ರಧಾನ ನಿರ್ಧಾರಕಗಳನ್ನು ವಿವರಿಸಿ.
2. ವಿವಿಧ ಸಾಮಾಜಿಕ ಸಮೂಹಗಳ (ಈ ಘಟಕದಲ್ಲಿರುವ) ವಿವಿಧ ಬೇಡಿಕೆಗಳನ್ನು ತಿಳಿಸಿರಿ.
3. ವಿಶೇಷ ಶೈಕ್ಷಣಿಕ ಬೇಡಿಕೆಗಳುಳ್ಳ ವಿವಿಧ ಗುಂಪುಗಳನ್ನು ಮತ್ತು ಅವರ ಬೇಡಿಕೆಗಳನ್ನು ವಿವರಿಸಿ.

## 1.5.7. ಪರಾಮರ್ಶನ ಸೂಚಿ


1. Understanding the Demand for Schooling, David N. Plank, Michigan State University
2. Equity and Quality in Education, Supporting Disadvantaged Students And Schools, OECD (2012), Equity and Quality in Education: Supporting Disadvantaged Students and Schools, OECD Publishing. http://dx.doi.org/10.1787/9789264130852-en

3. SarvaShikshaAbhiyan: ProgrammeFor Universal Elementary Education In India, Department of Elementary Education and Literacy, MHRD, Government of India, New Delhi, 2000. (Copy Right: MHRD, Government of India)

4. Challenging Issues of Tribal Education in India, by, Dr. KabitaKumariSahuLecturer in Economics, North Orissa University Baripada, Odisha, IOSR Journal of Economics and Finance (IOSR-JEF) e-ISSN: 2321-5933, p-ISSN: 2321-5925.Volume 3, Issue 2. Ver. II (Mar-Apr. 2014), PP 48-52 www.iosrjournals.org www.iosrjournals.org

5. Inequalities in Economic and Educational Status in Social Groups in India: Evidences from Village Study in Uttar Pradesh, by, I. C. Awasthi and Puneet Kumar ShrivastavGiri Institute of Development Studies, Giri Institute of Development Studies (15. July 2015)

6. School characteristics, socio-economic status and culture as determinants of primary school enrolment in India by, Janine Huisman, Uma Rani &Jeroen Smits, NiCE Working Paper 10-109, September 2010

http://www.uis.unesco.org/datacentre/pages/default.aspx

7.

8. UNESCO institute of statistics: Out-of-School Children and Adolescents Left Behind on the Road to Learning Opportunities for All

9. UNESCO (2010). Reaching the Marginalized. EFA Global Monitoring Report. Paris: UNESCO.

10. Educational Statistics at a Glance, Government of India Ministry of Human Resource Development Department of School Education & Literacy New Delhi-2016

11. Explaining Educational Differentials, Towards a Formal Rational Action Theory by Richard Breen and John H. Goldthorpe(1997)

*************

# ಬ್ಲಾಕ್–1 : ಸಮಕಾಲೀನ ಭಾರತ

## ಘಟಕ–6 : ಶಿಕ್ಷಣದ ಮೇಲೆ ನಗರೀಕರಣ, ಕೈಗಾರಿಕೀಕರಣ, ಜಾಗತೀಕರಣ, ಆಧುನೀಕರಣ, ಆರ್ಥಿಕ ಉದಾರೀಕರಣ, ಡಿಜಿಟಲೀಕರಣ – ಇವುಗಳ ಪ್ರಭಾವ

**ಘಟಕದ ರಚನೆ :**


1.6.1. ಕಲಿಕಾ ಉದ್ದೇಶಗಳು

1.6.2. ಪೀಠಿಕೆ

1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.6.3.1. ಕೈಗಾರಿಕೀಕರಣ, ನಗರೀಕರಣ ಮತ್ತು ಅವುಗಳ ಪರಿಣಾಮ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳಿ–1

1.6.3.2. ಆಧುನೀಕರಣ, ಆರ್ಥಿಕ ಉದಾರೀಕರಣ ಮತ್ತು ಅವುಗಳ ಪರಿಣಾಮ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

1.6.3.3. ಜಾಗತೀಕರಣ, ಖಾಸಗೀಕರಣ ಮತ್ತು ಡಿಜಿಟಲೀಕರಣ ಮತ್ತು ಅವುಗಳ ಪರಿಣಾಮ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

1.6.4. ಸಾರಾಂಶಿಸೋಣ

1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

1.6.6. ಘಟಕಾಂತ್ಯ ಅಭ್ಯಾಸಗಳು

1.6.7. ಪರಾಮರ್ಶನ ಸೂಚಿ


## 1.6.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದ ಮೇಲೆ ಪರಿಣಾಮ ಉಂಟುಮಾಡುವ ವಿವಿಧ ಅಂಶಗಳನ್ನು ವಿವರಿಸುವರು;
- ಶಿಕ್ಷಣದ ಮೇಲೆ ಜಾಗತೀಕರಣ, ಕೈಗಾರಿಕೀಕರಣ, ನಗರೀಕರಣ, ಖಾಸಗೀಕರಣ ಮತ್ತು ಡಿಜಿಟಲೀಕರಣದ ಪರಿಣಾಮಗಳನ್ನು ವಿಶ್ಲೇಷಿಸುವರು; ಮತ್ತು
- ಶಿಕ್ಷಣದ ಮೇಲೆ ಜಾಗತೀಕರಣ, ಕೈಗಾರಿಕೀಕರಣ, ನಗರೀಕರಣ, ಖಾಸಗೀಕರಣ ಮತ್ತು ಡಿಜಿಟಲೀಕರಣದ ಪರಿಣಾಮಗಳ ನಿಹಿತಾರ್ಥಗಳನ್ನು ವಿಶ್ಲೇಷಿಸುವರು.

## 1.6.2. ಪೀಠಿಕೆ

ಶಿಕ್ಷಣದ ಇತಿಹಾಸದ ಪುಟಗಳನ್ನು ತಿರುವಿ ನೋಡಿದರೆ, ಶಿಕ್ಷಣ ನಡೆದುಬಂದ ದಾರಿಯಲ್ಲಿ ಅನೇಕ ಅಂಶಗಳು ಶಿಕ್ಷಣದ ಗತಿಯನ್ನು ನಿರ್ಧರಿಸಿರುವ ಅಂಶಗಳು ಗೋಚರವಾಗುತ್ತವೆ. ನಾವು ಹಿಂದಿನ ಘಟಕದಲ್ಲಿ ಗಮನಿಸಿದಂತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಶಿಕ್ಷಣದ ನಡೆಯನ್ನು ವಿಶೇಷವಾಗಿ ನಿರ್ಧರಿಸುತ್ತವೆ.

ಇದರ ಜೊತೆಗೆ ರಾಜಕೀಯ ಹಾಗೂ ಆರ್ಥಿಕ ಅಂಶಗಳೂ ಶಿಕ್ಷಣದ ಅನೇಕ ವಿಷಯಗಳ ನಿರ್ಧಾರಕಗಳಾಗಿ ಪಾತ್ರವಹಿಸುತ್ತವೆ. ಈ ಎಲ್ಲ ಅಂಶಗಳ ಜೊತೆಗೆ ಹಲವಾರು ಐತಿಹಾಸಿಕ ವಿದ್ಯಮಾನಗಳೂ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತವೆ. ಅಂತಹವುಗಳಲ್ಲಿ ನಗರೀಕರಣ, ಕೈಗಾರಿಕೀಕರಣ, ಖಾಸಗೀಕರಣ, ಡಿಜಿಟಲೀಕರಣ, ಜಾಗತೀಕರಣ ಮುಂತಾದ ವಿದ್ಯಮಾನಗಳು ಭಾರತಕ್ಕೆ ಸಂಬಂಧಪಟ್ಟಂತೆ ಮಾತ್ರವಲ್ಲದೆ ಇಡೀ ಜಾಗತಿಕವಾಗಿ ಪ್ರಮುಖ ಬದಲಾವಣೆಗಳನ್ನು ಉಂಟುಮಾಡಿವೆ. ಹೀಗಾಗಿ ಇವುಗಳ ಕಡೆಗೆ ನಮ್ಮ ಗಮನ ಅಗತ್ಯ. ಈ ಘಟಕದಲ್ಲಿ ಈ ಎಲ್ಲ ಪರಕಲ್ಪನೆಗಳನ್ನೂ ಶಿಕ್ಷಣದ ಮೇಲೆ ಅವು ಉಂಟುಮಾಡಿದ ಪರಿಣಾಮಗಳನ್ನೂ ತಿಳಿಯೋಣ.

## 1.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.6.3.1. ಕೈಗಾರಿಕೀಕರಣ, ನಗರೀಕರಣ ಮತ್ತು ಅವುಗಳ ಪರಿಣಾಮಗಳು

ಮನುಷ್ಯ ಬೇಟೆಗಾಗಿ ತಾನೇ ತಯಾರಿಸಿಕೊಂಡ ಸರಳ ಸಾಧನಗಳಿಂದ ಮುಂದೆ ಪ್ರಗತಿ ಆಗುತ್ತಾ ಚಕ್ರಗಳನ್ನು ಕಂಡುಹಿಡಿದ. ಅಂತಿಮವಾಗಿ ಮನುಷ್ಯನಿಗೆ ಅಗತ್ಯವಾದ ಸಲಕರಣೆಯನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ಆರಂಭಿಸಿದ. 'ಕೈಗಾರಿಕೀಕರಣ' ಪದವು ಕೈಯಿಂದಾಗುವ ಉತ್ಪಾದನೆಯಿಂದ ಯಂತ್ರಗಳಿಂದಾಗುವ ಉತ್ಪಾದನೆ ಎಂಬ ಬದಲಾವಣೆಯ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಕಳೆದ ಶತಮಾನದಿಂದಲೂ ಅನೇಕ ಮಂದಿ ನಗರಗಳಿಗೆ ಹೋಗುವುದನ್ನು ನೀವು ನೋಡಿದ್ದೀರಾ! ಗ್ರಾಮ ಭಾಗದಿಂದ ನಗರ ಭಾಗಕ್ಕೆ ಜನರು ವಾಸಕ್ಕಾಗಿ ಹೋಗುತ್ತಿರುವುದರಿಂದ ಕ್ರಮೇಣ ನಗರ ಭಾಗದಲ್ಲಿ ನೆಲೆಸುವ ಜನರ ಸಂಖ್ಯೆಯ ಪ್ರಮಾಣ ಹೆಚ್ಚುತ್ತಾ ಹೋಗಿದೆ. ಈ ವಿದ್ಯಮಾನವನ್ನೇ 'ನಗರೀಕರಣ' ಎನ್ನುವರು.

ಜನರು ಗ್ರಾಮ ಭಾಗದಿಂದ (ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಿಂದ) ದೊಡ್ಡ ನಗರಗಳ ಕಡೆಗೆ ವಲಸೆ ಹೋಗುವ ಪ್ರಕ್ರಿಯೆ ನಗರೀಕರಣ ಎಂಬುದನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ 'ನಗರ ಮತ್ತು ಗ್ರಾಮ' ಎಂಬ ಪದಗಳನ್ನು ಅರ್ಥ ಮಾಡಿಕೊಳ್ಳುವುದು ಸೂಕ್ತವೆನಿಸುತ್ತದೆ. 2011ರ ಜನಗಣತಿಯ ಮಾಹಿತಿಯ ಅಡಿಯಲ್ಲಿ "ಗ್ರಾಮ ಮತ್ತು ನಗರಗಳಲ್ಲಿ ಜನಸಂಖ್ಯೆಯ ವಿತರಣೆ" ಎಂಬ ಶೀರ್ಷಿಕೆಯ ಅಡಿಯಲ್ಲಿ ನಗರ ಮತ್ತು ಗ್ರಾಮ ಎಂಬ ಪದಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

**ನಗರ ಘಟಕ (ಅಥವಾ ಪಟ್ಟಣ)**

ಮುನಿಸಿಪಾಲಿಟಿ, ನಗರಸಭೆ, ಕಂಟೋನ್ಮೆಂಟ್ ಬೋರ್ಡ್ ಇವುಗಳನ್ನು ಹೊಂದಿರುವ, ಶಾಸನಬದ್ಧ ಪಟ್ಟಣ ಎಂದು ಗುರುತಿಸಲ್ಪಟ್ಟ ಅಥವಾ ನಿರ್ದಿಷ್ಟ ಮಾನದಂಡಗಳಿಂದ ಗುರುತಿಸಲಾದ ಎಲ್ಲಾ ಸ್ಥಳಗಳೂ ನಗರ ಅಥವಾ ಪಟ್ಟಣ ಪ್ರದೇಶಗಳು. ಈ ಮಾನದಂಡಗಳು ಹೀಗಿವೆ: 5000 ಕನಿಷ್ಟ ಜನಸಂಖ್ಯೆಯಿರುವುದು, ವ್ಯವಸಾಯಕ್ಕೆ ಹೊರತಾದ ಕೆಲಸಗಳಲ್ಲಿ ತೊಡಗಿರುವ ಕಡೇಪಕ್ಷ ಶೇಕಡ 75 ಪ್ರಮಾಣದಲ್ಲಿ ಪುರುಷರು ಮುಖ್ಯ ಕೆಲಸಗಾರರಾಗಿರುವುದು, ಒಂದು ಚದರ ಕಿಲೋಮೀಟರ್‌ಗೆ ಕನಿಷ್ಟ 400 ಮಂದಿಯ ಜನಸಾಂದ್ರತೆ ಇರುವುದು.

(ಆಕರ–census 2011- Provisional Population totals -India)

**ಗ್ರಾಮ ಪ್ರದೇಶಗಳು**

ನಗರ ಪ್ರದೇಶ ಎಂದು ಪರಿಗಣಿತವಾಗದ ಎಲ್ಲ ಗ್ರಾಮ ಪ್ರದೇಶಗಳು.

ನಗರೀಕರಣವೆಂದರೆ ಪಟ್ಟಣ ಮತ್ತು ನಗರಗಳಲ್ಲಿ ವಾಸಿಸುವ ಜನರ ಪ್ರಮಾಣದಲ್ಲಿ ಹೆಚ್ಚಳ ಎಂದು ಹೇಳಬಹುದು. ಇದು ಗ್ರಾಮಪ್ರದೇಶಗಳಿಂದ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಜನರು ವರ್ಗಾವಣೆಗೊಳ್ಳುವುದರಿಂದ ಜನಸಂಖ್ಯೆಯಲ್ಲಿ ಆಗುವ ಹೆಚ್ಚಳ ಮತ್ತು ಸಂಬಂಧಿತ ಬದಲಾವಣೆಗಳ ಪ್ರಕ್ರಿಯೆಗಳನ್ನು ಒಳಗೊಳ್ಳುತ್ತದೆ. ಇದನ್ನು ನಗರ ಮತ್ತು ಪಟ್ಟಣಗಳಲ್ಲಿ ವಾಸಿಸುವ ಜನರ ಸಂಖ್ಯೆಯಲ್ಲಿ ಪ್ರಗತಿಪರ ಹೆಚ್ಚಳವೆಂದೂ ಆ ಬದಲಾವಣೆಗೆ ಪ್ರತಿ ಸಮಾಜವು ಮಾಡಿಕೊಳ್ಳುವ ಮಾರ್ಪಾಡುಗಳು ಎಂದೂ ಹೇಳಬಹುದು (2011ರ ಭಾರತದ ಜನಗಣತಿ)

ಕೈಗಾರಿಕೀಕರಣ ಮತ್ತು ನಗರೀಕರಣ ಎರಡೂ ಭಿನ್ನ ಪರಿಕಲ್ಪನೆಗಳು. ಇವು ಪರಸ್ಪರ ಒಂದನ್ನೊಂದು ಪ್ರಭಾವಿಸುತ್ತವೆ. ಕೈಗಾರಿಕೀಕರಣ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳೆರಡೂ ಪ್ರಾಧಾನ್ಯತೆಯನ್ನು ಪಡೆದವು ಈ ಕಾಲದಲ್ಲಿ ಅನೇಕ ಹೊಸ ಅವಿಷ್ಕಾರಗಳಾದವು. ನಗರಗಳಲ್ಲಿ ಅನೇಕ ಕಾರ್ಖಾನೆಗಳು ಸ್ಥಾಪಿತವಾಗಿ, ಸಹಜವಾಗಿಯೇ ಅವು ಉದ್ಯೋಗ ಅವಕಾಶಗಳನ್ನು ನೀಡುವ ಕೇಂದ್ರಗಳಾದವು. ಹೀಗೆ ಜನರು ಗ್ರಾಮ ಪ್ರದೇಶಗಳಿಂದ ನಗರಗಳತ್ತ ಚಲಿಸಲಾರಂಬಿಸಿದರು. ವಾಸ್ತವವಾಗಿ ಈ ದೊಡ್ಡ ಕಾರ್ಖಾನೆಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ವಲಸೆ ಆರಂಭವಾಯಿತು. ಇಂದಿನ ದಿನಗಳಲ್ಲೂ ಉತ್ತಮ ವಸತಿ, ಶಿಕ್ಷಣ, ಕೆಲಸ ಮತ್ತು ಇತರ ಸೌಲಭ್ಯಗಳನ್ನು ಅರಸಿಕೊಂಡೇ ಜನರು ನಗರಗಳಿಗೆ ವಲಸೆ ಬರುತ್ತಾರೆ. ಹೀಗೆ ನಗರೀಕರಣವು ವಾಸ್ತವವಾಗಿ ಕೈಗಾರಿಕೀಕರಣದ ಉಪ–ಉತ್ಪನ್ನವಾಗಿದೆ. ದೊಡ್ಡ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಯಾದುದರಿಂದ ಬಹುತೇಕ ನಗರೀಕರಣವಾಯಿತು. ಕೈಗಾರಿಕೀಕರಣವು ಹೀಗೆ ನಗರೀಕರಣಕ್ಕೆ ಚಾಲಕ ಶಕ್ತಿಯಾಯಿತು.

## ಶಿಕ್ಷಣದ ಮೇಲೆ ಔದ್ಯೋಗೀಕರಣ ಮತ್ತು ನಗರೀಕರಣಗಳ ಪರಿಣಾಮ

ಕಾರ್ಖಾನೆಗಳ ಸ್ಥಾಪನೆಯು ನಗರಗಳ ಬೆಳವಣಿಗೆಗೆ ಕಾರಣವಾಯಿತು. ಆ ಸಮಯದಲ್ಲಿ ಕಾರ್ಖಾನೆಗಳಿಗೆ ಕೌಶಲ್ಯಪೂರಿತ ಮತ್ತು ಅಕ್ಷರಸ್ಥ ಕೆಲಸಗಾರರ ಬೇಡಿಕೆಯುಂಟಾಯಿತು. ಆದ್ದರಿಂದ ನಗರೀಕರಣ ಅಕ್ಷರತೆಯ ಬದಲಾವಣೆಯನ್ನು ತಂದಿತು. ಅಕ್ಷರತೆಯ ದರವು ಗ್ರಾಮಸ್ಥರಲ್ಲಿ ಹೆಚ್ಚಾಯಿತು. ಹೆಚ್ಚಿನ ಅಕ್ಷರತೆಯ ದರ ಮತ್ತು ಉದ್ಯೋಗಾವಕಾಶಗಳಿಂದ ಅನೇಕ ಹಳ್ಳಿಗಳು ಪಟ್ಟಣದ ಸ್ಥಾನಕ್ಕೇರಿದವು. ಈ ವಿದ್ಯಮಾನದಿಂದಾಗಿ ಭಾರತದಲ್ಲಿ ನಗರ ವಲಯದಲ್ಲಾದ ಸುಧಾರಣೆಗಿಂತ ಗ್ರಾಮ ಭಾಗಗಳಲ್ಲಿ ಎರಡು ಪಟ್ಟು ಸಾಕ್ಷರತೆಯ ದರ ಹೆಚ್ಚಾಯಿತು. 2011ರಲ್ಲಿ ಇದ್ದ ಸಾಕ್ಷರತೆಯ ದರ ವ್ಯತ್ಯಾಸವು 21.2 ಶೇಕಡ ಪ್ರಮಾಣದಿಂದ 2011ರಲ್ಲಿ ಹಳ್ಳಿಗಳಲ್ಲಿನ ಸಾಕ್ಷರತೆಯ ದರ ವ್ಯತ್ಯಾಸವು 16.1% ರಷ್ಟು ಇಳಿಯಿತು. ಜನರು ಹೆಚ್ಚು ಆಧುನೀಕರಣಗೊಂಡರು, ಅಂದರೆ ಉಡುಪು, ಅಭ್ಯಾಸಗಳು ತಂತ್ರಜ್ಞಾನದ ಬಳಕೆ, ಮಹಿಳಾ ಜಾಗೃತಿ, ಆಧುನಿಕ ಸಂಚಾರ ಸೌಲಭ್ಯ ಮತ್ತು ಸಂಪರ್ಕಗಳೆಲ್ಲಾ ಬದಲಾದವು. ನಗರೀಕರಣದಿಂದ ಮಹತ್ವದ ಬದಲಾವಣೆಗಳಾದವು. ಹಳ್ಳಿಗರು ನಗರ ಭಾಗಕ್ಕೆ ವಲಸೆ ಬಂದರು, ನಗರಗಳಲ್ಲಿ ಉದ್ಯೋಗ ಸೌಲಭ್ಯ, ಸಂಚಾರ ಮತ್ತು ಸಂವಹನ ಸೌಲಭ್ಯಗಳು, ಶೈಕ್ಷಣಿಕ ಸೌಲಭ್ಯಗಳು ಹೆಚ್ಚಾದವು. ಜೀವನ ಮಟ್ಟದಲ್ಲಿ ಏರಿಕೆ ಉಂಟಾಯಿತು.

ನಗರೀಕರಣ ಮತ್ತು ಔದ್ಯೋಗೀಕರಣಗಳು ಪರಸ್ಪರ ಪ್ರಭಾವಿಸುವ ವಿದ್ಯಮಾನಗಳು. ಇದು ಭಾರತದಲ್ಲಿ ಆಧುನಿಕ ಶಾಲಾ ವ್ಯವಸ್ಥೆಯನ್ನು ತಂದಿತು. ಮೂಲತಃ ಭಾರತಕ್ಕೆ (ಇಂಗ್ಲಿಷ್ ಭಾಷೆ ಸೇರಿದಂತೆ) ಈ ವ್ಯವಸ್ಥೆಯನ್ನು ಲಾರ್ಡ್ ಥಾಮಸ್ ಮೆಕಾಲೆ 1930 ರಲ್ಲಿ ಜಾರಿಗೆ ತಂದನು. ತತ್ವಮೀಮಾಂಸೆ ಅಥವಾ ತತ್ವಶಾಸ್ತ್ರ ಇತ್ಯಾದಿ ವಿಷಯಗಳು ಅನಗತ್ಯವೆಂದು ಪರಿಗಣಿತವಾಗಿ, "ಆಧುನಿಕ "ವಿಷಯಗಳಿಗೆ ಅಂದರೆ ವಿಜ್ಞಾನ ಮತ್ತು ಗಣಿತಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಯಿತು.

ನಗರೀಕರಣದ ಪರಿಣಾಮವಾಗಿ ವಸಾಹತು ಸರ್ಕಾರಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕೈ ಹಾಕಲು ಮತ್ತು ಬದಲಿಸಲು ಮುಕ್ತ ಅವಕಾಶ ದೊರಕಿತು. ಇದು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಕೆಲವು ಬೇಡಿಕೆಗಳನ್ನು ಮುಂದಿಟ್ಟಿತು. ಕೌಶಲ್ಯಯುಕ್ತ ಮತ್ತು ಕೌಶಲ್ಯರಹಿತ ಕೆಲಸಗಾರರ ನಡುವೆ ವ್ಯತ್ಯಾಸ ಸ್ಪಷ್ಟವಾಗುತ್ತಾ ಹೋಯಿತು. ಕಚೇರಿಯಲ್ಲಿ ಕುಳಿತು ಮಾಡುವ ಉದ್ಯೋಗಗಳಿಗೆ ಪ್ರಾಶಸ್ತ್ಯ ದೊರಕಿತು.

ನಗರೀಕರಣ ಮತ್ತು ಕೈಗಾರಿಕೀಕರಣ ಎರಡೂ ದೇಶದ ಸಮಾಜದಲ್ಲಿ ಮತ್ತು ಆರ್ಥಿಕತೆಯಲ್ಲಿ ಅನೇಕ ಬದಲಾವಣೆಗಳನ್ನು ತಂದವು. ಪರಿಣಾಮವಾಗಿ ಪ್ರಬಲವಾದ ಬಂಡವಾಳಶಾಹಿತ್ವ ಜನ್ಮ ತಾಳಿತು. ದೊಡ್ಡ ಕಂಪನಿಗಳು ಮತ್ತು ಅತಿ ದೊಡ್ಡ ಮೊತ್ತದ ಹಣ, ಶಿಕ್ಷಣವನ್ನೂ ಒಳಗೊಂಡಂತೆ ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರಿದವು. ನಗರೀಕರಣವು ಶೈಕ್ಷಣಿಕ ಅವಕಾಶಗಳಿಗೆ ಸಂಬಂಧಿಸಿದಂತೆ ಇದ್ದ ತೊಡಕನ್ನು ತೆಗೆದುಹಾಕಿತು. ಈ ಕಾರಣದಿಂದಾಗಿ ಇಂದು ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಗೂ ದೊರಕುವಂತಾಗಿದೆ, ಜಾತಿ ಯಾವುದಾದರೂ

ಉತ್ತಮ ಜೀವನಮಟ್ಟ ಆಶಿಸಿದರೆ ಅದನ್ನು ಪಡೆಯಬಹುದು, ಉತ್ತಮ ಶಿಕ್ಷಣ ಪಡೆಯಬಹುದು. ಪ್ರತಿಯೊಬ್ಬರೂ ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳಬಹುದು.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

ನಗರೀಕರಣದ ಪರಿಣಾಮಗಳಿಗೆ ಸಂಬಂಧಿಸಿದಸಂತೆ ಸರಿಯಾದ ಅಂಶಗಳನ್ನು '✓' ಚಿಹ್ನೆಯಿಂದ ಸೂಚಿಸಿರಿ

1. ಕೌಶಲ್ಯಯುಕ್ತ ಮತ್ತು ಕೌಶಲ್ಯರಹಿತ ಕೆಲಸಗಾರರ ನಡುವೆ ವ್ಯತ್ಯಾಸ
2. ದುಬಾರಿಯಾದ ಜೀವನ ಶೈಲಿ
3. ಕಚೇರಿಯಲ್ಲಿ ಕುಳಿತು ಮಾಡುವ ಉದ್ಯೋಗಗಳಿಗೆ ಪ್ರಾಶಸ್ತ್ಯ
4. ಎಲ್ಲರಿಗೂ ಶಿಕ್ಷಣ
5. ಆಧುನಿಕ ಶಾಲಾ ವ್ಯವಸ್ಥೆಯ ಹುಟ್ಟು
6. ವಿಜ್ಞಾನ ಮತ್ತು ಗಣಿತಗಳಿಗೆ ಹೆಚ್ಚು ಪ್ರಾಮುಖ್ಯತೆ
7. ಹೆಣ್ಣುಮಕ್ಕಳ ಸಬಲೀಕರಣ

## 1.6.3.2. ಆಧುನೀಕರಣ, ಆರ್ಥಿಕ ಉದಾರೀಕರಣ ಮತ್ತು ಅವುಗಳ ಪರಿಣಾಮ

### ಆಧುನೀಕರಣ

ನೀವು ಆಧುನೀಕರಣದ ಬಗ್ಗೆ ಆಲೋಚಿಸುವಾಗ ನಮ್ಮ ಜೀವನ ರೀತಿಯಲ್ಲಾಗಿರುವ ಬದಲಾವಣೆಗಳು ನಿಮ್ಮ ಕಣ್ಮುಂದೆ ಬರುತ್ತದಲ್ಲವೇ? ಈ ಪರಿಕಲ್ಪನೆಗೆ ಸಂಬಂಧಿಸಿದಂತೆ ಸಂವಹನ, ನಗರೀಕರಣ, ಸಾಕ್ಷರತೆ, ವಸತಿಯಲ್ಲಿ ಬದಲಾವಣೆ, ವೃತ್ತಿ ಬದಲಾವಣೆ ಇತ್ಯಾದಿಗಳನ್ನು ಕುರಿತು ನೀವು ಆಲೋಚಿಸುವಿರಿ. ನೀವು ಅಂದುಕೊಂಡಿರುವುದು ಸರಿ. ಆದರೆ ಇದನ್ನು ಜೀವನ ಶೈಲಿಯೊಂದಕ್ಕೇ ಸೀಮಿತಗೊಳಿಸಲಾಗುವುದಿಲ್ಲ. ಆಧುನೀಕರಣ ಪರಿಕಲ್ಪನೆಯು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿನ ಬೆಳವಣಿಗೆಯ ದೃಷ್ಟಿಯಿಂದ ಆದ ಬದಲಾವಣೆಗಳ ಒಟ್ಟು ಪ್ರಕ್ರಿಯೆ. ಇದು ಒಂದು ಪರಿಕಲ್ಪನೆ ಎಂಬುದಕ್ಕಿಂತ ಹೆಚ್ಚಾಗಿ ಒಂದು ರೀತಿಯ ಆಲೋಚನೆ ಅಥವಾ ಚಿಂತನೆ, ಜೊತೆಗೆ ಒಂದು ರೀತಿಯ ಗ್ರಹಿಕೆಯೂ ಹೌದು.

ನಮ್ಮ ಭಾರತದಲ್ಲಿ ವಸಾಹತುಶಾಹಿಯಿಂದಾಗಿ ಆಧುನೀಕರಣ ಕಾಲಿಟ್ಟಿತು. ಆಧುನೀಕರಣದ ಸಂಕೇತದಂತಿರುವ ಇಂಗ್ಲಿಷ್ ಭಾಷೆಯನ್ನು ಬ್ರಿಟಿಷರು ಭಾರತೀಯರಿಗೆ ಪರಿಚಯಿಸಿದರು.

ಆಧುನೀಕರಣವು ವಿವಿಧ ಅಂಶಗಳನ್ನು ಒಳಗೊಂಡಿದ್ದರೂ ನಾವು ಸಾಮಾಜಿಕ ಅಂಶಗಳನ್ನು ಮಾತ್ರ ಗಮನಿಸೋಣ. ಅವು ಆಧುನಿಕ ಜೀವನ ವಿಧಾನ, ಸಮೂಹ ಮಾಧ್ಯಮ, ವಸತಿಯಲ್ಲಿ ಬದಲಾವಣೆಗಳು, ನಗರೀಕರಣ, ವೃತ್ತಿಯ ಬದಲಾವಣೆ (ವ್ಯವಸಾಯದಿಂದ ವ್ಯವಸಾಯೇತರ), ಸಾಕ್ಷರತೆ ಮತ್ತು ಶಿಕ್ಷಣ, ಹೆಚ್ಚಿನ ತಲಾ ಆದಾಯ, ಜನರ ಸಾಕ್ಷರತೆ ಮತ್ತು ಶಿಕ್ಷಣದ ಪ್ರಗತಿ ಇವು ಆಧುನೀಕರಣದ ದ್ಯೋತಕವಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದು ಸಾಕ್ಷರತೆ, ಜ್ಞಾನದ ಮಹತ್ವ ಮತ್ತು ಕೌಶಲ್ಯ ತರಬೇತಿಯನ್ನು ಒಳಗೊಳ್ಳುತ್ತದೆ.

### ಶಿಕ್ಷಣದ ಮೇಲೆ ಆಧುನಿಕರಣದ ಪರಿಣಾಮ

- ಆಧುನೀಕರಣವು ಶಿಕ್ಷಣ ಸಂಸ್ಥೆಗಳ ಖಾಸಗೀಕರಣದ ಕಲ್ಪನೆಯನ್ನು ಬೆಳೆಸಿತು. ಆ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳು ಶಿಕ್ಷಣ ಪಡೆಯುವ ಕನಸನ್ನೇ ಕಾಣದವರಿಗೆ ಶಿಕ್ಷಣಾವಕಾಶಗಳನ್ನು ಒದಗಿಸಿದವು.

- ಆಧುನೀಕರಣದ ಕಾರಣದಿಂದಾಗಿಯೇ, ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ಶಿಕ್ಷಿತ ಪರಿಶಿಷ್ಟ ಜಾತಿಯವರ ದಾಖಲೆಯ ಸಂಖ್ಯೆ ಹೆಚ್ಚಾಗಿದೆ.
- ಆಧುನೀಕರಣದ ಹೆಚ್ಚಿನ ಅಗತ್ಯಗಳು ತಂತ್ರಜ್ಞಾನದ ವಿಕಾಸನವನ್ನುಂಟು ಮಾಡಿತು. ಇದರಿಂದ ಹೊಸ ಶಾಖೆಗಳು ಮೂಡಿದವು. ಅವು ಗಣಕ ವಿಜ್ಞಾನ, ಮಾಹಿತಿ ಸಂವಹನ ತಂತ್ರಜ್ಞಾನ ಇತ್ಯಾದಿ. ಇವುಗಳೆಲ್ಲ ಅತ್ಯಂತ ವೇಗವಾಗಿ ಶಿಕ್ಷಣಕ್ಷೇತ್ರವನ್ನು ಪ್ರವೇಶಿಸಿ ಬೇಡಿಕೆಯ ಉತ್ತುಂಗದಲ್ಲಿದೆ. ಆಧುನೀಕರಣವು ತಂತ್ರಜ್ಞಾನಕ್ಕೂ ತಂತ್ರಜ್ಞಾನವು ಸ್ಮಾರ್ಟ್ ತರಗತಿ ಕೋಣೆಗಳಿಗೂ, ಕಂಪ್ಯೂಟರ್ ಎಲ್.ಸಿ.ಡಿ. ಪ್ರೊಜೆಕ್ಟರ್, ಇ–ಕಲಿಕೆ, ಇ–ಮಾಧ್ಯಮ, ಇ–ಪುಸ್ತಕಗಳಿಗೂ, ಇ–ಪತ್ರಿಕೆ ಮತ್ತು ಮೂಕ್ (moocs)ಗಳಿಗೂ ಎಡೆಮಾಡಿಕೊಟ್ಟಿತು. ತಂತ್ರಜ್ಞಾನದ ಪರಿಣಾಮವಾಗಿ ಶಿಕ್ಷಕರ ಮೌಲ್ಯಮಾಪನವು ಶೈಕ್ಷಣಿಕ ಸಾಧನಾ ಸೂಚಕಗಳ (Acedemic Performance Indicator) ಮೂಲಕ ಆಗುವಂತಾಗಿದೆ. ಶಿಕ್ಷಕರನ್ನು ಉನ್ನತೀಕರಿಸುವ (upgradation) ಪ್ರಕ್ರಿಯೆಯಲ್ಲಿ ಬಳಕೆಗೆ ಬಂದ 'ಪರಿಣಾಮದ ಅಂಶ' (impact factor)ವು ಆಧುನೀಕರಣದ ಫಲವಾಗಿದೆ. ಆದ್ದರಿಂದ ಅದು ಶಿಕ್ಷಣದ ಗುಣಮಟ್ಟಕ್ಕೂ ಸಂಬಂಧಿಸಿದೆ.
- ಆಧುನೀಕರಣವು ಶಿಕ್ಷಣದ ಎಲ್ಲಾ ಹಂತಗಳಲ್ಲೂ ಹುಡುಗಿಯರ ದಾಖಲಾತಿಯ ಮಟ್ಟ ಹೆಚ್ಚು ಕಡಿಮೆ ಹುಡುಗರಿಗೆ ಸಮವಾಗಿರುವಂತೆ ಮಾಡಿದೆ.
- ಆಧುನೀಕರಣವು ಒಂದು ಅನಿವಾರ್ಯ ಅಗತ್ಯವಾಗಿ ಪರಿಣಮಿಸಿರುವುದುರಿಂದ ಸಮಾಜವನ್ನು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬದಲಿಸಿದೆ. ಶಿಕ್ಷಣದಲ್ಲಿ ಮಹಿಳೆಯರ ಪ್ರವೇಶ ಮತ್ತು ಅವರ ಸಂಖ್ಯೆಯಲ್ಲಿ ಹೆಚ್ಚಳ ಇವೆಲ್ಲವೂ ಆಧುನೀಕರಣದ ಫಲಶ್ರುತಿಯೇ.
- ನಗರೀಕರಣವು ಆಧುನೀಕರಣದ ಅತಿ ಪ್ರಬಲವಾದ ಸಾಮಾಜಿಕ ಅಂಶವಾದುದಲ್ಲದೆ ಇದೇ ಅಂಶ ಮತ್ತೂ ಹೆಚ್ಚಿನ ಕೈಗಾರಿಕೀಕರಣಕ್ಕೆ ದೂಡಿತು.

### ಉದಾರೀಕರಣ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಕ್ಷಣವು ಸಂಪೂರ್ಣವಾಗಿ ಸರ್ಕಾರದ ಜವಾಬ್ದಾರಿ ಎಂಬ ಭಾವನೆ ಇತ್ತು. ಇಂದಿನ ಸನ್ನಿವೇಶ ಹಾಗಿಲ್ಲ. ಇಂದು ಶಿಕ್ಷಣ ನೀಡುವಿಕೆಯಲ್ಲಿ ಸಾರ್ವಜನಿಕ ಸಹಭಾಗಿತ್ವಕ್ಕೆ ಅವಕಾಶವಾಗಿದೆ. ಶಿಕ್ಷಣವು ಸಾಮಾಜಿಕ ವಲಯವಾಗಿದೆ.

ಉದಾರೀಕರಣವು ಸಮಾಜದ ನೀತಿಯನ್ನು ಸಡಿಲಿಸುವಿಕೆಗೆ ಕಾರಣವಾಗುವ ಪ್ರಕ್ರಿಯೆ. ಉದಾರೀಕರಣವು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವಿಚಾರಗಳಲ್ಲಿ ರಾಜ್ಯವು ಸರ್ಕಾರದ ನೀತಿಗಳ ಹೆಸರಿನಲ್ಲಿ ಹಾಕುವ ನಿರ್ಬಂಧಗಳನ್ನು ತೆಗೆದುಹಾಕುವ ಪ್ರಕ್ರಿಯೆಗೆ ಅನ್ವಯಿಸುತ್ತದೆ.

### ಆರ್ಥಿಕ ಉದಾರೀಕರಣ

ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ಉದಾರೀಕೃತವಲ್ಲ, ಆದರೆ ಭಾರತ ಆರ್ಥಿಕವಾಗಿ ಉದಾರೀಕೃತವಾದುದು. ಇದರ ಹಿಂದಿರುವ ಕಾರಣ ಎಂದರೆ ರಾಷ್ಟ್ರೀಯ ಶಿಕ್ಷಣವು ಯಾವುದೇ ಸ್ಪರ್ಧೆ ಮತ್ತು ನಿಯಂತ್ರಣವನ್ನು ಬಯಸುವುದಿಲ್ಲ ಮತ್ತು ಈ ಶಿಕ್ಷಣ ರಂಗದಲ್ಲಿ ಸ್ವಾಯತ್ತತೆಯ ಕೊರತೆ ಇದೆ. ಇದು ಶಿಕ್ಷಣವನ್ನು ಜಟಿಲಗೊಳಿಸಿದೆ.

ಆರ್ಥಿಕ ಉದಾರೀಕರಣವು ಸರ್ಕಾರ ನೀತಿಗಳ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ಹೇರುವ ನಿರ್ಬಂಧನೆಗಳನ್ನು ನಿರ್ಮೂಲನ ಮಾಡಲು ಬಯಸುತ್ತದೆ. ಇದರಿಂದ ರಾಜ್ಯದ ವಿವಿಧ ಪ್ರಕ್ರಿಯೆಗಳ ನಡುವೆ ಸಮನ್ವಯವನ್ನು ಸಾಧಿಸಬಹುದು. ಉದಾರೀಕರಣವನ್ನು ಸಮಾಜ, ರಾಜಕೀಯ, ಆರ್ಥಿಕತೆ, ವ್ಯಾಪಾರ–ವಾಣಿಜ್ಯ ಮಾರುಕಟ್ಟೆಗಳಿಗೆ ಸಂಬಂಧಿಸಬಹುದು. ಉದಾರೀಕರಣವು ಸಾಮಾನ್ಯವಾಗಿ

ಹೆಚ್ಚು ಸಂಖ್ಯೆಯ ಖಾಸಗಿ ಸಂಸ್ಥೆಗಳು ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡುತ್ತದೆ. ಬಂಡವಾಳ ಮಾರುಕಟ್ಟೆ ಉದಾರೀಕರಣವು ಸಾಲ ಮತ್ತು ಷೇರು ಮಾರುಕಟ್ಟೆಗಳ ಮೇಲೆ ಹಾಕುವ ನಿರ್ಬಂಧಗಳನ್ನು ಕಡಿಮೆ ಮಾಡುವುದು. ಇದು ದೇಶದಲ್ಲಿ ಖಾಸಗೀಕರಣವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದುದಾಗಿದ್ದು ಇದರಿಂದ ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಬಂಧಗಳನ್ನು ತೆಗೆಯಬಹುದು.

## ಶಿಕ್ಷಣದ ಮೇಲೆ ಆರ್ಥಿಕ ಉದಾರೀಕರಣದ ಪರಿಣಾಮ

ಶ್ರೀ ಎಸ್ ವೆಂಕಟನಾರಾಯಣ್‌ರವರು ತಮ್ಮ ಸಂಶೋಧನಾ ಲೇಖನದಲ್ಲಿ ಆರ್ಥಿಕ ಉದಾರೀಕರಣದ ಪರಿಣಾಮಗಳನ್ನು ಚರ್ಚಿಸಿದ್ದಾರೆ.

- 1991ರಲ್ಲಿ, ಭಾರತವು ಆರ್ಥಿಕ ಉದಾರೀಕರಣವನ್ನು ಒಪ್ಪಿಕೊಂಡು, ಖಾಸಗಿ ಸಮೂಹಗಳಿಗೆ ಆರ್ಥಿಕತೆಯು ಮುಕ್ತವಾಗಿ ದೊರೆಯುವುದೆಂದು ಒಪ್ಪಿಕೊಂಡಿತು. ರಾಷ್ಟ್ರೀಯ ನೀತಿಯ ಬದಲಾವಣೆಗಳೊಂದಿಗೆ ಸಂವಿಧಾನಾತ್ಮಕ ಹಕ್ಕುಗಳಲ್ಲಿ ಆದ ಬದಲಾವಣೆಗಳಿಂದಾಗಿ ಶಿಕ್ಷಣದ ಹಕ್ಕು ಪ್ರತಿ ಪ್ರಜೆಯ ಮೂಲಭೂತ ಹಕ್ಕು ಎಂದಾಯಿತು.
- ಆರ್ಥಿಕ ಉದಾರೀಕರಣ ಅನುಷ್ಠಾನವಾದುದುದರಿಂದ ಸಾಂಸ್ಥಿಕವಾಗಿ ಹೊರಗಡೆಯಿಂದ ಸಾಲ ಪಡೆಯುವುದಕ್ಕೆ ಎಡೆಯಾಯಿತು. ಪ್ರಾಥಮಿಕ ಶಿಕ್ಷಣಕ್ಕೆ ಕೇಂದ್ರ ಸರ್ಕಾರದಿಂದ ಆಗುವ ವೆಚ್ಚದ ಮೊಬಲಗನ್ನು ಹೆಚ್ಚಿಸಲು ಇದು ಪ್ರಧಾನ ಕಾರಣವೆಂದು ಹೇಳಬಹುದು.
- ಹೊರಗಿನಿಂದ ಎರವಲು ಪಡೆದು ಕೈಗೊಂಡ ಯೋಜನೆಗಳು ಪ್ರಾಥಮಿಕ ಶಿಕ್ಷಣದ ವಿವಿಧ ಉಪವಿಭಾಗಗಳಿಗೆ ಅಂದರೆ ಸೌಲಭ್ಯವಂಚಿತ ಸಮೂಹಗಳ ಪ್ರವೇಶ ಮತ್ತು ಉಳಿಸಿಕೊಳ್ಳುವಿಕೆ, ಬೋಧನಾ ಕಲಿಕೆಯ ಪ್ರಕ್ರಿಯೆಗಳ ಸುಧಾರಣೆ, ಪಠ್ಯಪುಸ್ತಕ ಮತ್ತು ಪಠ್ಯಕ್ರಮಗಳ ಸುಧಾರಣೆಗಳು ಇತ್ಯಾದಿಗಳಿಗೆ ಗಮನ ಹರಿಸಿತು. ಈ ದಿಶೆಯಲ್ಲಿ ಶಿಕ್ಷಣ ಇಲಾಖೆಯು ಶಿಕ್ಷಣದ ಖರ್ಚುವೆಚ್ಚಗಳನ್ನು ಬಹಳಮಟ್ಟಿಗೆ ನೋಡಿಕೊಳ್ಳುವುದಾದರೂ ಇತರ ಇಲಾಖೆಗಳೂ ಸಮರ್ಥನೆ ಮಾಡಿಕೊಳ್ಳಬಹುದಾದಷ್ಟು ಪ್ರಮಾಣದಲ್ಲಿ ಶೈಕ್ಷಣಿಕ ಮೂಲ ವ್ಯವಸ್ಥೆಗೆ ಮತ್ತು ಬೆಳವಣಿಗೆಗೆ ಹಣವನ್ನು ವೆಚ್ಚ ಮಾಡುತ್ತಿವೆ.
- ಭಾರತಕ್ಕೆ ಸಂಬಂಧಿಸಿದಂತೆ, ಆರ್ಥಿಕ ಉದಾರೀಕರಣದ ನಂತರ ಮತ್ತು ಅದರ ಕಾರಣದಿಂದಾಗಿ ವಿಶ್ವಬ್ಯಾಂಕ್ ಮತ್ತು ಇತರ ಅಂತರಾಷ್ಟ್ರೀಯ ದಾನಿಗಳಿಂದಲೂ ಹಣ ಪಡೆದ ಮೇಲೂ ಶಿಕ್ಷಣ ವಲಯದಲ್ಲಿ ಹಣಕಾಸು ವೆಚ್ಚಗಳನ್ನು ತಗ್ಗಿಸಬೇಕೆಂದು ನಿರಂತರವಾಗಿ ಒಳಗಿನಿಂದಲೇ ಒತ್ತಡವಿತ್ತು. ಅನುದಾನಿತ ಸಂಸ್ಥೆಗಳಿಗೆ ಧನಸಹಾಯ ಕಡಿಮೆಯಾಗುತ್ತಿದ್ದಂತೆಯೇ ಗುಣಮಟ್ಟವೂ ಕಡಿಮೆಯಾಗತೊಡಗಿತು. ಈ ಬೇಸರವನ್ನು ಕಡಿಮೆ ಮಾಡಲು ಖಾಸಗಿ ಶಾಲೆಗಳು ತಲೆ ಎತ್ತತೊಡಗಿದವು. ಭಾರತದ ಎಲ್ಲ ರಾಜ್ಯಗಳಲ್ಲಿ ಸರ್ಕಾರಿ ಶಾಲೆಗಳು ಅಸಮರ್ಥವಾದೆಡೆಗಳಲ್ಲೆಲ್ಲಾ ಖಾಸಗಿ ವಲಯಗಳು ಉತ್ತಮವೆನಿಸುವಂತಾದವು. 1986–1987ರಲ್ಲಿ 8.58% ಪ್ರಮಾಣದಲ್ಲಿದ್ದ ಖಾಸಗಿ ಅನುದಾನರಹಿತ ಶಾಲೆಗಳು 2011–12ರ ವೇಳೆಗೆ 70.5% ಕ್ಕೆ ಏರಿತು. ಈಗ ಇದರ ಪ್ರಮಾಣ ಇನ್ನೂ ಹೆಚ್ಚಾಗಿದೆ
- ಕಂಪನಿಗಳ ನೋಂದಣಿ (ರಿಜಿಸ್ಟ್ರೇಷನ್) ಕಾಯಿದೆಯ 25ನೆಯ ವಿಧಿಯ ಪ್ರಕಾರ, ಭಾರತದಲ್ಲಿ ಕೇವಲ ನೋಂದಣಿ ಮಾಡಿದ ಟ್ರಸ್ಟ್‌ಗಳು, ಸೊಸೈಟಿಗಳು ಮತ್ತು ದತ್ತಿ ಕಂಪನಿಗಳು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬಹುದು. ಆದರೆ ಲಾಭವನ್ನು ಪುನಃ ಸಂಸ್ಥೆಗೆ ಬಂಡವಾಳವಾಗಿ ಬಳಸಬೇಕು.
- ಭಾರತದ ಸ್ವಾತಂತ್ರ್ಯೋತ್ತರ ಶೈಕ್ಷಣಿಕ ವಿಕಾಸದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (NPE)ಯು ಒಂದು ಮುಖ್ಯ ಘಟ್ಟವಾಯಿತು. ಇದನ್ನು 1986ರಲ್ಲಿ ಭಾರತ ಸರ್ಕಾರ ರೂಪಿಸಿತ್ತು. ಎಲ್ಲ ಮಕ್ಕಳಿಗೂ 14

ವರ್ಷದವರೆಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಸಮಾನ ಅವಕಾಶವನ್ನು ಈ ನೀತಿ ಪುನರ್ ಸ್ಥಾಪಿಸಿತು. ಈ ನೀತಿಯು ಪ್ರಾಥಮಿಕ ಶಿಕ್ಷಣದಲ್ಲಿ ಸಾರ್ವತ್ರಿಕ ಪ್ರವೇಶ ಮತ್ತು ದಾಖಲಾತಿ, 14 ವರ್ಷದವರೆಗೆ ಸಾರ್ವತ್ರಿಕವಾಗಿ ಶಾಲೆಯಲ್ಲಿ ಮಕ್ಕಳ ಉಳಿಕೆ ಮತ್ತು ಶಿಕ್ಷಣದಲ್ಲಿ ಗುಣಮಟ್ಟ ಸುಧಾರಣೆ ಈ ಮೂರು ಅಂಶಗಳನ್ನು ಶಿಫಾರಸು ಮಾಡಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ಕೆಳಗಿನವುಗಳಲ್ಲಿ ಆಧುನೀಕರಣ ಮತ್ತು ಉದಾರೀಕರಣದ ಪರಿಣಾಮಗಳನ್ನು ವರ್ಗೀಕರಿಸಿ, ಮೊದಲನೆಯದನ್ನ 'ಆ' ಎಂದೂ ಎರಡನೆಯದನ್ನು 'ಉ' ಎಂದೂ ಗುರುತಿಸಿ

1. ಶಿಕ್ಷಣ ಸಂಸ್ಥೆಗಳ ಖಾಸಗೀಕರಣದ ಕಲ್ಪನೆಯನ್ನು ಬೆಳೆಸಿತು.
2. ಸಾಂಸ್ಥಿಕವಾಗಿ ಹೊರಗಡೆಯಿಂದ ಸಾಲ ಪಡೆಯುವುದಕ್ಕೆ ಎಡೆಯಾಯಿತು.
3. ಶಿಕ್ಷಿತ ಪರಿಶಿಷ್ಟ ಜಾತಿಯವರ ದಾಖಲೆಯ ಸಂಖ್ಯೆ ಹೆಚ್ಚಾಯಿತು.
4. ಸೌಲಭ್ಯವಂಚಿತ ಸಮೂಹಗಳ ಪ್ರವೇಶ ಮತ್ತು ಉಳಿಸಿಕೊಳ್ಳುವಿಕೆಗೆ ಗಮನಹರಿಸುವಂತಾಯಿತು.
5. ಶಿಕ್ಷಣ ಪಡೆಯುವ ಕನಸನ್ನೇ ಕಾಣದವರಿಗೆ ಶಿಕ್ಷಣಾವಕಾಶಗಳನ್ನು ಒದಗಿಸಿತು.
6. ಖಾಸಗಿ ಶಾಲೆಗಳು ತಲೆ ಎತ್ತ ತೊಡಗಿದವು.
7. ಶಿಕ್ಷಣದಲ್ಲಿ ಮಹಿಳೆಯರ ಪ್ರವೇಶವನ್ನು ಮತ್ತು ಅವರ ಸಂಖ್ಯೆಯಲ್ಲಿ ಹೆಚ್ಚಳ ಸಾಧಿಸಿತು.
8. ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕು ಎಂದಾಯಿತು.

## 1.6.3.3. ಜಾಗತೀಕರಣ, ಖಾಸಗೀಕರಣ ಮತ್ತು ಡಿಜಿಟಲೀಕರಣ ಮತ್ತು ಅವುಗಳ ಪರಿಣಾಮ

ಬ್ರಿಟಿಷರ ಕಾಲದಲ್ಲಿ ಕೇವಲ ಕೆಲವೇ ಸಾವಿರ ಮಂದಿ ಮಾತ್ರ ಶಿಕ್ಷಣ ಪಡೆಯುವ ಸವಲತ್ತು ಹೊಂದಿದ್ದರೆಂಬುದನ್ನು ತಿಳಿದರೆ ನಿಮಗೆ ಅಚ್ಚರಿಯಾಗಬಹುದು. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಸುಮಾರು 19 ವಿಶ್ವವಿದ್ಯಾನಿಲಯಗಳು ಮತ್ತು ಸುಮಾರು 0.2 ಮಿಲಿಯನ್ ದಾಖಲಾತಿ ಇತ್ತು. ಇಂದು 799 ವಿಶ್ವವಿದ್ಯಾನಿಲಯಗಳು, 3724 ಕಾಲೇಜುಗಳು ಮತ್ತು 20 ಮಿಲಿಯನ್ ದಾಖಲಾತಿಯಾಗಿರುವುದನ್ನು ಕಾಣುತ್ತೀರಿ. ಪ್ರಗತಿಯ ಕಥೆ ನಿಜವಾಗಲೂ ಮಹತ್ವದಾಗಿದೆ. ವಿಶ್ವದಲ್ಲೇ ಭಾರತವು ಎರಡನೇ ದೊಡ್ಡ ಉನ್ನತ ಶಿಕ್ಷಣ ವ್ಯವಸ್ಥೆಯುಳ್ಳ ದೇಶವಾಗಿದೆ. ಆದರೆ ಜನಸಂಖ್ಯೆಗೆ ಹೋಲಿಸಿದಾಗ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾರತವು ಹಿಂದುಳಿದ ರಾಷ್ಟ್ರಗಳಲ್ಲಿ ಒಂದಾಗಿದೆ.

"ಜಾಗತೀಕರಣ" ಎಂಬ ಪದವನ್ನು ಆದಂ ಸ್ಮಿತ್‌ರವರು 1776ರಲ್ಲಿ ವಿಶೇಷವಾಗಿ ಆರ್ಥಿಕ ಕ್ಷೇತ್ರದಲ್ಲಿ ಪರಿಚಯಿಸಿದರು. ಈ ಪದವನ್ನು 20ನೇ ಶತಮಾನದ ಅಂತ್ಯ ಘಟ್ಟದಲ್ಲಿ ವಿದ್ಯುಕ್ತವಾಗಿ ಬಳಸಲಾಯಿತು.

"ಜಾಗತೀಕರಣ" ಎಂಬ ಪರಿಕಲ್ಪನೆಯು ವ್ಯಾಪಾರ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಲಾಭಗಳಿಗಾಗಿ, ಸಂಬಂಧಪಟ್ಟ ರಾಷ್ಟ್ರಗಳ ಮತ್ತು ಅವುಗಳ ಆರ್ಥಿಕತೆಯ ಸಮನ್ವಯವನ್ನು ಸೂಚಿಸುತ್ತದೆ. ಈ ಜಾಗತೀಕರಣವು ದೇಶಗಳ ಚಟುವಟಿಕೆಗಳಿಗೆ ಸಂಬಂಧಿಸಿರುವುದಾಗಿದ್ದು ರಾಷ್ಟ್ರಗಳ ನಡುವಿನ ಅಂತರಾವಲಂಬನೆಗೆ ಮತ್ತು ಅಂತರ್‌ಕ್ರಿಯೆಗೆ ಕಾರಣವಾಗುತ್ತದೆ. ಸರಕುಗಳು ಮತ್ತು ಸೇವೆಗಳು, ಬಂಡವಾಳ, ಜನರು, ಜ್ಞಾನ, ತಂತಜ್ಞಾನ ಇತ್ಯಾದಿಗಳಿಗೆ ಇದು ಚಾಲನೆ ನೀಡುತ್ತದೆ.

ಭಾರತದಲ್ಲಿ ಜಾಗತೀಕರಣದ ಪರಿಣಾಮವಾಗಿ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಅದ್ಭುತ ಮತ್ತು ಪ್ರಯೋಜನಕಾರಿ ಬದಲಾವಣೆ ಉಂಟಾಗಿದೆ. ಉನ್ನತ ಶಿಕ್ಷಣವು ಉನ್ನತ ಮಟ್ಟದ ಕೌಶಲಗಳುಳ್ಳ ಕೆಲಸಗಾರರನ್ನು ತರಬೇತುಗೊಳಿಸುತ್ತದೆ ಮತ್ತು ಸಂಶೋಧನೆ ಮತ್ತು ಅವಿಷ್ಕಾರಗಳ ಸಾಮರ್ಥ್ಯ ಬೆಳವಣಿಗೆಗೆ ಸಹಾಯ ಮಾಡುತ್ತದೆ.

**ಜಾಗತೀಕರಣದ ಪರಿಣಾಮ**

ಜಾಗತೀಕರಣದಿಂದ ಪರಿಣಾಮಗಳನ್ನು ಕೆಳಗಿನಂತೆ ಪಟ್ಟಿ ಮಾಡಬಹುದು:

- ಶಿಕ್ಷಣಕ್ಕಾಗಿ ಹೊರದೇಶಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ.
- ಬೋಧಕರ ಮತ್ತು ಸಂಶೋಧಕರ ವಿನಿಮಯ ಕಾರ್ಯಕ್ರಮ.
- ಶೈಕ್ಷಣಿಕ ಪಠ್ಯಕ್ರಮಗಳಿಗೆ ಹೆಚ್ಚಿನ ಅಂತರಾಷ್ಟ್ರೀಯ ಮಾರುಕಟ್ಟೆ, ಕ್ಯಾಂಪಸ್ ಶಾಲೆಗಳ ಸ್ಥಾಪನೆ.
- ಉನ್ನತ ಶಿಕ್ಷಣ ಸೇವೆಗಳ ಆಮದು ರಫ್ತು ಸಾಧ್ಯತೆ.

ಏನೇ ಆದರೂ ಬಹುಕಾಲದ ನಂತರ ಜಾಗತೀಕರಣವು ಉನ್ನತ ಶಿಕ್ಷಣದ ಮೇಲೆ ಅಡ್ಡ ಪರಿಣಾಮ ಬೀರಿದವು

**ಕೆಳಗಿನವುಗಳನ್ನು ಜಾಗತೀಕರಣದ ಗಂಡಾಂತರಗಳು ಎಂದು ತಿಳಿಯಬಹುದು:**

- ಹೆತ್ತವರಿಗೆ ತಮ್ಮ ಮಕ್ಕಳು ವಿದೇಶಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ದೊರಕಿಸುವ ಆಸಕ್ತಿ ಹೆಚ್ಚಿತು.
- ವಿದೇಶದಲ್ಲಿ ಶಿಕ್ಷಣ ಪಡೆಯಲು ಒಂದು ಲಕ್ಷ ಕೋಟಿ ರೂಪಾಯಿ ವಿದೇಶಿ ವಿನಿಮಯಕ್ಕಾಗಿ ವೆಚ್ಚವಾಗಿದೆಯೆಂದು ಅಂದಾಜಾಗಿದೆ.
- ಪದವೀಧರರಲ್ಲಿ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಅಪಗ್ರಹಿಕೆಗಳು ಉಂಟಾಗುತ್ತಿದೆ. ವಿದೇಶಿ ವಿಶ್ವವಿದ್ಯಾನಿಲಯಗಳಿಂದ ಶಿಕ್ಷಣ ಪಡೆಯುವುದರಿಂದ ಸ್ಥಾನಮಾನ ಹೆಚ್ಚುತ್ತದೆ, ಸರ್ಕಾರಿ ಸಂಸ್ಥೆಗಳಿಂದ ಪಡೆಯುವ ಶಿಕ್ಷಣ (ಆರ್ಥಿಕವಾಗಿ) ದುರ್ಬಲರಿಗೆ ಅಥವಾ ಕೆಳದರ್ಜೆಯವರಿಗೆ ಅನ್ವಯ ಎಂದು ತಿಳಿದು ಅವರನ್ನು ಅಲ್ಪ ಗೌರವದಿಂದ ಕಾಣುವುದು.

b) ಸಾಮರ್ಥ್ಯಗಳು, ಕೊರತೆಗಳು, ಅವಕಾಶಗಳು ಮತ್ತು ಅಪಾಯಗಳು – ಈ ಅಂಶಗಳ (Strengths, weaknesses, Opportunities and Threats) ವಿಶ್ಲೇಷಣೆಯಲ್ಲಿ ಜಾಗತೀಕರಣದ ಪ್ರಭಾವ

## ಭಾರತೀಯ ಶಿಕ್ಷಣ ವ್ಯವಸ್ಥೆಯ ಸಾಮರ್ಥ್ಯಗಳು (S) :

ಸಾಮರ್ಥ್ಯ ಎಂಬುದು, ಸೇವೆ ಸಲ್ಲಿಸಲು ಉದ್ದೇಶಿಸಿರುವ ಸಂಸ್ಥೆಯು, ಸಂಬಂಧಿಸಿದ ಸ್ಪರ್ಧೆಗೆ ಮತ್ತು ಮಾರುಕಟ್ಟೆಯ ಅಗತ್ಯಗಳಿಗೆ ಅಥವಾ ಅದರಿಂದ ಅಪೇಕ್ಷಿತವಾದ ಸೇವೆ ಸಲ್ಲಿಸಲು ಇರುವ ಸಂಪನ್ಮೂಲ, ಹಣಕಾಸು, ಸಂಪನ್ಮೂಲಗಳು, ಮೂಲ ವ್ಯವಸ್ಥೆಯ ಸೌಕರ್ಯಗಳು, ಗಳಿಸಿರುವ ಖ್ಯಾತಿ, ಮಾರುಕಟ್ಟೆ, ನಾಯಕತ್ವ ಇತ್ಯಾದಿ ಅಂಶಗಳನ್ನು ಒಳಗೊಳ್ಳುತ್ತದೆ.

## ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ಸಾಮರ್ಥ್ಯಗಳು :

**ಆರ್ಥಿಕತೆ :** ಜಗತ್ತಿನ ಇತರ ಅನೇಕ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಶಿಕ್ಷಣದ ವೆಚ್ಚ ಕಡಿಮೆ.

**ಗುಣಮಟ್ಟ :** ಭಾರತ ಸರ್ಕಾರವು ಶಿಕ್ಷಣದ ಗುಣಮಟ್ಟವನ್ನು ಖಚಿತಪಡಿಸಲು ಶಾಸನಬದ್ಧ ಸಂಸ್ಥೆಗಳನ್ನು ಸ್ಥಾಪಿಸಿವೆ. ಅದರಿಂದ ವಿಶ್ವಮಟ್ಟದ ಶಿಕ್ಷಣ ಒದಗಿಸುವ ಕೆಲವು ಸಂಸ್ಥೆಗಳು ಭಾರತದಲ್ಲಿವೆ.

**ಸಮಾಲೋಚನೆ ಸೇವೆ (Consultation Service) :** ಭಾರತ ಸರ್ಕಾರವು ಆಸಕ್ತರಾದ ಅಂತರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಭಾರತದ ಶೈಕ್ಷಣಿಕ ಸಮಾಲೋಚಕರ ಮೂಲಕ ಸಮಾಲೋಚನೆ ಸೇವೆಯನ್ನು ಒದಗಿಸುತ್ತದೆ. ಹೀಗೆ ಭಾರತದ ಶೈಕ್ಷಣಿಕ ವ್ಯವಸ್ಥೆ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಶಿಕ್ಷಣದ ವೆಚ್ಚ, ಅವಧಿ, ವೀಸಾ ಪಡೆಯುವ ಕ್ರಮ, ವಸತಿ ಸೌಕರ್ಯ ಎಲ್ಲವನ್ನೂ ಭಾರತಕ್ಕೆ ಕಾಲಿಡುವ ಮುನ್ನವೇ ತಿಳಿಸುತ್ತದೆ.

**ವಿಶಿಷ್ಟತೆ (Uniqueness) :** ಭಾರತದ ಪಾರಂಪರಿಕ ಜ್ಞಾನಭಂಡಾರದ ವಿಶೇಷತೆಯಿಂದಾಗಿ ಭಾರತವು ಕೆಲವು ವಿಶಿಷ್ಟ ಕೋರ್ಸ್‌ಗಳನ್ನು ಹೊಂದಿದೆ. ಆಯುರ್ವೇದ, ಸಂಸ್ಕೃತ, ಯೋಗ, ಪ್ರದರ್ಶಕ ಕಲೆಗಳು, ಹಿಂದಿ ಮುಂತಾದವು ಅಂತಹ ಕೆಲವು ಕೋರ್ಸಗಳಾಗಿವೆ. ಇವು ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ.

## ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯ ಕೊರತೆಗಳು

ದೌರ್ಬಲ್ಯ ಎಂದರೆ, ಸಂಪನ್ಮೂಲಗಳಲ್ಲಿ, ಮೂಲಸೌಕರ್ಯಗಳಲ್ಲಿ, ಕೌಶಲಗಳಲ್ಲಿ, ಸಾಮರ್ಥ್ಯಗಳಲ್ಲಿ ಅಂತರ್‌ವ್ಯಕ್ತಿ ಸಂಬಂಧಗಳಲ್ಲಿ ಇರುವ ಮಿತಿ (limitations) ಅಥವಾ ಕೊರತೆ (deficiency). ಇವು ಸಂಸ್ಥೆಯ ಪರಿಪೂರ್ಣವಾದ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುತ್ತವೆ. ಕೆಳಗಿನವು ಭಾರತದ ಉನ್ನತ ಶಿಕ್ಷಣದ ದೌರ್ಬಲ್ಯಗಳು.

- ಸ್ವಾತಂತ್ರೋತ್ತರ ಶಿಕ್ಷಣ ಯೋಜನೆಗಳು ಶೇಕಡ 6 ರಷ್ಟು ರಾಷ್ಟ್ರೀಯ ವರಮಾನವನ್ನು ಮಾತ್ರ ಶಿಕ್ಷಣದ ಮೇಲೆ ಸರ್ಕಾರದ ಕೊಡುಗೆಯಾಗಿ ನೀಡಿತು. ಆದರೆ ಸ್ವತಂತ್ರವಾದ 70 ವರ್ಷಗಳ ನಂತರವೂ ಇದು ಹೆಚ್ಚಾಗಿಲ್ಲ.
- ಭಾರತದ ಉನ್ನತ ಶಿಕ್ಷಣದ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ಕೈಗಾರಿಕೆಗಳ ನಡುವಣ ಹೊಂದಾಣಿಕೆ ಸರಿಯಾಗಿಲ್ಲದಿರುವುದರಿಂದ ಇದು ಕೈಗಾರಿಕೆಗೆ ಪೋಷಕವಾಗದೆ, ಅದಕ್ಕೆ ಒತ್ತಾಸೆಯಾಗದೆ ಬಳಲುತ್ತಿದೆ. ಭಾರತದ ಹಳೆಯ ವಿಶ್ವವಿದ್ಯಾನಿಲಯಗಳು ಇನ್ನೂ ಈ ರೀತಿಯ ಸಹಯೋಗ ತೋರುವುದಲ್ಲಿ ಮನಸ್ಸು ಮಾಡುತ್ತಿಲ್ಲ. ಶಿಕ್ಷಣ ಪ್ರಪಂಚ ಮತ್ತು ಉದ್ಯೋಗ ಪ್ರಪಂಚದ ನಡುವೆ ಕಂದಕವಿದೆ. ಉದಾಹರಣೆಗೆ ವಿಶ್ವವಿದ್ಯಾನಿಲಯಗಳು ಪರಸ್ಪರ ಬೆಳವಣಿಗೆಗಾಗಿ ಕೈಗಾರಿಕೆಗಳಲ್ಲಿ ಸಂಶೋಧನೆ ಮತ್ತು ಬೆಳವಣಿಗೆಯ ವಿಭಾಗದಲ್ಲಿ ಸಹಕರಿಸಬೇಕು. ಕೈಗಾರಿಕೆಗಳಲ್ಲಿ ಬೇಡಿಕೆ ಇರುವ ಕೋರ್ಸ್‌ಗಳನ್ನು ಪ್ರಾರಂಭಿಸಬೇಕು. ಆದರೆ ವಾಸ್ತವದಲ್ಲಿ ಹಾಗೆ ಆಗುತ್ತಿಲ್ಲ.
- ಭಾರತವು ಹೊರದೇಶದ ವಿದ್ಯಾರ್ಥಿಗಳಿಗೆ ವಿದೇಶಿ ಕಾರ್ಯಕ್ರಮಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಉತ್ತಮ ಗುಣಮಟ್ಟದ, ಮಾನ್ಯತೆ ಪಡೆದ ಸಂಸ್ಥೆಗಳು ದೊರಕುತ್ತಿಲ್ಲ. ಮೂಲಸೌಕರ್ಯಗಳು ಮತ್ತು ಇತರ ಸಂಪನ್ಮೂಲಗಳು ಅಪೇಕ್ಷಿತ ಮಟ್ಟದಲ್ಲಿಲ್ಲ. ಹಾಗಾಗಿ ಭಾರತವು ಉನ್ನತ ಶಿಕ್ಷಣಕ್ಕೆ ಕೇವಲ ಮುಂದುವರಿಯುತ್ತಿರುವ ಮತ್ತು ಹಿಂದುಳಿದ ದೇಶಗಳಿಂದ ವಿದ್ಯಾರ್ಥಿಗಳನ್ನು ಸೆಳೆಯುತ್ತಿದೆ. ದೇಶದ ಸೀಮಿತ ಜನಸಂಖ್ಯೆಯ ಜನರು ವಿದ್ಯಾವಂತರಾಗಿದ್ದಾರೆ. ಭಾರತದಲ್ಲಿ ಇನ್ನೂ ಶೇಕಡ 50ಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಮಹಿಳಾ ಅನಕ್ಷರಸ್ಥರಿದ್ದಾರೆ, ಪುರುಷರಲ್ಲಿ ಸುಮಾರು ಶೇಕಡ 25 ರಷ್ಟು ಮಂದಿ ಅನಕ್ಷರಸ್ಥರಾಗಿದ್ದಾರೆ. ಸೆಕೆಂಡರಿ ಹಂತದಲ್ಲಿ ಶಾಲೆಯನ್ನು ಬಿಡುವವರ ಸಂಖ್ಯೆ ಹೆಚ್ಚಾಗಿಯೇ ಇದೆ. ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಪಡೆಯುವವರ ಸಂಖ್ಯೆಯೂ ಕಡಿಮೆ ಮಟ್ಟದಲ್ಲಿಯೇ ಇದೆ.
- ಉದಯೋನ್ಮುಖ ಕ್ಷೇತ್ರಗಳಲ್ಲಿ ಸ್ನಾತಕೋತ್ತರರಿಗೆ ಬೆಳೆಯುತ್ತಿರುವ ಬೇಡಿಕೆಯನ್ನು ಪೂರೈಸಲು ಭಾರತ ಸಂಸ್ಥೆಗಳಿಗೆ ಸಾಧ್ಯವಾಗುತ್ತಿಲ್ಲ. ನ್ಯಾನೋ ವಿಜ್ಞಾನ, ಸಮುದ್ರಶಾಸ್ತ್ರ (Oceanography) ಮುಂತಾದ ಹೆಚ್ಚು ಬೇಡಿಕೆಯ ಕೋರ್ಸ್‌ಗಳನ್ನು ನೀಡುವ ಸಂಸ್ಥೆಗಳು ಹೆಚ್ಚಾಗಿಲ್ಲ,
- ಜಾಗತಿಕ ಸವಾಲುಗಳನ್ನು ಪೂರ್ಣಮಾಡಲು ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಮತ್ತು ವೃತ್ತಿಪರ ಕಾಲೇಜುಗಳಲ್ಲಿ ಬದ್ಧತೆಯುಳ್ಳ, ನುರಿತ ಹಾಗೂ ಸಮರ್ಥ ಅಧ್ಯಾಪಕರು ಇರುವ ಶಿಕ್ಷಣ ಸಂಸ್ಥೆಗಳು ಉನ್ನತ ಶಿಕ್ಷಣ ಹಂತದಲ್ಲಿಲ್ಲ. ಶೇ.74ರಷ್ಟು ಮಂದಿ ಸಾಮಾನ್ಯ ಶಿಕ್ಷಣ ಪಡೆದರೆ ಕೇವಲ ಶೇ.16 ಮಂದಿ ವೃತ್ತಿಪರ ಕೋರ್ಸ್‌ಗಳಿಗೆ ದಾಖಲಾಗುತ್ತಾರೆ. ನಮ್ಮ ಶಿಕ್ಷಣ ವ್ಯವಸ್ಥೆಯು ಅಂತರರಾಷ್ಟ್ರೀಯ ಮಟ್ಟವನ್ನು ತಲುಪುತ್ತಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆ ಪ್ರಾಯೋಗಿಕತೆಗಿಂತ ಸಿದ್ಧಾಂತ ಆಧಾರಿತವಾದುದು. ಸಾಮಾನ್ಯ ಶಿಕ್ಷಣಕ್ಕೆ ಹೆಚ್ಚು ಮಹತ್ವ ಇದೆ. ಇದರಿಂದ ವಿದೇಶಿ ವಿದ್ಯಾರ್ಥಿಗಳನ್ನು ಸೆಳೆಯಲಾಗುತ್ತಿಲ್ಲ.

**ಅವಕಾಶಗಳು :**

ಈ ಹಿಂದೆ ಕಡೆಗಣಿಸಲಾದ ಮಾರುಕಟ್ಟೆಯ ಅಂಶಗಳು, ಸ್ಪರ್ಧಾತ್ಮಕ ಸನ್ನಿವೇಶಗಳಲ್ಲಿನ ಬದಲಾವಣೆ, ತಂತ್ರಜ್ಞಾನಾತ್ಮಕವಾದ ಬದಲಾವಣೆಗಳು ಇವುಗಳಿಗೆ ಉತ್ತಮ ಅವಕಾಶಗಳು ಪೂರಕವಾದ ಸನ್ನಿವೇಶಗಳಾಗುತ್ತವೆ. ಭಾರತವು ಏಷ್ಯಾ ಪೆಸಿಫಿಕ್ ಪ್ರಾಂತ್ಯದ ಶಿಕ್ಷಣಕ್ಷೇತ್ರದಲ್ಲಿ ಒಂದು ಪ್ರಮುಖ ಕೇಂದ್ರವಾಗಿ ಮೂಡಿಬರಬೇಕೆಂಬ ಅಪೇಕ್ಷೆ ಇದೆ. ಈ ನಿಟ್ಟಿನಲ್ಲಿ ಭಾರತದಲ್ಲಿ ಕಾಣಬರುತ್ತಿರುವ ಅವಕಾಶಗಳೆಂದರೆ: ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳ ಸಹಯೋಗ, ಭಾರತದಲ್ಲಿ ವಿದೇಶೀ ವಿದ್ಯಾರ್ಥಿಗಳಿಗೆ ಅವಕಾಶ, ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಅವಕಾಶಗಳು, ವಿದ್ಯಾರ್ಥಿಗಳಲ್ಲಿ ಜಾಗತಿಕ ಬೇಡಿಕೆಯ ಸಾಮರ್ಥ್ಯಗಳನ್ನು ಬೆಳೆಸುವ ಅವಕಾಶಗಳು, ಮೌಲ್ಯ ವ್ಯವಸ್ಥೆಯ ಬೆಳವಣಿಗೆ, ರಾಜ್ಯ ಮತ್ತು ಖಾಸಗಿ ಹೂಡಿಕೆಯ ಸಂಸ್ಥೆಗಳಲ್ಲಿ ಶಿಕ್ಷಣ ಇತ್ಯಾದಿ.

**ಭಾರತದ ಉನ್ನತ ಶಿಕ್ಷಣದ ಅಪಾಯಗಳು :**

- ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ನಕಲಿ ವಿಶ್ವವಿದ್ಯಾನಿಲಯಗಳು ಅನೇಕ ಅಪಾಯಗಳನ್ನು ಮುಂದಿಡುತ್ತಿವೆ. ಈ ವಿಶ್ವವಿದ್ಯಾನಿಲಯಗಳಿಂದಾಗಿ ಭಾರತದ ಶಿಕ್ಷಣವನ್ನು ಕುರಿತ ಅವಗಣನೆ ಒಂದೆಡೆಯಾದರೆ, ಗುಣಮಟ್ಟದ ಕೊರತೆಯಿಂದಾಗಿ ಉನ್ನತ ಶಿಕ್ಷಣದ ಸೋಲು ಬಹಳ ಸ್ಪಷ್ಟವಾಗಿ ಕಾಣುವಂತಿದೆ.
- ಜಾಗತಿಕದ ಪರಿಣಾಮದಿಂದಾಗಿ ಶೈಕ್ಷಣಿಕ ಸಂಸ್ಥೆಗಳು ರಾಷ್ಟ್ರೀಯ ವಿಕಾಸಕ್ಕೆ ಕೊಡುಗೆಗಳನ್ನು ನೀಡಲಾಗಲಿಲ್ಲ. ನಾಗರಿಕ ಸಮಾಜ ಶಕ್ತಿಯುತಗೊಳಿಸುವಲ್ಲಿ ಪಾತ್ರ ವಹಿಸುವ ಬಗ್ಗೆ ಮತ್ತು ಸ್ಥಳೀಯ ಅಗತ್ಯಗಳಿಗೆ ಸಮಂಜಸವಾದ ಸಂಶೋಧನೆಗಳು ತೀರ ಕಡಿಮೆ.
- ಶಿಕ್ಷಣದ ಗುಣಮಟ್ಟ ಕುಸಿಯಲು ತರಬೇತಿಯಿಲ್ಲದ ಮತ್ತು ಸಾಮರ್ಥ್ಯವಿಲ್ಲದ ಶಿಕ್ಷಕರೂ ಕಾರಣರಾಗಿರುತ್ತಾರೆ.
- ವಿದೇಶಗಳಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ದೊರಕಿಸಬೇಕೆಂಬ ಪೋಷಕರ ಆಸಕ್ತಿ ಹೆಚ್ಚಾಗಿ ವಿದೇಶೀ ವಿನಿಮಯದಲ್ಲಿ ನಷ್ಟವಾಗುವುದನ್ನು ಜಾಗತೀಕರಣದ ಪರಿಣಾಮಗಳು ಹೆಚ್ಚಿಸುತ್ತವೆ.
- ಶಿಕ್ಷಣವನ್ನು ಸರಕಿನಂತೆ ಪರಿಗಣಿಸುವುದರಿಂದ ಇದು ನಮ್ಮ ಸಂಸ್ಕೃತಿ, ಸಮಾಜ ಕಲ್ಯಾಣದ ನೈತಿಕತೆ ಮತ್ತು ಭಾರತೀಯ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹಾಳುಮಾಡುತ್ತಿದೆ. ಇದು ಅನೈತಿಕ ಪರಿಣಾಮಗಳಿಗೆ ದಾರಿ ಮಾಡಿಕೊಟ್ಟಿದೆ. ಉದಾಹರಣೆಗೆ, ಹಾಜರಾತಿಯಿಲ್ಲದೆ ಪದವಿ ಗಳಿಕೆ, ನಕಲಿ ಪ್ರವೇಶ ಪತ್ರಗಳು, ಪರೀಕ್ಷೆಯಲ್ಲಿ ನಕಲಿ ವಿದ್ಯಾರ್ಥಿಗಳು ಹಾಜರಾಗುವುದು, ಸಮೂಹ ನಕಲೀಕರಣ, ಡಿಗ್ರಿ /ಪದವಿಯನ್ನು ಖರೀದಿಸುವುದು, ಪ್ರಮಾಣೀಕೃತವಲ್ಲದ ಡಿಗ್ರಿಗಳನ್ನು ಪ್ರಧಾನ ಮಾಡುವುದು, ವಾಮಮಾರ್ಗಗಳಿಂದ ಅಂಕ ಗಿಟ್ಟಿಸುವುದು.
- ಸ್ಥಳೀಯ ಶಿಕ್ಷಣ ಸಂಸ್ಥೆಗಳು ಅಂತರ್ ರಾಷ್ಟ್ರೀಯ ಗುಣಮಟ್ಟ ಕಾಪಾಡಿಕೊಳ್ಳಬೇಕಾಗಿದೆ.
- ಕೆಲವು ಖಾಸಗಿ ಸಂಸ್ಥೆಗಳು ದಕ್ಷ ಶಿಕ್ಷಕರಿಲ್ಲದೆ ಉತ್ತಮ ಪರಿಸರ ಹೊಂದಿಲ್ಲದೆ ಕೇವಲ ತಕ್ಷಣದ ಲಾಭದ ದೃಷ್ಟಿಯಿಂದ ಶಿಕ್ಷಣ ಒದಗಿಸುತ್ತಿವೆ.
- ಅನೇಕ ವಿದೇಶೀ ಸಂಸ್ಥೆಗಳು ಮಾರುಕಟ್ಟೆ ಬೇಡಿಕೆ ಗಮನಿಸಿ ತಾಂತ್ರಿಕ ಕೋರ್ಸ್‌ಗಳ ಮೇಲೆ (technicalcourses) ಮೇಲೆ ಬಂಡವಾಳ ಹಾಕುತ್ತದೆಯೇ ಹೊರತು ಗುಣಮಟ್ಟದ ಶಿಕ್ಷಣವನ್ನು ಮತ್ತು ಸಂಶೋಧನೆಯನ್ನು ಪರಿಗಣಿಸುವುದಿಲ್ಲ
- ಸ್ಥಳೀಯ ಶಿಕ್ಷಣ ಸಂಸ್ಥೆಗಳಿಗೆ ಕಠಿಣ ಸ್ಪರ್ಧೆ ನೀಡುತ್ತಾ ರಾಷ್ಟ್ರಮಟ್ಟದ ಅರ್ಹತಾ ಪತ್ರಕ್ಕಿಂತ ವಿಶ್ವಮಟ್ಟದ ಅರ್ಹತಾ ಪತ್ರಕ್ಕೆ ಮಹತ್ವ ನೀಡುತ್ತದೆ.

- ಕೆಲವು ಸ್ವಯಂಪ್ರೇರಿತ ಸಂಸ್ಥೆಗಳು ಭಾರತದಲ್ಲಿ ಕೆಳಮಟ್ಟದ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳೊಂದಿಗೆ ಪಾಲುದಾರಿಕೆ ಹೊಂದಿವೆ.

**ಖಾಸಗೀಕರಣ**

ಖಾಸಗೀಕರಣ ಎಂಬುದು ಸರ್ಕಾರದಿಂದ ಕಾರ್ಯಗಳನ್ನು, ಸ್ವತ್ತುಗಳನ್ನು ಮತ್ತು ಚಟುವಟಿಕೆಗಳನ್ನು ವರ್ಗಾಯಿಸುವ ಪ್ರಕ್ರಿಯೆ. ಅಲ್ಲದೆ ಸಾರ್ವಜನಿಕ ಸಂಸ್ಥೆ ಮತ್ತು ಸಂಘಟನೆಗಳನ್ನು ಖಾಸಗಿ ನಿಯೋಗಿಗಳಿಗೆ ಮತ್ತು ವ್ಯಕ್ತಿಗಳಿಗೆ ವರ್ಗಾಯಿಸುವುದು ಎಂದೂ ಇದನ್ನು ಅರ್ಥೈಸಲಾಗುತ್ತದೆ. ಈ ಪ್ರಕ್ರಿಯೆ ಶಿಕ್ಷಣ ವ್ಯವಸ್ಥೆಯಲ್ಲೂ ಜರುಗುವುದನ್ನು ನೀವು ಗಮನಿಸಿರಬಹುದು.

ಶಿಕ್ಷಣದ ಜೊತೆಜೊತೆಯಲ್ಲೇ ಉನ್ನತ ಶಿಕ್ಷಣದ ಮಹತ್ವ ಮತ್ತು ಬೇಡಿಕೆ ಹೆಚ್ಚತೊಡಗಿತು, ತತ್ಪರಿಣಾಮವಾಗಿ, ಭಾರತದಲ್ಲಿ ಉದ್ಭವಿಸಿದ ಉನ್ನತ ಶಿಕ್ಷಣದ ಬೇಡಿಕೆಯನ್ನು ಪೂರೈಸಲು ಖಾಸಗಿ ಕಾಲೇಜುಗಳು, ಸ್ವಾಯತ್ತ ಕಾಲೇಜುಗಳು, ಡೀಮ್ಡ್ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾದವು. ಅಲ್ಲದೆ ಸ್ವಂತ ಹಣಕಾಸು ನೆರವಿನಿಂದ ಇಂಜಿನಿಯರಿಂಗ್ ಮತ್ತು ವೈದ್ಯ ಕಾಲೇಜುಗಳ ಸಂಖ್ಯೆ ಹೆಚ್ಚಾದವು. ಹೀಗೆ ಉನ್ನತಶಿಕ್ಷಣದ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರ ಹೆಚ್ಚಿದ ಪರಿಣಾಮವಾಗಿ ಶಿಕ್ಷಣದ ಖಾಸಗೀಕರಣ ದಿನದಿಂದ ದಿನಕ್ಕೆ ಹೆಚ್ಚತೊಡಗಿತು.

ಭಾರತದಲ್ಲಿ ಶಿಕ್ಷಣ ಖಾಸಗೀಕರಣದ ಉದ್ದೇಶಗಳು: ತಾಂತ್ರಿಕ ಪ್ರಗತಿಯ ಪ್ರಚಾರ, ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು, ಉದ್ಯಮ ಮತ್ತು ಶಿಕ್ಷಣದ ನಡುವಿನ ಅಂತರ ಕಡಿಮೆ ಮಾಡುವುದು, ಸಮಾಜದಲ್ಲಿ ಖಾಸಗಿ ಮಾಲೀಕತ್ವ ಹೆಚ್ಚಿಸಿ ಸರ್ಕಾರದ ಹೊರೆಯನ್ನು ಕಡಿಮೆ ಮಾಡುವುದು, ದೂರಸ್ಥ ಪ್ರದೇಶ ಮತ್ತು ಉಪ–ನಗರ ಪ್ರದೇಶಗಳಲ್ಲಿ ಶಿಕ್ಷಣವನ್ನು ಒದಗಿಸುವುದು, ಭಾರತದಲ್ಲಿ ಅಭಿವೃದ್ಧಿಗಾಗಿ ಅತ್ಯಂತ ನುರಿತ ಸಿಬ್ಬಂದಿಯನ್ನು ಉತ್ಪಾದಿಸುವುದು, ಅಂತರಾಷ್ಟ್ರೀಯ ಮಟ್ಟಗಳಲ್ಲಿ ಶಿಕ್ಷಣ ಗುಣಮಟ್ಟವನ್ನು ಕಾಪಾಡುವುದು ಇವುಗಳನ್ನು ಶಿಕ್ಷಣದ ಖಾಸಗೀಕರಣದ ಉದ್ದೇಶಗಳು ಎಂದು ಹೇಳಬಹುದು.

## ಶಿಕ್ಷಣದ ಮೇಲೆ ಖಾಸಗೀಕರಣದ ಪರಿಣಾಮ

### ಶಿಕ್ಷಣದ ಖಾಸಗೀಕರಣದ ಧನಾತ್ಮಕ ಪರಿಣಾಮಗಳು

ಆಧುನಿಕ ಸಮಾಜದಲ್ಲಿ ಖಾಸಗೀಕರಣದ ಧನಾತ್ಮಕ ಪರಿಣಾಮಗಳಲ್ಲಿ ಉನ್ನತ ಶಿಕ್ಷಣ ದೊರಕುವಂತಾಗಿರುವುದು ಒಂದು ಪ್ರಮುಖ ಅಂಶ. ಖಾಸಗೀಕರಣವು ಉನ್ನತ ಶಿಕ್ಷಣದ ಬೇಡಿಕೆ ಮತ್ತು ಪೂರೈಕೆಯ ನಡುವಣ ಅಂತರವನ್ನು ಹೆಚ್ಚಿಸುತ್ತದೆ. ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಗಮನಿಸಿದಂತೆ ಉನ್ನತ ಶಿಕ್ಷಣದ ಬೇಡಿಕೆಯು ಅದರ ಪೂರೈಕೆಗಿಂತ ಕಡಿಮೆಯಾಗಿರುವುದು. ಶಾಲಾ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಅಪೇಕ್ಷಿತರ ಸಂಖ್ಯೆ ಹೆಚ್ಚುತ್ತಿದ್ದಂತೆ ಸರ್ಕಾರವೊಂದೇ ಹೆಚ್ಚು ಸಂಖ್ಯೆಯ ಶಾಲಾ ಕಾಲೇಜುಗಳನ್ನು ಒದಗಿಸಲಾರದು. ಬೇಡಿಕೆ ಮತ್ತು ಪೂರೈಕೆಯ ನಡುವಣ ಅಂತರ ಕುಗ್ಗಿಸಲು ಖಾಸಗಿ ಶಾಲಾ ಕಾಲೇಜುಗಳ ಬೆಳೆಯುತ್ತಿವೆ. ಉದಾಹರಣೆಗೆ, ಅತಿ ಅಪರೂಪವಾಗಿ ಸರ್ಕಾರವು ಬಿ.ಎಡ್ ಪದವೀಧರರನ್ನು ನೇಮಕ ಮಾಡಿಕೊಳ್ಳಲು ಕರೆ ನೀಡುತ್ತದೆ. ಆದರೆ ನೇಮಕ ಮಾಡಿಕೊಳ್ಳುವ ಸರ್ಕಾರದ ಖಾಲಿ ಹುದ್ದೆಗಳ ಸಂಖ್ಯೆಗೂ ಅದರ ಅರ್ಜಿ ಹಾಕುವವರ ಸಂಖ್ಯೆಗೂ ದೊಡ್ಡ ಕಂದಕವಿರುತ್ತದೆ. ಆದ್ದರಿಂದ ಎಲ್ಲರಿಗೂ ಉದ್ಯೋಗ ದೊರಕುವ ಖಾತರಿ ಇರುವುದಿಲ್ಲ. ಇಂತಹ ಕ್ಷಣಗಳಲ್ಲಿ ಖಾಸಗಿ ಕಾಲೇಜುಗಳು ಸಹಾಯ ಹಸ್ತ ಚಾಚಿರುವುದುಂಟು. ಅನೇಕ ಕಾಲೇಜುಗಳು ಖ್ಯಾತಿವೆತ್ತ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲಾ ಕಾಲೇಜುಗಳಿಂದ ಸ್ಥಾನೀಕರಣ (placement) ಅವಕಾಶವನ್ನು ಏರ್ಪಡಿಸುತ್ತವೆ. ಸ್ವಲ್ಪಮಟ್ಟಿಗೆ ಇದು ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತದೆ. ಇದರಿಂದ ನಗರ ಪ್ರದೇಶಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದ ಮನೆಯ ಹತ್ತಿರದಲ್ಲೇ ಶಿಕ್ಷಣದ ಅವಕಾಶ ಲಭ್ಯವಾಗುತ್ತದೆ. ಇದರಿಂದಾಗಿ ಪೋಷಕರು ಮನೆಯ ಸಮೀಪದಲ್ಲಿ ಅಧ್ಯಯನ ಮಾಡಲು ಸಾಧ್ಯವಾಗುವ ಕೋರ್ಸ್‌ಗಳಿಗೆ ತಮ್ಮ ಮಕ್ಕಳನ್ನು ದಾಖಲು ಮಾಡುತ್ತಾರೆ. ಈ ಕೋರ್ಸುಗಳಲ್ಲಿ ಅವರಿಗೆ ಆಸಕ್ತಿ ಇದೆಯೇ, ಅದಕ್ಕೆ ಪೂರಕವಾದ

ಸಾಮರ್ಥ್ಯಗಳನ್ನು ಅವರು ಪಡೆದಿದ್ದಾರೆಯೇ ಎಂಬುದರ ಕಡೆಗೆ ಪೋಷಕರ ಗಮನವಿರುವುದಿಲ್ಲ. ಕೆಲವು ಖಾಸಗಿ ಸಂಸ್ಥೆಗಳು ಮಕ್ಕಳಿಗೆ ಕನಿಷ್ಟ ಅರ್ಹತೆಯಿದ್ದಾಗಲೂ ಪ್ರವೇಶಾವಕಾಶ ನೀಡುವುದೂ ಉಂಟು.

ಖಾಸಗೀಕರಣವು ವರಮಾನದ ಮತ್ತು ಉದ್ಯೋಗದ ಅವಕಾಶ ಸೃಷ್ಟಿಸುತ್ತದೆ. ಗ್ರಾಮಭಾಗಗಳಿಗೆ ಶಿಕ್ಷಣದ ಸೌಲಭ್ಯ ಕಲ್ಪಿಸಿ ಪ್ರಾದೇಶಿಕ ಅಭಿವೃದ್ಧಿಗೂ ಕಾರಣವಾಗುತ್ತದೆ, ಗ್ರಾಮಾಂತರ ಪ್ರದೇಶಗಳಲ್ಲಿ ಉನ್ನತ ಶಿಕ್ಷಣದ ಬೇಡಿಕೆಯನ್ನು ಹೆಚ್ಚಿಸುತ್ತದೆ. ಬಹಳಮಟ್ಟಿನ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲಾ ಆಯೋಜನೆ, ಉಪಕರಣಗಳ ಸಂಪನ್ಮೂಲಗಳು, ಕಟ್ಟಡ, ಪೀಠೋಪಕರಣ, ಸುಸಜ್ಜಿತ ಪ್ರಯೋಗಾಲಯಗಳು ಮತ್ತು ಇತರ ಮೂಲ ಸೌಕರ್ಯಗಳನ್ನು ಒದಗಿಸಿ ಉತ್ತಮ ಕಲಿಕೆಯ ವಾತಾವರಣವನ್ನು ಸೃಷ್ಟಿಸುತ್ತವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಉತ್ತಮ ಆಯ್ಕೆಯ ಅವಕಾಶವನ್ನೂ ಒದಗಿಸುತ್ತವೆ.

### ಖಾಸಗೀಕರಣದ ಋಣಾತ್ಮಕ ಪರಿಣಾಮಗಳು

- ದುಬಾರಿಯಾಗಿರುವುದರಿಂದ ಬಡ ಮತ್ತು ಮಧ್ಯಮ ವರ್ಗದವರು ಉನ್ನತ ಶಿಕ್ಷಣ ಪಡೆಯುವುದು ದುರ್ಭರವಾಗುತ್ತದೆ, ಅನೇಕ ಖಾಸಗೀ ಸಂಸ್ಥೆಗಳಲ್ಲಿ ಶಿಕ್ಷಕರ ಗುಣಮಟ್ಟ ದುರ್ಬಲವಾಗಿರುತ್ತದೆ. ಅನೇಕರು ಪೂರ್ಣ ಅರ್ಹತೆ ಮತ್ತು ಅನುಭವ ಹೊಂದಿರುವುದಿಲ್ಲ, ಖಾಸಗಿ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣ ಕೊಡುವಲ್ಲಿ ಪ್ರಾಮಾಣಿಕತೆಯೂ ಇಲ್ಲದಿದ್ದಾಗ ಸಮರ್ಥರಲ್ಲದ, ಅಗತ್ಯ ಅರ್ಹತೆಯಿಲ್ಲದ ವಿಷಯ ಮತ್ತು ಭಾಷಾಹಿಡಿತ ಇಲ್ಲದ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಾರೆ. ಹಾಗಾಗಿ ಕಲಿಕೆಯಲ್ಲಿ ಆಸಕ್ತಿ ಇಲ್ಲದ ವಿದ್ಯಾರ್ಥಿಗಳನ್ನೇ ಈ ಸಂಸ್ಥೆಗಳು ದಾಖಲು ಮಾಡಿಕೊಳ್ಳುತ್ತವೆ.
- ಅನೇಕ ಕಾಲೇಜುಗಳು ಅಸಮರ್ಪಕ ಮೂಲಸೌಕರ್ಯಗಳನ್ನು ಅಂದರೆ ಕಟ್ಟಡ, ಗ್ರಂಥಾಲಯ, ಪೀಠೋಪಕರಣ, ಗಾಳಿ–ಬೆಳಕು, ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಹೊಂದಿರುವುದಿಲ್ಲ.
- ಖಾಸಗಿ ಸಂಸ್ಥೆಗಳು ಶಿಕ್ಷಣವನ್ನು 'ಸಾಮಾಜಿಕ ಸರಕು' ಎಂದು ಗಣಿಸದೆ 'ಆರ್ಥಿಕ ಸರಕ'ನ್ನಾಗಿ ಬಳಸಿಕೊಂಡು ಹಣಗಳಿಕೆಯ ಉದ್ಯಮವನ್ನಾಗಿ ಮಾಡಿಬಿಡುತ್ತವೆ.
- ಶಿಕ್ಷಣದ ಗುಣಮಟ್ಟ ಕಳಪೆಯಾದರೂ ಉತ್ತಮ ಗುಣಮಟ್ಟದ ತೋರಿಕೆಯ ಭಾವನೆಯನ್ನು ನೀಡಲು ಎಲ್ಲ ಪ್ರಯತ್ನಗಳನ್ನು ಮಾಡುತ್ತವೆ.
- ಜೀವನಕ್ಕೆ ಸಿದ್ಧಗೊಳಿಸುವ ಬದಲು ಪರೀಕ್ಷೆಗೆ ಸಿದ್ಧಪಡಿಸಲು ಶಿಕ್ಷಣ ಸಂಸ್ಥೆಗಳನ್ನು ಉತ್ತೇಜಿಸುತ್ತಿವೆ.
- ಭಾರತದಲ್ಲಿ ಉನ್ನತ ಶಿಕ್ಷಣದ ಖಾಸಗೀಕರಣದಲ್ಲಿ ಶೋಷಣೆ ಮತ್ತು ಪಕ್ಷಪಾತ ಕಂಡುಬರುತ್ತಿವೆ.
- ಶಾಲೆಗಳು ಅಂಚಿಗೆ ತಳ್ಳಲ್ಪಟ್ಟ ಸಮೂಹಗಳನ್ನು ಅಲ್ಪ ಗೌರವದಿಂದ, ಅಗೌರವದಿಂದ ಕಾಣುತ್ತವೆ. ಇದರಿಂದ ಈಗಾಗಲೇ ಇರುವ ಸಾಮಾಜಿಕ ಅಸಮಾನತೆಯನ್ನು ಇನ್ನೂ ಬಲವಾಗಿ, ಸಮಾಜದ ಪ್ರಜಾಪ್ರಭುತ್ವ ದೃಷ್ಟಿಕೋನಗಳನ್ನು ನಿರ್ಬಲಗೊಳಿಸುತ್ತಿವೆ. ಹಣವಿರುವವರ ಅಧಿಪತ್ಯ ಹೆಚ್ಚುತ್ತಿದೆ.

### ಡಿಜಿಟಲೀಕರಣ (Digitalisation)

ನಿಮಗೆ ನಿಮ್ಮ ಪ್ರಮಾಣಪತ್ರವನ್ನು ಸ್ಕ್ಯಾನ್ ಮಾಡಿ ಅದನ್ನು ದಾಖಲಿಸಲು ಗೊತ್ತಿರಬಹುದು. ಅಂದರೆ ಆ ಪ್ರಮಾಣಪತ್ರವು ಸ್ಕ್ಯಾನ್ ಮಾಡಿ ದಾಖಲಿಸಿದ ಕಾರಣ ಅದು ಭೌತ ರೂಪದಲ್ಲಿರುವುದಿಲ್ಲ. ಈ ಉದಾಹರಣೆಯಿಂದ ನೀವು ಡಿಜಿಟಲ್ ರೂಪವಲ್ಲದ ಪ್ರಮಾಣಪತ್ರ ಮತ್ತು ಡಿಜಿಟಲ್ ರೂಪದ ಪ್ರಮಾಣ ಪತ್ರ ಎರಡನ್ನು ಸುಲಭವಾಗಿ ಗುರುತಿಸಬಲ್ಲಿರಿ, ಅಲ್ಲವೇ?

ಭೌತರೂಪದ ಪ್ರಮಾಣ ಪತ್ರ ಒಂದು ಡಿಜಿಟಲ್ ಅಲ್ಲದ ಸ್ವರೂಪದದ್ದಾದರೆ, ಅದರ ಸ್ಕ್ಯಾನ್ ಮಾಡಿದ ಪ್ರತಿಯು ಡಿಜಿಟಲ್ ರೂಪದಲ್ಲಿರುವುದು. ಇದು ಡಿಜಿಟಲೀಕರಣ ಪ್ರಕ್ರಿಯೆಯನ್ನು ತಿಳಿಸುತ್ತದೆ. ಡಿಜಿಟಲೀಕರಣ ಎಂದರೆ ಅನಲಾಗ್/ ಭೌತ ರೂಪದ–ಉದಾಹರಣೆಗೆ, ಕಾಗದದ ದಾಖಲೆಗಳು, ಮೈಕ್ರೋಫಿಲ್ಮ್ ಚಿತ್ರಗಳು,

ಛಾಯಾಚಿತ್ರಗಳು, ಶಬ್ದಗಳು ಇನ್ನೂ ಮುಂತಾದವುಗಳು–ಡಿಜಿಟಲ್ ಆವೃತ್ತಿಗಳನ್ನು ಸೃಷ್ಟಿಸುವುದು ಎಂದರ್ಥ. ಆದ್ದರಿಂದ, ಡಿಜಿಟಲ್ ಅಲ್ಲದವುಗಳನ್ನು (ಇತರ ಉದಾಹರಣೆಗಳು ಸಂಕೇತಗಳು (signals), ಆರೋಗ್ಯ ದಾಖಲೆಗಳು, ಸ್ಥಳ ವಿವರ, ಗುರುತಿನ ಚೀಟಿ, ಇತ್ಯಾದಿ,) ಡಿಜಿಟಲ್ ರೂಪಕ್ಕೆ 'ರೂಪಾಂತರಿಸಿ' ಕಂಪ್ಯೂಟಿಂಗ್ ಸಿಸ್ಟಮ್‌ನಿಂದ ಬಳಕೆಗೆ ಬರುವಂತೆ ಮಾಡುವುದು ಡಿಜಿಟಲೀಕರಣ.

**ಕೆಳಗೆ ಕೊಟ್ಟಿರುವ ಎರಡು ನಿದರ್ಶನಗಳನ್ನು ಗಮನಿಸಿರಿ :**

- ಒಂದು ಕಟ್ಟಡದ ಸ್ಕ್ಯಾನ್ ಮಾಡಿದ ನೀಲನಕ್ಷೆ.
- ವಿಶ್ವವಿದ್ಯಾನಿಲಯದ ಗ್ರಂಥಾಲಯವು ಡಿಜಿಟಲ್ ತಂತ್ರಜ್ಞಾನವನ್ನು ಬಳಸುತ್ತದೆ ಮತ್ತು ಅದರ ಸೇವಾ ಗುಣಮಟ್ಟವನ್ನು ಸುಧಾರಿಸಲು ಡಿಜಿಟಲ್ ಮಾಡಿದ ದತ್ತಾಂಶ ಒದಗಿಸುತ್ತದೆ.
- ಸೇವಾ ಗುಣಮಟ್ಟವನ್ನು ಹೆಚ್ಚಿಸಲು ರೈಲ್ವೆ ಗ್ರಾಹಕರ ಸೇವೆಯು ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ.
- ಗ್ರಾಹಕರ ಸೇವೆ ಸುಸೂತ್ರವಾಗಿ ನಡೆಯಲು ಗೂಗಲ್‌ನಿಂದ ಮಾಹಿತಿಯನ್ನು ಪಡೆಯುವುದು.

## ಶಿಕ್ಷಣದ ಮೇಲೆ ಡಿಜಿಟಲೀಕರಣದ ಪರಿಣಾಮ

ಪ್ರತಿ ದಿನದ ಬದುಕು ಡಿಜಿಟಲೀಕರಣಕ್ಕೆ ಒಳಗಾಗಿದೆ. ಯಾರಾದರೂ 19ನೇ ಶತಮಾನದವರು 2010ರ ತರಗತಿಗೆ ಪ್ರತ್ಯಕ್ಷವಾಗಿ ಬಂದು ವೀಕ್ಷಿಸಿದರೆ ಖಂಡಿತ ಅವರು ಸ್ತಂಭೀಭೂತರಾಗುವುದು ಸತ್ಯ! ಡಿಜಿಟಲೀಕರಣವು ಸ್ಮಾರ್ಟ್ ಬೋರ್ಡ್‌ನಿಂದ ಹಿಡಿದು ಐಪ್ಯಾಡ್‌ವರೆಗೆ ವಿಶ್ವದಲ್ಲಿ ಎಲ್ಲೆಡೆ ಇರುವಜ್ಞಾನ ಕ್ಷಣಾರ್ಧದಲ್ಲಿ ವಿಶ್ವ–ವ್ಯಾಪಿ ಜಾಲ (www)ದಲ್ಲಿ ತರಗತಿಯ ಮಕ್ಕಳಿಗೆ ದೊರಕುವಂತೆ ಮಾಡಿದೆ. ಇದರಿಂದ ಜನರು ಮತ್ತು ವಿದ್ಯಾರ್ಥಿಗಳು 21ನೇ ಶತಮಾನದಲ್ಲಿ ವಿಶ್ವ–ವ್ಯಾಪಿ ಜಾಲವನ್ನು ಬಳಸಿಕೊಂಡು ಪ್ರಗತಿಹೊಂದುತ್ತಿದ್ದಾರೆ. ಅಂತರ್‌ಜಾಲವು ಅಂತಹ ಒಂದು ಪ್ರಮುಖ ತಂತ್ರವಾಗಿದ್ದು ವಿದ್ಯಾರ್ಥಿಗಳು ಅದರ ಮೂಲಕ ವಿಚಾರಗಳನ್ನು ಹುಡುಕುವ, ಹರಡುವ, ಗ್ರಹಿಸುವ, ಅನ್ವಯಿಸುವ, ಹೊಸ ಶೋಧಗಳನ್ನು ಮಾಡುವ ಅವಕಾಶಗಳನ್ನು ಒದಗಿಸಿಕೊಟ್ಟಿದೆ. ಇದರಿಂದಾಗಿ ಸ್ವತಂತ್ರವಾಗಿ ಕಲಿಯುವ ಅವಕಾಶಗಳು ಸೃಷ್ಟಿಗೊಂಡಿವೆ. ಪರಾವಲಂಬನ ಕಡಿಮೆಯಾಗಿದೆ, ಮಾಹಿತಿಗಳನ್ನು ಮೌಲ್ಯೀಕರಿಸುವ ಸಾಧ್ಯತೆಗಳು ಸಾಧ್ಯವಾಗಿವೆ. ಶಿಕ್ಷಣ ಉದ್ಯಮದಲ್ಲಿ ಡಿಜಿಟಲೀಕರಣ ಒಟ್ಟಾರೆ ಬೋಧನಾ ಕಲಿಕೆಯ ಪ್ರಕ್ರಿಯೆಗಳನ್ನು ಬದಲಿಸಿದೆ.

- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಮತ್ತು ಅರ್ಥಪೂರ್ಣ ಗ್ರಹಿಕೆಗೆ ಸಾಧನವಾಗಿದೆ.
- ತರಗತಿಯ ವಾತಾವರಣವನ್ನು ಹೆಚ್ಚು ವ್ಯಾಪಕವಾಗಿ ಮತ್ತು ಕ್ರಿಯಾಶೀಲವಾಗಿ ಪರಿವರ್ತಿಸಲು ಸಹಕಾರಿಯಾಗಿವೆ.
- ವಿದ್ಯಾರ್ಥಿಗಳು ತರಗತಿ ಕೋಣೆಯ ಹೊರಗಿನ ಪ್ರಪಂಚದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುತ್ತಾರೆ,
- ತಂತ್ರಾಂಶಗಳು ಅಗತ್ಯವಿರುವಾಗ ಅಗತ್ಯವಿದ್ದಂತೆ ಬಳಸಲು ಸಹಾಯಮಾಡುತ್ತವೆ.
- ಸರ್ಕಾರವು 'ಅಂತರ್ಗತ ಶಿಕ್ಷಣ'ವನ್ನು ಕಡ್ಡಾಯಗೊಳಿಸಿರುವುದರಿಂದ, ಶಿಕ್ಷಣ ಸಂಸ್ಥೆಗಳು ಅಸಾಮರ್ಥ್ಯವಿರುವ ಮಕ್ಕಳಿಗಾಗಿಯೇ ವಿಶೇಷವಾಗಿ ರೂಪುಗೊಂಡಿರುವ ತಂತ್ರಾಂಶಗಳ ಸಹಾಯದಿಂದ ಪರಿಣಾಮಕಾರಿಯಾಗಿ ಬೋಧನೆ ಮಾಡಬಹುದಾಗಿದೆ.
- ಡಿಜಿಟಲೀಕರಣವು ಕಲಿಕೆಯ ವೇಗದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮದೇ ವೇಗದಲ್ಲಿ ತರಗತಿಯ ಹೊರಗೂ ಕಲಿಯಬಹುದಾಗಿದೆ.

- ಒತ್ತಡ–ಮುಕ್ತ ಕಲಿಕೆಯನ್ನು ಸಾಧ್ಯಮಾಡಿಕೊಟ್ಟಿದೆ.
- ಡಿಜಿಟಲೀಕರಣವು ಸಮಯದ ಉಳಿತಾಯ, ಜ್ಞಾನದ ಪ್ರಸಾರ, ದೃಕ್ ಶ್ರವಣ ಉಪಕ್ರಮದ ಮೂಲಕ ಪರಿಣಾಮಕಾರಿ ಕಲಿಕೆ, ಸ್ವ ಮೌಲ್ಯಮಾಪನ, ವಸ್ತುನಿಷ್ಠ ಮೌಲ್ಯಮಾಪನ, ಸ್ವ ಬೋಧನೆ ಇತ್ಯಾದಿ ವಿಷಯಗಳಲ್ಲಿ ಕ್ರಾಂತಿಯನ್ನೇ ಮಾಡಿಬಿಟ್ಟಿದೆ.
- 'ಡಿಜಿಟಲ್ ಇಂಡಿಯಾ' (digital India) ಆಶ್ರಯದಲ್ಲಿ ಭಾರತ ಸರಕಾರವು ಮಹತ್ವಾಕಾಂಕ್ಷೆಯ ಅನೇಕ ಪ್ರಾಜೆಕ್ಟ್ ಗಳನ್ನು ಪ್ರಾರಂಭಿಸಿದೆ. ಇದರಲ್ಲಿ NCERT ಪಠ್ಯ ಪುಸ್ತಕಗಳು, ಸ್ಟೇಟ್ ಬೋರ್ಡ್ ಪಠ್ಯಪುಸ್ತಕಗಳು, ಆನ್ ಲೈನ್ ಮೂಲಕ ದೊರಕುವವು. ಅವುಗಳನ್ನು 'ಆ್ಯಪ್'ಗಳ ಮೂಲಕ ಉಚಿತವಾಗಿ ಡೌನ್ಲೋಡ್ ಮಾಡಬಹುದು.
- ಭಾರತದಲ್ಲಿ ಡಿಜಿಲಾಕರ್ ಸೌಲಭ್ಯ (digi-locker)ವನ್ನು ಆರಂಭಿಸಲಾಗಿದೆ. ಇದರಿಂದ ಭಾರತೀಯರು ಒಂದು ಬಟನ್ ಒತ್ತುವ ಮೂಲಕ ಆನ್‌ಲೈನ್‌ನಲ್ಲಿ ತಮ್ಮ ಪ್ರಮಾಣ ಪತ್ರವನ್ನು ಪಡೆಯಬಹುದು ಇ–ಸಹಿ (e-sign) ಸೌಲಭ್ಯದಿಂದ ಆನ್‌ಲೈನ್‌ನಲ್ಲಿಯೇ ಫಾರಂಗಳನ್ನು ತುಂಬಿಸಿ ಕಳಿಸಬಹುದು ಮತ್ತು ಡಿಜಿಟ್ ಲಾಕರ್‌ನಿಂದ ನಕಲಿ ದಾಖಲೆಗಳ ಬಳಕೆಯನ್ನು ಹೊರಹಾಕುವ ಸಾಧ್ಯತೆ ಇದೆ.
- ಪ್ರಾಥಮಿಕ ಹಂತದಿಂದಲೇ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ ನಮ್ಮ ಮಕ್ಕಳು ಜಾಗತಿಕವಾಗಿ ಪೈಪೋಟಿ ನೀಡಲು ಸಾಧ್ಯ. ಆಡಿಯೋ, ವಿಡಿಯೋ ಮತ್ತು ಅನಿಮೇಷನ್ ಬಳಸಿಕೊಂಡು ಮಕ್ಕಳ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ನೀಡಬಹುದು ಎಂಬುದು ಈಗಿನ ವಿಚಾರ.
- ವೀಡಿಯೋ ಅನಿಮೇಶನ್ ಬಳಕೆ : ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಬಳಸುವುದರಿಂದ ಕಲಿಕೆಯನ್ನು ಸರಳಗೊಳಿಸಬಹುದು. ವಿದ್ಯಾರ್ಥಿಗಳು ಹೆಚ್ಚು ಒತ್ತಡವಿಲ್ಲದೇ ಸಂತಸದಿಂದ ಕಲಿಯುವಂತೆ ಮಾಡಬಹುದು. ಇದು ಸಂವಹನವನ್ನು ಇನ್ನಷ್ಟು ಸರಳಗೊಳಿಸುತ್ತದೆ ಮತ್ತು ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ಅವಶ್ಯಕತೆಗೆ ಅನುಗುಣವಾಗುವಂತೆ ಬೋಧಿಸಬಹುದು. ಇದು ಹಲವು ಮಂದಿ ಶಿಕ್ಷಕರು, ವಿಡಿಯೋಗಳು ಮತ್ತು ಅನಿಮೇಶನ್‌ಗಳನ್ನು ಬಳಸಿಕೊಂಡು ಮಕ್ಕಳನ್ನು ತೊಡಗಿಸಿಕಲಿಕಾ ಅನುಭವಗಳನ್ನು ಒದಗಿಸುವ ಅವಕಾಶವನ್ನು ನೀಡುತ್ತದೆ. ಇದಲ್ಲದೇ ವೈಯಕ್ತಿಕ ಅಗತ್ಯತೆಯ ಕಲಿಕೆ, ಹಿಮ್ಮಾಹಿತಿ ಮತ್ತು ಮೌಲ್ಯಮಾಪನ ಕೂಡ ಇದರ ಮೂಲಕ ಸಾಧ್ಯ. ಇದು ಪ್ರತಿಯೊಂದು ಮಗುವೂ ಕೂಡ ವೇಗವಾಗಿ ಹಾಗೂ ಸರಿಯಾದ ಕ್ರಮದಲ್ಲಿ ಕಲಿಯುವುದನ್ನು ಖಾತ್ರಿಪಡಿಸುತ್ತದೆ.

## ಬೃಹತ್ ಮುಕ್ತ ಆನ್ ಲೈನ್ ಶಿಕ್ಷಣ (MOOC)

ಬೃಹತ್ ಮುಕ್ತ ಆನ್ ಲೈನ್ ಶಿಕ್ಷಣ (massive open online courses)ದಲ್ಲಿ ಆನ್‌ಲೈನ್‌ನಲ್ಲಿ ವಿಡಿಯೋ, ಪಠ್ಯ, ಮಾಹಿತಿ, ವರ್ಣಚಿತ್ರಗಳು, ರೇಖಾಚಿತ್ರಗಳು (info graphics) ಮುಂತಾದವುಗಳು ಒಗ್ಗೂಡಿ ವಿವಿಧ ರೂಪಗಳ ಕಲಿಕಾ ವಸ್ತುಗಳಾಗುತ್ತವೆ. ಇವೆಲ್ಲವೂ ಸ್ವಕಲಿಕಾ ಸಾಮಗ್ರಿಯ ರೂಪದಲ್ಲಿ ಗ್ರಾಹಕರ ಅಗತ್ಯಾನುಸಾರಿ ಪ್ಯಾಕೇಜ್‌ನಲ್ಲಿ ಲಭ್ಯವಾಗುತ್ತಿವೆ.

ಡಿಜಿಟಲೀಕರಣದಿಂದಾಗಿ ಈಗ ಸಂಸ್ಥೆಗಳು ಗ್ರಾಹಕರ ಸಂಬಂಧಗಳ ನಿರ್ವಹಣೆಯ (CRM-customer relationship management) ಸಾಮರ್ಥ್ಯಗಳನ್ನು ಪತ್ತೆ ಮಾಡುತ್ತವೆ. ವಿದ್ಯಾರ್ಥಿಗಳು, ಪೋಷಕರು, ನಿರ್ವಾಹಕರು, ಶಿಕ್ಷಕರು ಮತ್ತು ಇತರ ಆಸಕ್ತಿ ಸಮೂಹಗಳೊಡನೆ ಸಂಬಂಧಗಳನ್ನು ನಿರ್ವಹಿಸಲು ಅಖಿಲ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗುತ್ತಿದೆ. ಇದನ್ನು ವಿದ್ಯಾರ್ಥಿಗಳ ಆಡಳಿತಾತ್ಮಕ ಅಥವಾ ಶೈಕ್ಷಣಿಕ ನಿರ್ಧಾರಗಳನ್ನು ಮಾಡಲು ಬಳಸಿಕೊಳ್ಳಬಹುದು.

## ಡಿಜಿಟಲೀಕರಣದ ದುಷ್ಪರಿಣಾಮಗಳು :

**ಆರೋಗ್ಯದ ಮೇಲೆ ದುಷ್ಪರಿಣಾಮ :** ಡಿಜಿಟಲೀಕರಣವು ಲ್ಯಾಪ್ಟಾಪ್‌ಗಳ ಬಳಕೆಯನ್ನು ಹೆಚ್ಚಿಸುತ್ತವೆ. ಅನೇಕ ವೈದ್ಯರು ಹೇಳಿರುವಂತೆ, ಸತತವಾಗಿ ಲ್ಯಾಪ್‌ಟಾಪ್ ನೋಡುತ್ತಿರುವುದರಿಂದ ನೇರವಾಗಿ ಕಣ್ಣಿನ ಮೇಲೆ ಪರಿಣಾಮ ಬೀರುವುದು ಮತ್ತು ಪರೋಕ್ಷವಾಗಿ ಮೆದುಳಿನ ಮೇಲೆ ಮತ್ತು ದೃಷ್ಟಿ ಕೇಂದ್ರೀಕರಿಸುವುದರ ಮೇಲೆ ಪರಿಣಾಮ ಬೀರುವುದು. ಆದ್ದರಿಂದ ಪುಸ್ತಕಗಳನ್ನು, ಕಪ್ಪು ಹಲಗೆ/ಹಸಿರು ಹಲಗೆಗಳನ್ನು ಸಂಪೂರ್ಣವಾಗಿ ಟ್ಯಾಬ್ (tabs) ಮತ್ತು ಪ್ರೊಜೆಕ್ಟರ್‌ಗಳು ಆಕ್ರಮಿಸುವುದು ಅಷ್ಟೇನೂ ಒಳ್ಳೆಯ ಆಲೋಚನೆಯಲ್ಲ.

**ಅಡಚಣೆಗೊಳಗಾದ ಬೋಧನಾ ವ್ಯವಸ್ಥೆ :** ಗೂಗಲ್ ಮತ್ತು ವಿಕಿಪೀಡಿಯ ಎಂಬ ಹೊಸ ರೂಪದ ಶಿಕ್ಷಕರಿಂದ ಬೋಧನಾ ರೀತಿಗೆ ಅಡಚಣೆಯಾಗುತ್ತಿರುವುದೂ ಉಂಟು. ಯಾವ ತಂತ್ರಜ್ಞಾನವೂ ಜೀವಂತ ಶಿಕ್ಷಕರ ಪಾತ್ರವನ್ನು ಬದಲಿಸಲು ಸಾಧ್ಯವಿಲ್ಲ ಎಂಬ ಮಾತು ಸತ್ಯ. ಒಬ್ಬ ಬುದ್ಧಿವಂತ ಶಿಕ್ಷಕರು ಉತ್ತಮವಾಗಿ ಬೋಧಿಸಲು ಅಂತರ್ ಜಾಲವನ್ನು ಬಳಸಿಕೊಳ್ಳಬಹುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

ಕೆಳಗೆ ಸೂಚಿಸಿರುವ ಪರಿಣಾಮಗಳನ್ನು ಜಾಗತೀಕರಣ (ಜಾ), ಖಾಸಗೀಕರಣ (ಖಾ) ಮತ್ತು ಡಿಜಿಟಲೀಕರಣದ (ಡಿ) ಶೀರ್ಷಿಕೆಗಳಡಿ ವರ್ಗೀಕರಿಸಿ.

1. 'ಅಂತರ್ಗತ ಶಿಕ್ಷಣ'ಕ್ಕೆ ಪೂರಕಸಾಮಗ್ರಿ
2. ಶಿಕ್ಷಣಕ್ಕಾಗಿ ಹೊರದೇಶಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ.
3. ತರಗತಿಯ ವಾತಾವರಣವನ್ನು ಹೆಚ್ಚು ಕ್ರಿಯಾಶೀಲವಾಗಿ ಪರಿವರ್ತಿಸಲು ಸಹಕಾರಿ
4. ವರಮಾನದ ಮತ್ತು ಉದ್ಯೋಗದ ಅವಕಾಶ
5. ಬೋಧಕರ ಮತ್ತು ಸಂಶೋಧಕರ ವಿನಿಮಯ ಕಾರ್ಯಕ್ರಮ.
6. ವಿದ್ಯಾರ್ಥಿಗಳಿಗೆ ಉತ್ತಮ ಮತ್ತು ಅರ್ಥಪೂರ್ಣ ಕಲಿಕೆ
7. ಗ್ರಾಮ ಭಾಗಗಳಿಗೆ ಶಿಕ್ಷಣದ ಸೌಲಭ್ಯ
8. ಶೈಕ್ಷಣಿಕ ಪಠ್ಯಕ್ರಮಗಳಿಗೆ ಹೆಚ್ಚಿನ ಅಂತರಾಷ್ಟ್ರೀಯ ಮಾರುಕಟ್ಟೆ, ಕ್ಯಾಂಪಸ್ ಶಾಲೆಗಳ ಸ್ಥಾಪನೆ.
9. ಉನ್ನತ ಶಿಕ್ಷಣ ಸೇವೆಗಳ ಆಮದು ರಫ್ತು ಸಾಧ್ಯತೆ.
10. ವಿದ್ಯಾರ್ಥಿಗಳು ತಮ್ಮದೇ ವೇಗದಲ್ಲಿ ತರಗತಿಯ ಹೊರಗೂ ಕಲಿಯುವ ಅವಕಾಶ
11. ಉನ್ನತ ಶಿಕ್ಷಣದ ಬೇಡಿಕೆ ಮತ್ತು ಪೂರೈಕೆಯ ನಡುವಣ ಅಚಿತರ ಸೃಷ್ಟಿ
12. ವಿದ್ಯಾರ್ಥಿಗಳು ತರಗತಿ ಕೋಣೆಯ ಹೊರಗಿನ ಪ್ರಪಂಚದೊಂದಿಗೆ ಸಂಪರ್ಕ
13. ಉನ್ನತ ಶಿಕ್ಷಣದ ಬೇಡಿಕೆ

## ಸಾರಾಂಶಿಸೋಣ

- ವಸಾಹತು ಸರ್ಕಾರವು ಗತಕಾಲದಲ್ಲಿ ಸಾಮಾಜಿಕ ಬದಲಾವಣೆಗಳೊಂದಿಗೆ ಕೈಗಾರಿಕೀಕರಣ; ನಗರೀಕರಣ; ಆಧುನೀಕರಣ; ಉದಾರೀಕರಣ; ಖಾಸಗೀಕರಣ; ಡಿಜಿಟಲೀಕರಣ; ಜಾಗತೀಕರಣ ಮುಂತಾದ ವಿದ್ಯಮಾನಗಳಿಗೆ ಎಡೆ ಮಾಡಿತು.

- ಈ ಪ್ರತಿಯೊಂದು ಸನ್ನಿವೇಶವೂ ಭಾರತದ ವಿವಿಧ ಕ್ಷೇತ್ರಗಳಲ್ಲಿ ವಿಶೇಷವಾದ ಪರಿಣಾಮಗಳನ್ನುಂಟು ಮಾಡಿತು.
- ಪ್ರತಿಯೊಂದು ಸನ್ನಿವೇಶವೂ ಶಿಕ್ಷಣದ ಮೇಲೆ ವಿಶೇಷ ಪರಿಣಾಮಗಳನ್ನುಂಟುಮಾಡಿದೆ.
- ಇವುಗಳಲ್ಲಿ ಕೆಲವು ಧನಾತ್ಮಕ ಪರಿಣಾಮಗಳಾದರೆ ಮತ್ತೆ ಕೆಲವು ಋಣಾತ್ಮಕವಾದವುಗಳು.

## 1.6.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು –1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1**

1, 3, 5, 6–✓

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2**

1, 3, 5, 7, – ಅ, 2, 4, 6, 8–ಉ

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3**

1, 3, 6, 9, 10, 12– ಡಿಜಿಟಲೀಕರಣ, 2, 5, 8, 9– ಜಾಗತೀಕರಣ, 4, 7, 11, 13– ಖಾಸಗೀಕರಣ

## 1.6.6 ಘಟಕಾಂತ್ಯ ಪ್ರಶ್ನೆಗಳು

1. ಭಾರತದ ಶಿಕ್ಷಣದ ಮೇಲೆ ಕೈಗಾರಿಕೀಕರಣ, ನಗರೀಕರಣ ಮತ್ತು ಆಧುನಿಕರಣಗಳ ಪರಿಣಾಮಗಳನ್ನು ವಿವರಿಸಿರಿ.
2. ಆರ್ಥಿಕ ಉದಾರೀಕರಣವು ಮತ್ತು ಡಿಜಿಟಲೀಕರಣವು ಶಿಕ್ಷಣದ ಮೇಲೆ ಬೀರಿದ ಪ್ರಭಾವವನ್ನು ವಿವರಿಸಿ.

## 1.6.7. ಪರಾಮರ್ಶನಸೂಚಿ :


1. Economic Liberalization in 1991 and Its Impact on Elementary Education in IndiaS. Venkatanarayanan, First Published June 4, 2015 Research Article, Sage publications
2. Census of India 2011, RURAL URBAN DISTRIBUTION OF POPULATION
3. Impact of Privatisation of Education in Indian Society by S. Samuel Ravi,Professor of Economics, N.M Christian College Marthandam, Tamil Nadu, 629165, samuelraviss@gmail.com. Journal of Culture, Society and Development www.iiste.org ISSN 2422-8400 An International Peer-reviewed Journal Vol.6, 2015
4. Goyal, Krishan. A. Impact of globalisation on developing countries with special reference to India(2007).
5. Meenu,Impact of Globalisation and Libralisation on Indian administration(2013).

6. . A study of globalization challenges and SWOT analysis of edn in India by Girija Shankar Ph.D scholar(edn)2014-17 Kalinga University Raipur International journal of business Administration & Management, ISSN 2278-3660, VOLUME7, NUMBER1 (2017) @ Research India Publications http// www.ripubliction.com

7. Census of India 2011 (Provisional Population Totals), DR C. Chandramouli Registrar General & Census Commissioner, India Ministry of Home Affairs New Delhi : 15th July 2011.

   http://www.dreducation.com/2013/08/data-statistics-india-student-college.html (August 25

8. , 2013)

9. All India Survey on Higher Education (2015-16), Government of India, MHRD Department of Higher Education New Delhi, 2016

10. Impact of Digital Technology on Education, Conference Paper, August 2005

    https://www.zeroerp.com/

11. : How Digital India impact on Education Sector

**********

# ಬ್ಲಾಕ್–2 : ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು

## ಘಟಕ–1 : ರಾಷ್ಟ್ರೀಯ ಆದರ್ಶಗಳನ್ನು ಬಿಂಭಿಸುವ ಸಂವಿಧಾನಾತ್ಮಕ ಪ್ರಾವಧಾನಗಳು

**ಘಟಕದ ರಚನೆ :**


2.1.1. ಕಲಿಕಾ ಉದ್ದೇಶಗಳು

2.1.2. ಪೀಠಿಕೆ

2.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.1.3.1. ರಾಷ್ಟ್ರೀಯ ಆದರ್ಶಗಳು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ಅವಕಾಶಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

2.1.3.2. ಸಂವಿಧಾನಾತ್ಮಕ ಅವಕಾಶಗಳ ಮಹತ್ವ ಮತ್ತು ಅವುಗಳ ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

2.1.3.4. ಸಾರಾಂಶಿಸೋಣ

2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

2.1.6. ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಸೂಚಿ


## 2.1.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಸಂವಿಧಾನಾತ್ಮಕ ಅವಕಾಶಗಳು ಎಂದರೇನು ಎಂಬುದನ್ನು ವಿವರಿಸುವರು;
- ರಾಷ್ಟ್ರೀಯ ಆದರ್ಶಗಳನ್ನು ಸಾಧಿಸಲು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ವಿವಿಧ ಅವಕಾಶಗಳನ್ನು ವಿಶ್ಲೇಷಿಸುವರು;
- ಸಂವಿಧಾನಾತ್ಮಕ ಹಕ್ಕುಗಳ ಮೌಲ್ಯವನ್ನು ಗ್ರಹಿಸಿ ಪ್ರಶಂಸಿಸುವರು;
- ಪ್ರಜಾಪ್ರಭುತ್ವದ ಉದ್ದೇಶಗಳ ಸಾಧನೆಗೆ ಸರ್ಕಾರದ ಪ್ರಯತ್ನಗಳನ್ನು ಗ್ರಹಿಸಿ ಪ್ರಶಂಸಿಸುವರು; ಮತ್ತು
- ರಾಷ್ಟ್ರಗಳ ಆದರ್ಶಗಳನ್ನು ಅಭ್ಯಸಿಸಲು ಮಾದರಿ ವ್ಯಕ್ತಿಯಂತೆ ನಡೆದುಕೊಳ್ಳುವರು.

## 2.1.2. ಪೀಠಿಕೆ

ವ್ಯಕ್ತಿಯ ಜೀವನದಲ್ಲಿ ಶಿಕ್ಷಣ ಎಷ್ಟು ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು ಕುರಿತು ನಾವು ನಮ್ಮ ತರಗತಿಗಳಲ್ಲಿ ಆಗಿಂದಾಗ್ಗೆ ಮಾತನಾಡುತ್ತಲೇ ಇರುತ್ತೇವೆ. ರಾಷ್ಟ್ರದ ಆಳ್ವಿಕೆಯಲ್ಲಿ ಪ್ರತಿ ವ್ಯಕ್ತಿಯೂ ಜವಾಬ್ದಾರಿಯುತವಾದ ಪಾತ್ರವನ್ನು ವಹಿಸುವ ಸನ್ನಿವೇಶವಿರುವ ಈ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಶಿಕ್ಷಣ ಅತಿ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಒಂದು ಸಂಪೂರ್ಣ ಶಿಕ್ಷಣ ವ್ಯವಸ್ಥೆಯು ವಿಸ್ತಾರವಾದ ವಿಷಯ ಕ್ಷೇತ್ರಗಳಲ್ಲಿ ಮುಂದಾಲೋಚಿತ ಜ್ಞಾನ ಮತ್ತು ಕೌಶಲಗಳುಳ್ಳ ಅರ್ಹ ವ್ಯಕ್ತಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುತ್ತದೆ. ಆ ಮೂಲಕ ರಾಷ್ಟ್ರದ ಪ್ರಗತಿಯ ಕಾರ್ಯದಲ್ಲಿ ಯಶಸ್ವಿಯಾಗಿ ಭಾಗವಹಿಸುವ ವ್ಯಕ್ತಿಗಳನ್ನು ಸಿದ್ಧಗೊಳಿಸುತ್ತದೆ. ಶಾಲಾ ಕಾಲೇಜುಗಳಲ್ಲಿ ಒದಗಿಸಲಾಗುವ, ಆದರೆ ಅದಕ್ಕೆ ಮಿತಿಯಾಗದ ಶೈಕ್ಷಣಿಕ ಸೌಲಭ್ಯಗಳಿಂದ, ಜನರು ತಮ್ಮನ್ನು ತಾವು ಸಿದ್ಧಪಡಿಸಿಕೊಂಡು ರಾಷ್ಟ್ರದ ಬೆಳವಣಿಗೆಗೆ ಕೊಡುಗೆ ನೀಡಬಹುದು. ಶಿಕ್ಷಣವು ಸಂಸ್ಕೃತಿಯ ಮೇಲೆ ವಿಶೇಷವಾದ ಪ್ರಭಾವವನ್ನು ಬೀರುತ್ತದೆ. ಇದು ರಾಷ್ಟ್ರದ ಬೆಳವಣಿಗೆಯಲ್ಲಿ ಹೆಚ್ಚಿನ ಪಾತ್ರ ವಹಿಸುತ್ತದೆ. ಹಲವಾರು ವರ್ಷಗಳಿಂದ ಶಿಕ್ಷಣವು ಸಮಾಜದ ಅವಿಭಾಜ್ಯ ಅಂಗವಾಗಿರುವುದಲ್ಲದೆ, ದೇಶದ ಪ್ರಗತಿಗೆ ಪ್ರಮುಖ ಕಾರಕವಾಗಿದೆ.

ಶಿಕ್ಷಣದ ಮಹತ್ವವನ್ನರಿತ ನಮ್ಮ ಸಂವಿಧಾನ ರಚನಕಾರರು ಶಿಕ್ಷಣದಿಂದ ಅನೇಕ ಗುರಿಗಳನ್ನು ಸಾಧಿಸಬಹುದು ಎಂಬುದನ್ನು ಗುರುತಿಸಿದ್ದಾರೆ. ಸಂವಿಧಾನದ ಬಹುತೇಕ ಎಲ್ಲ ವಿಧಿಗಳೂ ಶಿಕ್ಷಣದ ಪಾತ್ರವನ್ನು ನೇರ ಅಥವಾ ಪರೋಕ್ಷವಾಗಿ ಗುರುತಿಸಿದೆ. ಶಿಕ್ಷಣ ಮಾಧ್ಯಮದ ಮೂಲಕ ರಾಷ್ಟ್ರೀಯ ಆದರ್ಶಗಳನ್ನು ಸಾಧಿಸಲು ಸಾಧ್ಯ ಎಂಬುದನ್ನು ಪ್ರಸ್ತಾವನೆಯ ಭಾಗದಲ್ಲಿ ಹೇಳಲಾಗಿರುವುದನ್ನು ಗಮನಿಸಬೇಕು. ಆದಕಾರಣ, ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಸಂವಿಧಾನಾತ್ಮಕ ಅವಕಾಶಗಳು ಶಿಕ್ಷಣವನ್ನು ಸುಧಾರಿಸುವ ಮತ್ತು ಬಲಪಡಿಸುವ ನಿಟ್ಟಿನಲ್ಲಿ ಅನೇಕ ಅವಕಾಶಗಳನ್ನು ಕಲ್ಪಿಸಿವೆ. ಹೀಗೆ, ರಾಷ್ಟ್ರೀಯ ಗುರಿಗಳ ಸಾಧನೆಗೆ ಶಿಕ್ಷಣ ಕ್ಷೇತ್ರದಲ್ಲಿ ಸಂವಿಧಾನಾತ್ಮಕವಾಗಿ ಕೊಡಮಾಡಿರುವ ಅವಕಾಶಗಳು/ ಪ್ರಾವಧಾನಗಳನ್ನು ಈ ಘಟಕದಲ್ಲಿ ಚರ್ಚಿಸೋಣ.

## 2.1.3.1. ರಾಷ್ಟ್ರೀಯ ಆದರ್ಶಗಳು ಮತ್ತು ಸಂವಿಧಾನಾತ್ಮಕ ಅವಕಾಶಗಳು

'ರಾಷ್ಟ್ರೀಯ ಆದರ್ಶ' ಎಂಬುದು 'ರಾಷ್ಟ್ರ' ಮತ್ತು 'ಆದರ್ಶ' ಎಂಬ ಎರಡು ಪದಗಳಿಂದ ಮೂಡಿದುದು. ಭಾಷೆ, ಪ್ರದೇಶ, ತತ್ವಶಾಸ್ತ್ರ, ಇತಿಹಾಸ, ಜನಾಂಗ ಮತ್ತು ಮನೋವೈಜ್ಞಾನಿಕ ಇತ್ಯಾದಿ ಸಾಮಾನ್ಯ ಮಾನದಂಡಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಸಾಮಾನ್ಯ ಸಂಸ್ಕೃತಿಯನ್ನೂ ಒಂದು ಸ್ಥಿರ ಸಮುದಾಯವನ್ನೂ ಒಳಗೊಂಡಿರುವುದೇ ರಾಷ್ಟ್ರ. ಆದರ್ಶ ಎಂದರೆ ತತ್ವಗಳು ಅಥವಾ ಜೀವನದ ಉನ್ನತ ಮಾರ್ಗಗಳು. ಹಾಗಾಗಿ ರಾಷ್ಟ್ರೀಯ ಆದರ್ಶಗಳು ಎಂದರೆ ಆಯಾ ರಾಷ್ಟ್ರದ ಜನತೆ ಒಪ್ಪಿಕೊಂಡಿರುವ ಜೀವನ ಮಾರ್ಗಗಳು, ನಂಬಿಕೆಗಳು. ಈ ನಂಬಿಕೆಗಳ ಹಿನ್ನೆಲೆಯಲ್ಲಿ ರಾಷ್ಟ್ರದ ಆಡಳಿತವು ಸಮುದಾಯದ ಚಲನೆಗೆ ಅನುಗುಣವಾಗಿರುತ್ತದೆ. ಆಡಳಿತವು ಯಾವುದೇ ಒಡಂಬಡಿಕೆಯ ಹಿನ್ನೆಲೆಯಲ್ಲಿ ಸಾಗುತ್ತದೆ ಎಂದಲ್ಲ. ಆದರೆ ಜನರ ಈ ಆದರ್ಶಗಳಿಗೆ ಆಯಾ ರಾಷ್ಟ್ರದ ಆಡಳಿತ ಬದ್ಧವಾಗಿರಬೇಕಷ್ಟೆ.

ಸಂವಿಧಾನವು ಹಲವಾರು ಉತ್ತಮ ಮೌಲ್ಯಗಳನ್ನೊಳಗೊಂಡಿದೆ. ಇಂತಹ ಮೌಲ್ಯಗಳನ್ನು ರಾಷ್ಟ್ರೀಯ ಆದರ್ಶಗಳೆಂದು ಹೇಳುವುದರ ಮೂಲಕ ಸಂವಿಧಾನವು ಅದರ ಪ್ರಾಮುಖ್ಯತೆಯನ್ನು ಸ್ಥಿರಪಡಿಸಿದೆ. ಈ ಮೌಲ್ಯಗಳು ಆಧುನಿಕ ಪ್ರಪಂಚದ ಸಾರ್ವತ್ರಿಕ, ಮಾನವೀಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಾಗಿವೆ.

### ಸಂವಿಧಾನಾತ್ಮಕ ಅವಕಾಶಗಳು

ಭಾರತ ಸಂವಿಧಾನವು ದೇಶದಲ್ಲಿನ ಶಿಕ್ಷಣದ ಪ್ರಗತಿಗೆ ಕೆಲವು ನಿರ್ದೇಶನಗಳನ್ನು ಮತ್ತು ಸಲಹೆಗಳನ್ನು ನೀಡಿದೆ. ಇವುಗಳನ್ನೇ ಸಂವಿಧಾನಾತ್ಮಕ ಅವಕಾಶಗಳು ಎನ್ನಲಾಗಿದ್ದು ಅವುಗಳನ್ನು ವಿಧಿಗಳಾಗಿ ಗುರುತಿಸಿದೆ. ಪ್ರತಿಯೊಂದು ವಿಧಿಯೂ ರಾಷ್ಟ್ರೀಯ ಆದರ್ಶಗಳನ್ನು ವಿವಿಧ ಮಾರ್ಗಗಳಲ್ಲಿ ಪೋಷಿಸಿದೆ. ಉದಾಹರಣೆಗೆ,

ಅಸ್ಪೃಶ್ಯತಾ ನಿವಾರಣೆಯ ಕಾಯಿದೆಯು ಪರೋಕ್ಷವಾಗಿ ರಾಷ್ಟ್ರೀಯ ಆದರ್ಶಗಳಾದ ನ್ಯಾಯ, ಸಮಾನತೆ ಮತ್ತು ವ್ಯಕ್ತಿ ಗೌರವವನ್ನು ಪೋಷಿಸುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಸಂವಿಧಾನಾತ್ಮಕ ಪ್ರಾವಧಾನಗಳು ಬಹುತೇಕವಾಗಿ ರಾಷ್ಟ್ರದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳಿಗನುಗುಣವಾಗಿಯೇ ರೂಪಿತವಾಗಿವೆ. ಶಿಕ್ಷಣದ ಮಾಧ್ಯಮದ ಮೂಲಕ ಜನರ ಗುರಿಗಳನ್ನು ಸಾಧಿಸುವುದೇ ಅವುಗಳ ಗುರಿ. ಶೈಕ್ಷಣಿಕ ಚಟುವಟಿಕೆಗಳ ಮೂಲಕ ಅವುಗಳನ್ನು ಸಾಧಿಸುವುದೇ ನಮ್ಮ ಗುರಿಯೂ ಹೌದು.

## ಶಿಕ್ಷಣಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ಅವಕಾಶಗಳು :

## ಕಾನೂನಿನ ರಕ್ಷಣೆ ಮತ್ತು ನಿರ್ವಹಣೆ

ಸಂವಿಧಾನದ ಮೂಲಭೂತ ಅವಶ್ಯಕತೆ ಎಂದರೆ ಸಂವಿಧಾನದ ನೀತಿ ನಿಯಮಗಳ ಸಂರಕ್ಷಣೆ ಮತ್ತು ಅದಕ್ಕನುಗುಣವಾದ ಕಾನೂನುಗಳ ರಚನೆಯೇ ಆಗಿದೆ. ಅದರಂತೆ ಯಾವುದೇ ಸಂವಿಧಾನಾತ್ಮಕ ಅವಕಾಶಗಳನ್ನು ಒದಗಿಸುವ ಮೊದಲ ಹಂತವೇ ಕಾನೂನು ರಕ್ಷಣೆ ಮತ್ತು ನಿರ್ವಹಣೆಗೆ ಸಂಬಂಧಿಸಿದುದು.

**ವಿಧಿ 13 :** ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳು ಕಾನೂನು ರೂಪಿಸುವುದನ್ನು ನಮ್ಮ ಸಂವಿಧಾನವು ನಿಷೇಧಿಸುತ್ತದೆ ಮತ್ತು ಆ ಖಂಡವನ್ನು ಉಲ್ಲಂಘಿಸಿ ಮಾಡಲಾದ ಯಾವುದೇ ಕಾನೂನು, ಆ ಉಲ್ಲಂಘನೆಯ ಮಟ್ಟಿಗೆ ಶೂನ್ಯವಾಗಿರತಕ್ಕದ್ದು.

"ಕಾನೂನು" ಎಂಬುದು ಯಾವುದೇ ಅಧ್ಯಾದೇಶ, ಆದೇಶ, ಉಪವಿಧಿ, ನಿಯಮ, ವಿನಿಯಮ, ಅಧಿಸೂಚನೆ ಅಥವಾ ಭಾರತದ ರಾಜ್ಯಕ್ಷೇತ್ರದಲ್ಲಿ ಕಾನೂನಿನ ಬಲವುಳ್ಳ ರೂಢಿ ಅಥವಾ ಆಚರಣೆಯನ್ನು ಒಳಗೊಳ್ಳುತ್ತದೆ;

"ಜಾರಿಯಲ್ಲಿರುವ ಕಾನೂನುಗಳು" ಎಂಬುದು ಭಾರತದ ರಾಜ್ಯಕ್ಷೇತ್ರದಲ್ಲಿನ ಯಾವುದೇ ವಿಧಾನಮಂಡಲದಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರದಿಂದ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಅಂಗೀಕೃತವಾಗಿದ್ದ ಅಥವಾ ಮಾಡಲಾಗಿದ್ದ ಮತ್ತು ಈ ಹಿಂದೆ ನಿರಸಿತವಾಗಿರದ ಕಾನೂನುಗಳನ್ನು, ಅಂಥ ಯಾವುದೇ ಕಾನೂನು ಅಥವಾ ಅವುಗಳ ಯಾವುದೇ ಭಾಗವು, ಆಗ ಎಲ್ಲ ಪ್ರದೇಶಗಳಲ್ಲಿ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ ಜಾರಿಯಲ್ಲಿ ಇಲ್ಲದಿದ್ದಾಗ್ಯೂ, ಒಳಗೊಳ್ಳುತ್ತದೆ.

## ವಿಧಿ 45 : ಉಚಿತ ಮತ್ತು ಕಡ್ಡಾಯ ಶಿಕ್ಷಣ

ವಿಧಿ 45ರ ಅಡಿಯ ರಾಜ್ಯ ನೀತಿ ನಿರ್ದೇಶಕ ತತ್ವಗಳಡಿಯಲ್ಲಿ ಗುರುತಿಸುವುದೇನೆಂದರೆ, "ರಾಜ್ಯವು ಸಂವಿಧಾನ ಜಾರಿಯಾದ ಮುಂದಿನ ಹತ್ತು ವರ್ಷಗಳೊಳಗೆ ಪ್ರತಿಯೊಂದು ಮಗುವಿಗೂ ಹದಿನಾಲ್ಕು ವರ್ಷ ವಯಸ್ಸಿನವರೆಗೆ ಶಿಕ್ಷಣವನ್ನು ಉಚಿತವಾಗಿ ಹಾಗೂ ಕಡ್ಡಾಯವಾಗಿ ನೀಡುವುದು"

"ರಾಜ್ಯ" ಎಂಬ ಪದವು ಭಾರತದ ಸರ್ಕಾರವನ್ನು ಮತ್ತು ಸಂಸತ್ತನ್ನು ಮತ್ತು ರಾಜ್ಯಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯದ ಸರ್ಕಾರವನ್ನು ಮತ್ತು ವಿಧಾನಮಂಡಲವನ್ನು ಹಾಗೂ ಭಾರತದ ರಾಜ್ಯಕ್ಷೇತ್ರದೊಳಗಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಎಲ್ಲ ಸ್ಥಳೀಯ ಪ್ರಾಧಿಕಾರಗಳನ್ನು ಅಥವಾ ಇತರ ಪ್ರಾಧಿಕಾರಗಳನ್ನು ಒಳಗೊಳ್ಳುತ್ತದೆ. ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಹೊಣೆಯು ರಾಜ್ಯ ಮತ್ತು ಕೇಂದ್ರ ಸರ್ಕಾರಗಳದ್ದಾಗಿರುತ್ತದೆ ಎಂಬುದನ್ನು ವಿಧಿ 45 ಸ್ಪಷ್ಟವಾಗಿ ಹೇಳುತ್ತದೆ. ಆದರೆ, 2002ರಲ್ಲಿ ಆದ 86 ನೇ ಸಂವಿಧಾನ ತಿದ್ದುಪಡಿಯ ಪ್ರಕಾರ ಇದು ಮೂಲಭೂತ ಹಕ್ಕು ಎಂಬುದಾಗಿ ಪರಿವರ್ತನೆಗೊಂಡಿದೆ.

ಪ್ರಸ್ತುತ ವಿಧಿ 45 "ರಾಜ್ಯವು ಆರು ವರ್ಷ ವಯಸ್ಸು ಪೂರ್ತಿಯಾಗುವ ತನಕ ಎಲ್ಲ ಮಕ್ಕಳ ಶೈಶವಾವಸ್ಥೆಯ ಪಾಲನೆಗೆ ಮತ್ತು ಅವರಿಗೆ ಶಿಕ್ಷಣ ಒದಗಿಸುವುದಕ್ಕೆ ಪ್ರಯತ್ನಿಸತಕ್ಕದ್ದು" ಎಂದು ಹೇಳುತ್ತದೆ.

**ವಿಧಿ 21 ಎ. ಶಿಕ್ಷಣದ ಹಕ್ಕು**

ರಾಜ್ಯವು, ಕಾನೂನಿನ ಮೂಲಕ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು.

**ವಿಧಿ 28 :** ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವ ಧಾರ್ಮಿಕ ಶಿಕ್ಷಣದಲ್ಲಿ ಅಥವಾ ಧಾರ್ಮಿಕ ಉಪಾಸನೆಯಲ್ಲಿ ಹಾಜರಾಗುವ ಸ್ವಾತಂತ್ರ್ಯ

(1) ರಾಜ್ಯನಿಧಿಗಳಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಯಾವುದೇ ಧಾರ್ಮಿಕ ಶಿಕ್ಷಣವನ್ನು ನೀಡತಕ್ಕದ್ದಲ್ಲ.

(2) (1)ನೇ ಖಂಡದಲ್ಲಿ ಇರುವುದು ಯಾವುದೂ, ಯಾವ ಶಿಕ್ಷಣ ಸಂಸ್ಥೆಯಲ್ಲಿ ಧಾರ್ಮಿಕ ಶಿಕ್ಷಣ ಕೊಡತಕ್ಕದ್ದೆಂದು ಅಗತ್ಯಪಡಿಸುವ ಯಾವುದೇ ದತ್ತಿ ಅಥವಾ ನ್ಯಾಸದ ಮೇರೆಗೆ ಸ್ಥಾಪಿತವಾಗಿರುವ, ಯಾವ ಶಿಕ್ಷಣ ಸಂಸ್ಥೆಯ ಆಡಳಿತವನ್ನು ರಾಜ್ಯವು ನಡೆಸುತ್ತಿದೆಯೋ, ಅಂಥ ಶಿಕ್ಷಣ ಸಂಸ್ಥೆಗೆ ಅನ್ವಯಿಸತಕ್ಕದ್ದಲ್ಲ.

(3) ರಾಜ್ಯದ ಮನ್ನಣೆ ಪಡೆದ ಅಥವಾ ರಾಜ್ಯನಿಧಿಗಳಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಹಾಜರಾಗುವ ಯಾರೇ ವ್ಯಕ್ತಿಯು ಆ ಶೈಕ್ಷಣಿಕ ಸಂಸ್ಥೆಯಲ್ಲಿ ಕೊಡಬಹುದಾದ ಯಾವುದೇ ಧಾರ್ಮಿಕ ಶಿಕ್ಷಣದಲ್ಲಿ ಭಾಗವಹಿಸಲು ಅಥವಾ ಆ ಶೈಕ್ಷಣಿಕ ಸಂಸ್ಥೆಯಲ್ಲಿ ಅಥವಾ ಅದಕ್ಕೆ ಸೇರಿದ ಯಾವುದೇ ಆವರಣದಲ್ಲಿ ನಡೆಯಬಹುದಾದ ಯಾವುದೇ ಧಾರ್ಮಿಕ ಉಪಾಸನೆಗೆ ಹಾಜರಾಗಲು ತನ್ನ ಸಮ್ಮತಿಯನ್ನು ಕೊಟ್ಟಿದ್ದ ಹೊರತು ಅಥವಾ ಅವನು ಅಪ್ರಾಪ್ತ ವಯಸ್ಕನಾಗಿದ್ದರೆ, ಅವನ ಪಾಲಕನು ಅದಕ್ಕೆ ಸಮ್ಮತಿಯನ್ನು ಕೊಟ್ಟಿದ್ದ ಹೊರತು, ಹಾಗೆ ಭಾಗವಹಿಸುವಂತೆ ಅಥವಾ ಹಾಜರಾಗುವಂತೆ ಅವನನ್ನು ಅಗತ್ಯಪಡಿಸತಕ್ಕದ್ದಲ್ಲ.

**ವಿಧಿ 29 : ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ**

(1) ಭಾರತದ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸವಾಗಿರುವ ನಾಗರಿಕರ ಯಾವುದೇ ವಿಭಾಗವು ತನ್ನದೇ ಆದ ಯಾವುದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಆ ವಿಭಾಗವು ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

(2) ರಾಜ್ಯವು ನಿರ್ವಹಿಸುವ ಅಥವಾ ರಾಜ್ಯನಿಧಿಗಳಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಧರ್ಮ, ಮೂಲವಂಶ, ಜಾತಿ, ಭಾಷೆ, ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನಿಗೆ ಪ್ರವೇಶಾವಕಾಶವನ್ನು ನಿರಾಕರಿಸತಕ್ಕದ್ದಲ್ಲ.

**ವಿಧಿ 30 : ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು**

(1) ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಎಲ್ಲಾ ಅಲ್ಪಸಂಖ್ಯಾತ ವರ್ಗಗಳವರೂ ತಮ್ಮ ಇಷ್ಟಕ್ಕನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತವನ್ನು ನಡೆಸಲು ಹಕ್ಕುಳ್ಳವರಾಗಿರತಕ್ಕದ್ದು.

[(1ಎ) (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅಲ್ಪಸಂಖ್ಯಾತ ವರ್ಗವು ಸ್ಥಾಪಿಸಿದ ಮತ್ತು ಆಡಳಿತ ನಡೆಸುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಆರ್ಜನೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವ ಯಾವುದೇ ಕಾನೂನನ್ನು ಮಾಡುವಾಗ ರಾಜ್ಯವು,

ಅಂಥ ಸ್ವತ್ತಿನ ಆರ್ಜನೆಗಾಗಿ ಅಂಥ ಕಾನೂನಿನ ಮೂಲಕ ನಿಗದಿಪಡಿಸಿದ ಅಥವಾ ಅದರ ಮೇರೆಗೆ ನಿರ್ಧರಿಸಿದ ಮೊಬಲಗು ಆ ಖಂಡದ ಮೇರೆಗೆ ಖಾತ್ರಿಗೊಳಿಸಿದ ಹಕ್ಕನ್ನು ನಿರ್ಬಂಧಿಸುವುದಿಲ್ಲವೆಂದು ಅಥವಾ ಅಂಥ ಹಕ್ಕನ್ನು ರದ್ದುಪಡಿಸುವುದಿಲ್ಲವೆಂದು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಶೈಕ್ಷಣಿಕ ಸಂಸ್ಥೆಗಳಿಗೆ ನೆರವನ್ನು ನೀಡುವಲ್ಲಿ, ರಾಜ್ಯವು ಯಾವುದೇ ಶೈಕ್ಷಣಿಕ ಸಂಸ್ಥೆಯು ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಅಲ್ಪಸಂಖ್ಯಾತ ವರ್ಗದವರ ಆಡಳಿತದಲ್ಲಿ ಇದೆ ಎಂಬ ಕಾರಣದ ಮೇಲೆ ಅಂಥ ಸಂಸ್ಥೆಯ ವಿರುದ್ಧ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ.

## ವಿಧಿ 350ಎ. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು

ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವೂ ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸೌಲಭ್ಯಗಳನ್ನು ಒದಗಿಸುವುದನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು.

## ವಿಧಿ 350ಬಿ. ಭಾಷಾ ಅಲ್ಪಸಂಖ್ಯಾತರಿಗಾಗಿ ವಿಶೇಷ ಅಧಿಕಾರಿ

(1) ಭಾಷಾ ಅಲ್ಪಸಂಖ್ಯಾತರಿಗಾಗಿ ರಾಷ್ಟ್ರಪತಿಯು ನೇಮಕಮಾಡುವ ಒಬ್ಬ ವಿಶೇಷ ಅಧಿಕಾರಿ ಇರತಕ್ಕದ್ದು.

(2) ಈ ಸಂವಿಧಾನದ ಮೇರೆಗೆ, ಭಾಷಾ ಅಲ್ಪಸಂಖ್ಯಾತರಿಗಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತನಿಖೆ ಮಾಡುವುದು ಮತ್ತು ರಾಷ್ಟ್ರಪತಿಯು ನಿರ್ದೇಶಿಸಬಹುದಾದಂಥ ಅವಧಿಯ ಅಂತರಗಳಲ್ಲಿ ಆ ವಿಷಯಗಳ ಬಗ್ಗೆ ರಾಷ್ಟ್ರಪತಿಗೆ ವರದಿ ಮಾಡುವುದು ವಿಶೇಷ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ರಾಷ್ಟ್ರಪತಿಯು ಅಂಥ ಎಲ್ಲ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮತ್ತು ಸಂಬಂಧಪಟ್ಟ ರಾಜ್ಯಸರ್ಕಾರಗಳಿಗೆ ಅವುಗಳನ್ನು ಕಳುಹಿಸಿಕೊಡುವಂತೆ ಮಾಡತಕ್ಕದ್ದು.

## 351. ಹಿಂದಿ ಭಾಷೆಯ ಅಭಿವೃದ್ಧಿಗಾಗಿ ನಿರ್ದೇಶನ

ಭಾರತದ ಸಂಮಿಶ್ರ ಸಂಸ್ಕೃತಿಯ ಎಲ್ಲ ಮೂಲತತ್ವಗಳ ಅಭಿವ್ಯಕ್ತಿ ಮಾಧ್ಯಮವಾಗಿರುವಂತೆ ಹಿಂದಿ ಭಾಷೆಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಅದರ ಜಾಯಮಾನಕ್ಕೆ ಚ್ಯುತಿ ಬಾರದಂತೆ ಹಿಂದೂಸ್ಥಾನಿ ಭಾಷೆಯಲ್ಲಿ ಅಥವಾ ಎಂಟನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭಾರತದ ಇತರ ಭಾಷೆಗಳಲ್ಲಿ ಬಳಸಿರುವ ರೂಪಗಳು, ಶೈಲಿ ಮತ್ತು ಪದಾವಳಿಗಳನ್ನು ಸಮೀಕರಿಸುವುದರ ಮೂಲಕ ಮತ್ತು ಅವಶ್ಯವಾದಾಗಲೆಲ್ಲ ಅಥವಾ ಅಪೇಕ್ಷಿತವಾದೆಡೆಗಳಲ್ಲೆಲ್ಲ, ಅದರ ಶಬ್ದಭಂಡಾರಕ್ಕಾಗಿ ಮೊದಲನೆಯದಾಗಿ ಸಂಸ್ಕೃತದಿಂದಲೂ, ಎರಡನೆಯದಾಗಿ ಇತರ ಭಾಷೆಗಳಿಂದಲೂ ಶಬ್ದಗಳನ್ನು ತೆಗೆದುಕೊಂಡು ಹಿಂದಿ ಭಾಷೆಯ ಶ್ರೀಮಂತಿಕೆಯು ಸುನಿಶ್ಚಿತಗೊಳ್ಳುವಂತೆ ಆ ಭಾಷೆಯ ಪ್ರಸಾರವನ್ನು ಉನ್ನತಿಗೊಳಿಸುವುದು ಒಕ್ಕೂಟದ ಕರ್ತವ್ಯವಾಗಿರತಕ್ಕದ್ದು.

## ವಿಧಿ 15 : ದುರ್ಬಲವರ್ಗದವರಿಗಾಗಿ ಶಿಕ್ಷಣ

ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ:–

(1) ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯವನ್ನು ಮಾಡತಕ್ಕದ್ದಲ್ಲ.

(2) ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಇವುಗಳಲ್ಲಿ ಯಾವುದೇ ಒಂದರ

ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು,- (ಎ) ಅಂಗಡಿಗಳು, ಸಾರ್ವಜನಿಕ ಉಪಾಹಾರ ಗೃಹಗಳು, ಹೋಟೆಲುಗಳು ಮತ್ತು ಸಾರ್ವಜನಿಕ ಮನೋರಂಜನ ಸ್ಥಳಗಳಿಗೆ ಪ್ರವೇಶಿಸುವ ಸಂಬಂಧದಲ್ಲಿ; ಅಥವಾ (ಬಿ) ಪೂರ್ಣವಾಗಿ ಅಥವಾ ಭಾಗಶಃ ರಾಜ್ಯನಿಧಿಗಳಿಂದ ಪೋಷಿತವಾದ ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿ ಸಮರ್ಪಿತವಾದ ಬಾವಿಗಳನ್ನು, ಕೆರೆಗಳನ್ನು, ಸ್ನಾನಘಟ್ಟಗಳನ್ನು, ರಸ್ತೆಗಳನ್ನು ಮತ್ತು ಸಾರ್ವಜನಿಕರು ಸೇರುವ ಸ್ಥಳಗಳನ್ನು ಉಪಯೋಗಿಸುವ ಸಂಬಂಧದಲ್ಲಿ- ಯಾವುದೇ ಅಸಮರ್ಥತೆಗೆ, ಹೊಣೆಗಾರಿಕೆಗೆ, ನಿರ್ಬಂಧಕ್ಕೆ ಅಥವಾ ಷರತ್ತಿಗೆ ಒಳಪಟ್ಟಿರತಕ್ಕದ್ದಲ್ಲ. (3) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಹೆಂಗಸರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ. 1[(4) ಈ ಅನುಚ್ಛೇದದಲ್ಲಿ ಅಥವಾ 29ನೆಯ ಅನುಚ್ಛೇದದ (2)ನೆಯ ಖಂಡದಲ್ಲಿ ಇರುವುದು ಯಾವುದೂ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುವೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ರಾಜ್ಯವು ಯಾವುದೇ ವಿಶೇಷ ಉಪಬಂಧವನ್ನು ಮಾಡದಂತೆ ಪ್ರತಿಬಂಧಿಸತಕ್ಕದ್ದಲ್ಲ.

## ವಿಧಿ 17 : ಅಸ್ಪೃಶ್ಯತಾ ನಿವಾರಣೆ

"ಅಸ್ಪೃಶ್ಯತೆ"ಯನ್ನು ನಿರ್ಮೂಲನಗೊಳಿಸಲಾಗಿದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ. "ಅಸ್ಪೃಶ್ಯತೆ"ಯಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯನ್ನು ಆಚರಣೆಗೆ ತರುವುದು ಕಾನೂನಿಗನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು.

**ವಿಧಿ 46 :** ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂವರ್ಧನೆ

ರಾಜ್ಯವು ದುರ್ಬಲ ವರ್ಗಗಳ, ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಜಾಗರೂಕತೆಯಿಂದ ಸಂವರ್ಧಿಸತಕ್ಕದ್ದು ಮತ್ತು ಅವರನ್ನು ಸಾಮಾಜಿಕ ಅನ್ಯಾಯದಿಂದ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಸಂರಕ್ಷಿಸತಕ್ಕದ್ದು.

## ವಿಧಿ 25: ಜಾತ್ಯತೀತ ಶಿಕ್ಷಣ:

ಧರ್ಮ ಸ್ವಾತಂತ್ರ್ಯದ ಹಕ್ಕು: ಅಂತಃಸಾಕ್ಷಿ ಸ್ವಾತಂತ್ರ್ಯ ಮತ್ತು ಧರ್ಮದ ಅಬಾಧಿತ ಅವಲಂಬನೆ, ಆಚರಣೆ ಮತ್ತು ಪ್ರಚಾರ:– (1) ಸಾರ್ವಜನಿಕ ಸುವ್ಯವಸ್ಥೆಗೆ, ನೈತಿಕತೆಗೆ ಮತ್ತು ಆರೋಗ್ಯಕ್ಕೆ ಹಾಗೂ ಈ ಭಾಗದ ಇತರ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಕ್ತಿಗಳು ಅಂತಃಸಾಕ್ಷಿ ಸ್ವಾತಂತ್ರ್ಯಕ್ಕೆ ಸಮಾನ ರೀತಿಯಲ್ಲಿ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಅಬಾಧಿತವಾಗಿ ಧರ್ಮವನ್ನು ಅವಲಂಬಿಸುವುದಕ್ಕೆ, ಆಚರಿಸುವುದಕ್ಕೆ ಮತ್ತು ಪ್ರಚಾರ ಮಾಡುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ.

1976ರಲ್ಲಿನ ಸಂವಿಧಾನದ 42ನೇ ತಿದ್ದುಪಡಿಯ ನಂತರ ಶಿಕ್ಷಣವು ಸಮವರ್ತಿಪಟ್ಟಿಯನ್ನು ಸೇರಿದೆ. 1976ರ ವರೆಗೆ ಶಿಕ್ಷಣವು ರಾಜ್ಯಪಟ್ಟಿಯಲ್ಲಿತ್ತು. ಆಗ ಕೇಂದ್ರವು ಕೇವಲ ಸಲಹೆ ನೀಡುವ ಪಾತ್ರವನ್ನಷ್ಟೇ ವಹಿಸುತ್ತಿತ್ತು.

ಶಿಕ್ಷಣವು ಸಮವರ್ತಿಪಟ್ಟಿಯನ್ನು ಸೇರಿದ ನಂತರ ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾನಿಲಯ ಶಿಕ್ಷಣದವರೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಶಿಕ್ಷಣದಲ್ಲಿನ ಸುಧಾರಣೆಗಳನ್ನು ಮಾಡಲು ತೊಡಗಿಕೊಳ್ಳುತ್ತಿವೆ. ಈ ತಿದ್ದುಪಡಿಯು ಶೈಕ್ಷಣಿಕ ನೀತಿ ನಿಯಮಗಳನ್ನು ರೂಪಿಸುವ ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡಕ್ಕೂ ನೀಡಿದೆ. ಆದರೆ ಕೇಂದ್ರವು ಪ್ರಧಾನ ಪಾತ್ರ ವಹಿಸುತ್ತದೆ. ಕಾರ್ಯಾನುಷ್ಠಾನಕ್ಕೆ ಕೇಂದ್ರವು ರಾಜ್ಯಗಳಿಗೆ ನಿರ್ದೇಶನ ನೀಡಬಹುದು. ಅದನ್ನು ಮುಂದೂಡುವ, ಅಡ್ಡಿಪಡಿಸುವ ಅಥವಾ ದುರುಪಯೋಗಪಡಿಸಿಕೊಳ್ಳುವ ಅವಕಾಶ ರಾಜ್ಯಕ್ಕೆ ಇರುವುದಿಲ್ಲ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1:

ಕೆಳಗಿನ ವಿಷಯಗಳಿಗೆ ಸಂಬಂಧಿಸಿದ ವಿಧಿಗಳನ್ನು ಹೊಂದಿಸಿರಿ

| | ವಿಷಯಗಳು | ವಿಧಿಗಳು | |
|---|---|---|---|
| 1 | ಕಾನೂನಿನ ರಕ್ಷಣೆ ಮತ್ತು ನಿರ್ವಹಣೆ | ವಿಧಿ 28 | ಎ |
| 2 | ಉಚಿತ ಮತ್ತು ಕಡ್ಡಾಯ ಶಿಕ್ಷಣ | ವಿಧಿ 29 | ಬಿ |
| 3 | ಶಿಕ್ಷಣದ ಹಕ್ಕು | ವಿಧಿ 15 | ಸಿ |
| 4 | ಅಲ್ಪಸಂಖ್ಯಾತರ ಶಿಕ್ಷಣ : | ವಿಧಿ 13 | ಡಿ |
| 5 | ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ: | ವಿಧಿ 29 | ಇ |
| 6 | ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು: | 21ಎ | ಎಫ್ |
| 7 | ಭಾಷಾ ಸಂರಕ್ಷಣೆ ಮತ್ತು ಮಾತೃಭಾಷೆಯಲ್ಲಿ ಶಿಕ್ಷಣ | ವಿಧಿ 45 | ಜಿ |
| 8 | ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ | ವಿಧಿ 30 | ಎಚ್ |
| 9 | ಅಸ್ಪೃಶ್ಯತಾ ನಿವಾರಣೆ | ವಿಧಿ 25 | ಐ |
| 10 | ಜಾತ್ಯತೀತ ಶಿಕ್ಷಣ | ವಿಧಿ 17 | ಜೆ |

## 1.1.3.2. ಸಂವಿಧಾನಾತ್ಮಕ ಅವಕಾಶಗಳ ಮಹತ್ವ ಮತ್ತು ಅವುಗಳ ಶೈಕ್ಷಣಿಕ ನಿಹಿತಾರ್ಥಗಳು

ಒಂದು ದೇಶದ ಸಾಧನೆ ಅಥವಾ ಅಭಿವೃದ್ಧಿಯು ಆ ದೇಶದ ಜನರ ಪ್ರಗತಿಯನ್ನು ಅವಲಂಬಿಸಿರುತ್ತದೆ. ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ರಾಷ್ಟ್ರವು ರೂಪಿಸುವ ಕಾನೂನು/ನಿಯಮಗಳಿಗೆ ಪ್ರಜೆಗಳು ಸಕ್ರಿಯವಾಗಿ ಸ್ಪಂದಿಸಲು, ಪ್ರಗತಿಯ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಶಿಕ್ಷಣ ಅತ್ಯಂತ ಪ್ರಮುಖವಾಗುತ್ತದೆ. ಹಾಗಾಗಿ ಯಾವುದೇ ತಾರತಮ್ಯವಿಲ್ಲದೆ ಶಿಕ್ಷಣ ನೀಡುವ ಕಾನೂನಾತ್ಮಕ ಅವಕಾಶಗಳು ಅಗತ್ಯವಾಗುತ್ತವೆ.

ಶಿಕ್ಷಣದಲ್ಲಿ ಸಮಾನ ಪ್ರಾತಿನಿಧ್ಯ ನೀಡಲು ಕೆಳಗಿನ ಕಾರಣಗಳನ್ನು ಗುರುತಿಸಬಹುದು :

- ಸಮಾನತಾವಾದಿ ಸಮಾಜದ ಸ್ಥಾಪನೆ
- ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಿಕೆ
- ದೇಶದ ತೀವ್ರಗತಿಯ ಪ್ರಗತಿ
- ಉನ್ನತ ಬೌದ್ಧಿಕ ಸಾಮರ್ಥ್ಯಗಳ ಹುಡುಕಾಟ ಮತ್ತು ಬಳಸಿಕೊಳ್ಳುವಿಕೆ
- ಮಾನವ ಶಕ್ತಿ ಮತ್ತು ತಾಂತ್ರಿಕ ಶಕ್ತಿಗಳಲ್ಲಿ ಅನ್ಯೋನ್ಯತೆಯನ್ನು ಸಾಧಿಸುವಿಕೆ
- ಆರ್ಥಿಕ ಸಮಾನತೆ, ಸಾಮಾಜಿಕ ಅಸಮಾನತೆ ಮತ್ತು ರಾಜಕೀಯ ಸ್ಥಾನಮಾನಗಳ ಅಸಮಾನತೆಯನ್ನು ಹೋಗಲಾಡಿಸಿ ನ್ಯಾಯಯುತ ಸಮಾಜದ ಸ್ಥಾಪನೆ

**ಈ ನಿಟ್ಟಿನಲ್ಲಿ ಶಾಲೆಗಳ ಪಾತ್ರವೇನು ಎಂಬುದನ್ನು ಗಮನಿಸೋಣ.**

- ಶಾಲೆಯು ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದ ಮಕ್ಕಳು ಸಮವಯಸ್ಕರೊಂದಿಗೆ ಪ್ರೀತಿಯಿಂದ ವರ್ತಿಸುವ ಸಲುವಾಗಿ ಸಮಾನ ಮತ್ತು ಪ್ರಜಾಸತ್ತಾತ್ಮಕ ಪರಿಸರವನ್ನು ಒದಗಿಸಬೇಕು.
- ಶಿಕ್ಷಕ ಪ್ರಜಾಪ್ರಭುತ್ವ ಮೌಲ್ಯಗಳನ್ನು ಬಿಂಬಿಸುವ ಮಾದರಿಯಾಗಬೇಕು.
- ವಿವಿಧ ಪ್ರಜಾಸತ್ತಾತ್ಮಕ ಮೌಲ್ಯಗಳು ಮಕ್ಕಳಲ್ಲಿ ಸ್ವಾಭಾವಿಕವಾಗಿಯೇ ಮೂಡುವ ವಾತಾವರಣ ನಿರ್ಮಾಣ ಮಾಡಬೇಕು.
- ಧನಾತ್ಮಕ ಮತ್ತು ಭಾವನಾತ್ಮಕ ಮೌಲ್ಯಗಳ ಬೆಳವಣಿಗೆಗೆ ಪೂರಕವಾಗುವ ಪಠ್ಯವನ್ನು ನಿಗದಿ ಪಡಿಸಬೇಕು.
- ಪ್ರಜಾಸತ್ತಾತ್ಮಕ ಸನ್ನಿವೇಶದಲ್ಲಿ ಪೌರರ ಕರ್ತವ್ಯಗಳನ್ನು ಮನದಟ್ಟುಮಾಡುವ ಶ್ರೀಮಂತ ಕಲಿಕಾ ಅನುಭವಗಳನ್ನು ನೀಡಬೇಕು.
- ನಮ್ಮ ಹಿಂದಿನವರು ಪ್ರಜಾಪ್ರಭುತ್ವದ ಮೌಲ್ಯಗಳಿಗಾಗಿ ಬದುಕಿದ ರೀತಿಯನ್ನು ಮನದಟ್ಟು ಮಾಡುವುದರ ಮೂಲಕ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಪ್ರಯತ್ನಿಸಬೇಕು.
- ಮೈದಾನದಲ್ಲಿನ ಆಟ, ಕ್ರೀಡೆಗಳು ವಿಶಾಲ ದೃಷ್ಟಿಕೋನವನ್ನು ಬೆಳೆಸುವಲ್ಲಿ ಸಫಲವಾಗುವಂತೆ ಇಲ್ಲಿನ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬೇಕು.
- ಪರಿಸರಾತ್ಮಕವಾದ ಮೌಲ್ಯಗಳ ಬೆಳವಣಿಗೆಗೆ ಕಾರಣವಾದ ಅರಿವು ಮತ್ತು ಕೌಶಲಗಳನ್ನು ಉದ್ದೇಶಪೂರ್ವಕವಾಗಿ ಮೂಡಿಸಲು ಪ್ರಯತ್ನಿಸಬೇಕು.

ನಮ್ಮ ರಾಷ್ಟ್ರವು ಗುರುತಿಸಿರುವ ಪ್ರಮುಖ ಆದರ್ಶಗಳಾದ ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಭ್ರಾತೃತ್ವ ಇವು ವೈಯಕ್ತಿಕ ಬದುಕಿನಲ್ಲೂ ಹೆಚ್ಚು ಮಹತ್ವಪೂರ್ಣವಾದವು. ಹಾಗಾಗಿ ಅವು ಎಲ್ಲರೂ ಬದುಕಿನುದ್ದಕ್ಕೂ ಆಚರಿಸಬೇಕಾದ ಆದರ್ಶಗಳಾಗಿವೆ. ಬಾಲ್ಯಾವಸ್ಥೆಯಿಂದಲೇ ಮಕ್ಕಳ ವ್ಯಕ್ತಿತ್ವದಲ್ಲಿ ಇವು ಹಾಸುಹೊಕ್ಕಾಗಿ ಸೇರಿಕೊಳ್ಳುವಂತೆ ಪ್ರಯತ್ನಿಸಬೇಕು. ಶಿಕ್ಷಣವನ್ನು ಕುರಿತು ಈವರೆಗೆ ಬಂದಿರುವ ಸಮಿತಿಗಳು ಮತ್ತು ಆಯೋಗಗಳೂ ಇದನ್ನೇ ಒತ್ತಿ ಹೇಳಿವೆ.

ಕೊಠಾರಿ ಆಯೋಗವು "ಆಧುನಿಕ ಸಮಾಜದಲ್ಲಿ ಜ್ಞಾನಶಕ್ತಿಯ ವಿಸ್ತರಣೆ ಹಾಗೂ ಅದರ ಬೆಳವಣಿಗೆಯ ಶಕ್ತಿಯನ್ನು ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಮೆಚ್ಚಿಕೊಳ್ಳುವ ಗುಣಗಳೊಂದಿಗೆ ಬೆಸೆಯಬೇಕು" ಎಂದು ಹೇಳಿದೆ.

ಸಂವಿಧಾನದ ಅವಕಾಶಗಳ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಉದ್ದೇಶಗಳನ್ನು ಈಡೇರಿಸಲು ಸರ್ಕಾರವು ಕೆಳಗಿನ ಕ್ರಮಗಳನ್ನು ಕೈಗೊಂಡಿದೆ:

- ಪಂಚವಾರ್ಷಿಕ ಯೋಜನೆಗಳ ಮೂಲಕ ಸರ್ವರಿಗೂ ಸಮಾನ ಶೈಕ್ಷಣಿಕ ಅವಕಾಶಗಳನ್ನು ಕೊಡುವಲ್ಲಿನ ಪ್ರಯತ್ನಗಳು.
- ಪ್ರಾಥಮಿಕ, ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಶೈಕ್ಷಣಿಕ ಅವಕಾಶಗಳನ್ನು ಕೊಡಮಾಡಿರುವ ಅನೇಕ ಕಾರ್ಯಯೋಜನೆಗಳು.

ಸಮಾನ ಅವಕಾಶಗಳನ್ನು ಕೊಡಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು ಅವು ಹೀಗಿವೆ:

- ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಅವಕಾಶಗಳು.
- ಶೈಕ್ಷಣಿಕ ಸಂಸ್ಥೆಗಳಲ್ಲಿದ್ದ ದಾಖಲಾತಿ ತೊಡಕುಗಳ ನಿವಾರಣೆ.
- ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಗಳಲ್ಲೂ ಶಿಕ್ಷಣ ಸಂಸ್ಥೆಗಳ ಸ್ಥಾಪನೆ.
- ಶಾಲಾ ಪೂರ್ವ ಶಿಕ್ಷಣಕ್ಕೆ ಅವಕಾಶ.
- ಶಿಷ್ಯವೇತನ ಮತ್ತಿತರ ಸೌಲಭ್ಯಗಳಿಗೆ ಅವಕಾಶ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಶೇಷ ಸೌಲಭ್ಯಗಳು.
- ಸನಿವಾಸ ಶಾಲೆಗಳ ಸ್ಥಾಪನೆ.
- ದಿವ್ಯಾಂಗರಿಗಾಗಿ ವಿಶೇಷ ಶಿಕ್ಷಣ.

ಯಾವುದೇ ವ್ಯವಸ್ಥೆ ಕೇವಲ ಏಕಮುಖವಾದ ಕಾರ್ಯಚರಣೆಯಿಂದ ಯಶಸ್ವಿಯಾಗದು. ಶಿಕ್ಷಣವು ಸಮುದಾಯದ ಮುಂದಾಳ್ವಿಕೆಯಲ್ಲಿ ಸಾಗಬೇಕು. ಈ ಅಂಶದ ಹಿನ್ನೆಲೆಯಲ್ಲೇ ಸಂವಿಧಾನಕಾರರು ನಮ್ಮ ರಾಷ್ಟ್ರವನ್ನು 'ಸಾರ್ವಭೌಮತ್ವ ಪ್ರಜಾಸತ್ತಾತ್ಮಕ ರಾಷ್ಟ್ರ' ಎಂದೂ ಕಲ್ಯಾಣರಾಜ್ಯ ಎಂದೂ ಕರೆದಿದ್ದಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2 :**

ನಿಮ್ಮ ಶಾಲೆಯಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ಅಳವಡಿಸಿಕೊಂಡಿರುವ 'ಉತ್ತಮ ಅಭ್ಯಾಸಗಳು' ಯಾವುವು ಎಂಬುದನ್ನು ಗುರುತಿಸಿ, ಪ್ರತಿಯೊಂದರ ಸಂಕ್ಷೇಪ ವಿವರಣೆ ಇರುವ ಒಂದು ಬರಹವನ್ನು ತಯಾರಿಸಿ. ಒಂದು ಪಕ್ಷ ಅಂತಹ ಯಾವುದೇ ನಿರ್ದಿಷ್ಟ ಅಭ್ಯಾಸಗಳು ಅಸ್ತಿತ್ವದಲ್ಲಿಲ್ಲವಾದರೆ ಅಂತಹ ಎರಡು ಚಟುವಟಿಕೆಗಳಿಗೆ ಕಾರ್ಯಯೋಜನೆ ತಯಾರಿಸಿ

## 2.1.4. ಸಾರಾಂಶಿಸೋಣ

- ರಾಷ್ಟ್ರೀಯ ಆದರ್ಶಗಳು ಎಂದರೆ ಆಯಾ ರಾಷ್ಟ್ರದ ಜನತೆ ಒಪ್ಪಿಕೊಂಡಿರುವ ಜೀವನ ಮಾರ್ಗಗಳು, ನಂಬಿಕೆಗಳು.
- ಈ ಆದರ್ಶಗಳಿಗೆ ಆಯಾ ರಾಷ್ಟ್ರದ ಆಡಳಿತ ಬದ್ಧವಾಗಿರಬೇಕಷ್ಟೆ.
- ಸಂವಿಧಾನವು ಹಲವಾರು ಉತ್ತಮ ಮೌಲ್ಯಗಳನ್ನೊಳಗೊಂಡಿದೆ. ಇಂತಹ ಮೌಲ್ಯಗಳನ್ನು ರಾಷ್ಟ್ರೀಯ ಆದರ್ಶಗಳೆಂದು ಹೇಳುವುದರ ಮೂಲಕ ಸಂವಿಧಾನವು ಅದರ ಪ್ರಾಮುಖ್ಯತೆಯನ್ನು ಸ್ಥಿರಪಡಿಸಿದೆ.
- ಭಾರತ ಸಂವಿಧಾನವು ದೇಶದಲ್ಲಿನ ಶಿಕ್ಷಣದ ಪ್ರಗತಿಗೆ ಕೆಲವು ನಿರ್ದೇಶನಗಳನ್ನು ಮತ್ತು ಸಲಹೆಗಳನ್ನು ನೀಡಿದೆ. ಇವುಗಳನ್ನೇ ಸಂವಿಧಾನಾತ್ಮಕ ಅವಕಾಶಗಳು ಎನ್ನಲಾಗಿದ್ದು ಅವುಗಳನ್ನು ವಿಧಿಗಳಾಗಿ ಗುರುತಿಸಿದೆ.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವಾರು ಸಂವಿಧಾನಾತ್ಮಕ ಅವಕಾಶಗಳಿವೆ. ಅವುಗಳನ್ನು ಸಂವಿಧಾನದ ವಿಧಿಗಳಲ್ಲಿ ಕಾಣಬಹುದು. ಅವುಗಳ ವಿವರ ಹೀಗಿದೆ. ವಿಧಿ 21ಎ–ಶಿಕ್ಷಣದ ಹಕ್ಕು; ವಿಧಿ 29–ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ; ವಿಧಿ 30–ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು; ವಿಧಿ 350ಎ–ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು; 350ಬಿ–ಭಾಷಾ ಅಲ್ಪಸಂಖ್ಯಾತರಿಗಾಗಿ ವಿಶೇಷ ಅಧಿಕಾರಿ;

351–ಹಿಂದಿ ಭಾಷೆಯ ಅಭಿವೃದ್ಧಿಗಾಗಿ ನಿರ್ದೇಶನ; ವಿಧಿ 15–ದುರ್ಬಲವರ್ಗದವರಿಗಾಗಿ ಶಿಕ್ಷಣ; ವಿಧಿ 17–ಅಸ್ಪೃಶ್ಯತಾ ನಿವಾರಣೆ; ವಿಧಿ 46–ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂವರ್ಧನೆ; ವಿಧಿ 25–ಜಾತ್ಯತೀತ ಶಿಕ್ಷಣ: ವಿಧಿ 28–ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವ ಧಾರ್ಮಿಕ ಶಿಕ್ಷಣದಲ್ಲಿ ಅಥವಾ ಧಾರ್ಮಿಕ ಉಪಾಸನೆಯಲ್ಲಿ ಹಾಜರಾಗುವ ಸ್ವಾತಂತ್ರ್ಯ; ಇವುಗಳನ್ನು ಗಮನಿಸಬೇಕು.

- ಮೇಲೆ ತಿಳಿಸಿದ ಪ್ರಾವಧಾನಗಳಿಗೆ ಸಂಬಂಧಿಸಿದಂತೆ ಶಾಲಾ ಸನ್ನಿವೇಶದಲ್ಲಿ ಅನೇಕ ನಿಹಿತಾರ್ಥಗಳಿವೆ.

## 2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು– 1 ಮತ್ತು 2

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1 :

1–ಡಿ, 2–ಜೆ,3–ಎಫ್,4–ಎ,5–ಇ,6–ಎಚ, 7–ಬಿ, 8–ಸಿ,9–ಜೆ,10–ಐ

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2:

ನೀವು ತಯಾರಿಸಿದ ಕಾರ್ಯಕ್ರಮ ಟಿಪ್ಪಣಿಯನ್ನು/ ಕಾರ್ಯಯೋಜನೆಯನ್ನು ನಿಮ್ಮ ಸ್ಥಳದ ಇತರ ಶಿಕ್ಷಕರೊಂದಿಗೆ ಹಂಚಿಕೊಳ್ಳಿ. ಅವರ ಹಿಮ್ಮಾಹಿತಿ ಪಡೆದು ಕಾರ್ಯಕ್ರಮಗಳನ್ನು ಮತ್ತೂ ಉತ್ತಮಗೊಳಿಸಿ.

## 2.1.6. ಘಟಕಾಂತ್ಯ ಅಭ್ಯಾಸಗಳು

ಶಿಕ್ಷಣಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ಅವಕಾಶಗಳನ್ನು ವಿವರಿಸಿ, ಅವುಗಳ ಶೈಕ್ಷಣಿಕ ನಿಹಿತಾರ್ಥಗಳನ್ನು ತಿಳಿಸಿ.

## 1.1.7. ಪರಾಮರ್ಶನ ಸೂಚಿ :

http://www.yourarticlelibrary.com/essay/constitutional-provisions-regarding-education-in-india/45229

1. https://www.owlgen.com/question/which-constitutional-provisions-are-related-to-education
2. https://pcer.ac.in/wp-content/uploads/2015/12/Contemporary-India-and-Education.pdf
3. https://pcer.ac.in/wp-content/uploads/2015/12/Contemporary-India-and-Education.pdf
4. https://pcer.ac.in/wp-content/uploads/2015/12/Contemporary-India-and-Education.pdf
5. http://egyankosh.ac.in/bitstream/123456789/8525/1/Unit%204.pdf
6. https://slideplayer.com/slide/13043561/
7. https://www.ukessays.com/essays/education/education-important-factor-in-a-developing-country-education-essay.php

8.    9.  The Constitution Of India: An Introduction by SHARMA Paperback – 2015

10. BakshP.M.Constitution of India , Universal Law Publishing

Austin Granville

11. The Indian Constitution: Cornerstone of A Nation (Classic Reissue) by Paperback 1999

12. Austin Granville  The Indian Constitution: Cornerstone of A Nation

13. Austin Granville Working in a Democratic Constitution: A History of the Indian Experience

14. Rajeev Bhargava: Politics and Ethics of the Indian Constitution by

************

# ಬ್ಲಾಕ್ 2 : ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು

## ಘಟಕ 2 : ಪ್ರಜಾಪ್ರಭುತ್ವ ಮತ್ತು ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಇತರರ ಯೋಗಕ್ಷೇಮದ ಕಾಳಜಿ, ಜಾತ್ಯತೀತತೆ, ಮಾನವ ಘನತೆ ಮತ್ತು ಹಕ್ಕುಗಳಿಗೆ ಗೌರವ – ಈ ಮೌಲ್ಯಗಳು

**ಘಟಕದ ರಚನೆ :**


2.2.1 ಕಲಿಕೆಯ ಉದ್ದೇಶಗಳು

2.2.2. ಪೀಠಿಕೆ

2.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.2.3.1. ಪ್ರಜಾಪ್ರಭುತ್ವದ ಅರ್ಥ ಮತ್ತು ವಿಧಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿರಿ – 1

2.2.3.2. ಪ್ರಜಾಪ್ರಭುತ್ವದ ಮೌಲ್ಯಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿರಿ – 2

2.2.4. ಸಾರಾಂಶಿಸೋಣ

2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

2.2.6. ಘಟಕಾಂತ್ಯ ಅಭ್ಯಾಸಗಳು

2.2.7. ಪರಾಮರ್ಶನ ಸೂಚಿ


## 2.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಪ್ರಜಾಪ್ರಭುತ್ವದ ಪರಿಕಲ್ಪನೆ ಮತ್ತು ಸಂಬಂಧಿತ ಪರಿಭಾಷೆಗಳನ್ನು ವಿವರಿಸುವರು;
- ಭಾರತದಲ್ಲಿ ಪ್ರಜಾಪ್ರಭುತ್ವದ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುವರು;
- ಭಾರತೀಯ ಪ್ರಜಾಪ್ರಭುತ್ವದ ವಿಶಿಷ್ಟ ಗುಣಲಕ್ಷಣಗಳು ಮತ್ತು ಅದರ ಮೌಲ್ಯಗಳನ್ನು ಪ್ರಶಂಸಿಸುವರು; ಮತ್ತು
- ದೇಶಭಕ್ತಿಯ ಪ್ರಜ್ಞೆಯನ್ನು ವಿಕಸನಗೊಳಿಸಲು ಮತ್ತು ಪ್ರಜಾಪ್ರಭುತ್ವದ ಸ್ಫೂರ್ತಿಯನ್ನು ಅಂತರ್ಗತಗೊಳಿಸಲು ಹಾಗೂ ಪ್ರಚುರಪಡಿಸಲು ಸಮರ್ಥರಾಗುವರು.

## 2.2.1. ಪೀಠಿಕೆ

"ಒಂದು ವೇಳೆ ನಾವು ಶಾಂತಿಯುತ ಸಮಾಜವನ್ನು ಬಯಸುವುದಾದರೆ ಆಗ ನಾವು ಹಿಂಸೆಯ ಮೂಲಕ ರೂಪಿತವಾಗಬಹುದಾದ ಸಮಾಜವನ್ನು ನಿರ್ಮಿಸಲು ಸಾಧ್ಯವಿಲ್ಲ. ಅದೇ ರೀತಿ ನಾವು ಯಾವುದೇ ತಾರತಮ್ಯ ಮುಕ್ತ/ಪಕ್ಷಪಾತ ಮುಕ್ತ ಸಮಾಜವನ್ನು ಆಶಿಸುವುದಾದರೆ ಆಗ ಸಮಾಜವನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಯಾರನ್ನೂ

ತರತಮಭಾವದಿಂದ ನೋಡಲು ಬರುವುದಿಲ್ಲ. ಹಾಗೆಯೇ ನಾವು ಪ್ರಜಾಪ್ರಭುತ್ವವಾದಿ ಸಮಾಜವನ್ನು ಬಯಸುವುದಾದರೆ ಆಗ ಪ್ರಜಾಪ್ರಭುತ್ವವೇ ನಮ್ಮ ಗುರಿಯೂ ಆಗುತ್ತದೆ ಮತ್ತು ಗುರಿಯನ್ನು ಕ್ರಮಿಸುವ ಮಾರ್ಗವೂ ಆಗುತ್ತದೆ."– ಬಯಾರ್ಡ ರಸ್ಟಿನ್

ಹಿಂದಿನ ಘಟಕದಲ್ಲಿ ನಾವು ಸಂವಿಧಾನದ ಅರ್ಥವನ್ನು ತಿಳಿದುಕೊಂಡಿದ್ದೇವೆ. ಹಾಗೂ ಅದರ ಮಹತ್ವವನ್ನು ಅರಿತಿದ್ದೇವೆ. ಹಾಗೆಯೇ ನಮ್ಮ ಸಂವಿಧಾನದ ರಚನೆಯ ಹಿನ್ನೆಲೆಯನ್ನು ಅರ್ಥೈಸಿಕೊಳ್ಳುವಾಗ ಅಲ್ಲಿ ಪ್ರತಿಫಲಿತವಾದ ಮೌಲ್ಯಗಳನ್ನೂ ಗ್ರಹಿಸಿದ್ದೇವೆ. "ನಾವು ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ವಾಸಿಸುತ್ತಿದ್ದೇವೆ. ನಾವು ಪ್ರಜಾಪ್ರಭುತ್ವದ ತತ್ವಗಳನ್ನು ಅನುಸರಿಸುತ್ತಿದ್ದೇವೆ" ಇತ್ಯಾದಿ ವಾಕ್ಯಗಳು ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಸಂಬಂಧಿಸಿದ ಸಾಮಾನ್ಯ ವಾಕ್ಯಗಳಾಗಿವೆ. ಪ್ರಜಾಪ್ರಭುತ್ವವೆಂಬುದು ಬಹುಜನರು ತಮ್ಮ ಸಂವಹನದಲ್ಲಿ ಬಳಸುವ ಒಂದು ಸಾಮಾನ್ಯ ಪದವಾಗಿದೆ. ಹಾಗಾದರೆ ಪ್ರಜಾಪ್ರಭುತ್ವ ಎಂದರೇನು? ಇದು ನಮ್ಮ ಸ್ವಾತಂತ್ರ್ಯಕ್ಕೆ ಸಂಬಂಧ ಪಟ್ಟಿದೆಯೇ? ಇದು ನಮ್ಮ ತತ್ವಶಾಸ್ತ್ರವೇ? ಅಥವಾ ಇದೊಂದು ಜೀವನದ ಮಾರ್ಗವೇ? ಇದರ ಅರ್ಥವೇನು? ಇದರೊಂದಿಗೆ ಬೆಸೆದುಕೊಂಡಿರುವ ಮೌಲ್ಯಗಳು ಯಾವುವು? ಈ ಎಲ್ಲಾ ಪ್ರಶ್ನೆಗಳಿಗೂ ನಾವು ಈ ಘಟಕದಲ್ಲಿ ಉತ್ತರವನ್ನು ಕಂಡುಕೊಳ್ಳಲಿದ್ದೇವೆ.

ಭಾರತವು ಒಂದು ಉನ್ನತ ಸಂಸ್ಕೃತಿ ಹಾಗೂ ಶ್ರೀಮಂತ ಮೌಲ್ಯಗಳಿಂದ ಕೂಡಿದ ರಾಷ್ಟ್ರ. ಭಾರತೀಯ ಸಂಸ್ಕೃತಿಯು ಅನನ್ಯವಾದುದು ಮತ್ತು ವಿಭಿನ್ನವಾದುದು. ಇದು ಮನುಷ್ಯನ ಬೌದ್ಧಿಕ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಿರುವಂಥದು. ಅಂತೆಯೇ ಇದು ಮನುಷ್ಯನ ಸೌಂದರ್ಯಾತ್ಮಕ ಸ್ವಭಾವ ಮತ್ತು ಆಧ್ಯಾತ್ಮಿಕ ಪ್ರಚೋದನೆಯನ್ನೂ ಒಳಗೊಂಡಿದೆ. ಶಾಂತಿ, ಅಹಿಂಸೆ, ವಿಶ್ವಭ್ರಾತೃತ್ವ ಇತ್ಯಾದಿ ಸಕಲ ಮೌಲ್ಯಗಳೂ ಭಾರತೀಯ ಸಂಸ್ಕೃತಿಯ ವಿಕಾಸದಲ್ಲಿ ಅಂತರ್ಗತವಾಗಿದೆ. ಇದು 'ಶಾಂತಿ', 'ಅಹಿಂಸೆ', 'ವಸುಧೈವ ಕುಟುಂಬಕಂ' ಎಂದು ಲೋಕಪ್ರಿಯವಾಗಿ ಬಹುಮಂದಿಗಳಿಂದ, ಬಹು ಕಾರ್ಯಕ್ರಮ, ಸಮಾರಂಭಗಳಲ್ಲಿ ಅಭಿವ್ಯಕ್ತಿಸಲ್ಪಟ್ಟು ಇಂದಿಗೂ ಅನುಸರಣೀಯವಾಗಿದ್ದು ಮಾನ್ಯವಾಗಿದೆ. ಇದು ಯಾವಾಗಲೂ "ಸರ್ವೇ ಜನಾಃ ಸುಖಿನೋ ಭವಂತು", "ಲೋಕಾಃ ಸಮಸ್ತಾಃ ಸುಖಿನೋ ಭವಂತು" ಇತ್ಯಾದಿ ನಂಬಿಕೆಗಳಿಂದ ಭಾರತೀಯ ನರನಾಡಿಗಳಲ್ಲಿ ಬೆರೆತು ಹೋಗಿದೆ. ಈ ಒಂದು ಆದರ್ಶದ ಅಡಿಯಲ್ಲಿ ನಿಂತು ಅವಲೋಕಿಸಿದಾಗ ಭಾರತವು ಪ್ರಜಾಪ್ರಭುತ್ವವನ್ನು ಸ್ವೀಕರಿಸಿರುವುದು ಕೇವಲ ಸರಕಾರದ ರೂಪದಲ್ಲಿ ಮಾತ್ರವಲ್ಲ; ಅದೊಂದು ಜೀವನದ ಮಾರ್ಗ ಎಂಬುದು ವೇದ್ಯವಾಗುತ್ತದೆ.

## 2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.3.3.1. ಪ್ರಜಾಪ್ರಭುತ್ವ ಮತ್ತು ಅದರ ಪ್ರಕಾರಗಳು

**ಪ್ರಜಾಪ್ರಭುತ್ವ ಎಂದರೇನು ?**

'ಡೆಮಾಕ್ರಸಿ' ಎಂಬುದು 'ಪ್ರಜಾಪ್ರಭುತ್ವ'ಕ್ಕೆ ಸಂವಾದಿಯಾಗಿ ಬಳಸುವ ಆಂಗ್ಲ ಪದ. ಈ 'ಡೆಮಾಕ್ರಸಿ' ಎಂಬ ಪದವು ಗ್ರೀಕ್ ಭಾಷೆಯ 'ಡೆಮೊಸ್' ಮತ್ತು 'ಕ್ರೇಶಿಯಾ' ಎಂಬ ಪದಗಳಿಂದ ನಿಷ್ಪನ್ನವಾಗಿದೆ. ಡೆಮೊಸ್– ಜನರು, ಕ್ರೇಶಿಯಾ–ಅಧಿಕಾರ ಎಂಬುದು ಇವುಗಳ ಔಪಚಾರಿಕ ಅರ್ಥ. ಹಾಗಾಗಿ ಪ್ರಜಾಪ್ರಭುತ್ವವೆಂದರೆ 'ಜನರ ಅಧಿಕಾರ' ಎಂದು ಅರ್ಥೈಸಬಹುದು.

ಈಗ ನಾವು ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಕೆಲವು ವ್ಯಾಖ್ಯೆಗಳನ್ನು ಅಭ್ಯಸಿಸೋಣ.

ಅಬ್ರಹಾಂ ಲಿಂಕನ್ ಅವರ ಪ್ರಕಾರ, "ಜನರಿಂದ, ಜನರಿಗಾಗಿ, ಜನರಿಗೋಸ್ಕರ ನಡೆಸಲ್ಪಡುವ ಸರಕಾರವೇ ಪ್ರಜಾಪ್ರಭುತ್ವ."

ಬ್ರೇಸ್ ಅವರ ಪ್ರಕಾರ, "ಪ್ರಜಾಪ್ರಭುತ್ವವು ಸರಕಾರದ ಒಂದು ರೂಪವಾಗಿದ್ದು ಅದರಲ್ಲಿ ಕಾನೂನುಬದ್ಧವಾಗಿ

ಮಾನ್ಯವಾದ ರಾಜ್ಯ ಅಥವಾ ರಾಷ್ಟ್ರವು ಆಡಳಿತಾಧಿಕಾರವನ್ನು ನಡೆಸುತ್ತದೆಯೇ ಹೊರತು ಯಾವುದೇ ನಿರ್ದಿಷ್ಟ ವರ್ಗ ಅಥವಾ ವರ್ಗಗಳಲ್ಲ. ಆದರೆ ಇಲ್ಲಿ ಸಮುದಾಯದ ಸದಸ್ಯರನ್ನು ಸಮಗ್ರ ಅಥವಾ ಅಖಂಡ ನೆಲೆಯಲ್ಲಿ ಪರಿಭಾವಿಸಲಾಗುತ್ತದೆ."

ಪ್ರಜಾಪ್ರಭುತ್ವವು ಒಂದು ಸಾಮಾಜಿಕ ಸಂರಚನೆಯಾಗಿದ್ದು ಅದು ಎಲ್ಲಾ ಜನರನ್ನೂ ಸಮಾನವಾಗಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುತ್ತದೆ.

ಪ್ರಜಾಪ್ರಭುತ್ವದ ವಿಧಗಳು: ಪ್ರಜಾಪ್ರಭುತ್ವದಲ್ಲಿ ಎರಡು ವಿಧಗಳಿದ್ದು, ಅವುಗಳನ್ನು ಪ್ರತ್ಯಕ್ಷ ಪ್ರಜಾಪ್ರಭುತ್ವ ಮತ್ತು ಪರೋಕ್ಷ (ಅಪ್ರತ್ಯಕ್ಷ) ಪ್ರಜಾಪ್ರಭುತ್ವ ಎಂದು ಹೆಸರಿಸಬಹುದಾಗಿದೆ. ಪ್ರತ್ಯಕ್ಷ ಪ್ರಜಾಪ್ರಭುತ್ವದಲ್ಲಿ ಪೌರರು ಅಥವಾ ನಾಗರಿಕರು ನೇರವಾಗಿ ಮತ ಚಲಾಯಿಸುವ ಅಧಿಕಾರವನ್ನು ಪಡೆಯುತ್ತಾರೆ. ಇಲ್ಲಿ ಯಾವುದೇ ಮಧ್ಯವರ್ತಿಗಳ ರೂಪದ ಪ್ರತಿನಿಧಿಗಳಿರುವುದಿಲ್ಲ. ಹಾಗೆಯೇ ಸಂಸತ್‌ನ ಮೇಲ್ಮನೆ ಅಥವಾ ಕೆಳಮನೆಗಳ ಹಸ್ತಕ್ಷೇಪವಿರುವುದಿಲ್ಲ. ಪ್ರಾತಿನಿಧಿಕ ಅಥವಾ ಪರೋಕ್ಷ ಅಥವಾ ಅಪ್ರತ್ಯಕ್ಷ ಪ್ರಜಾಪ್ರಭುತ್ವದಲ್ಲಿ ಪೌರರು ಅಥವಾ ನಾಗರಿಕರು ತಾವೇ ನೇರವಾಗಿ ಆಡಳಿತದಲ್ಲಿ ತೊಡಗಿಕೊಳ್ಳದೆ ಸಂಸತ್‌ನಲ್ಲಿ ತಮ್ಮ ಪ್ರತಿನಿಧಿಗಳಾಗಿ ಅಧಿಕಾರ ಚಲಾಯಿಸುವವರು ಯಾರು ಎಂಬುದನ್ನು ನಿರ್ಧರಿಸಲು ಮತಹಾಕಿ ಆಯ್ಕೆ ಮಾಡುತ್ತಾರೆ. ಇದು ಅತ್ಯಂತ ಸಾಮಾನ್ಯ ರೀತಿಯ ಪ್ರಜಾಪ್ರಭುತ್ವವಾಗಿದ್ದು ಪ್ರಪಂಚದಾದ್ಯಂತ ನಮಗಿದು ಕಾಣಸಿಗುತ್ತದೆ. ಭಾರತವೂ ಸಹ ಒಂದು ಪರೋಕ್ಷ ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದಂತೆ ಈ ಮೇಲಿನ ಮಾಹಿತಿಗಳಿಂದ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದು:

- ಸರಕಾರದ ಚುನಾವಣೆಯ ಪ್ರಕ್ರಿಯೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ.
- ಬಹುಮತದ ಅಧಿಕಾರ.
- ಮೂಲಭೂತ ಮಾನವ ಹಕ್ಕುಗಳ ಸ್ಥಾಪನೆ.
- ಮುಕ್ತ ಮತ್ತು ನ್ಯಾಯೋಚಿತ ಚುನಾವಣೆ.
- ಜನತೆಯ ಕಲ್ಯಾಣ.

ಪ್ರಜಾಪ್ರಭುತ್ವದ ಗುಣಲಕ್ಷಣಗಳು ರಾಷ್ಟ್ರದ ಸ್ವಭಾವ ಮತ್ತು ರಾಷ್ಟ್ರದ ಉದ್ದೇಶಗಳ ರೂಪದಲ್ಲಿ ಅಭಿವ್ಯಕ್ತಿಗೊಂಡಿವೆ. ಈ ಅಭಿವ್ಯಕ್ತಿಗಳನ್ನು ನಾವು ಮೌಲಿಕತೆಯ ಭಾಗವಾಗಿ ನಮ್ಮ ಸಂವಿಧಾನದ 'ಪೀಠಿಕಾಭಾಗ'ದಲ್ಲಿ ಕಾಣಬಹುದಾಗಿದೆ. ಸಂವಿಧಾನದ ಪೀಠಿಕಾ ಭಾಗವು 13ನೇ ಡಿಸೆಂಬರ್ 1946ರಂದು ಜವಾಹರಲಾಲ್ ನೆಹರು ಅವರಿಂದ ಸಂವಿಧಾನ ಸಭೆಯಲ್ಲಿ ರಾಷ್ಟ್ರೀಯ ಚಿಂತನೆಗಳ ಹಿನ್ನೆಲೆಯಲ್ಲಿ ರೂಪಿಸಿದ ಕರಡನ್ನು ಆಧರಿಸಿ ಚಲಾಯಿಸಲ್ಪಟ್ಟು ಅಂಗೀಕೃತವಾದ ಒಂದು ರಾಷ್ಟ್ರ ಸಂಹಿತೆಯ ಪ್ರವೇಶಿಕೆ. ಬಿ. ಆರ್. ಅಂಬೇಡ್ಕರ್ ಅವರು ನಮ್ಮ ಸಂವಿಧಾನದ ಪೀಠಿಕಾಭಾಗವನ್ನು ಕುರಿತು ಈ ಕೆಳಗಿನಂತೆ ಹೇಳಿದ್ದಾರೆ :

"ಸಂವಿಧಾನದ ಪೀಠಿಕಾಭಾಗವು ನಿಶ್ಚಿತವಾದ (ವಾಸ್ತವವಾದ) ಒಂದು ಜೀವನಮಾರ್ಗ. ಇದು ಉದಾರತೆ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಜೀವನದ ತತ್ವಗಳಾಗಿ ಗುರುತಿಸುತ್ತದೆ. ಇವುಗಳು ಒಂದರೊಳಗೊಂದು ಸಮನ್ವಯಿತವಾಗಿದ್ದು ಒಂದರಿಂದ ಇನ್ನೊಂದು ಬೇರ್ಪಟ್ಟಿಲ್ಲ. ಉದಾರತೆಯು ಸಮಾನತೆಯಿಂದ ಬೇರ್ಪಡುವುದಿಲ್ಲ. ಸಮಾನತೆಯು ಉದಾರತೆಯಿಂದ ಬೇರ್ಪಡುವುದಿಲ್ಲ. ಅಥವಾ ಉದಾರತೆ ಮತ್ತು ಸಮಾನತೆಗಳು ಭ್ರಾತೃತ್ವದಿಂದ ಬೇರ್ಪಡುವುದಿಲ್ಲ. ಸಮಾನತೆ, ಉದಾರತೆಗಳಿಲ್ಲದೆ ಕೆಲವರು ಹಲವರ ಮೇಲೆ ಅಧಿಕಾರ ಅಥವಾ ಪ್ರಾಬಲ್ಯವನ್ನು ಸಾಧಿಸಲು ಸಾಧ್ಯವಿಲ್ಲ. ಉದಾರತೆಯಿಲ್ಲದ ಸಮಾನತೆಯು ವೈಯಕ್ತಿಕ ತೊಡಗುವಿಕೆಯನ್ನು ಕೊಲ್ಲುತ್ತದೆ. ಭ್ರಾತೃತ್ವವಿಲ್ಲದೆ ಉದಾರತೆ ಮತ್ತು ಸಮಾನತೆಗಳು ಒಂದು ಸ್ವಾಭಾವಿಕ ವಸ್ತು ವಿಚಾರವಾಗಲಾರವು."

ಭಾರತದ ಸಂವಿಧಾನದ ಪೀಠಿಕಾಭಾಗವು ಒಂದು ವಿಶೇಷ ದಾಖಲೆಯಾಗಿದೆ. ಇದು ನಮ್ಮ ಸಂವಿಧಾನದ

ಅತಿ ಪ್ರಮುಖ ಮೌಲ್ಯಗಳು ಮತ್ತು ಉದ್ದೇಶಗಳನ್ನು ಪ್ರತಿಫಲಿಸುತ್ತದೆ. ಇದೇ ಸಂವಿಧಾನದ ಆತ್ಮ ಮತ್ತು ಸ್ಫೂರ್ತಿ. ಇದು ಸಂಕ್ಷಿಪ್ತವಾಗಿ ನಮ್ಮ ರಾಷ್ಟ್ರದ ಗುಣಲಕ್ಷಣಗಳು ಮತ್ತು ಉದ್ದೇಶಗಳನ್ನು ವರ್ಣಿಸುತ್ತದೆ. ಆದರೆ ಅಡಕವಾಗಿ ನಮ್ಮ ರಾಜಕೀಯ ನಾಯಕರು ಮತ್ತು ಸಂವಿಧಾನದ ನಿರ್ಮಾತೃಗಳು ಭಾರತವು ಏನಾಗಬೇಕೆಂದು ಬಯಸಿದ್ದರು ಎಂಬುದನ್ನು ಹೇಳುತ್ತದೆ. ಪೀಠಿಕಾಭಾಗವು ಭಾರತದ ಸಂವಿಧಾನದ ಕನ್ನಡಿಯಿದ್ದಂತೆ. ಮತ್ತು ಇದು ಒಬ್ಬ ವ್ಯಕ್ತಿ ತಾನಾಗಿ ಸಂವಿಧಾನದ ಗುಣಾತ್ಮಕತೆಯನ್ನು ಗುರುತಿಸಿ ನಿರ್ಣಯಿಸಲು ಇರುವ ಅಳತೆಗೋಲು.

ಸಂವಿಧಾನದ ಪೀಠಿಕಾ ಭಾಗವನ್ನು ಈ ಕೆಳಗಿನಂತೆ ಓದಿಕೊಳ್ಳಬಹುದು. ಭಾರತೀಯ ಸಂವಿಧಾನ

**ಪ್ರಸ್ತಾವನೆ**

**ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಮತನಿರಪೇಕ್ಷ / ಸರ್ವಧರ್ಮಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ**

**ಸಾಮಾಜಿಕ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯ**

**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ**

**ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆ**

**ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು (ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು) ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃ ಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕವಾಗಿ ಸಂಕಲ್ಪ ಮಾಡಿದವರಾಗಿ :**

**ನಮ್ಮ ಸಂವಿಧಾನ ಸಭೆಯಲ್ಲಿ 1949ನೇ ಇಸವಿ ನವೆಂಬರ್ ತಿಂಗಳ 26ನೇ ತಾರೀಖು ಆಗಿರುವ ಈ ದಿವಸ ಈ ಮೂಲಕ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

ಸಂವಿಧಾನದ ಪೀಠಿಕಾಭಾಗದ ಅರಿವಿನಿಂದ ನಮಗೆ ತಿಳಿಯಬೇಕಾದ ಒಂದು ಅಂಶವೆಂದರೆ, ಅಲ್ಲಿ ಉಲ್ಲೇಖಿಸಲಾದ ಮೊದಲ ಐದು ಪದಗಳು – ಸಾರ್ವಭೌಮತ್ವ, ಸಮಾಜವಾದಿ, ಮತನಿರಪೇಕ್ಷ (ಸರ್ವಧರ್ಮ ಸಮಭಾವ), ಪ್ರಜಾಸತ್ತಾತ್ಮಕ ಮತ್ತು ಗಣತಂತ್ರಗಳು ರಾಷ್ಟ್ರದ ಸ್ವರೂಪವನ್ನು ಸೂಚಿಸುತ್ತವೆ. ಹಾಗೆಯೇ ನ್ಯಾಯಪರತೆ, ಉದಾರತೆ, ಸಮಾನತೆ ಮತ್ತು ಭ್ರಾತೃತ್ವಗಳು ರಾಷ್ಟ್ರವು ಸಾಧಿಸಬೇಕಾದ ಉದ್ದೇಶಗಳನ್ನು ನಿರ್ದೇಶಿಸುತ್ತದೆ. ನಾವು ಈಗ ಸಂವಿಧಾನದ ಪೀಠಿಕಾ ಭಾಗದಲ್ಲಿ ಪ್ರಸ್ತಾವಿಸಿದ ಈ ಪರಿಕಲ್ಪನೆಗಳ ಅರ್ಥವನ್ನು ಗ್ರಹಿಸೋಣ.

**ಸಾರ್ವಭೌಮತ್ವ :** ಸಾರ್ವಭೌಮತ್ವ ಎಂಬುದು ರಾಜ್ಯ ಅಥವಾ ರಾಷ್ಟ್ರವೊಂದರ ಸ್ವತಂತ್ರ ಅಧಿಕಾರ. ಸಾರ್ವಭೌಮತ್ವ ಎಂಬ ಪದವು ಬಾಹ್ಯ ಸ್ವಾತಂತ್ರ್ಯ ಮತ್ತು ಆಂತರಿಕ ಅಧಿಕಾರ ಎಂಬ ಅರ್ಥವನ್ನು ನೀಡುತ್ತದೆ. ಅದು ಯಾವುದೇ ವಿಷಯವನ್ನು ಕುರಿತಂತೆ ಶಾಸನಾತ್ಮಕ ಅಧಿಕಾರವನ್ನು ಪಡೆದಿರುತ್ತದೆ. ಆದರೆ ಇದು ಇತರ ಯಾವುದೇ ರಾಜ್ಯಾಧಿಕಾರ ಅಥವಾ ಬಾಹ್ಯ ಅಧಿಕಾರವನ್ನು ನಿಯಂತ್ರಿಸುವುದಕ್ಕೆ ಅನ್ವಯಿಸುವುದಿಲ್ಲ. ಸಾರ್ವಭೌಮತ್ವ ಅಥವಾ ಸರ್ವೋಚ್ಚ ಅಧಿಕಾರ ಎನ್ನುವುದು ನಿರಪೇಕ್ಷವಾದ ಹಾಗೂ ತನ್ನ ಸ್ವಂತ ಪರಿಧಿಯಲ್ಲಿಯೇ ನಿಯಂತ್ರಿಸಲಸಾಧ್ಯವಾದ ಪರಮಾಧಿಕಾರ. ಕೂಲೇಯವರ ಪ್ರಕಾರ, "ಒಂದು ರಾಜ್ಯವು ಸಾರ್ವಭೌಮತ್ವವನ್ನು ಪಡೆಯುವುದು ಅದು ಸರ್ವೋಚ್ಚ ಅಥವಾ ಅಂತಿಮ (ನಿರಪೇಕ್ಷ) ಅಧಿಕಾರವನ್ನು ತನ್ನಲ್ಲಿ ನೆಲೆಗೊಳಿಸಿಕೊಂಡಾಗ ಮತ್ತು ಅದಕ್ಕಿಂತ ಶ್ರೇಷ್ಠವಾದುದು ಇನ್ನಾವುದೂ ಇಲ್ಲ ಎಂದು ದೃಢೀಕರಿಸಲ್ಪಟ್ಟಾಗ."

**ಸಮಾಜವಾದ :** 'ಸಮಾಜವಾದ' ಎಂಬ ಪದವು 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಸೇರಿಸಲ್ಪಟ್ಟ ಅಂಶ. ಅದಕ್ಕೂ ಮೊದಲು ಸಂವಿಧಾನವು ಸಮಾಜವಾದಿ ಪಥ್ಯವನ್ನು ರಾಜ್ಯ ಮಸೂದೆಯ (ನೀತಿಯ) ಕೆಲವೊಂದು ನಿರ್ದೇಶಾತ್ಮಕ ತತ್ವಗಳ ರೂಪದಲ್ಲಿ ಹೊಂದಿತ್ತು. ಇಲ್ಲಿ ಸಮಾಜವಾದ ಎಂಬ ಪದವು 'ಪ್ರಜಾಪ್ರಭುತ್ವ ಸಮಾಜವಾದ' ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಮತ್ತು ಅದು 'ಮಿಶ್ರ ಆರ್ಥಿಕ ವ್ಯವಸ್ಥೆ'ಯಲ್ಲಿ ನಂಬಿಕೆಯನ್ನಿಟ್ಟಿದೆ.

ಅಂದರೆ ಇಲ್ಲಿ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳು ಜೊತೆ ಜೊತೆಯಾಗಿ ಸಾಗುವಂತಹ ವ್ಯವಸ್ಥೆ ಇರುತ್ತದೆ. ಇದು ಭಾರತವು ಸುಭದ್ರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಪರತೆಗೆ ಎಲ್ಲಾ ಜನರ ಶ್ರೇಯೋಭಿವೃದ್ಧಿಗಾಗಿ ಬದ್ಧವಾಗಿದೆ ಎಂಬುದನ್ನು ಪ್ರತಿಫಲಿಸುತ್ತದೆ. ಇದರ ಪ್ರಧಾನ ಗುರಿ ಏನೆಂದರೆ ಬಡತನ, ಅಜ್ಞಾನ(ಮೌಢ್ಯ), ರೋಗರುಜಿನ, ಅವಕಾಶಗಳಲ್ಲಿನ ಅಸಮಾನತೆ–ಇವುಗಳನ್ನು ಕೊನೆಗಾಣಿಸುವುದಾಗಿದೆ. ಭಾರತೀಯ ಸಮಾಜವಾದವು ಮಾರ್ಕ್ಸ್‌ವಾದ ಮತ್ತು ಗಾಂಧಿವಾದಗಳ ಸಮ್ಮಿಶ್ರ ರೂಪ. ಅದರಲ್ಲೂ ಮುಖ್ಯವಾಗಿ ಗಾಂಧಿಚಿಂತನೆ ಪ್ರೇರಿತ ಸಮಾಜವಾದದ ಕಲಿಕೆಗೆ ಒತ್ತು ನೀಡುತ್ತದೆ. ಮೂಲಭೂತವಾಗಿ, ಇದರ ಅರ್ಥವೇನೆಂದರೆ ಸಂಪತ್ತು ಸಮಾಜದಲ್ಲಿ ಸಮಾನವಾಗಿ, ನ್ಯಾಯಪರತೆಯಿಂದ ಎಲ್ಲಾ ಜನರಿಗೂ ಹಂಚಿಕೆಯಾಗಬೇಕು. ಅದು ಕೆಲವೇ ಜನರ ಸೊತ್ತಾಗಿ ಉಳಿಯಬಾರದು. ಹಾಗಾಗಿ ಭೂಮಿಯ ಒಡೆತನ ಮತ್ತು ಕೈಗಾರಿಕೆಗಳು ಸಂಪೂರ್ಣವಾಗಿ ಸರಕಾರದ ನಿಯಂತ್ರಣದಲ್ಲಿರಬೇಕು. ಇದರಿಂದ ಸಮಾಜೋ–ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸಲು ಸಾಧ್ಯ.

**ಮತನಿರಪೇಕ್ಷತೆ(ಸರ್ವಧರ್ಮ ಸಮಭಾವ) :** ಇದು ಇಂಗ್ಲಿಷಿನ 'ಸೆಕ್ಯುಲರ್' ಪದಕ್ಕೆ ಸಂವಾದಿಯಾಗಿ ಬಳಸಲ್ಪಡುತ್ತಿರುವ ಪರಿಭಾಷೆ. 'ಮತನಿರಪೇಕ್ಷತೆ' ಅಥವಾ 'ಸರ್ವಧರ್ಮ ಸಮಭಾವ' ಎಂದರೆ ಸಂವಿಧಾನ ಮತ್ತು ಕಾನೂನು ನಿರ್ಧರಿಸಿದ ಪ್ರಕಾರವಾಗಿ ತೊಡಗಿಸಿಕೊಂಡ ಸರಕಾರ ಮತ್ತು ಧಾರ್ಮಿಕ ಸಂಸ್ಥೆಗಳ ನಡುವಿನ ಸಂಬಂಧ. ಇದು ರಾಜ್ಯ ಅಥವಾ ರಾಷ್ಟ್ರದ ಅಧಿಕಾರ ಮತ್ತು ಧರ್ಮವನ್ನು ಪ್ರತ್ಯೇಕಿಸುತ್ತದೆ. 1976ರ ಸಂವಿಧಾನದ 42ನೇ ತಿದ್ದುಪಡಿಯ ಪ್ರಕಾರ 'ಸೆಕ್ಯುಲರ್' ಪದವು ಸಂವಿಧಾನದ ಪೀಠಿಕಾ ಭಾಗದಲ್ಲಿ ಸಂಯೋಜನೆಗೊಂಡಿದೆ. ಇದರ ಪ್ರಕಾರ ಎಲ್ಲಾ ಧರ್ಮಗಳಿಗೂ ಸಮಾನವಾದ ಗೌರವ ಲಭಿಸಬೇಕು. ರಾಜ್ಯದ/ರಾಷ್ಟ್ರದ ಧರ್ಮ ಎಂಬುದಾಗಿ ಪ್ರತ್ಯೇಕವಾಗಿ ಯಾವುದೂ ಇಲ್ಲ. ಭಾರತದ ಎಲ್ಲಾ ನಾಗರಿಕರು ತಮಗೆ ಇಷ್ಟಬಂದ ಯಾವುದೇ ಧರ್ಮವನ್ನು ಆಯ್ಕೆ ಮಾಡಿಕೊಂಡು ಅದನ್ನು ಬಹಿರಂಗವಾಗಿ ಘೋಷಿಸಲು, ಆಚರಣೆಗೆ ತರಲು, ಪ್ರಸಾರ ಮಾಡಲು ಅವಕಾಶವಿದೆ. ಭಾರತದ ಮತನಿರಪೇಕ್ಷ /ಸರ್ವಧರ್ಮ ಸಮಭಾವವು ಧಾರ್ಮಿಕ ಅಲ್ಪಸಂಖ್ಯಾತರು ಯಾವುದೇ ಬಗೆಯ ಕೀಳರಿಮೆಯಿಂದ ನರಳದಂತೆ ಅಭಯ ನೀಡುತ್ತದೆ.

**ಪ್ರಜಾಪ್ರಭುತ್ವ :** ಭಾರತದ ಪ್ರಜೆಗಳು ತಮ್ಮ ಸರಕಾರವನ್ನು ವಯಸ್ಕ ಮತದಾನ ವ್ಯವಸ್ಥೆಯ ಮೂಲಕ ತಾವೇ ಚುನಾಯಿಸುತ್ತಾರೆ. ಇದನ್ನು ಜನಪ್ರಿಯವಾಗಿ 'ಒಬ್ಬ ವ್ಯಕ್ತಿಗೆ ಒಂದೇ ಮತ' ಎಂದು ಹೇಳಲಾಗುತ್ತದೆ. 18 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟು ವಯಸ್ಸಾದ ಭಾರತದ ಯಾವುದೇ ನಾಗರಿಕನು ಮತ ಚಲಾಯಿಸುವ ಹಕ್ಕಿಗೆ ಅರ್ಹನಾಗುತ್ತಾನೆ. ಇದಕ್ಕೆ ಹೊರತಾಗಿದ್ದರೆ ಅಂತಹ ವ್ಯಕ್ತಿಗಳನ್ನು ಮತ ಹಾಕುವ ಹಕ್ಕಿನಿಂದ ತೆರವುಗೊಳಿಸಲಾಗುತ್ತದೆ. ಪ್ರಜಾಪ್ರಭುತ್ವ ಪದವು ಕೇವಲ ರಾಜಕೀಯಕ್ಕೆ ಮಾತ್ರ ಅನ್ವಯಿಸುವುದಿಲ್ಲ; ಸಾಮಾಜಿಕ ಮತ್ತು ಆರ್ಥಿಕ ವಿಚಾರಕ್ಕೂ ಸಂಬಂಧಪಟ್ಟದ್ದಾಗಿದೆ.

**ಗಣತಂತ್ರ ವ್ಯವಸ್ಥೆ :** ಇಂಗ್ಲಿಷಿನ 'ರಿಪಬ್ಲಿಕ್' ಪದಕ್ಕೆ ಸಂವಾದಿಯಾಗಿ 'ಗಣತಂತ್ರ' ಪದವನ್ನು ಬಳಸಲಾಗುತ್ತಿದೆ. ಗಣತಂತ್ರ ರೂಪದ ಸರಕಾರದಲ್ಲಿ ರಾಜ್ಯ/ರಾಷ್ಟ್ರದ ಮುಖ್ಯಸ್ಥರು ವಂಶಪಾರಂಪರ್ಯವಾದ ರಾಜಪ್ರಭುತ್ವದ ಮಾದರಿಯಲ್ಲಿ (ಅರಸೊತ್ತಿಗೆ) ಆಯ್ಕೆಯಾಗುವುದಿಲ್ಲ. ಆದುದರಿಂದ ಇದೊಂದು ಸರಕಾರಿ ಮಾದರಿ ವ್ಯವಸ್ಥೆಯಾಗಿದ್ದು ಇಲ್ಲಿ ಸಾರ್ವಜನಿಕ ಅಧಿಕಾರ ಎಂಬುದು ಯಾರೊಬ್ಬನ ಸ್ವಾಮ್ಯದ ಹಕ್ಕಾಗಿರುವುದಿಲ್ಲ. ರಾಜ್ಯ/ರಾಷ್ಟ್ರದ ಮುಖ್ಯಸ್ಥರು ಇಲ್ಲಿ ನಿಶ್ಚಿತ ಅಧಿಕಾರ ಅವಧಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾಯಿತರಾಗುತ್ತಾರೆ. ಭಾರತಕ್ಕೆ ಒಬ್ಬರು ರಾಷ್ಟ್ರಾಧ್ಯಕ್ಷರಿದ್ದು (ರಾಷ್ಟ್ರಪತಿ) ಅವರು ನಿಶ್ಚಿತ ಅವಧಿಯವರೆಗೆ ಚುನಾಯಿತರಾಗುತ್ತಾರೆ. ರಾಜ್ಯ ಅಥವಾ ರಾಷ್ಟ್ರದ ಸಾರ್ವಭೌಮತ್ವವು ನಿಯೋಜಿತವಾಗಿದ್ದು ಜನರಿಂದ ನಡೆಸಲ್ಪಡುತ್ತದೆ ಮತ್ತು ರಾಜಕೀಯ ಅಧಿಕಾರವು ಜನರ ಕೃಪೆ ಅಥವಾ ಹರ್ಷ ಅಥವಾ ಅಧಿಕೃತ ಆದೇಶದ ಅಭಿವ್ಯಕ್ತಿಯಾಗಿ ಜನಪ್ರಿಯವಾಗಿದ್ದು ಆಚರಣೆಯಲ್ಲಿದೆ. ಇದನ್ನು ನಾವು ಸಂವಿಧಾನದ ಪೀಠಿಕಾಭಾಗದಲ್ಲಿ "ನಮಗಾಗಿ" ಮತ್ತು "ಭಾರತದ ಜನರಾದ ನಾವು" ಎಂಬ ಪದ ಸಮೂಹಗಳಲ್ಲಿ ಕಾಣಬಹುದು.

**ನ್ಯಾಯಪರತೆ:** ಇಂಗ್ಲಿಷಿನ 'ಜಸ್ಟಿಸ್' ಪದಕ್ಕೆ ಸಂವಾದಿಯಾಗಿ ನಾವು ಬಳಸುವ ಪದವೇ 'ನ್ಯಾಯಪರತೆ'.

ನ್ಯಾಯಪರತೆಯು 'ಸರಿಯಾದುದನ್ನು' ಸಂರಕ್ಷಿಸುವ ಮತ್ತು 'ತಪ್ಪುಗಳನ್ನು' ಶಿಕ್ಷಿಸುವ ನ್ಯಾಯೋಚಿತವಾದ ಒಂದು ಚಿಂತನ ದೃಷ್ಟಿಯಾಗಿದೆ. ಇದೊಂದು ನ್ಯಾಯೋಚಿತವಾದ, ಯುಕ್ತವಾದ ನೀತಿಶಾಸ್ತ್ರ, ನೈತಿಕತೆ, ಧರ್ಮ, ವೈಚಾರಿಕತೆಯನ್ನು ಆಧರಿಸಿದ ಚಿಂತನೆ. ಒಬ್ಬ ವ್ಯಕ್ತಿಯ ಸರ್ವಾಂಗೀಣ ವಿಕಾಸಕ್ಕೆ ಅಗತ್ಯವಾದ ಮೂಲಭೂತವಾದ ಅಂಶ. ಸಲ್ಮಂಡ್ ಅವರ ಪ್ರಕಾರ, **"ಕೊಡಬೇಕಾದುದನ್ನು ಪ್ರತಿಯೊಬ್ಬರಿಗೂ ವಿತರಣೆ ಮಾಡುವುದೇ ನ್ಯಾಯಪರತೆ."**

**ಉದಾರತೆ :** ಇಂಗ್ಲಿಷಿನ 'ಲಿಬರ್ಟಿ' ಪದಕ್ಕೆ ಪರ್ಯಾಯವಾಗಿ ಉದಾರತೆ ಪದವನ್ನು ಬಳಸಲಾಗುತ್ತದೆ. ರಾಷ್ಟ್ರೀಯತೆಯ ಚಟುವಟಿಕೆಗಳಿಗೆ ಸಂಬಂಧಿಸಿದ ಸ್ವಾತಂತ್ರ್ಯವೇ ಉದಾರತೆ. ಇಲ್ಲಿ ಚಿಂತನೆಗೆ, ನಮ್ಮ ಅಭಿಪ್ರಾಯಗಳ ನಿರೂಪಣೆಗೆ, ತಾನು ಅನುಸರಿಸಲು ಇಚ್ಛಿಸುವ ವಿಚಾರಧಾರೆಗೆ ಸ್ವಾತಂತ್ರ್ಯವಿರುತ್ತದೆ. **"**ನಂಬಿಕೆಯ ಸ್ವಾತಂತ್ರ್ಯ ಮತ್ತು ಅಧಿಕಾರ, ತನ್ನ ಕ್ರಿಯೆ, ತಾನು ಆಯ್ಕೆ ಮಾಡಿಕೊಂಡ ಸ್ವಾತಂತ್ರ್ಯ ಸೇರಿ ಉದಾರತೆಯಾಗುತ್ತದೆ. ಯಾವುದೇ ಅಡೆತಡೆಯಿಲ್ಲದೆ ಮಾತನಾಡುವ ಮತ್ತು ಕ್ರಿಯೆಯಲ್ಲಿ ಪಾಲ್ಗೊಳ್ಳುವ ಅಧಿಕಾರವೇ ಉದಾರತೆ. ಹಾಗೆಂದು ಉದಾರತೆಯೆಂದರೆ ಯಾವುದನ್ನು ಬೇಕಾದರೂ ಮಾಡಲು ಇರುವ ಸ್ವಾತಂತ್ರ್ಯವಲ್ಲ. ಇದು ಸಂವಿಧಾನದ ಮಿತಿಯಲ್ಲಿ ಆಚರಣೆಯಲ್ಲಿದೆ. ಕಾನೂನು ಅನುಮತಿ ನೀಡಿದ ಒಂದು ಕ್ರಿಯೆಯನ್ನು ಕೈಗೊಳ್ಳುವ ಅಧಿಕಾರವೇ ಉದಾರತೆ.

**ಸಮಾನತೆ :** ಇಂಗ್ಲಿಷಿನ 'ಈಕ್ವಾಲಿಟಿ' ಪದಕ್ಕೆ ಸಂವಾದಿಯಾಗಿ ಸಮಾನತೆ ಪದ ಬಳಕೆಯಲ್ಲಿದೆ. ಸಮಾಜದಲ್ಲಿನ ಎಲ್ಲಾ ವ್ಯಕ್ತಿಗಳಿಗೆ ಯಾವುದೇ ತಾರತಮ್ಯವಿಲ್ಲದೆ ಸಾಕಷ್ಟು ಅವಕಾಶಗಳನ್ನು ಒದಗಿಸುವುದು ಮತ್ತು ಸಮಾಜದ ಯಾವುದೇ ಸ್ತರದ ಜನರು ವಿಶೇಷ ಸವಲತ್ತುಗಳನ್ನು ಅನುಭವಿಸದೇ ಇರುವಂತೆ ಮಾಡುವುದನ್ನು ಇದು ಒಳಗೊಳ್ಳುತ್ತದೆ. ಕಾನೂನಿನ ಅಡಿಯಲ್ಲಿ ಎಲ್ಲರೂ ಸಮಾನರು ಎಂಬುದನ್ನು ಇದು ಖಚಿತಪಡಿಸುತ್ತದೆ. ಸಮಾನತೆಯ ಅರ್ಥ ಮತ್ತು ಅದಕ್ಕೆ ಸಂಬಂಧಿಸಿದ ಸಾಂವಿಧಾನಿಕ ಅವಕಾಶಗಳನ್ನು ಕುರಿತು ವಿವರವಾಗಿ 'ಮೂಲಭೂತ ಹಕ್ಕುಗಳು' ಅಧ್ಯಾಯದಲ್ಲಿ ವಿವರಿಸಲಾಗಿದೆ.

**ಭ್ರಾತೃತ್ವ :** ಇಂಗ್ಲಿಷಿನ 'ಫ್ರೆಟರ್ನಿಟಿ' ಪದಕ್ಕೆ ಪರ್ಯಾಯವಾಗಿ ಭ್ರಾತೃತ್ವ ಪದವನ್ನು ಬಳಸಲಾಗುತ್ತಿದೆ. ಇದು ಸಹೋದರತೆಯ ಭಾವನೆಗೆ ಸಂಬಂಧಿಸಿದ್ದಾಗಿದೆ ಮತ್ತು ರಾಷ್ಟ್ರದ ಸಮಸ್ತ ಜನರೊಂದಿಗೆ ಸಂಬಂಧಿಸಿದವನು ಎಂಬ ಪ್ರಜ್ಞೆಯನ್ನು ಮೂಡಿಸುತ್ತದೆ. ಇದು ಪ್ರಾದೇಶಿಕವಾದ, ಕೋಮುವಾದ, ಜಾತೀಯತೆಯನ್ನು ಪುರಸ್ಕರಿಸುವುದಿಲ್ಲ. ಏಕೆಂದರೆ ಇವುಗಳು ರಾಷ್ಟ್ರದ ಅಖಂಡತೆ ಅಥವಾ ಏಕತೆಗೆ ಅಡಚಣೆಯನ್ನುಂಟು ಮಾಡುತ್ತವೆ. ಸಂವಿಧಾನದ ಪೀಠಿಕಾ ಭಾಗವು ಎರಡು ವಿಚಾರಗಳಾದ ವ್ಯಕ್ತಿಗೌರವ ಮತ್ತು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಖಚಿತಪಡಿಸುತ್ತದೆ. 'ಸಮಗ್ರತೆ' ಎಂಬ ಪದವು 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಸೇರಿಸಲ್ಪಟ್ಟಿದೆ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1

'ಎ' ಪಟ್ಟಿಯಲ್ಲಿರುವ ಅಂಶಗಳನ್ನು 'ಬಿ'ಪಟ್ಟಿಯ ಅಂಶಗಳಿಗೆ ಹೊಂದಿಸಿರಿ

| | **'ಎ'ಪಟ್ಟಿ** | **'ಬಿ'ಪಟ್ಟಿ** | |
|---|---|---|---|
| 1 | ಗಣತಂತ್ರ ವ್ಯವಸ್ಥೆ | ಕೊಡಬೇಕಾದುದನ್ನು ಪ್ರತಿಯೊಬ್ಬರಿಗೂ ವಿತರಣೆ ಮಾಡುವುದು | ಎ |
| 2 | ನ್ಯಾಯಪರತೆ | ಸರಕಾರಿ ಮಾದರಿ ವ್ಯವಸ್ಥೆ | ಬಿ |
| 3 | ಉದಾರತೆ | ಸಮಾಜದಲ್ಲಿನ ಎಲ್ಲಾ ವ್ಯಕ್ತಿಗಳಿಗೆ ಯಾವುದೇ ತಾರತಮ್ಯವಿಲ್ಲದೆ ಸಾಕಷ್ಟು ಅವಕಾಶಗಳನ್ನು ಒದಗಿಸುವುದು | ಸಿ |
| 4 | ಸಮಾನತೆ | ಅನುಸರಿಸಲು ಇಚ್ಛಿಸುವ ವಿಚಾರಧಾರೆಗೆ ಸ್ವಾತಂತ್ರ್ಯ. | ಡಿ |
| 5 | ಭ್ರಾತೃತ್ವ | ಸಹೋದರತೆಯ ಭಾವ | ಇ |

## 2.2.3.2. ಪ್ರಜಾಪ್ರಭುತ್ವದ ಮೌಲ್ಯಗಳು:

ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರ್ಥ ಮಾಡಿಕೊಳ್ಳುವ ಮೊದಲು ನಾವು ಮೌಲ್ಯಗಳು ಎಂದರೇನೆಂದು ಶೋಧಿಸಬೇಕಾಗುತ್ತದೆ. ಲೇಮನ್ ಅವರ ಪ್ರಕಾರ, "ಮೌಲ್ಯವೆಂದರೆ ಮಾನವ ಸಮಾಜದ ಅಸ್ತಿತ್ವಕ್ಕೆ ಯಾವುದು ಅಗತ್ಯವಾದುದು ಅಥವಾ ಬೆಲೆಯುಳ್ಳದ್ದು ಎಂದು ಗಮನಿಸುವಂಥದ್ದಾಗಿದೆಯೋ ಅದು". ಆಧುನಿಕ ಯುಗದ ಎಲ್ಲಾ ಸಾರ್ವಕಾಲಿಕ ಮೌಲ್ಯಗಳು, ಮಾನವೀಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಭಾರತೀಯ ಸಂವಿಧಾನವು ಒಳಗೊಂಡಿದೆ. ಈ ಮೇಲಿನ ವ್ಯಾಖ್ಯೆಗಳನ್ನು ಆಧರಿಸಿ ಭಾರತೀಯ ಸಂವಿಧಾನದ ಪೀಠಿಕಾಭಾಗ ಮತ್ತು ನಮ್ಮ ಅಧ್ಯಯನದ ಉದ್ದೇಶದ ಹಿನ್ನೆಲೆಯಲ್ಲಿ ಈ ಕೆಳಗಿನವುಗಳನ್ನು ಸಾಂವಿಧಾನಿಕ ಮೌಲ್ಯಗಳಾಗಿ ನಾವು ಪರಿಗಣಿಸಿದ್ದೇವೆ. ಇವು ಪ್ರಜಾಪ್ರಭುತ್ವದ ಮೌಲ್ಯಗಳೂ ಆಗಿವೆ. ಏಕೆಂದರೆ ನಮ್ಮ ಸಂವಿಧಾನವು ಏಕಮಾತ್ರವಾಗಿ ಸಂವಿಧಾನದ ತತ್ವಗಳನ್ನೇ ಆಧರಿಸಿ ರಚಿತವಾಗಿದೆ.

- ಸಮಾನತೆ
- ನ್ಯಾಯಪರತೆ
- ಸ್ವಾತಂತ್ರ್ಯ
- ಇತರರ/ಬೇರೆಯವರ ಅಭ್ಯುದಯದೆಡೆಗೆ ಕಾಳಜಿ
- ಮತನಿರಪೇಕ್ಷತೆ (ಸರ್ವಧರ್ಮ ಸಮಭಾವ)
- ಮಾನವಘನತೆ ಮತ್ತು ಹಕ್ಕುಗಳೆಡೆಗೆ ಗೌರವ

ಈಗ ನಾವು ಮೇಲಿನ ಮೌಲ್ಯಗಳನ್ನು ಸ್ವಲ್ಪ ವಿವರವಾಗಿ ನೋಡೋಣ.

**ಎ) ಸಮಾನತೆ :** ಸಮಾನತೆ ಪದದ ಅಕ್ಷರಶಃ ಅರ್ಥವೇನೆಂದರೆ ಶ್ರೀಮಂತರು ಮತ್ತು ಬಡವರ ನಡುವಿನ ಅಂತರದ ಪ್ರಮಾಣವನ್ನು ತಗ್ಗಿಸಿ, ಅದನ್ನು ಸಮಮಟ್ಟಕ್ಕೆ ತರುವ ಪ್ರಕ್ರಿಯೆ. ಎಲ್ಲಾ ನಾಗರಿಕರಿಗೂ ಸಮಾನ ಅವಕಾಶಗಳನ್ನು ಒದಗಿಸುವುದು ಸಮಾನತೆ. ಕಾನೂನಿನ ದೃಷ್ಟಿಯಲ್ಲಿ ಪ್ರತಿಯೊಬ್ಬರೂ ಸಮಾನರು ಎಂಬುದು ಇದರ ಅರ್ಥ. ಯಾವುದೇ ಬುಡಕಟ್ಟು, ಜನಾಂಗ, ಧರ್ಮ, ಲಿಂಗ, ಜಾತಿ, ವರ್ಗ ಮತ್ತು ಹುಟ್ಟಿನ ಹಿನ್ನೆಲೆಯಲ್ಲಿ ಯಾವುದೇ ತಾರತಮ್ಯ ಮಾಡದೇ ಇರುವುದೇ ಸಮಾನತೆ. ಸಮಾನತೆಯು ಯಾವಾಗಲೂ ಎಲ್ಲರನ್ನೂ ಒಂದೇ ಎಂದು ಭಾವಿಸುವುದಿಲ್ಲ. ಬದಲಾಗಿ ಇದು ಪ್ರತಿಯೊಬ್ಬ ವ್ಯಕ್ತಿಯು ಹೊಂದಬೇಕಾದ ಪ್ರತಿಫಲ ಅಥವಾ ಉತ್ಪನ್ನವು ಒಂದೇ ಇರಬೇಕು ಎಂದು ಭಾವಿಸುತ್ತದೆ. ಇದನ್ನೇ ಸಮತೆಯ ಪರಿಕಲ್ಪನೆ ಹೇಳುತ್ತದೆ. ಇಬ್ಬರು ವ್ಯಕ್ತಿಗಳು ಸಮಾನರಲ್ಲದೆ ಹೋದರೆ ನಮ್ಮ ಅಸ್ತಿತ್ವದಲ್ಲಿ ಅಸಮಾನತೆಯು ಒಂದು ಸ್ವೀಕೃತ ಸತ್ಯವಾಗಿದ್ದರೆ ಅಂತಹ ಸಂದರ್ಭಗಳಲ್ಲಿ 'ಸಮಾನತೆ' ಎಂಬ ಪದವು ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ. ಇದರ ಪ್ರಕಾರವಾಗಿ ಅದು ಈ ಕೆಳಗಿನ ಲಕ್ಷಣಗಳನ್ನು ಹೊಂದಿದೆ.

- ಸಮಾಜದಲ್ಲಿ ವಿಶೇಷ ಸವಲತ್ತುಗಳು ಇಲ್ಲದಿರುವಿಕೆ
- ಎಲ್ಲರ ವಿಕಾಸಕ್ಕಾಗಿ ಸಾಕಷ್ಟು ಮತ್ತು ಸಮಾನ ಅವಕಾಶಗಳು ಇರುವಿಕೆ
- ಎಲ್ಲಾ ಮೂಲಭೂತ ಅಗತ್ಯಗಳ ಕುರಿತು ಸಮಾನ ಸಂತೃಪ್ತಿ.

**ಸಮಾನತೆಯ ಪ್ರಕಾರಗಳು :** ನಾವು ಜಗತ್ತಿನ ಸುತ್ತಲೂ ಗಮನಿಸಿದಾಗ ಬಹುಸುಲಭದಲ್ಲಿ ಅನೇಕ ವಸ್ತುವಿಷಯಗಳು ಅಸಮಾನವಾಗಿರುವುದನ್ನು ಕಾಣಬಹುದು. ಮನುಷ್ಯರಲ್ಲೂ ಸಹ ಅನೇಕ ಭಿನ್ನತೆಗಳಿವೆ. ಅದು ಬಣ್ಣದ್ದಾಗಿರಬಹುದು; ಎತ್ತರವಾಗಿರಬಹುದು; ತೂಕವಾಗಿರಬಹುದು ಇತ್ಯಾದಿ. ಇದು ಸಾರ್ವತ್ರಿಕವಾಗಿ ಎಲ್ಲರೂ ಒಪ್ಪಿಕೊಂಡ ಸ್ವಾಭಾವಿಕ ಸತ್ಯ. ಮತ್ತೊಂದೆಡೆ ಸಮಾಜೋ–ಆರ್ಥಿಕ ಅಸಮಾನತೆಯ ಕಾರಣದಿಂದಾಗಿ ಅನೇಕ

ಭಿನ್ನತೆಗಳನ್ನು ಕಾಣಬಹುದು. ಆದಾಗ್ಯೂ ಇವುಗಳು ಒಂದೋ ಸ್ವಾಭಾವಿಕವಾಗಿರಬಹುದು ಅಥವಾ ಮಾನವ ನಿರ್ಮಿತವೂ ಆಗಿರಬಹುದು. ಜಾತಿ, ಬಣ್ಣ, ಧರ್ಮ, ನಂಬಿಕೆ, ಲಿಂಗ, ಜನ್ಮಸ್ಥಳ, ಇಷ್ಟಾನಿಷ್ಟಗಳು ಇವುಗಳ ಹೆಸರಿನಲ್ಲಿ ಅಚರಣೆಯಲ್ಲಿರತಕ್ಕಂತಹ ತಾರತಮ್ಯಗಳು ಮತ್ತು ಅಸಮಾನತೆಗಳು ಇತ್ಯಾದಿಗಳೆಲ್ಲವು ಅಸ್ವಾಭಾವಿಕವಾದವುಗಳು. ಅಥವಾ ಮಾನವ ನಿರ್ಮಿತ ಅಸಮಾನತೆಗಳು. ಸಮಾನತೆಯು ಇಂತಹ ಎಲ್ಲಾ ಅಸಮಾನತೆಗಳು ಮತ್ತು ತಾರತಮ್ಯವನ್ನು ಕೊನೆಗಾಣಿಸುವುದಕ್ಕೆ ಕರೆ ನೀಡುತ್ತದೆ. ಸಮಾನತೆಯು ಹೇಗೆ ವಿಶ್ಲೇಷಿಸಲ್ಪಡುತ್ತದೆ ಎಂಬ ಆಯಾಮವನ್ನು ಆಧರಿಸಿ ಸಮಾನತೆಯಲ್ಲಿ ಕೆಲವು ಪ್ರಕಾರಗಳನ್ನು ಮಾಡಲಾಗಿದೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ವರ್ಣಿಸಲಾಗಿದೆ:

**ಸಾಮಾಜಿಕ ಸಮಾನತೆ :** ಈಗಾಗಲೇ ನಾವು ಅಧ್ಯಯನ ಮಾಡಿದಂತೆ ಸಮಾಜದಲ್ಲಿನ ವಿಶೇಷ ಸವಲತ್ತುಗಳ ಅನುಪಸ್ಥಿತಿಯು ಸಮಾನತೆಯ ಒಂದು ಮುಖ್ಯ ಗುಣಲಕ್ಷಣವಾಗಿದೆ. ಆ ಪ್ರಕಾರವಾಗಿ ಸಾಮಾಜಿಕ ಸಮಾನತೆಯೆಂದರೆ ಸಮಾಜದಲ್ಲಿನ ಎಲ್ಲಾ ನಾಗರಿಕರಿಗೂ ಸಮಾನ ಅಂತಸ್ತುಗಳನ್ನು ನೀಡುವ ಅರ್ಹತೆಯನ್ನು ಒದಗಿಸುವುದು ಮತ್ತು ಯಾರೊಬ್ಬರಿಗೂ ವಿಶೇಷ ಸವಲತ್ತು ಪಡೆಯುವ ಅರ್ಹತೆ ಇಲ್ಲದೇ ಇರುವುದು. ಸಮಾಜದಲ್ಲಿ ಯಾವತ್ತೂ ಜಾತಿ ಮತ್ತು ನಂಬಿಕೆ, ಬಣ್ಣ ಮತ್ತು ಜನಾಂಗ, ಕುಲ ಮತ್ತು ಬುಡಕಟ್ಟು ಇವುಗಳ ಹೆಸರಿನಲ್ಲಿ ಯಾವುದೇ ಅಂತರ ಇರಬಾರದು. ಇದರ ಅರ್ಥವೇನೆಂದರೆ ಸಮಾಜದಲ್ಲಿನ ಎಲ್ಲಾ ನಾಗರಿಕರು ವಿವಿಧ ಅವಕಾಶಗಳನ್ನು ಅನುಭವಿಸಲು ಸಮಾನರಾಗಿ ಅರ್ಹರಿದ್ದಾರೆ ಎಂದು. ಇದು ಇತರ ಸವಲತ್ತುಗಳ ಅನುಪಸ್ಥಿತಿಯನ್ನು ಸೂಚಿಸುತ್ತದೆ. ಸಾಮಾಜಿಕ ಸಮಾನತೆಯ ಸಿದ್ಧಿಯನ್ನು ಪಡೆಯುವುದು ತುಂಬಾ ಕಷ್ಟಕರ ವಿಚಾರ. ಇದನ್ನು ಪೂರ್ಣವಾಗಿ ಕಾನೂನಿನಿಂದ ಜಾರಿಗೊಳಿಸುವುದು ಅಸಾಧ್ಯ. ತಮ್ಮ ವ್ಯಕ್ತಿತ್ವವನ್ನು ವಿಕಸನಗೊಳಿಸಿಕೊಳ್ಳಲು ಎಲ್ಲರಿಗೂ ಒಂದು ಸಮಾನ ಅವಕಾಶವಿರಬೇಕಾಗುತ್ತದೆ. ವಿಕಲಾಂಗ ಚೇತನ ವ್ಯಕ್ತಿಗಳಿಗೆ– ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವುದು, ಒಪ್ಪಂದಗಳು/ಗುತ್ತಿಗೆ ನೀಡುವುದು, ವಜಾ ಮಾಡುವುದು, ಪರಿಹಾರ ನೀಡುವುದು, ಪರಿಸ್ಥಿತಿಗಳು ಮೊದಲಾದ ಅಂಶಗಳಲ್ಲಿ ಯಾವುದೇ ತಾರತಮ್ಯ ಮಾಡದೇ ಇರುವುದು ಇತ್ಯಾದಿ ವಿಚಾರಗಳು ಸಾಮಾಜಿಕ ಸಮಾನತೆಗೆ ಉದಾಹರಣೆಗಳಾಗಿವೆ.

**ಪೌರ/ನಾಗರಿಕ ಸಮಾನತೆ :** ಇದು ಒಂದೇ ಕಾನೂನಿನಡಿ ಬರತಕ್ಕಂತಹ ವ್ಯಕ್ತಿಗಳು ಅನುಭವಿಸಬಹುದಾದ ಹಕ್ಕುಗಳು ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾಗಿದೆ. ಧರ್ಮ, ನಂಬಿಕೆ, ಜಾತಿಯ ನೆಲೆಯಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ನಾಗರಿಕರೂ ತಮ್ಮ ಹಕ್ಕುಗಳಿಗೆ ಸಂಬಂಧಿಸಿದಂತೆ ಸಮಾನರು ಎಂಬುದನ್ನು ಇದು ಸೂಚಿಸುತ್ತದೆ. ಗ್ರಾಮೀಣ ದೇವಾಲಯಗಳಲ್ಲಿ ಪ್ರವೇಶಾತಿ, ಇತರ ಜಾತಿಯ ಜನರೊಂದಿಗೆ ಊಟ ಮಾಡುವುದು ಮೊದಲಾದವು ಪೌರ/ನಾಗರಿಕ ಸಮಾನತೆಯ ಕೆಲವು ನಿದರ್ಶನಗಳಾಗಿವೆ.

**ರಾಜಕೀಯ ಸಮಾನತೆ :** ರಾಜಕೀಯ ಸಮಾನತೆಯು ಪ್ರಜಾಪ್ರಭುತ್ವ–ರಾಜಕೀಯ ವಲಯದಲ್ಲಿ ಕೋಶ ಕೇಂದ್ರದಂತೆ ಎಂದು ಪರಿಗಣಿಸಲ್ಪಟ್ಟಿದೆ. ಪ್ರಜಾಪ್ರಭುತ್ವದ ಈ ತತ್ವದ ಆಧಾರದ ಮೇಲೆ ಇದು ಉದ್ಭವಿಸಿದೆ ಮತ್ತು ಹುಲುಸಾಗಿ ಬೆಳೆದಿದೆ. ಇದರ ಅರ್ಥವೇನೆಂದರೆ ಮತದಾನ ಮಾಡುವುದು, ಚುನಾವಣೆಗೆ ಸ್ಪರ್ಧಿಸುವುದು, ಶೇಖರಣೆ ಮಾಡುವುದು ಮೊದಲಾದ ಕ್ಷೇತ್ರಗಳಲ್ಲಿ ಎಲ್ಲಾ ಜನರಿಗೂ ಸಮಾನ ಹಕ್ಕುಗಳನ್ನು ಒದಗಿಸಬೇಕು. ಸರಕಾರದ ನಿರ್ಧಾರಗಳಿಗೆ ಸಂಬಂಧಿಸಿದಂತೆ ಎಲ್ಲಾ ನಾಗರಿಕರೂ ಒಂದು ಮಟ್ಟಿಗೆ ಸಮಾನ ಧ್ವನಿ ಎತ್ತಬೇಕೆಂದು ರಾಜಕೀಯ ಸಮಾನತೆಯು ಒತ್ತು ನೀಡುತ್ತದೆ. ಎಲ್ಲಾ ನಾಗರಿಕರು ರಾಜಕೀಯ ಹಕ್ಕುಗಳನ್ನು ಹೊಂದಿರಬೇಕು ಮತ್ತು ಎಲ್ಲಾ ಅಧಿಕಾರದ ಕಾರ್ಯಸ್ಥಾನಗಳಲ್ಲಿ ಸಮಾನ ಪ್ರವೇಶವನ್ನು ಹೊಂದಿರಬೇಕು ಎಂದು ಇದು ಸೂಚಿಸುತ್ತದೆ. ಪ್ರಜಾಪ್ರಭುತ್ವವು ಎಲ್ಲಾ ನಾಗರಿಕರ ಆದ್ಯತೆಗಳು ಮತ್ತು ಅಭಿರುಚಿಗಳನ್ನು ಸಮಾನವಾಗಿ ಪರಿಗಣಿಸಬೇಕೆಂದು ನಂಬಿಕೆಯಿಟ್ಟಿದೆ. 'ಒಬ್ಬ ವ್ಯಕ್ತಿಗೆ ಒಂದೇ ಮತ', 'ಕಾನೂನಿನ ಅಡಿಯಲ್ಲಿ ಎಲ್ಲರೂ ಒಂದೇ', 'ಮುಕ್ತವಾಗಿ ಮಾತನಾಡಲು ಎಲ್ಲರೂ ಸ್ವತಂತ್ರರು' ಮೊದಲಾದ ಹೇಳಿಕೆಗಳಲ್ಲಿ ಇದು ಅಭಿವ್ಯಕ್ತವಾಗಿದೆ.

**ಕಾನೂನು ಸಮಾನತೆ :** ಎಲ್ಲಾ ವ್ಯಕ್ತಿಗಳು (ನಾಗರಿಕರು/ನಾಗರಿಕೇತರರು ಮತ್ತು ನಾಗರಿಕರು) ಸಮಾನವಾಗಿ

ಕಾನೂನಿನಿಂದ ರಕ್ಷಣೆಯನ್ನು ಅನುಭವಿಸಬೇಕು ಎಂಬುದನ್ನು ಕಾನೂನು ಸಮಾನತೆ ಸೂಚಿಸುತ್ತದೆ. ಆಕಸ್ಮಿಕವಾದ ಹುಟ್ಟಿನ ಕಾರಣದಿಂದ ಉದಾಹರಣೆಗೆ ಬುಡಕಟ್ಟು, ಲಿಂಗ, ಜನಾಂಗೀಯತೆ, ಮನೆತನದಿಂದಾಗಲೀ ಅಥವಾ ವ್ಯಕ್ತಿಯೊಬ್ಬನ ವೈಯಕ್ತಿಕ ಆಯ್ಕೆಯ ವಿಷಯಗಳಾದ ಧರ್ಮ, ಗುಂಪಿನ ಸದಸ್ಯತ್ವದಿಂದಾಗಲೀ ಅಥವಾ ಉದ್ಯೋಗದಿಂದಾಗಲೀ ಕಾನೂನಿನ ಅಡಿಯಲ್ಲಿ ಯಾರನ್ನೂ ತಾರತಮ್ಯ ಮಾಡುವಂತಿಲ್ಲ.

**ಆರ್ಥಿಕ ಸಮಾನತೆ :** ಎಲ್ಲಾ ವ್ಯಕ್ತಿಗಳು ಸಮಾನವಾಗಿ ಸಂಪತ್ತನ್ನು ಅನುಭವಿಸಬೇಕು ಎಂಬ ತತ್ವವನ್ನು ಇದು ಎತ್ತಿ ಹಿಡಿಯುತ್ತದೆ. ಕಾರ್ಲ್ ಮಾರ್ಕ್ಸ್ ಅವರು ಅಭಿಪ್ರಾಯಪಟ್ಟಂತೆ ಆರ್ಥಿಕ ಸಮಾನತೆಯಿಲ್ಲದ ರಾಜಕೀಯ ಸಮಾನತೆಗೆ ಅರ್ಥವಿಲ್ಲ. ಅವರ ಪ್ರಕಾರ, "ವಾದ್ಯ ಊದುವವನಿಗೆ ಯಾರು ಹಣ ಕೊಡಬಲ್ಲನೋ ಅತ ಮಾತ್ರ ರಾಗ–ಸ್ವರಗಳನ್ನು ನುಡಿಸಲು ಆದೇಶ ಮಾಡಬೇಕು ಎಂಬುದು ಸಮಾಜದ ಸ್ವೀಕರಣೀಯ ತತ್ವ. ಯಾರು ಆರ್ಥಿಕ ಸನ್ನೆಕೋಲನ್ನು ಹಿಡಿಯಬಲ್ಲನೋ ಆತ ಮಾತ್ರ ರಾಜಕೀಯ ಸನ್ನೆಕೋಲನ್ನು ಹಿಡಿಯಬಲ್ಲ." ಲಾರ್ಡ್ ಬ್ರೇಸ್ ಅವರ ಪ್ರಕಾರ," ಸಂಪತ್ತಿನಲ್ಲಿನ ಅಸಮಾನ ಹಂಚಿಕೆಗಳನ್ನು ತೊಡೆದುಹಾಕಲು ಒಂದು ಪ್ರಯತ್ನವಾಗಿ ಆರ್ಥಿಕ ಅಸಮಾನತೆಯನ್ನು ನಾವು ಕಾಣಬೇಕು. ಜಗತ್ತಿನಲ್ಲಿರುವ ಎಲ್ಲಾ ಸರಕುಗಳನ್ನು ಪ್ರತಿಯೊಬ್ಬ ಪುರುಷ ಅಥವಾ ಮಹಿಳೆಯರಿಗೆ ಸಮಾನ ಪಾಲಿನ ರೂಪದಲ್ಲಿ ನಿಗದಿಪಡಿಸಬೇಕು." ಆದಾಯದಲ್ಲಿ ಸಮಾನತೆ ತರುವುದೆಂದಷ್ಟೇ ಇದರ ಅರ್ಥವಲ್ಲ. ಸಾರ್ವಜನಿಕ ಉದ್ಯೋಗದ ಸಂದರ್ಭದಲ್ಲಿ ಪ್ರತಿಯೊಬ್ಬ ಮನುಷ್ಯನೂ ಸಮಾನವಾದ ಅವಕಾಶಗಳನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾನೆ ಎಂಬುದು ಇದರ ಅರ್ಥ.

**ಬಿ.) ನ್ಯಾಯಪರತೆ :** ಆಂದೋಲನ ಅಥವಾ ಚಳವಳದ ವೇಳೆ ತುಂಬಾ ಪ್ರಸಿದ್ಧವಾದ ಘೋಷಣೆಯಾಗಿರುವ "ನಮಗೆ ನ್ಯಾಯ ಬೇಕು" ಎಂಬುದನ್ನು ನಾವೆಲ್ಲರೂ ಕೇಳಿರುತ್ತೇವೆ. ಈ 'ನ್ಯಾಯ'/ 'ನ್ಯಾಯಪರತೆ' ಪದದ ಅರ್ಥವೇನು? ಇದು ಕಾನೂನು ನಿಯಮವನ್ನು ಪ್ರತಿನಿಧಿಸುತ್ತದೆ. ಅನಿಯಂತ್ರಣ ಪ್ರವೃತ್ತಿಯ ಅನುಪಸ್ಥಿತಿಯನ್ನು ಪ್ರತಿನಿಧಿಸುತ್ತದೆ; ಸಮಾನ ಹಕ್ಕುಗಳ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ; ಸಮಾಜದಲ್ಲಿರುವ ಎಲ್ಲರಿಗೂ ಸ್ವಾತಂತ್ರ್ಯ ಮತ್ತು ಅವಕಾಶಗಳನ್ನು ಪ್ರತಿನಿಧಿಸುತ್ತದೆ. ಇದರ ಪ್ರಾಮುಖ್ಯವನ್ನು ಗುರುತಿಸುವುದಾದರೆ, ಸಂವಿಧಾನದ ಪೀಠಿಕಾಭಾಗದಲ್ಲಿ ತಿಳಿಸಿದಂತೆ ಇದು ನ್ಯಾಯಪರತೆಯು ಸುರಕ್ಷತೆಯನ್ನು ಪಡೆಯಲು ಬೇಕಾದ ಮೊದಲ ಆದರ್ಶ, ಉದ್ದೇಶ ಮತ್ತು ಸದ್ಗುಣವಾಗಿದೆ. ಇದು ಪ್ರಜಾಪ್ರಭುತ್ವದ ಉನ್ನತ ಮೌಲ್ಯವಾಗಿದೆ.

ನ್ಯಾಯಪರತೆಯು ಒಂದು ವ್ಯವಸ್ಥೆಯಾಗಿದ್ದು ಇಲ್ಲಿ ಜನರು ಒಂದು ಸೌಹಾರ್ದವಾದ ನಿಕಟ ಬಾಂಧವ್ಯದಲ್ಲಿ ಜೊತೆಯಾಗುತ್ತಾರೆ. ಇದು ವಿಭಿನ್ನವಾದ ಸಾಮರಸ್ಯದ ಮೌಲ್ಯಗಳನ್ನು ಹುಡುಕುವ ಕೆಲಸ ಮಾಡುವುದಲ್ಲದೆ ಎಲ್ಲಾ ಮಾನವ ಸಂಬಂಧಗಳನ್ನು ಸಂಘಟಿಸುತ್ತದೆ. ಉದಾಹರಣೆಗೆ ಹೇಳುವುದಾದರೆ ನ್ಯಾಯಪರತೆ ಎಂಬುದು ಸಂಬಂಧಗಳ ಒಂದು ಸರಿಯಾದ ಅಥವಾ ನ್ಯಾಯೋಚಿತವಾದ ಆದೇಶದ ರೂಪದಲ್ಲಿ ಜನರನ್ನು ಜೊತೆಯಾಗಿ ಬೆಸೆಯುತ್ತದೆ ಅಥವಾ ಸೇರಿಸುತ್ತದೆ ಅಥವಾ ಸಂಘಟಿಸುತ್ತದೆ. 2006ರ ಯುನೈಟೆಡ್ ರಾಷ್ಟ್ರಗಳ ದಾಖಲೆಯ ಪ್ರಕಾರ, "ಸಾಮಾಜಿಕ ನ್ಯಾಯಪರತೆಯು ಒಂದು ಮುಕ್ತ ಪ್ರಪಂಚ." ಸಾಮಾಜಿಕ ನ್ಯಾಯಪರತೆಯ ವಿಶಾಲ ತಳಹದಿಯ ಅರ್ಥದಲ್ಲಿ ಹೇಳುವುದಾದರೆ ಅದು ಆರ್ಥಿಕ ಬೆಳವಣಿಗೆಯ ಫಲಗಳನ್ನು ನ್ಯಾಯೋಚಿತವಾಗಿ ಮತ್ತು ಸಹಾನುಭೂತಿಯಿಂದ ವಿತರಿಸುವ ವ್ಯವಸ್ಥೆ". ಸಿ. ಇ. ಮೆರಿಯಂ ಅವರ ಪ್ರಕಾರ, "ನ್ಯಾಯೋಚಿತವಾಗಿ ಯಾವುದು ಸಮ್ಮತವಾಗಿರುವುದೋ ಅಂತಹ ಪ್ರತಿಯೊಂದು ಅಂಶವನ್ನು ಗ್ರಹಿಸುವ ಮತ್ತು ಅದರ ಕಾರ್ಯವಿಧಾನವನ್ನು ತಿಳಿಸುವ ವ್ಯವಸ್ಥೆಯಾಗಿದೆ". ಡಾ. ರಾಫೆಲ್ ಅವರ ಪ್ರಕಾರ, "ನ್ಯಾಯಪರತೆಯು ವ್ಯಕ್ತಿಯೊಬ್ಬನ ಹಕ್ಕುಗಳನ್ನು ಸಂರಕ್ಷಿಸುತ್ತದೆ ಮತ್ತು ಸಮಾಜದ ಆದೇಶವನ್ನು ರಕ್ಷಿಸುತ್ತದೆ. ಇದರ ಪ್ರಕಾರ ನ್ಯಾಯಪರತೆಯು ನ್ಯಾಯೋಚಿತವಾದ ಮಾರ್ಗದಲ್ಲಿ ಎಲ್ಲರ ಹಕ್ಕುಗಳನ್ನು ಭದ್ರತೆಯಿಂದ ಕಾಯ್ದಿಡುವ ಮತ್ತು ಸಂರಕ್ಷಿಸುವ ವ್ಯವಸ್ಥೆ. ಇದು ಎಲ್ಲಾ ಜನರ ನಡುವೆ ಸಾಮರಸ್ಯವನ್ನು ಕೇಂದ್ರೀಕರಿಸುತ್ತದೆ ಮತ್ತು ನ್ಯಾಯೋಚಿತವಾದ ರೀತಿಯಲ್ಲಿ ಹಕ್ಕುಗಳ ಭದ್ರತೆಗಾಗಿ ಆದೇಶಾತ್ಮಕ ರೂಪದಲ್ಲಿ ಕೆಲಸ ಮಾಡುವ ಒಂದು ಜೀವಂತ ವ್ಯವಸ್ಥೆ.

ಈಗ ನಾವು ನ್ಯಾಯಪರತೆಯ ವಿವಿಧ ಪ್ರಕಾರಗಳನ್ನು ತಿಳಿಯೋಣ.

**ಸಾಮಾಜಿಕ ನ್ಯಾಯಪರತೆ :** ಸಾಮಾಜಿಕ ನ್ಯಾಯಪರತೆಯು ಒಂದು ವಿಶಾಲವಾದ ಪರಿಕಲ್ಪನೆಯಾಗಿದ್ದು ಅದನ್ನು ಯಾವುದೇ ನಿರ್ದಿಷ್ಟ ಧಾರ್ಮಿಕ ಅಥವಾ ರಾಜಕೀಯ ಚಳವಳಕ್ಕೆ ಸೀಮಿತಗೊಳಿಸುವುದು ಅಸಾಧ್ಯ. ಇದೊಂದು ಮೂಲಭೂತ ಅಗತ್ಯವಾಗಿ ಪರಿಗಣಿಸಲ್ಪಟ್ಟಿದ್ದು ಮಾನವ ಸಮಾಜದ ಬಗ್ಗೆ ಕಾಳಜಿ ವಹಿಸುತ್ತದೆ. ಇದು ನ್ಯಾಯಪರತೆಯ ವಿಶಾಲ ತಳಹದಿಯ ಅರ್ಥದ ಒಂದು ಭಾಗ ಎಂದು ಸಾಮಾನ್ಯವಾಗಿ ಹೇಳಬಹುದು. ಸಾಮಾಜಿಕ ನ್ಯಾಯದ ತಾತ್ವಿಕ ಅಂಶ ಅಥವಾ ವಿಚಾರವು ಪ್ರತಿಯೊಬ್ಬ ವ್ಯಕ್ತಿಯನ್ನು ಸಮಾನವಾಗಿ ನಡೆಸಿಕೊಳ್ಳಬೇಕು ಮತ್ತು ಪ್ರತಿಯೊಬ್ಬನಿಗೂ ಕೊಡಬೇಕಾದ ಬಾಕಿಯನ್ನು ನೀಡಬೇಕು ಎಂದು ಹೇಳುತ್ತದೆ. ಒಂದು ಸಾವಯವ ಸಂಯುಕ್ತ ಸಮುದಾಯವನ್ನು ರೂಪಿಸಲು ಆವಶ್ಯಕವಾದ ಜನಗಳ ಬೌದ್ಧಿಕ ಸಹಕಾರವೇ ಸಾಮಾಜಿಕ ನ್ಯಾಯಪರತೆ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಗೂ ಸಮಾನವಾಗಿ ಮತ್ತು ನೈಜರೀತಿಯಲ್ಲಿ ಬೆಳೆಯಲು ಇಲ್ಲಿ ಅವಕಾಶವಿದೆ. ಮತ್ತು ಸಮೂಹದಲ್ಲಿ ಆತ ತನ್ನ ಅತ್ಯುತ್ತಮ ಸ್ವಭಾವ ಸಹಕಾರ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯ. ಸಾಮಾಜಿಕ ನ್ಯಾಯಪರತೆಯ ಪರಿಕಲ್ಪನೆಯು ಸಮಾಜೋ–ಆರ್ಥಿಕ ಸಮಾನತೆಯ ಮೂಲ ಆಶಯದೊಂದಿಗೆ ಗುರುತಿಸಿಕೊಂಡಿದೆ ಮತ್ತು ಅದರ ಪ್ರಧಾನ ಉದ್ದೇಶವೇನೆಂದರೆ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ಮತ್ತು ಅಸಮಾನತೆಗಳನ್ನು ನಿರ್ಮೂಲನ ಮಾಡುವುದು.

ಭಾರತೀಯ ಸಂವಿಧಾನದಲ್ಲಿ ಸಾಮಾಜಿಕ ಮತ್ತು ಆರ್ಥಿಕ ನ್ಯಾಯಪರತೆಯ ಭದ್ರತೆಗಾಗಿ ಸಾಕಷ್ಟು ಅವಕಾಶಗಳನ್ನು ಒದಗಿಸಲಾಗಿದೆ. ಈ ನೆಲೆಯಲ್ಲಿ ನಾವು ಕೊಡಬಹುದಾದ ದೊಡ್ಡ ನಿದರ್ಶನವೆಂದರೆ ಅಸ್ಪೃಶ್ಯತೆಯ ನಿರ್ಮೂಲನ. ಇದರಿಂದಾಗಿ ಪ್ರತಿಯೊಬ್ಬ ನಾಗರಿಕನೂ ಯಾವುದೇ ಸಾರ್ವಜನಿಕ ಪ್ರದೇಶವನ್ನು ಪ್ರವೇಶಿಸುವ, ಯಾವುದೇ ಬಗೆಯ ಸಾರ್ವಜನಿಕ ಆರಾಧನ ಕ್ರಮವನ್ನು ಅನುಸರಿಸುವ ಮತ್ತು ಯಾವುದೇ ಸಾರ್ವಜನಿಕ ಸ್ಥಳವನ್ನು ಮನರಂಜನೆಗಾಗಿ ಬಳಸುವ ಒಂದು ಸಮಾನ ಹಕ್ಕನ್ನು ಹೊಂದಲು ಸಾಧ್ಯವಾಯಿತು.

**ಆರ್ಥಿಕ ಸಮಾನತೆ :** ಸಾಮಾಜಿಕ ನ್ಯಾಯಪರತೆಯೊಂದಿಗೆ ತುಂಬಾ ನಿಕಟವಾದ ಸಂಬಂಧವನ್ನು ಹೊಂದಿದ ನ್ಯಾಯಪರತೆಯ ಇನ್ನೊಂದು ಪ್ರಕಾರವೆಂದರೆ ಅದು ಆರ್ಥಿಕ ಸಮಾನತೆ. ಸಮಾಜ ಮತ್ತು ಅರ್ಥ ವ್ಯವಸ್ಥೆಗಳು ಪರಸ್ಪರ ನಿಕಟ ಸಂಬಂಧವನ್ನು ಹೊಂದಿವೆ. ಸಾಮಾಜಿಕ ಮತ್ತು ಆರ್ಥಿಕ ನ್ಯಾಯಪರತೆಗಳು ತುಂಬಾ ನಿಕಟವಾದ ಸಂಬಂಧವನ್ನು ಹೊಂದಿವೆ. ಆರ್ಥಿಕ ವ್ಯವಸ್ಥೆಯನ್ನು ಆಧರಿಸಿ ಆರ್ಥಿಕ ಸಮಾನತೆ ನಿಂತಿದೆ. ಇನ್ನೊಂದು ನೆಲೆಯಲ್ಲಿ ಹೇಳುವುದಾದರೆ ಅರ್ಥವ್ಯವಸ್ಥೆಯು ಸಾಮಾಜಿಕ ವ್ಯವಸ್ಥೆಯ ಸಂಯೋಜಿತ ಭಾಗ.

ಆರ್ಥಿಕ ಹಕ್ಕುಗಳು ಮತ್ತು ಅವಕಾಶಗಳು ಒಬ್ಬ ವ್ಯಕ್ತಿಗೆ ಯಾವಾಗಲೂ ಒಂದು ಸಾಮಾಜಿಕ ವ್ಯವಸ್ಥೆಯ ಭಾಗವಾಗಿ ಉಪಲಬ್ಧವಾಗುತ್ತವೆ. ಆರ್ಥಿಕ ನ್ಯಾಯಪರತೆಯು ತಮ್ಮ ಜೀವನೋಪಾಯಕ್ಕಾಗಿ ಎಲ್ಲಾ ಜನರು ಸಾಕಷ್ಟು ಅವಕಾಶಗಳನ್ನು ಹೊಂದುವಂತಾಗಬೇಕೆಂದು ಬಯಸುತ್ತದೆ. ಜನರು ತಮ್ಮ ಮೂಲಭೂತ ಅಗತ್ಯಗಳನ್ನು ಸಂತೃಪ್ತಗೊಳಿಸುವಷ್ಟು ಮತ್ತು ಅವರ ಮುಂದಿನ ಜೀವನವನ್ನು ಅಭಿವೃದ್ಧಿಪಡಿಸಲು ಸಹಾಯವಾಗುವಂತೆ ಅಂದರೆ ಅವರು ತಮ್ಮ ಕೆಲಸಕ್ಕೆ ನ್ಯಾಯೋಚಿತವಾದ ಕೂಲಿಯನ್ನು ಪಡೆಯಲು ಅವಕಾಶಗಳನ್ನು ಒದಗಿಸಬೇಕು. ಖಾಯಿಲೆ ಬಿದ್ದಾಗ, ವೃದ್ಧಾಪ್ಯದ ವೇಳೆ ಇತ್ಯಾದಿ ಸಂದರ್ಭಗಳಲ್ಲಿ ಅಂದರೆ ಜನರು ದುಡಿಯಲು ಅಶಕ್ತರಾದ ಸಂದರ್ಭದಲ್ಲಿ ಜನರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಿ ನಿಗಾ ವಹಿಸಲು ಇದು ಆದ್ಯತೆಯನ್ನು ನೀಡುತ್ತದೆ.

ಯಾವ ವ್ಯಕ್ತಿ ಅಥವಾ ಸಮೂಹ ಅಥವಾ ವರ್ಗವು ಇತರರನ್ನು ಶೋಷಣೆ ಮಾಡಲು ಅವಕಾಶವಾಗುವುದಿಲ್ಲ ಅಥವಾ ಅವರೇ ಯಾರಿಂದಲೂ ಶೋಷಿತರಾಗಲೂಬಾರದು. ಎಲ್ಲಾ ಜನರಿಗೂ, ಸಮಾನವಾಗಿ, ನ್ಯಾಯಸಮ್ಮತವಾಗಿ ಮತ್ತು ನ್ಯಾಯೋಚಿತವಾಗಿ ಸಂಪತ್ತು ಮತ್ತು ಸಂಪನ್ಮೂಲಗಳ ಹಂಚಿಕೆಯಾಗಬೇಕು. ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಕಣ್ಣು ಕುಕ್ಕುವಂತಿರಬಾರದು. ಸಮೃದ್ಧಿಯ ಫಲವು ಎಲ್ಲಾ ಜನರನ್ನು ತಲುಪುವಂತಿರಬೇಕು.

ಸಾಮಾಜಿಕ ಮತ್ತು ಆರ್ಥಿಕ ನ್ಯಾಯಪರತೆಯ ಪರಿಕಲ್ಪನೆಗಳನ್ನು ನಾವು ಸಂವಿಧಾನದ ಪೀಠಿಕಾ ಭಾಗದಲ್ಲಿ

ಕಾಣಬಹುದು ಮತ್ತು ಇವುಗಳು ಸ್ವಾಭಾವಿಕ ನ್ಯಾಯಪರತೆಯ ತತ್ವಗಳನ್ನು ಆಧರಿಸಿವೆ. ಓರ್ವ ವಸ್ತುನಿಷ್ಠ ನಿರ್ಧಾರ ತೆಗೆದುಕೊಳ್ಳುವ ವ್ಯಕ್ತಿಯಿಂದ ಇದು ಕ್ರಿಯಾತ್ಮಕ ನ್ಯಾಯೋಚಿತತೆಯತ್ತ ಸಾಗಲು ಕಾಳಜಿವಹಿಸುತ್ತದೆ. ಇದು ಈ ಕೆಳಗಿನ ತತ್ವವನ್ನು ಆಧರಿಸಿ ರೂಪಿತವಾಗಿದೆ. "ಯಾವ ವ್ಯಕ್ತಿಯೂ ಕೂಡ ತನ್ನ ಮೊಕದ್ದಮೆಯ ವಿಷಯದಲ್ಲಿ ತಾನೇ ಸ್ವಯಂ ನ್ಯಾಯಾಧೀಶನಾಗಿ ಸ್ವಯಂ ತೀರ್ಮಾನ ತೆಗೆದುಕೊಳ್ಳುವಂತಿಲ್ಲ. ಅಥವಾ ಕಾನೂನಿನ ನಿಯಮಗಳಿಗೆ ವಿರುದ್ಧವಾಗಿ ಪೂರ್ವಗ್ರಹಿಕೆಯಿಂದ ಪಕ್ಷಪಾತ ಮಾಡುವಂತಿಲ್ಲ. ಮತ್ತು ಯಾರನ್ನೂ ಕೇಳದೆ ಅವರನ್ನು ನಿಂದಿಸುವಂತಿಲ್ಲ. ಸ್ವಾಭಾವಿಕ ನ್ಯಾಯಪರತೆಯು ನ್ಯಾಯೋಚಿತವಾದ ರೀತಿಯಲ್ಲಿ ನ್ಯಾಯಸಮ್ಮತವಾದುದನ್ನು ಪಡೆಯಲು ಇರುವ ಒಂದು ತಾತ್ವಿಕ ಗ್ರಹಿಕೆ." ಸ್ವಾಭಾವಿಕ ನ್ಯಾಯಪರತೆಯ ಉಲ್ಲಂಘನೆಯು ಸಂವಿಧಾನದ 14ನೇ ವಿಧಿಯಲ್ಲಿ ಉಲ್ಲೇಖಿಸಿದ ಸಮಾನತೆಯ ಉಲ್ಲಂಘನೆಗೆ ಸಮನಾದುದು. ಈ ತತ್ವಗಳು ಕೆಳಗಿನ ಮೂರು ನಿಯಮಗಳ ಉಲ್ಲಂಘನೆಯಲ್ಲಿ ಉಲ್ಲೇಖಿತವಾಗಿವೆ.

**ಸುಧಾರಣೆಯ ನಿಯಮ :** ಈ ನಿಯಮದ ಆವಶ್ಯಕತೆ ಏನಿದೆಯೆಂದರೆ, ಒಬ್ಬ ವ್ಯಕ್ತಿಗೆ ತನ್ನ ಮೊಕದ್ದಮೆಯನ್ನು ಮಂಡಿಸಲು ಸಾಕಷ್ಟು ಅವಕಾಶಗಳನ್ನು ನೀಡುವುದಕ್ಕೆ ಅನುಮತಿ ದೊರಕಬೇಕು. ಕೆಲವು ಆಸಕ್ತಿಗಳು ಮತ್ತು ಹಕ್ಕುಗಳ ದೆಸೆಯಿಂದಾಗಿ ಓರ್ವ ತೀರ್ಮಾನ ತೆಗೆದುಕೊಳ್ಳುವ ವ್ಯಕ್ತಿಯಿಂದ ಪ್ರತಿಕೂಲ ಪರಿಣಾಮವುಂಟಾಗುವ ಸಾಧ್ಯತೆಯಿದ್ದಾಗ ಇದು ಮುಖ್ಯವಾಗುತ್ತದೆ. ವ್ಯಕ್ತಿಯ ಹಕ್ಕುಗಳು ಗೌರವಿಸಲ್ಪಡುವ ಭರವಸೆ ಇರಬೇಕು. ನ್ಯಾಯ ತೀರ್ಮಾನ ಹೇಳುವ ಅಧಿಕಾರವರ್ಗವು ಮೊಕದ್ದಮೆಗೆ ಸಂಬಂಧಿಸಿದ ಎರಡೂ ಪಂಗಡದವರಿಗೂ ಸಾಕ್ಷ್ಯಗಳನ್ನು ಸಿದ್ಧಗೊಳಿಸುವ ಮತ್ತು ಇತರ ಪಂಗಡದವರು ತಮ್ಮ ವಾದವನ್ನು ಮಂಡಿಸುವ ಒಂದು ಅವಕಾಶವನ್ನು ನೀಡಬೇಕು ಮತ್ತು ಇತರ ಪಂಗಡದವರು ತಮ್ಮ ವಾದವನ್ನು ಮಂಡಿಸುವ ಸಂದರ್ಭದಲ್ಲಿ ಅದಕ್ಕೆ ಪ್ರತಿಕ್ರಿಯಿಸುವ ಅವಕಾಶವನ್ನು ನೀಡಬೇಕು.

**ಪಕ್ಷಪಾತ ನಿಯಮ :** ಯಾವ ವ್ಯಕ್ತಿಯೂ ಆತನ ಅಥವಾ ಆಕೆಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ ನ್ಯಾಯಾಧೀಶನಾಗಲು ಸಾಧ್ಯವಿಲ್ಲ. ವಿಚಾರಣೆಯಾಗುವ ಸಂದರ್ಭದಲ್ಲಿ ಮತ್ತು ನ್ಯಾಯ ತೀರ್ಮಾನ ನೀಡುವ ಸಂದರ್ಭದಲ್ಲಿ ತತ್ಸಂಬಂಧಿತ ನ್ಯಾಯ ತೀರ್ಮಾನಿಸುವ ಅಧಿಕಾರವು ಪಕ್ಷಪಾತರಹಿತವಾಗಿ ಇರಬೇಕು.

**ಸಾಕ್ಷ್ಯ ನಿಯಮ :** ಆಡಳಿತಾತ್ಮಕವಾದ ನ್ಯಾಯ ನಿರ್ಧಾರವು ತಾರ್ಕಿಕವಾದ ಪುರಾವೆಗಳು ಮತ್ತು ಸಾಕ್ಷ್ಯ–ಸಾಮಗ್ರಿಗಳನ್ನು ಆಧರಿಸಿರುತ್ತದೆ. ನಿರ್ಧಾರವು ಎಂದಿಗೂ ಅನುಮಾನದ ರೂಪದಲ್ಲಿ ಅಥವಾ ಊಹಾಪೋಹದಿಂದ ಕೂಡಿರಬಾರದು. ಮಂಡಿಸಿದ ಸಾಕ್ಷ್ಯವು ಇನ್ನೊಂದು ಪಂಗಡದ ಕಣ್ಣಿಗೂ ಕಾಣಿಸುವಂತೆ ತೆರೆದಿಡಬೇಕು. ಅದನ್ನು ಮುಚ್ಚಿಡಬಾರದು. ಒಂದು ವೇಳೆ ಬೇರೆ ಪಂಗಡದ ವ್ಯಕ್ತಿಯು ಪರಿಶೀಲನೆ ಬಯಸಿದಲ್ಲಿ ಇದು ಅನುಕೂಲಕರ.

ರಾಜ್ಯ/ರಾಷ್ಟ್ರದ ಕಾರ್ಯನಿರ್ವಹಣೆಯಲ್ಲಿ ಸ್ವಾಭಾವಿಕ ನ್ಯಾಯದ ತತ್ವಗಳು ಅತ್ಯಂತ ಮಹತ್ವಪೂರ್ಣವಾದವುಗಳು. ಇವುಗಳು ಭಾರತೀಯ ಸಂವಿಧಾನದ ಮೂಲಸಂರಚನೆಯ ಭಾಗದಲ್ಲಿ ಪರಿಗಣಿಸಲ್ಪಟ್ಟಿವೆ. ಈ ತತ್ವಗಳು ಸಂವಿಧಾನದ 14 ಮತ್ತು 21ನೇ ವಿಧಿಯಲ್ಲಿ ಸೂಚ್ಯವಾಗಿ ಕಂಡುಬರುತ್ತವೆ.

**ರಾಜಕೀಯ ನ್ಯಾಯಪರತೆ :** ರಾಜಕೀಯ ನ್ಯಾಯಪರತೆಯ ಅರ್ಥವೇನೆಂದರೆ ರಾಷ್ಟ್ರದ ಆಡಳಿತದಲ್ಲಿ ದೇಶದ ಎಲ್ಲಾ ನಾಗರಿಕರು ಭಾಗಿಯಾಗುವಂತೆ ಅವರೆಲ್ಲರಿಗೂ ಸಮಾನವಾದ ಹಕ್ಕುಗಳು ಮತ್ತು ಅವಕಾಶಗಳನ್ನು ಒದಗಿಸಬಹುದಾಗಿದೆ. ಧರ್ಮ, ಬಣ್ಣ, ಜಾತಿ, ಲಿಂಗ, ಜನನ, ಅಂತಸ್ತು, ನಂಬಿಕೆ ಇವುಗಳ ಆಧಾರದಲ್ಲಿ ಯಾವುದೇ ತಾರತಮ್ಯಕ್ಕೆ ಅವಕಾಶವಿಲ್ಲದೆ ನಾಗರಿಕರಿಗೆ ತಮ್ಮ ಮತವನ್ನು ಚಲಾಯಿಸುವ ಹಕ್ಕನ್ನು ನೀಡಲಾಗಿದೆ. ರಾಜಕೀಯ ನ್ಯಾಯಪರತೆ ಎಂದರೆ ರಾಜಕೀಯ ಪ್ರಕ್ರಿಯೆಯಲ್ಲಿ ಜನರು ಸಮಾನವಾಗಿ, ಮುಕ್ತವಾಗಿ ಮತ್ತು ನ್ಯಾಯೋಚಿತವಾಗಿ ಪಾಲ್ಗೊಳ್ಳಲು ಅವಕಾಶಗಳನ್ನು ಒದಗಿಸುವುದು. ಇದು ದೇಶದ ಎಲ್ಲಾ ಜನರಿಗೂ ಯಾವುದೇ ತಾರತಮ್ಯವಿಲ್ಲದೆ ಸಮಾನ ರಾಜಕೀಯ ಹಕ್ಕುಗಳನ್ನು ನೀಡುವುದಕ್ಕೆ ಬದ್ಧವಾಗಿದೆ. ಭಾರತದ ಸಂವಿಧಾನವು

ಉದಾರವಾದಿ ಪ್ರಜಾಪ್ರಭುತ್ವವನ್ನು ಒದಗಿಸಿದ್ದು ಅದರಲ್ಲಿ ದೇಶದ ಎಲ್ಲಾ ಜನರಿಗೂ ಆಡಳಿತದಲ್ಲಿ ಭಾಗವಹಿಸುವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಒದಗಿಸಲಾಗಿದೆ.

**ಕಾನೂನು ನ್ಯಾಯಪರತೆ :** ಕಾನೂನು ನ್ಯಾಯಪರತೆಯ ಅರ್ಥವೇನೆಂದರೆ ಅದು ಸಾರ್ವತ್ರಿಕ ಹಿತಕ್ಕಾಗಿ ಕಾನೂನು ನಿಯಮಗಳನ್ನು ಪ್ರತಿನಿಧಿಸುತ್ತದೆಯೇ ಹೊರತು ಯಾವುದೇ ವ್ಯಕ್ತಿಗಾಗಿ ನಿಯಮಗಳನ್ನು ರೂಪಿಸುವುದಿಲ್ಲ. ಇದು ಎರಡು ಅಂಶಗಳನ್ನು ಒಳಗೊಂಡಿದೆ : ಎಲ್ಲಾ ಮಾನವರೂ ಕಾನೂನಿನ ಅಡಿಯಲ್ಲಿ ಸಮಾನರು ಮತ್ತು ಆ ಕಾನೂನು ನಿಯಮಗಳು ಎಲ್ಲರಿಗೂ ಅನ್ವಯವಾಗುತ್ತವೆ. ಇದು ಎಲ್ಲರಿಗೂ ಕಾನೂನು ಭದ್ರತೆಯನ್ನು ಒದಗಿಸುತ್ತದೆ. ಕಾನೂನುಗಳು ಬಡವರು ಮತ್ತು ಶ್ರೀಮಂತರ ನಡುವೆ ಯಾವುದೇ ತಾರತಮ್ಯವನ್ನು ಮಾಡುವುದಿಲ್ಲ. ಕಾನೂನು ನ್ಯಾಯಾಲಯಗಳಿಂದ ವಸ್ತುನಿಷ್ಠವಾಗಿ ನ್ಯಾಯವನ್ನು ವಿತರಿಸುವ ಕೆಲಸಕ್ಕೆ ತೊಡಗಿಸುವುದು ಕಾನೂನು ನ್ಯಾಯಪರತೆಯ ಒಂದು ಆವಶ್ಯಕವಾದ ಘಟಕಾಂಶವಾಗಿದೆ.

**3. ಸ್ವಾತಂತ್ರ್ಯ:** ನಾವು ಸ್ವಾತಂತ್ರ್ಯದ ಕುರಿತು ಓದಿ ತಿಳಿದಿರುತ್ತೇವೆ. ಸ್ವಾತಂತ್ರ್ಯದ ಬಗ್ಗೆ ಕನಸು ಕಂಡಿದ್ದೇವೆ. ಸ್ವಾತಂತ್ರ್ಯದ ಕಲ್ಪನೆ ಮೂಡಿದಾಗ, ಸ್ವಾತಂತ್ರ್ಯದ ಕುರಿತು ಬೋಧಿಸುವಾಗ, ಸ್ವಾತಂತ್ರ್ಯದ ಮೂಲಕ ಭರವಸೆ ಮೂಡಿಸುವಾಗ, ಸ್ವಾತಂತ್ರ್ಯದ ಕುರಿತು ಪ್ರತಿಪಾದಿಸುವಾಗ ಹಿಗ್ಗಿದ್ದೇವೆ. ಇದು ಪ್ರತಿಯೊಬ್ಬರ ಜೀವನದ ಒಂದು ಶ್ರೇಷ್ಠ ಆಯ್ಕೆಯ ವಿಚಾರ. ಹಾಗಾದರೆ ನಿಜವಾಗಿಯೂ ಸ್ವಾತಂತ್ರ್ಯದ ಅರ್ಥವೇನು?

ಕಾನೂನು ಅರ್ಥಕೋಶದಲ್ಲಿ ಸ್ವಾತಂತ್ರ್ಯದ ಅರ್ಥವನ್ನು ಹೀಗೆ ವ್ಯಾಖ್ಯೆ ಮಾಡಲಾಗಿದೆ: "ಮುಕ್ತವಾದ, ಉದಾರವಾದ, ಸ್ವನಿರ್ಧಾರದ, ಸಂಯಮರಾಹಿತ್ಯವಾದ, ಗುಲಾಮಗಿರಿಗೆ ವಿರುದ್ಧವಾದ, ಘಟಕಾಂಶವೇ ಸ್ವಾತಂತ್ರ್ಯ. ಕ್ರಿಯೆಯಲ್ಲಿ ತೊಡಗಿಕೊಳ್ಳುವ, ನೈತಿಕ ವ್ಯಕ್ತಿತ್ವವುಳ್ಳ ಗುಣಲಕ್ಷಣದ, ಬಯಕೆ/ಇಷ್ಟವನ್ನು ನಿರ್ದೇಶಿಸುವ, ಅಧಿಕಾರವೇ ಸ್ವಾತಂತ್ರ್ಯ. ಬದುಕಿಗೆ ಅಗತ್ಯವಾದ ಕಾನೂನಿನಲ್ಲಿ ವಿಧಿಸಿದಂತೆ ಮತ್ತು ಸಾಮಾಜಿಕ ಜೀವನದ ಕರ್ತವ್ಯಗಳಲ್ಲಿ ತಿಳಿಸಿದಂತೆ ಇತರರನ್ನು ಪರಿಶೀಲಿಸಿ ತಡೆಹಾಕದ, ಇತರರಿಗೆ ಅಡಚಣೆಯುಂಟುಮಾಡದ, ಇತರರನ್ನು ನಿಷೇಧಿಸದ, ಪ್ರವೃತ್ತಿಯೇ ಸ್ವಾತಂತ್ರ್ಯ. ಸರಕಾರ ಹಾಗೂ ರಾಷ್ಟ್ರದ ಕಾನೂನಿನ ಪ್ರಭುತ್ವದಲ್ಲಿರುವಂತೆ ವ್ಯಕ್ತಿಗತವಾಗಿ ಪ್ರತಿಯೊಬ್ಬ ನಾಗರಿಕನಿಗೂ ಕಾನೂನು ಹಾಗೂ ಕಾನೂನು ಸಂಸ್ಥೆಗಳ ಮೂಲಕ ನಾಗರಿಕ ಸ್ವಾತಂತ್ರ್ಯವನ್ನು ನೀಡುವುದು ಇಲ್ಲಿ ಮುಖ್ಯವಾಗುತ್ತದೆ."

ನಮ್ಮ ಸಂವಿಧಾನದ ಪ್ರಕಾರ ಸ್ವಾತಂತ್ರ್ಯವೆಂದರೆ ಕ್ರಿಯೆ, ಮಾತು (ಅಭಿವ್ಯಕ್ತಿ), ಅಥವಾ ಚಿಂತನೆಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿ ಬಯಸುವ ಅಧಿಕಾರ ಮತ್ತು ಹಕ್ಕು. ಸ್ವಾತಂತ್ರ್ಯದ ಹಿಂದಿರುವ ವಿಚಾರವೇನೆಂದರೆ ಗೌರವಯುಕ್ತವಾಗಿ ಮತ್ತು ಉಪಯುಕ್ತವಾದ ರೀತಿಯಲ್ಲಿ ನಮ್ಮ ಸಮಾಜವನ್ನು ಮುನ್ನಡೆಸುವುದು. ಅಥವಾ ನಮ್ಮ ಸಮಾಜಕ್ಕೆ ಎಲ್ಲರೂ ಗೌರವವನ್ನು ನೀಡುತ್ತಾ ಅವರು ಸಮಾಜಕ್ಕೆ ಉಪಯುಕ್ತರಾಗುವಂತೆ ಮಾಡುವುದು. ಸಮಾಜವು ಪ್ರತಿಯೊಬ್ಬರಿಗೂ ಅತಿಮುಖ್ಯವಾಗಿದ್ದು ಅದು ನಾಗರಿಕ ಜವಾಬ್ದಾರಿಯನ್ನು ಅರಿಯಲು ಆದ್ಯತೆ ನೀಡುತ್ತದೆ. ವ್ಯಕ್ತಿಯೊಬ್ಬನ ಸ್ವಾತಂತ್ರ್ಯವು ಒಂದು ಮೂಲಭೂತ ಹಕ್ಕಾಗಿ ಗುರುತಿಸಲ್ಪಟ್ಟಿದೆ. ಸ್ವಾತಂತ್ರ್ಯದ ಹಕ್ಕನ್ನು ಕುರಿತ ವಿವರಗಳನ್ನು ವಿಸ್ತೃತವಾಗಿ 'ಮೂಲಭೂತ ಹಕ್ಕುಗಳು' ಅಧ್ಯಾಯದಲ್ಲಿ ಚರ್ಚಿಸಲಾಗುವುದು.

**4. ಇತರರ ಅಭ್ಯುದಯದೆಡೆಗೆ ಕಾಳಜಿ :** 'ಕಾಳಜಿ' ಎಂಬ ಪದವು ಇತರರ ಕಡೆಗೆ ನಿಗಾ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದೆ. ಇದು ಬಂಧುಭಾವನೆಯ ಅಗತ್ಯವನ್ನು ವಿಶೇಷವಾಗಿ ಪರಿಗಣಿಸುತ್ತದೆ. ಇದು ಸಾಮಾನ್ಯವಾಗಿ ಮನೆಯಲ್ಲಿ ಪೋಷಕರೊಂದಿಗೆ, ಸಹೋದರರೊಂದಿಗೆ, ಸಹೋದರಿಯರೊಂದಿಗೆ ಪ್ರಾರಂಭವಾಗುತ್ತದೆ. ಇದು ನಿಕಟವಾಗಿ ರಕ್ತ ಸಂಬಂಧಿಗಳೊಂದಿಗೆ ಅಥವಾ ತೀರ ಸಮೀಪದ ಬಂಧುಗಳೊಂದಿಗೆ ಸಾಮೀಪ್ಯ ಭಾವದಿಂದ ಅಭಿವ್ಯಕ್ತವಾಗುತ್ತದೆ. ನಾವು ಬೆಳೆಯುತ್ತ ಹೋದಂತೆ ನಮ್ಮ ಆತ್ಮೀಯ ಸ್ನೇಹಿತರ ವಲಯವೂ ಬೆಳೆಯುತ್ತಾ ಹೋಗಿ ಅದು ಇತರರನ್ನೂ ಒಳಗೊಳ್ಳುತ್ತದೆ. ಆಗ ನಾವು ಅವರೆಡೆಗೂ ಕಾಳಜಿಯ ಭಾವವನ್ನು ಹೊಂದಿ ಅವರ ಅಭ್ಯುದಯಕ್ಕೆ ಒತ್ತು ನೀಡುತ್ತೇವೆ. ಇದು ನಮ್ಮನ್ನು ಅವರೊಂದಿಗೆ ನಿಕಟವಾಗಿ ಬೆಸೆಯುವಂತೆ ಮಾಡುತ್ತದೆ.

ಇದೊಂದು ಸಕಾರಾತ್ಮಕ ಹಿಮ್ಮಾಹಿತಿಯ ವರ್ತುಲವಾಗಿದೆ. ಇಲ್ಲಿ ನಡೆಯುವ ಪುನರ್ಬಲನ ಕ್ರಿಯೆಯು ಸದೃಢವಾದ ಸಮುದಾಯಗಳನ್ನು ರೂಪಿಸಲು ಸಹಾಯಮಾಡುತ್ತದೆ. ಇಂತಹ ಕ್ರಿಯೆಯು ಸಾಮಾನ್ಯವಾಗಿ ಸಣ್ಣ ಗುಂಪಿನೊಂದಿಗೆ ಪ್ರಾರಂಭವಾಗಿ ಕ್ರಮೇಣ ದೊಡ್ಡ ಗುಂಪಿಗೂ ವಿಸ್ತರಿತವಾಗುತ್ತಾ ಹೋಗುತ್ತದೆ. ಯಾರಾದರೂ ಕೆಲವರು ಯಾವುದೇ ಸಮಸ್ಯೆ ನಿಭಾಯಿಸಲು ತೊಂದರೆ ಪಡುತ್ತಿದ್ದರೆ ಆಗ ನಮ್ಮ ಕೆಲಸವು ಅವರಿಗೆ ಸಲಹೆ ನೀಡುವುದಲ್ಲ ಅಥವಾ ಅವರ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದೂ ಅಲ್ಲ. ಅಂಥವರ ಜೊತೆಗೆ ಆಗಾಗ ಈ ಬಗ್ಗೆ ಹಿತಮಿತವಾಗಿ ಮಾತಾಡಿದರೂ ಸಾಕಾಗುತ್ತದೆ. ಪರಿಣತರು ಅಂಥವರ ಕುರಿತು ಸಹಾನುಭೂತಿ ವ್ಯಕ್ತಪಡಿಸುವುದಕ್ಕಿಂತ ಅನುಭೂತಿಯನ್ನು ಹೊಂದಲು ಮಾರ್ಗಗಳನ್ನು ಶೋಧಿಸುತ್ತಾರೆ. ಅನುಭೂತಿ ಎಂಬುದು ಒಬ್ಬ ವ್ಯಕ್ತಿ ಒಂದು ಸಮಸ್ಯೆಯಲ್ಲಿ ಹೇಗೆ ಸಿಲುಕಿ ಒದ್ದಾಡುತ್ತಿದ್ದಾನೆ ಎಂಬುದನ್ನು ಸ್ವಯಂ ಅನುಭವಕ್ಕೆ ತಂದುಕೊಳ್ಳುವುದನ್ನು ಒಳಗೊಳ್ಳುತ್ತದೆಯೇ ಹೊರತು ಅವರ ಸಮಸ್ಯೆಗೆ ತಕ್ಷಣ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸುವುದಿಲ್ಲ ಅಥವಾ ಈ ಸಮಸ್ಯೆಯ ವಿಚಾರವು ಸಮಂಜಸವಾದುದೇ ಅಥವಾ ಇಲ್ಲವೇ ಎಂಬ ದಿಢೀರ್ ತೀರ್ಮಾನಕ್ಕೆ ಬರುವುದಿಲ್ಲ.

ಇತರರ ಅಭ್ಯುದಯದೆಡೆಗೆ ಕಾಳಜಿ ವಹಿಸುವುದರಿಂದ ಅನೇಕ ಅನುಕೂಲತೆಗಳಿವೆ. ಈ ಕೆಳಗಿನವುಗಳು ಅಂತಹ ಕೆಲವು ಅನುಕೂಲತೆಗಳಲ್ಲಿ ಒಂದಾಗಿವೆ.

- ನಾವು ಇತರರ ಅಭ್ಯುದಯದೆಡೆಗೆ ಹೆಚ್ಚು ಹೆಚ್ಚು ಕಾಳಜಿ ವಹಿಸುವುದರಿಂದ ಪರಸ್ಪರ ಹೆಚ್ಚು ನಿಕಟವಾದ ಭಾವವನ್ನು ಪಡೆಯುತ್ತೇವೆ.
- ಕುಟುಂಬ ಮತ್ತು ಸ್ನೇಹಿತರ ಬಗ್ಗೆ ಇದು ಸಕಾರಾತ್ಮಕ ಮನೋಭಾವವನ್ನು ಬೆಳೆಸುತ್ತದೆ.
- ಇತರರೆಡೆಗಿನ ಕಾಳಜಿಯ ಪ್ರಜ್ಞೆಯು ನಮ್ಮ ಜೀವನವನ್ನು ಅರ್ಥಪೂರ್ಣಗೊಳಿಸುತ್ತದೆ. ಇದು ಸಕಲ ಮಾನವ ಸಂತೋಷಗಳ ಬೇರು.
- ಫ್ರೆಡ್ ಹಾಲೋಸ್ ಅವರ ಪ್ರಕಾರ– "ಇತರರೆಡೆಗೆ ಕಾಳಜಿ ಮತ್ತು ನಿಗಾ ವಹಿಸುವುದು ನನ್ನ ಮನಸ್ಸಿನ ಪ್ರಕಾರ ಅತ್ಯಂತ ಶ್ರೇಷ್ಠ ಮಾನವೀಯ ಗುಣ."
- ಕೋಪ ಮತ್ತು ದ್ವೇಷಗಳು ಭಯವನ್ನು ಹುಟ್ಟಿಸಲು ಕಾರಣವಾಗುತ್ತವೆ. ಮತ್ತು ಇತರರೆಡೆಗೆ ಕಾಳಜಿ ವಹಿಸುವುದರಿಂದ ಆತ್ಮವಿಶ್ವಾಸ ಬೆಳೆದು ಅದು ಸ್ನೇಹ, ವಿಶ್ವಾಸ, ನಂಬಿಕೆಯನ್ನು ಹುಟ್ಟುಹಾಕುತ್ತದೆ.
- ಇತರರ ಅಭ್ಯುದಯದೆಡೆಗೆ ಕಾಳಜಿಯನ್ನು ಹೊಂದುವುದು ಮೂಲಭೂತ ಜೀವನ ಕೌಶಲ. ಆ ಒಂದರ ಬಗ್ಗೆ ನಾವೆಲ್ಲರೂ ಉತ್ತಮವಾಗಿ ಸ್ಪಂದಿಸಲು ಪ್ರಯತ್ನಿಸಬೇಕು. ಈ ದಿಸೆಯಲ್ಲಿ ನಾವು ಪರಿಪೂರ್ಣರಾಗುವುದು ಬೇಕಿಲ್ಲ. ಆದರೆ ಕಠಿಣ ಪರಿಶ್ರಮವಹಿಸಬೇಕು. ಇದು ನಿಕಟವಾಗುತ್ತಾ ಹೋದಂತೆ ನಾವು ಅದನ್ನು ಪಡೆದೇ ಪಡೆಯುತ್ತೇವೆ ಎಂಬ ನಂಬಿಕೆ ಇರಬೇಕು.
- ನಾವು ಇತರರೆಡೆಗೆ ಕಾಳಜಿ ವ್ಯಕ್ತಪಡಿಸುವ ಗುಣವನ್ನು ಬೆಳೆಸಿಕೊಂಡರೆ ಅದು ಒಂದು ಮಾನವೀಯ ಗುಣಧರ್ಮ ಎಂಬುದನ್ನು ಗಮನಿಸಬೇಕು. ಆಗ ನಾವು ಹೆಚ್ಚು ಸಹಾನುಭೂತಿಯಿಂದ ಕೂಡಿದ ಜಗತ್ತನ್ನು ನಿರ್ಮಿಸಬಹುದು.
- ಇತರರೆಡೆಗೆ ಕಾಳಜಿ ವ್ಯಕ್ತಪಡಿಸುವ ಗುಣವನ್ನು ಬೆಳೆಸಿಕೊಂಡರೆ, ಅವರು ನಮ್ಮ ಬದುಕಿನ ಭಾಗ ಎಂದು ಎಣಿಸಿದರೆ ಅದು ನಮ್ಮಲ್ಲಿ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ನಮ್ಮಲ್ಲಿ ಅನುಮಾನ ಮತ್ತು ಅಪನಂಬಿಕೆಯ ಪ್ರಜ್ಞೆಯನ್ನು ಕಡಿಮೆಗೊಳಿಸುತ್ತದೆ. ಹಾಗೂ ನಮ್ಮಲ್ಲಿ ಶಾಂತವಾದ ಮನಸ್ಸನ್ನು ಬೆಳೆಸಿಕೊಳ್ಳಲು ನಾವು ಶಕ್ತರಾಗುತ್ತೇವೆ.

- ನಮ್ಮ ಭಾವನಾತ್ಮಕ ಪ್ರಪಂಚವು ನಮ್ಮ ಆಯ್ಕೆಗೆ ಸಂಬಂಧಿಸಿದ್ದು ಮತ್ತು ಅದು ಎಲ್ಲಕ್ಕಿಂತ ಹೆಚ್ಚಾಗಿ

ನಾವು ಯಾವ ಭಾವನೆಯನ್ನು ಆಯ್ಕೆ ಮಾಡಲು ಆಸಕ್ತರಾಗುತ್ತೇವೆ ಎಂಬುದನ್ನು ಹೊಂದಿಕೊಂಡಿದೆ. ನಾವು ನಮ್ಮ ಕೋಪದ ಮೇಲೆ ಹೆಚ್ಚು ಕೇಂದ್ರೀಕೃತರಾದರೆ ನಾವು ಹೆಚ್ಚು ಕೋಪಿಷ್ಠರಾಗುತ್ತೇವೆ. ಅದೇ ನಾವು ಇತರರ ಅಭ್ಯುದಯದ ಮೇಲೆ ಕಾಳಜಿಯನ್ನು ವ್ಯಕ್ತಪಡಿಸುವ ಮನೋಭಾವದವರಾದರೆ ನಾವು ಅದಕ್ಕಿಂತಲೂ ಹೆಚ್ಚು ಪಡೆಯುವುದಲ್ಲದೆ ನಮ್ಮ ಕೋಪವೂ ಶಮನಗೊಳ್ಳುತ್ತದೆ.

ಇತರರ ಅಭ್ಯುದಯದೆಡೆಗೆ ಕಾಳಜಿ ವ್ಯಕ್ತಪಡಿಸುವುದು ಒಂದು ವರ್ತನಾತ್ಮಕ ಅಭಿವ್ಯಕ್ತಿ. ಕೆಲವು ಸೂಚಿತ ವರ್ತನೆಗಳು ಈ ಕೆಳಗಿನಂತಿವೆ :

- ಇತರರ ಅಗತ್ಯಗಳು ಮತ್ತು ಭಾವನೆಗಳನ್ನು ಪರಿಗಣಿಸುವುದು.
- ಇತರರ ಹಕ್ಕುಗಳು, ಅಗತ್ಯಗಳು, ಭಾವನೆಗಳು ಮತ್ತು ದೃಷ್ಟಿಕೋನಗಳನ್ನು ಗೌರವಿಸುವುದು.
- ಇತರರ ಮೇಲೆ ಪರಿಣಾಮ ಬೀರಬಹುದಾದ ನಿರ್ಧಾರಗಳಲ್ಲಿ ಅವರು ಒಳಗೊಳ್ಳುವಂತೆ ಮಾಡುವುದು.
- ಇತರರಿಗೆ ಅವರ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಬೆಂಬಲಕ್ಕೆ ನಿಲ್ಲುವುದು.
- ಇತರರು ತೊಡಗಿಕೊಳ್ಳುವ ಅವರ ದೈನಂದಿನ ವ್ಯವಹಾರಗಳನ್ನು ಗೌರವಿಸುವುದು.
- ಇತರರ ಸೇವೆಯೊಂದಿಗೆ ಉಪಯುಕ್ತವಾದ ರೀತಿಯಲ್ಲಿ ಅವರೊಂದಿಗೆ ಸಂವಾದವನ್ನು ನಡೆಸುತ್ತಾ ಅವರ ಕಲ್ಯಾಣಕ್ಕಾಗಿ ಸಕಾರಾತ್ಮಕ ಕೊಡುಗೆಯನ್ನು ನೀಡುವುದು.
- ಬಹುಮುಖ್ಯವಾಗಿ ಇತರರ ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಅವರೆಡೆಗೆ ನಮ್ಮ ಪರಿಗಣನೆಯನ್ನು ಪ್ರಕಟಿಸುವುದು.
- ಸಾಮಾನ್ಯವಾಗಿ ಇತರರ ಅಗತ್ಯಗಳು ಮತ್ತು ಭಾವನೆಗಳಿಗೆ ಸ್ಪಂದಿಸುವುದು. ಯಾವುದೇ ಸಂಬಂಧಭಾವವಿಲ್ಲದೆ ಅವರು ಹೇಗೆ ತಮ್ಮನ್ನು ತಾವು ಅಭಿವ್ಯಕ್ತಿಸುತ್ತಾರೆ ಎಂಬುದನ್ನು ಪರಿಗಣಿಸುವುದು.
- ವ್ಯಕ್ತಿಗಳು ಅಭಿವ್ಯಕ್ತಿಸುವ ಸಾಂಸ್ಕೃತಿಕ, ಜನಾಂಗೀಯ, ಭೌತಿಕ, ಭಾಷಿಕ, ಅಂಶಗಳನ್ನು ಮತ್ತು ಅವರ ಸಾಮರ್ಥ್ಯಗಳು ಹಾಗೂ ಅವರಿಗೆ ಸಂಬಂಧಿಸಿದ ಇನ್ನಿತರ ಯಾವುದೇ ವಿಭಿನ್ನತೆಯನ್ನು ಗೌರವಿಸುವುದು.

**ನಾವು ಇತರರೆಡೆಗೆ ಕಾಳಜಿ ವಹಿಸಿ, ಪ್ರತಿಸ್ಪಂದಿಸುವುದಕ್ಕೆ ಸಂಬಂಧಿಸಿದ ಕೆಲವು ಮಾರ್ಗಗಳು ಈ ಕೆಳಗಿನಂತಿವೆ:**

- **ಅವರೊಂದಿಗೆ ಮಾತಾಡಿ :** ಇತರರೆಡೆಗೆ ನಿಮ್ಮ ಆಲಿಸುವ ಕಿವಿಯನ್ನು ತೆರೆದಿಡುವುದು ಅವರು ಸಂಕಷ್ಟದ ಸನ್ನಿವೇಶಗಳನ್ನು ಎದುರಿಸುತ್ತಾ ಇರುವಾಗ ನೀವು ನೀಡಬಹುದಾದ ಬಹುದೊಡ್ಡ ಸಹಾಯ. ನೀವು ಅವರಿಗೆ ಏನನ್ನೂ ಹೇಳದೇ ಇರುವುದು ಮತ್ತು ಅವರಿಗೆ ಯಾವುದೇ ಉಪದೇಶವನ್ನು ಮಾಡದೇ ಇರುವುದು ಸಹ ಅತಿಮುಖ್ಯ. ಅವರ ಸಮಸ್ಯೆಗಳಿಗೆ ಉತ್ತರವನ್ನು ಹುಡುಕುವುದರ ಬದಲು ಅವರಿಗೆ ಯುಕ್ತವಾದ ಕೆಲವು ಪ್ರಶ್ನೆಗಳನ್ನು ಕೇಳುವುದು ಒಳ್ಳೆಯದು. ಇದರಿಂದ ಆ ವ್ಯಕ್ತಿಗಳು ತಮ್ಮ ಸಮಸ್ಯೆಗಳಿಗೆ ತಮ್ಮದೇ ಆದ ದಾರಿಯನ್ನು ಕಂಡುಕೊಳ್ಳಲು ಶಕ್ತರಾಗುತ್ತಾರೆ. ಮತ್ತು ಸಮಸ್ಯೆ(ಸಂಕಷ್ಟ)ಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುವಾಗ ಅವರೇ ಸ್ವಾಮ್ಯವನ್ನು ಹೊಂದುತ್ತಾರೆ. ಸಕ್ರಿಯ ಶ್ರವಣವು ಇತರರಿಗೆ ಸಹಾಯ ಮಾಡುವ ಒಂದು ದಾರಿಯಾಗಿದ್ದು ಅವರ ಭಾವನೆಗಳನ್ನು ಕುರಿತು ಅವರು ಮಾತಾಡುವಂತೆ ಪ್ರೇರೇಪಿಸುತ್ತದೆ. ಹೀಗೆ ಮಾತಾಡುವಾಗ ಇತರ ವ್ಯಕ್ತಿಗಳ ಮೇಲೆ ಪ್ರಭಾವ ಬೀರುವುದು ನಮ್ಮ ಗುರಿಯಾಗಬಾರದು. ಬದಲಿಗೆ ಅವರು ತಮ್ಮನ್ನು ತಾವು ಅಭಿವ್ಯಕ್ತಿಸಲು ಸಹಾಯವಾಗುವಂತಿರಬೇಕು.
- **ಸಕಾಲಿಕವಾಗಿ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಿರಿ:** ಈ ಹಿಂದೆಯೇ ಕೆಲವರು ಸಮಸ್ಯೆಯನ್ನು ನಿಭಾಯಿಸಿದ್ದರೆ ಆಗ ಶೀಘ್ರದಲ್ಲಿಯೇ ಅವರು ಯಾವುದೇ ಸಂಕಷ್ಟ/ ಸಮಸ್ಯೆಗಳನ್ನು ಜಯಿಸಲು

ಶಕ್ತರಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಂಥವರಿಗೆ ಕೂಡಲೇ ಬೆಂಬಲವನ್ನು ನೀಡಲು ತೊಡಗಿಕೊಂಡು ಪ್ರೋತ್ಸಾಹಿಸುವುದು ತುಂಬಾ ಸಹಕಾರಿಯಾಗುತ್ತದೆ.

- **ಮಾಹಿತಿಗಳನ್ನು ಒದಗಿಸಿರಿ :** ನಿಮ್ಮ ಸುತ್ತಮುತ್ತ ಇರುವ ಮಕ್ಕಳನ್ನು ಸುಶಿಕ್ಷಿತಗೊಳಿಸಲು ಇರುವ ಶೈಕ್ಷಣಿಕ ಸೌಲಭ್ಯಗಳು, ಯೋಜನೆಗಳು ಮತ್ತು ಲಾಭಗಳನ್ನು ಕುರಿತು ಆವಶ್ಯಕ ಮಾಹಿತಿಗಳನ್ನು ಒದಗಿಸಿರಿ.

- **ನಿಮ್ಮ ನೆರೆಹೊರೆಯವರಿಗೆ ಸಹಾಯ ಮಾಡಿರಿ:** ನಿಮ್ಮ ಸುತ್ತಮುತ್ತ ಇರುವ ಕೊಳಗೇರಿ ಪ್ರದೇಶದ ಮಕ್ಕಳು ತಮ್ಮ ವ್ಯಾಸಂಗವನ್ನು ನಿಭಾಯಿಸಲು ಶಕ್ತರಾಗುವುದಿಲ್ಲ ಮತ್ತು ಅವರು ಹೆಚ್ಚುವರಿ ಸಹಕಾರವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಅಂಥವರಿಗೆ ನೀವು ಅವರ ಮಟ್ಟಕ್ಕೆ ಏನು ಸಹಾಯ ಬೇಕೋ ಅದನ್ನು ಮಾಡಿ.

- **ತುರ್ತು ಸಂದರ್ಭಗಳಲ್ಲಿ :** ಯಾರಾದರೂ ಗಾಯಗೊಂಡಿದ್ದರೆ ಅಥವಾ ತುರ್ತು ಅಪಾಯದಲ್ಲಿದ್ದರೆ ಅಂಥವರಿಗೆ ಯಾವಾಗಲೂ ತುರ್ತು ಕರೆ ಮಾಡಿ ಸ್ಪಂದಿಸಿರಿ. ತುರ್ತು ಸನ್ನಿವೇಶಗಳಿದ್ದ ಸಂದರ್ಭದಲ್ಲಿ ತರಬೇತಿ ಹೊಂದಿದ ಜನರಿಂದ ಪೂರ್ಣ ಸಹಾಯವನ್ನು ಪಡೆಯಿರಿ.

- **ನಿಮಗಾಗಿ ನೀವೇ ಸಹಾಯ ಪಡೆಯಿರಿ :** ಒಬ್ಬ ಸ್ನೇಹಿತನು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾಗ ಆತ ಭಾವನಾತ್ಮಕವಾಗಿ ಬಳಲಿರಬಹುದು. ಮತ್ತು ಒತ್ತಡದಿಂದಲೂ ಇರಬಹುದು. ಆದರೆ ನೀವೇ ಇದನ್ನು ಒಬ್ಬಂಟಿಯಾಗಿ ನಿಭಾಯಿಸಲು ಹೊರಡಬೇಡಿ. ಸಂಬಂಧಪಟ್ಟವರೊಂದಿಗೆ ಮಾತಾಡಿ.

**ಇ) ಮತನಿರಪೇಕ್ಷತೆ (ಸರ್ವಧರ್ಮ ಸಮಭಾವ) :** ಭಾರತದ ಮತನಿರಪೇಕ್ಷತೆ (ಸರ್ವಧರ್ಮ ಸಮಭಾವವು) ರಾಷ್ಟ್ರದಲ್ಲಿನ ಎಲ್ಲಾ ಧರ್ಮಗಳಿಗೂ ಒಂದೇ ಸ್ಥಾನವನ್ನು ನೀಡುವುದಕ್ಕೆ ಸಂಬಂಧಪಟ್ಟದ್ದಾಗಿದೆ. ರಾಷ್ಟ್ರವು ಯಾವುದೇ ನಿರ್ದಿಷ್ಟ ಧರ್ಮವನ್ನು ಎತ್ತಿಹಿಡಿಯುವಂತಿಲ್ಲ. ಆದರೆ ಎಲ್ಲಾ ಧರ್ಮಗಳನ್ನು ಸಮಾನ ರೀತಿಯಲ್ಲಿ ರಕ್ಷಣೆ ಮಾಡಬೇಕು. ರಾಷ್ಟ್ರ ಮತ್ತು ಧರ್ಮದ ಬೇರ್ಪಡೆಯು ಮತನಿರಪೇಕ್ಷತೆ (ಸರ್ವಧರ್ಮ ಸಮಭಾವ)ದ ತಳಹದಿ. ಇದು ಧಾರ್ಮಿಕ ಪಂಗಡಗಳು ರಾಜ್ಯ/ರಾಷ್ಟ್ರದ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಎಂಬುದನ್ನು ಖಚಿತಪಡಿಸುತ್ತದೆ. ಹಾಗೆಯೇ ರಾಜ್ಯ/ರಾಷ್ಟ್ರವೂ ಕೂಡ ಧಾರ್ಮಿಕ ಪಂಗಡಗಳ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಒಂದು ರಾಷ್ಟ್ರದಲ್ಲಿರುವ ಎಲ್ಲಾ ಧರ್ಮಗಳ ಜನರು ಅಥವಾ ಯಾವುದೇ ಧರ್ಮಕ್ಕೂ ಸಂಬಂಧಪಡದೆ ಹೊರತಾಗಿರುವವರು ಶಾಂತಿಯುತವಾಗಿ ಮತ್ತು ನ್ಯಾಯಯುತವಾಗಿ ಜೊತೆಯಾಗಿ ವಾಸಿಸುವಂತಹ ಒಂದು ಅತ್ಯುತ್ತಮವಾದ ಸಮಾಜವನ್ನು ನಿರ್ಮಿಸುವಲ್ಲಿ ಮತನಿರಪೇಕ್ಷತೆ/ಸರ್ವಧರ್ಮ ಸಮಭಾವವು ಅತ್ಯಂತ ಶ್ರೇಷ್ಠ ಆಯ್ಕೆಯಾಗಿದೆ. ಮತನಿರಪೇಕ್ಷತೆ/ಸರ್ವಧರ್ಮಸಮಭಾವವು ಒಂದು ಚಿಂತನೆ, ತತ್ವಜ್ಞಾನ ಅಥವಾ ಮಸೂದೆ ಅಥವಾ ನೀತಿಯಾಗಿದ್ದು ಅದು ಎಲ್ಲಾ ಧರ್ಮಗಳನ್ನು ಸಮಾನವೆಂದು ನಂಬುತ್ತದೆ. ಇದರ ಪ್ರಕಾರ ಯಾವನೇ ಒಬ್ಬ ವ್ಯಕ್ತಿಯು ಯಾವುದೇ ಧರ್ಮವನ್ನು ಅನುಸರಿಸಬಹುದು. ಅಥವಾ ಯಾವುದೇ ಧರ್ಮವನ್ನು ಅನುಸರಿಸದೆಯೂ ಇರಬಹುದು. ಇದರ ಮೂಲತತ್ವದ ಪ್ರಕಾರ ಎಲ್ಲಾ ಧರ್ಮಗಳ ಅನುಯಾಯಿಗಳಿಗೂ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಸಮಾನವಾದ ಹಕ್ಕುಗಳಿವೆ. ಭಾರತವು ಒಂದು ಮತನಿರಪೇಕ್ಷ/ಸರ್ವಧರ್ಮ ಸಮಭಾವದ ರಾಷ್ಟ್ರ. ಏಕೆಂದರೆ ಭಾರತದ ಸಂವಿಧಾನವು ಮತನಿರಪೇಕ್ಷತೆ/ಸರ್ವಧರ್ಮ ಸಮಭಾವದ ತತ್ವದಲ್ಲಿ ನಂಬಿಕೆಯಿಟ್ಟಿದೆ. ಸಮಾನತೆಯ ಹಕ್ಕುಗಳ ಒಂದು ಮುಖವಾಗಿ ಸಮಾಜವಾದದ ಪರಿಕಲ್ಪನೆ ಇದೆ.

**ಎಫ್.) ವ್ಯಕ್ತಿಯ ಘನತೆಯನ್ನು ಗೌರವಿಸುವುದು:** ಘನತೆಯೆನ್ನುವುದು ವ್ಯಕ್ತಿಯೊಬ್ಬನನ್ನು ಮೌಲ್ಯಕ್ಕೊಳಪಡಿಸುವ ಹಕ್ಕಾಗಿದೆ. ಮತ್ತು ಆತನ ಸ್ವಂತದ ಸಲುವಾಗಿ ಗೌರವಿಸಲ್ಪಡುವಂಥದ್ದಾಗಿದೆ. ಹಾಗೂ ಇದು ನೈತಿಕವಾಗಿ ಗುರುತಿಸಲ್ಪಡುವಂಥದ್ದಾಗಿದೆ. ನೈತಿಕತೆ, ನೀತಿಶಾಸ್ತ್ರ ಮತ್ತು ರಾಜಕೀಯದಲ್ಲಿ ಇದರ ಪ್ರಾಮುಖ್ಯವನ್ನು ಕಾಣಬಹುದು. ಮಾನವ ಘನತೆಯು ಒಂದು ಪರಿಕಲ್ಪನೆಯಾಗಿದ್ದು ಅದರ ಮೂಲಕ ಒಂದು ವಿಚಾರ ಅಥವಾ

ಹೊಳಹನ್ನು ಬಳಸಿಕೊಂಡು ಮನುಷ್ಯನು ಒಂದು ಕ್ರಿಯೆಯಲ್ಲಿ ಒಂದು ಪ್ರಜ್ಞಾವಂತ ನಿರ್ಧಾರವನ್ನು ತಳೆಯುವಂತಹ ಮಾರ್ಗವಾಗಿದೆ. ದೃಷ್ಟಾಂತವಾಗಿ ಮರ್ಯಾದೆ, ಗೌರವ, ಅನುಭೂತಿ, ದಯೆ, ನಿಸ್ವಾರ್ಥ, ನೇರವಾದ ನೈತಿಕತೆ, ಧೈರ್ಯ, ಇನ್ನಿತರ ಕಾರ್ಯವಿಧಾನದ ರೂಪಗಳು, ಇತರರ ಸಹಜ ಮೌಲ್ಯಗಳೆಡೆಗೆ ಜಾಗೃತ ಮನೋಭಾವ ಮತ್ತು ಸ್ವಪ್ರಜ್ಞೆಗಳನ್ನು ಹೆಸರಿಸಬಹುದು. ಘನತೆಯು ದೈನಂದಿನ ಜೀವನದ ಎಲ್ಲಾ ಅಂಶಗಳನ್ನು ಆವರಿಸುತ್ತದೆ. ಇದು ಗೌರವವನ್ನು ಒಳಗೊಳ್ಳುತ್ತದೆ; ಖಾಸಗಿತನವನ್ನು ಒಳಗೊಳ್ಳುತ್ತದೆ. ಆತ್ಮಗೌರವವನ್ನು ಒಳಗೊಳ್ಳುತ್ತದೆ; ಸ್ವಾಯತ್ತತೆಯನ್ನು ಒಳಗೊಳ್ಳುತ್ತದೆ. ಚಾಪ್‌ಮೆನ್ ಅವರ ಪ್ರಕಾರ, "ಘನತೆಯೆಂಬುದು ಗೌರವಯುತವಾದ, ಪವಿತ್ರವಾದ, ಅತ್ಯುತ್ತಮವಾದ, ಮೌಲಿಕವಾದ ವಿಚಾರಕ್ಕೆ ಸಂಬಂಧಪಟ್ಟದ್ದಾಗಿದೆ. ಯಾವ ಮನುಷ್ಯನು ಘನತೆಯ ಮೂಲಕ, ಜೀವಂತಿಕೆಯ ಮೂಲಕ ಮತ್ತು ಅದರ ಜಾಗೃತ ಮನಸ್ಥಿತಿಯಲ್ಲಿ ಪರಮೋಚ್ಚವಾದ ರೀತಿಯಲ್ಲಿ ಬದುಕಲು ಸಾಧ್ಯವೋ ಅದನ್ನು ಮಾನವ ಘನತೆ ಅಥವಾ ವ್ಯಕ್ತಿ ಘನತೆ ಎಂದು ಕರೆಯಬಹುದಾಗಿದೆ." ಇದು ಮಾನವ ಹಕ್ಕುಗಳನ್ನು ರೂಪಿಸಲು ಮತ್ತು ಅನುಷ್ಠಾನಕ್ಕೆ ತರಲು ಇರತಕ್ಕಂತಹ ಒಂದು ಪರಿಕಲ್ಪನಾತ್ಮಕ ತಳಹದಿ. ಇದು ಸಮಾಜದಿಂದ ನೀಡಲ್ಪಟ್ಟಂತಹ ದೇಣಿಗೆಯಾಗಿರಬಹುದು ಅಥವಾ ಸಮಾಜದಿಂದ ನ್ಯಾಯ ಸಮ್ಮತವಾಗಿ ನೀಡಲ್ಪಟ್ಟಂಥದ್ದೂ ಆಗಿರಬಹುದು. ಮಾನವಘನತೆಯ ವಿಧಿರೂಪದ ನಿಹಿತಾರ್ಥವೇನೆಂದರೆ, ಪ್ರತಿಯೊಬ್ಬ ಮನುಷ್ಯನೂ ಸಮುದಾಯದ ಅತ್ಯಂತ ಅಮೂಲ್ಯವಾದ ಸದಸ್ಯನೆಂದು ಪರಿಗಣಿಸಲ್ಪಟ್ಟಿದ್ದಾನೆ. ಅತ್ಯಂತ ಮುಕ್ತವಾಗಿ ಮತ್ತು ಅನನ್ಯವಾಗಿ ಜೀವನದ ಹಕ್ಕುಗಳ ಕುರಿತಂತೆ ಅಭಿವ್ಯಕ್ತಿಸುವುದು, ಭೌತಿಕ ಲಕ್ಷಣಗಳನ್ನು ಆಧ್ಯಾತ್ಮಿಕ ಸ್ವಭಾವಗಳೊಂದಿಗೆ ಸಮನ್ವಯಗೊಳಿಸುವುದು ಆತನ ವೈಶಿಷ್ಟ್ಯವಾಗಿದೆ.

ಟೆರ್ಮಿಲನ್ ರುಡ್ ಅವರ ಪ್ರಕಾರ, " ಮಾನವಘನತೆಯು ಸ್ವಮೌಲ್ಯಪ್ರಜ್ಞೆಗೆ ಸಂಬಂಧಪಟ್ಟದ್ದಾಗಿದೆ. ಹಾಗಾಗಿ ಘನತೆಯು ಒಬ್ಬ ಮನುಷ್ಯನು ತನ್ನ ಬಗ್ಗೆ ಹೊಂದಿರುವ ಅಹಂಅನ್ನು ಪ್ರತಿನಿಧಿಸಬಹುದು. ಈ ಬಗೆಯ ಮನೋವೃತ್ತಿಯು ವ್ಯಕ್ತಿಗಳಲ್ಲಿ ತಾವು ಗೌರವಕ್ಕೆ ಅರ್ಹರು, ತಾವು ಇತರ ಮನುಷ್ಯರಿಂದ ಗೌರವಿಸಲ್ಪಡಬೇಕಾದವರು ಎಂಬ ಭಾವವನ್ನು ಉಂಟುಮಾಡಬಹುದು".

ಮಾನವ ಘನತೆಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಕಾನೂನಿನ ದೃಷ್ಟಿಕೋನವು ಎರಡನೇ ಮಹಾಯುದ್ಧದ ಕೊನೆಯಲ್ಲಿ ಟಂಕಿಸಲ್ಪಟ್ಟಿತು. ಮಾನವ ಹಕ್ಕುಗಳ ಕುರಿತ ಪರಾಮರ್ಶೆಯಲ್ಲಿ ಇದು ಕೇಂದ್ರದೃಷ್ಟಿಕೋನವಾಗಿ ಪರಿಗಣಿಸಲ್ಪಟ್ಟಿತು. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಪ್ರಕಾರ "ಎಲ್ಲಾ ಮನುಷ್ಯರು ಹುಟ್ಟುತ್ತಲೇ ಘನತೆ ಮತ್ತು ಹಕ್ಕುಗಳನ್ನು ಸಮಾನವಾಗಿ ಪಡೆದೇ ಬಂದಿರುತ್ತಾರೆ. ಈ ಕಾರಣದಿಂದಾಗಿ ಅವರು ಸಾಕಷ್ಟು ಅಂಶಗಳ ನೆಲೆಯಲ್ಲಿ ದಾಯಿಗಳೂ(ಕೊಡಬಲ್ಲವರೂ) ಆಗಿರುತ್ತಾರೆ ಮತ್ತು ಪರಿಶುದ್ಧವಾದ ಆತ್ಮಸಾಕ್ಷಿಯನ್ನೂ ಹೊಂದಿರುತ್ತಾರೆ. ಹಾಗಾಗಿ ಅವರು ಒಂದು ಗಾಢವಾದ ಆಧ್ಯಾತ್ಮಿಕ ಭ್ರಾತೃತ್ವವನ್ನು ಒಬ್ಬರು ಇನ್ನೊಬ್ಬರಿಗೆ ತೋರಬಲ್ಲವರಾಗಿರುತ್ತಾರೆ." ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯು ತನ್ನ ಪೀಠಿಕಾಭಾಗದಲ್ಲಿ ಅಸ್ಮಿತೆ ಮತ್ತು ಗೌರವವನ್ನು ಅಂತರ್ಗತ ಘನತೆಯೊಂದಿಗೆ ಸಂಲಗ್ನಗೊಳಿಸಲು ಬಯಸುತ್ತದೆ. ಹಾಗೂ ಸಮಾನವಾದ ಮತ್ತು ಬೇರೊಬ್ಬನಿಗೆ ಪರಭಾರೆ ಮಾಡಲು ಸಾಧ್ಯವಿಲ್ಲದ ಪ್ರತಿಯೊಬ್ಬ ವ್ಯಕ್ತಿಯ ಹಕ್ಕುಗಳ ಹೊರತಾಗಿಯೂ ಆ ವ್ಯಕ್ತಿಯ ಮೂಲ, ಅವರ ಧಾರ್ಮಿಕ ನಂಬಿಕೆಗಳು, ಅವರ ಇತಿಹಾಸ, ಹಿನ್ನೆಲೆಯ ಅಂಶಗಳನ್ನು ಪರಿಗಣನೆಯನ್ನು ಎತ್ತಿಹಿಡಿಯುತ್ತದೆ.

ಮಾನವ ಹಕ್ಕುಗಳು ಸಮಂಜಸವಾಗಿವೆ. ಏಕೆಂದರೆ ಅವುಗಳ ಬೇರು ಮಾನವ ಘನತೆಯಲ್ಲಿದೆ. ಅದು ಮಾನವ ಹಕ್ಕುಗಳಿಗೆ ಸಮರ್ಥನೆಯನ್ನು ಒದಗಿಸುತ್ತದೆ. ಮಾನವ ಹಕ್ಕುಗಳ ಪರಿಕಲ್ಪನೆಯು ತನ್ನ ಆರಂಭದಿಂದ, ನೂರಾರು ವರ್ಷಗಳಿಂದ ತನ್ನ ಬೇರನ್ನು 'ಘನತೆ'ಯಲ್ಲಿ ಕಾಯ್ದುಕೊಂಡಿದೆ. ಡಾ. ಎ. ಲಕ್ಷ್ಮೀನಾಥ್ ಮತ್ತು ಡಾ. ಮುಕುಂದ್ ಸಾರ್ದಾ ಅವರು –'ಮಾನವ ಹಕ್ಕುಗಳಿಂದ ಮಾನವ ಘನತೆಯೆಡೆಗೆ– ಒಂದು ಮುಗಿಯದ ಕಥೆ' ಎಂಬ ಲೇಖನದಲ್ಲಿ (ಸಿ.ಎನ್.ಯು.ಎಲ್. ಲಾ ಜರ್ನಲ್, 2015– 5ನೇ ಸಂಚಿಕೆ) ಈ ಕೆಳಗಿನ ಪದಗಳಲ್ಲಿ ಅದನ್ನು ನಿರೂಪಿಸಿದ್ದಾರೆ:

- ಶೋಷಣೆಯಿಂದ ಪರಿಶೋಧನೆಯೆಡೆಗೆ
- ಪರಿಶೋಧನೆಯಿಂದ ಘೋಷಣೆಯೆಡೆಗೆ
- ಘೋಷಣೆಯಿಂದ ಪ್ರಕಟಣೆಯೆಡೆಗೆ
- ಪ್ರಕಟಣೆಯಿಂದ ರಕ್ಷಣೆಯೆಡೆಗೆ
- ರಕ್ಷಣೆಯಿಂದ ಪರಿಪೂರ್ಣತೆಯೆಡೆಗೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2:**

ವಿವರಗಳನ್ನು ಅದರ ಕೆಳಗೆ ನೀಡಿರುವ ಮೌಲ್ಯಗಳೊಂದಿಗೆ ಹೊಂದಿಸಿರಿ.

1. ರಾಷ್ಟ್ರದ ಆಡಳಿತದಲ್ಲಿ ದೇಶದ ಎಲ್ಲಾ ನಾಗರಿಕರು ಭಾಗಿಯಾಗುವಂತೆ ಅವರೆಲ್ಲರಿಗೂ ಸಮಾನವಾದ ಹಕ್ಕುಗಳು ಮತ್ತು ಅವಕಾಶಗಳನ್ನು ಒದಗಿಸುವುದು
2. ಸಾರ್ವತ್ರಿಕ ಹಿತಕ್ಕಾಗಿ ಕಾನೂನು ನಿಯಮಗಳನ್ನು ಪ್ರತಿನಿಧಿಸುತ್ತದೆಯೇ ಹೊರತು ಯಾವುದೇ ವ್ಯಕ್ತಿಗಾಗಿ ಅಲ್ಲ.
3. ಕ್ರಿಯೆ, ಅಭಿವ್ಯಕ್ತಿ, ಅಥವಾ ಚಿಂತನೆಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿ ಬಯಸುವ ಅಧಿಕಾರ ಮತ್ತು ಹಕ್ಕು.
4. ತೀರ ಸಮೀಪದ ಬಂಧುಗಳೊಂದಿಗೆ ಸಾಮೀಪ್ಯ ಭಾವದಿಂದ ಅಭಿವ್ಯಕ್ತವಾಗುವಂತಹುದು.
5. ಎಲ್ಲಾ ಧರ್ಮಗಳನ್ನು ಸಮಾನ ರೀತಿಯಲ್ಲಿ ರಕ್ಷಣೆ ಮಾಡುವುದು
6. ಮರ್ಯಾದೆ, ಗೌರವ, ಅನುಭೂತಿ, ದಯೆ, ನಿಸ್ವಾರ್ಥ, ನೇರವಾದ ನೈತಿಕತೆ, ಧೈರ್ಯ, ಇನ್ನಿತರ ಕಾರ್ಯವಿಧಾನದ ರೂಪಗಳು.

**ಮೌಲ್ಯಗಳು**

a) ಸ್ವಾತಂತ್ರ್ಯ

b) ಕಾನೂನು ನ್ಯಾಯಪರತೆ

c) ರಾಜಕೀಯ ನ್ಯಾಯಪರತೆ

d) ವ್ಯಕ್ತಿಯ ಘನತೆಯನ್ನು ಗೌರವಿಸುವುದು

e) ಇತರರ ಅಭ್ಯುದಯದೆಡೆಗೆ ಕಾಳಜಿ

f) ಮತನಿರಪೇಕ್ಷತೆ

## 2.2.4. ಸಾರಾಂಶಿಸೋಣ

- ಭಾರತವು ಒಂದು ಬಹು ಸಾಂಸ್ಕೃತಿಕ, ಬಹು ಧರ್ಮೀಯ ಮತ್ತು ಬಹುಭಾಷಿಕ ಜನರಿಂದ ಕೂಡಿದ ರಾಷ್ಟ್ರ. ನಮ್ಮ ಸಂವಿಧಾನವನ್ನು ರಚಿಸಿದವರು ಈ ನಿಟ್ಟಿನಲ್ಲಿ ಯಶಸ್ವಿಯಾದ ಪ್ರಯತ್ನ

ಮಾಡಿದ್ದರೂ ಸಹ ಇಂತಹ ನೆಲದಲ್ಲಿ ಎಲ್ಲರಿಗೂ ಸಮಾನವಾದ ಅವಕಾಶಗಳನ್ನು ಒದಗಿಸುವುದು ಸಾಕಷ್ಟು ಸವಾಲಿನ ಕೆಲಸವೇ ಆಗಿದೆ.

- ಭಾರತವು ಒಂದು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಮುನ್ನಡೆಯುತ್ತಿದೆ. ಪ್ರಜಾಪ್ರಭುತ್ವದ ಮೌಲ್ಯಗಳು ರಾಷ್ಟ್ರದ ಪರಂಪರೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಗುರುತಿಸಲ್ಪಟ್ಟಿವೆ. ಸಮಾನತೆ, ಉದಾರತೆ, ನ್ಯಾಯಪರತೆ, ಸ್ವಾತಂತ್ರ್ಯ, ಇತರರ ಯೋಗಕ್ಷೇಮದೆಡೆಗೆ ಕಾಳಜಿ, ಮತನಿರಪೇಕ್ಷತೆ, (ಸರ್ವಧರ್ಮ ಸಮಭಾವ), ಮಾನವ ಘನತೆ ಮತ್ತು ಹಕ್ಕುಗಳೆಡೆಗೆ ಗೌರವ ಇವುಗಳು ಪ್ರಜಾಪ್ರಭುತ್ವದ ಉನ್ನತ ಮೌಲ್ಯಗಳಾಗಿ ಗುರುತಿಸಲ್ಪಟ್ಟಿವೆ.
- ರಾಷ್ಟ್ರದ ಎಲ್ಲಾ ಪೌರರಿಗೂ (ನಾಗರಿಕರು) ಇವು ಅನ್ವಯವಾಗುತ್ತವೆ.
- ವೈಯಕ್ತಿಕ ನೆಲೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಘನತೆ ಮತ್ತು ಗೌರವವನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳಲಾಗಿದ್ದು ಆ ಪ್ರಕಾರವಾಗಿಯೇ ಪ್ರತಿಯೊಬ್ಬರೂ ತಮ್ಮ ಹಕ್ಕುಗಳನ್ನು ಅನುಭವಿಸಲು ಅವಕಾಶಗಳನ್ನು ಒದಗಿಸಲಾಗಿದೆ. ಹಕ್ಕುಗಳು ಪ್ರಜಾಪ್ರಭುತ್ವದ ಈ ಮೌಲ್ಯಗಳನ್ನು ಆಧರಿಸಿ ರೂಪಿತವಾಗಿದ್ದು 'ಮೂಲಭೂತ ಹಕ್ಕುಗಳ' ಹೆಸರಿನಲ್ಲಿ ಅವುಗಳನ್ನು ಪೋಷಿಸಲಾಗಿದೆ.
- ಇದಕ್ಕೆ ಕೆಲವು ಅಪವಾದಗಳಿರಬಹುದು.
- ಈ ಮೌಲ್ಯಗಳು ವ್ಯಕ್ತಿಯೊಬ್ಬನ ಆರೋಗ್ಯಕರ ಮತ್ತು ಸಂತಸದಾಯಕ ಜೀವನಕ್ರಮದ ಗುರಿಯನ್ನು ಹೊಂದಿವೆ. ಒಂದು ಆರೋಗ್ಯದಾಯಕವಾದ, ಹರ್ಷದಾಯಕವಾದ, ಸುಖ-ಸಮೃದ್ಧಿದಾಯಕವಾದ ಸಮಾಜವನ್ನು ಕೇವಲ ಇಂದಿಗೆ ಮಾತ್ರವಲ್ಲದೆ ಮುಂದಿನ ಪೀಳಿಗೆಗೂ ಕೊಂಡೊಯ್ಯುವ ಗುರಿಯನ್ನೂ ಹೊಂದಿದೆ.

## 2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿರಿ 1, 2 – ಉತ್ತರಗಳು :

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 1

1–ಬಿ, 2–ಎ, 3–ಡಿ, 4–ಸಿ, 5–ಇ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ 2:

1–ಸಿ,2–ಎ, 3–ಬಿ,4–ಇ,5–ಎಫ್, 6–ಡಿ

## 2.2.6. ಘಟಕಾಂತ್ಯ ಅಭ್ಯಾಸಗಳು :

1. ನಿಮ್ಮ ಶಾಲೆಯ 7ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರಾತ್ಯಕ್ಷೀಕರಿಸಲು (ಸಾಕಾರಗೊಳಿಸಲು) ಒಂದು ಕ್ರಿಯಾಯೋಜನೆಯನ್ನು ತಯಾರಿಸಿರಿ.
2. ಸೂಕ್ತ ಉದಾಹರಣೆಗಳೊಂದಿಗೆ ನ್ಯಾಯಪರತೆಯ ಪರಿಕಲ್ಪನೆ ಮತ್ತು ಅದರ ವಿವಿಧ ಪ್ರಕಾರಗಳನ್ನು ವಿವರಿಸಿರಿ.

## 2.2.7 ಪರಾಮರ್ಶನ ಸೂಚಿ

https://en.wikipedia.org/wiki/Preamble_to_the_Constitution_of_India

1. http://www.yourarticlelibrary.com/political-science/equality-meaning-features-and-types-of-equality/40362
2. http://www.simplydecoded.com/2013/10/28/indian-preamble-and-its-importance/
3. http://www.publishyourarticles.net/knowledge-hub/political-science/essay-on-legal-equality/4666/
4.
5. Hillman, Arye L. (2008). "Globalization and Social Justice". The Singapore Economic Review. 53 (2): 173–189.
6. Agartan, Kaan (2014). "Globalization and the Question of Social Justice". Sociology Compass. 8 (6): 903–915. doi:10.1111/soc4.12162

   https://www.investopedia.com/terms/s/social-justice.asp
7.
8. The India Journal of Criminology and Criminatislics Vol. N0. 27, Issue 3. Sep.-Dec. 2006. P.3 16
9. The Main features of Justice, Law and Punishment. (2017, Sep 11). Retrieved from https://studymoose.com/the-main-features-of-justice-law-and-punishment-essay
10. Presentation on theme: "1. 2 NATURAL JUSTICE The Principles of Natural Justice means the principles relating to the procedure required to be followed by authorities entrusted."— Presentation transcript:
11. The Principles of Natural Justice and Indian Judicial System by S. K. Garg– 2013
12. Penumbra of Natural Justice by Tapash Gan Choudhury – 2016, OUP

    http://www.csu.edu/humanresources/empdev/documents/ConcernforOthers.pdf
13.
14. Chapman, Audrey R, Inconsistency of Human Rights Approaches ot Human Dignity with Transhumanism, The American Journal of Bioethics 10, no. 7 (2010): 61 – 63.

    TerMeulen, Ruud, Dignity, Posthumanism, and the Community of Values, The American Journal of Bioethics 10, no. 7 (2010): 69 – 70

**********

# ಬ್ಲಾಕ್–2 : ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು

## ಘಟಕ–3: ವಿಕಾಸಶೀಲ ರಾಷ್ಟ್ರವಾಗಿ ಭಾರತ: ಕಾಣ್ಕೆ, ಸ್ವರೂಪ ಮತ್ತು ಪ್ರಮುಖ ಲಕ್ಷಣಗಳು: ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ರಾಜಕೀಯ, ಫೆಡರಲ್ ವ್ಯವಸ್ಥೆ – ಶೈಕ್ಷಣಿಕ ನಿಹಿತಾರ್ಥಗಳು

**ಘಟಕದ ರಚನೆ**


2.3.1. ಕಲಿಕಾ ಉದ್ದೇಶಗಳು

2.3.2. ಪೀಠಿಕೆ

2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.3.3.1. ಭಾರತದ ಕಾಣ್ಕೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2.3.3.2. ಭಾರತದ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ರಾಜಕೀಯ ವ್ಯವಸ್ಥೆಯ ಲಕ್ಷಣಗಳು, ಭಾರತದ ಒಕ್ಕೂಟ ವ್ಯವಸ್ಥೆ ಮತ್ತು ಶೈಕ್ಷಣಿಕ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

2.3.3.4. ಸಾರಾಂಶಿಸೋಣ

2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

2.3.6. ಘಟಕಾಂತ್ಯ ಅಭ್ಯಾಸಗಳು

2.3.7. ಪರಾಮರ್ಶನ ಸೂಚಿ


## 2.3.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಭಾರತದ 2020ರ ಭವಿಷ್ಯದ ಪರಿಕಲ್ಪನೆಯನ್ನು ವಿವರಿಸುವರು;
- ಭಾರತದ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತತೆಯ ಸ್ವರೂಪವನ್ನು ವಿಶ್ಲೇಷಿಸುವರು; ಮತ್ತು
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತ ಸ್ವರೂಪವನ್ನು ಅರ್ಥಮಾಡಿಕೊಂಡು ಪ್ರಶಂಶಿಸುವರು.

## 2.3.2. ಪೀಠಿಕೆ

ಭಾರತವು ವೈವಿಧ್ಯತೆಯ ನಾಡು ಎಂಬುದು ನಿಜವಾದರೂ ಈ ವೈವಿಧ್ಯತೆಯಲ್ಲೂ ಏಕತೆಯನ್ನು ಸಾಧಿಸಿ ಉನ್ನತಮಟ್ಟಕ್ಕೇರಲು ಶ್ರಮಿಸುತ್ತಿರುವುದು ಇಲ್ಲಿಯ ಹಿರಿಮೆ. ಭಾರತ ಹೇಗಿರಬೇಕು, ಈ ದೇಶದ ಜನರ ಬಾಳುವೆ ಯಾವ ರೀತಿಯಾಗಿರಬೇಕು, ಈ ದೇಶದ ಗುರಿ ಏನಾಗಿರಬೇಕು ಎಂಬುದರ ಕುರಿತು ಹಲವಾರು ದ್ರಷ್ಟಾರರು ತಮ್ಮ ಆಶಯಗಳನ್ನು ಮುಂದಿಟ್ಟಿದ್ದಾರೆ. ಇವುಗಳಲ್ಲಿ ಕೆಲವು ಆಶಯ, ಆಲೋಚನೆಗಳಿಗೆ ತತ್‌ಕ್ಷಣದ ನಿಹಿತಾರ್ಥಗಳಿರುವುದಾದರೂ ಕೆಲವು ಮುಂದಿನ ಕಾಲದಲ್ಲಿ ಅಳವಡಿಸಿಕೊಳ್ಳಬೇಕಾದ ನಿಹಿತಾರ್ಥಗಳನ್ನು ಹೊಂದಿವೆ.

ಮಹನೀಯರ ಈ ಕಲ್ಪನೆಗಳು ಸಂವಿಧಾನದಲ್ಲಿ ಪ್ರಸ್ತಾಪಿಸಿರುವ ತತ್ವಗಳನ್ನೇ ಆದರಿಸಿರುವಂತಹವು.

ಭಾರತವನ್ನು ಕುರಿತಂತೆ ರವೀಂದ್ರನಾಥ ಟಾಗೋರರ ಕಲ್ಪನೆ ಹೇಗಿತ್ತು ಎಂಬುದನ್ನು ಕೆಳಗಿನ ಸಾಲುಗಳಲ್ಲಿ ಕಾಣಬಹುದು:

ಎಲ್ಲಿ ಮನಕಳುಕಿರದೊ, ಎಲ್ಲಿ ತಲೆ ಬಾಗಿರದೊ।
ಎಲ್ಲಿ ತಿಳಿವಿಗೆ ತೊಡಕು ತೋರದಿಹುದಲ್ಲಿ॥
ಎಲ್ಲಿ ಮನೆಯೊಕ್ಕಟ್ಟು, ಸಂಸಾರ ನೆಲೆಗಟ್ಟು।
ಧೂಳೊಡೆಯದಿಹುದೊ ತಾನಾನಾಡಿನಲ್ಲ॥
ಎಲ್ಲಿ ಸತ್ಯಗಂಧ ನೆಲೆಯಿಂದ ಸವಿವಾತು।
ಸಲ್ಲಲಿತ ನಡೆಯಿಂದ ಮುಂಬರಿವುದಲ್ಲಿ॥
ಎಲ್ಲಿ ದಣವಿರದ ಸಾಧನೆಯು ಸಫಲತೆ ಕಡೆಗೆ।
ತೋಳ ನೀಡಿಹುದೊ ತಾನಾನಾಡಿನಲ್ಲಿ॥
ಎಲ್ಲಿ ಸುವಿಚಾರ ನಿರ್ಮಲ ಜಲದೊಸರು ಹರಿದು।
ಕಾಲರೂಢಿಯ ಮರಳೊಳಿಂಗೆ ಕೆಡದಲ್ಲಿ॥
ಎಲ್ಲಿ ನೀನೆಮ್ಮ ಚಿಂತನವನುದ್ಯಮವ ಸುವಿ।
ಶಾಲತೆಯ ಪೂರ್ಣತೆಗೆ ಮುನ್ನಡೆಸುವಲ್ಲಿ॥
ಅಲ್ಲಿಯಾ ಬಂಧನ ರಹಿತ ಸುಖದ ಸ್ವರ್ಗದಲಿ।
ಪಾಲಿಸೈ ಪಿತ ನಮ್ಮ ನಾಡೆಚ್ಚರಿರಲಿ॥

ಟಾಗೋರರ ಭಾರತದ ಈ ಕಲ್ಪನೆಯಲ್ಲಿ ಸಂವಿಧಾನ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ನ್ಯಾಯ ಮುಂತಾದವುಗಳನ್ನು ಗಮನಿಸಬಹುದು.ಈ ಘಟಕದಲ್ಲಿ ಈ ರೀತಿಯಾದ ಭಾರತದ ಕಾಣ್ಕೆ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತತೆಯ ಎರಡು ಧ್ರುವಗಳು ಕೆಲಸಮಾಡುವ ರೀತಿ ಇವುಗಳನ್ನೂ ಭಾರತದ ಒಕ್ಕೂಟ ಆಡಳಿತದ ಸ್ವರೂಪವನ್ನೂ ತಿಳಿಯೋಣ.

## 2.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.3.3.1. ಭಾರತದ ಕಾಣ್ಕೆ

ಭಾರತವು ವಿಕಾಸಹೊಂದುತ್ತಿರುವ ರಾಷ್ಟ್ರ. ಭಾಷೆ, ಪ್ರಾಂತ್ಯ, ಜನಾಂಗ ಮುಂತಾದವುಗಳನ್ನು ಆಧರಿಸಿದ ಸ್ಥಿರ ಜನ ಸಮುದಾಯವೇ ರಾಷ್ಟ್ರ. ಪ್ರಗತಿ ಅಥವಾ ಉನ್ನತಿಯ ಕಡೆಗಿನ ಬದಲಾವಣೆಯೇ ವಿಕಾಸ. ಈ ಬದಲಾವಣೆ ನಿಧಾನಗತಿಯಲ್ಲಿ ಆಗುವಂತಹುದು. 'ವಿಕಾಸ' ಮತ್ತು 'ರಾಷ್ಟ್ರ'ಗಳ ವ್ಯಾಖ್ಯೆಯು ಜೊತೆಯಾಗಿ ವಿಕಾಸಹೊಂದುತ್ತಿರುವ ರಾಷ್ಟ್ರಗಳ ಗುಣಲಕ್ಷಣಗಳನ್ನು ಸೂಚಿಸುತ್ತದೆ. ಅವೆಂದರೆ, ರಾಷ್ಟ್ರದ ಬೆಳವಣಿಗೆ, ಅಭಿವೃದ್ಧಿ, ಪ್ರಗತಿ, ಆಧುನೀಕರಣ ಮತ್ತು ಅಭಿವೃದ್ಧಿಯ ವ್ಯಾಪ್ತಿ. ಈ ಗುಣಲಕ್ಷಣಗಳು ಭಾರತಕ್ಕೆ ಸಮರ್ಪಕವಾಗಿ ಹೊಂದಿಕೆಯಾಗುತ್ತದೆ. ಸ್ವಾತಂತ್ರ್ಯೋತ್ತರ ಕಾಲದ ಭಾರತದಲ್ಲಿನ ಬದಲಾವಣೆಗಳು ಇದೊಂದು ವಿಕಾಸಶೀಲ ರಾಷ್ಟ್ರವಾಗಿ ಗುರುತಿಸುತ್ತವೆ. ಈ ಬದಲಾವಣೆಗಳನ್ನು ಕೆಳಕಂಡಂತೆ ಗುರುತಿಸಬಹುದು:

- ಸಂಘಟಿತ ಆಡಳಿತ ವ್ಯವಸ್ಥೆ
- ಸಾಮಾಜಿಕ ಕಲ್ಯಾಣಕ್ಕೆ ಗಮನ
- ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆ
- ಕೃಷಿ ಕ್ಷೇತ್ರದಲ್ಲಿನ ಪ್ರಗತಿ
- ಪ್ರಗತಿ ಸಂಪೂರ್ಣವಾಗಿ ಕಾಣದಿರುವುದರಿಂದ ಸುಧಾರಣೆಗೆ ವ್ಯಾಪಕ ಅವಕಾಶ
- ಸಾಂಪ್ರದಾಯಿಕ ಮೌಲ್ಯಗಳನ್ನು ಉಳಿಸಿಕೊಂಡೇ ಅಪೇಕ್ಷಿತ ಬದಲಾವಣೆಗಳನ್ನು ಮೈಗೂಡಿಸಿಕೊಂಡಿರುವಿಕೆ

ಪ್ರತಿಯೊಂದು ದೇಶಕ್ಕೂ ತನ್ನದೇ ಆದ 'ಕಾಣ್ಕೆ' ಇರುತ್ತದೆ. ಭವಿಷ್ಯದಲ್ಲಿ ಸಾಧಿಸಲು ಅಪೇಕ್ಷಿಸುವ ಗುರಿಗಳು ಹಾಗೂ ಅದಕ್ಕೆ ಪೂರಕವಾದ ಸನ್ನಿವೇಶಗಳ ಸಮಷ್ಟಿಯೇ 'ಕಾಣ್ಕೆ' ಎಂದು ಹೇಳಬಹುದು. ಈ ಕಾಣ್ಕೆಯನ್ನು ಸಮರ್ಪಕವಾದ ಮಾತುಗಳಲ್ಲಿ ಮೂಡಿಸುವುದೇ 'ಕಾಣ್ಕೆಯ ಹೇಳಿಕೆ'. ಇದನ್ನು ಇಂಗ್ಲಿಷಿನಲ್ಲಿ 'vision statement' ಎಂದು ಹೇಳಲಾಗುತ್ತದೆ. ಸಮಾಜದ ಎಲ್ಲ ವರ್ಗಗಳ ಜನರಲ್ಲೂ ದೇಶವು ಪ್ರಗತಿಹೊಂದಬೇಕಾದ ರೀತಿಯನ್ನು ಕುರಿತ ಕಲ್ಪನೆಗಳು ಮತ್ತು ಅದಕ್ಕೆ ಸೂಕ್ತವಾದ ಅಭಿಪ್ರೇರಣೆಗಳನ್ನು ಜಾಗೃತಗೊಳಿಸಲು ಈ ಕಾಣ್ಕೆ ಅಗತ್ಯವಾಗುತ್ತದೆ. ಅಭಿವೃದ್ಧಿ ಕಾರ್ಯತಂತ್ರಗಳಿಗೆ ರಾಜಕೀಯ ಒಮ್ಮತವನ್ನು ನಿರ್ಮಿಸಲು 'ಕಾಣ್ಕೆಯ ಹೇಳಿಕೆ'ಗಳು ಬೇಕಾಗುತ್ತವೆ. ಕಾಣ್ಕೆಯ ಪರಿಕಲ್ಪನೆಯು, ಸಮಾಜದ ಅಭಿವೃದ್ಧಿಯನ್ನು ಗಮನದಲ್ಲಿರಿಸಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸ್ಥಳೀಯ ಸಂಘ ಸಂಸ್ಥೆಗಳು, ಖಾಸಗಿ ವಲಯಗಳು ಮುಂತಾದವುಗಳ ಜವಾಬ್ದಾರಿಯನ್ನು ಸೂಚಿಸುತ್ತದೆ. ಇದನ್ನು ಸಾಧಿಸುವ ಹಾದಿಯಲ್ಲಿ ಎದುರಾಗುವ ಅಪಾಯಗಳು, ಸಮಸ್ಯೆಗಳು, ಸವಾಲುಗಳು ಇವುಗಳನ್ನು ಎದುರಿಸಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದಾಗ ಮಾತ್ರ ಕಂಡುಕೊಂಡ 'ಕಾಣ್ಕೆ' ಸಾಕಾರವಾಗುತ್ತದೆ.

ಭಾರತದ ಪ್ರಗತಿಗೆ ಸಂಬಂಧಿಸಿದಂತೆ India's Vision 2020 ದಾಖಲೆ ಅತ್ಯಂತ ಪ್ರಮುಖವಾದುದು. ಇದು ಮೊದಲಿಗೆ ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ Technology Information Forecasting and Assessment Council (TIFAC) ಸಂಸ್ಥೆಯಿಂದ ಒಂದು ದಾಖಲೆಯ ರೂಪದಲ್ಲಿ ತಯಾರಿಸಲಾಯಿತು. ಇದರ ನೇತೃತ್ವವನ್ನು ಮಂಡಳಿಯ ಅಂದಿನ ಅಧ್ಯಕ್ಷರಾಗಿದ್ದ ಡಾ। ಎ.ಪಿ.ಜೆ ಅಬ್ದುಲ್ ಕಲಾಂ ಅವರು ವಹಿಸಿದ್ದರು. ಇದು ಐನೂರು ತಜ್ಞರ ಆಲೋಚನೆಯ ಫಲ. ಇದರ ಯೋಜನೆಯನ್ನು ಮುಂದೆ ಡಾ। ಕಲಾಂ ಮತ್ತು ವೈ.ಎಸ್. ರಾಜನ್ ಅವರ 'India 2020: A Vision for the New Millenium' ಎಂಬ ಕೃತಿಯಲ್ಲಿ ವಿಸ್ತಾರವಾಗಿ ಪ್ರಕಟಗೊಂಡಿತು. ಭಾರತವನ್ನು ಪ್ರಗತಿಶೀಲ ರಾಷ್ಟ್ರವಾಗಿ ಪರಿವರ್ತಿಸಲು ಕೆಳಗಿನ ಅಂಶಗಳನ್ನು ಗುರುತಿಸಿಕೊಳ್ಳಲಾಯಿತು:

- ಕೃಷಿ ಮತ್ತು ಆಹಾರ ಸಂಸ್ಕರಣೆಯ ಮೂಲಕ ಉತ್ಪಾದನೆಯನ್ನು ದ್ವಿಗುಣಗೊಳಿಸುವುದು;
- ಮೂಲಸೌಕರ್ಯ ಮತ್ತು ವಿಶ್ವಾಸಾರ್ಹ ವಿದ್ಯುಚ್ಛಕ್ತಿಯ ಬೆಳವಣಿಗೆಗೆ ಗಮನಕೊಡುವುದು;
- ಗ್ರಾಮೀಣ ಪ್ರದೇಶಗಳಿಗೆ ನಗರಗಳಂತೆಯೇ ಸೌಕರ್ಯಗಳನ್ನು ಒದಗಿಸುವುದು ಮತ್ತು ಸೌರಶಕ್ತಿಯ ಬಳಕೆಯನ್ನು ಹೆಚ್ಚಿಸುವುದು;
- ಜನರಿಗೆ ಸಾಕ್ಷರತೆ, ಸಾಮಾಜಿಕ ಭದ್ರತೆ ಮತ್ತು ಸಂಪೂರ್ಣ ಆರೋಗ್ಯ ಒದಗಿಸುವುದು;
- ದೂರದ ಹಳ್ಳಿಗಳಲ್ಲಿ ಶಿಕ್ಷಣವನ್ನು ಉತ್ತೇಜಿಸಲು ಇ–ಆಡಳಿತ, ದೂರಸಂಪರ್ಕ ಮತ್ತು ಟೆಲಿಮೆಡಿಸನ್‌ಗಳನ್ನು ದೊರಕಿಸಿಕೊಡುವುದು;

- ನಿರ್ಣಾಯಕ ತಂತ್ರಜ್ಞಾನಗಳು ಮತ್ತು ಕಾರ್ಯತಂತ್ರ ಕೈಗಾರಿಕೆಗಳು ಹಾಗೂ ಪರಮಾಣು ತಂತ್ರಜ್ಞಾನದ ಬೆಳವಣಿಗೆ ಇವುಗಳ ಅಡಿಯಲ್ಲಿ ಬಾಹ್ಯಾಕಾಶ ಮತ್ತು ರಕ್ಷಣಾ ತಂತ್ರಜ್ಞಾನಕ್ಕೆ ಆದ್ಯತೆ ನೀಡುವುದು; ಮತ್ತು

- ಬಡತನ ಮತ್ತು ಅನಕ್ಷರತೆಯ ಪ್ರಮಾಣವನ್ನು ಕಡಿಮೆಮಾಡಿ ಮಾಧ್ಯಮಗಳು, ಸಮುದಾಯಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಜನರು ಶಿಕ್ಷಣ ಪಡೆಯಲು ಪ್ರೇರೇಪಿಸಿ, ಭಾರತದಲ್ಲೇ ತಯಾರಿಸಿದ ಉತ್ಪನ್ನಗಳನ್ನು ಖರೀದಿಸುವಂತೆ ಮಾಡುವುದರ ಮೂಲಕ ಭಾರತದ ಮಾರುಕಟ್ಟೆಯನ್ನು ಉತ್ತೇಜಿಸುವುದು.

ಕಲಾಂ ಅವರ ಈ ಕನಸುಗಳನ್ನು ನೆನಸುಮಾಡಲು ಈಗ Visionaries Orgnisation in Service to Society ಖಾಸಗಿ ಸಂಸ್ಥೆ ಶ್ರಮಿಸುತ್ತಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

India's Vision 2020ರ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಈಗಾಗಲೇ ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳನ್ನು ಸಂಗ್ರಹಿಸಿ, ನಿಮ್ಮ ಅಭಿಪ್ರಾಯಗಳನ್ನು ಒಳಗೊಂಡಂತೆ ಒಂದು ಲೇಖನ ತಯಾರಿಸಿ

## 2.3.3.2. ಭಾರತದ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ರಾಜಕೀಯ ವ್ಯವಸ್ಥೆಯ ಲಕ್ಷಣಗಳು

ಪ್ರಜಾಪ್ರಭುತ್ವದ ಅಡಿಯಲ್ಲಿ ನಾವು ನಮ್ಮ ಸಂವಿಧಾನವನ್ನು ರೂಪಿಸಿಕೊಂಡಿದ್ದೇವೆ. ನಮ್ಮ ಸಂವಿಧಾನದ ಲಕ್ಷಣಗಳು ಹೀಗಿವೆ:

- **ಸಾರ್ವಭೌಮತ್ವ :** ಪ್ರಜಾಪ್ರಭುತ್ವವು ಸಾರ್ವಭೌಮತ್ವವನ್ನು ಆಧರಿಸಿದೆ. ಪ್ರಜೆಗಳು ತಮ್ಮ ಮತವನ್ನು ಚಲಾಯಿಸುವುದರ ಮೂಲಕ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಬಹುದು. ಪ್ರಜೆಗಳ ಜವಾಬ್ದಾರಿಯು ಸರ್ಕಾರದ್ದಾಗಿರುತ್ತದೆ.

- **ರಾಜಕೀಯ ಸಮಾನತೆ :** ಜಾತಿ, ಮತ, ಲಿಂಗ, ಜನಾಂಗ ಮುಂತಾದ ಯಾವುದೇ ಭೇದಗಳಿಲ್ಲದೆ ಕಾನೂನಿನ ಚೌಕಟ್ಟಿನಲ್ಲಿ ಎಲ್ಲರನ್ನು ಸಮಾನವಾಗಿ ಪರಿಗಣಿಸಿರುವಿಕೆ ಮತ್ತು ಎಲ್ಲರಿಗೂ ರಾಜಕೀಯ ಹಕ್ಕುಗಳು ಇವುಗಳನ್ನು ಈ ಅಂಶವು ಒಳಗೊಳ್ಳುತ್ತದೆ.

- **ಬಹುಮತದ ಆಡಳಿತ :** ಬಹುಮತದ ಬೆಂಬಲವನ್ನು ಎಲ್ಲರೂ ಗೌರವಿಸುತ್ತಾರೆ.

- **ಒಕ್ಕೂಟ ವ್ಯವಸ್ಥೆ:** ಭಾರತ ಸಂವಿಧಾನದ ವಿಧಿ1ರಲ್ಲಿ ವಿವರಿಸಿರುವಂತೆ ಭಾರತವು ಒಂದು ಒಕ್ಕೂಟ ರಾಜ್ಯ. ಇಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ಇದೆ. ರಾಜ್ಯಗಳು ಕೆಲವು ವಿಷಯಗಳಲ್ಲಿ ಸ್ವತಂತ್ರವಾಗಿ ಮತ್ತೆ ಕೆಲವು ವಿಷಯಗಳಲ್ಲಿ ಕೇಂದ್ರಕ್ಕೆ ಅಧೀನವಾಗಿ ಆಡಳಿತ ನಡೆಸುತ್ತವೆ.

- **ಸಾಮೂಹಿಕ ಜವಾಬ್ದಾರಿ:** ಕೇಂದ್ರ ಮತ್ತು ರಾಜ್ಯದಲ್ಲಿನ ಸಚಿವರುಗಳ ಮಂಡಳಿಯು ಆಯಾ ಶಾಸಕಾಂಗಕ್ಕೆ ಸಾಮೂಹಿಕವಾಗಿ ಜವಾಬ್ದಾರರಾಗಿರುತ್ತಾರೆ. ಯಾವುದೇ ಸಚಿವರು ಸರ್ಕಾರದ ಯಾವುದೇ ಕಾರ್ಯಕ್ಕೆ ಸ್ವತಂತ್ರವಾಗಿ ಜವಾಬ್ದಾರರಾಗಿರುವುದಿಲ್ಲ.

- **ಅಭಿಪ್ರಾಯ ರೂಪಣೆ:** ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಅಭಿಪ್ರಾಯಗಳಿಗೆ ಅವಕಾಶ ನೀಡಲಾಗುತ್ತದೆ. ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ವ್ಯಕ್ತಪಡಿಸಲು ಶಾಸಕಾಂಗವು ಪ್ರಮುಖ ವೇದಿಕೆಯನ್ನು ಒದಗಿಸುತ್ತದೆ.

- **ಅಲ್ಪಸಂಖ್ಯಾತರ ಅಭಿಪ್ರಾಯಗಳಿಗೆ ಗೌರವ:** ಬಹುಮತದ ಅಭಿಪ್ರಾಯಗಳನ್ನು ಅಂಗೀಕರಿಸಿದರೂ ಅಲ್ಪ ಸಂಖ್ಯಾತರ ಅಭಿಪ್ರಾಯಗಳಿಗೆ ಸೂಕ್ತ ಗೌರವ ನೀಡಲಾಗುತ್ತದೆ.

- **ಹಕ್ಕುಗಳಿಗೆ ಅವಕಾಶ :** ವ್ಯಕ್ತಿಯ ಘನತೆ ಮತ್ತು ಹಕ್ಕುಗಳಿಗೆ ಹೆಚ್ಚಿನ ಮಾನ್ಯತೆಯನ್ನು ನೀಡಲಾಗುತ್ತದೆ. ಉದಾಹರಣೆಗೆ, ವಾಕ್ ಸ್ವಾತಂತ್ರ್ಯ, ಸಂಘ ಅಥವಾ ಒಕ್ಕೂಟಗಳನ್ನು ರಚಿಸುವ ಹಕ್ಕು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು ಇತ್ಯಾದಿ.
- **ನ್ಯಾಯೋಚಿತ ಆಡಳಿತ :** ಕಾನೂನು ಎಂಬುದು ಎಲ್ಲರಿಗೂ ಎಲ್ಲಕ್ಕಿಂತಲೂ ಮಿಗಿಲಾದುದು ಎಂದು ನಂಬಲಾಗುತ್ತದೆ. ಈ ವಿಷಯದಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳಲಾಗುವುದಿಲ್ಲ.
- **ಸಮ್ಮತಿಗನುಸಾರವಾದ ನಿಯಮ ನಿರೂಪಣೆ :** ಸಂಬಂಧಪಟ್ಟ ಎಲ್ಲರ ಸಮ್ಮತಿಯ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ, ಬಲವಂತದಿಂದಲ್ಲ.
- **ಸ್ವತಂತ್ರ ನ್ಯಾಯಾಂಗ :** ನ್ಯಾಯಾಂಗವು ಕಾರ್ಯಾಂಗ ಅಥವಾ ಶಾಸಕಾಂಗದ ಮೇಲೆ ಆಧರಿಸಿಲ್ಲದೆ ಸ್ವತಂತ್ರವಾಗಿರುತ್ತದೆ. ಸರ್ಕಾರದ ಯಾವುದೇ ಅಂಗಗಳು ನ್ಯಾಯಾಂಗದ ಮೇಲೆ ಪ್ರಭಾವ ಬೀರುವಂತಿಲ್ಲ.

**ಭಾರತದ ಜಾತ್ಯತೀತತೆಯ ಗುಣಲಕ್ಷಣಗಳು :** ಧಾರ್ಮಿಕ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಒದಗಿಸುವುದು

- ಭಾರತದ ಪ್ರಗತಿಪರ ಸಂವಿಧಾನವು ಪ್ರಜೆಗಳಿಗೆ ಧಾರ್ಮಿಕ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಒದಗಿಸುವುದು ಮಾತ್ರವಲ್ಲದೆ ಭಾರತದಲ್ಲಿರುವ ಎಲ್ಲ ಧಾರ್ಮಿಕ ಸಮುದಾಯಗಳ ಹಕ್ಕುಗಳು ಮತ್ತು ಮೂಲಭೂತ ಅಧಿಕಾರವನ್ನು ಕಾಪಾಡುತ್ತದೆ.
- ಧಾರ್ಮಿಕ ಸ್ವಾತಂತ್ರ್ಯವು ಸಾರ್ವಜನಿಕ ಸುರಕ್ಷತೆ, ನೈತಿಕತೆ ಮತ್ತು ಜನರ ಆರೋಗ್ಯದಂತಹ ಅನೇಕ ಷರತ್ತುಗಳಿಗೆ ಒಳಪಟ್ಟಿರುತ್ತದೆ.
- ಈ ಜಾತ್ಯತೀತತೆಯು ಕ್ರಿಯಾಶೀಲವಾದುದು. ಇದು ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪವನ್ನು ತಡೆಯುತ್ತದೆ ಮತ್ತು ಸಮಾಜಕಲ್ಯಾಣದೆಡೆಗಿನ ನಡೆಯನ್ನು ಪ್ರೋತ್ಸಾಹಿಸುತ್ತದೆ. ಅವಶ್ಯವಿದ್ದರೆ ಸರ್ಕಾರವು ಯಾವುದೇ ಸಮುದಾಯದ ವೈಯಕ್ತಿಕ ನಿಬಂಧನೆಗಳನ್ನು ಬದಲಾಯಿಸಬಹುದು.

## ಭಾರತದ ಒಕ್ಕೂಟ ವ್ಯವಸ್ಥೆ

ಭಾರತ ಸಂಯುಕ್ತ ಸ್ವರೂಪದ ಸಂವಿಧಾನವನ್ನು ಹೊಂದಿದೆ. ರಾಷ್ಟ್ರವ್ಯಾಪ್ತಿಯ ಅಧಿಕಾರ ಹೊಂದಿರುವ ಒಂದು ಸರ್ಕಾರದೊಂದಿಗೆ ಅದರ ಅನೇಕ ರಾಜ್ಯಗಳ ನಡುವಿನ ಅಧಿಕಾರದ ಸಾಂವಿಧಾನಿಕ ವಿಭಜನೆಯೇ ಸಂಯುಕ್ತ ಸಂವಿಧಾನ. ಈ ರಾಜ್ಯಗಳು ತಮ್ಮದೇ ಆದ ವ್ಯಾಪ್ತಿಯನ್ನು ಹೊಂದಿ ಸ್ವತಂತ್ರವಾಗಿರುತ್ತವೆ. ಅಲ್ಲದೆ ರಾಜ್ಯಗಳ ಸಮೂಹವು ಇಡೀ ರಾಷ್ಟ್ರವನ್ನು ಪ್ರತಿನಿಧಿಸುತ್ತದೆ. ತಜ್ಞರ ಪ್ರಕಾರ ಸಂಯುಕ್ತ ಸಂವಿಧಾನದ ಲಕ್ಷಣಗಳು ಕೆಳಕಂಡಂತಿವೆ:

- ಅಧಿಕಾರ ವಿಭಜನೆ
- ರಾಜ್ಯಗಳಿಗೆ ಸ್ವಾತಂತ್ರ್ಯ
- ರಾಷ್ಟ್ರ ಮತ್ತು ಪ್ರಾದೇಶಿಕ ಪ್ರಾಧಿಕಾರದ ನಡುವಿನ ಸಹಕಾರ
- ಉಭಯ ಸರ್ಕಾರದ ಆಡಳಿತ
- ಕಟ್ಟುನಿಟ್ಟಿನ ಹಾಗೂ ಲಿಖಿತ ಸಂವಿಧಾನ
- ಉಭಯ ಸರ್ಕಾರದ ಜನರ ಮೇಲಿನ ನೇರ ಅಧಿಕಾರ
- ಸಂವಿಧಾನ ಸರ್ವೋಚ್ಚ ಎಂಬ ಗಣನೆ.

ಮೇಲಿನ ಗುಣಗಳನ್ನು ಹೊಂದಿರುವ ಭಾರತ ಸರ್ಕಾರದ ಸಂಯುಕ್ತ ಸ್ವರೂಪವನ್ನು ತಿಳಿಯೋಣ.

ಸಂಯುಕ್ತ ಆಡಳಿತ ಸ್ವರೂಪದ ಭಾರತದಲ್ಲಿ ಅಧಿಕಾರವನ್ನು ಮೂರು ಸಮಾನ ಸಂಸ್ಥೆಗಳಿಗೆ ವಿತರಿಸಲಾಗಿದೆ. ಅವೆಂದರೆ,

- ಕಾರ್ಯಾಂಗ
- ಶಾಸಕಾಂಗ
- ನ್ಯಾಯಾಂಗ

ಈ ಸಂಸ್ಥೆಗಳಿಗೆ ಸಮಾನ ಅಧಿಕಾರಗಳಿರುತ್ತವೆ. ಯಾರೂ ಯಾರನ್ನೂ ನಿಯಂತ್ರಿಸುವಂತಿಲ್ಲ. ಆದರೆ ಎಲ್ಲರೂ ಸಹಕರಿಸಿ ಸಹಯೋಗದಿಂದ ಕಾರ್ಯನಿರ್ವಹಿಸಬೇಕು.

ಈ ಸಂಸ್ಥೆಗಳ ಕುರಿತು ವಿವರವಾಗಿ ತಿಳಿಯೋಣ

**ಕಾರ್ಯಾಂಗ :**

ಸರ್ಕಾರದ ಅತ್ಯಂತ ಶಕ್ತಿಯುತ ಅಂಗವಿದು. ಶಾಸಕಾಂಗವು ಅಂಗೀಕರಿಸಿದ ಕಾನೂನುಗಳು ಮತ್ತು ಸರ್ಕಾರದ ರೀತಿನೀತಿಗಳನ್ನು ಜಾರಿಗೊಳಿಸುವ ಕಾರ್ಯ ಇದರದ್ದು. ಕಾನೂನಾತ್ಮಕವಾಗಿ ರೂಪಿಸಿ ಅಭಿವ್ಯಕ್ತಪಡಿಸಿರುವ ಸರಕಾರದ ನೀತಿ–ನಿಯಮಗಳನ್ನು ಅನುಷ್ಠಾನಗೊಳಿಸುವ ಎಲ್ಲ ಅಧಿಕಾರಿಗಳು ಮತ್ತು ಸಂಸ್ಥೆಗಳ ಸಮಷ್ಟಿಯೇ ಕಾರ್ಯಾಂಗ.

ಕಾರ್ಯಾಂಗದಲ್ಲಿ ಎರಡು ವಿಭಾಗಗಳಿವೆ. ಅವು ರಾಜಕೀಯ ಮತ್ತು ಶಾಶ್ವತ ಸಿಬ್ಬಂದಿಗಳನ್ನೊಳಗೊಂಡಿರುತ್ತದೆ. ರಾಜಕೀಯ ವಿಭಾಗದಲ್ಲಿ ರಾಷ್ಟ್ರದ ಮುಖ್ಯಸ್ಥರು ಮತ್ತು ಕಾರ್ಯಾಂಗದ ವಿವಿಧ ವಿಭಾಗಗಳ ಮುಖ್ಯಸ್ಥರು ಇರುತ್ತಾರೆ. ಇವರನ್ನು ಸಚಿವರು ಅಥವಾ ಮಂತ್ರಿಗಳೆಂದು ಕರೆಯುತ್ತಾರೆ. ಸಚಿವರು ರಾಜಕೀಯ ಮುಖಂಡರು. ಅವರು ಹೆಚ್ಚಾಗಿ ಜನರ ಪ್ರತಿನಿಧಿಗಳಾಗಿ ಚುನಾಯಿತರಾಗುತ್ತಾರೆ. ಅವರ ಎಲ್ಲ ನೀತಿ–ನಿರ್ಧಾರಗಳಿಗೆ ಸಾರ್ವಜನಿಕರ ಮುಂದೆ ಜವಾಬ್ದಾರರಾಗಿರುತ್ತಾರೆ. ರಾಜಕೀಯ ವಿಭಾಗದವರು ಸುಮಾರು 5 ವರ್ಷಗಳ ನಿಗದಿತ ಅವಧಿಗೆ ಕೆಲಸ ಮಾಡುತ್ತಾರೆ. ಶಾಶ್ವತ ಅಥವಾ ಖಾಯಂ ವಿಭಾಗವು ನಾಗರಿಕ ಸೇವಕರನ್ನು ಒಳಗೊಂಡಿರುತ್ತದೆ. ಇವರು ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುವ ಮೂಲಕ ದಿನನಿತ್ಯದ ಆಡಳಿತವನ್ನು ನಿರ್ವಹಿಸುತ್ತಾರೆ. ಈ ನೌಕರರು ರಾಜಕೀಯವಾಗಿ ತಟಸ್ಥರು. ಅವರು ಯಾವುದೇ ರಾಜಕೀಯ ಪಕ್ಷವನ್ನು ಪ್ರತಿನಿಧಿಸುವುದಿಲ್ಲ. ಅವರು ಸರ್ಕಾರದ ಕಾನೂನು ಮತ್ತು ನೀತಿನಿಯಮಗಳನ್ನು ಯಾವುದೇ ರಾಜಕೀಯ ಅಂಶಗಳ ಪರಿಗಣನೆ ಇಲ್ಲದೆ ನಿರ್ವಹಿಸುತ್ತಾರೆ. ಅಗತ್ಯ ಮಾಹಿತಿಯನ್ನು ಸಂಗ್ರಹಿಸಿ, ವರ್ಗೀಕರಿಸಿ, ಪ್ರಸ್ತುತಪಡಿಸುತ್ತಾರೆ.

**ಕಾರ್ಯಾಂಗದ ಚಟುವಟಿಕೆಗಳು :**

- ಕಾನೂನುಗಳ ಅನುಷ್ಠಾನ ಮತ್ತು ಜಾರಿಗೊಳಿಸುವಿಕೆ
- ನೇಮಕಾತಿ ಕಾರ್ಯಗಳು
- ರಕ್ಷಣೆ, ಯುದ್ಧ ಮತ್ತು ಶಾಂತಿ ನಿರ್ವಹಣಾ ಕಾರ್ಯಗಳು
- ವಿದೇಶೀ ನೀತಿ ರಚನೆ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ನಿರ್ವಹಣೆ
- ಹಣಕಾಸು ಸಂಬಂಧಿತ ಕಾರ್ಯಗಳು
- ಬಿರುದು, ಸಮ್ಮಾನ ಮತ್ತು ಗೌರವಗಳ ಅನುದಾನ ಇತ್ಯಾದಿ.

ಕಾರ್ಯಾಂಗದ ರಚನೆ: ಭಾರತದ ರಾಷ್ಟ್ರಪತಿಗಳು ರಾಷ್ಟ್ರದ ಮುಖ್ಯಸ್ಥರು. ಅವರನ್ನು ದೇಶದ ಮೊದಲ ಪ್ರಜೆ ಎಂದು ಗುರುತಿಸಲಾಗುತ್ತದೆ. ಸರ್ಕಾರದ ಎಲ್ಲ ಕಾರ್ಯಕ್ರಮಗಳು ಔಪಚಾರಿಕವಾಗಿ ಅವರ ಹೆಸರಿನಲ್ಲಿ ನಡೆಯುತ್ತವೆ. ಅವರು ಸಂಸತ್ತಿನ ಸದಸ್ಯರಾಗಿರುತ್ತಾರೆ. ರಾಷ್ಟ್ರಪತಿಗಳ ಕೆಳಗೆ ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳಿರುತ್ತಾರೆ. ರಾಷ್ಟ್ರಪತಿಗಳ ಸರ್ಕಾರದ ಔಪಚಾರಿಕ ಮುಖ್ಯಸ್ಥರಾಗಿರುತ್ತಾರೆ. ಸಂಸತ್ತಿನ ಸದಸ್ಯರು ಮತ್ತು ಶಾಸಕಾಂಗ ಸಭೆಯ ಸದಸ್ಯರು ರಾಷ್ಟ್ರಪತಿಗಳನ್ನು ಚುನಾಯಿಸುತ್ತಾರೆ. ರಾಷ್ಟ್ರಪತಿಗಳಿಗೆ ಕಾರ್ಯನಿರ್ವಾಹಕ, ನ್ಯಾಯಾಂಗ ಶಾಸಕಾಂಗದ ವಿವಿಧ ಅಧಿಕಾರಗಳಿದ್ದರೂ ಭಾರತದ ಸಂಸದೀಯ ವ್ಯವಸ್ಥೆಯಲ್ಲಿ ಅವುಗಳನ್ನು ವಾಸ್ತವವಾಗಿ ಶಾಸಕರ ಸಲಹೆಯ ಮೇರೆಗೆ ಅನ್ವಯಿಸಲಾಗುವುದು. ಉಪ ರಾಷ್ಟ್ರಪತಿಗಳನ್ನು ಸಂಸತ್ತಿನ ಸದಸ್ಯರು ಚುನಾಯಿಸುತ್ತಾರೆ.

**ಶಾಸಕಾಂಗ**

ಚುನಾಯಿತ ಪ್ರತಿನಿಧಿಗಳೆಲ್ಲರೂ ಒಟ್ಟಾಗಿ ಸೇರುವ ಅಂಗಸಂಸ್ಥೆಯೇ ಸಂಸತ್ತು ಅಥವಾ ಶಾಸಕಾಂಗ. ಇದು ದೇಶದ ಸರ್ವೋಚ್ಚ ಶಾಸಕಾಂಗ ಸಂಸ್ಥೆ. ಸಂಸತ್ತಿನಲ್ಲಿ ಎರಡು ಮನೆಗಳಿವೆ. ಒಂದು ರಾಜ್ಯಸಭೆ(ಮೇಲ್ಮನೆ) ಎರಡು, ಲೋಕಸಭೆ(ಕೆಳಮನೆ).ಸಂಸತ್ತು ಕೇಂದ್ರ ಶಾಸಕಾಂಗವಾಗಿದ್ದು ರಾಜ್ಯದ ಶಾಸಕಾಂಗವನ್ನು ರಾಜ್ಯಶಾಸಕಾಂಗ ಎಂದು ಕರೆಯಲಾಗುತ್ತದೆ. ಸಂಸತ್ತು ಕಾನೂನು ರೂಪಿಸುವ ಸಂಸ್ಥೆ ಮಾತ್ರವಲ್ಲದೆ, ಪ್ರಜಾಪ್ರಭುತ್ವದ ಎಲ್ಲ ಚಟುವಟಿಕೆಗಳ ಕೇಂದ್ರವಾಗಿದೆ. ರಾಜ್ಯಸಭೆಯು ಪರೋಕ್ಷವಾಗಿ ಚುನಾಯಿತವಾದ ಸಂಸ್ಥೆಯಾಗಿದ್ದು ರಾಜ್ಯಗಳನ್ನು ಪ್ರತಿನಿಧಿಸುತ್ತದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಯ ಸದಸ್ಯರನ್ನು ಜನರು ನೇರವಾಗಿ ಚುನಾಯಿಸುತ್ತಾರೆ. ಅವರ ಸದಸ್ಯತ್ವದ ಅವಧಿ 5 ವರ್ಷಗಳು. ಸಂಸತ್ತು ಸರ್ವೋಚ್ಚ ಸಂಸ್ಥೆಯಾಗಿರುವುದರಿಂದ ಅದರ ಕೆಳಗೆ ಬರುವ ಯಾವುದೇ ಚರ್ಚೆಗೆ ಮಿತಿ ಇರುವುದಿಲ್ಲ. ಸಂವಿಧಾನದಲ್ಲಿ ಅಗತ್ಯವಾದ ಬದಲಾವಣೆಗಳನ್ನು ಚರ್ಚಿಸುವ ಮತ್ತು ತಿದ್ದುಪಡಿಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಸಂಸತ್ತು ಹೊಂದಿದೆ. ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳ ಚುನಾವಣಾ ಅಧಿಕಾರವನ್ನೂ ಸಂಸತ್ತು ಹೊಂದಿದೆ. ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ, ಹಾಗೂ ಸುಪ್ರೀಂ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರನ್ನು ತೆಗೆದುಹಾಕಲು ಸೂಚಿಸುವ ಅಧಿಕಾರವನ್ನು ಹೊಂದಿರುವುದರಿಂದ ಸಂಸತ್ ನ್ಯಾಯಾಂಗ ಅಧಿಕಾರವನ್ನೂ ಹೊಂದಿದೆ.

**ನ್ಯಾಯಾಂಗ**

ಇದು ನ್ಯಾಯಾಲಯಗಳ ಒಂದು ಶ್ರೇಣಿಯನ್ನು ಪ್ರತಿನಿಧಿಸುತ್ತದೆ. ಸುಪ್ರೀಂ ಅಥವಾ ಸರ್ವೋಚ್ಚ ನ್ಯಾಯಾಲಯವು ಅತ್ಯುನ್ನತವಾದುದು. ಅದರ ಅಡಿಯಲ್ಲಿ ರಾಜ್ಯಮಟ್ಟದ ನ್ಯಾಯಾಲಯ ಇರುತ್ತದೆ. ಸುಪ್ರೀಂ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರನ್ನು ಭಾರತದ ಮುಖ್ಯ ನ್ಯಾಯಮೂರ್ತಿಯವರೊಡನೆ ಚರ್ಚಿಸಿ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ. ಸುಪ್ರೀಂಕೋರ್ಟಿನ ಅತ್ಯಂತ ಹಿರಿಯ ನ್ಯಾಯಾಧೀಶರನ್ನು ಭಾರತದ ಮುಖ್ಯ ನ್ಯಾಯಮೂರ್ತಿಗಳಾಗಿ ಆಯ್ಕೆ ಮಾಡಲಾಗುತ್ತದೆ.

**ಸರ್ಕಾರದ ವಿವಿಧ ಹಂತಗಳು**

ಭಾರತ ಸರ್ಕಾರದಲ್ಲಿ ಮೂರು ಹಂತಗಳಿವೆ. ಅವು ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಹಂತಗಳು. ವಿವಿಧ ಹಂತದ ಆಡಳಿತಾಧಿಕಾರಿಗಳನ್ನು ಚುನಾವಣೆಯ ಮೂಲಕ ನೇಮಿಸಲಾಗುತ್ತದೆ. ಕೇಂದ್ರದಲ್ಲಿನ ಚುನಾವಣೆಯನ್ನು ಲೋಕಸಭಾ ಚುನಾವಣೆ ಎಂದು ಕರೆಯಲಾಗುತ್ತದೆ. ಇದರಲ್ಲಿ ಚುನಾಯಿತರಾದವರು ಸಂಸತ್ ಸದಸ್ಯರಾಗಿರುತ್ತಾರೆ. ರಾಜ್ಯಮಟ್ಟದಲ್ಲಿನ ಚುನಾವಣೆಯನ್ನು ವಿಧಾನಸಭಾ ಚುನಾವಣೆ ಎಂದು ಕರೆಯಲಾಗುತ್ತದೆ. ಚುನಾಯಿತ ಪ್ರತಿನಿಧಿ ವಿಧಾನಸಭಾ ಸದಸ್ಯರಾಗುತ್ತಾರೆ. ಸ್ಥಳೀಯ ಆಡಳಿತಕ್ಕಾಗಿ ಮಹಾನಗರ ಪಾಲಿಕೆಗಳು ಮತ್ತು ಪಂಚಾಯಿತಿ ವ್ಯವಸ್ಥೆಗಳಿವೆ. ಸಂವಿಧಾನದ 73ನೇ ತಿದ್ದುಪಡಿಯ ಪ್ರಕಾರ ಎಲ್ಲ ರಾಜ್ಯಗಳಲ್ಲಿ ಮೂರು ಹಂತದ ಪಂಚಾಯಿತಿ ವ್ಯವಸ್ಥೆ ಇದೆ. ಅವುಗಳೆಂದರೆ, ಗ್ರಾಮಪಂಚಾಯಿತಿ, ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ.

## ಶೈಕ್ಷಣಿಕ ನಿಹಿತಾರ್ಥಗಳು

- ಶಿಕ್ಷಣದ ಮೂಲಕ ನಮ್ಮ ಸಂವಿಧಾನದ ಮೂಲಭೂತ ಅಂಶಗಳನ್ನು ಹಂತಹಂತವಾಗಿ ಅರ್ಥಮಾಡಿಸಬೇಕು;
- ಸಂವಿಧಾನದ ಘನತೆ ಮತ್ತು ಗೌರವಗಳನ್ನು ಮನಗಾಣಿಸಿ, ಪ್ರತಿ ಹಂತದಲ್ಲೂ ಪ್ರತಿ ವಿಷಯದಲ್ಲೂ ವಿದ್ಯಾರ್ಥಿಗಳು ಸಂವಿಧಾನದ ತತ್ವಗಳಿಗೆ ಬದ್ಧರಾಗುವಂತೆ ಸಿದ್ಧಗೊಳಿಸಬೇಕು
- ಸಂವಿಧಾನದ ಅನುಸರಣೆಯಿಂದಾಗುವ ಪ್ರಯೋಜನಗಳನ್ನು ಮನದಟ್ಟು ಮಾಡಬೇಕು
- ರಾಷ್ಟ್ರದ ನಾಯಕರಲ್ಲಿರಬೇಕಾದ ಗುಣಗಳನ್ನು ಶಿಕ್ಷಣದ ಪ್ರಾಥಮಿಕ ಹಂತದಿಂದಲೇ ಮೂಡಿಸಲು ಪ್ರಯತ್ನಿಸಬೇಕು
- ಪೌರರ ಹಕ್ಕುಗಳನ್ನೂ ಕರ್ತವ್ಯಗಳನ್ನೂ ಜವಾಬ್ದಾರಿಗಳನ್ನೂ ಮನದಟ್ಟುಮಾಡುವುದಲ್ಲದೆ ಅದನ್ನು ಅನ್ವಯಿಸಿಕೊಳ್ಳುವ ಜೀವನ ಶೈಲಿಯನ್ನು ಬೆಳೆಸಬೇಕು
- ಶಾಲೆಯು ತನ್ನೆಲ್ಲ ಅಂಶಗಳಲ್ಲಿ ಪ್ರಜಾಪ್ರಭುತ್ವ ಶೈಲಿಯ ಬದುಕಿಗೆ ಮಾದರಿಯಾಗಬೇಕು
- ಸಂವಿಧಾನದ ತತ್ವಗಳನ್ನು ಮನಗಾಣಿಸುವ ನಾಯಕರ ಬದುಕನ್ನು ಕುರಿತ ಕೃತಿಗಳನ್ನು ಓದಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು
- ಸಂವಿಧಾನದ ತತ್ವಗಳನ್ನು ಮನಗಾಣಿಸುವ ಭಿತ್ತಿಚಿತ್ರಗಳನ್ನು ಶಾಲೆಗಳಲ್ಲಿ ಪ್ರದರ್ಶಿಸಬೇಕು
- ವಿದ್ಯಾರ್ಥಿಗಳಲ್ಲಿ ಉತ್ತಮ ನಾಯಕತ್ವಗುಣಗಳನ್ನು ಬಲಪಡಿಸುವ ಪ್ರಾಯೋಗಿಕ ಕಾರ್ಯಾಗಾರಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ನಿಯಮ ರೂಪಿಸಬೇಕು
- ಪೌರತ್ವ ತರಬೇತಿ ಶಿಬಿರಗಳನ್ನು ಶೈಕ್ಷಣಿಕ ಜೀವನದ ಹಲವಾರು ಹಂತಗಳಲ್ಲಿ ನಿರಂತರವಾಗಿ ಏರ್ಪಡಿಸಿ ವಿದ್ಯಾರ್ಥಿಗಳು ಕಡ್ಡಾಯವಾಗಿ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು
- ಈ ಎಲ್ಲ ಚಟುವಟಿಕೆಗಳೂ ಶಾಲೆಯ ಪಠ್ಯಕ್ರಮದ ಐಚ್ಛಿಕ ಭಾಗವಾಗಿಯಲ್ಲದೆ ಕಡ್ಡಾಯ ಭಾಗವಾಗುವಂತೆ ಗಮನ ಹರಿಸಬೇಕು
- ಪ್ರಜಾಪ್ರಭುತ್ವದ ಶೈಲಿಯ ಬದುಕು ಬದುಕಲು ಅಗತ್ಯವಾದ ಮಾದರಿಗಳನ್ನು ಶಾಲೆ ಒದಗಿಸಬೇಕು. ಅಂತಹ ಗುಣಗಳನ್ನು ವಿಶೇಷವಾಗಿ ಹೊಂದಿದವರನ್ನು ಗುರುತಿಸಿ ಪ್ರೋತ್ಸಾಹಕಗಳನ್ನು ನೀಡಬೇಕು.
- ಮೌಲ್ಯಯುತ ಬದುಕು ಬದುಕುವವರನ್ನು ಶಾಲೆಗೆ ಕರೆಯಿಸಿ, ಸಮ್ಮಾನಿಸಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾರ್ಗದರ್ಶನ ಮಾಡುವಂತೆ ಸಭೆಗಳನ್ನು ಸಂಘಟಿಸಬೇಕು
- ಪ್ರಜಾಪ್ರಭುತ್ವದ ತತ್ವಗಳಿಗೆ ಸಂಬಂಧಿಸಿದ ವಿಚಾರಗೋಷ್ಠಿ, ಭಾಷಣ ಸ್ಪರ್ಧೆ, ಪ್ರಬಂಧಸ್ಪರ್ಧೆ ಇತ್ಯಾದಿ ಚಟುವಟಿಕೆಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು
- ಅಂತರ ಶಾಲಾ ಚಟುವಟಿಕೆಗಳು, ಅಂತರ ಜಿಲ್ಲಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಹಕಾರ, ಸಹಬಾಳ್ವೆ, ಪರಾನುಭೂತಿ, ಪ್ರೀತಿ, ವಿಶ್ವಾಸ, ಭ್ರಾತೃತ್ವ ಮುಂತಾದ ಗುಣಗಳನ್ನು ಬೆಳೆಸಬೇಕು
- ಕ್ರೀಡಾ ಚಟುವಟಿಕೆಗಳು, ದೈಹಿಕ ಶಿಕ್ಷಣದ ಚಟುವಟಿಕೆಗಳು ಮುಂತಾದವುಗಳಿಂದ ವೈಯಕ್ತಿಕ ಮತ್ತು ಸಾಮೂಹಿಕ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸಬಹುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬೆಳೆಸಲು ನಿಮ್ಮ ಶಾಲೆಯಲ್ಲಿ ಅನುವು ಮಾಡಿಕೊಡುವ ಚಟುವಟಿಕೆಗಳನ್ನು ಗುರುತಿಸಿ, ಅವುಗಳ ಸಮರ್ಪಕತೆಯನ್ನೂ ಗುರುತಿಸಿ. ಈ ದಿಶೆಯಲ್ಲಿ ಈಗಾಗಲೇ ಅಭ್ಯಾಸದಲ್ಲಿರುವ ಚಟುವಟಿಕೆಗಳನ್ನು ಉತ್ತಮಪಡಿಸಿಕೊಳ್ಳಲು ಏನು ಮಾಡಬಹುದು ಎಂಬುದನ್ನೂ ಈ ದಿಶೆಯಲ್ಲಿ ಯಾವ ಹೆಚ್ಚುವರಿ ಚಟುವಟಿಕೆಗಳನ್ನು ಪ್ರಾರಂಭಿಸಬಹುದು ಎಂಬುದನ್ನೂ ನಿಮ್ಮ ಸಹೋದ್ಯೋಗಿಗಳೊಂದಿಗೆ ಆಲೋಚಿಸಿ, ಆ ಕುರಿತ ಒಂದು ಕ್ರಿಯಾಯೋಜನೆಯನ್ನು ರೂಪಿಸಿ. ಕೆಳಗಿನ ಮಾಹಿತಿ ಪಟ್ಟಿಯನ್ನು ಬಳಸಿಕೊಳ್ಳಿ.

| ಕ್ರಮ ಸಂಖ್ಯೆ | ಈಗಾಗಲೇ ಅನುಸರಿಸುತ್ತಿರುವ ಚಟುವಟಿಕೆಗಳು | ಸಮರ್ಪಕ/ಸಮರ್ಪಕವಿಲ್ಲ | ಉತ್ತಮಪಡಿಸಲು ಸೂಚನೆಗಳು |
|---|---|---|---|
| | | | |
| | | | |
| | ಹೊಸದಾಗಿ ಅನ್ವಯಿಸಿಕೊಳ್ಳಬಹುದಾದ ಚಟುಚಟಿಕೆಗಳು | ವಿವರಗಳು | ಕಾಲಾವಧಿ (ಪ್ರತಿ ಹಂತದ ಕಾಲಾವಧಿ) |
| | | | |
| | | | |

## 2.3.4. ಸಾರಾಂಶಿಸೋಣ

- ಭಾರತವು ವಿಕಾಸದ ಪಥದಲ್ಲಿರುವ ರಾಷ್ಟ್ರ. 'ವಿಕಾಸ' ಮತ್ತು 'ರಾಷ್ಟ್ರ'ಗಳ ವ್ಯಾಖ್ಯೆಯು ಜೊತೆಯಾಗಿ ವಿಕಾಸಹೊಂದುತ್ತಿರುವ ರಾಷ್ಟ್ರಗಳ ಗುಣಲಕ್ಷಣಗಳನ್ನು ಸೂಚಿಸುತ್ತದೆ. ಅವೆಂದರೆ, ರಾಷ್ಟ್ರದ ಬೆಳವಣಿಗೆ, ಅಭಿವೃದ್ಧಿ, ಪ್ರಗತಿ, ಆಧುನೀಕರಣ ಮತ್ತು ಅಭಿವೃದ್ಧಿಯ ವ್ಯಾಪ್ತಿ.

- ಈ ಗುಣಲಕ್ಷಣಗಳು ಭಾರತಕ್ಕೆ ಸಮರ್ಪಕವಾಗಿ ಹೊಂದಿಕೆಯಾಗುತ್ತದೆ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ 'ಕಾಣ್ಕೆ' ಇರುತ್ತದೆ. ಸಮಾಜದ ಎಲ್ಲ ವರ್ಗಗಳ ಜನರಲ್ಲೂ ದೇಶವು ಪ್ರಗತಿಹೊಂದಬೇಕಾದ ರೀತಿಯನ್ನು ಕುರಿತ ಕಲ್ಪನೆಗಳು ಮತ್ತು ಅದಕ್ಕೆ ಸೂಕ್ತವಾದ ಅಭಿಪ್ರೇರಣೆಗಳನ್ನು ಜಾಗೃತಗೊಳಿಸಲು ಈ ಕಾಣ್ಕೆ ಅಗತ್ಯವಾಗುತ್ತದೆ. ಅಭಿವೃದ್ಧಿ ಕಾರ್ಯತಂತ್ರಗಳಿಗೆ ರಾಜಕೀಯ ಒಮ್ಮತವನ್ನು ನಿರ್ಮಿಸಲು 'ಕಾಣ್ಕೆಯ ಹೇಳಿಕೆ'ಗಳು ಬೇಕಾಗುತ್ತವೆ.

- ಭಾರತದ ಪ್ರಗತಿಗೆ ಸಂಬಂಧಿಸಿದಂತೆ India's Vision 2020 ದಾಖಲೆ ಅತ್ಯಂತ ಪ್ರಮುಖವಾದುದು. ಭಾರತವನ್ನು ಪ್ರಗತಿಶೀಲ ರಾಷ್ಟ್ರವಾಗಿ ಪರಿವರ್ತಿಸಲು ಇದರ ಅಡಿಯಲ್ಲಿ ಅನೇಕ ಅಂಶಗಳನ್ನು ಗುರುತಿಸಿಕೊಳ್ಳಲಾಯಿತು.

- ಪ್ರಜಾಪ್ರಭುತ್ವದ ಅಡಿಯಲ್ಲಿ ನಾವು ನಮ್ಮ ಸಂವಿಧಾನವನ್ನು ರೂಪಿಸಿಕೊಂಡಿದ್ದೇವೆ. ಸಾರ್ವಭೌಮತ್ವ, ರಾಜಕೀಯ ಸಮಾನತೆ, ಬಹುಮತದ ಆಡಳಿತ, ಒಕ್ಕೂಟ ವ್ಯವಸ್ಥೆ, ಸಾಮೂಹಿಕ ಜವಾಬ್ದಾರಿ, ಅಭಿಪ್ರಾಯ ರೂಪಣೆ, ಅಲ್ಪಸಂಖ್ಯಾತರ ಅಭಿಪ್ರಾಯಗಳಿಗೆ ಗೌರವ, ಹಕ್ಕುಗಳಿಗೆ ಅವಕಾಶ, ನ್ಯಾಯೋಚಿತ ಆಡಳಿತ, ಸಮ್ಮತಿಗನುಸಾರವಾದ ನಿಯಮ ನಿರೂಪಣೆ, ಸ್ವತಂತ್ರ ನ್ಯಾಯಾಂಗ, ಇವು ನಮ್ಮ ಸಂವಿಧಾನದ ಲಕ್ಷಣಗಳಾಗಿವೆ.

- ಧಾರ್ಮಿಕ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಒದಗಿಸುವುದು ಭಾರತದ ಜಾತ್ಯತೀತತೆಯ ಗುಣಲಕ್ಷಣವಾಗಿವೆ.
- ಭಾರತ ಸಂಯುಕ್ತ ಸ್ವರೂಪದ ಸಂವಿಧಾನವನ್ನು ಹೊಂದಿದೆ. ರಾಷ್ಟ್ರವ್ಯಾಪ್ತಿಯ ಅಧಿಕಾರ ಹೊಂದಿರುವ ಒಂದು ಸರ್ಕಾರದೊಂದಿಗೆ ಅದರ ಅನೇಕ ರಾಜ್ಯಗಳ ನಡುವಿನ ಅಧಿಕಾರದ ಸಾಂವಿಧಾನಿಕ ವಿಭಜನೆಯೇ ಸಂಯುಕ್ತ ಸಂವಿಧಾನ. ಈ ರಾಜ್ಯಗಳು ತಮ್ಮದೇ ಆದ ವ್ಯಾಪ್ತಿಯನ್ನು ಹೊಂದಿ ಸ್ವತಂತ್ರವಾಗಿರುತ್ತವೆ. ಅಲ್ಲದೆ ರಾಜ್ಯಗಳ ಸಮೂಹವು ಇಡೀ ರಾಷ್ಟ್ರವನ್ನು ಪ್ರತಿನಿಧಿಸುತ್ತದೆ. ಸಂಯುಕ್ತ ಆಡಳಿತ ಸ್ವರೂಪದ ಭಾರತದಲ್ಲಿ ಅಧಿಕಾರವನ್ನು ಮೂರು ಸಮಾನ ಸಂಸ್ಥೆಗಳಿಗೆ ವಿತರಿಸಲಾಗಿದೆ. ಅವೆಂದರೆ, ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ

## 2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

ನಿಮ್ಮ ಲೇಖನವನ್ನು ನಿಮ್ಮ ಸಹಪಾಠಿಗಳೊಂದಿಗೆ/ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು, ಅವರ ಹಿಮ್ಮಾಹಿತಿ ಮತ್ತು ಅಭಿಪ್ರಾಯಗಳನ್ನು ಅನ್ವಯಿಸಿ, ಲೇಖನವನ್ನು ಮೌಲ್ಯೀಕರಿಸಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

ಕ್ರಿಯಾಯೋಜನೆಯನ್ನು ನಿಮ್ಮ ಸ್ಥಳದ ಇತರ ಅಧ್ಯಾಪಕರೊಂದಿಗೆ ಚರ್ಚಿಸಿ, ಉತ್ತಮೀಕರಿಸಿ, ನಿಮ್ಮ ಶಾಲೆಯಲ್ಲಿ ಅನ್ವಯಿಸಿ. ಆ ಕುರಿತ ಸಂಗ್ರಹವಾದ ವರದಿ ತಯಾರಿಸಿ, ಈ ಪ್ರೊಜೆಕ್ಟಿನ ವಿವರಗಳನ್ನು ನಿಮ್ಮ ಸಹಪಾಠಿಗಳೊಂದಿಗೆ ಹಂಚಿಕೊಳ್ಳಿ.

## 2.3.6. ಘಟಕಾಂತ್ಯ ಅಭ್ಯಾಸಗಳು

1. ಭಾರತದ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ವ್ಯವಸ್ಥೆಯ ಲಕ್ಷಣಗಳನ್ನು ವಿವರಿಸಿ
2. ಭಾರತದ ಒಕ್ಕೂಟ ವ್ಯವಸ್ಥೆಯನ್ನು ಕುರಿತ ವಿವರಗಳನ್ನು ನೀಡಿರಿ.

## 1.3.7. ಪರಾಮರ್ಶನ ಸೂಚಿ


1. https://en.wikipedia.org/wiki/India_Vision_2020
2. India 2020 : A Vision for the New Millennium is a book. Dr. A P J Abdul Kalam and Dr. Y S Rajan. 1998

   https://www.outlookindia.com/website/story/the-vision-of-india/216569
3.
4. Indian polity. M. Lakshmikanth, McGrawHill,,2013
5. Wizard Indian polity and Constitution. John Mathew and Manish K Gautam. Wizard, 2015 https://www.indianfolk.com/federal-structure-indian-constitution/
6. http://www.yourarticlelibrary.com/indian-constitution/7-main-federal-features-of-the-indian-constitution/24924

7. https://www.importantindia.com/16678/nature-of-indian-constitution-federal-or-unitary-or-quasi-federal/
8. https://www.india.gov.in/my-government/constitution-india
9. http://constitutionnet.org/vl/item/basic-structure-indian-constitution
10. https://www.hierarchystructure.com/indian-political-hierarchy/
11. https://www.tutorialspoint.com/indian_polity/indian_politics_environment.htm
12.

*************

# ಬ್ಲಾಕ್–2: ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು

## ಘಟಕ–4: ಪೌರರ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು

## ಘಟಕದ ರಚನೆ


2.4.1. ಕಲಿಕಾ ಉದ್ದೇಶಗಳು

2.4.2. ಪೀಠಿಕೆ

2.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.4.3.1. ಮೂಲಭೂತ ಹಕ್ಕುಗಳ ಅರ್ಥ, ಪ್ರಾಮುಖ್ಯತೆ ಮತ್ತು ವರ್ಗೀಕರಣ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

2.4.3.2. ಮೂಲಭೂತ ಹಕ್ಕುಗಳ ನಿರ್ದಿಷ್ಟ ಅವಕಾಶಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

2.4.3.3. ಮೂಲಭೂತ ಕರ್ತವ್ಯಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 3

2.4.3.4. ಸಾರಾಂಶಿಸೋಣ

2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

2.4.6. ಘಟಕಾಂತ್ಯ ಅಭ್ಯಾಸಗಳು

2.4.7. ಪರಾಮರ್ಶನ ಸೂಚಿ


## 2.4.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಪರಿಕಲ್ಪನೆಗಳನ್ನು ವಿವರಿಸುವರು;
- ಮೂಲಭೂತ ಹಕ್ಕುಗಳ ಪರಿಕಲ್ಪನೆ ಮೂಡಿಬಂದ ರೀತಿ ಮತ್ತು ಅವುಗಳ ಮಹತ್ವವನ್ನು ವಿಶ್ಲೇಷಿಸುವರು;
- ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಸ್ವರೂಪವನ್ನು ಪ್ರಶಂಶಿಸುವರು; ಮತ್ತು
- ದೇಶಭಕ್ತಿಯನ್ನು ಬೆಳೆಸಿಕೊಂಡು ಜನರಲ್ಲಿ ಏಕತೆಯ, ಜವಾಬ್ದಾರಿಯ ಭಾವನೆಯನ್ನು ಬೆಳೆಸಲು ಸಮರ್ಥರಾಗುವರು.

## 2.1.4. ಪೀಠಿಕೆ

ಈ ಹಿಂದಿನ ಮೂರು ಘಟಕಗಳಲ್ಲಿ ನಾವು ನಮ್ಮ ದೇಶದ ಶಿಕ್ಷಣದ ಹಿನ್ನೆಲೆಯಲ್ಲಿ ನಮ್ಮ ಪ್ರಜಾಸತ್ತಾತ್ಮಕ ಮತ್ತು ರಾಜಕೀಯ ಅಂಶಗಳನ್ನು ಕುರಿತು ಅಧ್ಯಯನ ಮಾಡಿದ್ದೇವೆ. ನಮ್ಮ ರಾಷ್ಟ್ರೀಯ ಆದರ್ಶಗಳ ವಿಶೇಷ

ಉಲ್ಲೇಖಗಳೊಂದಿಗೆ, ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನೂ ಗುರುತಿಸಿಕೊಂಡಿದ್ದೇವೆ. ಪ್ರಜಾಪ್ರಭುತ್ವದ ಯಶಸ್ಸು, ಸರ್ಕಾರ ಮತ್ತು ಜನರ ನಡುವಣ ಕೊಡು–ಕೊಳ್ಳುವಿಕೆ ಅಥವಾ ವಿನಿಮಯ ಸ್ವರೂಪವನ್ನು ಅವಲಂಬಿಸಿದೆ. ಸರ್ಕಾರ ಕೆಲವು ಹಕ್ಕುಗಳನ್ನು ಜನತೆಗೆ ಕೊಡಮಾಡುವಂತೆಯೇ ಕೆಲವು ವರ್ತನೆಗಳನ್ನು ನಿರೀಕ್ಷಿಸುತ್ತದೆ. ಈ ಕೊಡು–ಕೊಳ್ಳುವಿಕೆಯನ್ನೇ 'ನಾಗರಿಕರ ಹಕ್ಕು ಮತ್ತು ಕರ್ತವ್ಯ'ಗಳೆಂದು ಹೇಳಬಹುದು. ನಾಗರಿಕರು ತಮ್ಮ ಹಕ್ಕುಗಳನ್ನು ಅನುಭವಿಸಿ ಅಪೇಕ್ಷಿತವಾದ ಕರ್ತವ್ಯವನ್ನು ಕಾರ್ಯಗತಗೊಳಿಸಲು ಮಾಡಿಕೊಟ್ಟಿರುವ ಅವಕಾಶಗಳನ್ನು ವಿವರವಾಗಿ ತಿಳಿಯೋಣ.

ಕಳೆದ ನಾಲ್ಕೈದು ಶತಮಾನದ ಚಿಂತನೆಗಳ, ಚರ್ಚೆಗಳ ಫಲವೆಂದರೆ, ಮಾನವನಿಗೆ ದೊರೆತಿರುವ ನಿರ್ದಿಷ್ಟವಾದ, ಅವಶ್ಯಕವಾದ, ಮೂಲಭೂತವೂ ಸ್ವಾಭಾವಿಕವೂ ಪರಭಾರೆ ಮಾಡಲು ಸಾಧ್ಯವಾಗದುದೂ ಆದ ಹಕ್ಕು ಅಥವಾ ಸ್ವಾತಂತ್ರ್ಯ. ಈ ಸ್ವಾತಂತ್ರ್ಯವನ್ನು ಗುರುತಿಸಲು ಮತ್ತು ಅದರೊಂದಿಗೆ ಬದುಕಲು ಅನುವು ಮಾಡಿಕೊಡುವುದು ರಾಜ್ಯಗಳ ಕಾರ್ಯವಾಗಿದೆ. ಇದು ಮಾನವನ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ, ಮಾನವನ ವ್ಯಕ್ತಿತ್ವವನ್ನು ಬೆಳೆಸುವಲ್ಲಿ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಜೀವನವನ್ನು ಉತ್ತೇಜಿಸುವಲ್ಲಿ ಸಹಕಾರಿಯಾಗಿದೆ. ಇದಕ್ಕೆ ಸ್ವಾಭಾವಿಕ ನಿಯಮ ಸಿದ್ಧಾಂತದ ಬೆಂಬಲವಿದೆ. ಈ ಸಿದ್ಧಾಂತವು ಹೇಳುವಂತೆ 'ಸ್ವಾಭಾವಿಕ ಕ್ರಮಗಳು ವಿಶ್ವದಲ್ಲಿ ಸಾರ್ವತ್ರಿಕವಾಗಿ ಅಸ್ತಿತ್ವದಲ್ಲಿವೆ. ಏಕೆಂದರೆ ನಿಸರ್ಗವೇ ಮಾನವನಾದಿಯಾಗಿ ಎಲ್ಲವನ್ನೂ ಸೃಷ್ಟಿಮಾಡಿದೆ. ಇದನ್ನು ಮಾನವನ ವಿವೇಚನೆ ಕಂಡುಕೊಳ್ಳಬಹುದು ಎಂದು ರೋಮನ್ ತತ್ವಶಾಸ್ತ್ರಜ್ಞ ಸಿಸಿರೊ ತಿಳಿಸಿದ್ದಾನೆ. ಈ ಚಿಂತನೆಯೇ ಮಾನವ ಹಕ್ಕುಗಳನ್ನು ಕುರಿತ ಅರಿವನ್ನು ಮೂಡಿಸಿದೆ. ಮಾನವನ ಹಕ್ಕುಗಳ ಅರಿವು ಮತ್ತು ಅನ್ವಯ ಹಲವಾರು ಐತಿಹಾಸಿಕ ಘಟನೆಗಳ ಸರಣಿಯಿಂದ ಪುಷ್ಟಿಗೊಂಡಿತು. ಅವುಗಳಲ್ಲಿ ಮುಖ್ಯವಾದುವುಗಳೆಂದರೆ:

- ಇಂಗ್ಲಿಷ್ (ಇಂಗ್ಲಿಷರ) ಹಕ್ಕುಗಳ ಮಸೂದೆ (1698)
- ಮಾನವ ಮತ್ತು ನಾಗರಿಕ ಹಕ್ಕು ಅಥವಾ 'ಮಾನವ ಘನತೆ'ಯ ಫ್ರೆಂಚ್ ಘೋಷಣೆ(1789)
- ಯು.ಎಸ್. ನ ಹಕ್ಕುಗಳ ಕರಡು ಮಸೂದೆ
- ನೆಹರು ಆಯೋಗ (1928)
- ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (1948)

ಮುಂದೆ, ಬ್ರಿಟಿಷ್ ಆಡಳಿತದಲ್ಲಿ ಭಾರತೀಯರ ಬವಣೆ, ವಿದ್ಯಾರ್ಥಿ ಸಮೂಹ ಪ್ರಜಾಪ್ರಭುತ್ವ ವಿಚಾರಗಳಿಗೆ ತೆರೆದುಕೊಂಡದ್ದು, ಬ್ರಿಟಿಷ್ ರಾಜಕೀಯ ಪಕ್ಷಗಳ ಕಾರ್ಯಕಲಾಪಗಳ ರೀತಿ ಮತ್ತು ಭಾರತದಲ್ಲಿನ ಬಹುಭಾಷಾ ಧರ್ಮಗಳ ಸನ್ನಿವೇಶ ಇವು ಮೂಲಭೂತ ಅಗತ್ಯಗಳ ಅಗತ್ಯವನ್ನು ಬಲಪಡಿಸಿದವು. ಇವೆಲ್ಲದರಿಂದಾಗಿ, 26ನೇ ಜನವರಿ 1950ರಂದು ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಅಂಗೀಕರಿಸಿ ಅಳವಡಿಸಿಕೊಳ್ಳಲಾಯಿತು.

## 2.4.3. ಕಲಿಕಾ ಅಂಶಗಳು ಮತ್ತು ಚಟುವಟಿಕೆಗಳು

### 2.4.3.1. ಮೂಲಭೂತ ಹಕ್ಕುಗಳ ಅರ್ಥ, ಪ್ರಾಮುಖ್ಯತೆ ಮತ್ತು ವರ್ಗೀಕರಣ

ಹಕ್ಕು ಎಂಬುದು ಸಾಮಾನ್ಯವಾಗಿ ವ್ಯಕ್ತಿಯ ವಿವೇಚನಾತ್ಮಕವಾದ ಕೋರಿಕೆ, ಸಮಾಜದಿಂದ ಅದನ್ನು ಗುರುತಿಸಿರುವಿಕೆ ಮತ್ತು ಕಾನೂನಿನ ಪ್ರಕಾರ ಅದರ ಮಂಜೂರು–ಈ ಅಂಶಗಳನ್ನು ಸೂಚಿಸುತ್ತದೆ. ವಿಶಾಲಾರ್ಥದಲ್ಲಿ ಮೂಲಭೂತ ಹಕ್ಕುಗಳು ಮೂಲಭೂತವಾದ ಅಥವಾ ಅತ್ಯಗತ್ಯವಾದ ಹಕ್ಕನ್ನು ಕುರಿತು ಹೇಳುತ್ತದೆ. ಭಾರತದ ಸಂವಿಧಾನದ ಪ್ರಕಾರ, ಪ್ರತಿಯೊಬ್ಬ ನಾಗರಿಕನು ಅವನ ಸಾಮರಸ್ಯಯುತವಾದ ವ್ಯಕ್ತಿತ್ವದ ಬೆಳವಣಿಗೆಗಾಗಿ, ಅನುಭವಿಸಲು ನೀಡಿರುವ ಸ್ವಾತಂತ್ರ್ಯ ಅಥವಾ ಹಕ್ಕುಗಳು ಮೂಲಭೂತ ಹಕ್ಕುಗಳು. ಮೂಲಭೂತ ಹಕ್ಕುಗಳನ್ನು ಸರ್ಕಾರದ ಹಸ್ತಕ್ಷೇಪದ ನಡುವೆಯೂ ಅತಿ ಹೆಚ್ಚಿನ ಮಟ್ಟದ ರಕ್ಷಣೆ ಪಡೆಯುವಂತಹವುಗಳು ಎಂದು ಪರಿಗಣಿಸಲಾಗಿದೆ.

ಈ ಹಕ್ಕುಗಳು ಸುರಕ್ಷಿತವೂ ಖಾತರಿಪಡಿಸಿರುವಂತಹುದೂ ಹೌದು. ಸುಪ್ರೀಂಕೋರ್ಟಿನ ಪ್ರಕಾರ ಇವು 'ನ್ಯಾಯೋಚಿತವವೂ ಕಾನೂನುಬದ್ಧವಾದವೂ' ಹೌದು. ಈ ಹಕ್ಕುಗಳು ಸಾರ್ವತ್ರಿಕವಾದವುಗಳು ಕೂಡ. ಇವು ಯಾವುದೇ ಜಾತಿ, ಮತ, ಧರ್ಮ, ಹುಟ್ಟಿದ ಸ್ಥಳ ಅಥವಾ ಲಿಂಗತ್ವಗಳ ಭೇದಭಾವವಿಲ್ಲದೆ ಎಲ್ಲ ನಾಗರಿಕರಿಗೂ ಅನ್ವಯವಾಗುತ್ತವೆ. ಅವುಗಳನ್ನು ಮಾನವ ಹಕ್ಕುಗಳು ಅಥವಾ ಸ್ವಾಭಾವಿಕ ಹಕ್ಕುಗಳು ಎಂದು ಕರೆಯಲಾಗಿದ್ದು, ಕಾನೂನಾತ್ಮಕವಾದ ಹಕ್ಕುಗಳಿಗಿಂತ ಹೆಚ್ಚಿನ ಪಾವಿತ್ರ್ಯತೆಯನ್ನು ಇವು ಅಪೇಕ್ಷಿಸುತ್ತವೆ. ಇವು 'ಭಾರತದ ವೈಯಕ್ತಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಮಾಗ್ನಕಾರ್ಟ' ಅಥವಾ 'ಭಾರತದ ಮಹಾಸನ್ನದು' ಎಂದು ಜನಪ್ರಿಯವಾಗಿವೆ.

ಮೂಲಭೂತ ಹಕ್ಕುಗಳು ವ್ಯಕ್ತಿಯ ಬೌದ್ಧಿಕ, ನೈತಿಕ ಮತ್ತು ಆಂತರಿಕ ಸ್ಥಿತಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಕಾರಣವಾಗುವುದರಿಂದ, ಭಾರತ ಸಂವಿಧಾನದ ಪ್ರಮುಖ ಭಾಗವಾಗಿ ಪರಿಗಣಿತವಾಗಿದೆ. ಇದು ರಾಷ್ಟ್ರಕ್ಕೆ ಒಂದು ರೀತಿಯ ಸುಭದ್ರತೆ ಮತ್ತು ಸ್ವಾಮ್ಯತೆಯ ಭಾವವನ್ನು ಉಂಟುಮಾಡುತ್ತದೆ. ಇದು ನಾಗರಿಕನಿಗೆ ನ್ಯಾಯಾಂಗದ ಮೇಲೆ ಭರವಸೆ ಇಟ್ಟು ಘನತೆಯಿಂದ ಬದುಕಲು, ಸಮಾಜದಿಂದೇನಾದರೂ ವಿಷಮ ಪರಿಸ್ಥಿತಿ ಉಂಟಾದರೆ ಅದರ ವಿರುದ್ಧ ಹೋರಾಡಲು ಸಹಾಯಮಾಡುತ್ತದೆ.

ಪ್ರಜಾಪ್ರಭುತ್ವ ಎಂಬುದು ನಿಜವಾಗಿ, ಜನರ ಅಭಿಪ್ರಾಯದ ಸರ್ಕಾರ. ಹಾಗಾಗಿ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನರಿಗೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಒಂದು ಮಾರ್ಗವನ್ನು ಕಲ್ಪಿಸಿಕೊಡಬೇಕು ಎಂದು ಸಂವಿಧಾನ ರಚನಕಾರರು ಭಾವಿಸಿದ ಕಾರಣ, ಮೂಲಭೂತ ಹಕ್ಕುಗಳನ್ನು ಸಂವಿಧಾನದ ಭಾಗವಾಗಿ ಸೇರಿಸಲಾಯಿತು. ಈ ಉದ್ದೇಶಕ್ಕಾಗಿಯೇ ಸಂವಿಧಾನವು ಭಾರತದ ಎಲ್ಲ ಪ್ರಜೆಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ಇತರ ಸ್ವಾತಂತ್ರ್ಯಗಳನ್ನು ಮೂಲಭೂತ ಹಕ್ಕುಗಳ ರೂಪದಲ್ಲಿ ಖಾತರಿಪಡಿಸಿದೆ.

ಭಾರತ ಸಂವಿಧಾನದ 13ನೇ ವಿಧಿಯು ಮೂಲಭೂತ ಹಕ್ಕುಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ. ಅದರ ಪ್ರಕಾರ 'ಕಾನೂನು ಎಂಬುದು ಯಾವುದೇ ಅಧ್ಯಾದೇಶ, ಆದೇಶ, ಉಪವಿಧಿ, ನಿಯಮ, ವಿನಿಮಯ, ಅಧಿಸೂಚನೆ ಅಥವಾ ಭಾರತದ ರಾಜ್ಯಕ್ಷೇತ್ರದಲ್ಲಿ ಕಾನೂನಿನ ಪ್ರಭಾವವುಳ್ಳ ರೂಢಿ, ಆಚರಣೆ ಮುಂತಾದವುಗಳನ್ನು ಒಳಗೊಳ್ಳುತ್ತದೆ. ಹಾಗಾಗಿ ಇದು ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವ ಕಾನೂನುಗಳು ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಶೂನ್ಯವಾಗಿರುತ್ತದೆ ಎಂದಿದೆ. ಮೂಲಭೂತ ಹಕ್ಕನ್ನು ಉಲ್ಲಂಘಿಸುವ ಯಾವುದೇ ಕಾನೂನು ಅಸಂವಿಧಾನಿಕ ಎಂದು ಪರಿಗಣಿತವಾಗುತ್ತದೆ ಎಂದು ಇದು ಸ್ಪಷ್ಟಪಡಿಸುತ್ತದೆ. ಮೂಲಭೂತ ಹಕ್ಕುಗಳು ಕೇವಲ ರಕ್ಷಣೆಯನ್ನು ಒದಗಿಸುವುದು ಮಾತ್ರವಲ್ಲದೆ, ಜನರ ಸ್ಥಿತಿಗತಿ ಮತ್ತು ವ್ಯಕ್ತಿತ್ವವನ್ನು ಉತ್ತಮಪಡಿಸುತ್ತದೆ. ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವ ಹಕ್ಕನ್ನು ನೀಡುವ ಮೂಲಕ ಜನರಿಗೆ ನ್ಯಾಯದ ಲಭ್ಯತೆಯನ್ನು ಖಚಿತಪಡಿಸಿದೆ.

### ಮೂಲಭೂತ ಹಕ್ಕುಗಳನ್ನು ಕುರಿತ ವಿವರ ಎಲ್ಲಿ ಸಿಗುತ್ತದೆ?

ಮೂಲಭೂತ ಹಕ್ಕುಗಳ ಅವಕಾಶಗಳ ಕುರಿತ ವಿವರಗಳನ್ನು ಭಾರತ ಸಂವಿಧಾನದ ಭಾಗ III ರಲ್ಲಿ ಕಾಣಬಹುದು. ಸಂವಿಧಾನದ ಈ ಭಾಗವನ್ನು 'ಸಂವಿಧಾನದ ಮೂಲಾಧಾರ' (ಕಾರ್ನರ್ ಸ್ಟೋನ್) ಎಂದು ಹೇಳಲಾಗುತ್ತದೆ. ಇವು ಅದೇ ಭಾಗದ 12ರಿಂದ 35ರವರೆಗಿನ ಅನುಚ್ಛೇದಗಳಲ್ಲಿ ನಿರೂಪಿತವಾಗಿವೆ.

ಮೂಲಭೂತ ಹಕ್ಕುಗಳ ಪ್ರಮುಖ ಲಕ್ಷಣಗಳು: ಕೆಳಗಿನ ಪಟ್ಟಿಯ ಸಹಾಯದಿಂದ ಮೂಲಭೂತ ಹಕ್ಕುಗಳ ಪ್ರಮುಖ ಲಕ್ಷಣಗಳನ್ನು ವಿವರಿಸಲು ಪ್ರಯತ್ನಿಸಿ.

- ಸಮಗ್ರವೂ ವಿಸ್ತಾರವೂ ಆದುದು ;
- ಖಚಿತಪಡಿಸಿದ ಹಕ್ಕುಗಳು ;

- ಅಗತ್ಯವಿದ್ದತೆ ತಿದ್ದುಪಡಿ ಮಾಡಬಹುದಾದವು;
- ಅಗತ್ಯವಿದ್ದರೆ ಅಮಾನತುಗೊಳಿಸಬಹುದಾದವು;
- ಸಂವಿಧಾನದ ಅನಿವಾರ್ಯ ಭಾಗ;
- ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕುಗಳನ್ನು ಕೊಡುವಂತಹದು;
- ಕೆಲವು ಋಣಾತ್ಮಕ ಶಬ್ದಗಳೊಂದಿಗೆ ಹೆಣೆದಿರುವಂತಹುದು ಮತ್ತು ಕೆಲವು ಧನಾತ್ಮಕ ಶಬ್ದಗಳೊಂದಿಗೆ ಹೆಣೆದಿರುವಂತಹುದು;
- ಕಾನೂನುಗಳು ಮೂಲಭೂತ ಹಕ್ಕುಗಳೊಂದಿಗೆ ಸ್ಥಿರವಾಗಿರುವಂತಹವು.

## ಮೂಲಭೂತ ಹಕ್ಕುಗಳ ವರ್ಗೀಕರಣ

ಮೂಲಭೂತ ಹಕ್ಕುಗಳನ್ನು ಎರಡು ಪ್ರಮುಖ ಮಾನದಂಡಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ:

- ಪೌರತ್ವದ ಸ್ಥಾನಮಾನ
- ಮಿತಿಯ ವ್ಯಾಪ್ತಿ

## ಪೌರತ್ವದ ಸ್ಥಾನಮಾನವನ್ನವಲಂಬಿಸಿದ ಮೂಲಭೂತ ಹಕ್ಕುಗಳು

ಎಲ್ಲ ಮೂಲಭೂತ ಹಕ್ಕುಗಳೂ ಎಲ್ಲ ಭಾರತೀಯರಿಗೂ ಅನ್ವಯವಾಗುತ್ತವೆ. ಆದರೆ, ಅವುಗಳಲ್ಲಿ ಕೆಲವು ಕೇವಲ ಭಾರತೀಯ ಪೌರರಿಗೆ ಮಾತ್ರ ಅನ್ವಯವಾಗುವಂತಹವು.

## ಭಾರತೀಯ ಪೌರರಿಗೆ ಮಾತ್ರ ಅನ್ವಯವಾಗುವ ಮೂಲಭೂತ ಹಕ್ಕುಗಳು:

ವಿಧಿ–15, ವಿಧಿ–16, ವಿಧಿ–19, ಮತ್ತು ವಿಧಿ–30

ಭಾರತೀಯ ನಾಗರಿಕರು ಮತ್ತು ವಿದೇಶೀಯರು ಎಲ್ಲರಿಗೂ ಲಭ್ಯವಿರುವ ಮೂಲಭೂತ ಹಕ್ಕುಗಳು

ವಿಧಿ–14, ವಿಧಿ–20, ವಿಧಿ–21, ವಿಧಿ–23, ವಿಧಿ–25, ವಿಧಿ–27, ವಿಧಿ–28

## ಮಿತಿಗಳ ವ್ಯಾಪ್ತಿಯನ್ನಾಧರಿಸಿ ಮೂಲಭೂತ ಹಕ್ಕುಗಳ ವರ್ಗೀಕರಣ

ಶಾಸಕಾಂಗ ಅಧಿಕಾರದ ಮೇಲೆ ವಿಭಿನ್ನ ಮೂಲಭೂತ ಹಕ್ಕುಗಳು ವಿಧಿಸಿರುವ ಮಿತಿಯ ವ್ಯಾಪ್ತಿಯಿಂದಲೂ ವರ್ಗೀಕರಣವನ್ನು ಮಾಡಲಾಗಿದೆ. ಒಂದೆಡೆ ವಿಧಿ21ರ ಅಡಿಯಲ್ಲಿ ಮೂಲಭೂತ ಹಕ್ಕುಗಳು ಕಾರ್ಯನಿರ್ವಾಹಕ ವಿರೋಧಿಗಳೆಂದು ಗುರುತಿಸಲಾಗಿವೆಯಾದರೂ ಇವುಗಳನ್ನು ನಿರ್ವಹಿಸಲು ಶಾಸಕಾಂಗದ ಮೇಲೆ ಯಾವುದೇ ಮಿತಿಯನ್ನೂ ಹೇರಿಲ್ಲ. ಮತ್ತೊಂದೆಡೆ, ಕೆಲವು ಹಕ್ಕುಗಳನ್ನು ಶಾಸಕಾಂಗ ಅಧಿಕಾರಗಳಿಗೆ ಮಿತಗೊಳಿಸಿದಂತೆ ಉದ್ದೇಶಿಸಲಾಗಿದೆ. ಅವುಗಳೆಂದರೆ ವಿಧಿ 15,17,18,20 ಮತ್ತು 24. ಒಟ್ಟು ಎಲ್ಲ ಮೂಲಭೂತ ಹಕ್ಕುಗಳನ್ನು ಆರು ಪ್ರಮುಖ ವರ್ಗಗಳಾಗಿ ವರ್ಗೀಕರಿಸಲಾಗಿದೆ. ಅವು ಕೆಳಕಂಡಂತಿವೆ.




## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

ಕೆಳಗೆ ಕೊಟ್ಟಿರುವ ಹೇಳಿಕೆಗಳಲ್ಲಿ ಸರಿಯಾದವುಗಳನ್ನು '✓' ಗುರುತಿನಿಂದ ಸೂಚಿಸಿರಿ

1. ಪೌರತ್ವವು ಮೂಲಭೂತ ಹಕ್ಕುಗಳನ್ನು ಪಡೆಯುವ ಮಾನದಂಡವಾಗಿದೆ
2. ಕಾನೂನಿನ ಮುಂದೆ ಸಮಾನತೆ ಮತ್ತು ಕಾನೂನಿನಿಂದ ಸಮಾನ ರಕ್ಷಣೆ ಇವೆರಡೂ ಒಂದೇ ಅರ್ಥವನ್ನು ನೀಡುತ್ತವೆ.
3. ಧಾರ್ಮಿಕ ಸ್ವಾತಂತ್ರ್ಯವು ಭಾರತೀಯ ನಾಗರಿಕರಿಗೆ ಮಾತ್ರ ಅನ್ವಯಿಸುತ್ತದೆ.
4. ಮೂಲಭೂತ ಹಕ್ಕುಗಳನ್ನು ಆರು ವಿಧಗಳಾಗಿ ವರ್ಗೀಕರಿಸಲಾಗಿದೆ.
5. ಮೂಲಭೂತ ಹಕ್ಕುಗಳು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಿಂದ ಬಲಪಟ್ಟಿದೆ.
6. ಮೂಲಭೂತ ಹಕ್ಕುಗಳು 'ಭಾರತದ ವೈಯಕ್ತಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಮಾಗ್ನಕಾರ್ಟ' ಅಥವಾ 'ಭಾರತದ ಮಹಾಸನ್ನದು' ಎಂದು ಜನಪ್ರಿಯವಾಗಿವೆ.

## 2.4.3.2. ಹಕ್ಕುಗಳ ನಿರ್ದಿಷ್ಟ ಅವಕಾಶಗಳು

**ಎ. ಸಮಾನತೆಯ ಹಕ್ಕು :** ಸಮಾನತೆಯೆಂದರೆ ಸಮವಾಗಿರುವುದರ ಸ್ಥಿತಿ. ಇದು ಭಾರತೀಯ ಸಂವಿಧಾನ ರಚನೆಯ ಮೂಲಭೂತ ಭಾಗವಾಗಿದೆ. ಭಾರತ ಸಂವಿಧಾನದ 14ರಿಂದ 18ರ ವರೆಗಿನ ವಿಧಿಗಳು ಸಮಾನತೆಯ ಹಕ್ಕನ್ನು ಕುರಿತು ಸವಿವರವಾಗಿ ತಿಳಿಸುತ್ತವೆ. ವಿಧಿ 14 ಕಾನೂನು ನಿಯಮದ ತತ್ವವನ್ನಾಧರಿಸಿದೆ. ವಿಧಿ 14,15,16,17 ಮತ್ತು 18 ಈ ತತ್ವದ ಅನ್ವಯವನ್ನು ಒಳಗೊಂಡಿವೆ. ಸಂವಿಧಾನದ ಪ್ರಸ್ತಾವನೆಯಲ್ಲಿಯೂ ಸಮಾನತೆಯ ತತ್ವದ ಪ್ರಾಮುಖ್ಯತೆಯನ್ನು ಕುರಿತು ವಿಶೇಷವಾಗಿ ಹೇಳಲಾಗಿದೆ.

**ಸಮಾನತೆಯ ತತ್ವ :** ಸಮಾನತೆಯ ತತ್ವವು ಎಲ್ಲರಿಗೂ ಏಕರೂಪದ ಸವಲತ್ತುಗಳನ್ನು ನಿಗದಿಪಡಿಸುತ್ತದೆ ಎಂದೇನಿಲ್ಲ. ಒಂದೇ ರೀತಿಯ ಸನ್ನಿವೇಶಗಳಲ್ಲಿರುವವರಿಗೆಲ್ಲರಿಗೂ ಸಮಾನವಾದ ಸವಲತ್ತುಗಳನ್ನು ಮತ್ತು ಸಮಾನವಾದ

ಜವಾಬ್ದಾರಿಗಳನ್ನೂ ನಿಗದಿಪಡಿಸಲಾಗುವುದು. ಈ ಸನ್ನಿವೇಶದಲ್ಲಿ ಯಾವುದೇ ರೀತಿಯ ಪಕ್ಷಪಾತವನ್ನು ಮಾಡುವಂತಿಲ್ಲ.

ಈ ವಿಧಿಗಳನ್ನು ಸಂಕ್ಷಿಪ್ತವಾಗಿ ಗುರುತಿಸೋಣ.

**ವಿಧಿ 14 :** ಭಾರತದ ರಾಜ್ಯಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸುವಂತಿಲ್ಲ.

ಈ ವಿಧಿಯು ಎರಡು ವಿಷಯಗಳನ್ನು ಸೂಚಿಸುತ್ತದೆ.

- ಕಾನೂನಿನ ಮುಂದೆ ಸಮಾನತೆ
- ಕಾನೂನುಗಳಿಂದ ಸಮಾನ ಸಂರಕ್ಷಣೆ

**ಕಾನೂನಿನ ಮುಂದೆ ಸಮಾನತೆ :** ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದು ಇದರ ಅರ್ಥ. ಎಲ್ಲರನ್ನೂ ಸಮನಾಗಿ ಕಾಣುವುದು. ಉದಾಹರಣೆಗೆ, ಒಂದೇ ರೀತಿಯ ತಪ್ಪಿಗೆ ಇಬ್ಬರನ್ನು ತಡೆದು, ಒಬ್ಬರಿಗೆ ಶಿಕ್ಷೆ ಕೊಡುವುದು ಮತ್ತೊಬ್ಬರಿಗೆ ಕೇವಲ ಎಚ್ಚರಿಕೆ ಕೊಡುವುದು ಹಕ್ಕಿನ ಉಲ್ಲಂಘನೆಯಾಗುತ್ತದೆ.

**ಕಾನೂನುಗಳಿಂದ ಸಮಾನ ಸಂರಕ್ಷಣೆ :** ಸೌಲಭ್ಯಗಳು ಮತ್ತು ಜವಾಬ್ದಾರಿಗಳೆರಡಕ್ಕೆ ಸಂಬಂಧಿಸಿದಂತೆಯೂ ಸಮಾನ ರೀತಿಯ ಸನ್ನಿವೇಶಗಳಲ್ಲಿ ಸಮಾನ ರೀತಿಯ ಪರಿಗಣನೆ ಎಂಬುದು ಇದರ ಅರ್ಥ. ಉದಾಹರಣೆಗೆ, ಹೆಚ್ಚು ಹಣ ಸಂಪಾದಿಸುವ ವ್ಯಕ್ತಿಗೆ ಸಬ್ಸಿಡಿಯ ಅವಶ್ಯಕತೆ ಇರುವುದಿಲ್ಲ, ಆದರೆ ಮಧ್ಯಮ ವರ್ಗದ ಕುಟುಂಬಕ್ಕೆ ಅದರ ಅವಶ್ಯಕತೆ ಇದೆ. ಹೀಗಾಗಿ ಇತರರಿಗೆ ಸಮಾನವಾಗಿ ಬದುಕಲು, ಅಗತ್ಯವಿರುವವರಿಗೆ ಸರ್ಕಾರ ಸಬ್ಸಿಡಿ ಒದಗಿಸಿಕೊಡುತ್ತದೆ. ಇದನ್ನೇ ಕಾನೂನಿನಿಂದ ರಕ್ಷಣೆ ಎಂದು ಹೇಳಲಾಗುತ್ತದೆ.

**ವಿಧಿ 15 :**

1) ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರದ ಮೇಲೆ ತಾರತಮ್ಯ ನಿಷೇಧ: ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ತಾರತಮ್ಯವನ್ನು ಮಾಡತಕ್ಕದ್ದಲ್ಲ.

2) ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು:

    (ಎ) ಅಂಗಡಿಗಳು, ಸಾರ್ವಜನಿಕ ಉಪಹಾರ ಗೃಹಗಳು, ಹೋಟೇಲುಗಳು, ಮತ್ತು ಸಾರ್ವಜನಿಕ ಮನೋರಂಜನಾ ಸ್ಥಳಗಳಿಗೆ ಪ್ರವೇಶಿಸುವ ಸಂಬಂಧದಲ್ಲಿ; ಅಥವಾ

    ಬಿ) ಪೂರ್ಣವಾಗಿ ಅಥವಾ ಭಾಗಶಃ ರಾಜ್ಯನಿಧಿಗಳಿಂದ ಪೋಷಿತವಾದ ಅಥವಾ ಸಾರ್ವಜನಿಕ ಉಪಯೋಗಕ್ಕಾಗಿ ಸಮರ್ಪಿತವಾದ ಬಾವಿಗಳನ್ನು, ಕೆರೆಗಳನ್ನು, ಸ್ನಾನಘಟ್ಟಗಳನ್ನು, ರಸ್ತೆಗಳನ್ನು ಮತ್ತು ಸಾರ್ವಜನಿಕರು ಸೇರುವ ಸ್ಥಳಗಳನ್ನು ಉಪಯೋಗಿಸುವ ಸಂಬಂಧದಲ್ಲಿ–ಯಾವುದೇ ಅಸಮರ್ಥತೆಗೆ, ಹೊಣೆಗಾರಿಕೆಗೆ, ನಿರ್ಬಂಧಕ್ಕೆ ಅಥವಾ ಷರತ್ತಿಗೆ ಒಳಪಟ್ಟಿರತಕ್ಕದ್ದಲ್ಲ.

3) ಈ ಅನುಚ್ಛೇದದಲ್ಲಿ ಇರುವುದು ಯಾವುದೂ ಹೆಂಗಸರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

[4) ಈ ಅನುಚ್ಛೇದದಲ್ಲಿ ಅಥವಾ 29ನೆಯ ಅನುಚ್ಛೇದದ (2)ನೆಯ ಖಂಡದಲ್ಲಿ ಇರುವುದು ಯಾವುದೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುದೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ

ರಾಜ್ಯವು ಯಾವುದೇ ವಿಶೇಷ ಉಪಬಂಧವನ್ನು ಮಾಡದಂತೆ ಪ್ರತಿಬಂಧಿಸತಕ್ಕದ್ದಲ್ಲ]

5) ಈ ಅನುಚ್ಛೇದದಲ್ಲಿ ಅಥವಾ 19ನೆಯ ಅನುಚ್ಛೇದದ (1)ನೆಯ ಖಂಡದ (ಜಿ) ಉಪಖಂಡದಲ್ಲಿರುವುದಾವುದೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುದೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ಕಾನೂನಿನ ಮೂಲಕ ಯಾವುದೇ ವಿಶೇಷ ಉಪಬಂಧವನ್ನು ಮಾಡದಂತೆ, ಆ ವಿಶೇಷ ಉಪಬಂಧಗಳು 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಹೇಳಲಾದ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳನ್ನು ಹೊರತುಪಡಿಸಿ ರಾಜ್ಯದಿಂದ ಅನುದಾನ ಪಡೆದಿರುವ ಅಥವಾ ಪಡೆಯದಿರುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳೂ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

## ವಿಧಿ 16 : ಸಾರ್ವಜನಿಕ ನಿಯೋಜನೆಯ ವಿಷಯದಲ್ಲಿ ಸಮಾನಾವಕಾಶ:

ರಾಜ್ಯದ ಅಧೀನದಲ್ಲಿರುವ ಯಾವುದೇ ಉದ್ಯೋಗ ಅಥವಾ ನೇಮಕಾತಿಗೆ ಸಂಬಂಧಿಸಿದಂತೆ ಎಲ್ಲ ನಾಗರಿಕರಿಗೂ ಸಮಾನ ಅವಕಾಶವಿರತಕ್ಕದ್ದು.

ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ, ನಿವಾಸ ಅಥವಾ ಇವುಗಳಲ್ಲಿ ಯಾವುದೇ ಒಂದರ ಅಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು ರಾಜ್ಯದ ಅಧೀನದಲ್ಲಿರುವ ಯಾವುದೇ ಉದ್ಯೋಗಕ್ಕೆ ಅಥವಾ ನೇಮಕಾತಿಗೆ ಸಂಬಂಧಿಸಿದಂತೆ ಅನರ್ಹತೆಗೆ ಒಳಗಾಗತಕ್ಕದ್ದಲ್ಲ ಅಥವಾ ಅವನ ವಿರುದ್ಧ ತಾರತಮ್ಯ ಮಾಡತಕ್ಕದ್ದಲ್ಲ.

ಈ ಅನುಚ್ಛೇದದಲ್ಲಿರುವುದು ಯಾವುದೇ ಹಿಂದುಳಿದ ವರ್ಗದ ನಾಗರಿಕರು ರಾಜ್ಯದ ಅಧೀನದಲ್ಲಿ ಇರುವ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದಿಲ್ಲವೆಂದು ರಾಜ್ಯವು ಅಭಿಪ್ರಾಯಪಟ್ಟಲ್ಲಿ ಅಂತಹವರಿಗಾಗಿ ನೇಮಕಾತಿಗಳನ್ನು ಅಥವಾ ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

ಈ ಅನುಚ್ಛೇದದಲ್ಲಿರುವುದು ಯಾವುದೂ ರಾಜ್ಯದ ಅಧೀನದಲ್ಲಿರುವ ಸೇವೆಗಳಲ್ಲಿ ಅನುಸೂಚಿತ ಜಾತಿಗಳೂ ಮತ್ತು ಅನುಸೂಚಿತ ವರ್ಗಗಳ ಬುಡಕಟ್ಟುಗಳವರು ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದಿಲ್ಲವೆಂದು ರಾಜ್ಯವು ಅಭಿಪ್ರಾಯಪಟ್ಟಲ್ಲಿ, ರಾಜ್ಯದ ಅಧೀನ ಸೇವೆಗಳಲ್ಲಿನ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ಬಡ್ತಿಯ ವಿಷಯದಲ್ಲಿ ಅಂಥವರಿಗಾಗಿ ಮೀಸಲಾತಿಯ ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕುದಲ್ಲ.

ಉದ್ಯೋಗಕ್ಕೆ ಸಮಾನ ನಿಯೋಜನೆಯ ಅವಕಾಶಗಳ ತತ್ವಗಳು ಕೆಳಗಿನ ವಿಷಯಗಳಿಗೆ ಅನ್ವಯಿಸುತ್ತದೆ:

- ಉದ್ಯೋಗಗಳಿಗೆ ಅವಕಾಶ
- ಉದ್ಯೋಗದ ಪರಿಸ್ಥಿತಿಗಳು
- ಉದ್ಯೋಗದ ಸ್ಥಳದಲ್ಲಿನ ಸಂಬಂಧಗಳು
- ಕಾರ್ಯಕ್ಷಮತೆಯ ಮೌಲ್ಯಮಾಪನ
- ತರಬೇತಿ ಹಾಗೂ ವೃತ್ತಿ ಅಭಿವೃದ್ಧಿಗೆ ಅವಕಾಶ.

## ವಿಧಿ 17 : ಅಸ್ಪೃಶ್ಯತೆಯ ನಿರ್ಮೂಲನೆ

ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಾಗಿದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು

ನಿಷೇಧಿಸಲಾಗಿದೆ. ಅಸ್ಪೃಶ್ಯತೆಯಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯನ್ನು ಆಚರಣೆಗೆ ತರುವುದು ಕಾನೂನಿನ ಅನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು.

## ವಿಧಿ 18 : ಶೀರ್ಷಿಕೆಗಳ ನಿರ್ಮೂಲನೆ ಅಥವಾ ಬಿರುದುಗಳ ರದ್ದತಿ

ರಾಜ್ಯವು ಸೇನಾ ಅಥವಾ ವಿದ್ಯಾ ಸಂಬಂಧವಾದ ಪ್ರಶಸ್ತಿಗಳಲ್ಲದೆ ಯಾವುದೇ ಬಿರುದುಗಳನ್ನೂ ಪ್ರದಾನಮಾಡತಕ್ಕದ್ದಲ್ಲ.

ಭಾರತದ ಯಾವುದೇ ನಾಗರಿಕನು ಯಾವುದೇ ವಿದೇಶ ರಾಜ್ಯದಿಂದ ಯಾವುದೇ ಬಿರುದನ್ನು ಸ್ವೀಕರಿಸತಕ್ಕದ್ದಲ್ಲ.

ರಾಜ್ಯದ ಅಧೀನದಲ್ಲಿನ ಯಾವುದೇ ಲಾಭದಾಯಕ ಅಥವಾ ನಂಬಿಕೆಯ ಪದದಲ್ಲಿರುವ ಯಾರೇ ವ್ಯಕ್ತಿಯು ರಾಷ್ಟ್ರಪತಿಯ ಸಮ್ಮತಿ ಇಲ್ಲದೆ ಯಾವುದೇ ವಿದೇಶೀ ರಾಜ್ಯದಿಂದ ಯಾವುದೇ ಪಾರಿತೋಷಕವನ್ನು, ಉಪಲಬ್ಧಿಯನ್ನು ಅಥವಾ ಯಾವುದೇ ವಿದೇಶೀ ರಾಜ್ಯದ ಅಧೀನದಲ್ಲಿನ ಯಾವುದೇ ವಿಧದ ಪದವನ್ನು ಸ್ವೀಕರಿಸತಕ್ಕದ್ದಲ್ಲ.

ಮೇಲಿನ ಸಂವಿಧಾನಾತ್ಮಕ ನಿಬಂಧನೆಗಳ ಅಧ್ಯಯನವು ಶೈಕ್ಷಣಿಕ ಅಭ್ಯಾಸದಲ್ಲಿ ಕೆಲವು ಪ್ರಶ್ನೆಗಳನ್ನು ಮೂಡಿಸುತ್ತದೆ. ಅವುಗಳಲ್ಲಿ ಕೆಲವು:

- ಸಮಾನತೆ ಮತ್ತು ಮಾನವ ಹಕ್ಕುಗಳ ಕುರಿತು ಕಲಿಯುವುದು ಏಕೆ ಮುಖ್ಯ?
- ಈ ವಿಷಯಗಳ ಬೋಧನೆಯಿಂದಾಗುವ ಪ್ರಯೋಜನಗಳೇನು?
- ಪಠ್ಯಕ್ರಮದಲ್ಲಿ ಈ ವಿಷಯಗಳು ಹೇಗೆ ಹೊಂದಿಕೊಳ್ಳುತ್ತವೆ?

## ಈ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸೋಣ

ಒಂದು ದೇಶದ ಅಭಿವೃದ್ಧಿಯಲ್ಲಿ ಯುವಜನಾಂಗದ ಪಾತ್ರ ಬಹುದೊಡ್ಡದು. ಇದು ಸ್ಥಾಪಿತ ಸತ್ಯ. ಇತರರನ್ನು ಹೇಗೆ ಪರಿಗಣಿಸಬೇಕು, ಅವರನ್ನು ಜನ ಹೇಗೆ ಪರಿಗಣಿಸಬೇಕು ಎಂಬ ಅರಿವು ಯುವಜನರ ಸಮರ್ಪಕ ಸರ್ವತೋಮುಖ ಅರಿವಿನ ಬೆಳವಣಿಗೆಗೆ ಅಗತ್ಯ. ಇದು ಅವರನ್ನು ಅವರದೇ ಆದ ಮೌಲ್ಯಗಳನ್ನು, ಅಭಿಪ್ರಾಯಗಳನ್ನು ಕಂಡುಕೊಳ್ಳಲು, ಚರ್ಚಿಸಲು ಮತ್ತು ಸವಾಲಾಗಿ ಸ್ವೀಕರಿಸಲು ಸಹಾಯ ಮಾಡುತ್ತದೆ. ಈ ಹಕ್ಕುಗಳನ್ನು ಕುರಿತ ತಿಳಿವಳಿಕೆಯಿಂದಾಗಿ ಅವರಲ್ಲಿ ಮತ್ತೊಬ್ಬರನ್ನು ಗೌರವಿಸುವ ಸಹಿಷ್ಣುತೆಯನ್ನು ಬೆಳೆಸಿಕೊಳ್ಳುವ ವರ್ತನೆಗಳನ್ನು ಮೂಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಪೂರ್ವಾಗ್ರಹವಿಲ್ಲದೆ ಎಲ್ಲರೊಡನೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಟ್ಟು ಅವರನ್ನು ಸದೃಢವಾಗಿಸುತ್ತದೆ. ಪ್ರಸ್ತುತದ ಸ್ಪರ್ಧಾತ್ಮಕ ಮತ್ತು ಸವಾಲಿನ ಸಮಾಜದಲ್ಲಿಯೂ ಯುವಜನರಲ್ಲಿ ಸಕಾರಾತ್ಮಕ ಮತ್ತು ಮುಕ್ತ ಮನಸ್ಸಿನ ವರ್ತನೆಗಳನ್ನು ಹುಟ್ಟುಹಾಕಲು ಇದು ಪ್ರಮುಖವಾಗುತ್ತದೆ. ಇದು ತರಗತಿಯ ಹೊರಗಿನ ಕಲಿಕೆಯನ್ನು ಸಬಲಗೊಳಿಸುತ್ತದೆ. ಅವರ ಕುಟುಂಬ, ಸಮುದಾಯ ಮತ್ತು ಸಮಾಜದೊಂದಿಗೆ ಹೆಚ್ಚಿನ ಸಂಬಂಧಗಳನ್ನು ಅರಿವನ್ನು ಮೂಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಇದು ಹೆಚ್ಚು ಆರೋಗ್ಯಕರವಾದ, ಸಂತಸದ ಮತ್ತು ನೈಜವಾದ ಶಾಲಾ ಸಂಸ್ಕೃತಿಯನ್ನು ರೂಪಿಸುತ್ತದೆ. ಇದು ಬೆದರಿಸುವ ಹಾಗೂ ಸಂಬಂಧಿತ ವರ್ತನೆಗಳನ್ನು ಕಡಿಮೆ ಮಾಡುತ್ತದೆ. ಸಾಧನೆ ಮತ್ತು ಆಶಯಗಳನ್ನು ಸಾಧಿಸಲು ಸಾಧ್ಯಮಾಡಿಕೊಡುತ್ತದೆ. ಇದು ಸಮಾಜದ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುತ್ತದೆ. ಇದು ಅವರನ್ನು ಸಹಜವಾಗಿ ಉತ್ತಮ ಪೌರತ್ವಕ್ಕೆ ಸಿದ್ಧಮಾಡಿ, ಇತಿಹಾಸ, ಪೌರನೀತಿ ಮುಂತಾದ ವಿಷಯಗಳಿಗೆ ಹೆಚ್ಚಿನ ನೈಜತೆಯನ್ನು ಒದಗಿಸುತ್ತವೆ. ಜೊತೆಗೆ ಹೆಚ್ಚು ಸಂತುಲಿತವಾದ, ಸಮರ್ಪಕವಾದ ಪಠ್ಯಕ್ರಮವನ್ನೊದಗಿಸಿ ವಿದ್ಯಾರ್ಥಿಗಳಿಗೆ ವಿಶಾಲ ಜಗತ್ತಿನ ಅರಿವು ಮೂಡಿಸುವಲ್ಲಿ ಸಾರ್ಥಕವಾಗುತ್ತದೆ.

## ಸ್ವಾತಂತ್ರ್ಯದ ಹಕ್ಕು

ನೈತಿಕತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಸಂಸ್ಥೆಯ ಪ್ರಕಾರ ಸ್ವಾತಂತ್ರ್ಯ ಎಂಬುದು ನಾನು

ಹೇಗೋ ಆಯ್ಕೆಮಾಡಿಕೊಳ್ಳುವ ಹಕ್ಕು, ಅದಕ್ಕೆ ಅನುಗುಣವಾಗಿ ವರ್ತಿಸುವುದು ಇದಕ್ಕಿಂತ ಮಿಗಿಲಾದುದು. ಅದು ಪ್ರತಿಯೊಬ್ಬರಿಗೂ ಜೀವನ, ಸ್ವಾತಂತ್ರ್ಯ ಮತ್ತು ಸಂತೋಷದ ಅನ್ವೇಷಣೆಗೆ ಸಮನಾದ ಅವಕಾಶವನ್ನು ಒದಗಿಸುತ್ತದೆ.

ಮೊದಲನೆಯದಾಗಿ ಪ್ರಪಂಚದೆಲ್ಲೆಡೆ, ವಾಕ್ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯ, ಎರಡನೆಯದಾಗಿ, ಪ್ರತಿ ವ್ಯಕ್ತಿಯೂ ತನ್ನದೇ ಆದ ರೀತಿಯಲ್ಲಿ ದೇವರನ್ನು ಪೂಜಿಸುವ ಸ್ವಾತಂತ್ರ್ಯ, ಮೂರನೆಯದು ಆಸೆಗಳಿಂದ ಸ್ವಾತಂತ್ರ್ಯ, ಅಂದರೆ ತನ್ನ ಪ್ರಜೆಗಳಿಗೆ ಆರೋಗ್ಯಕರವಾದ ಶಾಂತಿಯುತವಾದ ಬದುಕನ್ನು ರಕ್ಷಿಸುವ ಸ್ವಾತಂತ್ರ್ಯ, ನಾಲ್ಕನೆಯದು ಭಯದಿಂದ ಮುಕ್ತವಾದ ಸ್ವಾತಂತ್ರ್ಯ, ಯಾವುದೇ ರಾಷ್ಟ್ರವೂ ಪ್ರಪಂಚದ ಇತರ ಯಾವುದೇ ರಾಷ್ಟ್ರದೊಂದಿಗೆ ದೈಹಿಕ ಆಕ್ರಮಣ ಮಾಡದ ಸ್ವಾತಂತ್ರ್ಯ–ಇವೆಲ್ಲವೂ ವಿಶ್ವದಾದ್ಯಂತ ವ್ಯಾಪಸಿರುವಂತಹುದು.

ಇವುಗಳಲ್ಲಿ ಹಲವು 'ಸ್ವಾತಂತ್ರ್ಯವನ್ನು ಕುರಿತ ಹಕ್ಕು' ಇದರ ಅಡಿಯಲ್ಲಿ ಕಾಣಬರುತ್ತವೆ. ಈ ರೀತಿಯ ಸ್ವಾತಂತ್ರ್ಯಗಳು ಅಸ್ತಿತ್ವದಲ್ಲಿರುವಾಗ ಮಾತ್ರ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆ. 19ರಿಂದ 22ರವರೆಗಿನ ವಿಧಿಗಳು ಸ್ವಾತಂತ್ರ್ಯವನ್ನು ಕುರಿತ ಹಕ್ಕನ್ನು ವಿವರಿಸುತ್ತವೆ. ಇವು ಭಾರತದ ಜನತೆಗೆ ಅತಿ ಹೆಚ್ಚು ಪ್ರಮುಖವಾದ ಮತ್ತು ಮೂಲಭೂತವಾದ ಹಕ್ಕುಗಳನ್ನು ನೀಡುತ್ತವೆ. ಹಾಗಾಗಿ ಇವುಗಳನ್ನು ಸಂವಿಧಾನದ ಹೂರಣ ಎಂದು ಹೇಳಲಾಗುತ್ತದೆ.

### ವಿಧಿ 19 ಆರು ರೀತಿಯ ಸ್ವಾತಂತ್ರ್ಯದ ಹಕ್ಕುಗಳನ್ನು ನೀಡಿದೆ:

1. ವಾಕ್ ಸ್ವಾತಂತ್ರ್ಯದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು
2. ಶಾಂತಿಯಿಂದ ಹಾಗೂ ನಿರಾಯುಧರಾಗಿ ಸಭೆ ಸೇರುವ ಹಕ್ಕು
3. ಸಂಸ್ಥೆಗಳನ್ನು ಅಥವಾ ಸಂಘಗಳನ್ನು ರಚಿಸುವ ಹಕ್ಕು
4. ಭಾರತದ ರಾಜ್ಯಕ್ಷೇತ್ರದಲ್ಲಿ ಅಬಾಧಿತವಾಗಿ ಸರ್ವತ್ರಸಂಚಾರ ಮಾಡುವ ಹಕ್ಕು
5. ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ವಾಸಮಾಡುವ ಮತ್ತು ನೆಲೆಸುವ ಹಕ್ಕು
6. ಯಾವುದೇ ವೃತ್ತಿಯನ್ನು ನಡೆಸುವ ಅಥವಾ ಕಸುಬನ್ನು, ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸುವ ಹಕ್ಕು

ವಾಕ್ ಸ್ವಾತಂತ್ರ್ಯದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು: ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಜಾನ್ ಮಿಲ್ಟನ್ನನ ಮಾತುಗಳಲ್ಲಿ ಗುರುತಿಸಬಹುದು: "ಇತರ ಎಲ್ಲ ಸ್ವಾತಂತ್ರ್ಯಗಳಿಗಿಂತ ಮಿಗಿಲಾಗಿ ನನಗೆ ತಿಳಿಯುವ, ಮಾತನಾಡುವ ಮತ್ತು ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ಸ್ವತಂತ್ರವಾಗಿ ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ನೀಡಿರಿ". ಯಾವ ನಿರ್ಬಂಧವಿಲ್ಲದೆ ಆಲೋಚನೆ ಮಾಡುವುದು ಮತ್ತು ಮಾತನಾಡುವುದು, ಸರ್ಕಾರದಿಂದ ಯಾವುದೇ ಪ್ರತೀಕಾರದ ಭಯ, ಅಡ್ಡಿ ಅಥವಾ ದಬ್ಬಾಳಿಕೆ ಇಲ್ಲದೆ ಪ್ರಕಟಣೆ ಮತ್ತು ಸಾರ್ವಜನಿಕ ಚರ್ಚೆಗಳಿಂದ ಮಾಹಿತಿ ಪಡೆಯುವುದೇ ಅಭಿವ್ಯಕ್ತಿ ಸ್ವಾತಂತ್ರ್ಯದ ತಿರುಳು. ಜನರು ರಾಜಕೀಯ ಪ್ರಭಾವ, ನೀತಿಪ್ರಜ್ಞೆ ಇವುಗಳನ್ನು ಸಾಧಿಸಲು ಒಗ್ಗೂಡುವುದು ಮತ್ತು ಇತರರು ನೀತಿಪರರೂ ಅರಿವರಿತವರಾಗುವಂತೆ ಮಾಡಲು ಸಾಧ್ಯವಾಗುವುದೇ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ.

ಸ್ವಾತಂತ್ರ್ಯದ ಮೊದಲ ಸ್ಥಿತಿಯೇ ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದಾಗಿ ಪರಿಗಣಿಸಲಾಗಿದೆ. ಇದು ದೇಶದ ಸಾಮಾಜಿಕ ಮತ್ತು ರಾಜಕೀಯ ಪ್ರಕ್ರಿಯೆಗಳಲ್ಲಿ ಜನರು ಸಂಪೂರ್ಣವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುವುದರಿಂದ ಇದು ಆರೋಗ್ಯಕರ ಪ್ರಜಾಪ್ರಭುತ್ವದ ಮೂಲಭೂತ ಅಂಶಗಳಲ್ಲಿ ಒಂದು. ಒಬ್ಬ ವ್ಯಕ್ತಿಯನ್ನು ಕೇವಲ ಜೀವಿಯ ಹಂತದಿಂದ ಸಾಮಾಜಿಕ ಮತ್ತು ರಾಜಕೀಯ ಬದುಕಿಗೆ ವಿಸ್ತರಿಸುವಂತೆ ಮಾಡುವುದರ ಮೂಲಕ ಇದು ವ್ಯಕ್ತಿಯ ಪೌರತ್ವಕ್ಕೆ ಹೆಚ್ಚಿನ ವ್ಯಾಪ್ತಿ ಮತ್ತು ಅರ್ಥವನ್ನು ಒದಗಿಸಿಕೊಡುತ್ತದೆ. ಇದು ಇತರ ಸ್ವಾತಂತ್ರ್ಯಗಳ ಮಾತೆ ಎಂದೂ ಹೇಳಲಾಗುತ್ತದೆ.

**ಮಾಹಿತಿ ಹಕ್ಕು ಕಾಯಿದೆ**

ಮೂಲಭೂತ ಹಕ್ಕುಗಳ ಕಾಯಿದೆಯ ಅಡಿಯಲ್ಲಿ ಮಾಹಿತಿ ಹಕ್ಕನ್ನು ವಿಧಿ 19(1) ರಲ್ಲಿ 2005ರಲ್ಲಿ ಸಂವಿಧಾನಕ್ಕೆ ಸೇರ್ಪಡೆ ಮಾಡಲಾಗಿದೆ. ಇದರಂತೆ ಪ್ರತಿಯೊಬ್ಬ ಪ್ರಜೆಯು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ಸರ್ಕಾರ ಹೇಗೆ ಕೆಲಸಮಾಡುತ್ತಿದೆ, ಯಾವ ಪಾತ್ರಗಳನ್ನು ನಿಭಾಯಿಸುತ್ತಿದೆ, ಅದರ ಕಾರ್ಯಗಳೇನು ಮುಂತಾದ ವಿಷಯಗಳನ್ನು ತಿಳಿಯುವ ಹಕ್ಕು ಇದೆ. ಇದನ್ನು ಪ್ರಮುಖವಾಗಿ ಎರಡು ಮಂಡಳಿಗಳಿಂದ ನಿರ್ವಹಿಸಲಾಗುತ್ತದೆ.

**ಕೇಂದ್ರೀಯ ಮಾಹಿತಿ ಆಯೋಗ :** ಮುಖ್ಯ ಮಾಹಿತಿ ಆಯುಕ್ತರು ಕೇಂದ್ರದ ಇಲಾಖೆಗಳು ಮತ್ತು ಸಚಿವಾಲಯಗಳನ್ನೊಳಗೊಂಡಂತೆ ಅದರ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮುಖ್ಯಸ್ಥರಾಗಿರುತ್ತಾರೆ. ಈ ಆಯೋಗವು ನೇರವಾಗಿ ಭಾರತದ ರಾಷ್ಟ್ರಪತಿಯವರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

**ರಾಜ್ಯ ಮಾಹಿತಿ ಆಯೋಗ :** ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ರಾಜ್ಯದ ಎಲ್ಲ ಇಲಾಖೆಗಳು ಹಾಗೂ ಸಚಿವಾಲಯಗಳ ಮುಖ್ಯಸ್ಥರಾಗಿರುತ್ತಾರೆ. ಇವರು ನೇರವಾಗಿ ರಾಜ್ಯಪಾಲರ ಅಡಿಯಲ್ಲಿ ವರದಿಗಾರರಾಗಿರುತ್ತಾರೆ.

ರಾಜ್ಯ ಮತ್ತು ಕೇಂದ್ರ ಮಾಹಿತಿ ಆಯೋಗಗಳು ಸ್ವತಂತ್ರವಾದ ಅಂಗಗಳಾಗಿವೆ. ಕೇಂದ್ರ ಮಾಹಿತಿ ಆಯೋಗವು ರಾಜ್ಯ ಮಾಹಿತಿ ಆಯೋಗದ ಮೇಲೆ ಯಾವುದೇ ನ್ಯಾಯವ್ಯಾಪ್ತಿಯನ್ನು ಹೊಂದಿರುವುದಿಲ್ಲ.

**ವಿಧಿ 20 : ಅಪರಾಧಗಳ ಬಗ್ಗೆ ಅಪರಾಧಿಯೆಂದು ನಿರ್ಣಯಿಸುವ ಸಂಬಂಧದಲ್ಲಿ ಸಂರಕ್ಷಣೆ**

(1) ಯಾವ ಕೃತ್ಯ ಎಸಗಿರುವುದನ್ನು ಅಪರಾಧವೆಂದು ಆರೋಪಿಸಲಾಗಿದೆಯೋ ಆ ಕೃತ್ಯವನ್ನು ಎಸಗಿದ ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಉಲ್ಲಂಘನೆ ಮಾಡಿದ ಯಾರೇ ವ್ಯಕ್ತಿಯನ್ನು ಆ ಅಪರಾಧದ ಬಗ್ಗೆ ಮಾತ್ರ ಅಪರಾಧಿಯೆಂದು ನಿರ್ಣಯಿಸತಕ್ಕದ್ದೇ ಹೊರತು ಮತ್ತಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣಯಿಸತಕ್ಕದಲ್ಲ ಮತ್ತು ಆ ಅಪರಾಧವು ನಡೆದ ಕಾಲದಲ್ಲಿ ಜಾರಿಯಲ್ಲಿರತಕ್ಕ ಕಾನೂನಿನ ಮೇರೆಗೆ ವಿಧಿಸಬಹುದಾಗಿದ್ದ ದಂಡನೆಗಿಂತ ಹೆಚ್ಚಿನ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯನ್ನು ಒಂದೇ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚು ಸಲ ಕಾನೂನುಕ್ರಮಕ್ಕೆ ಗುರಿಪಡಿಸತಕ್ಕದ್ದಲ್ಲ ಹಾಗೂ ದಂಡಿಸತಕ್ಕದ್ದಲ್ಲ.

(3) ಯಾವುದೇ ಅಪರಾಧದ ಸಂಬಂಧದಲ್ಲಿ ಆರೋಪಿತನಾಗಿರುವ ಯಾರೇ ವ್ಯಕ್ತಿಯನ್ನು ತನ್ನ ವಿರುದ್ಧವಾಗಿ ತಾನೇ ಸಾಕ್ಷಿಯಾಗುವಂತೆ ಒತ್ತಾಯಿಸತಕ್ಕದ್ದಲ್ಲ.

**ವಿಧಿ 21. ಜೀವದ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ: ಕಾನೂನಿನ ಮೂಲಕ ಸ್ಥಾಪಿತವಾಗಿರುವ ಪ್ರಕ್ರಿಯೆಗೆ ಅನುಸಾರವಾಗಿ ಹೊರತು, ಯಾರೇ ವ್ಯಕ್ತಿಯ ಜೀವವನ್ನು ಅಥವಾ ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕದ್ದಲ್ಲ.**

**21 ಎ. ಶಿಕ್ಷಣದ ಹಕ್ಕು : –** ರಾಜ್ಯವು, ಕಾನೂನಿನ ಮೂಲಕ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು.

**ವಿಧಿ 22. ಕೆಲವು ಸಂದರ್ಭಗಳಲ್ಲಿ ದಸ್ತಗಿರಿಯಿಂದ ಮತ್ತು ಸ್ಥಾನಬದ್ಧತೆಯಿಂದ ಸಂರಕ್ಷಣೆ:–**

(1) ದಸ್ತಗಿರಿಯಾದ ಯಾರೇ ವ್ಯಕ್ತಿಗೆ, ಅಂಥ ದಸ್ತಗಿರಿಯ ಕಾರಣಗಳನ್ನು ಆದಷ್ಟು ಬೇಗನೆ ತಿಳಿಸದೆ ಅವನನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದಲ್ಲ ಮತ್ತು ತನಗೆ ಇಷ್ಟವಾದ ನ್ಯಾಯವಾದಿಯೊಡನೆ

ಸಮಾಲೋಚಿಸುವ ಮತ್ತು ಅವನ ಮೂಲಕ ಪ್ರತಿರಕ್ಷಿಸಿಕೊಳ್ಳುವ ಹಕ್ಕನ್ನು ಆ ವ್ಯಕ್ತಿಗೆ ನಿರಾಕರಿಸತಕ್ಕದ್ದಲ್ಲ.

(2) ದಸ್ತಗಿರಿಯಾದ ಹಾಗೂ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಲಾದ ಪ್ರತಿಯೊಬ್ಬ ವ್ಯಕ್ತಿಯನ್ನು, ದಸ್ತಗಿರಿಯಾದ ಸ್ಥಳದಿಂದ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಹೋಗುವುದಕ್ಕೆ ಅವಶ್ಯವಾದ ಕಾಲವನ್ನು ಹೊರತುಪಡಿಸಿ, ದಸ್ತಗಿರಿಯ ತರುವಾಯ ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗಾಗಿ ಅತ್ಯಂತ ಸಮೀಪದ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನಿಂದ ಅಧಿಕಾರವನ್ನು ಪಡೆಯದೆ ಅಂಥ ಯಾರೇ ವ್ಯಕ್ತಿಯನ್ನು ಸದರಿ ಅವಧಿಗಿಂತ ಹೆಚ್ಚಾಗಿ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದಲ್ಲ.

(3) (1) ನೆಯ ಮತ್ತು (2) ನೆಯ ಖಂಡಗಳಲ್ಲಿ ಇರುವುದು ಯಾವುದೂ,

(ಎ) ತತ್ಕಾಲದಲ್ಲಿ ಅನ್ಯದೇಶೀಯ ಶತ್ರುವಾಗಿರುವ ಯಾರೇ ವ್ಯಕ್ತಿಗೆ; ಅಥವಾ

(ಬಿ) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ದಸ್ತಗಿರಿಯಾದ ಅಥವಾ ತಡೆಹಿಡಿದಿರಿಸಲಾದ ಯಾರೇ ವ್ಯಕ್ತಿಗೆ ಅನ್ವಯಿಸತಕ್ಕದ್ದಲ್ಲ.

(4) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನು ಯಾರೇ ವ್ಯಕ್ತಿಯನ್ನು,–

(ಎ) ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿರುವವರನ್ನು ಅಥವಾ ಆಗಿದ್ದವರನ್ನು ಅಥವಾ ಅಂಥ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹತೆ ಪಡೆದಿರುವವರನ್ನು ಒಳಗೊಂಡ ಸಲಹಾ ಮಂಡಲಿಯು, ಸದರಿ ಮೂರು ತಿಂಗಳ ಅವಧಿಯು ಪೂರೈಸುವುದಕ್ಕೆ ಮುಂಚಿತವಾಗಿ, ತನ್ನ ಅಭಿಪ್ರಾಯದಲ್ಲಿ ಅಂಥ ಸ್ಥಾನಬದ್ಧತೆಗೆ ಸಾಕಷ್ಟು ಕಾರಣವಿರುವುದಾಗಿ ವರದಿ ಮಾಡಿದ ಸಂದರ್ಭದಲ್ಲಿ ಹೊರತು :

ಪರಂತು, ಈ ಉಪಖಂಡದಲ್ಲಿ ಇರುವುದು ಯಾವುದೂ, ಯಾರೇ ವ್ಯಕ್ತಿಯನ್ನು (7)ನೆಯ ಖಂಡದ (ಬಿ) ಉಪಖಂಡದ ಮೇರೆಗೆ, ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ನಿಯಮಿಸಲಾದ ಗರಿಷ್ಠ ಅವಧಿಯನ್ನು ಮೀರಿ ಸ್ಥಾನಬದ್ಧತೆಯಲ್ಲಿಡುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ; ಅಥವಾ

(ಬಿ) ಅಂಥ ವ್ಯಕ್ತಿಯನ್ನು (7) ನೆಯ ಖಂಡದ (ಎ) ಮತ್ತು (ಬಿ) ಉಪಖಂಡಗಳ ಮೇರೆಗೆ ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಸ್ಥಾನಬದ್ಧತೆಯಲ್ಲಿ ಇಟ್ಟಿರುವ ಸಂದರ್ಭದಲ್ಲಿ ಹೊರತು

– ಮೂರು ತಿಂಗಳುಗಳಿಗಿಂತಲೂ ಹೆಚ್ಚಿನ ಅವಧಿಯವರೆಗೆ ಸ್ಥಾನಬದ್ಧತೆಯಲ್ಲಿಡುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(5) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಮಾಡಲಾದ ಆದೇಶಕ್ಕೆ ಅನುಸಾರವಾಗಿ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟಿದ್ದರೆ, ಆ ಆದೇಶವನ್ನು ಮಾಡಿದ ಪ್ರಾಧಿಕಾರಿಯು ಆದಷ್ಟು ಬೇಗನೆ, ಆ ಆದೇಶವನ್ನು ಯಾವ ಆಧಾರದ ಮೇಲೆ ಮಾಡಲಾಯಿತೆಂಬುದನ್ನು ಆ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಆ ಆದೇಶದ ವಿರುದ್ಧ ಶೀಘ್ರಾತಿಶೀಘ್ರವಾಗಿ ಮನವಿಯನ್ನು ಮಾಡಿಕೊಳ್ಳಲು ಆ ವ್ಯಕ್ತಿಗೆ ಅವಕಾಶ ಕೊಡತಕ್ಕದ್ದು.

(6) (5)ನೆಯ ಖಂಡದಲ್ಲಿ ಇರುವುದು ಯಾವುದೂ ಆ ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಆದೇಶವನ್ನು ಮಾಡುವ ಪ್ರಾಧಿಕಾರಿಯು, ಯಾವ ಸಂಗತಿಗಳನ್ನು ಬಹಿರಂಗಪಡಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವೆಂದು ಅವನು ಪರ್ಯಾಲೋಚಿಸುತ್ತಾನೋ, ಆ ಸಂಗತಿಗಳನ್ನು ಬಹಿರಂಗಪಡಿಸುವಂತೆ ಅವನನ್ನು ಅಗತ್ಯಪಡಿಸತಕ್ಕದ್ದಲ್ಲ.

(7) ಸಂಸತ್ತು, ಕಾನೂನಿನ ಮೂಲಕ,

(ಎ) ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ವರ್ಗದ ಅಥವಾ ವರ್ಗಗಳ ಪ್ರಕರಣಗಳಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಗೆ ಉಪಬಂಧ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಯಾರೇ ವ್ಯಕ್ತಿಯನ್ನು ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ (4)ನೆಯ ಖಂಡದ (ಎ) ಉಪಖಂಡದ ಉಪಬಂಧಗಳಿಗೆ ಅನುಸಾರವಾಗಿ ಸಲಹಾ ಮಂಡಲಿಯ ಅಭಿಪ್ರಾಯವನ್ನು ಪಡೆಯದೆ ಸ್ಥಾನಬದ್ಧತೆಯಲ್ಲಿ ಇಡಬಹುದು ಎಂಬುದನ್ನು ನಿಯಮಿಸಬಹುದು;

(ಬಿ) ಪ್ರತಿಬಂಧಕ ಸ್ಥಾನಬದ್ಧತೆಗೆ ಉಪಬಂಧ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಯಾವ ವರ್ಗದ ಅಥವಾ ವರ್ಗಗಳ ಪ್ರಕರಣಗಳಲ್ಲಿ ಗರಿಷ್ಠ ಎಷ್ಟು ಅವಧಿಯವರೆಗೆ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದೆಂಬುದನ್ನು ನಿಯಮಿಸಬಹುದು; ಮತ್ತು

(ಸಿ) ಸಲಹಾ ಮಂಡಲಿಯು ***[(4)ನೆಯ ಖಂಡದ (ಎ) ಉಪಖಂಡದ] ಮೇರೆಗೆ ನಡೆಸತಕ್ಕ ವಿಚಾರಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿಯಮಿಸಬಹುದು.

## ವಿಧಿ 23 ಶೋಷಣೆಯ ವಿರುದ್ಧ ಹಕ್ಕು : ಮಾನವ ದುರ್ವ್ಯವಹಾರ ಮತ್ತು ಬಲಾತ್ಕಾರದ ದುಡಿಮೆಯ ನಿಷೇಧ

(1) ಮಾನವ ದುರ್ವ್ಯವಹಾರವನ್ನು ಮತ್ತು ಬೇಗಾರ ಮತ್ತು ಅದೇ ಸ್ವರೂಪದ ಇತರ ಬಲಾತ್ಕಾರದ ದುಡಿಮೆಗಳನ್ನು ನಿಷೇಧಿಸಲಾಗಿದೆ ಮತ್ತು ಈ ಉಪಬಂಧದ ಯಾವುದೇ ಉಲ್ಲಂಘನೆಯು ಕಾನೂನಿಗೆ ಅನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು. (2) ಈ ಅನುಚ್ಛೇದದಲ್ಲಿ ಇರುವುದು ಯಾವುದೂ ಸಾರ್ವಜನಿಕ ಉದ್ದೇಶಗಳಿಗಾಗಿ ರಾಜ್ಯವು ಕಡ್ಡಾಯ ಸೇವೆಯನ್ನು ವಿಧಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ ಮತ್ತು ಅಂಥ ಸೇವೆಯನ್ನು ವಿಧಿಸುವಾಗ ರಾಜ್ಯವು ಧರ್ಮ, ಮೂಲವಂಶ, ಜಾತಿ ಅಥವಾ ವರ್ಗದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ.

## ವಿಧಿ 24. ಕಾರ್ಖಾನೆಗಳು, ಮುಂತಾದವುಗಳಲ್ಲಿ ಮಕ್ಕಳ ನಿಯೋಜನೆಗೆ ನಿಷೇಧ

ಹದಿನಾಲ್ಕು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಯಾವುದೇ ಕಾರ್ಖಾನೆಯಲ್ಲಿ ಅಥವಾ ಗಣಿಯಲ್ಲಿ ಕೆಲಸ ಮಾಡಲು ನಿಯೋಜಿಸತಕ್ಕದ್ದಲ್ಲ ಅಥವಾ ಇತರ ಯಾವುದೇ ಅಪಾಯಕರವಾದ ಉದ್ಯೋಗದಲ್ಲಿ ತೊಡಗಿಸತಕ್ಕದ್ದಲ್ಲ.

## ವಿಧಿ 25 : ಧರ್ಮ ಸ್ವಾತಂತ್ರ್ಯದ ಹಕ್ಕು

ಅಂತಃಸಾಕ್ಷಿ ಸ್ವಾತಂತ್ರ್ಯ ಮತ್ತು ಧರ್ಮದ ಅಬಾಧಿತ ಅವಲಂಬನೆ, ಆಚರಣೆ ಮತ್ತು ಪ್ರಚಾರ:

(1) ಸಾರ್ವಜನಿಕ ಸುವ್ಯವಸ್ಥೆಗೆ, ನೈತಿಕತೆಗೆ ಮತ್ತು ಆರೋಗ್ಯಕ್ಕೆ ಹಾಗೂ ಈ ಭಾಗದ ಇತರ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಕ್ತಿಗಳು ಅಂತಃಸಾಕ್ಷಿ ಸ್ವಾತಂತ್ರ್ಯಕ್ಕೆ ಸಮಾನ ರೀತಿಯಲ್ಲಿ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಅಬಾಧಿತವಾಗಿ ಧರ್ಮವನ್ನು ಅವಲಂಬಿಸುವುದಕ್ಕೆ, ಆಚರಿಸುವುದಕ್ಕೆ ಮತ್ತು ಪ್ರಚಾರ ಮಾಡುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ.

(2) ಈ ಅನುಚ್ಛೇದದಲ್ಲಿ ಇರುವುದು ಯಾವುದೂ (ಎ) ಧಾರ್ಮಿಕ ಆಚರಣೆಯೊಂದಿಗೆ ಸಂಬಂಧ ಹೊಂದಿರಬಹುದಾದ ಯಾವುದೇ ಆರ್ಥಿಕ, ಹಣಕಾಸಿನ, ರಾಜಕೀಯ ಅಥವಾ ಇತರ ಲೌಕಿಕ ಚಟುವಟಿಕೆಯನ್ನು ನಿಯಂತ್ರಿಸುವ ಅಥವಾ ನಿರ್ಬಂಧಿಸುವ; (ಬಿ) ಸಮಾಜ ಕಲ್ಯಾಣಕ್ಕಾಗಿ ಮತ್ತು

ಸುಧಾರಣೆಗಾಗಿ ವ್ಯವಸ್ಥೆ ಮಾಡಲು ಅಥವಾ ಸಾರ್ವಜನಿಕ ಸ್ವರೂಪದ ಹಿಂದೂ ಧಾರ್ಮಿಕ ಸಂಸ್ಥೆಗಳಲ್ಲಿ ಹಿಂದೂಗಳ ಎಲ್ಲ ವರ್ಗಗಳಿಗೆ ಮತ್ತು ವಿಭಾಗಗಳಿಗೆ ಪ್ರವೇಶಾವಕಾಶ ಮಾಡಿಕೊಡುವ ಸಲುವಾಗಿ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಜಾರಿಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

**ವಿಧಿ 26: ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸಲು ಸ್ವಾತಂತ್ರ್ಯ :** ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ- ಇವುಗಳಿಗೆ ಒಳಪಟ್ಟು ಪ್ರತಿಯೊಂದು ಧಾರ್ಮಿಕ ಸಂಪ್ರದಾಯದವರಿಗೆ ಅಥವಾ ಅದರ ಯಾವುದೇ ವಿಭಾಗದವರಿಗೆ, (ಎ) ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ;(ಬಿ) ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತಮ್ಮದೇ ಆದ ವ್ಯವಹಾರಗಳನ್ನು ನಿರ್ವಹಿಸುವ;(ಸಿ) ಚರ ಮತ್ತು ಸ್ಥಿರ ಸ್ವತ್ತುಗಳ ಒಡೆತನವನ್ನು ಹೊಂದುವ ಮತ್ತು ಅವುಗಳನ್ನು ಆರ್ಜಿಸುವ; ಮತ್ತು (ಡಿ) ಅಂಥ ಸ್ವತ್ತಿನ ಆಡಳಿತವನ್ನು ಕಾನೂನಿಗನುಸಾರವಾಗಿ ನಡೆಸುವ ಹಕ್ಕು ಇರತಕ್ಕದ್ದು.

**ವಿಧಿ 27 : ಯಾವುದೇ ನಿರ್ದಿಷ್ಟ ಧರ್ಮದ ಉನ್ನತಿಗಾಗಿ ತೆರಿಗೆಗಳ ಸಂದಾಯದ ಬಗ್ಗೆ ಸ್ವಾತಂತ್ರ್ಯ :-** ಯಾವ ತೆರಿಗೆಗಳ ಉತ್ಪತ್ತಿಗಳನ್ನು ಯಾವುದೇ ಒಂದು ನಿರ್ದಿಷ್ಟ ಧರ್ಮದ ಅಥವಾ ಧಾರ್ಮಿಕ ಸಂಪ್ರದಾಯದ ಉನ್ನತಿಯ ಅಥವಾ ನಿರ್ವಹಣೆಯ ವೆಚ್ಚಗಳ ಸಂದಾಯಕ್ಕಾಗಿ ನಿರ್ದಿಷ್ಟವಾಗಿ ವಿನಿಯೋಗಿಸಲಾಗುವುದೋ ಅಂಥ ಯಾವುದೇ ತೆರಿಗೆಗಳನ್ನು ಸಂದಾಯ ಮಾಡುವಂತೆ ಯಾರೇ ವ್ಯಕ್ತಿಯನ್ನು ಒತ್ತಾಯಿಸತಕ್ಕದ್ದಲ್ಲ.

**ವಿಧಿ 28 : (ಈಗಾಗಲೇ ವಿವರಿಸಲಾಗಿದೆ, ಗಮನಿಸಿಕೊಳ್ಳಿ)**

ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು

**ವಿಧಿ 29. ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ :**

(1) ಭಾರತದ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸವಾಗಿರುವ ನಾಗರಿಕರ ಯಾವುದೇ ವಿಭಾಗವು ತನ್ನದೇ ಆದ ಯಾವುದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಹೊಂದಿದ್ದರೆ, ಆ ವಿಭಾಗವು ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

(2) ರಾಜ್ಯವು ನಿರ್ವಹಿಸುವ ಅಥವಾ ರಾಜ್ಯನಿಧಿಗಳಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಧರ್ಮ, ಮೂಲವಂಶ, ಜಾತಿ, ಭಾಷೆ, ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನಿಗೆ ಪ್ರವೇಶಾವಕಾಶವನ್ನು ನಿರಾಕರಿಸತಕ್ಕದ್ದಲ್ಲ.

**ವಿಧಿ 30. ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು:-**

(1) ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಎಲ್ಲಾ ಅಲ್ಪಸಂಖ್ಯಾತ ವರ್ಗಗಳವರೂ ತಮ್ಮ ಇಷ್ಟಕ್ಕನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತವನ್ನು ನಡೆಸಲು ಹಕ್ಕುಳ್ಳವರಾಗಿರತಕ್ಕದ್ದು.

**ವಿಧಿ 32. ಸಂವಿಧಾನಾತ್ಮಕ ಪರಿಹಾರೋಪಾಯಗಳ ಹಕ್ಕು**

ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳ ಜಾರಿಗಾಗಿ ಪರಿಹಾರೋಪಾಯಗಳು:-

(1) ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳನ್ನು ಜಾರಿಗೊಳಿಸುವುದಕ್ಕಾಗಿ ಸಮುಚಿತ ವ್ಯವಹರಣೆಗಳ ಮೂಲಕ ಸರ್ವೋಚ್ಚ ನ್ಯಾಯಾಲಯವನ್ನು ಕೋರುವ ಹಕ್ಕನ್ನು ಖಾತ್ರಿಗೊಳಿಸಲಾಗಿದೆ.

(2) ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳಲ್ಲಿ ಯಾವುದೇ ಹಕ್ಕನ್ನು ಜಾರಿಗೊಳಿಸುವುದಕ್ಕಾಗಿ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನಗಳು, ಆದೇಶಗಳು ಅಥವಾ ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್, ಪ್ರೊಹಿಬಿಷನ್, ಕೊ ವಾರಂಟೋ ಮತ್ತು ಸರ್‌ಶಿಯೋರರಿ ಸ್ವರೂಪದ ರಿಟ್‌ಗಳೂ ಸೇರಿ ರಿಟ್‌ಗಳಲ್ಲಿ ಯಾವುದು ಸಮುಚಿತವೋ ಅದನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) (1)ನೆಯ ಮತ್ತು (2)ನೆಯ ಖಂಡಗಳ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದತ್ತವಾಗಿರುವ ಅಧಿಕಾರಗಳಿಗೆ ಬಾಧಕವಾಗದಂತೆ, (2)ನೆಯ ಖಂಡದ ಮೇರೆಗೆ ಸರ್ವೋಚ್ಚ ನ್ಯಾಯಾಲಯವು ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಅಥವಾ ಆ ಪೈಕಿ ಯಾವುದೇ ಅಧಿಕಾರವನ್ನು ಇತರ ಯಾವುದೇ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಚಲಾಯಿಸುವಂತೆ, ಆ ಇತರ ನ್ಯಾಯಾಲಯಕ್ಕೆ ಸಂಸತ್ತು ಕಾನೂನಿನ ಮೂಲಕ ಅಧಿಕಾರ ನೀಡಬಹುದು.

(4) ಈ ಸಂವಿಧಾನದ ಮೂಲಕ ಅನ್ಯಥಾ ಉಪಬಂಧಿಸಿದಂತೆ ಹೊರತು ಈ ಅನುಚ್ಛೇದವು ಖಾತ್ರಿಗೊಳಿಸಿರುವ ಹಕ್ಕನ್ನು ಅಮಾನತುಗೊಳಿಸತಕ್ಕದ್ದಲ್ಲ.

## ವಿಧಿ 34 : ಯಾವುದೇ ಪ್ರದೇಶದಲ್ಲಿ ಲಷ್ಕರೀ ಕಾನೂನು ಜಾರಿಯಲ್ಲಿರುವಾಗ ಈ ಭಾಗದಿಂದ ಪ್ರದತ್ತವಾದ ಹಕ್ಕುಗಳ ಮೇಲೆ ನಿರ್ಬಂಧ :

ಈ ಭಾಗದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ಒಕ್ಕೂಟದ ಅಥವಾ ಒಂದು ರಾಜ್ಯದ ಸೇವೆಯಲ್ಲಿರುವ ಯಾರೇ ವ್ಯಕ್ತಿ ಅಥವಾ ಇತರ ಯಾರೇ ವ್ಯಕ್ತಿಯು ಭಾರತದ ರಾಜ್ಯಕ್ಷೇತ್ರದೊಳಗೆ ಲಷ್ಕರೀ ಕಾನೂನು ಜಾರಿಯಲ್ಲಿದ್ದ ಯಾವುದೇ ಪ್ರದೇಶದಲ್ಲಿ ಸುವ್ಯವಸ್ಥೆಯ ನಿರ್ವಹಣೆ ಅಥವಾ ಅದರ ಮರುಸ್ಥಾಪನೆಗಾಗಿ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಅವನಿಗೆ ರಕ್ಷಣೆ ನೀಡಬಹುದು ಅಥವಾ ಅಂಥ ಪ್ರದೇಶದಲ್ಲಿ ಲಷ್ಕರೀ ಕಾನೂನಿನ ಮೇರೆಗೆ ವಿಧಿಸಿದ ಯಾವುದೇ ಶಿಕ್ಷೆಯನ್ನು, ವಿಧಿಸಿದ ದಂಡನೆಯನ್ನು, ಆದೇಶಿಸಿದ ಮುಟ್ಟುಗೋಲನ್ನು ಅಥವಾ ಮಾಡಿದ ಇತರ ಕಾರ್ಯವನ್ನು ಸಿಂಧುಗೊಳಿಸಬಹುದು.

## ವಿಧಿ 35. ಈ ಭಾಗದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಕಾನೂನು ರಚನೆ:

ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,- (ಎ) (i) 16ನೆಯ ಅನುಚ್ಛೇದದ (3)ನೆಯ ಖಂಡದ ಮೇರೆಗೆ, 32ನೆಯ ಅನುಚ್ಛೇದದ (3)ನೆಯ ಖಂಡದ ಮೇರೆಗೆ, 33ನೆಯ ಅನುಚ್ಛೇದದ ಮತ್ತು 34ನೆಯ ಅನುಚ್ಛೇದದ ಮೇರೆಗೆ, ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತು ಮಾಡಿದ ಕಾನೂನಿನ ಮೂಲಕ ಉಪಬಂಧಿಸಬಹುದೋ ಆ ವಿಷಯಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ; ಮತ್ತು (ii) ಈ ಭಾಗದ ಮೇರೆಗೆ ಅಪರಾಧಗಳೆಂದು ಘೋಷಿಸಿರುವ ಕೃತ್ಯಗಳಿಗೆ ದಂಡನೆಯನ್ನು ಗೊತ್ತುಪಡಿಸುವುದಕ್ಕಾಗಿ – ಕಾನೂನುಗಳನ್ನು ಮಾಡಲು ಸಂಸತ್ತಿಗೆ ಅಧಿಕಾರವಿರತಕ್ಕದ್ದು, ಆದರೆ ರಾಜ್ಯದ ವಿಧಾನ ಮಂಡಲಕ್ಕೆ ಅಂಥ ಅಧಿಕಾರವಿರತಕ್ಕದ್ದಲ್ಲ ಮತ್ತು ಸಂಸತ್ತು ಈ ಸಂವಿಧಾನವು ಪ್ರಾರಂಭವಾದ ಮೇಲೆ ಆದಷ್ಟು ಬೇಗನೆ (ii)ನೆಯ ಉಪಖಂಡದಲ್ಲಿ ಉಲ್ಲೇಖಿಸಿರುವ ಕೃತ್ಯಗಳಿಗೆ ದಂಡನೆಯನ್ನು ಗೊತ್ತುಪಡಿಸುವ ಕಾನೂನುಗಳನ್ನು ಮಾಡತಕ್ಕದ್ದು. (ಬಿ) ಭಾರತದ ರಾಜ್ಯಕ್ಷೇತ್ರದಲ್ಲಿ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ (ಎ) ಖಂಡದ (i)ನೆಯ ಉಪಖಂಡದಲ್ಲಿ ಉಲ್ಲೇಖಿಸಿರುವ ವಿಷಯಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಥವಾ ಆ ಖಂಡದ (ii)ನೆಯ ಉಪಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಕೃತ್ಯಕ್ಕೆ ದಂಡನೆಯನ್ನು ಗೊತ್ತುಪಡಿಸುವುದಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಯಾವುದೇ ಕಾನೂನು, ಅದರ ನಿಬಂಧನೆಗಳಿಗೆ ಮತ್ತು 372ನೆಯ ಅನುಚ್ಛೇದದ ಮೇರೆಗೆ ಅದರಲ್ಲಿ ಮಾಡಬಹುದಾದ ಯಾವುವೇ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಸಂಸತ್ತು ಅದನ್ನು ಬದಲಾಯಿಸುವವರೆಗೆ ಅಥವಾ ನಿರಸನಗೊಳಿಸುವವರೆಗೆ ಅಥವಾ ತಿದ್ದುಪಡಿ ಮಾಡುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ : 2**

ಕೆಳಗಿನ ವಿಚಾರಗಳನ್ನು ಪರಿಹರಿಸಿಕೊಳ್ಳಲು ಸಹಾಯಕವಾಗುವ ವಿಧಿಗಳನ್ನೂ ಆ ವಿಧಿಗಳ ವಿಷಯಗಳನ್ನೂ ಹೊಂದಿಸಿರಿ

| | ಸಮಸ್ಯೆ | ವಿಧಿ | | | ವಿಧಿಯ ವಿಷಯ |
|---|---|---|---|---|---|
| 1 | ಒಂದು ನಿರ್ದಿಷ್ಟ ದೇವಾಲಯದಲ್ಲಿ ಕೆಲವು ಪಂಗಡದವರಿಗೆ ಅವಕಾಶವಿಲ್ಲ | ಎ | ವಿಧಿ 18: | i | ಸ್ವಾತಂತ್ರ್ಯದ ಹಕ್ಕು |
| 2 | ಒಂದು ನಿರ್ದಿಷ್ಟ ಹೋಟೆಲಿನಲ್ಲಿ ಒಂದು ನಿರ್ದಿಷ್ಟ ಪಂಗಡದವರಿಗೆ ಅವಕಾಶವಿಲ್ಲ | ಬಿ | ವಿಧಿ 19: | ii | ಶೀರ್ಷಿಕೆಗಳ ನಿರ್ಮೂಲನೆ |
| 3 | ಪರದೇಶಕ್ಕೆ ಹೋದವರೊಬ್ಬರು ಯಾರಿಗೂ ತಿಳಿಯದಂತೆ ಹಲವು ಬಿರುದು ಬಾವಲಿಗಳನ್ನು ಪಡೆದು ಬಂದಿದ್ದೇನೆಂದು ಕೊಚ್ಚಿಕೊಳ್ಳುತ್ತಿದ್ದಾರೆ | ಸಿ | ವಿಧಿ 17: | iii | ತಾರತಮ್ಯ ನಿಷೇಧ |
| 4 | ಇಲ್ಲಿಯ ಕಛೇರಿಯಲ್ಲೊಬ್ಬ ಹಿರಿಯ ಅಧಿಕಾರಿ ನಾನು ಹೇಳಿದ ವಿಷಯಗಳನ್ನು ಮಾತ್ರ ಕುರಿತು ನೌಕರರು ಚರ್ಚೆ ಮಾಡಬಹುದು ಎನ್ನುವಷ್ಟು ಸ್ಟ್ರಿಕ್ಟ್ ಆಗಿದ್ದಾರೆ | ಡಿ | ವಿಧಿ 15: 1) | iv | ಅಸ್ಪೃಶ್ಯತೆಯ ನಿರ್ಮೂಲನೆ |

## 2.4.3.3. ಮೂಲಭೂತ ಕರ್ತವ್ಯಗಳು

ಪ್ರಜಾಪ್ರಭುತ್ವದ ಗುರಿಗಳನ್ನು ಸಾಧಿಸಲು ಕೇವಲ ಹಕ್ಕುಗಳು ನೆರವಾಗುವುದಿಲ್ಲ ಎಂಬುದು ನಮಗೆ ತಿಳಿದಿದೆ. ಇದನ್ನು ಅಗತ್ಯವಾದ ಕರ್ತವ್ಯಗಳಿಂದ ಸಮತೋಲನ ಮಾಡಬೇಕು. ಈ ದಿಶೆಯಲ್ಲಿ 1976ರಲ್ಲಿ ಸಂವಿಧಾನಕ್ಕೆ ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಹಕ್ಕುಗಳು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುದು ನಮಗೆ ತಿಳಿದಿರಬೇಕು. ಇವೆರಡರಲ್ಲಿ ಯಾವುದಕ್ಕೆ ಊನ ಬಂದರೂ ಪ್ರಜಾಪ್ರಭುತ್ವ ಸೋಲುತ್ತದೆ.

ಮೂಲಭೂತ ಕರ್ತವ್ಯಗಳನ್ನು ಸೇರಿಸಿಕೊಳ್ಳುವುದರಿಂದ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಅನುಚ್ಛೇದ 29(1)ರ ಜೊತೆಗೆ ಮತ್ತು ಇತರ ಹಲವು ರಾಷ್ಟ್ರಗಳ ಸಂವಿಧಾನದ ಕೆಲವು ಆಧುನಿಕ ಅವಕಾಶಗಳೊಂದಿಗೆ ಸಮೀಕರಿಸಿಕೊಂಡಂತಾಗಿದೆ.

ದೇಶಭಕ್ತಿಯ ಚೈತನ್ಯವನ್ನು ಉತೇಜಿಸಲು ಮತ್ತು ಏಕತೆಯನ್ನು ಎತ್ತಿ ಹಿಡಿಯವಲ್ಲಿ ಎಲ್ಲ ನಾಗರಿಕರಿಗೆ ಸಹಾಯವಾಗುವಂತೆ ನೀಡಿರುವ ನೈತಿಕ ಕಟ್ಟುಪಾಡುಗಳೇ ಮೂಲಭೂತ ಕರ್ತವ್ಯಗಳು. ಈ ಕರ್ತವ್ಯಗಳನ್ನು ನಿರ್ವಹಿಸಲು ನಾಗರಿಕರಿಗೆ ಸಂವಿಧಾನದಿಂದ ನೈತಿಕವಾದ ನಿರ್ಬಂಧವಿದೆ. ಮೂಲಭೂತ ಹಕ್ಕುಗಳಂತೆ ಅವುಗಳನ್ನು ಕಾನೂನು ಬದ್ಧವಾಗಿ ಜಾರಿಗೆ ತರಲಾಗದು. ಸಂವಿಧಾನವು ಸಮರ್ಪಕವಾಗಿ ಬದುಕಲು ಅಗತ್ಯವಾದ ಹಕ್ಕುಗಳನ್ನು ಖಚಿತಪಡಿಸಿರುವಾಗ ನಾಗರಿಕರಾದ ನಾವು ಅನುಸರಿಸಲೇಬೇಕಾದ ಕೆಲವು ಕರ್ತವ್ಯಗಳಿವೆ ಎಂಬುದನ್ನೂ ಒಪ್ಪಿಕೊಳ್ಳಲೇಬೇಕು. ಈ ಕರ್ತವ್ಯಗಳನ್ನು ಸಂವಿಧಾನದ IV-A ಭಾಗದಲ್ಲಿ ಹೇಳಲಾಗಿದೆ. 1976ರಲ್ಲಿ ಸಂವಿಧಾನದ 51ನೇ ಅಧಿನಿಯಮವು 42ನೇ ತಿದ್ದುಪಡಿಯಿಂದ ನಾಗರಿಕರ ಮೂಲಭೂತ ಕರ್ತವ್ಯಗಳನ್ನು ಸಂವಿಧಾನಕ್ಕೆ ಸೇರಿಸಿದೆ. ಈ ಕರ್ತವ್ಯಗಳು ಭಾರತೀಯ ನಾಗರಿಕರಿಗೆ ಮಾತ್ರ ಅನ್ವಯಿಸುತ್ತವೆ. ಇದರಲ್ಲಿ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಇವು ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿರಬೇಕು.

1. ಸಂವಿಧಾನಕ್ಕೆ ಬದ್ಧರಾಗಿರುವುದು ಮತ್ತು ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರೀಯ ಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;
2. ಸ್ವಾತಂತ್ರ್ಯಕ್ಕಾಗಿ ನಡೆದ ರಾಷ್ಟ್ರೀಯ ಹೋರಾಟವನ್ನು ಪ್ರಚೋದಿಸಿದ ಉದಾತ್ತ ಆದರ್ಶಗಳನ್ನು ಪಾಲಿಸುವುದು ಮತ್ತು ಕಾಪಾಡುವುದು;
3. ಭಾರತದ ಸಾರ್ವಭೌಮತ್ವವನ್ನು ಏಕತೆಯನ್ನು ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುವುದು ಮತ್ತು ರಕ್ಷಿಸುವುದು;
4. ದೇಶವನ್ನು ರಕ್ಷಿಸುವುದು ಮತ್ತು ಕರೆಕೊಟ್ಟಾಗ ರಾಷ್ಟ್ರೀಯ ಸೇವೆಯನ್ನು ನೀಡುವುದು;
5. ವಿವಿಧ ಧಾರ್ಮಿಕ, ಭಾಷಿಕ, ಪ್ರಾದೇಶಿಕ ಮತ್ತು ವಾಂಶಿಕ ವೈವಿಧ್ಯತೆಯ ಭಾರತೀಯರಲ್ಲಿ ಸಾಮರಸ್ಯ ಮತ್ತು ಸಹೋದರತ್ವವನ್ನು ಉತ್ತೇಜಿಸುವುದು; ಮಹಿಳೆಯರ ಘನತೆಗೆ ಅವಹೇಳನಕಾರಿಯಾದ ಅಭ್ಯಾಸಗಳನ್ನು ತ್ಯಜಿಸುವುದು;
6. ಭಾರತೀಯ ಸಮ್ಮಿಶ್ರ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು;
7. ಕಾಡುಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳನ್ನೊಳಗೊಂಡಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಮತ್ತು ಪ್ರಾಣಿದಯೆ ತೋರುವುದು;
8. ವೈಜ್ಞಾನಿಕ ಮನೋಭಾವ, ಮಾನವೀಯತೆ, ಮತ್ತು ವಿಚಾರಣೆ ಮತ್ತು ಸುಧಾರಣಾ ಮನೋಭಾವಗಳನ್ನು ಬೆಳೆಸಿಕೊಳ್ಳುವುದು;
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸೆಯನ್ನು ವಿರೋಧಿಸುವುದು;
10. ಉನ್ನತಮಟ್ಟದ ರಾಷ್ಟ್ರೀಯ ಪ್ರಯತ್ನಗಳು ಮತ್ತು ಸಾಧನೆಗೆ ಪೂರಕವಾಗುವಂತೆ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಯ ಎಲ್ಲ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯ ಕಡೆಗೆ ಶ್ರಮಿಸುವುದು;
11. ಪೋಷಕರು ಅವರ ಮಕ್ಕಳಿಗೆ ಮತ್ತು ಅವರ ಪೋಷಣೆಯಲ್ಲಿರುವ ಮಕ್ಕಳಿಗೆ 6–14 ವಯಸ್ಸಿನವರೆಗೆ ಶಿಕ್ಷಣಕ್ಕೆ ಅವಕಾಶ ಮಾಡಿಕೊಡುವುದು.

## ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ನಡುವಿನ ಸಂಬಂಧ

ಸಂವಿಧಾನದ ಭಾಗ III ರಲ್ಲಿ ಖಚಿತಪಡಿಸಲಾಗಿರುವ ಮೂಲಭೂತ ಹಕ್ಕುಗಳು ಮಾನವನ ಬೆಳವಣಿಗೆಗೆ ಅಗತ್ಯವಾದ ಸ್ವಾಭಾವಿಕ ಹಕ್ಕುಗಳಾಗಿವೆ. ಅವುಗಳನ್ನು ನ್ಯಾಯಾಲಯದ ಕಾನೂನುಗಳ ಮೂಲಕ ಜಾರಿಗೊಳಿಸಬಹುದಾಗಿದೆ. ಯಾವುದೇ ಮೂಲಭೂತ ಹಕ್ಕನ್ನು ತಳ್ಳಿಹಾಕುವ ಅಥವಾ ಮೊಟಕುಗೊಳಿಸುವ ಅವಕಾಶಗಳಿಲ್ಲ. ಮೂಲಭೂತ ಹಕ್ಕುಗಳನ್ನು ವ್ಯಾಖ್ಯಾನಿಸುವಾಗ, ಮೂಲಭೂತ ಕರ್ತವ್ಯಗಳನ್ನು ಅನುಸರಿಸಿಲ್ಲವಾದರೂ ಮೂಲಭೂತ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಯುವಜನರು ತಮ್ಮ ಹಕ್ಕುಗಳನ್ನು ತಿಳಿಯುವಂತೆಯೇ ತಮ್ಮ ಕರ್ತವ್ಯಗಳನ್ನೂ ಅರಿತಿರಬೇಕಾದುದು ಅವಶ್ಯಕ. ತಮ್ಮನ್ನು ಇತರರು ಹೇಗೆ ಕಾಣಬೇಕೆಂದು ಅರ್ಥೈಸಿಕೊಳ್ಳುವುದರ ಜೊತೆಗೆ ತಾವು ಇತರರನ್ನು ಹೇಗೆ ಗೌರವಿಸಬೇಕು ಎಂಬುದನ್ನೂ ತಿಳಿದಿರಬೇಕು. ಈ ಎರಡನ್ನೂ ಆಳವಾಗಿ ಅದರ ನಿಜವಾದ ಅರ್ಥದಲ್ಲಿ ಅರ್ಥೈಸಿಕೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಚರ್ಚಿಸುವ, ಅನ್ವೇಷಿಸುವ ಮತ್ತು ಸವಾಲು ಸ್ವೀಕರಿಸುವ ಗುಣಗಳು ಬೆಳೆಯುತ್ತವೆ.

ವಿದ್ಯಾರ್ಥಿಗಳು ಹಕ್ಕುಗಳ ಕುರಿತಾಗಿ ಗಳಿಸುವ ಜ್ಞಾನ ಮತ್ತು ಗೌರವ, ಜೊತೆಗೆ ವೈವಿಧ್ಯತೆ ಮತ್ತು ವ್ಯತ್ಯಾಸಗಳನ್ನು ಕುರಿತ ಅರಿವು, ಗೌರವ ಮತ್ತು ಸಹನೆ ಇವು ಪೂರ್ವಾಗ್ರಹಗಳನ್ನು ಎದುರಿಸಿ, ಸಂಬಂಧಗಳನ್ನು ಗಟ್ಟಿಗೊಳಿಸಿ, ಬದುಕಿನಿಂದ ಬಹಳಷ್ಟು ಪಡೆಯಲು ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸುತ್ತದೆ. ನಮ್ಮ ವಿಭಿನ್ನವಾದ, ಅತ್ಯಂತ

ಸವಾಲುಗಳ ಸಮಾಜದಲ್ಲಿ ಈ ಧನಾತ್ಮಕ ಮತ್ತು ವಿಶಾಲ ಮನೋಭಾವವನ್ನು ಬೆಳೆಸುವುದು ಅತ್ಯಂತ ಅಗತ್ಯ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ: 3

ಇವುಗಳಲ್ಲಿ ಮೂಲಭೂತ ಕರ್ತವ್ಯಗಳನ್ನು '✓' ಚಿಹ್ನೆಯಿಂದ ಗುರುತಿಸಿ

1. ಸಂವಿಧಾನಕ್ಕೆ ಬದ್ಧರಾಗಿರುವುದು ಮತ್ತು ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರೀಯ ಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;
2. ಸಮಯಕ್ಕೆ ಸರಿಯಾಗಿ ತೆರಿಗೆ ಪಾವತಿಸುವುದು;
3. ಸ್ವಾತಂತ್ರ್ಯಕ್ಕಾಗಿ ನಡೆದ ರಾಷ್ಟ್ರೀಯ ಹೋರಾಟವನ್ನು ಪ್ರಚೋದಿಸಿದ ಉದಾತ್ತ ಆದರ್ಶಗಳನ್ನು ಪಾಲಿಸುವುದು ಮತ್ತು ಕಾಪಾಡುವುದು;
4. ರಾಷ್ಟ್ರದ ಉತ್ಪಾದಕತೆಗೆ ಕೊಡುಗೆ ನೀಡುವುದು;
5. ಭಾರತದ ಸಾರ್ವಭೌಮತ್ವವನ್ನು ಏಕತೆಯನ್ನು ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುವುದು ಮತ್ತು ರಕ್ಷಿಸುವುದು;
6. ಎಲ್ಲ ಮಕ್ಕಳೂ ಉನ್ನತ ಶಿಕ್ಷಣ ಪಡೆಯುವಂತೆ ಪೋಷಕರು ಅವಕಾಶ ಕಲ್ಪಿಸುವುದು;
7. ದೇಶವನ್ನು ರಕ್ಷಿಸುವುದು ಮತ್ತು ಕರೆಕೊಟ್ಟಾಗ ರಾಷ್ಟ್ರೀಯ ಸೇವೆಯನ್ನು ನೀಡುವುದು;
8. ರಾಜಕೀಯ ಕ್ಷೇತ್ರದಲ್ಲಿ ಸಮನಾಗಿ ಪಾಲ್ಗೊಳ್ಳುವುದು;
9. ವಿವಿಧ ಧಾರ್ಮಿಕ, ಭಾಷಿಕ, ಪ್ರಾದೇಶಿಕ ಮತ್ತು ವಾಂಶಿಕ ವೈವಿಧ್ಯತೆಯ ಭಾರತೀಯರಲ್ಲಿ ಸಾಮರಸ್ಯ ಮತ್ತು ಸಹೋದರತ್ವವನ್ನು ಉತ್ತೇಜಿಸುವುದು;ಮಹಿಳೆಯರ ಘನತೆಗೆ ಅವಹೇಳನಕಾರಿಯಾದ ಅಭ್ಯಾಸಗಳನ್ನು ತ್ಯಜಿಸುವುದು;

## 2.4.4. ಸಾರಾಂಶಿಸೋಣ

- ಹಕ್ಕು ಎಂಬುದು ಸಾಮಾನ್ಯವಾಗಿ ವ್ಯಕ್ತಿಯ ವಿವೇಚನಾತ್ಮಕವಾದ ಕೋರಿಕೆ, ಸಮಾಜದಿಂದ ಅದನ್ನು ಗುರುತಿಸಿರುವಿಕೆ ಮತ್ತು ಕಾನೂನಿನ ಪ್ರಕಾರ ಅದರ ಮಂಜೂರು – ಈ ಅಂಶಗಳನ್ನು ಸೂಚಿಸುತ್ತದೆ.
- ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಗುರುತಿಸಿ ಪ್ರತಿಪ್ರಜೆಗೂ ಇದರ ಅನ್ವಯಕ್ಕೆ ಅವಕಾಶಮಾಡಿಕೊಡಲಾಗಿದೆ. ಈ ಮೂಲಭೂತ ಹಕ್ಕುಗಳ ಲಕ್ಷಣಗಳು: ಇವು ಸಮಗ್ರವೂ ವಿಸ್ತಾರವೂ ಆದವು; ಇವು ಖಚಿತಪಡಿಸಿದ ಹಕ್ಕುಗಳು;ಅಗತ್ಯವಿದ್ದರೆ ತಿದ್ದುಪಡಿ ಮಾಡಬಹುದಾದವು; ಅಗತ್ಯವಿದ್ದರೆ ಅಮಾನತುಗೊಳಿಸಬಹುದಾದವು ; ಇವು ಸಂವಿಧಾನದ ಅನಿವಾರ್ಯ ಭಾಗ; ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕುಗಳನ್ನು ಕೊಡುವಂತಹದು; ಕೆಲವು ಋಣಾತ್ಮಕ ಶಬ್ದಗಳೊಂದಿಗೆ ಹೆಣೆದಿರುವಂತಹುದು ಮತ್ತು ಕೆಲವು ಧನಾತ್ಮಕ ಶಬ್ದಗಳೊಂದಿಗೆ ಹೆಣೆದಿರುವಂತಹುದು; ಕಾನೂನುಗಳು ಮೂಲಭೂತ ಹಕ್ಕುಗಳೊಂದಿಗೆ ಸ್ಥಿರವಾಗಿರುವಂತಹವು.
- ಮೂಲಭೂತ ಹಕ್ಕುಗಳನ್ನು ಎರಡು ಪ್ರಮುಖ ಮಾನದಂಡಗಳ ಆಧಾರದ ಮೇಲೆ ವರ್ಗೀಕರಿಸಲಾಗಿದೆ: ಪೌರತ್ವದ ಸ್ಥಾನಮಾನ, ಮಿತಿಯ ವ್ಯಾಪ್ತಿ
- ವಿವಿಧ ಹಕ್ಕುಗಳ ಮೂಲಕ ನಿರ್ದಿಷ್ಟ ಅವಕಾಶಗಳನ್ನು ಕಲ್ಪಿಸಲಾಗಿದೆ : ಸಮಾನತೆಯ ಹಕ್ಕುಗಳು:

ವಿಧಿ14 : ಸಮಾನತೆಯ ಹಕ್ಕು, ವಿಧಿ15: 1) ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ

ಆಧಾರದ ಮೇಲೆ ತಾರತಮ್ಯ ನಿಷೇಧ, ವಿಧಿ16: ಸಾರ್ವಜನಿಕ ನಿಯೋಜನೆಯ ವಿಷಯದಲ್ಲಿ ಸಮಾನಾವಕಾಶ, ವಿಧಿ17: ಅಸ್ಪೃಶ್ಯತೆಯ ನಿರ್ಮೂಲನೆ,ವಿಧಿ18: ಶೀರ್ಷಿಕೆಗಳ ನಿರ್ಮೂಲನೆ ಅಥವಾ ಬಿರುದುಗಳ ರದ್ದತಿ; ಸ್ವಾತಂತ್ರ್ಯದ ಹಕ್ಕುಗಳು: ವಿಧಿ 19: ಸ್ವಾತಂತ್ರ್ಯದ ಹಕ್ಕು, ವಿಧಿ19(1)ಮಾಹಿತಿ ಹಕ್ಕು ಕಾಯಿದೆ, ವಿಧಿ20: ಅಪರಾಧಗಳ ಬಗ್ಗೆ ಅಪರಾಧಿಯೆಂದು ನಿರ್ಣಯಿಸುವ ಸಂಬಂಧದಲ್ಲಿ ಸಂರಕ್ಷಣೆ: ವಿಧಿ 21; ಜೀವದ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ, ವಿಧಿ21ಎ:ಶಿಕ್ಷಣದ ಹಕ್ಕು, ವಿಧಿ22: ಕೆಲವು ಸಂದರ್ಭಗಳಲ್ಲಿ ದಸ್ತಗಿರಿಯಿಂದ ಮತ್ತು ಸ್ಥಾನಬದ್ಧತೆಯಿಂದ ಸಂರಕ್ಷಣೆ, ವಿಧಿ23: ಶೋಷಣೆಯ ವಿರುದ್ಧ ಹಕ್ಕು, ವಿಧಿ24: ಕಾರ್ಖಾನೆಗಳು, ಮುಂತಾದವುಗಳಲ್ಲಿ ಮಕ್ಕಳ ನಿಯೋಜನೆಗೆ ನಿಷೇಧ, ವಿಧಿ25: ಧರ್ಮ ಸ್ವಾತಂತ್ರ್ಯದ ಹಕ್ಕು, ವಿಧಿ29: ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು, ವಿಧಿ30: ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು,ವಿಧಿ32: ಸಂವಿಧಾನಾತ್ಮಕ ಪರಿಹಾರೋಪಾಯಗಳ ಹಕ್ಕು.

- 1976ರಲ್ಲಿ ಸಂವಿಧಾನದ 51ನೇ ಅಧಿನಿಯಮವು 42ನೇ ತಿದ್ದುಪಡಿಯಿಂದ ನಾಗರಿಕರ ಮೂಲಭೂತ ಕರ್ತವ್ಯಗಳನ್ನು ಸಂವಿಧಾನಕ್ಕೆ ಸೇರಿಸಿದೆ. ಈ ಕರ್ತವ್ಯಗಳು ಭಾರತೀಯ ನಾಗರಿಕರಿಗೆ ಮಾತ್ರ ಅನ್ವಯಿಸುತ್ತವೆ.

## 2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–1

1.4,5.6– '✓'

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ: 2

1–ಸಿ–iv

2– ಡಿ–iii

3– ಎ –iv

4–ಬಿ–i

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ : 3

1,3,5,7,9, – '✓'

## 2.4.6. ಘಟಕಾಂತ್ಯ ಅಭ್ಯಾಸಗಳು

1. ಭಾರತ ಸಂವಿಧಾನದ ಮೂಲಕ ಕೊಡಮಾಡಿರುವ ಹಕ್ಕುಗಳನ್ನು ವಿವರಿಸಿ
2. ಭಾರತ ಸಂವಿಧಾನದ ನಿಗದಿಪಡಿಸಿರುವ ಕರ್ತವ್ಯಗಳನ್ನು ವಿಚಾರಮಾಡಿ.

## 2.4.7. ಪರಾಮರ್ಶನ ಸೂಚಿ

https://en.wikipedia.org/wiki/Fundamental_rights_in_India

http://indif.com/india/government/fundamental_rights.asp

http://knowindia.gov.in/profile/fundamental-rights.php

http://download.nos.org/srsec317newE/317EL6.pdf

https://edugeneral.org/blog/polity/fundamental-rights-articles-14-18-19-22-23-24-25-28-29-30-32

http://www.constitution.org/cons/india/p03.html

https://www.mapsofindia.com/government-of-india/fundamental-rights-citizens.html

https://www.jagranjosh.com/general-knowledge/fundamental-rights-1434437575-1

https://www.equalityhumanrights.com/en/secondary-education-resources/useful-information/why-teach-equality-and-human-rights

https://www.indianetzone.com/40/fundamental_duties.htm

https://www.importantindia.com/1998/list-of-fundamental-duties-in-indian-constitution/

http://www.netapedia.in/resources/fundamentalduties.php

https://www.academia.edu/6205487/Significance_of_fundamental_duties

**********

# ಬ್ಲಾಕ್–2: ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು
# ಘಟಕ–5: ಶಿಕ್ಷಣದ ಸಾರ್ವತ್ರೀಕರಣ ಮತ್ತು ಶಿಕ್ಷಣದ ಹಕ್ಕು ಕಾಯ್ದೆ (RTE) 2009 ಇವುಗಳ ಕುರಿತು ಸಂವಿಧಾನಿಕ ಹಸ್ತಕ್ಷೇಪ

## ಘಟಕದ ರಚನೆ


2.5.1. ಕಲಿಕಾ ಉದ್ದೇಶಗಳು

2.5.2. ಪೀಠಿಕೆ

2.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.5.3.1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಅದರ ಹಿನ್ನೆಲೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2.5.3.2. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಂವಿಧಾನಾತ್ಮಕ ಅವಕಾಶಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

2.5.3.3. ಶಿಕ್ಷಣ ಮಾನವನ ಹಕ್ಕು ಮತ್ತು ಶಿಕ್ಷಣ ಹಕ್ಕು ಕಾಯಿದೆ(ಆರ್.ಟಿ.ಇ.)

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳಿ–3

2.5.3.4. ಸಾರಾಂಶಿಸೋಣ

2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

2.5.6. ಘಟಕಾಂತ್ಯ ಅಭ್ಯಾಸಗಳು

2.5.7. ಪರಾಮರ್ಶನ ಸೂಚಿ


## 2.5.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದ ಸಾರ್ವತ್ರೀಕರಣದ ಅರ್ಥ, ಗುರಿ ಮತ್ತು ಪ್ರಾಮುಖ್ಯತೆಗಳನ್ನು ವಿವರಿಸುವರು;
- ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವಲ್ಲಿ ಸಾಂವಿಧಾನಿಕ ಪ್ರಯತ್ನಗಳನ್ನು ವಿಶ್ಲೇಷಿಸುವರು;
- ಶಿಕ್ಷಣ ಹಕ್ಕು ಕಾಯಿದೆಯ ಅಡಿಯಲ್ಲಿನ ನಿಬಂಧನೆಗಳನ್ನು ವಿವರಿಸುವರು;
- ಶಿಕ್ಷಣದ ಹಕ್ಕು ಕಾಯಿದೆಯ ನಿಬಂಧನೆಗಳನ್ನು ಸಾಧಿಸಲು ಸರ್ಕಾರದಿಂದ ಕೊಡಲಾಗಿರುವ ಅವಕಾಶಗಳನ್ನು ಪ್ರಶಂಶಿಸುವರು; ಮತ್ತು
- ಈ ಅವಕಾಶಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಅಧ್ಯಾಪಕರ ಪಾತ್ರವನ್ನು ಸ್ಪಷ್ಟಪಡಿಸುವರು.

## 2.5.2. ಪೀಠಿಕೆ

ಪ್ರಜಾಪ್ರಭುತ್ವದ ಸಾಮಾಜಿಕ ಹಿನ್ನೆಲೆಯನ್ನು ಬಲಪಡಿಸುವಲ್ಲಿ ಶಿಕ್ಷಣವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದುದರಿಂದಲೇ ಪ್ರಜಾಪ್ರಭುತ್ವದಲ್ಲಿ ಉಳಿದೆಲ್ಲ ವಿಷಯಗಳಿಗಿಂತ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿಯೂ ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಒಟ್ಟು ಶಿಕ್ಷಣದ ಮತ್ತು ಪ್ರತಿ ವ್ಯಕ್ತಿಯ ಶಿಕ್ಷಣದ ಯಶಸ್ಸು ಪ್ರಾಥಮಿಕ ಶಿಕ್ಷಣದ ಮೇಲೆಯೇ ಅವಲಂಬಿಸಿರುವುದರಿಂದ ಈ ಹಂತದಲ್ಲಿ ಬಲಿಷ್ಠವಾದ ಬುನಾದಿಯನ್ನು ಹಾಕಬೇಕಾಗುತ್ತದೆ. ಈ ಸುಭದ್ರ ಅಡಿಪಾಯದ ಮೇಲೆ ಬೆಳೆಯುವ ಯುವಜನಾಂಗವೇ ಭವಿಷ್ಯ ಸಮಾಜವನ್ನು ರೂಪಿಸುತ್ತದೆ. ಸಾಮೂಹಿಕ ಸಾಕ್ಷರತೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಪ್ರಾಥಮಿಕ ಶಿಕ್ಷಣ ನಿರ್ಣಾಯಕವಾದ ಹಂತ. ಪ್ರಾಥಮಿಕ ಶಿಕ್ಷಣವು ಪ್ರಜಾಪ್ರಭುತ್ವ ಸಂಸ್ಥೆಗಳ ಪರಿಣಾಮಕಾರಿ ಕಾರ್ಯನಿರ್ವಹಣೆ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ರಚನೆಯ ಆಧುನೀಕರಣದ ಮೂಲಭೂತ ಆವಶ್ಯಕತೆಯೂ ಹೌದು.

ರಾಷ್ಟ್ರನಿರ್ಮಾಣದಲ್ಲಿ ಶಿಕ್ಷಣದ ಮಹತ್ವವನ್ನು ಮನಗಂಡು ಭಾರತ ಸಂವಿಧಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿ, ಅದನ್ನು ಸಾಧಿಸಲು ವಿವಿಧ ನೀತಿ–ನಿಯಮಗಳು ಮತ್ತು ಅವಕಾಶಗಳನ್ನು ರೂಪಿಸಿದೆ. ಅವುಗಳನ್ನು ಸಾಕಾರಗೊಳಿಸಲು ಸರ್ಕಾರವು ಕಾಲದಿಂದ ಕಾಲಕ್ಕೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ನೀತಿ ನಿಬಂಧನೆಗಳನ್ನು ಗಟ್ಟಿಗೊಳಿಸಿದೆ. ಈ ರೀತಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂವಿಧಾನ ಕೊಡಮಾಡಿರುವ ಅವಕಾಶಗಳನ್ನೂ ಇವುಗಳಲ್ಲಿ ಅತಿ ಪ್ರಮುಖವಾದ ಶಿಕ್ಷಣದ ಹಕ್ಕು ಕಾಯಿದೆಯನ್ನು ಕುರಿತು ಈ ಘಟಕದಲ್ಲಿ ವಿಶ್ಲೇಷಿಸೋಣ.

## 2.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 2.5.3.1. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಅದರ ಹಿನ್ನೆಲೆ

#### ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕಣದ ಪರಿಕಲ್ಪನೆ:

ಶಿಕ್ಷಣದ ಸಾರ್ವತ್ರೀಕರಣ ಎಂಬ ಪರಿಕಲ್ಪನೆಯು, ಜನಾಂಗ, ಬಣ್ಣ, ಜಾತಿ, ಧರ್ಮ, ಲಿಂಗ ಮತ್ತು ಸಾಮರ್ಥ್ಯ ಈ ಯಾವುದೇ ಅಂಶಗಳನ್ನು ಪರಿಗಣಿಸದೆ ಸಂಬಂಧಪಟ್ಟ ಎಲ್ಲರಿಗೂ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಸೂಚಿಸುತ್ತದೆ. 6–14 ವಯೋಮಾನದೊಳಗಿನ ಅಥವಾ 1–7ನೇ ತರಗತಿಯವರೆಗಿನ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂಬ ಅರ್ಥವನ್ನೂ ಒಳಗೊಂಡಿರುವುದಲ್ಲದೆ, ಶಿಕ್ಷಣವು ಎಲ್ಲರಿಗೂ ದೊರೆಯಬೇಕು, ಆಯ್ದ ಕೆಲವರಿಗಾಗಿ ಮಾತ್ರವಲ್ಲ ಎಂಬುದನ್ನೂ ಸೂಚಿಸುತ್ತದೆ. ಈ ಪರಿಕಲ್ಪನೆಯು 'ಶಿಕ್ಷಣವು ಮಗುವಿನ ಜನ್ಮಸಿದ್ಧ ಹಕ್ಕು' ಎಂಬುದನ್ನು ಒಪ್ಪಿಕೊಳ್ಳುತ್ತದೆ. ಬಡವರು, ಶ್ರೀಮಂತರು, ನಗರ ಅಥವಾ ಗ್ರಾಮೀಣ ವಾಸಿಗಳು, ಶಾಲೆಗೆ ದೂರದಲ್ಲಿ ವಾಸಿಸುವವರು ಎಲ್ಲರಿಗೂ ಶಿಕ್ಷಣದ ಸೌಲಭ್ಯಗಳನ್ನು ಒದಿಗಸಬೇಕು ಎಂದು ತಿಳಿಸುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ(2000)ದ ಪ್ರಕಾರ, ಎಲ್ಲ ವಾಸಸ್ಥಳಗಳಲ್ಲೂ ಶಾಲಾ ಸೌಲಭ್ಯಗಳೊಂದಿಗೆ ನೂರಕ್ಕೆ ನೂರು ಮಕ್ಕಳ ದಾಖಲಾತಿ ಮತ್ತು ಉಳಿಕೆಯನ್ನು ಸಾಧಿಸುವುದೇ ಶಿಕ್ಷಣದ ಸಾರ್ವತ್ರೀಕರಣ. ರಾಷ್ಟ್ರೀಯ ಶಿಕ್ಷಣ ನೀತಿಯು ಈ ಪರಿಕಲ್ಪನೆಗೆ ವಿಶಾಲವ್ಯಾಪ್ತಿಯನ್ನು ನೀಡಿದೆ. ಇದು ದಾಖಲಾತಿಯ ಮೇಲಿನ ಒತ್ತನ್ನು ಭಾಗವಹಿಕೆ, ಉಳಿಕೆ ಮತ್ತು ಸಾಧನೆಯ ಕಡೆಗೆ ಪಲ್ಲಟಗೊಳಿಸಿದೆ. ಎಂಟನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಎಂದರೆ ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ಉಳಿಕೆ ಮತ್ತು ಸಾರ್ವತ್ರಿಕ ಸಾಧನೆ. ಹತ್ತನೇ ಪಂಚವಾರ್ಷಿಕ ಯೋಜನೆಯು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಐದು ಮಾನದಂಡಗಳ ಪ್ರಾಮುಖ್ಯತೆಯನ್ನು ನೀಡಿದೆ. ಅವೆಂದರೆ, ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಉಳಿಕೆ, ಸಾರ್ವತ್ರಿಕ ಸಾಧನೆ ಮತ್ತು ಸಮತೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಮೂಲಭೂತವಾಗಿ ಮೂರು ಪ್ರಮುಖ ಅಂಶಗಳನ್ನು ಒಳಗೊಂಡಿದೆ.

- ಪ್ರವೇಶದ ಅವಕಾಶದ ಸಾರ್ವತ್ರೀಕರಣ: 6–14 ವಯೋಮಾನದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಅವಕಾಶವನ್ನು ಸಾಧ್ಯವಾಗುವಂತೆ ಎಲ್ಲ ಸೌಲಭ್ಯಗಳನ್ನು ನೀಡುವುದು;

- ದಾಖಲಾತಿಯ ಸಾರ್ವತ್ರೀಕರಣ: 6–14 ವಯೋಮಾನದ ಎಲ್ಲ ಮಕ್ಕಳನ್ನೂ ಶಾಲೆಗೆ ದಾಖಲಿಸಿಕೊಳ್ಳುವುದು; ಮತ್ತು
- ಉಳಿಕೆಯ ಸಾರ್ವತ್ರೀಕರಣ: 6–14 ವಯೋಮಾನದ ಎಲ್ಲ ಮಕ್ಕಳನ್ನೂ ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಶಾಲೆಯಲ್ಲಿ ಉಳಿಸಿಕೊಳ್ಳುವುದು.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು 1950ರಿಂದ ರಾಷ್ಟ್ರೀಯ ಗುರಿಯಾಗಿ ಸ್ವೀಕರಿಸಲಾಗಿದೆ. 14 ವರ್ಷ ವಯಸ್ಸಿನವರೆಗೆ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ಸಂವಿಧಾನದ ನಿರ್ದೇಶನ ತತ್ವಗಳು ಬಯಸುತ್ತವೆ. 2002ರ ಡಿಸೆಂಬರಿನಲ್ಲಿ ಮಾಡಲಾದ ಸಂವಿಧಾನದ ತಿದ್ದುಪಡಿಯ ಪ್ರಕಾರ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ. 6 ವರ್ಷಗಳವರೆಗಿನ ಮಕ್ಕಳಿಗೆ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ವಿಸ್ತರಣೆಯನ್ನು ನಿರ್ದೇಶಕ ತತ್ವಗಳಲ್ಲಿ ಸೇರಿಸಲಾಗಿದೆ. ಒಟ್ಟಿನಲ್ಲಿ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಈ ಎಲ್ಲ ಪ್ರಯತ್ನಗಳ ಗುರಿ.

## ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಹಿನ್ನೆಲೆ :

1870ರಲ್ಲಿ ಇಂಗ್ಲೆಂಡ್‌ನಲ್ಲಿ ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಜಾರಿಗೆ ತರಲಾಯಿತು. ಅದೇ ಸಮಯದಲ್ಲಿ ಭಾರತದಲ್ಲಿಯೂ ಸಹ ಕಡ್ಡಾಯ ಶಿಕ್ಷಣದ ಬೇಡಿಕೆ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಬಾಂಬೆ ಪ್ರೆಸಿಡೆನ್ಸಿಯ ದಾದಾಬಾಯಿ ನವರೋಜಿ ಮತ್ತು ಜ್ಯೋತಿಬಾ ಫುಲೆ ಇವರು ಭಾರತೀಯ ಶಿಕ್ಷಣ ಆಯೋಗ (ಹಂಟರ್ ಕಮಿಷನ್ 1882) ದ ಮುಂದೆ ತಮ್ಮ ಪ್ರಬಲ ಬೇಡಿಕೆಯನ್ನಿತ್ತರು. ಆಯೋಗವು ಈ ಬೇಡಿಕೆಯನ್ನು ತಾರ್ಕಿಕವಾಗಿ ಒಪ್ಪಿಕೊಂಡಿತು. ಕಡ್ಡಾಯ ಶಿಕ್ಷಣವನ್ನು ಪರಿಚಯಿಸಲು ಸಂಘಟಿತ ಆಂದೋಲನಕ್ಕೆ ಭಾರತೀಯ ಶಿಕ್ಷಣ ಆಯೋಗವು ಅನುವು ಮಾಡಿಕೊಟ್ಟಿತು. ಅಂದಿನಿಂದ ಹಲವಾರು ಭಾರತೀಯ ನಾಯಕರು ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಲು ಪ್ರಾರಂಭಿಸಿದರು. 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯು ಆಂದೋಲನಕ್ಕೆ ಮತ್ತಷ್ಟು ಬಲ ನೀಡಿತು. 1906ರ ಡಿಸೆಂಬರ್ 26ರಿಂದ 29ರವರೆಗೆ ಕಲ್ಕತ್ತಾದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯಗಳಲ್ಲಿ ಸರ್ಕಾರವು ಪ್ರಾಥಮಿಕ ಶಿಕ್ಷಣವನ್ನು ರಾಷ್ಟ್ರದಾದ್ಯಂತ ಉಚಿತ ಹಾಗೂ ಕಾಲಕ್ರಮದಲ್ಲಿ ಕಡ್ಡಾಯಗೊಳಿಸಲು ಕೂಡಲೆ ಕ್ರಮ ಕೈಗೊಳ್ಳಬೇಕು ಎಂದು ಗುರುತಿಸಲಾಯಿತು. 1906ರ ಕಲ್ಕತ್ತಾ ಅಧಿವೇಶನದಲ್ಲಿ 'ಶಿಕ್ಷಣ ಮಾನವನ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಲಾಯಿತು. 1912–14ರ ಅವಧಿಯಲ್ಲಿ ಗೋಪಾಲಕೃಷ್ಣ ಗೋಖಲೆಯವರು ಈ ನಿಟ್ಟಿನಲ್ಲಿ ಬಹಳವಾಗಿ ಶ್ರಮಿಸಿದರು. ಭಾರತ ಸರ್ಕಾರದ ಕಾಯಿದೆ 1919ರ ಅಂಗೀಕಾರವು ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸುವ ಯುಗಕ್ಕೆ ನಾಂದಿಯಾಯಿತು. ವಸಾಹತು ಶಾಹಿ ಆಳ್ವಿಕೆಯ ಅಂತ್ಯದ ವೇಳೆಗೆ 1944ರ ಯುದ್ಧದ ನಂತರದ ಶೈಕ್ಷಣಿಕ ಅಭಿವೃದ್ಧಿ ಯೋಜನೆಯು 6–14 ವಯೋಮಾನದ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ನೀಡಲು ಪ್ರಸ್ತಾಪಿಸಿತು. ಹೀಗೆ ಪ್ರಾರಂಭವಾದ ಅಂದೋಲನವು 1947ರ ವರೆಗೆ ಮುಂದುವರಿಯಿತು. ಅಂತಿಮವಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವು ಸ್ವಾತಂತ್ರ್ಯಾನಂತರದ ಭಾರತದ ಶೈಕ್ಷಣಿಕ ಅಭಿವೃದ್ಧಿಯ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. 1950ರಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಭಾರತ ಸಂವಿಧಾನದ 45ನೆಯ ಅನುಚ್ಛೇದದಲ್ಲಿ ಸೇರಿಸಲಾಗಿದೆ. ಅದರ ಪ್ರಕಾರ, 14ವಯಸ್ಸಿನವರೆಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಂವಿಧಾನ ಘೋಷಿಸಿದ ಹತ್ತು ವರ್ಷಗಳೊಳಗೆ ಮೊದಲು ಸಾಧಿಸಬೇಕಾಗಿತ್ತು. ಈ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳು ಮುಂದುವರೆಯುತ್ತಿದೆಯಾದರೂ ಈ ಗುರಿಯನ್ನು ಸಂಪೂರ್ಣವಾಗಿ ಸಾಧಿಸಲಾಗಿಲ್ಲ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಕುರಿತ ಕೆಳಗಿನ ಮೈಲಿಗಲ್ಲುಗಳನ್ನು ಕಾಲಾನುಕ್ರಮವಾಗಿ ಜೋಡಿಸಿ.

1. ಭಾರತದಲ್ಲಿ ಕಡ್ಡಾಯ ಶಿಕ್ಷಣದ ಬೇಡಿಕೆ ಪ್ರಾರಂಭ

2. ಕಲ್ಕತ್ತಾದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಯಲ್ಲಿ ತೆಗೆದುಕೊಂಡ ನಿರ್ಣಯಗಳಲ್ಲಿ ಪ್ರಮುಖ ವಿಷಯವಾಗಿ ಗುರುತಿಸಲಾದುದು
3. ಗೋಪಾಲಕೃಷ್ಣ ಗೋಖಲೆಯವ ಪ್ರಯತ್ನಗಳು
4. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಭಾರತ ಸಂವಿಧಾನದ 45ನೆಯ ಅನುಚ್ಛೇದದಲ್ಲಿ ಸೇರಿಸಿದುದು
5. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯಿಂದ ಆಂದೋಲನಕ್ಕೆ ಒತ್ತಾಸೆ
6. ಕಲ್ಕತ್ತಾ ಅಧಿವೇಶನದಲ್ಲಿ 'ಶಿಕ್ಷಣ ಮಾನವನ ಜನ್ಮಸಿದ್ಧ ಹಕ್ಕು' ಎಂದು ಘೋಷಣೆ
7. ಭಾರತೀಯ ಶಿಕ್ಷಣ ಆಯೋಗದ ಮುಂದೆ ಭಾರತೀಯರ ಬೇಡಿಕೆ
8. ಇಂಗ್ಲೆಂಡ್‌ನಲ್ಲಿ ಕಡ್ಡಾಯ ಶಿಕ್ಷಣ ಕಾಯಿದೆ
9. ಸ್ವಾತಂತ್ರ್ಯಾನಂತರದ ಭಾರತದ ಶೈಕ್ಷಣಿಕ ಅಭಿವೃದ್ಧಿಯ ಪ್ರಮುಖ ಗುರಿಯಾಗಿ ಪ್ರಾಮುಖ್ಯತೆ

## 1.5.3.2. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಂವಿಧಾನಾತ್ಮಕ ಅವಕಾಶಗಳು

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದ ಅವಕಾಶಗಳನ್ನು ಸಂವಿಧಾನಿಕ ವಿಧಿಗಳ ರೂಪದಲ್ಲಿ ನೀಡಲಾಗಿದೆ.

**ವಿಧಿ 45 :** ಇದು ಒಂದು ನಿರ್ದೇಶನ ತತ್ವ. **“**ಈ ಸಂವಿಧಾನ ಪ್ರಾರಂಭವಾದ 10ವರ್ಷಗಳ ಅವಧಿಯಲ್ಲಿ 6–14 ವಯೋಮಾನದ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ರಾಜ್ಯವು ಪ್ರಯತ್ನಿಸತಕ್ಕದ್ದು**”** ಎಂಬುದು ಇದರ ಒಕ್ಕಣೆ. ಇದಕ್ಕೆ ಸಂಬಂಧಿಸಿದಂತೆ 82ನೆಯ ತಿದ್ದುಪಡಿ ಮಾಡಲಾಗಿದ್ದು ಅದರಲ್ಲಿ ಕೆಳಕಂಡ ಮಾರ್ಪಾಡುಗಳನ್ನು ಮಾಡಲಾಗಿದೆ:

6ವರ್ಷ ತುಂಬುವವರೆಗೆ ಎಲ್ಲ ಮಕ್ಕಳಿಗೂ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ನೀಡಲು ರಾಜ್ಯವು ಪ್ರಯತ್ನಿಸತಕ್ಕದ್ದು.

6ರಿಂದ 14 ವಯೋಮಾನದ ಮಕ್ಕಳ ಶಿಕ್ಷಣವನ್ನು ಮಕ್ಕಳ ಮೂಲಭೂತ ಹಕ್ಕು ಎಂದು ಪರಿಗಣಿಸುವುದು.

ಸಂಬಂಧಿಸಿದ ಇತರ ವಿಧಿಗಳು: ವಿಧಿ:28, 29,30,350(ಎ).46: ಇವುಗಳ ವಿವರಗಳನ್ನು ಹಿಂದಿನ ಘಟಕಗಳಲ್ಲಿ ಕೊಡಲಾಗಿದೆ. ಗಮನಿಸಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಂವಿಧಾನಾತ್ಮಕ ಅವಕಾಶಗಳನ್ನು ಹೇಳುವ ವಿಧಿಗಳನ್ನು ಅಧ್ಯಯನ ಮಾಡಿ ಪ್ರತಿಯೊಂದರ ಶೈಕ್ಷಣಿಕ ನಿಹಿತಾರ್ಥಗಳನ್ನು ವಿಶ್ಲೇಷಿಸಿ.

## 1.5.3.3. ಶಿಕ್ಷಣದ ಹಕ್ಕು : ಶಿಕ್ಷಣ ಮಾನವನ ಹಕ್ಕು

ಶಿಕ್ಷಣ ಮಾನವನ ಹಕ್ಕು ಎಂಬುದನ್ನು ಅರ್ಥಮಾಡಿಕೊಳ್ಳುವ ಮೊದಲಿಗೆ ಮಾನವ ಹಕ್ಕು ಎಂದರೇನು ಎಂಬುದನ್ನು ನೆನಪಿಸಿಕೊಳ್ಳೋಣ. ಮಾನವ ಹಕ್ಕು ಎಂಬುದು ವ್ಯಕ್ತಿಗೌರವದ ತತ್ವವನ್ನವಲಂಬಿಸಿರುವಂತಹುದು. ಪ್ರತಿಯೊಬ್ಬ ವ್ಯಕ್ತಿಯ ಬದುಕಿಗೂ ಒಂದು ತಾರ್ಕಿಕ ಆಯಾಮವಿರುವಂತೆಯೇ ಒಂದು ನೈತಿಕ ಆಯಾಮವೂ ಇರುತ್ತದೆ. ಆದುದರಿಂದಲೇ ಅವನು ಗೌರವಕ್ಕೆ ಅರ್ಹನಾದವನು. ಇದು ಸಾರ್ವತ್ರಿಕವಾಗಿ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುವುದರಿಂದ ಇದನ್ನು 'ಮಾನವ ಹಕ್ಕು' ಎನ್ನಲಾಗುತ್ತದೆ. ಇದು ಎಲ್ಲರಿಗೂ ಅನ್ವಯಿಸುವ ಹಕ್ಕುಗಳು. ಇವು ಘನತೆ, ಸಮಾನತೆ, ಗೌರವ ಮತ್ತು ಸ್ವಾತಂತ್ರ್ಯದಂತಹ ಮೌಲ್ಯಗಳನ್ನು ಪರಸ್ಪರವಾಗಿ ಆಧರಿಸಿವೆ.ಇವುಗಳಿಗೆ

ಕಾನೂನಿನ ರಕ್ಷಣೆ ಇದೆ. ಜೀವಿಸುವ, ಸ್ವತಂತ್ರವಾಗಿರುವ, ಅಭಿವ್ಯಕ್ತಿಸುವ, ಸಮಾನತೆಯನ್ನನುಭವಿಸುವ, ಸಂತೋಷದಿಂದಿರುವ, ಮತ್ತು ಇತರ ಸಾಮಾಜಿಕ ಶೈಕ್ಷಣಿಕ ಹಕ್ಕುಗಳು ಇವುಗಳಿಗೆ ಉದಾಹರಣೆಗಳಾಗಿವೆ.

ಶಿಕ್ಷಣವು ಮೂಲಭೂತ ಮಾನವ ಹಕ್ಕು ಎಂಬುದು ಯುನೆಸ್ಕೊದ ಪ್ರಮುಖ ಧ್ಯೇಯ. ಇದನ್ನು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮತ್ತು ಇತರ ಅಂತರರಾಷ್ಟ್ರೀಯ ಮಾನವಹಕ್ಕುಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಶಿಕ್ಷಣದ ಹಕ್ಕು ಎಂಬುದು ಅಂತರರಾಷ್ಟ್ರೀಯ ಸಮುದಾಯವು ಅಳವಡಿಸಿಕೊಂಡ "ಶಿಕ್ಷಣ 2030" ಕಾರ್ಯಸೂಚಿ ಮತ್ತು ಸುಸ್ಥಿರ ಅಭಿವೃದ್ಧಿಗೆ ಆಧಾರವಾಗಿರುವ ಪ್ರಮುಖ ತತ್ವಗಳಲ್ಲಿ ಒಂದಾಗಿದೆ. ಸುಸ್ಥಿರ ಅಭಿವೃದ್ಧಿಗೆ ಶಿಕ್ಷಣದ ಹಕ್ಕು ಮೂಲಭೂತವಾದುದು.

ಶಿಕ್ಷಣವು ಒಂದು ಮೂಲಭೂತ ಹಕ್ಕು ಮತ್ತು ಇದನ್ನು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಸ್ಪಷ್ಟಪಡಿಸಿದೆ. 26ನೇ ವಿಧಿಯ ಪ್ರಕಾರ "ಶಿಕ್ಷಣ ಪ್ರತಿಯೊಬ್ಬರ ಹಕ್ಕು". ಈ ವಿಧಿ ಘೋಷಣೆಯಾದ ನಂತರದಲ್ಲಿ ಹಲವಾರು ಅಂತರರಾಷ್ಟ್ರೀಯ ಒಪ್ಪಂದಗಳು ಈ ಹಕ್ಕನ್ನು ಪುನರುಚ್ಚರಿಸಿವೆ. ಜಾತಿ, ಮತ, ಬಣ್ಣ, ಲಿಂಗ, ಧರ್ಮ ಇದಾವುದನ್ನೂ ಪರಿಗಣಿಸದೆ ಎಲ್ಲ ಮಕ್ಕಳಿಗೂ ಉಚಿತ, ಕಡ್ಡಾಯ ಮತ್ತು ಸಾರ್ವತ್ರಿಕ ಶಿಕ್ಷಣದ ಅರ್ಹತೆಯನ್ನು ಇದು ಬೆಂಬಲಿಸುತ್ತದೆ.

ಶಿಕ್ಷಣ ಮಾನವನ ಹಕ್ಕು ಎಂಬುದರ ಗುಣಲಕ್ಷಣಗಳು ಕೆಳಕಂಡಂತಿವೆ:

- ಇದು ಒಂದು ಮಾನವ ಹಕ್ಕು: ಶಿಕ್ಷಣವು ಒಂದು ಸವಲತ್ತಾಗಲೀ ರಾಜಕೀಯವಾದ ದತ್ತಿ, ಆಶಯವಾಗಲೀ ಅಲ್ಲ. ಇದು ಕರ್ತವ್ಯ ನಿರ್ವಹಿಸುವವರಿಗೆ ಮಾತ್ರವಲ್ಲದೆ ಎಲ್ಲರನ್ನೂ ಒಳಗೊಳ್ಳುತ್ತದೆ.
- ಇದು ಸಾರ್ವತ್ರಿಕವಾದುದು: ಇದು ಯಾವುದೇ ತಾರತಮ್ಯವಿಲ್ಲದೆ ಪ್ರತಿಯೊಬ್ಬರಿಗೂ ಅನ್ವಯವಾಗುವಂತಹುದು. ಇದು ಮಕ್ಕಳು, ಹದಿಹರೆಯದವರು, ಯುವಪೀಳಿಗೆ, ವಯಸ್ಕರು, ವೃದ್ಧರು ಎಲ್ಲರನ್ನೂ ಒಳಗೊಳ್ಳುತ್ತದೆ.
- ಇದು ಹೆಚ್ಚಿನ ಆದ್ಯತೆಯುಳ್ಳದ್ದು: ಇದು ದೇಶದ ಪ್ರಮುಖ ಅಗತ್ಯ ಮತ್ತು ಗರಿಷ್ಠ ಆದ್ಯತೆಯನ್ನು ಹೊಂದಿದೆ. ಶಿಕ್ಷಣದ ಹಕ್ಕನ್ನು ಖಚಿತಪಡಿಸಿಕೊಳ್ಳುವ ಕಟ್ಟುಪಾಡುಗಳನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ.
- ಇದು ಒಂದು ಪ್ರಮುಖ ಹಕ್ಕು: ಇತರ ಎಲ್ಲ ಮಾನವ ಹಕ್ಕುಗಳನ್ನು ಚಲಾಯಿಸುವಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ. ಇದು ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ನಾಗರಿಕ ಆಯಾಮಗಳನ್ನು ಹೊಂದಿದೆ.

## ನಿರ್ದೇಶಕ ತತ್ವಗಳಿಂದ ಮೂಲಭೂತ ಹಕ್ಕು-ಶಿಕ್ಷಣ

2002ರಲ್ಲಿಸಂವಿಧಾನದ 86ನೇ ತಿದ್ದುಪಡಿ ಕಾಯಿದೆ ಶಿಕ್ಷಣದ ಹಕ್ಕನ್ನು ಸಂವಿಧಾನದ ಭಾಗ-3ರಲ್ಲಿ ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿದೆ. ಇದರ ಮುಖ್ಯ ಲಕ್ಷಣಗಳು ಹೀಗಿವೆ:

- **ಮೂಲಭೂತ ಹಕ್ಕುಗಳಲ್ಲಿ ಬದಲಾವಣೆ :** 21ನೆಯ ವಿಧಿಯ ಕೆಳಗೆ 21(ಎ)ಅನ್ನು ಸೇರಿಸಲಾಗಿದ್ದು, ಇದು ಶಿಕ್ಷಣದ ಹಕ್ಕನ್ನು 6-14 ವರ್ಷದೊಳಗಿನ ಮಕ್ಕಳಿಗೆ ಮೂಲಭೂತ ಹಕ್ಕು ಎಂಬುದಾಗಿ ಮಾಡಿದೆ. ಅದರಂತೆ "6-14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ರಾಜ್ಯವು ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಕಾನೂನಿನ ಪ್ರಕಾರ ನೀಡುತ್ತದೆ."
- **ನಿರ್ದೇಶಕ ತತ್ವಗಳಲ್ಲಿ ಬದಲಾವಣೆ :** ಮೂಲತಃ 45ನೇ ವಿಧಿಯ ಅನುಸಾರ 'ಈ ಸಂವಿಧಾನದ ಪ್ರಾರಂಭದಿಂದ ಹತ್ತು ವರ್ಷಗಳ ಅವಧಿಯಲ್ಲಿ ಎಲ್ಲಾ ಮಕ್ಕಳಿಗೆ ಹದಿನಾಲ್ಕು ವರ್ಷ ತುಂಬುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ರಾಜ್ಯವು ಪ್ರಯತ್ನಿಸತಕ್ಕದ್ದು". ಇದು ಕೆಳಕಂಡಂತೆ

ಬದಲಾಗಿದೆ:

- ಆರು ವರ್ಷ ತುಂಬುವವರೆಗೆ ಎಲ್ಲಾ ಮಕ್ಕಳಿಗೆ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ನೀಡಲು ರಾಜ್ಯವು ಪ್ರಯತ್ನಿಸತಕ್ಕದ್ದು.
- **ಮೂಲಭೂತ ಕರ್ತವ್ಯಗಳಲ್ಲಿ ಬದಲಾವಣೆ :** 51(ಎ) ವಿಧಿಯನ್ನು ತಿದ್ದುಪಡಿ ಮಾಡಿ ಷರತ್ತು(ಜೆ) ನಂತರ ಷರತ್ತು(ಕೆ) ಸೇರಿಸಲಾಗಿದೆ. ಇದು ಮಕ್ಕಳಿಗೆ ಶಿಕ್ಷಣದ ಅವಕಾಶಗಳನ್ನು ಒದಗಿಸುವುದು ಪೋಷಕರ ಮೂಲಭೂತ ಕರ್ತವ್ಯವನ್ನಾಗಿ ಮಾಡಿದೆ.

**ಶಿಕ್ಷಣ ಹಕ್ಕು ಕಾಯಿದೆ : (ಆರ್.ಟಿ.ಇ.)**

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯನ್ನು ಆಗಸ್ಟ್ 4, 2009ರಿಂದ ಜಾರಿಗೆ ತರಲಾಯಿತು. ಈ ಕಾಯಿದೆಯ ಅಂಗೀಕಾರವು ಭಾರತದಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಒಂದು ಐತಿಹಾಸಿಕ ಚಳುವಳಿ ಎಂದು ಪರಿಗಣಿಸಲಾಗಿದೆ. ಭಾರತದ ಇತಿಹಾಸದಲ್ಲಿ ಮಕ್ಕಳಿಗೆ ಮೊದಲ ಬಾರಿಗೆ ಗುಣಮಟ್ಟದ ಶಿಕ್ಷಣದ ಹಕ್ಕನ್ನು ಖಚಿತಪಡಿಸಲಾಗಿದೆ. ಶಿಕ್ಷಣದ ಹಕ್ಕಿನ ಅನುಷ್ಠಾನಕ್ಕಾಗಿ ಮತ್ತು ಶಿಕ್ಷಣವು ಮಕ್ಕಳಿಗೆ ಅರ್ಥಪೂರ್ಣವಾದ ಹಕ್ಕು ಎನಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಎಲ್ಲರಿಗೂ ಶಿಕ್ಷಣವು ಕೈಗೆಟುಕುವಂತೆ ಮಾಡಬೇಕು. ಆರ್.ಟಿ.ಇ.ಯು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವಲ್ಲಿ ಮಹತ್ವದ ಪ್ರಯತ್ನವಾಗಿದ್ದು, ಆ ಮೂಲಕ ಸಾವಿರಾರು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಅವಕಾಶವನ್ನು ನೀಡಿದೆ. ಭಾರತದ ಸಂವಿಧಾನ 21(ಎ) ವಿಧಿಯ ಪ್ರಕಾರ ಭಾರತದಲ್ಲಿ 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ಇದು ವಿವರಿಸುತ್ತದೆ. ಶಿಕ್ಷಣವನ್ನು ಪ್ರತಿ ಮಗುವಿನ ಮೂಲಭೂತ ಹಕ್ಕು ಎಂಬುದಾಗಿ ಪರಿಗಣಿಸುವ 135 ದೇಶಗಳಲ್ಲಿ ಭಾರತವೂ ಒಂದಾಗಿದೆ.

ಸರ್ಕಾವು ಬೆಂಬಲಿಸದ ಶಾಲೆಗೆ ಪೋಷಕರಿಂದ ದಾಖಲಿಸಲಾದ ಮಗುವನ್ನು ಬಿಟ್ಟು ಉಳಿದ ಯಾವುದೇ ಮಗುವು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಯಾವುದೇ ರೀತಿಯ ಶುಲ್ಕವನ್ನು ಪಾವತಿಸಬೇಕಾಗಿಲ್ಲ. ಸೂಕ್ತ ಸರ್ಕಾರ ಮತ್ತು ಸ್ಥಳೀಯ ಅಧಿಕಾರಿಗಳು 6–14 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೂ ಪ್ರವೇಶ, ದಾಖಲಾತಿ ಹಾಗೂ ಪ್ರಾಥಮಿಕ ಶಿಕ್ಷಣವನ್ನು ನೀಡಲು ಮತ್ತು ಖಚಿತಪಡಿಸಲು ಬದ್ಧವಾಗಿರುತ್ತದೆ. ಈ ಕಾಯಿದೆಯ ವಿಷಯಗಳನ್ನು 7 ಅಧ್ಯಾಯಗಳ 38 ವಿಭಾಗಗಳಲ್ಲಿ ಪ್ರಸ್ತುತಪಡಿಸಲಾಗಿದೆ.

## ಈ ಕಾಯಿದೆಯ ಪ್ರಮುಖ ಲಕ್ಷಣಗಳು :

- ಇದು 6–14 ವಯೋಮಾನದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಾತ್ರಿಗೊಳಿಸುತ್ತದೆ;
- ಇದರ ಪ್ರಕಾರ ಪ್ರಾಥಮಿಕ ಶಿಕ್ಷಣ ಪಡೆಯಲು ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ;
- ಶಾಲೆಗೆ ಪ್ರವೇಶಿಸುವ ಮಗು ಅಥವಾ ಅದರ ಪೋಷಕರು ಯಾವುದೇ ರೀತಿಯ ತಪಾಸಣೆಗೆ ಒಳಗಾಗಬಾರದು;
- 6 ವರ್ಷ ಮೇಲ್ಪಟ್ಟ ಮಗುವಿಗೆ ಯಾವುದೇ ಶಾಲೆಗೆ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲದಿದ್ದಲ್ಲಿ ಆ ಮಗುವನ್ನು ಅದರ ವಯೋಮಾನಕ್ಕನುಗುಣವಾದ ತರಗತಿಗೆ ಸೇರಿಸಿ ಅದಕ್ಕೆ ಸರಿಹೊಂದಿಕೊಳ್ಳಲು ಸೂಕ್ತ ತರಬೇತಿ ನೀಡಬೇಕು. ಅಂತಹ ಸಂದರ್ಭದಲ್ಲಿ ಮಗುವು ಪ್ರಾಥಮಿಕ ಶಿಕ್ಷಣವನ್ನು 14 ವರ್ಷಕ್ಕೂ ಮೀರಿ ಮುಂದುವಿರಸಬಹುದು;
- ಪ್ರಾಥಮಿಕ ಶಿಕ್ಷಣವನ್ನು ಮುಗಿಸಲು ಪ್ರಸ್ತುತ ಶಾಲೆಯು ಸೂಕ್ತ ಸೌಲಭ್ಯವನ್ನು ಒದಗಿಸದಿದ್ದಲ್ಲಿ ಆ ಮಗು ಇತರ ಯಾವುದೇ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಶಾಲೆಗೆ ವರ್ಗಾವಣೆ ಪಡೆಯಬಹುದು;

- ಪ್ರತಿ ಮಗುವಿಗೆ ಉಚಿತ ಪಠ್ಯಪುಸ್ತಕಗಳು, ಬರವಣಿಗೆ ಸಾಮಗ್ರಿಗಳು ಹಾಗೂ ಸಮವಸ್ತ್ರ ಪಡೆಯಲು ಅರ್ಹವಾಗಿರುತ್ತದೆ;
- ಸೂಕ್ತ ಸರ್ಕಾರ ಅಂದರೆ, ಕೇಂದ್ರ, ರಾಜ್ಯ ಅಥವಾ ಅದರ ಸಂಯೋಜಿತ ಸಂಸ್ಥೆಗಳು 1ರಿಂದ 5ನೆಯ ತರಗತಿಯ ಮಕ್ಕಳಿಗೆ 1ಕಿ.ಮೀ.ನಡಿಗೆಯ ಅಂತರದಲ್ಲಿ ಮತ್ತು 6ರಿಂದ 8ನೆಯ ತರಗತಿಯ ಮಕ್ಕಳಿಗೆ 3ಕಿ.ಮೀ. ನಡಿಗೆಯ ಅಂತರದಲ್ಲಿ ಶಾಲೆಯನ್ನು ಒದಗಿಸತಕ್ಕದ್ದು. ಇದನ್ನು ನೆರೆಹೊರೆಯ ಶಾಲೆಗಳು ಎಂದೂ ಕರೆಯಲಾಗುತ್ತದೆ;
- ಶಾಲೆಯ ಸ್ಥಳವನ್ನು ನಿರ್ಧರಿಸಲು ಸೂಕ್ತ ಸ್ಥಳವನ್ನು ಗುರುತಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ;
- ಸರ್ಕಾರದ ಅನುದಾನ ಪಡೆಯುತ್ತಿರುವ ಖಾಸಗಿ ಶಾಲೆಗಳಲ್ಲಿ ಶಿಕ್ಷಣದ ಹಕ್ಕುಗಳ ಹಿನ್ನೆಲೆಯಲ್ಲಿ ಬರುವ ಮಕ್ಕಳಿಗೆ ಶೇ 25ರಷ್ಟು ಪ್ರವೇಶಾತಿ ಮೀಸಲಿಡಬೇಕು. ಆರ್.ಟಿ.ಇ. ಯ ಅನುಷ್ಠಾನಕ್ಕೆ ಅಗತ್ಯವಾದ ಹಣಕಾಸು ಒದಗಿಸುವಿಕೆ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಜಂಟಿ ಜವಾಬ್ದಾರಿಯಾಗಿರುತ್ತದೆ;
- ಆರ್.ಟಿ.ಇ. ಯನ್ನು ಜಾರಿಗೊಳಿಸಲು ರಾಜ್ಯಗಳಿಗೆ ರಾಷ್ಟ್ರೀಯ ಶೈಕ್ಷಣಿಕ ಪಠ್ಯಕ್ರಮ, ಶಿಕ್ಷಕರ ತರಬೇತಿ ಕೈಪಿಡಿಗಳು, ಸಾಮರ್ಥ್ಯವೃದ್ಧಿ ಮತ್ತು ತಾಂತ್ರಿಕ ನೆರವು ಸಿದ್ಧಪಡಿಸುವ ಜವಾಬ್ದಾರಿ ಕೇಂದ್ರಸರ್ಕಾರದ್ದಾಗಿರುತ್ತದೆ;
- ಅಧ್ಯಯನದ ರೂಪುರೇಖೆಯನ್ನು ಸಿದ್ಧಪಡಿಸುವುದು, ಶಾಲೆಗೆ ಮಕ್ಕಳ ಪ್ರವೇಶಾತಿ, ಬೋಧಕ ಸಿಬ್ಬಂದಿ, ಶಾಲೆಯ ಭೌತಿಕ ಸೌಕರ್ಯಗಳು, 14 ವರ್ಷಗಳವರೆಗೆ ಮಕ್ಕಳ ಶಿಕ್ಷಣವನ್ನು ಪೂರ್ಣಗೊಳಿಸುವುದು, ಸಮಾಜದ ಅಂಚಿನಲ್ಲಿರುವ ಮಕ್ಕಳನ್ನು ಶಾಲೆಯಲ್ಲಿ ಒಳಪಡಿಸಿಕೊಳ್ಳುವುದು ಇವುಗಳನ್ನು ರಾಜ್ಯ ಸರ್ಕಾರಗಳು ಖಚಿತಪಡಿಸಿಕೊಳ್ಳಬೇಕು;
- ಮಕ್ಕಳನ್ನು ಶಾಲೆಗೆ ದಾಖಲು ಮಾಡಿಕೊಳ್ಳುವುದು ಮತ್ತು ಅವರು ಪ್ರಾಥಮಿಕ ಶಿಕ್ಷಣ ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು ಹೆತ್ತವರ ಮತ್ತು ಪೋಷಕರ ಕರ್ತವ್ಯ;
- ಶಾಲೆಗಳಲ್ಲಿ ಶಿಕ್ಷಕರು ತಮ್ಮ ಹಾಜರಾತಿಯನ್ನು ಖಚಿತಪಡಿಸಬೇಕು, ಸಕಾಲದಲ್ಲಿ ನಿಗದಿತ ಪಠ್ಯಕ್ರಮವನ್ನು ಬೋಧಿಸಿ ಮುಗಿಸಬೇಕು. ಮಕ್ಕಳ ಸಾಮರ್ಥ್ಯವನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ವಿಶೇಷ ಗಮನವಿಡಬೇಕು ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಯ ಕುರಿತು ಪೋಷಕರಿಗೆ ತಿಳಿಸಲು ಶಿಕ್ಷಕ–ಪೋಷಕ ಸಭೆಯನ್ನು ನಡೆಸಬೇಕು;
- 1ರಿಂದ 5ನೆಯ ತರಗತಿಯವರೆಗೆ ಪ್ರತಿ 30 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಮತ್ತು 6ರಿಂದ 8ನೆಯ ತರಗತಿಯವರೆಗೆ ಪ್ರತಿ 35 ವಿದ್ಯಾರ್ಥಿಗೆ ಒಬ್ಬ ಶಿಕ್ಷಕರಂತೆ ಇರಬೇಕು;
- ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಭಾಷೆ ಇವುಗಳನ್ನು ಕಲಿಸಲು ತಲಾ ಒಬ್ಬ ವಿಶೇಷ ಶಿಕ್ಷಕರು ಇರಬೇಕು.
- 100ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಗಳಿಗೆ ಪೂರ್ಣಕಾಲಿಕ ಮುಖ್ಯ ಶಿಕ್ಷಕರನ್ನು ಶಿಫಾರಸು ಮಾಡಲಾಗಿದೆ;
- 1ರಿಂದ 5ನೆಯ ತರಗತಿಗಳು 200 ಕೆಲಸದ ದಿನಗಳನ್ನೂ 6ರಿಂದ 8ನೆಯ ತರಗತಿಗಳು 220 ಕೆಲಸದ ದಿನಗಳನ್ನೂ ಹೊಂದಿರಬೇಕು;

- ಶಾಲೆಯ ಶಿಕ್ಷಕರಿಗೆ ಸೂಕ್ತವಾದ ಹವಾಮಾನವಿರುವ ಕೊಠಡಿ, ಕಛೇರಿ, ಉಗ್ರಾಣ, ಮತ್ತು ಶಾಲಾ ಮುಖ್ಯಸ್ಥರ ಕೊಠಡಿ ಇವು ಶಾಲೆಯಲ್ಲಿರಬೇಕು. ಶಾಲೆಯಲ್ಲಿ ಮಧ್ಯಾಹ್ನದ ಊಟ ತಯಾರಿಸಲು ಶುಭ್ರವಾದ ಅಡುಗೆ ಮನೆ, ಆರೋಗ್ಯಕರವಾದ ಕುಡಿಯುವ ನೀರಿನ ವ್ಯವಸ್ಥೆ, ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ, ಶಾಲೆಗೆ ಸೂಕ್ತ ಬೇಲಿ, ಆಟದ ಮೈದಾನ ಮತ್ತು ಸುಸಜ್ಜಿತ ಗ್ರಂಥಾಲಯಗಳನ್ನು ಒದಗಿಸಬೇಕು;
- ಯಾವುದೇ ಆಧಾರದ ಮೇಲೆ ಯಾವುದೇ ಮಗುವಿಗೆ ಪ್ರವೇಶವನ್ನು ನಿರಾಕರಿಸದೆ ಅಂತರ್ಗತತೆಯನ್ನು ಕಾಪಾಡಿಕೊಳ್ಳಬೇಕು ಮತ್ತು ಮಗುವಿನ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಬೇಕು;

## ವ್ಯವಸ್ಥೆಯಲ್ಲಿರುವ ವಿವಿಧ ನಿಯೋಗಗಳ ಕರ್ತವ್ಯಗಳು :

ಈ ಕಾಯಿದೆಯು ಸೂಕ್ತ ಸರ್ಕಾರದ ಕರ್ತವ್ಯಗಳನ್ನು ಕೆಳಗಿನಂತೆ ಗುರುತಿಸುತ್ತದೆ:

- ನೆರೆಕೆರೆ ಶಾಲೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು;
- ದುರ್ಬಲ ಮತ್ತು ಹಿಂದುಳಿದ ಮಕ್ಕಳು ಯಾವುದೇ ತಾರತಮ್ಯಕ್ಕೆ ಒಳಗಾಗುತ್ತಿಲ್ಲವೆಂಬುದನ್ನೂ ಯಾವುದೇ ಆಧಾರದ ಮೇಲೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಯಾಗುತ್ತಿಲ್ಲ ಎಂಬುದನ್ನೂ ಖಚಿತಪಡಿಸಿಕೊಳ್ಳುವುದು;
- ಶಾಲಾ ಕಟ್ಟಡಗಳು, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಉಪಕರಣಗಳು ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸುವುದು;
- ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸುವುದು;
- ಪ್ರಾಥಮಿಕ ಶಿಕ್ಷಣಕ್ಕೆ ಎಲ್ಲ ಮಕ್ಕಳ ಪ್ರವೇಶ, ಹಾಜರಾತಿ ಮತ್ತು ಪೂರ್ಣಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಮೇಲ್ವಿಚಾರಣೆ ಮಾಡುವುದು;
- ನಿಗದಿತವಾಗಿರುವ ಮಾನದಂಡಗಳು ಮತ್ತು ಮಾನಕಗಳಿಗನುಗುಣವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳುವುದು;
- ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಮತ್ತು ಅಧ್ಯಯನದ ಹಾದಿಯನ್ನು ಸೂಕ್ತ ಸಮಯದಲ್ಲಿ ಗೊತ್ತುಮಾಡುವುದು;
- ಅಧ್ಯಾಪಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸುವುದು.

**ಸ್ಥಳೀಯ ಪ್ರಾಧಿಕಾರಗಳ ಕರ್ತವ್ಯಗಳು:**

- ನೆರೆಹೊರೆ ಶಾಲೆಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು;
- ದುರ್ಬಲ ಮತ್ತು ಹಿಂದುಳಿದ ಮಕ್ಕಳು ಯಾವುದೇ ತಾರತಮ್ಯಕ್ಕೆ ಒಳಗಾಗುತ್ತಿಲ್ಲವೆಂಬುದನ್ನೂ ಯಾವುದೇ ಆಧಾರದ ಮೇಲೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಯಾಗುತ್ತಿಲ್ಲ ಎಂಬುದನ್ನೂ ಖಚಿತಪಡಿಸಿಕೊಳ್ಳುವುದು;
- 14 ವರ್ಷದವರೆಗೆ ಮಕ್ಕಳ ದಾಖಲೆಯನ್ನು ನಿರ್ವಹಿಸುವುದು;
- ಪ್ರಾಥಮಿಕ ಶಿಕ್ಷಣಕ್ಕೆ ಎಲ್ಲ ಮಕ್ಕಳ ಪ್ರವೇಶ, ಹಾಜರಾತಿ ಮತ್ತು ಪೂರ್ಣಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಮೇಲ್ವಿಚಾರಣೆ ಮಾಡುವುದು;

- ಶಾಲಾ ಕಟ್ಟಡಗಳು, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಉಪಕರಣಗಳು ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸುವುದು;
- ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸುವುದು;
- ನಿಗದಿತವಾಗಿರುವ ಮಾನದಂಡಗಳು ಮತ್ತು ಮಾನಕಗಳಿಗನುಗುಣವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳುವುದು;
- ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಮತ್ತು ಅಧ್ಯಯನದ ಹಾದಿಯನ್ನು ಸೂಕ್ತ ಸಮಯದಲ್ಲಿ ಗೊತ್ತುಮಾಡುವುದು;
- ಅಧ್ಯಾಪಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸುವುದು;
- ವಲಸೆ ಬಂದ ಕುಟುಂಬಗಳ ಮಕ್ಕಳಿಗೆ ಪ್ರವೇಶಾತಿ ಖಚಿತಪಡಿಸಿಕೊಳ್ಳುವುದು;
- ಆಯಾ ವ್ಯಾಪ್ತಿಯಲ್ಲಿನ ಶಾಲೆಗಳ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು; ಮತ್ತು
- ಶೈಕ್ಷಣಿಕ ವೇಳಾಪಟ್ಟಿಯನ್ನು ನಿರ್ಧರಿಸುವುದು.

**ಪೋಷಕರ/ಪಾಲಕರ ಕರ್ತವ್ಯಗಳು :**

- ನೆರೆಕೆರೆಯ ಶಾಲೆಯಲ್ಲಿ ಮಕ್ಕಳನ್ನು ಶಾಲೆಗೆ ದಾಖಲಿಸಿ ಅವರು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳುವುದು.

**ಶಾಲಾ ನಿರ್ವಹಣಾ ಸಮಿತಿಯ ಕರ್ತವ್ಯಗಳು:**

- ಕಾಯಿದೆಯ ಅನುಷ್ಠಾನಕ್ಕೆ ಸಮುದಾಯದ ಭಾಗವಹಿಕೆ ಪ್ರಮುಖ ಸಂಪನ್ಮೂಲ ಎಂದು ಗುರುತಿಸಲಾಗಿದೆ. ಹಾಗಾಗಿ ಅದಕ್ಕೆ ಸೂಕ್ತ ಪ್ರಾಮುಖ್ಯತೆಯನ್ನೂ ನೀಡಲಾಗಿದೆ. ಅದಕ್ಕನುಗುಣವಾಗಿ, ಪ್ರತಿ ಶಾಲೆಯೂ ಸ್ಥಳೀಯ ಪ್ರಾಧಿಕಾರದಿಂದ ಚುನಾಯಿತರಾಗಿರುವ ಪ್ರತಿನಿಧಿಗಳು, ಪಾಲಕರು, ಹೆತ್ತವರು ಮತ್ತು ಶಿಕ್ಷಕರನ್ನು ಒಳಗೊಂಡ ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸಿಕೊಳ್ಳಬೇಕು. ಇದರ ಪ್ರಮುಖ ಕರ್ತವ್ಯಗಳು ಕೆಳಕಂಡಂತಿವೆ:
- ಶಾಲೆಯ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು;
- ಶಾಲಾ ಅಭಿವೃದ್ಧಿಯೋಜನೆಯನ್ನು ತಯಾರಿಸಿ ಶಿಫಾರಸು ಮಾಡುವುದು;
- ಸೂಕ್ತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಅಥವಾ ಇನ್ನಾವುದೇ ಮೂಲದಿಂದ ಪಡೆದ ಅನುದಾನದ ಬಳಕೆಯ ಮೇಲ್ವಿಚಾರಣೆ ಮಾಡುವುದು.

**ಶಿಕ್ಷಕರ ಕರ್ತವ್ಯಗಳು :**

- ಶಾಲೆಗೆ ಹಾಜರಾಗುವಲ್ಲಿ ಕ್ರಮಬದ್ಧತೆ ಮತ್ತು ಸಮಯನಿಷ್ಠೆಯನ್ನು ಕಾಪಾಡುವುದು;
- ಪಠ್ಯಕ್ರಮವನ್ನು ಕಾಯಿದೆಯ ನಿಬಂಧನೆಗಳಿಗನುಗುಣವಾಗಿ ಅನ್ವಯಿಸುವುದು ಮತ್ತು ಪೂರ್ಣಗೊಳಿಸುವುದು;
- ನಿಗದಿತ ಸಮಯದಲ್ಲಿ ಪಠ್ಯಕ್ರಮವನ್ನು ಪೂರ್ಣಗೊಳಿಸುವುದು;
- ಪ್ರತಿ ಮಗುವಿನ ಕಲಿಕಾ ಸಾಮರ್ಥ್ಯವನ್ನು ಮಾಪನಮಾಡುವುದು ಮತ್ತು ಅದಕ್ಕನುಗುಣವಾಗಿ ಅಗತ್ಯವಿದ್ದರೆ ಹೆಚ್ಚುವರಿ ಬೋಧನೆಯೊಂದಿಗೆ ಸಮೀಕರಿಸುವುದು;

- ಪೋಷಕರು, ಹೆತ್ತವರೊಂದಿಗೆ ಸಭೆ ನಡೆಸಿ ಮಕ್ಕಳ ಹಾಜರಾತಿಯ ಕ್ರಮಬದ್ಧತೆ, ಕಲಿಕಾ ಸಾಮರ್ಥ್ಯ, ಕಲಿಕಾ ಪ್ರಗತಿ ಮತ್ತು ಇತರ ವಿಷಯಗಳ ಕುರಿತು ಸೂಕ್ತ ಮಾಹಿತಿ ನೀಡುವುದು;
- ಶಿಕ್ಷಕರು ಖಾಸಗಿ ಬೋಧನೆಯಲ್ಲಿ ತೊಡಗಿಸಿಕೊಳ್ಳದಿರುವುದು.

## ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಮತ್ತು ಅದನ್ನು ಪೂರ್ಣಗೊಳಿಸುವಿಕೆ :

ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣಗೊಳಿಸಲು ಅಗತ್ಯವಾದ ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನಗಳನ್ನು ಸೂಕ್ತ ಸರ್ಕಾರವು ನಿಗದಿಗೊಳಿಸುವ ಶೈಕ್ಷಣಿಕ ಪ್ರಾಧಿಕಾರವು ರೂಪಿಸುತ್ತದೆ. ಹೀಗೆ ಮಾಡುವಾಗ ಪ್ರಾಧಿಕಾರವು ಕೆಳಗಿನ ಸೂಚನೆಗಳನ್ನು ಗಮನಿಸಿಕೊಳ್ಳಬೇಕು.

- ಸಂವಿಧಾನದಲ್ಲಿ ಪ್ರತಿಪಾದಿಸಲಾಗಿರುವ ಮೌಲ್ಯಗಳ ಅನುಸರಣೆ;
- ಮಗುವಿನ ಸರ್ವತೋಮುಖ ಬೆಳವಣಿಗೆ;
- ಮಗುವಿನ ಸಾಮರ್ಥ್ಯ, ಜ್ಞಾನ ಮತ್ತು ಪ್ರತಿಭೆಯ ಬೆಳವಣಿಗೆ;
- ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಗರಿಷ್ಠ ಬೆಳವಣಿಗೆ;
- ಶಿಶುಕೇಂದ್ರಿತ ವಿಧಾನದಲ್ಲಿ ಚಟುವಟಿಕೆಗಳು, ಅನ್ವೇಷಣೆ ಮತ್ತು ಶೋಧನೆಯ ಮೂಲಕ ಕಲಿಕೆ;
- ಸಾಧ್ಯವಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯೇ ಬೋಧನಾ ಮಾಧ್ಯಮವಾಗಿರುವಂತೆ ನೋಡಿಕೊಳ್ಳುವುದು;
- ಮಗು ಭಯ, ಆಘಾತ, ಮತ್ತು ಆತಂಕಗಳಿಂದ ಮುಕ್ತವಾಗಿರುವಂತೆ ನೋಡಿಕೊಳ್ಳುವುದು ಮತ್ತು ಮುಕ್ತ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಡುವುದು;
- ಮಗುವಿನ ಜ್ಞಾನ, ಸಾಮರ್ಥ್ಯಗಳ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ;
- ಅಧ್ಯಾಪಕರು ನಿರ್ದೇಶಿತ ಶೈಕ್ಷಣಿಕ ಗುಣಮಟ್ಟವನ್ನು ಸಾಧಿಸಲು ಅವರೇ ಯೋಜಿಸಿದ ಯೋಜನೆ ಮತ್ತು ಬೋಧನಾ ಕಲಿಕಾ ಸಾಮಗ್ರಿಗಳಿಗನುಗುಣವಾದ ಬೋಧನೆಯನ್ನು ಮಾಡಬೇಕು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

ಶಿಕ್ಷಣ ಮೂಲಭೂತ ಹಕ್ಕು ದಾಖಲೆಯಲ್ಲಿ ಶಾಲೆಗೆ ಸಂಬಂಧಿಸಿದ ಕರ್ತವ್ಯಗಳನ್ನು ನಿಮ್ಮ ಶಾಲೆ ಎಷ್ಟರಮಟ್ಟಿಗೆ ಪಾಲಿಸಿಕೊಂಡು ಬರುತ್ತಿದೆ ಎಂಬುದನ್ನೂ, ಈ ದಿಶೆಯಲ್ಲಿ ನಿಮ್ಮ ಶಾಲೆ ಮುಂದೆ ಮಾಡಬೇಕಾಗಿರುವುದೇನು ಎಂಬುದನ್ನೂ ಕೆಳಗಿನ ಮಾದರಿಯಲ್ಲಿ ಗುರುತಿಸಿಕೊಂಡು, ಮುಖ್ಯಾಂಶಗಳನ್ನು ಗುರುತಿಸಿ.

| ಕ್ರಮ ಸಂಖ್ಯೆ | ಶಿಕ್ಷಣ ಮೂಲಭೂತ ಹಕ್ಕು–ಶಾಲೆಯ ಕರ್ತವ್ಯಗಳು | ಈಗಾಗಲೇ ಪಾಲಿಸಲಾಗುತ್ತಿದೆ. | ಪಾಲಿಸಬೇಕಾಗಿದೆ |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 | | | |

## 1.5.3.2. ಸಾರಾಂಶಿಸೋಣ

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಎಂಬ ಪರಿಕಲ್ಪನೆಯು, ಜನಾಂಗ, ಬಣ್ಣ, ಜಾತಿ, ಧರ್ಮ, ಲಿಂಗ ಮತ್ತು ಸಾಮರ್ಥ್ಯ ಈ ಯಾವುದೇ ಅಂಶಗಳನ್ನು ಪರಿಗಣಿಸದೆ ಸಂಬಂಧಪಟ್ಟ ಎಲ್ಲರಿಗೂ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಸೂಚಿಸುತ್ತದೆ. 6–14 ವಯೋಮಾನದೊಳಗಿನ ಅಥವಾ 1 ರಿಂದ 7ನೇ ತರಗತಿಯವರೆಗಿನ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂಬ ಅರ್ಥವನ್ನೂ ಒಳಗೊಂಡಿರುವುದಲ್ಲದೆ, ಶಿಕ್ಷಣವು ಎಲ್ಲರಿಗೂ ದೊರೆಯಬೇಕು, ಆಯ್ದ ಕೆಲವರಿಗಾಗಿ ಮಾತ್ರವಲ್ಲ ಎಂಬುದನ್ನೂ ಸೂಚಿಸುತ್ತದೆ.
- ಇದಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಅನೇಕ ಅವಕಾಶಗಳಿದ್ದು ಅವುಗಳನ್ನು ವಿಧಿಗಳ ರೂಪದಲ್ಲಿ ನೀಡಲಾಗಿದೆ. ಇವುಗಳಲ್ಲಿ ಮುಖ್ಯವಾದವು: ವಿಧಿಗಳು: 45,28,29,30,350(ಎ) ಮತ್ತು 46.
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯನ್ನು ಆಗಸ್ಟ್ 4, 2009ರಿಂದ ಜಾರಿಗೆ ತರಲಾಯಿತು. ಈ ಕಾಯಿದೆಯ ಅಂಗೀಕಾರವು ಭಾರತದಲ್ಲಿ ಮಕ್ಕಳಿಗೆ ಒಂದು ಐತಿಹಾಸಿಕ ಚಳುವಳಿ ಎಂದು ಪರಿಗಣಿಸಲಾಗಿದೆ. ಭಾರತದ ಇತಿಹಾಸದಲ್ಲಿ ಮಕ್ಕಳಿಗೆ ಮೊದಲ ಬಾರಿಗೆ ಗುಣಮಟ್ಟದ ಶಿಕ್ಷಣದ ಹಕ್ಕನ್ನು ಖಚಿತಪಡಿಸಲಾಗಿದೆ.
- ಭಾರತದ ಸಂವಿಧಾನ 21(ಎ) ವಿಧಿಯ ಪ್ರಕಾರ ಭಾರತದಲ್ಲಿ 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ಇದು ವಿವರಿಸುತ್ತದೆ.
- ಇದು 6–14 ವಯೋಮಾನದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಾತ್ರಿಗೊಳಿಸುತ್ತದೆ,
- ಇದರ ಪ್ರಕಾರ ಪ್ರಾಥಮಿಕ ಶಿಕ್ಷಣ ಪಡೆಯಲು ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ, ಶಾಲೆಗೆ ಪ್ರವೇಶಿಸುವ ಮಗು ಅಥವಾ ಅದರ ಪೋಷಕರು ಯಾವುದೇ ರೀತಿಯ ತಪಾಸಣೆಗೆ ಒಳಗಾಗಬಾರದು, 6 ವರ್ಷ ಮೇಲ್ಪಟ್ಟ ಮಗುವಿಗೆ ಯಾವುದೇ ಶಾಲೆಗೆ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲದಿದ್ದಲ್ಲಿ ಆ ಮಗುವನ್ನು ಅದರ ವಯೋಮಾನಕ್ಕನುಗುಣವಾದ ತರಗತಿಗೆ ಸೇರಿಸಿ ಅದಕ್ಕೆ ಸರಿಹೊಂದಿಕೊಳ್ಳಲು ಸೂಕ್ತ ತರಬೇತಿ ನೀಡಬೇಕು. ಅಂತಹ ಸಂದರ್ಭದಲ್ಲಿ ಮಗುವು ಪ್ರಾಥಮಿಕ ಶಿಕ್ಷಣವನ್ನು 14 ವರ್ಷಕ್ಕೂ ಮೀರಿ ಮುಂದುವರಿಸಬಹುದು ಮುಂತಾದವು ಶಿಕ್ಷಣ ಮೂಲಭೂತ ಹಕ್ಕು ಕಾಯಿದೆಯ ಕೆಲವು ಲಕ್ಷಣಗಳು.

## 2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

8–1–7–5–2–6–3–9–4

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ನಿಮ್ಮ ವಿಶ್ಲೇಷಣೆಯನ್ನು ಸಹೋದ್ಯೋಗಿ ಶಿಕ್ಷಕರೊಂದಿಗೆ ಹಂಚಿಕೊಂಡು ಅವರ ಚಿಂತನೆಗಳನ್ನೂ ಒಳಗೊಂಡಂತೆ ಒಂದು ಸಂಕ್ಷಿಪ್ತ ಪ್ರಬಂಧ ತಯಾರಿಸಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

ನೀವು ಗುರುತಿಸಿದ ಅಂಶಗಳನ್ನು ನಿಮ್ಮ ಶಾಲಾ ಅಧ್ಯಾಪಕರು ಸಭೆಯಲ್ಲಿ ಚರ್ಚಿಸಿ, ಅದಕ್ಕನುಗುಣವಾದ ಕ್ರಿಯಾಯೋಜನೆಯನ್ನು ತಯಾರಿಸಿ.

## 2.5.6. ಘಟಕಾಂತ್ಯ ಅಭ್ಯಾಸಗಳು

1. ಶಿಕ್ಷಣ ಮೂಲಭೂತ ಹಕ್ಕು ಎಂಬುದರ ಕುರಿತ ವಿವರಗಳನ್ನು ಕೊಡಿ
2. ಆರ್ ಟಿ ಇ ಸೂಚಿಸಿರುವ ವಿಷಯಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

## 2.5.7. ಪರಾಮರ್ಶನ ಸೂಚಿ


1. http://wikieducator.org/UEE_and_ELL
2. http://www.yourarticlelibrary.com/education/universalisation-of-elementary-education-in-india/20899
3. https://heignotes.com/2016/11/09/importance-of-universalisation-of-elementary-education-uee-in-india/
4. http://mhrd.gov.in/overview-ee
5. http://shodhganga.inflibnet.ac.in/bitstream/10603/189184/6/06_chapter%201.pdf
6. http://shodhganga.inflibnet.ac.in/bitstream/10603/8799/8/08_chapter%201.pdf
7. https://www.jstor.org/stable/4402100?seq=1#page_scan_tab_contents
8. https://snehadharafoundation.org/2017/08/17/the-right-approach-the-development-of-educational-policies-in-india-part-1/
9. http://mhrd.gov.in/rte
10. http://mhrd.gov.in/sites/upload_files/mhrd/files/upload_document/RTE_Section_wise_rationale_rev_0.pdf
11. https://www.right-to-education.org/resource/right-education-handbook
12. https://counterview.org/2018/03/28/only-8-per-cent-schools-across-the-country-comply-with-the-provisions-of-the-right-to-education-act/
13. http://pib.nic.in/newsite/PrintRelease.aspx?relid=138204


**********

# ಬ್ಲಾಕ್–2 : ಶಿಕ್ಷಣ ಮತ್ತು ಸಂವಿಧಾನಾತ್ಮಕ ಪ್ರಾವಧಾನಗಳು

## ಘಟಕ–6: ಶಿಕ್ಷಣದ ಬೆಳವಣಿಗೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಪಾತ್ರ

**ಘಟಕದ ರಚನೆ**


2.6.1. ಕಲಿಕಾ ಉದ್ದೇಶಗಳು

2.6.2. ಪೀಠಿಕೆ

2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.6.3.1. ಶಿಕ್ಷಣದ ಅಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರದ ಪಾತ್ರ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

2.6.3.2. ಶಿಕ್ಷಣದ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರದ ಪಾತ್ರ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

2.6.3.3. ಸಮಗ್ರ ಶಿಕ್ಷಾ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

2.6.4. ಸಾರಾಂಶಿಸೋಣ

2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

2.6.6. ಘಟಕಾಂತ್ಯ ಅಭ್ಯಾಸಗಳು

2.6.7. ಪರಾಮರ್ಶನ ಸೂಚಿ


### 2.6.1. ಕಲಿಕಾ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾತ್ರವನ್ನು ವಿವರಿಸುವರು;
- ಶಿಕ್ಷಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕೊಡಲಾಗಿರುವ ಅವಕಾಶಗಳನ್ನು ವಿಶ್ಲೇಷಿಸುವರು;
- ಶಿಕ್ಷಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕೊಡಲಾಗಿರುವ ಅವಕಾಶಗಳನ್ನು ಪ್ರಶಂಸಿಸುವರು; ಮತ್ತು
- ಈ ಅವಕಾಶಗಳನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳುವಲ್ಲಿ ತಮ್ಮ ಪಾತ್ರವನ್ನು ಮನಗಾಣುವರು.

### 2.6.2. ಪೀಠಿಕೆ

ದೇಶದ ಏಳಿಗೆಗೆ ಶಿಕ್ಷಣ ಬಹು ಮಹತ್ವದ ಕೊಡುಗೆಯನ್ನು ನೀಡಬಲ್ಲುದು ಎಂಬ ಸ್ಪಷ್ಟ ಮನವರಿಕೆಯಿಂದ ಸ್ವಾತಂತ್ರ್ಯ ಬಂದೊದಗಿದ ಕ್ಷಣದಿಂದಲೂ ಭಾರತದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಲಾಗಿದೆ. ಸಂವಿಧಾನ ರಚನೆಯ ಕಾಲದಿಂದಲೂ ಶಿಕ್ಷಣಕ್ಕೆ ವಿಶೇಷ ಗಮನ ಹರಿಸಿ, ಎಲ್ಲರಿಗೂ ಶಿಕ್ಷಣ ದೊರೆಯುವಂತೆ ಅವಕಾಶಗಳನ್ನು

ಕಲ್ಪಿಸಲಾಗಿದೆ. ರಾಷ್ಟ್ರದ ಆದರ್ಶಗಳ ಸಾಧನೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಗಮನಿಸಿಕೊಳ್ಳಲಾಗಿದೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಮಟ್ಟಗಳೆರಡಲ್ಲೂ ಸರ್ಕಾರವು ಶಿಕ್ಷಣದ ಪ್ರಸಾರ, ಉತ್ಕೃಷ್ಟತೆ ಮತ್ತು ವಿಸ್ತಾರ ಇವುಗಳನ್ನು ಸಾಧಿಸಲು ಕ್ರಿಯಾಶೀಲವಾಗಿ ತೊಡಗಿಕೊಂಡಿದೆ. ಹೀಗೆ ಶಿಕ್ಷಣದ ಬೆಳವಣಿಗೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಗೆ ಕ್ರಿಯಾಶೀಲವಾಗಿವೆ, ಯಾವ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ.

## 2.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 2.6.3.1. ಶಿಕ್ಷಣದ ಅಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರದ ಪಾತ್ರ

### ಸ್ವಾತಂತ್ರ್ಯಾನಂತರದ ಚಿತ್ರಣ :

ಸಂವಿಧಾನದ ರಚನೆಯ ಕಾಲದಿಂದಲೂ ಶಿಕ್ಷಣದಲ್ಲಿ ಸರ್ಕಾರದ ಪಾತ್ರವೇನು ಎಂಬ ವಿಷಯದ ಕುರಿತು ಚರ್ಚೆಗಳಾಗುತ್ತಿವೆ. ಸಂವಿಧಾನ ರಚನೆಯ ಕಾಲದಲ್ಲಿ ಪ್ರಮುಖವಾಗಿ ಎರಡು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಒಂದು, ಯು.ಎಸ್.ಎ. ಯಲ್ಲಿ ಅಳವಡಿಸಿಕೊಂಡ ಶಿಕ್ಷಣದ ಸಾಮಾನ್ಯ ಮಾದರಿ ಮತ್ತು ಹಾರ್ಟೊಗ್ ಸಮಿತಿಯ ಶಿಫಾರಸುಗಳು. ಅದರ ಪ್ರಕಾರವಾಗಿ ಯು.ಎಸ್.ಎ. ಯಲ್ಲಿರುವಂತೆ ಶಿಕ್ಷಣವನ್ನು ರಾಜ್ಯವಿಷಯವಾಗಿ ಪರಿಗಣಿಸುವುದೆಂದೂ ಅದಕ್ಕೆ ಸಂಬಂಧಿಸಿದ ಎಲ್ಲ ಅಧಿಕಾರವನ್ನು ರಾಜ್ಯಸರ್ಕಾರಗಳಿಗೆ ನೀಡುವುದೆಂದೂ ತೀರ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಈ ವಿಷಯವಾಗಿ ಭಾರತ ಸರ್ಕಾರಕ್ಕೆ ಕಾಯ್ದಿರಿಸಲಾದ ಅಧಿಕಾರಗಳನ್ನೂ ನಿರ್ದಿಷ್ಟವಾಗಿ ಗುರುತಿಸಲಾಯಿತು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಾರ್ಟೊಗ್ ಸಮಿತಿಯ ಶಿಫಾರಸುಗಳನ್ನು ಪರಿಗಣಿಸಲಾಯಿತು. ಇದರ ಜೊತೆಗೆ ಕನಿಷ್ಟ, ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೂ ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯನಿರ್ವಹಣೆಗೂ ಇರುವ ಸಂಬಂಧವನ್ನು ಗುರುತಿಸಲಾಯಿತು. ಹಾಗಾಗಿ ನಮ್ಮ ಸಂವಿಧಾನದ ಭಾಗ 4ರ ರಾಜ್ಯ ನಿರ್ದೇಶನದ ತತ್ವಗಳ ಅಡಿಯಲ್ಲಿನ ವಿಧಿ45ರಲ್ಲಿ ರಾಜ್ಯವು 6 ರಿಂದ 14 ವರ್ಷಗಳವರೆಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು ಎಂದು ಹೇಳಿದೆ.

1976ರವರೆಗೆ ಭಾರತದಲ್ಲಿ ಶಿಕ್ಷಣವು ರಾಜ್ಯದ ಜವಾಬ್ದಾರಿಯಾಗಿ ನಡೆದುಕೊಂಡು ಬಂದಿದ್ದು, 1976ರಲ್ಲಿ ಆದ ತಿದ್ದುಪಡಿಯ ಪ್ರಕಾರ ಅದು ಸಮವರ್ತಿ ಪಟ್ಟಿಗೆ ಸೇರ್ಪಡೆಯಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದ ಕಾಯಿದೆಗಳನ್ನು ಜಾರಿಗೆ ತರುವಲ್ಲಿ ಕೇಂದ್ರ ಉನ್ನತ ಅಧಿಕಾರವನ್ನು ಪಡೆದಿದೆ. ರಾಜ್ಯಗಳಿಗೆ ಶಿಕ್ಷಣ ವಿಷಯಕವಾದ ನಿರ್ದೇಶನಗಳನ್ನು ಕೊಡುವ ಅಧಿಕಾರವೂ ಕೇಂದ್ರದ್ದಾಗಿದೆ. ರಾಜ್ಯಗಳು ಈ ನಿರ್ದೇಶನಗಳನ್ನು ತಳ್ಳಿಹಾಕುವಂತಿಲ್ಲ.

ಶಿಕ್ಷಣದ ಕುರಿತಾದ ಚಟುವಟಿಕೆಗಳು 1900ರಲ್ಲಿ ಬ್ರಿಟಿಷ್ ರಾಜ್ಯದ ಅಧೀನದಲ್ಲಿದ್ದ ಶಿಕ್ಷಣ ಇಲಾಖೆಯ ನಿಯಂತ್ರಣದಲ್ಲಿ ನಡೆಯುತ್ತಿತ್ತು. ಸ್ವಾತಂತ್ರ್ಯ ಒದಗಿಬಂದ ನಂತರ 1947ರಲ್ಲಿ ಶಿಕ್ಷಣ ಸಚಿವಾಲಯ ಪ್ರಾರಂಭವಾಗಿ ಅದರ ಅಡಿಯಲ್ಲಿ ಚಟುವಟಿಕೆಗಳು ಜರುಗಿವೆ.

ಶಿಕ್ಷಣಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯಸರ್ಕಾರಗಳೆರಡೂ ವಿಶೇಷವಾದ, ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಕೇಂದ್ರಸರ್ಕಾರವು ಯೋಜಿಸಿದ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರಾಜ್ಯಸರ್ಕಾರ ಅನುಷ್ಠಾನಗೊಳಿಸುತ್ತದೆ, ಗಟ್ಟಿಗೊಳಿಸುತ್ತದೆ, ಅಲ್ಲದೆ ರಾಜ್ಯಸರ್ಕಾರವೂ ತನ್ನ ಗುರಿಗಳಿಗನುಗುಣವಾಗಿ ಅನೇಕ ಯೋಜನೆಗಳನ್ನು ಯೋಜಿಸಿ ಅನುಷ್ಠಾನಗೊಳಿಸುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ದಿಷ್ಟ ಪಾತ್ರವೇನು ಎಂಬುದನ್ನು ನೋಡೋಣ.

### ಶಿಕ್ಷಣದಲ್ಲಿ ಕೇಂದ್ರ ಸರ್ಕಾರದ ಪಾತ್ರ :

- ಇತರ ಕ್ಷೇತ್ರಗಳಂತೆ, ಶಿಕ್ಷಣ ಕ್ಷೇತ್ರವೂ ಸಮರ್ಪಕವಾದ ಯೋಜನೆಯನ್ನು ಬಯಸುತ್ತದೆ. ಈ ಯೋಜನೆಯು ಅಪೇಕ್ಷಿತ ಉದ್ದೇಶಗಳನ್ನು ಸಾಧಿಸಲು ಅಗತ್ಯವಾದ ಸಂಪನ್ಮೂಲಗಳನ್ನು ಅನುಕೂಲಿಸಲು

ಅಗತ್ಯವಾದ ಕ್ರಮಗಳಿಗೆ ಸಂಬಂಧಪಟ್ಟವಾಗಿರುತ್ತವೆ. ಈ ಶೈಕ್ಷಣಿಕ ಯೋಜನೆಗಳು ಶೈಕ್ಷಣಿಕ ಆಡಳಿತ, ಬೋಧನೆ, ಹಣಕಾಸು, ಇತ್ಯಾದಿ ಕಾರ್ಯಗಳಿಗೆ ನೇರವಾಗಿ ಸಂಬಂಧಿಸಿರುತ್ತವೆ.

- ವಿವಿಧ ವರ್ಗಗಳ ಜನರ ಶಿಕ್ಷಣ, ಅದಕ್ಕೆ ಸಂಬಂಧಿಸಿದ ಗುರಿಗಳು, ಗುರಿಗಳಿಗೆ ನಿಯೋಜಿತವಾದ ಕಾಲಾವಧಿಯ ನಿಷ್ಕರ್ಷೆ ಇವುಗಳನ್ನು ಕುರಿತ ರಾಷ್ಟ್ರೀಯ ಯೋಜನೆಗಳನ್ನು ಮತ್ತು ನಿಯಮಗಳನ್ನು ರೂಪಿಸುತ್ತದೆ.
- ಸಮಾಜದ ಅಗತ್ಯಗಳು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಯ ಆಧಾರದ ಮೇಲೆ ವಿವಿಧ ಸಮಿತಿಗಳು ಮತ್ತು ಆಯೋಗಗಳ ಮೂಲಕ ಶೈಕ್ಷಣಿಕ ಸುಧಾರಣೆಯನ್ನು ಯೋಜಿಸುತ್ತದೆ.
- ಯೋಜನೆಗಳನ್ನು ಸಾಕಾರಗೊಳಿಸಲು ಮಾರ್ಗಗಳನ್ನು ಮತ್ತು ಕ್ರಮಗಳನ್ನು ಸಂಘಟಿಸುತ್ತದೆ. ಅದರ ಅಧೀನದಲ್ಲಿರುವ ಸಂಸ್ಥೆಗಳು ಸುಲಲಿತವಾಗಿ ಕಾರ್ಯನಿರ್ವಹಿಸುವಲ್ಲಿ ಸಹಾಯಮಾಡುತ್ತದೆ.
- ಶೈಕ್ಷಣಿಕ ಯೋಜನೆಗಳನ್ನು ಅನ್ವಯಿಸಲು, ರಾಜ್ಯಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುತ್ತದೆ.
- ಶಿಕ್ಷಣವು ಸರಿಯಾದ ಮಾರ್ಗದಲ್ಲಿ ಸಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಧೀನ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುತ್ತದೆ.
- ಸಂಬಂಧಪಟ್ಟ ಸಂಸ್ಥೆಗಳಿಗೆ, ಯೋಜನೆಗಳಿಗೆ ಸೂಕ್ತ ಹಣಕಾಸನ್ನು ಮಂಜೂರು ಮಾಡಿ ಸಮರ್ಪಕವಾದ ಕೆಲಸ ನಿರ್ವಹಣೆಗೆ ಸಹಾಯಮಾಡುತ್ತದೆ.
- ಶಿಕ್ಷಣವನ್ನು ಕುರಿತ ಹಲವಾರು ಪ್ರಯೋಗಗಳನ್ನು ಮಾಡುತ್ತದೆ; ಸಂಶೋಧನೆಗಳನ್ನು ನಡೆಸುತ್ತದೆ. ರಾಷ್ಟ್ರವ್ಯಾಪಿಯಾಗಿ ಅನ್ವಯಿಸುವ ಮೊದಲಿಗೆ ಪ್ರಯೋಗಾತ್ಮಕವಾದ ಯೋಜನೆಗಳನ್ನು ಕೈಗೊಳ್ಳುತ್ತದೆ.
- ಸರ್ಕಾರವು ಕೈಗೊಂಡ ವಿವಿಧ ಯೋಜನೆಗಳ ಮೌಲ್ಯಮಾಪನ ಮಾಡಿ ಸಂಬಂಧಪಟ್ಟವರಿಗೆ ಮಾಹಿತಿ ಒದಗಿಸುತ್ತದೆ.
- ಶಿಕ್ಷಣಕ್ಕೆ ಸಂಬಂಧಪಟ್ಟ ಅಗತ್ಯ ವಿಷಯಗಳನ್ನು ಕುರಿತಂತೆ ಉಪಯುಕ್ತವಾದ ಪ್ರಕಟಣೆಗಳನ್ನು ಮಾಡುತ್ತದೆ, ಕೃತಿಗಳನ್ನು ಪ್ರಕಟಿಸುತ್ತದೆ.
- ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಾಗಿ ಅಂತರರಾಷ್ಟ್ರೀಯ ಸಂಸ್ಥೆಗಳಾದ ಯುನೆಸ್ಕೊ ಮೊದಲಾದವುಗಳ ಜೊತೆಗೆ ಸಹಯೋಗದೊಂದಿಗೆ ಕೆಲಸ ಮಾಡುತ್ತದೆ.
- ನೇರವಾಗಿ ಕೇಂದ್ರ ಸರ್ಕಾರದ ಅಧೀನದಿಲ್ಲಿರುವ ಸಂಸ್ಥೆಗಳನ್ನು–ರಾಷ್ಟ್ರೀಯ ಗ್ರಂಥಾಲಯ, ರಾಷ್ಟ್ರೀಯ ಮ್ಯೂಸಿಯಂ ಮುಂತಾದವು–ನಿರ್ವಹಣೆ ಮಾಡುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1**

ನಿಮ್ಮ ಪರಿಸರದಲ್ಲಿ ಕೇಂದ್ರಸರ್ಕಾರದಿಂದ ಪ್ರಾಯೋಜಿತವಾದ ಯಾವುದಾದರೂ ಒಂದು ಶೈಕ್ಷಣಿಕ ಕಾರ್ಯಕ್ರಮವನ್ನು ಗುರುತಿಸಿ, ಅದರ ಕುರಿತು ಮಾಹಿತಿ ಸಂಗ್ರಹಿಸಿ, ಆ ಕುರಿತಂತೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

## 2.6.3.2. ಶಿಕ್ಷಣದ ಅಭಿವೃದ್ಧಿಯಲ್ಲಿ ರಾಜ್ಯ ಸರ್ಕಾರದ ಪಾತ್ರ

ಪ್ರಾಥಮಿಕವಾಗಿ ಶಿಕ್ಷಣವು ರಾಜ್ಯಗಳ ಜವಾಬ್ದಾರಿ. ಪ್ರತಿ ರಾಜ್ಯಸರ್ಕಾರವೂ ಶಿಕ್ಷಣ ಇಲಾಖೆಯನ್ನು ಹೊಂದಿದ್ದು ರಾಜ್ಯ ಶಿಕ್ಷಣ ಸಚಿವರು ಇದರ ಮುಖ್ಯಸ್ಥರಾಗಿರುತ್ತಾರೆ. ಶಿಕ್ಷಣ ಸಚಿವರನ್ನು ರಾಜ್ಯದ ಮುಖ್ಯಮಂತ್ರಿಯವರು

ನೇಮಿಸುತ್ತಾರೆ. ಶಿಕ್ಷಣ ಮಂತ್ರಿಯವರು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ.

ನಾವು ಕೇಂದ್ರ ಸರ್ಕಾರದ ಸನ್ನಿವೇಶದಲ್ಲಿ ಗಮನಿಸಿದಂತೆ, ರಾಜ್ಯ ಸರ್ಕಾರವೂ ಶಿಕ್ಷಣವನ್ನು ಕುರಿತಂತೆ ನಿರ್ದಿಷ್ಟ ಕೆಲಸಗಳನ್ನು ನಿರ್ವಹಿಸುತ್ತದೆ. ಅವು ಕೆಳಕಂಡಂತಿವೆ:

- ಪ್ರಾಥಮಿಕ ಶಿಕ್ಷಣವನ್ನು ನೀಡುವುದು;
- ಉನ್ನತ ಶಿಕ್ಷಣವನ್ನು ನೀಡುವುದು;
- ವಿಶ್ವವಿದ್ಯಾನಿಲಯಗಳ ಚಟುವಟಿಕೆಗಳನ್ನು ನಿಯಂತ್ರಿಸುವುದು
- ವಯಸ್ಕ ಮತ್ತು ಸಾಮಾಜಿಕ ಶಿಕ್ಷಣವನ್ನು ನೀಡುವುದು;
- ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು;
- ರಾಜ್ಯಮಟ್ಟದ ಪಠ್ಯಕ್ರಮವನ್ನು ತಯಾರಿಸುವುದು;
- ಮೇಲ್ವಿಚಾರಣಾ ಸಿಬ್ಬಂದಿಯನ್ನು ನೇಮಕಗೊಳಿಸುವುದು;
- ಹಣಕಾಸಿನ ಸಹಾಯ ಒದಗಿಸುವುದು;
- ಸಮಿತಿ ಮತ್ತು ಸಭೆಗಳನ್ನು ಆಯೋಜಿಸುವುದು; ಮತ್ತು ಪರೀಕ್ಷೆಗಳನ್ನು ನಡೆಸುವುದು

ಈ ದಿನಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಪಾತ್ರವನ್ನು ಅವುಗಳ ಪಾತ್ರವನ್ನು ಗುರುತಿಸುವುದಕ್ಕಿಂತ, ಚಾಲನೆಯಲ್ಲಿರುವ ಚಟುವಟಿಕೆಗಳಲ್ಲಿ ಕಂಡುಕೊಳ್ಳಬಹುದು. ಸರ್ಕಾರವು ಯೋಜಿಸಿ ಅನುಷ್ಠಾನಗೊಳಿಸಿರುವ ಅನೇಕಾನೇಕ ಯೋಜನೆಗಳಲ್ಲಿ ಈ ಚಟುವಟಿಕೆಗಳು ಕಾಣಬರುತ್ತವೆ. ಈ ರೀತಿಯ ಹಲವಾರು ಯೋಜನೆಗಳಲ್ಲಿ ನೀವು ಭಾಗವಹಿಸಿದ್ದೀರಿ ಅಥವಾ ಭಾಗವಹಿಸುತ್ತಿರುವಿರಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ-2

ನೀವು ಪಾಲ್ಗೊಂಡಿರುವ ರಾಜ್ಯ ಸರ್ಕಾರದ ಯಾವುದಾದರೂ ಒಂದು ಯೋಜನೆಯ ಕುರಿತು ಸಮಗ್ರವಾಗಿ ವಿಷಯ ಸಂಗ್ರಹಿಸಿ, ಆ ಮೂಲಕ ಇಂದಿನ ಶೈಕ್ಷಣಿಕ ಸನ್ನಿವೇಶದಲ್ಲಿ ರಾಜ್ಯಸರ್ಕಾರದ ಪಾತ್ರವನ್ನು ಕುರಿತಂತೆ ಪ್ರಮುಖವಾದ ಅಂಶಗಳನ್ನು ನಿಗಮನಗೊಳಿಸಿ.

## 2.6.3.3. ಸಮಗ್ರ ಶಿಕ್ಷಾ

ಇದೊಂದು ಸಮಗ್ರವಾದ ಮತ್ತು ಹೊಸದಾದ ಕಾರ್ಯಕ್ರಮ. ಶಿಕ್ಷಣದ ಗುರಿಗಳನ್ನು ಸಾಧಿಸಲು ಈಗಿನ ಎಲ್ಲ ಪ್ರಯತ್ನಗಳನ್ನು ಒಳಗೊಂಡಂತೆ, ಶಿಕ್ಷಣವನ್ನು ಹೆಚ್ಚು ಸಮಷ್ಟಿರೂಪದಲ್ಲಿ ಕಾಣುವ ಕಾರ್ಯಕ್ರಮವಿದು. ಇದು 14, ಮೇ 2018ರಂದು ಮಾನವ ಸಂಪನ್ಮೂಲ ಸಚಿವರಿಂದ ರಾಷ್ಟ್ರಕ್ಕೆ ಸಮರ್ಪಿತವಾಯಿತು. ಇದು ಶಿಕ್ಷಣವನ್ನು ಶಾಲಾಪೂರ್ವ ಹಂತದಿಂದ 12ನೆಯ ತರಗತಿಯವರೆಗೆ ಸಮಗ್ರವಾಗಿ ಪರಿಗಣಿಸುತ್ತದೆ. ಎಲ್ಲ ವಿದ್ಯಾರ್ಥಿಗಳಿಗೆ ಅವರ ಬೆಳವಣಿಗೆಗೆ ಅಗತ್ಯವಾದ ಕೌಶಲಗಳು ಮತ್ತು ಜ್ಞಾನದೊಂದಿಗೆ ಸಿದ್ಧಗೊಳಿಸುವ ಗುಣಾತ್ಮಕ ಶಿಕ್ಷಣವನ್ನು ನೀಡುವುದು ಸರ್ಕಾರದ ಬದ್ಧತೆ ಎಂಬ ಅಂಶವನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡಿರುವ ಸಮಗ್ರ ಶಿಕ್ಷಾ ಯೋಜನೆಯು ಸರ್ವಶಿಕ್ಷಾ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ ಮತ್ತು ಅಧ್ಯಾಪಕರ ಶಿಕ್ಷಣ ಈ ಎಲ್ಲವನ್ನೂ ಒಳಗೊಳ್ಳುತ್ತದೆ.

**ಈ ಯೋಜನೆಯ ಉದ್ದೇಶಗಳು ಕೆಳಕಂಡಂತಿವೆ :**

- ಗುಣಾತ್ಮಕ ಶಿಕ್ಷಣ ನೀಡುವುದು;
- ವಿದ್ಯಾರ್ಥಿಗಳ ಕಲಿಕಾ ಫಲಗಳನ್ನು ವಿಸ್ತರಿಸುವುದು;
- ಶಾಲಾಶಿಕ್ಷಣದಲ್ಲಿ ಲಿಂಗದ ಮತ್ತು ಸಾಮಾಜಿಕ ಅಂತರವನ್ನು ಬೆಸೆಯುವುದು ಮತ್ತು ಶಿಕ್ಷಣದ ಔದ್ಯೋಗಿಕರಣವನ್ನು ಪ್ರೋತ್ಸಾಹಿಸುವುದು;
- ಅಧ್ಯಾಪಕರ ಗುಣಮಟ್ಟವನ್ನು ಹೆಚ್ಚಿಸಲು ಡಯಟ್ ಸಂಸ್ಥೆಗಳು ಮತ್ತು ಡಿ.ಎಸ್.ಇ.ಆರ್.ಟಿ ಮುಂತಾದ ಸಂಸ್ಥೆಗಳನ್ನು ಸಬಲಿಕರಿಸುವುದು;
- ಗ್ರಂಥಾಲಯಗಳನ್ನು ಉತ್ತಮಪಡಿಸಲು ವಾರ್ಷಿಕ ರೂ5,000ದಿಂದ ರೂ20,000ದ ವರೆಗಿನ ಅನುದಾನವನ್ನು ನೀಡುವುದು.

**ಶಿಕ್ಷಣವನ್ನು ಕುರಿತ ಸಮಗ್ರ ಉಪಕ್ರಮ :**

- ಶಾಲಾಶಿಕ್ಷಣ ವಲಯವನ್ನು ಒಂದನೇ ತರಗತಿಯಿಂದ 12 ನೇತರಗತಿಯವರೆಗೆ ವಿಸ್ತರಿಸುವುದು– ಸೀನಿಯರ್ ಸೆಕೆಂಡರಿ ಹಂತಕ್ಕೆ ಮಧ್ಯವರ್ತನಗಳ ವಿಸ್ತರಣೆ.
- ಶಾಲಾಶಿಕ್ಷಣವನ್ನು ಶಾಲಾ ಪೂರ್ವ ಶಿಕ್ಷಣದಿಂದ 12ನೇ ತರಗತಿಯವರೆಗೆ ಒಳಪಡಿಸಿಕೊಳ್ಳುವುದು;
- ಶಾಲಾಪೂರ್ವ ಶಿಕ್ಷಣಕ್ಕೆ ರಾಜ್ಯಗಳ ಪ್ರಯತ್ನಗಳಿಗೆ ಬೆಂಬಲನೀಡುವುದು;
- ಮೊಟ್ಟಮೊದಲಿಗೆ, ಶಾಲಾಪೂರ್ವ ಶಿಕ್ಷಣವನ್ನೂ ಮತ್ತು ಸೀನಿಯರ್ ಸೆಕೆಂಡರಿ ಶಿಕ್ಷಣವನ್ನು ಶಾಲಾ ಶಿಕ್ಷಣಕ್ಕೆ ಬೆಂಬಲವಾಗಿ ಸೇರಿಸುವುದು.

**ಆಡಳಿತಾತ್ಮಕ ಸುಧಾರಣೆಗಳು**

- ಸಾಮರಸ್ಯದ ಅನ್ವಯಗಳಿಗೆ ಎಡೆಕೊಡಲು ಏಕೈಕ ಮತ್ತು ಸಂಘಟಿತ ಆಡಳಿತಾತ್ಮಕ ವ್ಯವಸ್ಥೆ
- ಯೋಜನೆಯಡಿಯಲ್ಲಿ ಮಧ್ಯವರ್ತನಗಳನ್ನು ಆದ್ಯತೆಯ ಮೇಲೆ ಗಮನಿಸಿಕೊಳ್ಳಲು ರಾಜ್ಯಗಳಿಗೆ ನಮ್ಯತೆ
- ಶಾಲೆಯನ್ನು ಒಂದು ನಿರಂತರ ಪ್ರಕ್ರಿಯೆಯಾಗಿ ಪರಿಗಣಿಸಲು ಸಮನ್ವಯದ ಆಡಳಿತ

**ಶಿಕ್ಷಣಕ್ಕೆ ಹೆಚ್ಚಿನ ಹಣಕಾಸು ಒದಗಿಸುವಿಕೆ**

- ಶಿಕ್ಷಣಕ್ಕೆ ಒದಗಿಸಿರುವ ಆಯವ್ಯಯದ ಹೆಚ್ಚಳ
- ಯೋಜನೆಯಡಿ ಗುಣಮಟ್ಟದ ಹೆಚ್ಚಳಕ್ಕಾಗಿ ಕೈಗೊಂಡ ಕ್ರಮಗಳು ಮತ್ತು ಕಲಿಕಾ ಫಲಗಳನ್ನು ಆಧಾರವಾಗಿಟ್ಟುಕೊಂಡು ಹಣಕಾಸು ಮಂಜೂರುಮಾಡುವುದು.

**ಶಿಕ್ಷಣದ ಗುಣಮಟ್ಟದ ಮೇಲೆ ಗಮನ:**

- ಕಲಿಕಾ ಫಲಗಳನ್ನು ಉತ್ತಮಪಡಿಸುವುದರ ಮೇಲೆ ಗಮನ;
- ಅಧ್ಯಾಪಕರ ಸಾಮರ್ಥ್ಯ ವರ್ಧನೆಯನ್ನು ಉಂಟುಮಾಡುವುದು;
- ಅಧ್ಯಾಪಕ ತರಬೇತಿ ಸಂಸ್ಥೆಗಳನ್ನು ಸಬಲೀಕರಿಸುವುದರ ಕಡೆಗೆ ಗಮನ;
- ಸೇವಾ–ಪೂರ್ವ ಹಾಗೂ ಸೇವಾಂತರ್ಗತ ಶಿಕ್ಷಣ ತರಬೇತಿಗೆ ಎಸ್.ಸಿ.ಇ.ಆರ್.ಟಿ. ಸಂಸ್ಥೆಯು

ನೋಡಲ್ ಸಂಸ್ಥೆಯಾಗಿದ್ದು ಅದು ತರಬೇತಿಯನ್ನು ಸಕ್ರಿಯಗೊಳಿಸುವುದಲ್ಲದೆ ಅಗತ್ಯಾಧಾರಿತವಾಗಿ ಯೋಜಿಸುವುದು;

- ಆನ್‌ಲೈನ್ ಮತ್ತು 'ಆಫ್‌ಲೈನ್' ವಿಧಾನಗಳಲ್ಲಿ ಅಧ್ಯಾಪಕರ ಸಾಮರ್ಥ್ಯವರ್ಧನೆಯನ್ನು ಗುರಿಯಾಗಿಟ್ಟುಕೊಳ್ಳುವುದು ಮತ್ತು ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು ಸಬಲಗೊಳಿಸುವುದು;
- ಗ್ರಂಥಾಲಯಗಳನ್ನು ಸಶಕ್ತಗೊಳಿಸಲು ಶಾಲೆಗಳಿಗೆ ವಾರ್ಷಿಕ ಅನುದಾನ;
- ಸುಮಾರು ಒಂದು ಮಿಲಿಯನ್ ಶಾಲೆಗಳಿಗೆ ಗ್ರಂಥಾಲಯ ಅನುದಾನಗಳನ್ನು ಒದಗಿಸುವುದು;
- ಅಧ್ಯಾಪಕರು ಮತ್ತು ತಂತ್ರಜ್ಞಾನ–ಇವೆರಡರ ಗುಣಾತ್ಮಕತೆಯನ್ನು ಹೆಚ್ಚಿಸುವುದರ ಕಡೆಗೆ ಗಮನ;
- ಫಲ ನಿರ್ದೇಶಿತ ಆಧಾರದ ಮೇಲೆ ಸಂಪನ್ಮೂಲಗಳ ವಿತರಣೆ.

**ಡಿಜಿಟಲ್ ಶಿಕ್ಷಣದ ಕಡೆಗೆ ಗಮನ:**

- ಎಲ್ಲ ಸೆಕೆಂಡರಿ ಶಾಲೆಗಳಲ್ಲಿ ಐದು ವರ್ಷಗಳ ಕಾಲ 'ಆಪರೇಷನ್ ಡಿಜಿಟಲ್ ಬೋರ್ಡ್' ಯೋಜನೆಯನ್ನು ಬೆಂಬಲಿಸುವುದು; ಇದು ಶಿಕ್ಷಣದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರುತ್ತದೆ, ಇದು ಅರ್ಥಮಾಡಿಕೊಳ್ಳಲು ಸುಲಭ. ತಂತ್ರಜ್ಞಾನ ಆಧಾರಿತ ತರಗತಿಗಳು ಅಂತರ್ ಕ್ರಿಯಾತ್ಮಕ ತರಗತಿಗಳಾಗುತ್ತವೆ.
- ಸ್ಮಾರ್ಟ್ ತರಗತಿಗಳು, ಡಿಜಿಟಲ್ ಹಲಗೆಗಳು ಮತ್ತು ಡಿ.ಟಿ.ಎಚ್. ಚಾನಲ್‌ಗಳ ಮೂಲಕ ಶಿಕ್ಷಣದಲ್ಲಿ ಡಿಜಿಟಲ್ ತಂತ್ರಜ್ಞಾನವನ್ನು ವಿಸ್ತರಿಸುವುದು;
- ಶಾಲಾ ಕೋಶ, ಶಾಲಾ ಸಾರಥಿ, ಮುಂತಾದ ಡಿಜಿಟಲ್ ಪ್ರಯತ್ನಗಳನ್ನು ಸಶಕ್ತಗೊಳಿಸುವುದು;
- ಉನ್ನತ ಪ್ರಾಥಮಿಕ ಶಾಲೆಗಳಿಂದ ಹೈಯರ್ ಸೆಕೆಂಡರಿ ಶಾಲೆಗಳವರೆಗೆ ಐಸಿಟಿ ಮೂಲಸೌಕರ್ಯಗಳನ್ನು ಉತ್ತಮಪಡಿಸುವುದು;
- ಅಧ್ಯಾಪಕರ ಕೌಶಲಗಳನ್ನು ವೃದ್ಧಿಪಡಿಸಲು ಅಧ್ಯಾಪಕರ ಡಿಜಿಟಲ್ ಪೋರ್ಟಲ್ ಆದ 'ದೀಕ್ಷಾ'ವನ್ನು ವ್ಯಾಪಕವಾಗಿ ಬಳಕೆಯಾಗುವಂತೆ ಮಾಡುವುದು;
- ಎಲ್ಲರಿಗೂ ಉತ್ತಮ ಶಿಕ್ಷಣದ ಗುರಿ ಸಾಧನೆಗೆ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸುವುದು

**ಶಾಲಾ ಬಲವರ್ಧನೆ**

- ಗುಣಮಟ್ಟದ ಉತ್ತಮಿಕೆಗಾಗಿ ಶಾಲೆಗಳನ್ನು ಒಟ್ಟುಗೂಡಿಸುವುದು;
- ಸಾರ್ವಜನಿಕ ಅವಕಾಶವನ್ನು ಒದಗಿಸುವುದಕ್ಕಾಗಿ 1ರಿಂದ 8ನೇ ತರಗತಿಯವರೆಗಿನ ಮಕ್ಕಳಿಗೆ ಸಾರಿಗೆ ಸೌಕರ್ಯವನ್ನು ವಿಸ್ತರಿಸುವುದು;
- ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸಲು ಹೆಚ್ಚಿನ ಧನಸಹಾಯ;
- ಸಂಯುಕ್ತ ಶಾಲೆಗಳಿಗೆ ದಾಖಲಾತಿಯ ಆಧಾರದ ಮೇಲೆ ಧನಸಹಾಯ ನೀಡುವುದು;
- ಸ್ವಚ್ಛತಾ ಕಾರ್ಯಕ್ರಮಗಳಿಗೆ ನಿರ್ದಿಷ್ಟ ಅವಕಾಶಗಳು;
- ಸರ್ಕಾರಿ ಶಾಲೆಗಳ ಮೂಲಸೌಕರ್ಯಗಳನ್ನು ಉತ್ತಮಪಡಿಸುವುದು.

**ಹೆಣ್ಣುಮಕ್ಕಳ ಶಿಕ್ಷಣಕ್ಕೆ ಗಮನ:**

- ಹೆಣ್ಣುಮಕ್ಕಳ ಸಶಕ್ತೀಕರಣ;
- ಕಸ್ತೂರ್ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು 6–8 ತರಗತಿಯಿಂದ 6–12 ತರಗತಿಗಳ ವರೆಗೆ ಉನ್ನತೀಕರಿಸುವುದು;
- ಉನ್ನತ ಪ್ರಾಥಮಿಕ ಹಂತದಿಂದ ಹೈಯರ್ ಸೆಕೆಂಡರಿ ಹಂತದವರೆಗೆ ಸ್ವ ರಕ್ಷಣಾ ತರಬೇತಿ ನೀಡುವುದು;
- ವಿಶೇಷ ಅಗತ್ಯಗಳುಳ್ಳ ಹೆಣ್ಣುಮಕ್ಕಳಿಗೆ 1ರಿಂದ 12ನೇ ತರಗತಿಯವರೆಗೆ ವಿದ್ಯಾರ್ಥಿನಿ ವೇತನ ನೀಡುವುದು;
- 'ಹೆಣ್ಣು ಮಕ್ಕಳನ್ನು ಉಳಿಸಿ; ಹೆಣ್ಣುಮಕ್ಕಳನ್ನು ಓದಿಸಿ' ಕಾರ್ಯಕ್ರಮಕ್ಕೆ ಹೆಚ್ಚಿನ ಬದ್ಧತೆ ತೋರುವುದು.

**ಅಂತರ್ಗತತೆಗೆ ಗಮನ**

- ಆರ್.ಟಿ.ಇ ಕಾಯಿದೆಯ ಪ್ರಕಾರ ಪ್ರತಿ ಮಗುವಿಗೆ ನೀಡುವ ವಾರ್ಷಿಕ ಸಮವಸ್ತ್ರ ಅನುದಾನದಲ್ಲಿ ಹೆಚ್ಚಳ;
- ಆರ್.ಟಿ.ಇ ಕಾಯಿದೆಯ ಪ್ರಕಾರ ಪ್ರತಿ ಮಗುವಿಗೆ ನೀಡುವ ವಾರ್ಷಿಕ ಪಠ್ಯಪುಸ್ತಕ ಅನುದಾನದಲ್ಲಿ ಹೆಚ್ಚಳ, ಪಠ್ಯಪುಸ್ತಕಗಳು ಗಟ್ಟಿಯಾಗಿರುವಂತೆ ನೋಡಿಕೊಳ್ಳುವುದು;
- ವಿಶೇಷ ಅಗತ್ಯವಿರುವ ಮಕ್ಕಳಿಗೆ ನೀಡುವ ಅನುದಾನ ವರ್ಷಕ್ಕೆ ರೂ 3000ದಿಂದ ರೂ 3500ಕ್ಕೆ ಹೆಚ್ಚಳ; ವಿಶೇಷ ಅಗತ್ಯವುಳ್ಳ ಹೆಣ್ಣುಮಕ್ಕಳಿಗೆ 1ರಿಂದ 12 ನೇ ತರಗತಿಯವರೆಗೆ ರೂ 200 ಅನುದಾನ;
- 'ಎಲ್ಲರಿಗೂ ಶಿಕ್ಷಣ; ಗುಣಮಟ್ಟದ ಶಿಕ್ಷಣ' ಕಾರ್ಯಕ್ರಮಕ್ಕೆ ಹೆಚ್ಚಿನ ಬದ್ಧತೆ.

**ಕೌಶಲ ಬೆಳವಣಿಗೆಗೆ ಗಮನ :**

- ಉನ್ನತ ಪ್ರಾಥಮಿಕ ಹಂತದಲ್ಲಿ ಔದ್ಯೋಗಿಕ ಕೌಶಲಗಳಿಗೆ ತೆರೆದುಕೊಳ್ಳುವಿಕೆಗೆ ಗಮನ;
- ಸೆಕೆಂಡರಿ ಹಂತದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಪಠ್ಯಕ್ರಮದ ಭಾಗವಾಗಿಸಿ ಗಟ್ಟಿಗೊಳಿಸುವಿಕೆ;
- 9ರಿಂದ 12ನೇ ತರಗತಿಗಳಿಗೆ ನಿಯತವಾಗಿದ್ದ ಔದ್ಯೋಗಿಕ ಶಿಕ್ಷಣವನ್ನು 6ನೇ ತರಗತಿಯಲ್ಲಿಯೇ ಪಠ್ಯಕ್ರಮದ ಅಂತರ್ಗತ ಭಾಗವಾಗಿ ಹೆಚ್ಚು ಪ್ರಾಯೋಗಿಕವೂ ಕೈಗಾರಿಕಾ ಕೌಶಲಗಳ ದೃಷ್ಟಿಯುಳ್ಳದ್ದೂ ಆಗಿಸುವುದು;
- ಕೌಶಲ ವಿಕಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆ.

**ಕ್ರೀಡೆ ಮತ್ತು ದೈಹಿಕ ಶಿಕ್ಷಣಗಳ ಕುರಿತ ಗಮನ :**

- ಈ ಅಂಶದ ಅಡಿಯಲ್ಲಿ ಎಲ್ಲ ಶಾಲೆಗಳಿಗೂ ಕ್ರೀಡಾ ಸಾಮಗ್ರಿಗಳನ್ನು ನೀಡಲಾಗುವುದು;
- ಕ್ರೀಡಾ ಶಿಕ್ಷಣವನ್ನು ಪಠ್ಯಕ್ರಮದ ಅಂತರ್ಗತ ಭಾಗವಾಗಿ ಮಾಡುವುದು;
- ಶಾಲಾ ಪಠ್ಯಕ್ರಮದಲ್ಲಿ ಕ್ರೀಡೆಯ ಸಮರ್ಪಕತೆಯನ್ನು ಎತ್ತಿ ತೋರಿಸಲು ಎಲ್ಲ ಶಾಲೆಗಳೂ ಕ್ರೀಡಾ ಸಾಮಗ್ರಿಗಳನ್ನು ಪಡೆಯುವುದು;
- 'ಖೇಲೋ ಇಂಡಿಯ'ವನ್ನು ಬೆಂಬಲಿಸುವುದು.

**ಪ್ರಾಂತೀಯ ಸಮತೋಲನಕ್ಕೆ ಗಮನ:**

- ಸಂತುಲಿತ ಶೈಕ್ಷಣಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು;
- ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕ್‌ಗಳಿಗೆ ವಿಶೇಷ ಗಮನ, ಜಿಲ್ಲೆಗಳು, ಗಡಿನಾಡುಗಳು, ಹಾಗೂ ನೀತಿ ಆಯೋಗದಿಂದ ಗುರುತಿಸಲಾಗಿರುವ 115 ಆಕಾಂಕ್ಷಿತ ಜಿಲ್ಲೆಗಳಿಗೆ ವಿಶೇಷ ಗಮನ;
- 'ಎಲ್ಲರ ಜೊತೆಗೆ ಎಲ್ಲರ ವಿಕಾಸ' ಮತ್ತು ಎಲ್ಲರಿಗೂ ಶಿಕ್ಷಣ; ಗುಣಮಟ್ಟದ ಶಿಕ್ಷಣ' ಇವುಗಳಿಗೆ ಗಮನ.

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

ಕೇಂದ್ರ ಸರ್ಕಾರದ ಯೋಜನೆಯಾದ 'ಸಮಗ್ರ ಶಿಕ್ಷಾ' ಕುರಿತಂತೆ ಈಗ ಸ್ವಲ್ಪಮಟ್ಟಿಗೆ ತಿಳಿದಿರುವಿರಿ. ಈ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿ. ನಿಮ್ಮ ಗಮನಕ್ಕೆ ಬಂದ ಗುಣಗಳನ್ನೂ ಕೊರತೆಗಳನ್ನೂ ಒಳಗೊಂಡಂತೆ ಒಂದು ಪುಟ್ಟ ಲೇಖನವನ್ನು ಸುಮಾರು ಮೂರು ಪುಟಗಳ ಮಿತಿಯಲ್ಲಿ ತಯಾರಿಸಿ.

## 2.6.4. ಸಾರಾಂಶಿಸೋಣ

- ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯಸರ್ಕಾರಗಳೆರಡೂ ವಿಶೇಷವಾದ, ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.
- ರಾಷ್ಟ್ರೀಯ ಯೋಜನೆಗಳನ್ನು ಮತ್ತು ನಿಯಮಗಳನ್ನು ರೂಪಿಸುವುದು, ಸಮಿತಿಗಳು ಮತ್ತು ಆಯೋಗಗಳ ಮೂಲಕ ಶೈಕ್ಷಣಿಕ ಸುಧಾರಣೆಯನ್ನು ಮಾಡುವುದು. ರಾಜ್ಯಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವುದು, ಅಧೀನದಲ್ಲಿರುವ ಸಂಸ್ಥೆಗಳು ಸುಲಲಿತವಾಗಿ ಕಾರ್ಯನಿರ್ವಹಿಸುವಲ್ಲಿ ಸಹಾಯಮಾಡುವುದು, ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವುದು, ಅಧೀನ ಸಂಸ್ಥೆಗಳನ್ನು ಮಾರ್ಗದರ್ಶನ ಮಾಡುವುದು, ಹಣಕಾಸನ್ನು ಮಂಜೂರು ಮಾಡಿ ಸಮರ್ಪಕವಾದ ಕೆಲಸ ನಿರ್ವಹಣೆಗೆ ಸಹಾಯಮಾಡುವುದು, ಶಿಕ್ಷಣವನ್ನು ಕುರಿತ ಹಲವಾರು ಪ್ರಯೋಗಗಳನ್ನು ಮಾಡುವುದು ಕೇಂದ್ರ ಸರ್ಕಾರದ ಹಲವು ಕರ್ತವ್ಯಗಳು.
- ರಾಜ್ಯಸರ್ಕಾರಕ್ಕೂ ನಿರ್ದಿಷ್ಟವಾದ ಜವಾಬ್ದಾರಿಗಳಿವೆ. ಪ್ರಾಥಮಿಕ ಶಿಕ್ಷಣವನ್ನು ನೀಡುವುದು; ಉನ್ನತ ಶಿಕ್ಷಣವನ್ನು ನೀಡುವುದು; ವಿಶ್ವವಿದ್ಯಾನಿಲಯಗಳ ಚಟುಚಟಿಕೆಗಳನ್ನು ನಿಯಂತ್ರಿಸುವುದು; ವಯಸ್ಕ ಮತ್ತು ಸಾಮಾಜಿಕ ಶಿಕ್ಷಣವನ್ನು ನೀಡುವುದು; ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು; ರಾಜ್ಯಮಟ್ಟದ ಪಠ್ಯಕ್ರಮವನ್ನು ತಯಾರಿಸುವುದು; ಮೇಲ್ವಿಚಾರಣಾ ಸಿಬ್ಬಂದಿಯನ್ನು ನೇಮಕಗೊಳಿಸುವುದು; ಹಣಕಾಸಿನ ಸಹಾಯ ಒದಗಿಸುವುದು ಈ ಮೊದಲಾದವು ರಾಜ್ಯ ಸರ್ಕಾರದ ಕಾರ್ಯಗಳು.
- ಸಮಗ್ರ ಶಿಕ್ಷಾ ಎಂಬುದೊಂದು ಸಮಗ್ರವಾದ ಮತ್ತು ಹೊಸದಾದ ಕಾರ್ಯಕ್ರಮ. ಶಿಕ್ಷಣದ ಗುರಿಗಳನ್ನು ಸಾಧಿಸಲು ಈಗಿನ ಎಲ್ಲ ಪ್ರಯತ್ನಗಳನ್ನು ಒಳಗೊಂಡಂತೆ, ಶಿಕ್ಷಣವನ್ನು ಹೆಚ್ಚು ಸಮಷ್ಟಿರೂಪದಲ್ಲಿ ಕಾಣುವ ಕಾರ್ಯಕ್ರಮವಿದು.

## 2.6.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

## ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ –1

ನಿಮ್ಮ ಅಭಿಪ್ರಾಯಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ನಿಮ್ಮ ನಿಗಮನಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು, ಆ ಕುರಿತ ಅಧ್ಯಾಪಕರ ಹಿಮ್ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿ.

### ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ–3

ನೀವು ಸಿದ್ಧಪಡಿಸಿದ ಲೇಖನವನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಅಥವಾ ನಿಮ್ಮ ಸಹಪಾಠಿಗಳೊಂದಿಗೆ (ಸಂಪರ್ಕ ಕಾರ್ಯಕ್ರಮಕ್ಕೆ ಬಂದಾಗ) ಹಂಚಿಕೊಳ್ಳಿ.

## 2.6.6. ಘಟಕಾಂತ್ಯ ಅಭ್ಯಾಸಗಳು

1. ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪಾತ್ರವನ್ನು ವಿವರಿಸಿ
2. ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಪಾತ್ರವನ್ನು ವಿವರಿಸಿ
3. 'ಸಮಗ್ರ ಶಿಕ್ಷಾ' ಯೋಜನೆಯನ್ನು ವಿವರಿಸಿ.

## 2.6.7. ಪರಾಮರ್ಶನ ಸೂಚಿ


1. https://www.jagranjosh.com/current-affairs/prakash-javadekar-launches-samagra-shiksha-scheme-for-school-education-1527167130-1
2. http://www.ddnews.gov.in/national/hrd-ministry-launches-samagra-shiksha-scheme
3. http://www.ddnews.gov.in/national/hrd-ministry-launches-samagra-shiksha-scheme
4. http://www.yourarticlelibrary.com/education/role-of-central-state-and-local-bodies/45221
5. http://www.arvindguptatoys.com/arvindgupta/JPNaik_01.pdf
6. http://www.preservearticles.com/201106208286/role-of-central-government-and-state-government-in-promoting-education-in-india.html
7. http://www.nuepa.org/new/download/Publications/NUEPA%20Occasional%20Paper%20No-5-Centre%20State%20Relation%20in%20Financing%20Education%20in%20India_HK_No%20Acc.pdf
8. http://shodhganga.inflibnet.ac.in/bitstream/10603/86857/10/10_chapter%202.pdf
9. https://en.wikipedia.org/wiki/Education_in_India
10. https://www.mapsofindia.com/my-india/government/what-is-central-government-structure-roles-and-responsibilities
11. https://education.findlaw.com/curriculum-standards-school-funding/the-roles-of-federal-and-state-governments-in-education.html
12. http://www.elections.in/blog/role-of-government-in-education-in-india/
13. http://www.indiaeducation.net/indiaedudestination/structure/
14. http://164.100.47.193/intranet/FinalGovernmentSchemesforSchoolEducation.pdf
15. https://www.hindustantimes.com/india-news/new-education-policy-draft-ready-to-be-presented-after-state-polls/story-6N2fc0gKwNJDgBBKwY0jEJ.html


*********

# ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು

## ಘಟಕ–1 : ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ಶೈಕ್ಷಣಿಕ ಸುಧಾರಣೆಯ ಪಕ್ಷಿನೋಟ

**ಘಟಕದ ರಚನೆ :**


3.1.1. ಕಲಿಕೆಯ ಉದ್ದೇಶಗಳು

3.1.2. ಪೀಠಿಕೆ

3.1.3. ಕಲಿಕೆಯ ಅಂಶಗಳು ಹಾಗೂ ಕಲಿಕೆಯ ಚಟುವಟಿಕೆಗಳು

3.1.3.1. ಶೈಕ್ಷಣಿಕ ಸುಧಾರಣೆಗಳ ಅರ್ಥ ಮತ್ತು ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಶೈಕ್ಷಣಿಕ ಸುಧಾರಣೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

3.1.3.2. ಸ್ವಾತಂತ್ರ್ಯಾ ನಂತರದ ಅವಧಿಯಲ್ಲಿ ಶೈಕ್ಷಣಿಕ ಸುಧಾರಣೆಗಳು

3.1.4. ಸಾರಾಂಶಿಸೋಣ

3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

3.1.6. ಘಟಕಾಂತ್ಯ ಅಭ್ಯಾಸಗಳು

3.1.7. ಪರಾಮರ್ಶನ ಸೂಚಿ


### 3.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಭಾರತದಲ್ಲಿ ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಆದ ಶೈಕ್ಷಣಿಕ ಸುಧಾರಣೆಗಳನ್ನು ಗುರುತಿಸುವರು;
- ಭಾರತದಲ್ಲಿ ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಆದ ಶೈಕ್ಷಣಿಕ ಸುಧಾರಣೆಗಳನ್ನು ವಿವರಿಸುವರು; ಮತ್ತು
- ಭಾರತದಲ್ಲಿ ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಆದ ಶೈಕ್ಷಣಿಕ ಸುಧಾರಣೆಗಳು ಶಿಕ್ಷಣದ ಪ್ರಗತಿಗೆ ಹೇಗೆ ಪೂರಕವಾದವು ಎಂಬುದನ್ನು ವಿಶ್ಲೇಷಿಸುವರು.

### 3.1.2. ಪೀಠಿಕೆ

ಸಮಾಜದ ಬೆಳವಣಿಗೆಗೆ ಶಿಕ್ಷಣವು ಮೂಲ ಅಗತ್ಯ ಎಂಬುದನ್ನು ಈಗಾಗಲೇ ಗುರುತಿಸಿಕೊಂಡಿರುವಿರಿ. ಸಮಾಜದ ಈ ಬೆಳವಣಿಗೆಯ ಹಿಂದೆ ಆಯಾ ಸಮಾಜದ ಸಂಸ್ಕೃತಿ ಹಾಗೂ ನಾಗರೀಕತೆಗಳು ಕೆಲಸ ಮಾಡುತ್ತಿರುತ್ತವೆ. ಈ ಸಂಸ್ಕೃತಿಯ ಗುರಿಗಳು, ಆಶೋತ್ತರಗಳು ಆಯಾ ಸಮಾಜದ ಶಿಕ್ಷಣ ಸಮೂಹವನ್ನು ಕಟ್ಟುತ್ತವೆ. ಭಾರತವೂ ಅಂತಹ ಶ್ರೀಮಂತ ಸಂಸ್ಕೃತಿ ಮತ್ತು ನಾಗರೀಕತೆಯೊಂದಿಗೆ ಹಾದು ಬಂದಿರುವುದು, ಆಯಾ ಸಂಸ್ಕೃತಿಯ ಸಂಸ್ಕಾರಗಳನ್ನು ಮೈಗೂಡಿಸಿಕೊಂಡಿರುವುದು ವಾಸ್ತವದ ಸಂಗತಿ. ಇದು ಭಾರತದ ಎಲ್ಲ ಕಾಲದ ಸಮಾಜದಲ್ಲಿ ಬಿಂಬಿತವಾಗಿದೆ. ಸಂಸ್ಕೃತಿ ಬದಲಾದಂತೆ ಶಿಕ್ಷಣವೂ ಬದಲಾಗುತ್ತದೆ ಎಂಬ ಮಾತೂ ಸತ್ಯವಾದುದು. ಕೆಲವು ದಶಕಗಳ ಹಿಂದಿನ ನಮ್ಮ ಪ್ರಾಥಮಿಕ ಶಾಲೆಗಳನ್ನು ನೆನಪಿಸಿಕೊಳ್ಳಿ. ಇಂದಿನ ಪರಿಸ್ಥಿತಿಯೊಂದಿಗೆ ಹೋಲಿಸಿ.

ಹಲವಾರು ಧನಾತ್ಮಕ ವ್ಯತ್ಯಾಸಗಳನ್ನು ಕಾಣುವಿರಿ. ಬದಲಾದ ವ್ಯವಸ್ಥೆಯ ಕಾರಣದಿಂದಾಗಿ ಕಾಲದಿಂದ ಕಾಲಕ್ಕೆ ಆಗುವ ಈ ಧನಾತ್ಮಕ ಬದಲಾವಣೆಗಳನ್ನೇ ಸುಧಾರಣೆಗಳು ಎನ್ನುತ್ತೇವೆ. ಶಿಕ್ಷಣ ಕ್ಷೇತ್ರದಲ್ಲಾದ ಬದಲಾವಣೆಗಳು ಶೈಕ್ಷಣಿಕ ಸುಧಾರಣೆಗಳೆನಿಸಿಕೊಳ್ಳುತ್ತವೆ. ಹೀಗೆ ಭಾರತಕ್ಕೆ ಸ್ವಾತಂತ್ರ್ಯ ಬರುವ ಮೊದಲ ಕಾಲದಿಂದ, ಅಂದರೆ ಸುಮಾರು ಬ್ರಿಟಿಷರ ಕಾಲದಿಂದ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಆದ ಸುಧಾರಣೆಗಳನ್ನು ಈ ಘಟಕದಲ್ಲಿ ಕಲಿಯೋಣ.

## 3.1.3 ಕಲಿಕೆಯ ಅಂಶಗಳು ಮತ್ತು ಚಟುವಟಿಕೆಗಳು.

## 3.1.3.1. ಶೈಕ್ಷಣಿಕ ಸುಧಾರಣೆಗಳ ಅರ್ಥ ಮತ್ತು ಸ್ವಾತಂತ್ರ್ಯಪೂರ್ವ ಅವಧಿಯಲ್ಲಿ ಶೈಕ್ಷಣಿಕ ಸುಧಾರಣೆಗಳು

ಬದಲಾಗುತ್ತಿರುವ ಸಾರ್ವಜನಿಕ ಶಿಕ್ಷಣದ ಗುರಿಗಳನ್ನು ಶೈಕ್ಷಣಿಕ ಸುಧಾರಣೆಗಳು ಎನ್ನಬಹುದು. ಇದು ಒಂದು ಶಾಲೆ ಅಥವಾ ಶಾಲಾ ವ್ಯವಸ್ಥೆಯ ಕಾರ್ಯಗಳು, ತರಬೇತಿ ವಿಧಾನಗಳು, ಆಡಳಿತಾತ್ಮಕ ಪ್ರಕ್ರಿಯೆಗಳು ಮುಂತಾದ ಕ್ಷೇತ್ರಗಳಲ್ಲಿ ಯೋಜಿತವಾದ ಬದಲಾವಣೆಗಳನ್ನು ಒಳಗೊಳ್ಳುತ್ತದೆ. ಸಮಾಜದಲ್ಲಿ ಆಗುವ ಬದಲಾವಣೆಗಳಿಗೆ ಹೊಂದಿಕೊಳ್ಳಲು, ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಹೆಚ್ಚಿಸುವಲ್ಲಿ ದೇಶಕ್ಕೆ ಸಹಾಯ ಮಾಡಲು, ದೇಶದ ಪ್ರಗತಿಯಲ್ಲಿ ಭಾಗವಹಿಸುವಂತೆ ಜನರಿಗೆ ಚಾಲನೆಯನ್ನೊದಗಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಸುಧಾರಣೆಗಳು ಅಗತ್ಯವಾಗುತ್ತವೆ.

ಶಿಕ್ಷಣ ಕ್ಷೇತ್ರದಲ್ಲಿ ಕಾಲಕಾಲಕ್ಕೆ ಬೆಳಕಿಗೆ ಬಂದ ವಿಭಿನ್ನ ಸುಧಾರಕರ ಆಸಕ್ತಿ ಮತ್ತು ಅಭಿಪ್ರೇರಣೆಗಳಿಗನುಗುಣವಾಗಿ ಶೈಕ್ಷಣಿಕ ಸುಧಾರಣೆಗಳು ವಿವಿಧ ರೀತಿಗಳಲ್ಲಿ ಪ್ರಕಟಗೊಂಡಿವೆ. ಆದರೆ ಈಚಿನ ದಿನಗಳಲ್ಲಿ, ಸುಧಾರಣೆಗಳ ಗಮನ ಶಿಕ್ಷಣದ ಒಳಹರಿವಿನ ಬದಲಿಗೆ ಶಿಕ್ಷಣ ಫಲಿಸುವ ಫಲಿತಾಂಶಗಳ ಕಡೆಗೆ ಪಲ್ಲಟಗೊಂಡಿದೆ. ಸಣ್ಣ ಪ್ರಮಾಣದ ಬದಲಾವಣೆಗಳು ಪ್ರಜೆಗಳ ಆರೋಗ್ಯ, ಸಂಪತ್ತು ಮತ್ತು ಸಂತೋಷಕ್ಕೆ ಸಂಬಂಧಿಸಿದಂತೆ ದೀರ್ಘಕಾಲಿಕ ಸಾಮಾಜಿಕ ಫಲಗಳನ್ನು ನೀಡಬಲ್ಲುದು ಎಂಬ ನಂಬಿಕೆಯ ಮೇಲೆ ಈ ಸುಧಾರಣೆಗಳು ಮುಂದುವರಿಯುತ್ತಿವೆ.

ಭಾರತದ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಳನ್ನು ಎರಡು ಶೀರ್ಷಿಕೆಯ ಅಡಿಯಲ್ಲಿ ಅಭ್ಯಾಸ ಮಾಡಬಹುದು:

- ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಆದ ಶೈಕ್ಷಣಿಕ ಸುಧಾರಣೆಗಳು(ಬ್ರಿಟಿಷರ ಕಾಲದ ಸುಧಾರಣೆಗಳು)
- ಸ್ವಾತಂತ್ರ್ಯಾನಂತರದ  ಅವಧಿಯಲ್ಲಿ ಆದ ಶೈಕ್ಷಣಿಕ ಸುಧಾರಣೆಗಳು(1947ರ ನಂತರದ ಸುಧಾರಣೆಗಳು)

### ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಆದ ಶೈಕ್ಷಣಿಕ ಸುಧಾರಣೆಗಳು

ಈ ಯುಗವನ್ನು ಭಾರತದಲ್ಲಿ ಆಧುನಿಕ ಶಿಕ್ಷಣದ ಪ್ರಾರಂಭವೆಂದು ಗುರುತಿಸಬಹುದು. ಈ ಅವಧಿಯಲ್ಲಿ ಮೂರು ನಿಯೋಗಗಳು ಪ್ರಮುಖ ಪಾತ್ರವನ್ನು ವಹಿಸಿದವು. ಅವೆಂದರೆ, ಬ್ರಿಟಿಷ್ ಸರಕಾರ(ಈಸ್ಟ್ ಇಂಡಿಯಾ ಕಂಪೆನಿ), ಕ್ರಿಶ್ಚಿಯನ್ ಮಿಶಿನರಿಗಳು ಮತ್ತು ಭಾರತದ ವಿದ್ವಾಂಸರು ಮತ್ತು ಸಮಾಜ ಸುಧಾರಕರು.

ಬ್ರಿಟಿಷರ ಅವಧಿಯಲ್ಲಿ ಭಾರತದ ಶಿಕ್ಷಣ ಈಸ್ಟ್ ಇಂಡಿಯಾ ಕಂಪೆನಿಯ ಸ್ಥಾಪನೆಯೊಂದಿಗೆ ಪ್ರಾರಂಭವಾಯಿತು. ಈ ಕಂಪೆನಿಗೆ ಭಾರತೀಯರಿಗೆ ಶಿಕ್ಷಣ ಒದಗಿಸಬೇಕು ಎಂಬ ತಾತ್ವಿಕತೆಗಿಂತ ಹಣಕಾಸಿನ ಪ್ರಾಬಲ್ಯ ಪಡೆಯುವುದು ಪ್ರಮುಖ ಉದ್ದೇಶವಾಗಿತ್ತು. ಕ್ರಿಶ್ಚಿಯನ್ ಮಿಶಿನರಿಗಳು ಬ್ರಿಟಿಷರ ನೌಕರರ ಮಕ್ಕಳಿಗೆ ಶಿಕ್ಷಣ ಒದಗಿಸುವ ಉದ್ದೇಶದಿಂದ ಶಾಲೆಗಳನ್ನು ಪ್ರಾರಂಭಿಸಿದರು. ಸ್ಥಳೀಯ ಭಾರತೀಯರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸುವುದು ಇವರ ಉದ್ದೇಶವಾಗಿತ್ತು. ಹೀಗಾಗಿ ಮಿಶಿನರಿ ಶಾಲೆಗಳು ಇಗರ್ಜಿಗಳಿಗೆ ಸೇರಿಕೊಂಡಿದ್ದವು. ಕೆಲವು ಪ್ರಭಾವಿ ಭಾರತೀಯರಿಗೂ ಶಿಕ್ಷಣ ಕೊಟ್ಟು ಆ ಮೂಲಕ ಹೆಚ್ಚಿನ ನಂಬಿಕೆ ಹುಟ್ಟಿಸಿ ಭಾರತದಲ್ಲಿ ಆಳ್ವಿಕೆಗಯನ್ನು ಗಟ್ಟಿಗೊಳಿಸಿಕೊಳ್ಳುವ ಉದ್ದೇಶವೂ  ಬ್ರಿಟಿಷರಿಗಿತ್ತು.

ಆರಂಭದ ಹಂತಗಳಲ್ಲಿ ಶಿಕ್ಷಣದ ಪ್ರಚಾರಕ್ಕೆ ಕಂಪೆನಿಯು ಅಷ್ಟೇನೂ ಆಸಕ್ತಿ ವಹಿಸಲಿಲ್ಲ. ಆದರೂ ಕೆಲವು ಪ್ರಯತ್ನಗಳನ್ನು ಮಾಡಲಾಯಿತು. ಇವುಗಳಲ್ಲಿ ಮುಖ್ಯವಾದವು:

- ಮುಸ್ಲಿಮರ ಕಾನೂನು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಅಧ್ಯಯನ ಮಾಡಲು 1781ರಲ್ಲಿ ವಾರೆನ್ ಹೇಸ್ಟಿಂಗ್ ಕಲ್ಕತ್ತಾದಲ್ಲಿ ಮದರಸಗಳನ್ನು ಸ್ಥಾಪಿಸಿದನು.
- ಹಿಂದೂ ಕಾನೂನು ಮತ್ತು ತತ್ವಶಾಸ್ತ್ರದ ಅಧ್ಯಯನಕ್ಕಾಗಿ 1791ರಲ್ಲಿ ಬನಾರಸ್‌ನಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸಿದರು
- ಕಂಪೆನಿಯ ನಾಗರಿಕ ಸೇವಕರನ್ನು ಭಾಷೆ ಮತ್ತು ಭಾರತೀಯ ಪದ್ಧತಿಗಳಲ್ಲಿ ತರಬೇತುಗೊಳಿಸಲು 1800ರಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದರು.
- ಕಂಪೆನಿಯ ನ್ಯಾಯಾಲಯದಲ್ಲಿ ಕಾನೂನಿನ ಸಂಘಟನೆಗೆ ಸಹಾಯ ಮಾಡಲು ನುರಿತ ಭಾರತೀಯರನ್ನು ನಿರಂತರವಾಗಿ ಒದಗಿಸಲು ಕಲ್ಕತ್ತಾ ಮದರಸಾ ಮತ್ತು ಸಂಸ್ಕೃತ ಕಾಲೇಜುಗಳು ಪ್ರಾರಂಭವಾದವು.
- ಭಾರತೀಯ ಸುಧಾರಕರು ಮತ್ತು ಮಿಶಿನರಿಗಳು ಆಧುನಿಕ, ಜಾತ್ಯತೀತ ಶಿಕ್ಷಣವನ್ನು ಪ್ರಚಾರ ಮಾಡಲು ಸರಕಾರವನ್ನು ಒತ್ತಾಯಿಸತೊಡಗಿದರು.

1765ರ ವೇಳೆಗೆ, ಈಸ್ಟ್ ಇಂಡಿಯಾ ಕಂಪೆನಿ ಅಧಿಕಾರಕ್ಕೆ ಬಂದಿತು. ಕಂಪೆನಿಯ ನಿರ್ದೇಶಕರು ಭಾರತೀಯರ ಶಿಕ್ಷಣದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ನಿರಾಕರಿಸಿದರು. ಖಾಸಗಿ ಸಂಸ್ಥೆಗಳಿಗೆ ಶಿಕ್ಷಣದ ಜವಾಬ್ದಾರಿಯನ್ನು ಬಿಟ್ಟುಕೊಡುವುದೆಂದು ನಿರ್ಧಾರವಾಯಿತು. ಆದರೆ ಈಸ್ಟ್ ಇಂಡಿಯಾ ಕಂಪೆನಿಯಲ್ಲಿದ್ದ ಭಾರತೀಯ ಅಧಿಕಾರಿಗಳು ಪೌರಸ್ತ್ಯ ಕಲಿಕೆಗೆ ಭಾರತೀಯರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡರು. ಈ ದಿಶೆಯಲ್ಲಿ ಬ್ರಿಟಿಷ್ ಸರಕಾರವು ಕೆಲವು ಪ್ರಯತ್ನಗಳನ್ನು ಮಾಡಿತು. ಈ ನಿಟ್ಟಿನಲ್ಲಿ ವಾರನ್ ಹೇಸ್ಟಿಂಗ್ ಕಲ್ಕತ್ತಾದಲ್ಲಿ ಮದರಸಾವನ್ನು ಸ್ಥಾಪಿಸಿದನು. ಕ್ರಿ.ಶ. 1793ರಿಂದ ಕ್ರಿ.ಶ 1813ರ ವರೆಗೆ ಕಂಪೆನಿಯು ಮಿಶಿನರಿ ಚಟುವಟಿಕೆಗಳನ್ನು ಕಡಿಮೆಮಾಡಿತು. ಈ ಸನ್ನಿವೇಶದಲ್ಲಿ ಮಿಶಿನರಿಗಳು ತಮಗೆ ಅವಶ್ಯಕ ಸ್ವಾತಂತ್ರ್ಯ ಕೊಡಬೇಕೆಂದು ಅಂದೋಲನ ನಡೆಸಿದರು.

## ಹಕ್ಕುಪತ್ರ ಕಾಯಿದೆ 1813

ಈ ಕಾಲದ ಪರಿಸ್ಥಿತಿಯು ಕಂಪೆನಿಯೇ ಶಿಕ್ಷಣದ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿತು. ಇದಕ್ಕಾಗಿ ಬ್ರಿಟಿಷ್ ಸರಕಾರವು ಹಕ್ಕುಪತ್ರ ಕಾಯಿದೆಯನ್ನು ಜಾರಿಗೆ ತಂದಿತು. ಕಲಿತ ಭಾರತೀಯರನ್ನು ಪ್ರೋತ್ಸಾಹಿಸುವ ಮತ್ತು ದೇಶದಲ್ಲಿ ಆಧುನಿಕ ವಿಜ್ಞಾನದ ಜ್ಞಾನವನ್ನು ಪ್ರಚಾರ ಮಾಡುವ ತತ್ವವನ್ನು ಇದು ಒಳಗೊಂಡಿತ್ತು.

1835ರಲ್ಲಿ ಮೆಕಾಲೆಯ 'ಭಾರತೀಯ ಶಿಕ್ಷಣದ ಕುರಿತ ಟಿಪ್ಪಣಿಗಳು' ಎಂಬ ಶಿಕ್ಷಣ ನೀತಿಯನ್ನು ಪ್ರಕಟಿಸಲಾಯಿತು. ಪಾಶ್ಚಾತ್ಯ ಕಲಿಕೆ ಅತ್ಯಂತ ಶ್ರೇಷ್ಠವಾದುದು ಮತ್ತು ಅದನ್ನು ಇಂಗ್ಲಿಷ್ ಭಾಷೆಯ ಮಾಧ್ಯಮದಲ್ಲಿ ಮಾತ್ರವೇ ಕಲಿಯಲು ಸಾಧ್ಯ ಎಂದವನು ವಾದಿಸಿದನು. "ರಕ್ತಗತವಾಗಿ ಭಾರತೀಯರಾದರೂ ಅಭಿರುಚಿ, ಅಭಿಪ್ರಾಯಗಳಲ್ಲಿ, ನಡೆವಳಿಕೆ ಮತ್ತು ಚಿಂತನೆಗಳಲ್ಲಿ ಇಂಗ್ಲೀಷರಾಗಿರುವ ವ್ಯಕ್ತಿಗಳ ಗುಂಪೊಂದನನ್ನು ರೂಪಿಸಲು ಅಗತ್ಯವಾದುದೆಲ್ಲವನ್ನೂ ನಾವು ಈಗ ಮಾಡಬೇಕು, ಇವರು ಪಾಶ್ಚಿಮಾತ್ಯ ಕಲಿಕೆಯನ್ನು ದೇಶೀ ಭಾಷೆಗಳಲ್ಲಿ ಕೊಡುವ ಸಾಧನಗಳನ್ನು ತಯಾರಿಸಬೇಕು" ಎಂದವನು ತನ್ನ ಟಿಪ್ಪಣಿಯಲ್ಲಿ ಬರೆದ. ಈಸ್ಟ್ ಇಂಡಿಯಾ ಕಂಪೆನಿಯು ಅರೇಬಿಕ್ ಮತ್ತು ಸಂಸ್ಕೃತ ಪುಸ್ತಕಗಳ ಮುದ್ರಣವನ್ನು ನಿಲ್ಲಿಸಬೇಕು ಮತ್ತು ಬನಾರಸ್‌ನಲ್ಲಿನ ಸಂಸ್ಕೃತ ಕಾಲೇಜು ಮತ್ತು ದೆಹಲಿಯ ಮೊಹೊಮಡನ್ ಕಾಲೇಜು ಇವುಗಳನ್ನು ಹೊರತುಪಡಿಸಿ ಎಲ್ಲಿಯೂ ಸಾಂಪ್ರದಾಯಿಕ ಶಿಕ್ಷಣಕ್ಕೆ ಬೆಂಬಲಿಸಬಾರದು ಎಂಬುದು ಅವನ ಶಿಫಾರಸಾಗಿತ್ತು. ಇದರ ಜೊತೆಗೆ ಅವನು ಇತರ ಕೆಲವು ಅಂಶಗಳನ್ನು ಸ್ಪಷ್ಟಪಡಿಸಿದನು:

- ಯೂರೋಪಿನ ಸಾಹಿತ್ಯ ಮತ್ತು ವಿಜ್ಞಾನವನ್ನು ಸ್ಥಳೀಯ ಭಾರತೀಯರಲ್ಲಿ ಪ್ರಚುರಗೊಳಿಸುವುದು ಬ್ರಿಟಿಷ್ ಸರ್ಕಾರದ ಪ್ರಮುಖ ಉದ್ದೇಶವಾಗಬೇಕು. ಶಿಕ್ಷಣದ ಉದ್ದೇಶಕ್ಕಾಗಿ ಇರುವ ಎಲ್ಲ ನಿಧಿಗಳೂ ಆಂಗ್ಲ ಶಿಕ್ಷಣಕ್ಕೆ ಮಾತ್ರ ಬಳಕೆಯಾಗಬೇಕು.
- ಸಮಿತಿಯ ಮೇಲ್ವಿಚಾರಣೆಯ ಅಡಿಯಲ್ಲಿ ಬರುವ ಎಲ್ಲ ಸಂಸ್ಥೆಗಳಲ್ಲಿ ಪ್ರಸ್ತುತ ಇರುವ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೆಲ್ಲರಿಗೂ ಕೊಡುವ ವೇತನ ಮುಂದುವರಿಯುವುದು, ಆದರೆ, ಈ ನಂತರ ಯಾವುದೇ ಸಂಸ್ಥೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುವುದಿಲ್ಲ.
- ಸ್ಥಳೀಯ ಕೃತಿಗಳ ಪ್ರಕಟಣೆಗೆ ಸರಕಾರದ ನಿಧಿಯನ್ನು ಬಳಸುವಂತಿಲ್ಲ
- ಈ ಎಲ್ಲ ಹಣವನ್ನೂ ಸರ್ಕಾರವು ಇನ್ನು ಮುಂದೆ ಭಾರತೀಯರಿಗೆ ಇಂಗ್ಲಿಷ್ ಸಾಹಿತ್ಯ ಮತ್ತು ವಿಜ್ಞಾನದ ಜ್ಞಾನ ನೀಡಲು ಬಳಸಬೇಕು.

ಮೆಕಾಲೆ ಅವನ ನೀತಿಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನಾನು ಒಪ್ಪಿಕೊಳ್ಳುತ್ತೇನೆ ಎಂಬ ಮಾತಿನ ಮೂಲಕ ಲಾರ್ಡ್ ವಿಲಿಯಂ ಬೆಂಟಿಕ್ ಮೆಕಾಲೆಯ ನೀತಿಯನ್ನು ಅನುಮೋದಿಸಿದ.

## ವುಡ್ಸನ ವರದಿ 1854

ಈ ವರದಿ ನೀಡಿದ ಆಯೋಗದ ಅಧ್ಯಕ್ಷನ ಹೆಸರು ಚಾರ್ಲ್ಸ್ ವುಡ್ ಎಂದಾದುದರಿಂದ ಈ ವರದಿಗೆ ವುಡ್ಸ್ ವರದಿ ಎಂಬ ಹೆಸರು ಬಂದಿದೆ. ಈ ವರದಿಯ ಪ್ರಮುಖ ಶಿಫಾರಸುಗಳು:

- ಭಾರತೀಯರಿಗೆ ಶಿಕ್ಷಣ ನೀಡುವುದು ಬ್ರಿಟಿಷ್ ಸರ್ಕಾರದ ಜವಾಬ್ದಾರಿ;
- ಪ್ರಸ್ತುತ ಇರುವ ಶಿಕ್ಷಣ ನಿಯಂತ್ರಣ ಮಂಡಳಿಯನ್ನು ತೊಡೆದು ಹಾಕಿ ನಿರ್ದೇಶಕರ ಕಛೇರಿಗಳನ್ನು ರಾಜ್ಯಗಳಲ್ಲಿ ಸ್ಥಾಪಿಸಬೇಕು;
- ಅಧಿಪತ್ಯ ನಗರಗಳಾದ ಕಲ್ಕತ್ತಾ, ಬಾಂಬೆ ಮತ್ತು ಮದ್ರಾಸುಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕು;
- ಲಾರ್ಡ್ ಮೆಕಾಲೆಯವರ ಅಭಿಪ್ರಾಯದಂತೆ ಭಾರತದಲ್ಲಿ ಶಿಕ್ಷಣದ ಬೋಧನಾ ಮಾಧ್ಯಮ ಇಂಗ್ಲಿಷ್ ಭಾಷೆಯಾಗಬೇಕು;
- ಶಿಕ್ಷಣವನ್ನು ವಿಸ್ತರಿಸಲು ಖಾಸಗಿ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಶೈಕ್ಷಣಿಕ ಸಂಸ್ಥೆಗಳಿಗೆ ಅನುದಾನ ನೀಡಬೇಕು;
- ಶಾಲೆಗಳಿಗೆ ಸೂಕ್ತ ಅಧ್ಯಾಪಕರನ್ನು ಒದಗಿಸಲು ಶಿಕ್ಷಕ ತರಬೇತಿಯನ್ನು ಪ್ರಾರಂಭಿಸಬೇಕು;
- ಔದ್ಯೋಗಿಕ ಶಿಕ್ಷಣಕ್ಕೆ ಮಹತ್ವ ನೀಡಲು ವೃತ್ತಿಪರ ಕಾಲೇಜುಗಳನ್ನು ಸ್ಥಾಪಿಸಬೇಕು.

## ಹಂಟರ್ ಆಯೋಗ

ಶಿಕ್ಷಣದ ಪ್ರಗತಿಯನ್ನು ಮುಂದುವರಿಸುವ ನಿಟ್ಟಿನಲ್ಲಿ ವಿಲಿಯಂ ಹಂಟರ್ ಎಂಬವನ ನೇತೃತ್ವದಲ್ಲಿ 1882ರಲ್ಲಿ ಒಂದು ಸಮಿತಿಯನ್ನು ಯೋಜಿಸಲಾಯಿತು. 1854ರಲ್ಲಿನ ವುಡ್ಸನ ವರದಿ ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ ಎಂಬುದನ್ನು ಪರಿಶೀಲಿಸುವುದು ಮತ್ತು ಮುಂದಿನ ಶಿಫಾರಸುಗಳನ್ನು ನೀಡುವುದು ಈ ಸಮಿತಿಯ ಉದ್ದೇಶವಾಗಿತ್ತು.

### ಈ ಸಮಿತಿಯ ಪ್ರಮುಖ ಶಿಫಾರಸುಗಳು :

- ಪ್ರಾಥಮಿಕ ಶಿಕ್ಷಣವನ್ನು ನೀಡುವ ಜವಾಬ್ದಾರಿಯು ಸ್ಥಳೀಯ ಸಂಸ್ಥೆಗಳದ್ದಾಗಿರಬೇಕು. ಪ್ರಾಥಮಿಕ

ಶಿಕ್ಷಣವು ಜೀವನಾಧಾರಿತವಾಗಿರವೂ ಪ್ರಾಯೋಗಿಕವೂ ಉಪಯುಕ್ತವೂ ಆಗಿರಬೇಕು;

- ಪಠ್ಯಕ್ರಮವು ಸ್ಥಳೀಯ ಆವಶ್ಯಕತೆಗಳಿಗನುಗುಣವಾಗಿ ರೂಪಿತವಾಗಬೇಕು, ಪ್ರಾಯೋಗಿಕ ಅಂಶಗಳಿಗೆ ಹೆಚ್ಚು ಮಹತ್ವ ನೀಡಬೇಕು;
- ಪ್ರಾಥಮಿಕ ಹಂತದಲ್ಲಿ ಮಾತೃಭಾಷೆ ಬೋಧನಾ ಮಾಧ್ಯಮವಾಗಬೇಕು;
- ಪ್ರತಿ ಜಿಲ್ಲೆಯಲ್ಲಿ ಮಾದರಿ ಸರಕಾರಿ ಮಾಧ್ಯಮಿಕ ಶಾಲೆಯನ್ನು ಸ್ಥಾಪಿಸಬೇಕು;
- ಮಾಧ್ಯಮಿಕ ಹಂತದಲ್ಲಿ ಎರಡು ರೀತಿಯ ಕೋರ್ಸುಗಳನ್ನು ರೂಪಿಸಬೇಕು. ಒಂದು ಶಿಕ್ಷಣವನ್ನು ಮುಂದುವರಿಸಿ ಉನ್ನತ ಶಿಕ್ಷಣಕ್ಕೆ ಹೋಗುವವರಿಗೆ, ಮತ್ತೊಂದು ಔದ್ಯೋಗಿಕ ಶಿಕ್ಷಣದ ಮೂಲಕ ಉದ್ಯೋಗಕ್ಕೆ ಹೋಗಬಯಸುವವರಿಗೆ;
- ಪ್ರಾಥಮಿಕ ಶಿಕ್ಷಕರ ತರಬೇತಿಗೆ ನಾರ್ಮಲ್ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು;
- ಸ್ಥಳೀಯ ಸಹಕಾರ ಮತ್ತು ಖಾಸಗಿ ಪ್ರಯತ್ನಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು;
- ದೇಶದ ಶಿಕ್ಷಣದ ಪ್ರಗತಿಗೆ ನಿಧಿ ಒದಗಿಸುವುದು ಮತ್ತು ಅನುದಾನ ನೀಡುವುದು ಸರ್ಕಾರದ ಕರ್ತವ್ಯ;
- ಶಿಕ್ಷಣವನ್ನು ಭಾರತೀಕರಣಗೊಳಿಸಬೇಕು;
- ಧಾರ್ಮಿಕ ಶಿಕ್ಷಣವನ್ನು ಒದಗಿಸುವ ಸರ್ಕಾರಿ ಸಂಸ್ಥೆಗಳನ್ನು ನಿಷೇಧಿಸಲಾಯಿತು. ಖಾಸಗಿ ಸಂಸ್ಥೆಗಳು ತಮ್ಮದೇ ವಿಧಾನದಲ್ಲಿ ವ್ಯವಹರಿಸಬಹುದಾಗಿತ್ತು;
- ಮಹಿಳಾ ಶಿಕ್ಷಣಕ್ಕಾಗಿ ವಿಭಿನ್ನ ಪಠ್ಯಕ್ರಮ, ವಿದ್ಯಾರ್ಥಿನಿ ವೇತನ ಮತ್ತು ನೇಮಕಾತಿ ಸೌಲಭ್ಯಗಳಿಗೆ ಪ್ರಾಮುಖ್ಯತೆ ನೀಡಲಾಯಿತು;
- ಮುಸಲ್ಮಾನರ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯಿತು, ಅವರಿಗೆ ಸೂಕ್ತ ಸೌಲಭ್ಯಗಳನ್ನು ನೀಡಲು ಗಮನಹರಿಸಲಾಯಿತು; ಮತ್ತು
- ಹಿಂದುಳಿದ ವರ್ಗದವರ ಶಿಕ್ಷಣಕ್ಕೂ ಆಯೋಗವು ಸೂಕ್ತ ವ್ಯವಸ್ಥೆಯನ್ನು ಶಿಫಾರಸು ಮಾಡಿತು.

ಈ ಶಿಫಾರಸುಗಳ ಫಲವಾಗಿ ವೈಯಕ್ತಿಕ ಪ್ರಯತ್ನಗಳು ಮತ್ತು ಸ್ಥಳೀಯ ಸಹಕಾರಕ್ಕೆ ಹೆಚ್ಚಿನ ಪ್ರಚೋದನೆ ಮತ್ತು ಪ್ರೋತ್ಸಾಹ ದೊರೆಯಿತು. ಪರಿಣಾಮವಾಗಿ, ಶಾಲೆಗಳು ಮತ್ತು ಕಾಲೇಜುಗಳ ಸಂಖ್ಯೆಯಲ್ಲಿ ಹೆಚ್ಚಳವಾಯಿತು. ಅನುದಾನ ನೀಡುವಿಕೆಗೆ ಸರಕಾರದಿಂದ ಮನ್ನಣೆ ದೊರೆಯಿತು. ಉಪಯುಕ್ತ ಜ್ಞಾನ ನೀಡುವುದರ ಕಡೆಗೆ ಗಮನಹರಿಸಲಾಯಿತು.

## 1911ರ ಸರ್ ಗೋಪಾಲಕೃಷ್ಣಗೋಖಲೆ ಶಿಕ್ಷಣ ಮಸೂದೆ

ಮಾರ್ಚ್ 16 1911ರಲ್ಲಿ ಕಾಂಗ್ರೆಸ್ ನಾಯಕರು ಮತ್ತು ಸಾಮ್ರಾಜ್ಯಶಾಹಿ ಶಾಸನಸಭೆಯ ಸದಸ್ಯರಾದ ಜಿ.ಕೆ. ಗೋಖಲೆಯವರ ಪ್ರಯತ್ನ ಭಾರತದ ಶಿಕ್ಷಣದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅವರು ಮಸೂದೆಯನ್ನು ಮಂಡಿಸಿದ ಕಾರಣ 6ರಿಂದ 10ವರ್ಷದ ವಯಸ್ಸಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸಲಾಯಿತು.

## ಸಾಡ್ಲರ್ ಆಯೋಗ

1917ರಲ್ಲಿ ಭಾರತ ಸರ್ಕಾರವು ಸಾಡ್ಲರ್ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಿತು. ಇದು ಸೆಕೆಂಡರಿ ಶಿಕ್ಷಣದ ಕುರಿತು ಅವಲೋಕನ ಮಾಡಿ ವಿಶ್ವವಿದ್ಯಾನಿಲಯ ಶಿಕ್ಷಣವನ್ನು ಉತ್ತಮಪಡಿಸಲು

ಸೆಕೆಂಡರಿ ಶಿಕ್ಷಣದ ಉತ್ತಮಿಕೆ ಬಹಳ ಮುಖ್ಯ ಎಂಬ ಅಂಶವನ್ನು ಮುಂದಿಟ್ಟಿತು. ಈ ಸಮಿತಿಯು ಕೆಳಗಿನ ಶಿಪಾರಸುಗಳನ್ನು ಸೂಚಿಸಿತು:

- ಮೆಟ್ರಿಕ್ಯುಲೇಷನ್ ಪರೀಕ್ಷೆಯ ಬದಲಾಗಿ ಇಂಟರ್ ಮೀಡಿಯಟ್ ಪರೀಕ್ಷೆ ನಡೆಸುವುದರ ಮೂಲಕ ವಿಶ್ವವಿದ್ಯಾನಿಲಯ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣದ ಕೋರ್ಸುಗಳ ನಡುವಿನ ವ್ಯತ್ಯಾಸ ಸ್ಪಷ್ಟವಾಗಬೇಕು;
- ಸರ್ಕಾರವು ಇಂಟರ್ ಮೀಡಿಯಟ್ ಕಾಲೇಜುಗಳೆಂಬ ಹೊಸ ಮಾದರಿಯ ಸಂಸ್ಥೆಗಳನ್ನು ರೂಪಿಸಬೇಕು. ಇಲ್ಲಿ ಕಲೆ, ವಿಜ್ಞಾನ, ಔಷಧಿ, ಇಂಜಿನಿಯರಿಂಗ್ ಮತ್ತು ಬೋಧನೆ ಮುಂತಾದ ವಿಷಯಗಳನ್ನು ಬೋಧಿಸಬೇಕು. ಈ ಸಂಸ್ಥೆಗಳನ್ನು ಸ್ವತಂತ್ರ ಸಂಸ್ಥೆಗಳಾಗಿ ಅಥವಾ ಮಾಧ್ಯಮಿಕ ಶಾಲೆಗಳ ಸಂಯೋಜನೆಯೊಂದಿಗೆ ನಿರ್ವಹಿಸಬಹುದು;
- ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ವಿಶ್ವವಿದ್ಯಾನಿಲಯ ಕೋರ್ಸುಗಳ ದಾಖಲಾತಿಗೆ ಆಧಾರವಾಗಬೇಕು;
- ಸರಕಾರ, ವಿಶ್ವವಿದ್ಯಾಲಯ, ಇಂಟರ್ ಮೀಡಿಯಟ್ ಮತ್ತು ಮಧ್ಯಂತರ ಶಾಲೆಗಳ ಪ್ರತಿನಿಧಿಗಳನ್ನು ಒಳಗೊಂಡ ಮಾಧ್ಯಮಿಕ ಮತ್ತು ಇಂಟರ್ ಮೀಡಿಯಟ್ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಬೇಕು ಮತ್ತು ಮಾಧ್ಯಮಿಕ ಶಿಕ್ಷಣದ ಆಡಳಿತ ಮತ್ತು ನಿಯಂತ್ರಣಗಳನ್ನು ನಿರ್ವಹಿಸಬೇಕು.

## ಹಾರ್ಟೋಗ್ ಸಮಿತಿ 1929

1929ರಲ್ಲಿ ಬ್ರಿಟಿಷ್ ಆಳ್ವಿಕೆಯ ಭಾರತದ ಶೈಕ್ಷಣಿಕ ಚಟುವಟಿಕೆಗಳನ್ನು ಸಮೀಕ್ಷೆ ಮಾಡಲು ಸರ್ ಫಿಲಿಪ್ ಹಾರ್ಟೋಗ್ ಅವರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ಮಾಧ್ಯಮಿಕ ಮತ್ತು ವಿಶ್ವಿವಿದ್ಯಾನಿಲಯ ಶಿಕ್ಷಣಕ್ಕಿಂತ ಸಮೂಹ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿತು. ದೇಶದಲ್ಲಿ ಕಡಿಮೆಯಾಗುತ್ತಾ ಬರುತ್ತಿದ್ದ ಸಾಕ್ಷರತೆಯ ಸಮಸ್ಯೆಯನ್ನು ಮತ್ತು ಪ್ರಾಥಮಿಕ ಹಂತದ 'ಕೊಳೆ' ಮತ್ತು 'ಅಪವ್ಯಯ'ಗಳನ್ನು ಅತ್ಯಂತ ಗಂಭೀರವಾಗಿ ವಿಮರ್ಶಿಸಿ ಅವುಗಳಿಗೆ ಕಾರಣಗಳನ್ನೂ ಪರಿಹಾರಗಳನ್ನೂ ಮುಂದಿಟ್ಟಿತು.

## ಮೂಲಶಿಕ್ಷಣದ ವಾರ್ಧಾ ಯೋಜನೆ 1937

ಗಾಂಧೀಜಿಯವರ ಆಲೋಚನೆಯ ಪ್ರತಿಫಲವೇ ಶಿಕ್ಷಣದ ವಾರ್ಧಾ ಯೋಜನೆ.

ಭಾರತದ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಅರ್ಥಪೂರ್ಣವೂ ಪ್ರಗತಿಪರವೂ ಆಗುವಂತೆ ಮಾಡುವಲ್ಲಿ ಗಾಂಧೀಜಿಯವರು ಮಾಡಿದ ಪ್ರಯೋಗವಿದು. ಇದರ ಪ್ರಮುಖ ಲಕ್ಷಣಗಳು ಹೀಗಿವೆ:

ಏಳರಿಂದ ಹದಿನಾಲ್ಕನೇ ವಯಸ್ಸಿನ ಎಲ್ಲ ಮಕ್ಕಳಿಗೂ ಶಿಕ್ಷಣವು ಉಚಿತವಾಗಿ ಹಾಗೂ ಕಡ್ಡಾಯವಾಗಿ ಆಗಬೇಕು ಎಂಬುದು ಗಾಂಧೀಜಿಯವರ ಆಶಯವಾಗಿತ್ತು. ಈ ಶಿಕ್ಷಣವು ಆಯಾ ಸಮಾಜದ ಸಂಸ್ಕೃತಿ ಹಾಗೂ ನಾಗರೀಕತೆಗಳೊಂದಿಗೆ ಬೆಸೆದುಕೊಂಡಿರಬೇಕು ಎಂಬುದು ಅವರ ಕಾಳಜಿಯಾಗಿತ್ತು. ಹಾಗಾಗಿ ಈ ಅಂಶವನ್ನು ಅವರು ಅವರ ಮೂಲಶಿಕ್ಷಣದ ಪರಿಕಲ್ಪನೆಯಲ್ಲಿ ಬೆಸೆದುಕೊಂಡರು. ಕಸುಬು ಅಥವಾ ಕೈಕೆಲಸದ ಮೂಲಕ ಶಿಕ್ಷಣ ಎಂಬುದ ಅವರ ಮತ್ತೊಂದು ಪರಿಕಲ್ಪನೆ. ಇದು ಈ ಯೋಜನೆಯ ಹೂರಣಭಾಗ. ಕೈಕೆಲಸವು ಮಕ್ಕಳಿಗೆ ಇಂದ್ರಿಯಾತ್ಮಕವಾದ ಮತ್ತು ಚಲನಾತ್ಮಕವಾದ ಕೌಶಲಗಳನ್ನು ಮೂಡಿಸುವುದಲ್ಲದೆ ಕೆಲಸವನ್ನು ಕುರಿತಂತೆ ಗೌರವವನ್ನು ಉಂಟುಮಾಡುತ್ತದೆ ಎಂಬುದು ಇದರ ಆಶಯವಾಗಿತ್ತು. ಸ್ವಬೆಂಬಲಯುಕ್ತ ಶಿಕ್ಷಣ ಅವರ ಮೂಲಶಿಕ್ಷಣದ ಮತ್ತೊಂದು ಲಕ್ಷಣ. ಇಂತಹ ಶಿಕ್ಷಣವು ಭವಿಷ್ಯದಲ್ಲಿ ವ್ಯಕ್ತಿಯನ್ನು ಸ್ವಾವಲಂಬಿಯಾಗಿ ಮಾಡುತ್ತದೆ ಎಂಬುದು ಒಂದು ಅಂಶವಾದರೆ, ಶಾಲೆಯನ್ನು ಇದರಿಂದ ಸ್ವಾವಲಂಬಿಯಾಗಿ ನಿರ್ವಹಿಸಬಹುದು ಎಂಬುದು ಮತ್ತೊಂದು ಅಂಶ. ಮಾತೃ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂಬ ಅಂಶವನ್ನು ಗಾಂಧೀಜಿಯವರು ಅಂದಿನ ಕಾಲದಿಂದಲೇ ಹೇಳಿಕೊಂಡು ಬಂದವರು. ಮಾತೃಭಾಷೆಯೇ ಎಲ್ಲ ಶಿಕ್ಷಣದ ಅಡಿಪಾಯ ಎಂಬುದು ಅವರ

ನಂಬಿಕೆಯಾಗಿತ್ತು. ಅದನ್ನೇ ಅವರು ಈ ವಿಧಾನದಲ್ಲಿಯೂ ಅಳವಡಿಸಿಕೊಂಡರು. ಈ ಯೋಜನೆಯ ಮತ್ತೊಂದು ಲಕ್ಷಣವೆಂದರೆ ಆದರ್ಶಪೌರತ್ವ. ಇದು ಬೋಧನೆ ಕಲಿಕೆಯ ಪ್ರಕ್ರಿಯೆಯ ಅಂತರ್ಗತ ಭಾಗವಾಗಬೇಕು. ಬೋಧನೆ ಮತ್ತು ಕಲಿಕೆ ವ್ಯಕ್ತಿಗತ ಬೆಳವಣಿಗೆ, ವ್ಯಕ್ತಿ ಗೌರವ, ಉತ್ಕೃಷ್ಟತೆ ಮತ್ತು ಸಹಕಾರಿ ಸಮುದಾಯದಲ್ಲಿ ಅಗತ್ಯವಾದ ಸಮಾಜ ಸೇವೆ ಇವುಗಳನ್ನು ಕಲಿಸಬೇಕು. ಇದರೊಂದಿಗೆ ಬೋಧನೆ ಮತ್ತು ಕಲಿಕೆ ಎರಡೂ ಸ್ವತಂತ್ರವಾದ ವಾತಾವರಣದಲ್ಲಿ ಸಾಗಬೇಕು. ಅಧ್ಯಾಪಕ ಮಗುವಿಗೆ ಅಗತ್ಯವಾದ ಕಲಿಕಾ ವಾತಾವರಣವನ್ನು ಸೃಷ್ಟಿಸಬೇಕು, ಮಗುವು ಅದಕ್ಕೆ ಆಸಕ್ತಿ ಇರುವುದನ್ನು ತನಗೆ ಬೇಕಾದ ರೀತಿಯಲ್ಲಿ, ತನಗೆ ಅಗತ್ಯವಾದಷ್ಟು ಕಾಲದಲ್ಲಿ ಕಲಿಯಬೇಕು.

## ಸಾರ್ಜೆಂಟ್ ಯೋಜನೆ

ಎರಡನೇ ಮಹಾಯುದ್ಧದ ಕೊನೆಯಲ್ಲಿ ಶಿಕ್ಷಣದ ಕೇಂದ್ರೀಯ ಸಲಹಾ ಮಂಡಳಿಯು (Central Advisory Board of Education) ಯುದ್ಧದ ನಂತರ ಭಾರತದಲ್ಲಿ ಶೈಕ್ಷಣಿಕ ಅಭಿವೃದ್ಧಿಯ ಕುರಿತಾದ ಸಮಗ್ರ ವರದಿಯನ್ನು ಪ್ರಕಟಿಸಿತು. ಶಿಕ್ಷಣದ ಸಮಸ್ಯೆಗಳನ್ನು ಸಮಗ್ರವಾಗಿ ವಿಮರ್ಶೆಮಾಡಲು ರಾಷ್ಟ್ರಮಟ್ಟದಲ್ಲಿನ ಮೊದಲ ವ್ಯವಸ್ಥಿತ ಪ್ರಯತ್ನ ಇದಾಗಿತ್ತು. ಭಾರತ ಸರ್ಕಾರದ ಆಗಿನ ಶೈಕ್ಷಣಿಕ ಸಲಹೆಗಾರನಾಗಿದ್ದ ಜಾನ್ ಸಾರ್ಜೆಂಟರ ಹೆಸರಿನಲ್ಲಿ ಇದನ್ನು ಕರೆಯಲಾಯಿತು. 40 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಇಂಗ್ಲೆಂಡ್ ಒಪ್ಪಿಕೊಂಡಂತೆ ಗುಣಮಟ್ಟದ ಶಿಕ್ಷಣದ ಸಾಧನೆಯನ್ನು ಮಾಡಲು ಭಾರತದಲ್ಲಿ ಯೋಜನೆ ತಯಾರಿಸುವ ಉದ್ದೇಶ ಇದರದ್ದಾಗಿತ್ತು. ರಾಷ್ಟ್ರೀಯ ಮಾದರಿಯ ಶೈಕ್ಷಣಿಕ ಪದ್ಧತಿಯನ್ನು ಅನ್ವಯಿಸಿಕೊಳ್ಳಲು ಸ್ವಾತಂತ್ರ್ಯ ಹೋರಾಟಗಾರರು ನಡೆಸಿದ ಪ್ರಯತ್ನಗಳಿಗೆ ವಿರುದ್ಧವಾಗಿ ಈ ಯೋಜನೆಯನ್ನು ಬ್ರಿಟಿಷ್ ಸರಕಾರ ಮುಂದಿಟ್ಟಿತು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

### ಶಿಫಾರಸುಗಳನ್ನು ಆಯೋಗಗಳೊಂದಿಗೆ ಹೊಂದಿಸಿರಿ

| | ಆಯೋಗಗಳು | ಶಿಫಾರಸುಗಳು | |
|---|---|---|---|
| ಎ | ಹಕ್ಕುಪತ್ರ ಕಾಯಿದೆ | ಶಿಕ್ಷಣ ನಿಯಂತ್ರಣ ಮಂಡಳಿಯನ್ನು ತೊಡೆದು ಹಾಕಿ ನಿರ್ದೇಶಕರ ಕಛೇರಿಗಳನ್ನು ರಾಜ್ಯಗಳಲ್ಲಿ ಸ್ಥಾಪಿಸಬೇಕು | 1 |
| ಬಿ | ಮೆಕಾಲೆಯ ಟಿಪ್ಪಣಿ | ಮೆಟ್ರಿಕ್ಯುಲೇಷನ್ ಪರೀಕ್ಷೆಯ ಬದಲಾಗಿ ಇಂಟರ್ ಮೀಡಿಯಟ್ ಪರೀಕ್ಷೆ ನಡೆಸಬೇಕು | 2 |
| ಸಿ | ವುಡ್ಸನ ವರದಿ | ಕಂಪೆನಿಯೇ ಶಿಕ್ಷಣದ ಜವಾಬ್ದಾರಿ ತೆಗೆದುಕೊಳ್ಳಬೇಕು | 3 |
| ಡಿ | ಹಂಟರ್ ಆಯೋಗ | ಯೂರೋಪಿನ ಸಾಹಿತ್ಯ ಮತ್ತು ವಿಜ್ಞಾನವನ್ನು ಸ್ಥಳೀಯ ಭಾರತೀಯರಲ್ಲಿ ಪ್ರಚುರಗೊಳಿಸಬೇಕು | 4 |
| ಇ | ಸಾಡ್ಲರ್ ಆಯೋಗ | 6ರಿಂದ 10ವರ್ಷದ ವಯಸ್ಸಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯ | 5 |
| ಎಫ್ | ಸರ್ ಗೋಪಾಲಕೃಷ್ಣಗೋಖಲೆ ಶಿಕ್ಷಣ ಮಸೂದೆ | ಹಿಂದುಳಿದ ವರ್ಗದವರ ಶಿಕ್ಷಣಕ್ಕೂ ಆಯೋಗವು ಸೂಕ್ತ ವ್ಯವಸ್ಥೆ ಮಾಡಬೇಕು | 6 |

## 3.1.3.2. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಶೈಕ್ಷಣಿಕ ಸುಧಾರಣೆಗಳು

ಸ್ವಾತಂತ್ರ್ಯಪೂರ್ವದ ಅವಧಿಯಲ್ಲಿ ಗಳಿಸಿದ ಅನುಭವಗಳ ಆಧಾರದ ಮೇಲೆ ಭಾರತವು ಸಮೂಹ ಶಿಕ್ಷಣಕ್ಕೆ ಹೆಚ್ಚಿನ ಮಟ್ಟದಲ್ಲಿ ಪ್ರಯತ್ನಗಳನ್ನು ಮಾಡಿತು. ಹಲವಾರು ಯೋಜನೆಗಳ ಮೂಲಕ ಹಂತಹಂತವಾಗಿ ಶಿಕ್ಷಣವು ಪ್ರಗತಿಹೊಂದಲು ಸರ್ಕಾರವು ಅನುವು ಮಾಡಿಕೊಟ್ಟಿತು. ಇದರಿಂದಾಗಿ ದೇಶದಲ್ಲಿ ಉಳಿದ ಕ್ಷೇತ್ರಗಳಲ್ಲಿಯೂ ಪ್ರಗತಿಯನ್ನು ಸಾಧಿಸಲು ಸಾಧ್ಯವಾಯಿತು. ಈ ಎಲ್ಲ ಸುಧಾರಣೆಗಳನ್ನೂ ಅದರ ಪರಿಣಾಮವಾಗಿ ಆದ ಬದಲಾವಣೆಗಳನ್ನೂ ನೀವು ಪ್ರತ್ಯೇಕ ಘಟಕಗಳಲ್ಲಿ ಮುಂದೆ ಕಲಿಯಲಿದ್ದೀರಿ.

## 3.1.4. ಸಾರಾಂಶಿಸೋಣ

- ಶಿಕ್ಷಣದ ಪ್ರಗತಿಯ ಹಾದಿಯಲ್ಲಿ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಅನೇಕ ಆಯೋಗಗಳು, ಯೋಜನೆಗಳು ರೂಪುಗೊಂಡು ಶಿಕ್ಷಣವನ್ನು ಮುನ್ನಡೆಸುವ ಅನೇಕ ಸುಧಾರಣೆಗಳನ್ನು ತಂದವು.
- ಅವುಗಳಲ್ಲಿ ಮೆಕಾಲೆಯ ಟಿಪ್ಪಣಿಗಳು, ಹಕ್ಕುಪತ್ರ ಕಾಯಿದೆ 1813, ಮೆಕಾಲೆಯ ಟಿಪ್ಪಣಿಗಳು, ವುಡ್ಸನ ವರದಿ 1854, ಹಂಟರ್ ಆಯೋಗ, 1911ರ ಸರ್ ಗೋಪಾಲಕೃಷ್ಣಗೋಖಲೆ ಶಿಕ್ಷಣ ಮಸೂದೆ, ಸಾಡ್ಲರ್ ಆಯೋಗ, ಹಾರ್ಟೋಗ್ ಸಮಿತಿ 1929, ಮೂಲಶಿಕ್ಷಣದ ವಾರ್ಧಾ ಯೋಜನೆ 1937 ಮತ್ತು ಸಾರ್ಜೆಂಟ್ ಯೋಜನೆ ಇವು ಪ್ರಮುಖವಾದವು.
- ಇವುಗಳಲ್ಲಿ ಪ್ರತಿಯೊಂದೂ ಶಿಕ್ಷಣದ ಪ್ರಗತಿಗೆ ವಿಶೇಷ ಶಿಫಾರಸುಗಳ ಮೂಲಕ ಕಾರಣವಾಗಿವೆ.

## 3.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಎ–3, ಬಿ–4, ಸಿ–1, ಡಿ–6, ಇ–2, ಎಫ್–5

## 3.1.6. ಘಟಕಾಂತ್ಯ ಅಭ್ಯಾಸಗಳು

1. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ನಡೆದ ಶಿಕ್ಷಣದ ಸುಧಾರಣೆಗಳನ್ನು ವಿವರಿಸಿ.

## 3.1.7. ಪರಾಮರ್ಶನ ಸೂಚಿ


1. https://nationalinterest.in/education-reforms-in-india-what-makes-it-difficult-to-implement-4c891965ab16
2. http://www.geopolitika.hu/en/2017/05/09/education-reform-in-india-the-power-of-knowledge-and-information/
3. http://www.raiuniversity.edu/blogs/reforms-required-within-indian-education-sector/
4. https://en.wikipedia.org/wiki/Education_in_India
5. https://www.jagranjosh.com/general-knowledge/development-of-education-during-british-period-in-india-1445314601-1
6. https://medium.com/three-much/education-in-india-during-the-british-rule-3702e081e8bd
7. http://shodhganga.inflibnet.ac.in/bitstream/10603/102629/11/11_chapter%203.pdf

8. https://www.scribd.com/presentation/291802527/Education-Reforms-by-British-Government

9. https://www.importantindia.com/11643/development-of-education-system-in-india-during-british-period/

10. http://www.historydiscussion.net/british-india/spread-of-modern-education-during-british-rule-indian-history/6325

11. Educational reforms in India for the 21st century by J C Aggarwal. Shipra, 2000

12. Education in the Emerging India **by Vijaya Deshmukh, Atlantic, 2011**

*******************

# ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು

## ಘಟಕ–2 : ಸರ್ವ ಶಿಕ್ಷಾ ಅಭಿಯಾನ

**ಘಟಕದ ರಚನೆ :**


3.2.1. ಕಲಿಕೆಯ ಉದ್ದೇಶಗಳು

3.2.2. ಪೀಠಿಕೆ

3.2.3. ಕಲಿಕೆಯ ಅಂಶಗಳು ಹಾಗೂ ಕಲಿಕೆಯ ಚಟುವಟಿಕೆಗಳು

3.2.3.1 ಸರ್ವ ಶಿಕ್ಷಾ ಅಭಿಯಾನದ ಪರಿಕಲ್ಪನೆ, ಗುರಿ, ಕಾರ್ಯಾಚರಣೆ ಮತ್ತು ಸಂಬಂಧಿತ ಅಂಶಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–1

3.2.3.2 ಸರ್ವ ಶಿಕ್ಷಾ ಅಭಿಯಾನದ ಗುರಿಸಾಧನೆಗೆ ತಂತ್ರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

3.2.3.2 ಸರ್ವ ಶಿಕ್ಷಾ ಅಭಿಯಾನದಲ್ಲಿ ಕೇಂದ್ರದ ಮಧ್ಯವರ್ತಿ ಕಾರ್ಯಕ್ರಮಗಳು, ಅವುಗಳ ಅನುಷ್ಠಾನ ಮತ್ತು ಪ್ರಮುಖ ಸಾಧನೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 3

3.2.4 ಸಾರಾಂಶಿಸೋಣ

3.2.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

3.2.6 ಘಟಕಾಂತ್ಯ ಅಭ್ಯಾಸಗಳು

3.2.7 ಪರಾಮರ್ಶನ ಸೂಚಿ


## 3.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಸರ್ವ ಶಿಕ್ಷಾ ಅಭಿಯಾನದ ಪರಿಕಲ್ಪನೆಯನ್ನು ವಿವರಿಸುವರು;
- ಸರ್ವ ಶಿಕ್ಷಾ ಅಭಿಯಾನದ ಗುರಿ ಮತ್ತು ಉದ್ದೇಶಗಳನ್ನು ವಿಶ್ಲೇಷಿಸುವರು;
- ಸರ್ವ ಶಿಕ್ಷಾ ಅಭಿಯಾನದ ಗುರಿಸಾಧನೆಗೆ ಅನುಸರಿಸಿದ ತಂತ್ರಗಳನ್ನು ಗುರುತಿಸುವರು; ಮತ್ತು
- ಸರ್ವ ಶಿಕ್ಷಾ ಅಭಿಯಾನದ ಕಾರ್ಯಕ್ರಮಗಳ ಮುಂದುವರಿಕೆಗೆ ತಮ್ಮದೇ ಆದ ರೀತಿಯಲ್ಲಿ ಸಹಕರಿಸುವರು.

## 3.2.2 ಪೀಠಿಕೆ

ನಾವು ಈ ಹಿಂದೆ ಗಮನಿಸಿರುವಂತೆ ಸಂವಿಧಾನದ ಪ್ರಕಾರ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ 1960ರ ವೇಳೆಗೆ ಸಾಧ್ಯವಾಗಬೇಕಾಗಿತ್ತು. ದೇಶದ ವಿಭಜನೆಯಿಂದಾಗಿ ನಿರ್ಗತಿಕರಿಗೆ ವಸತಿ ಪುನರ್ವಸತಿ ಒದಗಿಸುವುದು, ಸಂಪನ್ಮೂಲಗಳ ಕೊರತೆ ಇತ್ಯಾದಿ ಕಾರಣಗಳಿಂದಾಗಿ ಅದು ಸಾಧ್ಯವಾಗಲಿಲ್ಲ ಎಂಬುದು ನಮಗೆ ತಿಳಿದಿದೆ. ಈ

ಹಿನ್ನೆಲೆಯಲ್ಲಿ ಇದೇ ಉದ್ದೇಶದ ಸಾಧನೆಗೆ ಕೆಲವು ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಯಿತು. ಅಕ್ಟೋಬರ್ 23, 1998ರಂದು ರಾಜ್ಯಗಳ ಶಿಕ್ಷಣ ಮಂತ್ರಿಗಳು ನಡೆಸಿದ ಸಭೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಹಯೋಗದೊಂದಿಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಒಂದು ಕಾರ್ಯಯೋಜನೆಯನ್ನು ಅಭಿಯಾನದ ರೂಪದಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಯಿತು. ಇದರ ಬೆನ್ನಲ್ಲೇ 1999ರಲ್ಲಿ ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮಂತ್ರಿಗಳಾಗಿದ್ದ ಡಾ ಮುರಳಿ ಮನೋಹರ ಜೋಷಿ ಅವರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯ ಶಿಕ್ಷಣ ಮಂತ್ರಿಗಳ ಸದಸ್ಯತ್ವದಲ್ಲಿ ಒಂದು ರಾಷ್ಟ್ರೀಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಹಿಂದೆ ಚರ್ಚಿಸಿದಂತೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಅಭಿಯಾನದ ರೂಪದಲ್ಲಿ ಕಾರ್ಯ ನಡೆಯಬೇಕೆಂದು ತೀರ್ಮಾನಿಸಿತು. ಕ್ರಿ. ಶ. 2000ದಲ್ಲಿ ಅಂತರರಾಷ್ಟ್ರೀಯ ಮಟ್ಟದ 'ಸರ್ವರಿಗೂ ಶಿಕ್ಷಣ' ಎಂಬ ಕೂಗು ಮತ್ತಷ್ಟು ವಿಶಾಲ ದೃಷ್ಟಿಕೋನದೊಂದಿಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಕಾರ್ಯಯೋಜನೆಯೊಂದಿಗೆ ಬೆರೆತು 'ಸರ್ವ ಶಿಕ್ಷಾ ಅಭಿಯಾನ' ಎಂಬ ನೂತನ ಕಾರ್ಯಕ್ರಮವು ಪ್ರಾರಂಭವಾಯಿತು. ಈ ಕಾರ್ಯಕ್ರಮವನ್ನು ಕುರಿತಂತೆ ಈ ಘಟಕದಲ್ಲಿ ತಿಳಿಯೋಣ.

## 3.2.3. ಕಲಿಕೆಯ ಅಂಶಗಳು ಹಾಗೂ ಕಲಿಕೆಯ ಚಟುವಟಿಕೆಗಳು

### 3.2.3.1ಸರ್ವ ಶಿಕ್ಷಾ ಅಭಿಯಾನದ ಪರಿಕಲ್ಪನೆ, ಗುರಿ, ಕಾರ್ಯಾಚರಣೆ ಮತ್ತು ಸಂಬಂಧಿತ ಅಂಶಗಳು

### ಸರ್ವ ಶಿಕ್ಷಾ ಅಭಿಯಾನ ಎಂದರೇನು?

ಸರ್ವರಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಸಾಧಿಸಲು, ನಿರ್ದಿಷ್ಟ ಕಾಲಮಿತಿಯ ನಡವಳಿ ಹೊಂದಿ ರೂಪಿತವಾದ ಭಾರತ ಸರ್ಕಾರದ ಕಾರ್ಯಕ್ರಮ. ಸಂವಿಧಾನದ 86ನೇ ತಿದ್ದುಪಡಿಯಂತೆ 6–14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡಬೇಕೆಂಬ ಮೂಲಭೂತ ಹಕ್ಕು ನಿರ್ದೇಶಕದ ಹಿನ್ನೆಲೆಯಲ್ಲಿ ರೂಪಿತವಾದ ಕಾರ್ಯಕ್ರಮವಿದು.

ಈ ಕಾರ್ಯಕ್ರಮಕ್ಕೆ 2000ದಲ್ಲಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಂದ ಚಾಲನೆ ನೀಡಲಾಯಿತು. ಭಾರತ ಸರ್ಕಾರ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯಗಳು ಈ ಕಾರ್ಯಕ್ರಮದ ಹೊಣೆ ಹೊತ್ತವು. 2009ರಲ್ಲಿ 'ಶಿಕ್ಷಣ ಹಕ್ಕು' ಕಾಯಿದೆ ಅಂಗೀಕೃತವಾದ ನಂತರದ ಕಾಲದಲ್ಲಿ ಸರ್ವ ಶಿಕ್ಷಾ ಅಭಿಯಾನದ ಮಾರ್ಗ, ತಂತ್ರ ಹಾಗೂ ನಿಯಮಾವಳಿಗಳು ಬದಲಾವಣೆಯಾಗಿ ಎರಡೂ ಕಾರ್ಯಕ್ರಮಗಳು ಸಂಯೋಜಿತಗೊಂಡು ಮುಂದುವರೆದಿವೆ.

ಈ ಕಾರ್ಯಕ್ರಮವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಧನ ಸಹಾಯದಿಂದ ರಾಷ್ಟ್ರದಾದ್ಯಂತ ಜಾರಿಗೆ ಬಂದಿರುವ ಕಾರ್ಯಕ್ರಮ. ಈ ಕಾರ್ಯಕ್ರಮವು ಸುಮಾರು 1.1 ಮಿಲಿಯನ್ ವಸತಿಗಳಲ್ಲಿರುವ 192 ಮಿಲಿಯನ್ ಮಕ್ಕಳನ್ನು ತಲುಪುವ ಉದ್ದೇಶವನ್ನು ಹೊಂದಿತ್ತು. ಜನರ ಪಾಲುದಾರಿಕೆಯೇ ಸರ್ವ ಶಿಕ್ಷಣ ಅಭಿಯಾನದ ಅಡಿಪಾಯ. ಸಮುದಾಯದ ಪಾಲುದಾರಿಕೆ ಹಾಗೂ ನಿರ್ದೇಶನಗಳು ಈ ಕಾರ್ಯಕ್ರಮದ ಅನುಷ್ಠಾನದ ಪ್ರತಿಯೊಂದು ಹಂತದಲ್ಲಿ ಜೊತೆಯಾಗಿದೆ.

### ಸರ್ವಶಿಕ್ಷಾ ಅಭಿಯಾನದ ಪ್ರಮುಖ ಲಕ್ಷಣಗಳು

- ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಸ್ಪಷ್ಟ ಚೌಕಟ್ಟನ್ನು ಹೊಂದಿರುವ ಕಾರ್ಯಕ್ರಮವಿದು;
- ಇದು ರಾಷ್ಟ್ರದಾದ್ಯಂತ ಗುಣಾತ್ಮಕ ಪ್ರಾಥಮಿಕ ಶಿಕ್ಷಣದ ಬೇಡಿಕೆಗೆ ತೋರಿದ ಪ್ರತಿಕ್ರಿಯೆ;
- ಪ್ರಾಥಮಿಕ ಶಿಕ್ಷಣದ ಮೂಲಕ ಸಾಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸಲು ಒದಗಿಸಿಕೊಟ್ಟ ಅವಕಾಶವಿದು;
- ದೇಶದಾದ್ಯಂತ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ರಾಜಕೀಯ ಇಚ್ಛಾಶಕ್ತಿ ಇದೆ ಎಂಬುದರ ಅಭಿವ್ಯಕ್ತಿ ಇದು;

- ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳ ಭಾಗೀದಾರಿಕೆಯಿಂದ ಮೂಡಿಬಂದ ಕಾರ್ಯಕ್ರಮ;
- ರಾಜ್ಯಗಳ ಪ್ರಾಥಮಿಕ ಶಿಕ್ಷಣದ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲು ಬಂದೊದಗಿದ ಅವಕಾಶ;
- ಪ್ರಾಥಮಿಕ ಶಾಲಾ ನಿರ್ವಹಣೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, ಶಾಲಾ ನಿರ್ವಹಣಾ ಸಮಿತಿಗಳು, ಗ್ರಾಮ ಮತ್ತು ನಗರ ಕೊಳಚೆ ಪ್ರದೇಶದ ಸಂಘಗಳು, ಗುಡ್ಡಗಾಡು ಸ್ವಾಯತ್ತ ಸಮಿತಿಗಳು, ಶಿಕ್ಷಕ–ಪೋಷಕ ಸಂಘಗಳು ಮತ್ತಿತರ ಮೂಲಭೂತ ಸಂರಚನೆಗಳನ್ನು ಪರಿಣಾಮಕಾರಿಯಾಗಿ ತೊಡಗಿಸಿಕೊಂಡ ಪ್ರಯತ್ನ;
- ಇದು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂಪಿಸಿಕೊಂಡ ಕಾರ್ಯಚೌಕಟ್ಟು; ಮಾರ್ಗಸೂಚಿಯಲ್ಲ.

## ಸರ್ವಶಿಕ್ಷಾ ಅಭಿಯಾನದ ಗುರಿಗಳು

- 2005ರ ಒಳಗೆ ಎಲ್ಲ ಮಕ್ಕಳನ್ನೂ ಶಾಲೆ, ಶಿಕ್ಷಣ ಖಾತ್ರಿ ಕೇಂದ್ರಗಳು, ಪರ್ಯಾಯ ಶಾಲೆಗಳು, ಮರಳಿ ಬಾ ಶಾಲೆಗೆ ಶಿಬಿರಗಳಲ್ಲಿ ದಾಖಲು ಮಾಡಿಕೊಳ್ಳುವುದು;
- 2010ರವೇಳೆಗೆ ಎಲ್ಲ ಮಕ್ಕಳೂ ಉನ್ನತ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಮುಗಿಸಿರುವಂತೆ ನೋಡಿಕೊಳ್ಳುವುದು;
- ದಾಖಲಾತಿ, ಉಳಿಕೆ ಹಾಗೂ ಕಲಿಕೆಗಳಲ್ಲಿ, ಅಸಮಾನತೆಯುಳ್ಳ ಲಿಂಗ, ಸಾಮಾಜಿಕ ಗುಂಪುಗಳಲ್ಲಿ ಸಮಾನತೆ ಉಂಟಾಗುವಂತೆ ಮಾಡುವುದು;
- ಪ್ರಾಥಮಿಕ ಹಾಗೂ ಉನ್ನತ ಪ್ರಾಥಮಿಕ ಹಂತದ ಮಕ್ಕಳ ಕಲಿಕಾ ಸಾಧನೆಯಲ್ಲಿ ಉತ್ತಮಿಕೆಯನ್ನು ಖಚಿತಪಡಿಸಿಕೊಳ್ಳುವುದು;
- ಪ್ರತಿಯೊಂದು ರಾಜ್ಯ ಮತ್ತು ಜಿಲ್ಲೆಗಳು 2010ರ ಒಳಗೆ ಸರ್ವ ಶಿಕ್ಷಾ ಅಭಿಯಾನದ ಗುರಿಸಾಧನೆಗೆ ನಿರ್ದಿಷ್ಟ ಸನ್ನಿವೇಶಗಳನ್ನೂ ಗುರಿಸಾಧನೆಯ ದಿನಾಂಕವನ್ನೂ ನಿಗದಿಪಡಿಸಿಕೊಳ್ಳುವುದು;
- ಮೂಲಭೂತ ಕಲಿಕಾ ಕೌಶಲಗಳಲ್ಲಿ ನಿರೀಕ್ಷಿತ ಕಲಿಕಾ ಫಲಗಳ ಸಾಧನೆಗಾಗಿ ರಾಷ್ಟ್ರೀಯ ನಿಯಮಾವಳಿಗಳನ್ನು ರೂಪಿಸುವುದು;
- ರಾಷ್ಟ್ರಮಟ್ಟದಲ್ಲಿ ನಿಯಮಾವಳಿಗನುಸಾರವಾಗಿ ಮಕ್ಕಳ ಶೈಕ್ಷಣಿಕ ಸಾಧನೆಯಲ್ಲಿ ಹೆಚ್ಚಳದ ಸಾಧನೆ ಹಾಗೂ ನಮೂನೆಗಳನ್ನು ಗುರುತಿಸಿಕೊಂಡು ನಿಯಮಿತವಾಗಿ ಮೌಲ್ಯಮಾಪನ ಮಾಡುವುದು.

## ಸರ್ವಶಿಕ್ಷಾ ಅಭಿಯಾನದ ಕಾರ್ಯಾಚರಣೆ

ಪ್ರಸ್ತುತ ಅಭಿಯಾನವು ಕೆಳಕಂಡ ವಿಷಯಗಳನ್ನು ಗಮನಿಸಿಕೊಂಡು ಕಾರ್ಯಾಚರಣೆಯನ್ನು ರೂಪಿಸಿಕೊಂಡಿದೆ.

- ಜ್ಞಾನ ಸಮಾಜದಲ್ಲಿ ಮಕ್ಕಳು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಮಾಡುವುದು;
- ಎಲ್ಲ ಹಂತಗಳಲ್ಲೂ ಬದ್ಧತೆ ಮತ್ತು ಸಾಧನೆಯ ಗಮನವುಳ್ಳ ಫಲನಿರ್ದೇಶಿತ ಉಪಕ್ರಮ;
- ಶಿಕ್ಷಕರು, ಪೋಷಕರು, ಸಮುದಾಯ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಘಟನೆಗಳ ಪಾಲುದಾರಿಕೆಯಲ್ಲಿ ಪ್ರಜಾಕೇಂದ್ರಿತ ರೀತಿಯಲ್ಲಿ ಶೈಕ್ಷಣಿಕ ಮಧ್ಯವರ್ತನಗಳ ಅನುಷ್ಠಾನ;
- ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನೂ ಒಳಗೊಂಡಂತೆ, ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳು ಮತ್ತು ಅನುಕೂಲವಂಚಿತ ಸಾಮಾಜಿಕ ಗುಂಪುಗಳ ಮೇಲೆ ನೀತಿಯನ್ನಾಧರಿಸಿದ ಗಮನ ಕೇಂದ್ರೀಕರಣ;
- ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಸದೃಢತೆಯ ಸುಧಾರಣೆಗಾಗಿ ಬಂಡವಾಳ ಹೂಡಿಕೆ ಮತ್ತು ನೇತೃತ್ವ

ವಹಿಸಿಕೊಳ್ಳುವಿಕೆ, ಸದೃಢತೆಯ ಕುರಿತ ಗಮನಕ್ಕೆ ಸಮಗ್ರ ಪ್ರಯತ್ನ;

- ಸರ್ವರಿಗೂ ಪ್ರಾಥಮಿಕ ಶಿಕ್ಷಣಕ್ಕಾಗಿ ಸಾಂಸ್ಥಿಕ ಸುಧಾರಣೆ ಮತ್ತು ಸಾಮರ್ಥ್ಯವೃದ್ಧಿಗೆ ನಿರಂತರ ಪರಿಶ್ರಮ.

## ಸರ್ವ ಶಿಕ್ಷಾ ಅಭಿಯಾನದ ಉದ್ದೇಶಗಳು

- ಮಕ್ಕಳು ತಮ್ಮ ಸ್ವಾಭಾವಿಕ ಪರಿಸರದಲ್ಲಿ ಸ್ವಾಭಾವಿಕವಾಗಿಯೇ ಉನ್ನತ ಮಟ್ಟದಲ್ಲಿ ಕಲಿಯಬೇಕು, ಅವರಲ್ಲಿರುವ ಆಧ್ಯಾತ್ಮಿಕ ಮತ್ತು ಸಹಜ ಶಕ್ತಿಯನ್ನು ಬೆಳೆಸಿಕೊಂಡು ಮಾನವ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಮಾಡಬೇಕು ಎಂಬುದೇ ಸರ್ವ ಶಿಕ್ಷಾ ಅಭಿಯಾನದ ಗುರಿ. ಮಕ್ಕಳು ಕೇವಲ ಸ್ವಾರ್ಥಕ್ಕಾಗಿ ಬದುಕದೆ, ಮೌಲಿಕವಾದ ಕಲಿಕಾ ಪದ್ಧತಿಯ ಮೂಲಕ ಇತರರ ಒಳಿತಿಗಾಗಿ ಕೆಲಸಮಾಡುವಂತೆ ಅವಕಾಶ ಕಲ್ಪಿಸಿಕೊಡುವುದು ಇದರ ನಿಜವಾದ ಗುರಿ.
- ಸರ್ವಶಿಕ್ಷಾ ಅಭಿಯಾನದ ಗುರಿಗಳು ಮೂರು ಅಂಶಗಳನ್ನೊಳಗೊಂಡಿದೆ. ಅವೆಂದರೆ, ಭೌತಿಕ ಸಾಮಗ್ರಿಗಳಿಗೆ ಸಂಬಂಧಿಸಿದ ಗುರಿಗಳು, ಮಾನವ ಸಂಪನ್ಮೂಲಗಳಿಗೆ ಸಂಬಂಧಿಸಿದ ಗುರಿಗಳು ಮತ್ತು ಗುಣಾತ್ಮಕ ಸುಧಾರಣೆಗೆ ಸಂಬಂಧಿಸಿದ ಗುರಿಗಳು.
- ರಾಷ್ಟ್ರದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆಯೇ ಇದರ ಉದ್ದೇಶ. ಇದು ಸಾರ್ವತ್ರಿಕ ಅವಕಾಶ, ಉಳಿಕೆ ಮತ್ತು ಶಿಕ್ಷಣದಲ್ಲಿ ಲಿಂಗ ಮತ್ತು ಸಾಮಾಜಿಕ ಅಂತರಗಳನ್ನು ಕಡಿಮೆ ಮಾಡುವುದು, ಮಕ್ಕಳ ಕಲಿಕಾ ಸಾಧನೆಯ ಮಟ್ಟದಲ್ಲಿ ಹೆಚ್ಚಳ ಇವೆಲ್ಲವನ್ನೂ ಒಳಗೊಂಡಿದೆ.

## ಸರ್ವ ಶಿಕ್ಷಾ ಅಭಿಯಾನವು ಪ್ರಮುಖವಾಗಿ ಎರಡು ಅಂಶಗಳನ್ನು ಒಳಗೊಂಡಿದೆ:

- ಇದು ಪ್ರಾಥಮಿಕ ಶಿಕ್ಷಣ ಯೋಜನೆಗೆ ಬಹು ವ್ಯಾಪಕವಾದ ಒಂದು ಚೌಕಟ್ಟನ್ನು ರೂಪಿಸಿಕೊಟ್ಟಿದೆ.
- ಈ ಕಾರ್ಯಕ್ರಮವು ವಿಶಾಲ ಪ್ರಾದೇಶಿಕ ವ್ಯಾಪ್ತಿಯಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಬಲವರ್ಧನೆಗೆ ಅಗತ್ಯವಾದ ಹಣಕಾಸಿನ ಸೌಲಭ್ಯವನ್ನು ಒದಗಿಸಿದೆ.

## ಸರ್ವಶಿಕ್ಷಾ ಅಭಿಯಾನ ಒಂದು ಕ್ರಿಯಾಚೌಕಟ್ಟು

ಈ ಕಾರ್ಯಕ್ರಮವು ಭಾಗೀದಾರರ ಅನುಕೂಲಕ್ಕಾಗಿ ಮತ್ತು ಸಕ್ರಿಯ ಪಾಲುದಾರಿಕೆಗಾಗಿ ಕಾರ್ಯಕ್ರಮ ಚೌಕಟ್ಟಿನೊಳಗೆ ಅನೇಕ ಸ್ಥಿತಿಸ್ಥಾಪಕ ಬದಲಾವಣೆಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಜೊತೆಗೆ ಈ ಕಾರ್ಯಕ್ರಮಕ್ಕೆ ಕೆಳಕಂಡ ಅಂಶಗಳ ನಿರೀಕ್ಷೆಯೂ ಇದೆ.

- ಎಸ್.ಎಸ್.ಎ. ಯ ಕಾರ್ಯಚೌಕಟ್ಟಿನೊಳಗೆ ರಾಜ್ಯವು ತನ್ನದೇ ಆದ ಸನ್ನಿವೇಶ, ನಿರ್ದಿಷ್ಟ ನಿಯಮಾವಳಿಗಳನ್ನು ರೂಪಿಸಿಕೊಳ್ಳುವ ಅವಕಾಶ;
- ರಾಜ್ಯದೊಳಗಿನ ಜಿಲ್ಲೆಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸ್ಥಳೀಯ ಅಂಶಗಳನ್ನು ಪ್ರತಿಫಲಿಸಲು ಪ್ರೋತ್ಸಾಹ;
- ರಾಷ್ಟ್ರೀಯ ನಿಯಮಾವಳಿಗಳ ಆಧಾರದ ಮೇಲೆ ಸ್ಥಳೀಯ ಅಗತ್ಯಗಳಿಗೆ ಅನುಸಾರವಾಗಿ ಯೋಜನೆ ರೂಪಿಸಲು ಪ್ರೋತ್ಸಾಹ;
- ವಾಸ್ತವ ಬಳಕೆ ಅಥವಾ ಅನುಷ್ಠಾನಕ್ಕಾಗಿ ರಾಷ್ಟ್ರೀಯ ನಿಯಮಾವಳಿಗಳ ಹಿನ್ನೆಲೆಯಲ್ಲಿ ಯೋಜನೆಯನ್ನು ಪುನರ್ ರೂಪಿಸಲು ಅವಕಾಶ. ಈ ಎಲ್ಲ ಅಂಶಗಳೂ ಸರ್ವಶಿಕ್ಷಾ ಅಭಿಯಾನದ ಕಾರ್ಯಚೌಕಟ್ಟನ್ನು ಪ್ರತಿಬಿಂಬಿಸುತ್ತವೆ. ಈ ಕಾರ್ಯಚೌಕಟ್ಟು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಮತ್ತಷ್ಟು ಅಧಿಕ ಮಟ್ಟದ

ಸಂಪನ್ಮೂಲಗಳನ್ನು ಒದಗಿಸುವ ಆಶಯವನ್ನು ಪ್ರತಿಬಿಂಬಿಸುತ್ತದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

1. ಎಸ್.ಎಸ್.ಎ. ಯ ಪರಿಕಲ್ಪನೆ ಮತ್ತು ಗುರಿಗಳನ್ನು ವಿವರಿಸಿ
2. ಎಸ್.ಎಸ್.ಎ. ಯ ಕಾರ್ಯಚೌಕಟ್ಟನ್ನು ಸ್ಪಷ್ಟಪಡಿಸಿ

## 3.2.3.2 ಸರ್ವ ಶಿಕ್ಷಾ ಅಭಿಯಾನದ ಗುರಿಸಾಧನೆಗೆ ತಂತ್ರಗಳು/ಸುಧಾರಣೆಗಳು

### ಸಾಂಸ್ಥಿಕ ಸುಧಾರಣೆಗಳು:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸರ್ವಶಿಕ್ಷಣ ಅಭಿಯಾನದ ಅನುಷ್ಠಾನದಲ್ಲಿ ಸುಧಾರಣೆಯ ಹಿನ್ನೆಲೆಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿವೆ. ಇವುಗಳಲ್ಲಿ ಮುಖ್ಯವಾಗಿ ರಾಜ್ಯ ಸರ್ಕಾರವು ಹಲವಾರು ಅಂಶಗಳಿಗೆ ಸಂಬಂಧಿಸಿದಂತೆ ವಿಶೇಷ ಗಮನ ಕೊಟ್ಟಿದೆ. ಅವುಗಳಲ್ಲಿ ಪ್ರಮುಖವಾದವು: ಶೈಕ್ಷಣಿಕ ಆಡಳಿತ, ಶಾಲಾ ಸಾಧನೆಯ ಮಟ್ಟದಲ್ಲಿ ಹೆಚ್ಚಳ, ಹಣಕಾಸಿನ ವಿಚಾರಗಳು, ಸಮುದಾಯದ ವಿಕೇಂದ್ರೀಕೃತ ಒಡೆತನ, ರಾಜ್ಯಶಿಕ್ಷಣ ಕಾಯಿದೆಗಳ ಪುನರಾವಲೋಕನ, ಶಿಕ್ಷಕರ ನೇಮಕಾತಿ ಮತ್ತು ನಿಯಂತ್ರಣ, ಮೌಲ್ಯಮಾಪನ, ಹೆಣ್ಣುಮಕ್ಕಳು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮತ್ತು ದುರ್ಬಲ ವರ್ಗದವರ ಸ್ಥಾನಮಾನ, ಖಾಸಗಿ ಶಾಲೆಗಳಿಗೆ ಸಂಬಂಧಿಸಿದ ನಿಯಮಾವಳಿಗಳು, ಸಮಗ್ರ ಮತ್ತು ನಿರಂತರ ಮೌಲ್ಯಮಾಪನ ಇತ್ಯಾದಿ. ಹಲವು ರಾಜ್ಯಗಳಲ್ಲಿ ಈ ಅಂಶಗಳಿಗೆ ಸಂಬಂಧಿಸಿದ ಸುಧಾರಣೆಗಳು ಈಗಾಗಲೇ ಅನುಷ್ಠಾನಕ್ಕೆ ಬಂದಿವೆ.

### ಹಣಕಾಸು ವ್ಯವಸ್ಥೆ:

ಸರ್ವಶಿಕ್ಷಣ ಅಭಿಯಾನದ ಯಶಸ್ಸು ಸಪ್ರಮಾಣದ ಹಣಕಾಸನ್ನು ಅವಲಂಬಿಸಿದೆ. ಇದಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ದೀರ್ಘಕಾಲಿಕ ಆರ್ಥಿಕ ಬದ್ಧತೆಗೆ ಕರೆಕೊಟ್ಟಿವೆ.

### ಸಮುದಾಯದ ಮಾಲಿಕತ್ವ:

ಪರಿಣಾಮಕಾರಿ ವಿಕೇಂದ್ರೀಕರಣದ ಮೂಲಕ ಶಾಲಾ ತೊಡಕುಗಳ ನಿವಾರಣೆಗಾಗಿ, ಶಾಲಾ ಒಡೆತನವನ್ನು ಸಮುದಾಯಕ್ಕೆ ವಹಿಸಲು ಕರೆಕೊಡಲಾಗಿದೆ. ಇದರಲ್ಲಿ ಸ್ಥಳೀಯ ಮಹಿಳಾ ಸಂಘಗಳು, ಪಂಚಾಯತ್ ರಾಜ್ ಸದಸ್ಯರು ಇತ್ಯಾದಿ ಸದಸ್ಯರು ಪಾಲ್ಗೊಳ್ಳಲು ಕರೆಕೊಟ್ಟಿದೆ.

### ಸಾಂಸ್ಥಿಕ ಸಾಮರ್ಥ್ಯದ ಬಲವರ್ಧನೆ:

ಎಸ್.ಎಸ್.ಎ. ಅನುಷ್ಠಾನಗೊಳ್ಳಲು ಸಮೃದ್ಧಿಯಾದ ಮಾನವ ಹಾಗೂ ಮಾನವೇತರ ಸಂಪನ್ಮೂಲಗಳ ಅಗತ್ಯವಿತ್ತು. ಹಾಗಾಗಿ ಇದು ಸಾಮರ್ಥ್ಯವಿಕಾಸದ ಹಿನ್ನೆಲೆಯಲ್ಲಿ NUEPA / NCERT / NCTE / SCERT / SIEMAT / DIET ಸಂಸ್ಥೆಗಳ ಸಂಪನ್ಮೂಲಗಳನ್ನು ಗುರುತಿಸಿಕೊಂಡಿದೆ.

### ಶೈಕ್ಷಣಿಕ ಆಡಳಿತಾತ್ಮಕ ರಚನೆಯಲ್ಲಿ ಸುಧಾರಣೆ:

ಸರ್ವಶಿಕ್ಷಾ ಅಭಿಯಾನವು ಹೊಸ ವಿಧಾನಗಳ ಅಳವಡಿಕೆ, ಖರ್ಚು ಪ್ರಭಾವಿತ ಮತ್ತು ಉತ್ತಮ ವಿಧಾನಗಳ ಮೂಲಕ ಸಾಂಸ್ಥಿಕ ಅಭಿವೃದ್ಧಿಗಾಗಿ ಶೈಕ್ಷಣಿಕ ಆಡಳಿತಾತ್ಮಕ ರಚನೆಯಲ್ಲಿ ಮುಖ್ಯ ಸುಧಾರಣೆಯನ್ನು ತರಲು ಗಮನಕೊಟ್ಟಿದೆ.

### ಪೂರ್ಣ ಪಾರದರ್ಶಕತೆಯೊಂದಿಗೆ ಸಮುದಾಯಾಧಾರಿತ ನಿರ್ವಹಣೆ:

ಸಮುದಾಯಾಧಾರಿತ ನಿರ್ವಹಣೆ ಈ ಕಾರ್ಯಕ್ರಮದ ಒಂದು ಪ್ರಮುಖ ಲಕ್ಷಣ. ಮೈಕ್ರೊ ಪ್ಲಾನಿಂಗ್ ಸಮೀಕ್ಷೆ, ಸರ್ವೇಕ್ಷಣಗಳ ಮುಖಾಂತರ ಶಾಲಾಹಂತದ ಅಂಕಿ ಅಂಶಗಳು ಹಾಗೂ ಸಮುದಾಯಾಧಾರಿತ

ಮಾಹಿತಿಗಳನ್ನು ಇದು ಒಟ್ಟುಗೂಡಿಸಿದೆ. ಪ್ರತಿ ಶಾಲೆಯೂ ತಾನು ಪಡೆದ ಹಣಕಾಸು ಮತ್ತಿತರ ಎಲ್ಲಾ ಮಾಹಿತಿಯನ್ನು ಸಮುದಾಯದೊಂದಿಗೆ ವಿನಿಮಯ ಮಾಡಿಕೊಳ್ಳಬೇಕೆಂದು ಬಯಸಿದೆ. ಇದಕ್ಕಾಗಿ ಪ್ರತಿ ಶಾಲೆಯು ಈ ಮಾಹಿತಿಯನ್ನು ಸೂಚನಾ ಫಲಕದ ಮೇಲೆ ಪ್ರದರ್ಶಿಸಬೇಕಾಗುತ್ತದೆ.

**ಯೋಜನೆಯ ಘಟಕವಾಗಿ ವಸತಿಯ ಪರಿಗಣನೆ :**

ಸಮುದಾಯಾಧಾರಿತವಾಗಿ ಕಾರ್ಯನಿರ್ವಹಿಸುವ ಈ ಯೋಜನೆಯು ಎಲ್ಲ ಯೋಜನೆಗಳ ತಯಾರಿಯಲ್ಲಿ ವಸತಿಯನ್ನು ಒಂದು ಘಟಕವಾಗಿ ಪರಿಗಣಿಸಿದೆ.

**ಸಮುದಾಯದ ಉತ್ತರದಾಯಿತ್ವ :**

ಸರ್ವಶಿಕ್ಷಣ ಅಭಿಯಾನವು ಶಿಕ್ಷಕರು, ಪೋಷಕರು ಮತ್ತು ಸಮುದಾಯದ ಒಂದು ಸಹಕಾರವನ್ನು ಬೆಸೆದು ಉತ್ತರದಾಯಿತ್ವ ಹಾಗೂ ಪಾರದರ್ಶಕತೆಯನ್ನು ಪ್ರಮುಖ ಅಂಶವಾಗಿ ಪರಿಗಣಿಸಿದೆ.

**ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ :**

ಈ ಯೋಜನೆಯು ಹೆಣ್ಣುಮಕ್ಕಳ, ಅದರಲ್ಲೂ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಗಮನಹರಿಸಿದೆ. ಎಲ್ಲ ಕಾರ್ಯಕ್ರಮಗಳನ್ನೂ ಲಿಂಗಸಮಾನತೆಯ ಆಧಾರದ ಮೇಲೆ ರೂಪಿಸಲಾಗಿದೆ. ವಿಶೇಷವಾಗಿ 'ಮಹಿಳಾ ಸಮಾಖ್ಯಾ' ಮತ್ತು 'ಮಹಿಳಾ ಸಮೂಹ'ದಂತಹ ಕಾರ್ಯಕ್ರಮಗಳು ಹೆಣ್ಣುಮಕ್ಕಳ ಶಿಕ್ಷಣದ ಪ್ರಚಾರ, ತಾರುಣ್ಯಾವಸ್ಥೆಯ ಹೆಣ್ಣುಮಕ್ಕಳ ಶಿಬಿರಗಳ ಆಯೋಜನೆ ಇತ್ಯಾದಿ ಕೆಲಸಗಳನ್ನು ನಿರ್ವಹಿಸುತ್ತದೆ.

ಸರ್ವಶಿಕ್ಷಾ ಅಭಿಯಾನವು ಶಾಲೆಯಿಂದ ಹೊರಗುಳಿದ ಹೆಣ್ಣುಮಕ್ಕಳ ಶಿಕ್ಷಣಕ್ಕೂ ಶ್ರಮಿಸಿದೆ. ಇದಕ್ಕಾಗಿ ಮೈಕ್ರೊ ಯೋಜನೆಗಳು, ಶಾಲಾನಕ್ಷೆಯಂತಹ ಯೋಜನೆಗಳನ್ನು ರೂಪಿಸಿಕೊಂಡಿದೆ. ರಾಜ್ಯ ಮಹಿಳಾ ಸಮಾಖ್ಯಾ ಹಾಗೂ ಡಿ.ಪಿ.ಇ.ಪಿ. ಗಳು ಮಹಿಳಾ ವಿಚಾರಗಳನ್ನು ಕುರಿತು ಮುಕ್ತವಾಗಿ ಅವರ ಅಗತ್ಯಗಳನ್ನು ಅಭಿವ್ಯಕ್ತಿಪಡಿಸಲು ಅವಕಾಶ ನೀಡಿದೆ.

**ವಿಶೇಷ ಅಗತ್ಯಗಳ ಗುಂಪುಗಳಿಗೆ ಪ್ರಾಮುಖ್ಯತೆ :**

ಈ ಕಾರ್ಯಕ್ರಮವು ವಿಶೇಷವಾಗಿ ಪರಿಶಿಷ್ಟಜಾತಿ, ಪಂಗಡ, ಅಪಹೃತ ಮಕ್ಕಳು, ಇತರೆ ಅನುಕೂಲವಂಚಿತ ಮಕ್ಕಳ, ದಿವ್ಯಾಂಗರ ಸಮನ್ವಯ ಮತ್ತು ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಗಮನ ನೀಡಿದೆ. ಲಿಂಗ ಸಮಾನತೆಗಾಗಿ ಅನೇಕ ಕಾರ್ಯಕ್ರಮಗಳನ್ನು ಶಿಕ್ಷಕರ ನೇಮಕಾತಿ, ಶಾಲಾ ಉನ್ನತೀಕರಣ, ಮಧ್ಯಾಹ್ನದ ಊಟ, ಸಮವಸ್ತ್ರ ವಿತರಣೆ, ಶಿಷ್ಯವೇತನ, ಪಠ್ಯಪುಸ್ತಕ, ಲೇಖನ ಸಾಮಗ್ರಿಗಳ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಯೋಜನಾಪೂರ್ವ ಹಂತದಲ್ಲಿ ಗಮನ :**

ಸರ್ವಶಿಕ್ಷಾ ಅಭಿಯಾನವು ಹೆಚ್ಚಿನ ಪ್ರಮಾಣದ ಪಾಲುದಾರಿಕೆಗೆ ಹಾಗೂ ಕಾರ್ಯಕ್ರಮದ ಅನುಷ್ಠಾನ, ಸುಧಾರಣೆ ಹಾಗೂ ನಿರ್ವಹಣಾ ವ್ಯವಸ್ಥೆಯ ಅಭಿವೃದ್ಧಿಗೆ ರಾಷ್ಟ್ರಾದ್ಯಂತ ಸುವ್ಯವಸ್ಥಿತ ಯೋಜನಾ ಪೂರ್ವ ಹಂತದ ಚಟುವಟಿಕೆಗಳನ್ನು ಹಮ್ಮಿಕೊಂಡು ಉತ್ತಮ ಅಡಿಪಾಯವನ್ನು ಹಾಕಿಕೊಂಡಿತ್ತು. ಇದರಲ್ಲಿ ಮನೆ ಮಾಲಿಕರ ಸಮೀಕ್ಷೆ, ಸಮುದಾಯಾಧಾರಿತ ಮೈಕ್ರೊ ಯೋಜನೆ, ಶಾಲಾ ನಕ್ಷೆ, ಸಮುದಾಯದ ನಾಯಕರಿಗೆ ತರಬೇತಿ, ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿತ್ತು.

**ಗುಣಾತ್ಮಕತೆಯ ಮೇಲೆ ಗಮನ :**

ಈ ಯೋಜನೆಯು ಸಮಗ್ರ ಹಾಗೂ ವಿಸ್ತಾರವಾದ ರೀತಿಯಲ್ಲಿ ಗುಣಾತ್ಮಕತೆಗೆ ಒತ್ತು ನೀಡಿದೆ. ಇಡೀ ಪಠ್ಯಕ್ರಮವನ್ನು ವಿಕೇಂದ್ರೀಕರಣಗೊಳಿಸಿ ಜಿಲ್ಲಾ ಹಂತದಲ್ಲಿ ಅಭಿವೃದ್ಧಿಪಡಿಸಿಕೊಳ್ಳಲು ಪರಿಶ್ರಮಿಸಿದೆ. ಸಂಕೀರ್ಣ ವಿಧಾನಗಳ ಹೊರೆಯನ್ನು ಚಟುವಟಿಕೆ ಆಧಾರಿತ ವಿಧಾನಗಳಿಂದ ಸರಳಗೊಳಿಸಿದೆ. ಮಾಡಿಕಲಿ, ವೀಕ್ಷಣಾ ಕಲಿಕೆ,

ಕಾರ್ಯಾನುಭವ, ಕಲೆ, ಸಂಗೀತ, ಕ್ರೀಡೆ ಮತ್ತು ಮೌಲ್ಯ ಶಿಕ್ಷಣ ಇವುಗಳಿಗೆ ವಿಶೇಷ ಗಮನ ಹರಿಸಿದೆ. ಭಯರಹಿತ ಕಲಿಕೆ, ನಿರಂತರ ಮೌಲ್ಯಮಾಪನಕ್ಕೆ ಅವಕಾಶ ಕಲ್ಪಿಸಿದೆ. ಪೋಷಕರ ಜೊತೆಗಿನ ಸಮಾಲೋಚನೆಯೊಂದಿಗೆ ಮಕ್ಕಳ ಫಲಿತಾಂಶವನ್ನು ನಿರಂತರವಾಗಿ ನಿರ್ದೇಶಿಸಿ ಸ್ಪಷ್ಟಪಡಿಸುವುದು, ಕಲಿಕೆಯನ್ನು ಜ್ಞಾನಾತ್ಮಕ ವಲಯದಿಂದಾಚೆಗೆ ವಿಸ್ತರಿಸುವುದು, ಶಿಕ್ಷಕರು ಕಲಿಕಾ ಸಾಮಗ್ರಿಯ ತಯಾರಿಕೆಯಲ್ಲಿ ಭಾಗವಹಿಸುವುದು, ಜಿಲ್ಲಾ ಪ್ರಾಧಿಕಾರಗಳು ರಾಜ್ಯಮಂಡಳಿ ನಿರ್ದೇಶಿತ ಪಠ್ಯಕ್ರಮ ಚೌಕಟ್ಟಿನೊಳಗೆ ಸ್ಥಳೀಯ ಅಂಶಗಳಿಗೆ ಆದ್ಯತೆ ನೀಡುವುದು, ರಾಜ್ಯ ಮತ್ತು ಕೇಂದ್ರಮಟ್ಟದ ಸಂಸ್ಥೆಗಳು ಪಠ್ಯಕ್ರಮ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸುವುದು ಇತ್ಯಾದಿ ಅಂಶಗಳಿಗೆ ಅವಕಾಶಮಾಡಿಕೊಟ್ಟಿದೆ.

ಪಠ್ಯಕ್ರಮ ಮತ್ತು ಮೌಲ್ಯಮಾಪನದಲ್ಲಿ ಗುಣಾತ್ಮಕತೆಗಾಗಿ ಕೆಳಗಿನ ಸುಧಾರಣೆಗಳನ್ನು ಸೂಚಿಸಿದೆ:

- ಶಿಕ್ಷಕರ/ಸಮುದಾಯ ಸಹಭಾಗಿತ್ವದಲ್ಲಿ ಸಾಮಗ್ರಿಗಳ ತಯಾರಿ ಮತ್ತು ಶಾಲಾ ದೃಷ್ಟಿಕೋನದ ಅಭಿವೃದ್ಧಿ;
- ಕಡಿಮೆ ಖರ್ಚಿನಲ್ಲಿ ಗುಣಾತ್ಮಕ ಮುದ್ರಣ, ಹೆಚ್ಚು ಹೆಚ್ಚು ನಿದರ್ಶನಗಳಿಂದ ಕೂಡಿದ ಪುಸ್ತಕಗಳ ತಯಾರಿ,
- ಒಂದು ಮತ್ತು ಎರಡನೇ ತರಗತಿಗಳಲ್ಲಿ ಸ್ಥಳೀಯ ಭಾಷೆಯ ಆಡುನುಡಿಯ ಬಳಕೆ;
- ಕಾರ್ಯಾನುಭವಕ್ಕಾಗಿ ಸಮುದಾಯ ಆಧರಿತ, ಮತ್ತು ಶಾಲಾ ಆಧರಿತ ಯೋಜನೆಗಳು;
- ಶಾಲಾ ಚಟುವಟಿಕೆಗಳಲ್ಲಿ ಸ್ಥಳೀಯ ಕಸುಬುದಾರರ ಪಾಲ್ಗೊಳಿಸುವಿಕೆ;
- ಕಲೆ, ಕ್ರೀಡೆ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆ;
- ಶಿಕ್ಷಕರಿಗೆ ವಿಷಯಾಧಾರಿತ, ಪ್ರೇರಣಾತ್ಮಕ ತರಬೇತಿ;
- ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ನಿರಂತರ ಮೌಲ್ಯಮಾಪನ;
- 'ಮಗುವಿನಿಂದ ಮಗುವಿಗೆ' ಕಲಿಕೆಗೆ ಅವಕಾಶ; ಮತ್ತು
- ಗುಣಾತ್ಮಕ ಸುಧಾರಣೆಯನ್ನು ಶಾಲಾ ಸಮಗ್ರ ಸುಧಾರಣೆಗೆ ಹೊಂದಿಸುವಂತಹ ಕಾರ್ಯಕ್ರಮಗಳ ಕಡೆ ಗಮನ ಹರಿಸುವುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 2

ಸರ್ವಶಿಕ್ಷಾ ಅಭಿಯಾನದ ಉದ್ದೇಶ ಸಾಧನೆಗಾಗಿ ಬಳಸಿಕೊಂಡ ಪ್ರಮುಖ ತಂತ್ರಗಳನ್ನು ವಿವರಿಸಿ.

ಪಠ್ಯಕ್ರಮ ಮತ್ತು ಮೌಲ್ಯಮಾಪನದಲ್ಲಿ ಗುಣಾತ್ಮಕತೆಯ ಸುಧಾರಣೆಗಾಗಿ ಸರ್ವಶಿಕ್ಷಾ ಅಭಿಯಾನದ ಅಡಿಯಲ್ಲಿ ಪ್ರಯತ್ನಗಳನ್ನು ಪಟ್ಟಿಮಾಡಿ.

## 3.2.3.3 ಸರ್ವ ಶಿಕ್ಷಾ ಅಭಿಯಾನದಲ್ಲಿ ಕೇಂದ್ರದ ಮಧ್ಯವರ್ತಿ ಕಾರ್ಯಕ್ರಮಗಳು, ಅವುಗಳ ಅನುಷ್ಠಾನ ಮತ್ತು ಪ್ರಮುಖ ಸಾಧನೆಗಳು

ಕೇಂದ್ರ ಸರ್ಕಾರವು ಪ್ರಾಥಮಿಕ ಶಿಕ್ಷಣದಲ್ಲಿ ಅನೇಕ ವಿನೂತನ ಕ್ರಮಗಳನ್ನು ಕೈಗೊಂಡಿದೆ. ಅವುಗಳೆಂದರೆ, 1986ರ ರಾಷ್ಟ್ರೀಯ ಶಿಕ್ಷಣ ನೀತಿ, ಕಪ್ಪುಹಲಗೆಯ ಕಾರ್ಯಾಚರಣೆ, ಶಿಕ್ಷಕರ ಶಿಕ್ಷಣ, ಔಪಚಾರಿಕವಲ್ಲದ ಶಿಕ್ಷಣ, ಮಹಿಳಾ ಸಮಾಖ್ಯಾ, ಪ್ರಾಥಮಿಕ ಶಿಕ್ಷಣಕ್ಕಾಗಿ ಪೌಷ್ಟಿಕಾಂಶದ ರಾಷ್ಟ್ರೀಯ ಕಾರ್ಯಕ್ರಮ, ಬಿಹಾರ, ಉತ್ತರ ಪ್ರದೇಶ, ಆಂದ್ರಪ್ರದೇಶ ಮತ್ತು ರಾಜಾಸ್ಥಾನಗಳಲ್ಲಿ ರಾಜ್ಯ ನಿರ್ದಿಷ್ಟ ಶೈಕ್ಷಣಿಕ ಯೋಜನೆ, 15 ರಾಜ್ಯಗಳಲ್ಲಿ ಡಿ.ಪಿ.ಇ.ಪಿ. ಕಾರ್ಯಕ್ರಮ–ಈ ಎಲ್ಲ ಯೋಜನೆಗಳನ್ನು ಕೆಳಗಿನ ಆಶಯಗಳಲ್ಲಿ ಸರ್ವಶಿಕ್ಷಣ ಅಭಿಯಾನದೊಳಗೆ ಅಳವಡಿಸಲಾಗಿದೆ.

**ಕಪ್ಪುಹಲಗೆ ಕಾರ್ಯಾಚರಣೆ:**

ಶಾಲೆಗಳಲ್ಲಿ ಭೌತಿಕ ಸೌಲಭ್ಯಗಳನ್ನು ಸುಧಾರಿಸುವುದು, ಶಾಲಾ ಕೊಠಡಿಗಳ ನಿರ್ಮಾಣ ಮತ್ತು ಶಿಕ್ಷಕರನ್ನು ಒದಗಿಸುವುದು ಈ ಯೋಜನೆಯ ಗುರಿಯಾಗಿತ್ತು. ಇದು ಶಾಲೆಯ ಇತರ ಅಂಶಗಳ ಕಡೆಗೆ ಗಮನವಹಿಸಲಿಲ್ಲ. ಆದರೆ ಎಸ್.ಎಸ್.ಎ. ಯು ಗುಣಾತ್ಮಕ ಸುಧಾರಣೆಯೊಂದಿಗೆ ಆಗಿನ ವ್ಯವಸ್ಥೆಯನ್ನು ಸುಧಾರಿಸುವುದರ ಕಡೆಗೆ ಗಮನ ನೀಡಿದೆ. ಕಪ್ಪುಹಲಗೆ ಕಾರ್ಯಾಚರಣೆಯಲ್ಲಿ ಹೊಸ ಶಿಕ್ಷಕರ ನೇಮಕಾತಿಗೆ ಅವಕಾಶವಿರಲಿಲ್ಲ. ಎಸ್.ಎಸ್.ಎ. ಅದನ್ನು ಕಾರ್ಯಗತಗೊಳಿಸಿದೆ. ಆಗ ಶಿಕ್ಷಕರಿಗಿದ್ದ ವೇತನವನ್ನು ಹಾಗೆಯೇ ಮುಂದುವರಿಸಿದೆ. ಹಣಕಾಸಿನ ಸೌಲಭ್ಯ ವಿಸ್ತರಿಸಲು ಗ್ರಾಮೀಣ ಮತ್ತು ನಗರ ಉದ್ಯೋಗ ಯೋಜನೆಯ ಮೀಸಲಿಟ್ಟ ಹಣವನ್ನು ಶಾಲಾ ಕೊಠಡಿ ನಿರ್ಮಾಣಕ್ಕಾಗಿಯೇ ಬಳಸುವಂತೆ ನಿಗಾ ವಹಿಸಿದೆ.

**ಶಿಕ್ಷಕರ ಶಿಕ್ಷಣದ ಬಲವರ್ಧನೆ:**

ರಾಜ್ಯ ಸರ್ಕಾರಗಳು ತಮ್ಮ ಸಾಧಕ ಬಾಧಕಗಳೊಳಗೆ ಪರಿಷ್ಕೃತ ಶಿಕ್ಷಣದ ಶಿಕ್ಷಣವನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡುವುದು, ಅದರ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದು, ಖಾಲಿ ಹುದ್ದೆಗಳನ್ನು ಪ್ರಮಾಣೀಕೃತ ವಿಧಾನಗಳಲ್ಲಿ ಭರ್ತಿ ಮಾಡುವುದು, ಡಯಟ್ ಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಈ ಕಾರ್ಯಕ್ರಮಗಳನ್ನು ಗುರುತಿಸಿಕೊಂಡಿವೆ.

**ಪ್ರಾಥಮಿಕ ಶಿಕ್ಷಣಕ್ಕಾಗಿ ಪೌಷ್ಟಿಕಾಂಶ ಪ್ರೋತ್ಸಾಹದ ರಾಷ್ಟ್ರೀಯ ಕಾರ್ಯಕ್ರಮ:**

ಈ ಕಾರ್ಯಕ್ರಮದ ಫಲಶ್ರುತಿಯಾಗಿ ಶಾಲಾ ಮಕ್ಕಳಿಗೆ ಆಹಾರಧಾನ್ಯಗಳನ್ನು ಒದಗಿಸಿದುದರಿಂದ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಹೆಚ್ಚಾಗಿದೆ. ಇದು ಮಕ್ಕಳ ಪೌಷ್ಟಿಕತೆಯ ಪ್ರಮಾಣ ಹೆಚ್ಚಾಗಲೂ ಕಾರಣವಾಗಿದೆ. ಈ ಕಾರ್ಯಕ್ರಮವನ್ನು ಸೂಕ್ತ ಬದಲಾವಣೆಯೊಂದಿಗೆ ರಾಜ್ಯಗಳ ಸಹಯೋಗದೊಂದಿಗೆ ಮುಂದುವರಿಸಿಕೊಂಡು ಹೋಗಲು ಸೂಚಿಸಲಾಗಿದೆ.

**ಮಹಿಳಾ ಸಮಾಖ್ಯಾ:**

ಇದರ ಫಲಶ್ರುತಿಯ ಅಧ್ಯಯನದಿಂದ ಮಹಿಳಾ ಸಬಲೀಕರಣದಲ್ಲಿ ಪ್ರಗತಿಯಾಗಿದೆ. ಇದು ಹೆಣ್ಣುಮಕ್ಕಳ ಪ್ರಾಥಮಿಕ ಶಿಕ್ಷಣದ ಬೇಡಿಕೆಯನ್ನು ಹೆಚ್ಚಿಸಿದೆ. ಈ ಬೇಡಿಕೆಯನ್ನು ಮತ್ತೂ ಹೆಚ್ಚಿಸಲು ಹೆಣ್ಣುಮಕ್ಕಳ ಪ್ರಾಥಮಿಕ ಶಿಕ್ಷಣದಲ್ಲಿ ಮಹಿಳಾ ಪಾಲುದಾರಿಕೆ, ಅದರಲ್ಲೂ ಶಾಲಾ ನಿರ್ವಹಣೆಯಲ್ಲಿ ಅವರ ಹೆಚ್ಚಿನ ಭಾಗವಹಿಕೆಯನ್ನು ಅಪೇಕ್ಷಿಸಲಾಗಿದೆ. ಇದು ಜಿಲ್ಲಾ ಮಟ್ಟದಲ್ಲೂ ಎಸ್.ಎಸ್.ಎ. ಯೋಜನೆಗಳ ತಯಾರಿ ಮತ್ತು ಅನುಷ್ಠಾನಗಳಿಗೆ ಪ್ರೋತ್ಸಾಹ ನೀಡಿದೆ.

**ಶಿಕ್ಷಣ ಗ್ಯಾರಂಟಿ ಯೋಜನೆ ಮತ್ತು ಪರ್ಯಾಯ ಆವಿಷ್ಕಾರ ಶಿಕ್ಷಣ:**

ಔಪಚಾರಿಕವಲ್ಲದ ಶಿಕ್ಷಣದ ಅಧ್ಯಯನಗಳು ಇಂತಹ ಯೋಜನೆಗಳಲ್ಲಿ ನಮ್ಯತೆಯ ಕೊರತೆಯನ್ನು ಮೂಲಭೂತವಾಗಿ ಗುರುತಿಸಿವೆ. ಇದನ್ನು ನಿವಾರಿಸಲು ಹಲವು ರಾಜ್ಯಗಳು ಕೆಲವು ಪರಿಣಾಮಕಾರಿ ಕಾರ್ಯಕ್ರಮಗಳನ್ನು ಚಾಲ್ತಿಗೆ ತಂದಿವೆ. ಈ ವೈವಿಧ್ಯಮಯ ಕ್ರಮಗಳನ್ನು ಪರಿಷ್ಕೃತ ವಿನ್ಯಾಸಗಳೊಂದಿಗೆ ಶಿಕ್ಷಣ ಖಾತ್ರಿ ಯೋಜನೆ, ಪರ್ಯಾಯ ಶಾಲಾ ಸೌಲಭ್ಯಗಳು, ಬಾಲಿಕಾ ಶಿಕ್ಷಣ ಶಿಬಿರ, 'ಶಾಲೆಯೆಡೆಗೆ ಶಿಬಿರ' ಇತ್ಯಾದಿಗಳ ಮೂಲಕ ಜಾರಿಗೆ ತರಲಾಗಿದೆ. ಈ ಯೋಜನೆಗಳನ್ನು ಶಿಕ್ಷಣ ಖಾತ್ರಿ ಯೋಜನೆ ಮತ್ತು ಪರ್ಯಾಯ ಆವಿಷ್ಕಾರ ಶಿಕ್ಷಣ ಎಂದು ಕರೆಯಲಾಗಿತ್ತು.

**ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ:**

ಈ ಕಾರ್ಯಕ್ರಮವು ಸಮುದಾಯದ ಪಾಲುದಾರಿಕೆಯೊಂದಿಗೆ ಯೋಜನಾ ವಿಕೇಂದ್ರೀಕರಣ ಮತ್ತು ಅನುಷ್ಠಾನ ಮತ್ತು ಸೌಲಭ್ಯಗಳೊಂದಿಗೆ ಜಿಲ್ಲೆಯನ್ನು ಒಂದು ಘಟಕವಾಗಿರಿಸಿಕೊಂಡಿದೆ. ಈ ಕಾರ್ಯಕ್ರಮವು

ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಮಟ್ಟದಲ್ಲಿ ಪ್ರಗತಿ ಸಾಧಿಸಿದೆ. ಇದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಕರ ನೇಮಕಾತಿ ಸಾಧ್ಯವಾಗಿದೆ. ಶಿಕ್ಷಕರ ಶೈಕ್ಷಣಿಕ ಪ್ರಗತಿಗಾಗಿ ತಾಲ್ಲೂಕು ಮತ್ತು ವಲಯ ಮಟ್ಟಗಳಲ್ಲಿ ಸಂಪನ್ಮೂಲ ಕೇಂದ್ರಗಳನ್ನು ತೆರೆಯಲಾಗಿದೆ.

## ಶಾಲಾ ಸೌಲಭ್ಯಗಳ ಸುಧಾರಣೆ ಮತ್ತು ಸಿವಿಲ್ ಕಾಮಗಾರಿ:

ಈ ಯೋಜನೆ ನೇರವಾಗಿ ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಶಾಲೆಯ ಸಿವಿಲ್ ಕಾಮಗಾರಿ ಮತ್ತಿತರ ಸೌಲಭ್ಯಗಳಿಗೆ ಕಾರಣವಾಗಿದೆ. ಸಮುದಾಯದ ಪಾಲ್ಗೊಳ್ಳುವಿಕೆಯ ಜೊತೆಗೆ ಅನೇಕ ಪ್ರಯೋಗಗಳನ್ನು ಮಾಡಿದೆ. ಪ್ರಚಾರಾಂದೋಲನಗಳನ್ನು ನಡೆಸಿದೆ. ಸಮುದಾಯಗಳೂ ಸಹ ಗ್ರಾಮೀಣ ಮಟ್ಟದಲ್ಲಿ ಶಾಲಾ ಸೌಲಭ್ಯಗಳನ್ನು ಒದಗಿಸುವ ಕಾರ್ಯಗಳಿಗೆ ಮುಂದಾಗಿದೆ.

## ಗುಣಾತ್ಮಕ ಪ್ರಗತಿ:

ಗುಣಾತ್ಮಕ ಪ್ರಗತಿಗಾಗಿ ಎಸ್.ಎಸ್.ಎ. ಅಡಿಯಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ:

- ರಾಷ್ಟ್ರೀಯ ಸಂಪನ್ಮೂಲ ಗುಂಪುಗಳ ರಚನೆ;
- ಎನ್.ಸಿ.ಇ.ಆರ್.ಟಿ., ಶಿಕ್ಷಕರ ಶಿಕ್ಷಣ ಇಲಾಖೆ ಹಾಗೂ ದೇಶದ ಐದು ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳೊಂದಿಗೆ ಸಮನ್ವಯತೆ;
- ಪ್ರಾಥಮಿಕ ಶಿಕ್ಷಣದ ಮೌಲ್ಯಮಾಪನದ ಗುಣಮಟ್ಟ ಹೆಚ್ಚಿಸಲು ರಾಷ್ಟ್ರೀಯ ಪರಿಣತರ ಗುಂಪು ರಚನೆ;
- ರಾಜ್ಯ ಎಸ್.ಸಿ.ಇ.ಆರ್.ಟಿ. ಮತ್ತು ಡಯಟ್‌ಗಳ ಕ್ರಿಯಾತ್ಮಕ ಪಾಲುದಾರಿಕೆ;
- ತಾಲ್ಲೂಕು ಮತ್ತು ವಲಯಮಟ್ಟಗಳಲ್ಲಿ ಕಾರ್ಯಾತ್ಮಕ ಸಂಪನ್ಮೂಲ ಕೇಂದ್ರಗಳ ರಚನೆ;
- ರಾಜ್ಯದಾದ್ಯಂತ ಉತ್ತಮ ಅಭ್ಯಾಸಗಳ ವಿನಿಮಯ ದಾಖಲೀಕರಣ; ಮತ್ತು
- ಗುಣಾತ್ಮಕತೆಯಲ್ಲಿ ಹೆಚ್ಚಳಕ್ಕಾಗಿ ಮುಖ್ಯ ಶಿಕ್ಷಕರು ಮತ್ತು ರಾಷ್ಟ್ರ/ರಾಜ್ಯ/ ಮತ್ತು ಜಿಲ್ಲಾ ಸರಕಾರೇತರ ಸಂಸ್ಥೆಗಳ ನಡುವೆ ಸಹಯೋಗ.

## ಸರ್ವಶಿಕ್ಷಾ ಅಭಿಯಾನದ ಸಾಧನೆಗಳು:

ದಿನಾಂಕ 15 ಮಾರ್ಚ್ 9, 2018ರಂದು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಸಚಿವರು ತಮ್ಮ ಪತ್ರಿಕಾ ವರದಿಯಲ್ಲಿ ಸರ್ವಶಿಕ್ಷಾ ಅಭಿಯಾನದ ಪರಿಣಾಮಗಳನ್ನು ಕುರಿತ ಮಾಹಿತಿ ನೀಡಿದ್ದಾರೆ. ಇದರಲ್ಲಿ ಸರ್ವಶಿಕ್ಷಾ ಅಭಿಯಾನ ಮತ್ತು ಸಾಕ್ಷರ ಭಾರತ ಕಾರ್ಯಕ್ರಮಗಳು ಸರ್ವಶಿಕ್ಷಾ ಅಭಿಯಾನದ ಅವಧಿಯಲ್ಲಿ ಸಾಧಿಸಿದ ಸಾಧನೆಗಳನ್ನು ಗುರುತಿಸಲಾಗಿದೆ. ಅದರಂತೆ, ಪ್ರಾಥಮಿಕ ಶಿಕ್ಷಣದಲ್ಲಿ ದಾಖಲಾತಿ ಪ್ರಮಾಣ 2009–10ರಲ್ಲಿ 18.79 ಕೋಟಿಯಿಂದ 2015–16ರಲ್ಲಿ 19.67 ಕೋಟಿಯಷ್ಟು ಹೆಚ್ಚಳವಾಗಿದೆ. ಶಿಕ್ಷಕ–ವಿದ್ಯಾರ್ಥಿ ಅನುಪಾತ 2009–10ರಲ್ಲಿ 32ರಿಂದ 2015–16ರಲ್ಲಿ 25ಕ್ಕೆ ಸುಧಾರಿಸಿದೆ. ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವು 2005ರಲ್ಲಿ 134.6 ಲಕ್ಷ ಇದ್ದುದು 2009ರಲ್ಲಿ 81 ಲಕ್ಷ, 2015ರಲ್ಲಿ 60.64ಲಕ್ಷ ಮಕ್ಕಳಿಗೆ ಇಳಿದಿದೆ. ಮಕ್ಕಳು ಶಾಲೆ ಬಿಟ್ಟ ಪ್ರಮಾಣ 2009–10ರಲ್ಲಿ ಶೇ 6.76ರಿಂದ 2014–15ರಲ್ಲಿ 4.13ಕ್ಕೆ ಇಳಿದಿದೆ. ಹಿರಿಯ ಪ್ರಾಥಮಿಕ ಹಂತದಲ್ಲಿ ವಾರ್ಷಿಕ ಅಪವ್ಯಯದ ಪ್ರಮಾಣ 2014–15ರಲ್ಲಿ ಶೇ4.3 ಆಗಿದೆ. ಹೀಗೆ ಮುಂತಾಗಿ ಸರ್ವಶಿಕ್ಷಾ ಅಭಿಯಾನದ ಫಲವಾಗಿ ಮಕ್ಕಳ ದಾಖಲಾತಿಯಲ್ಲಿ ಹೆಚ್ಚಳ, ಶಿಕ್ಷಕ–ವಿದ್ಯಾರ್ಥಿ ಅನುಪಾತದಲ್ಲಿ ಸಮರ್ಪಕತೆಯ ಸಾಧನೆ, ಶಾಲೆ ಬಿಟ್ಟ ಮಕ್ಕಳ ಪ್ರಮಾಣದಲ್ಲಿ ಇಳಿಕೆ, ಅಪವ್ಯಯದ ಪ್ರಮಾಣದಲ್ಲಿ ಇಳಿಕೆ ಇತ್ಯಾಧಿ ಹಲವಾರು ಧನಾತ್ಮಕ ಪರಿಣಾಮಗಳನ್ನು ಗುರುತಿಸಬಹುದು.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–3

ಸರ್ವಶಿಕ್ಷಾ ಅಭಿಯಾನದಲ್ಲಿ ಗುಣಾತ್ಮಕ ಪ್ರಗತಿಗೆ ಅನುಸರಿಸಿದ ಕಾರ್ಯಕ್ರಮಗಳನ್ನು ವಿವರಿಸಿ.

## 3.2.4 ಸಾರಾಂಶಿಸೋಣ

- ಸರ್ವರಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಸಾಧಿಸಲು, ನಿರ್ದಿಷ್ಟ ಕಾಲಮಿತಿಯ ನಡವಳಿ ಹೊಂದಿ ರೂಪಿತವಾದ ಭಾರತ ಸರ್ಕಾರದ ಕಾರ್ಯಕ್ರಮ.
- ಈ ಕಾರ್ಯಕ್ರಮವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಧನ ಸಹಾಯದಿಂದ ರಾಷ್ಟ್ರದಾದ್ಯಂತ ಜಾರಿಗೆ ಬಂದಿರುವ ಕಾರ್ಯಕ್ರಮ.
- ಸರ್ವಶಿಕ್ಷಾ ಅಭಿಯಾನವು ಅದಕ್ಕೇ ವಿಶಿಷ್ಟವಾದ ನಿರ್ದಿಷ್ಟ ಗುರಿಗಳನ್ನು ರೂಪಿಸಿಕೊಂಡು ಪ್ರಾರಂಭವಾಗಿದೆ
- ಪ್ರಸ್ತುತ ಅಭಿಯಾನವು ಕೆಲವು ಪ್ರಮುಖ ವಿಷಯಗಳನ್ನು ಗಮನಿಸಿಕೊಂಡು ಕಾರ್ಯಾಚರಣೆಯನ್ನು ರೂಪಿಸಿಕೊಂಡಿದೆ.
- ಸರ್ವಶಿಕ್ಷಾ ಅಭಿಯಾನವು ನಿರ್ದಿಷ್ಟ ಉದ್ದೇಶಗಳ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿದೆ.
- ಅಭಿಯಾನವು ಪರಿಣಾಮಕಾರಿಯಾಗಿ ಉದ್ದೇಶಗಳನ್ನು ಸಾಧಿಸಲು ಸ್ಪಷ್ಟವಾದ ಕ್ರಿಯಾಚೌಕಟ್ಟನ್ನು ರೂಪಿಸಿಕೊಂಡಿದೆ.
- ಸರ್ವ ಶಿಕ್ಷಾ ಅಭಿಯಾನವು ಸಾಂಸ್ಥಿಕ ಸುಧಾರಣೆಗಳು, ಹಣಕಾಸು ವ್ಯವಸ್ಥೆ, ಸಾಂಸ್ಥಿಕ ಸಾಮರ್ಥ್ಯದ ಬಲವರ್ಧನೆ, ಶೈಕ್ಷಣಿಕ ಆಡಳಿತಾತ್ಮಕ ರಚನೆಯಲ್ಲಿ ಸುಧಾರಣೆ, ಸಮುದಾಯದ ಉತ್ತರದಾಯಿತ್ವ, ವಿಶೇಷ ಅಗತ್ಯಗಳ ಗುಂಪುಗಳಿಗೆ ಪ್ರಾಮುಖ್ಯತೆ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ, ಗುಣಾತ್ಮಕತೆ ಇವುಗಳನ್ನು ಪ್ರಮುಖ ಸುಧಾರಣಾ ಅಂಶಗಳಾಗಿ ಗಮನಿಸಿಕೊಂಡಿದೆ.
- ಕಪ್ಪುಹಲಗೆ ಕಾರ್ಯಾಚರಣೆ, ಶಿಕ್ಷಕರ ಶಿಕ್ಷಣದ ಬಲವರ್ಧನೆ, ಶಿಕ್ಷಣ ಗ್ಯಾರಂಟಿ ಯೋಜನೆ ಮತ್ತು ಪರ್ಯಾಯ ಆವಿಷ್ಕಾರ ಶಿಕ್ಷಣ, ಮಹಿಳಾ ಸಮಾಖ್ಯಾ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಗುರಿಸಾಧಿಸಲು ಪ್ರಯತ್ನಿಸಿದೆ.
- ಸರ್ವಶಿಕ್ಷಾ ಅಭಿಯಾನದ ಫಲವಾಗಿ ಮಕ್ಕಳ ದಾಖಲಾತಿಯಲ್ಲಿ ಹೆಚ್ಚಳ, ಶಿಕ್ಷಕ–ವಿದ್ಯಾರ್ಥಿ ಅನುಪಾತದಲ್ಲಿ ಸಮರ್ಪಕತೆಯ ಸಾಧನೆ, ಶಾಲೆ ಬಿಟ್ಟ ಮಕ್ಕಳ ಪ್ರಮಾಣದಲ್ಲಿ ಇಳಿಕೆ, ಅಪವ್ಯಯದ ಪ್ರಮಾಣದಲ್ಲಿ ಇಳಿಕೆ ಇತ್ಯಾದಿ ಹಲವಾರು ಧನಾತ್ಮಕ ಪರಿಣಾಮಗಳನ್ನು ಗುರುತಿಸಬಹುದು.

## 3.2.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ಕಲಿಕಾ ಸಾಮಗ್ರಿ ಭಾಗ 3.2.3.1 ಗಮನಿಸಿ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

ಕಲಿಕಾ ಸಾಮಗ್ರಿ ಭಾಗ 3.2.3.2 ಗಮನಿಸಿ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –3

ಕಲಿಕಾ ಸಾಮಗ್ರಿ ಭಾಗ 3.2.3.3 ಗಮನಿಸಿ

## 3.2.6 ಘಟಕಾಂತ್ಯ ಅಭ್ಯಾಸಗಳು

1. ಸರ್ವ ಶಿಕ್ಷಾ ಅಭಿಯಾನದ ಪರಿಕಲ್ಪನೆ, ಗುರಿ, ಕಾರ್ಯಾಚರಣೆಗಳನ್ನು ವಿವರಿಸಿ
2. ಸರ್ವ ಶಿಕ್ಷಾ ಅಭಿಯಾನದಲ್ಲಿ ಕೇಂದ್ರದ ಮಧ್ಯವರ್ತಿ ಕಾರ್ಯಕ್ರಮಗಳನ್ನೂ ಅಭಿಯಾನದ ಸಾಧನೆಗಳನ್ನೂ ವಿವರಿಸಿ.

## 3.2.7 ಪರಾಮರ್ಶನ ಸೂಚಿ


1. https://en.wikipedia.org/wiki/Sarva_Shiksha_Abhiyan
2. https://www.gktoday.in/gk/sarva-shiksha-abhiyan-ssa_26/
3. http://seshagun.nic.in/
4. http://www.yourarticlelibrary.com/education/sarva-shiksha-abhiyan-ssa-in-india-features-aims-and-objectives/45190
5. https://archive.india.gov.in/spotlight/spotlight_archive.php?id=31
6. https://digitallearning.eletsonline.com/2018/01/mission-2020-for-sarva-shiksha-abhiyan/
7. http://childlineindia.org.in/Sarva-Shiksha-Abhiyan.htm
8. http://pib.nic.in/newsite/PrintRelease.aspx?relid=177525
9. Yadav S.K., Sharma R.S., Birua M. (2018) Sarva Shiksha Abhiyan: Achievements, Problems and Future Prospects: A Comparative Analysis of Some Indian States. In: NILERD (eds) Reflecting on India's Development. Springer, Singapore
10. https://www.researchgate.net/publication/327568851_Sarva_ Shiksha_Abhiyan_Achievements_Problems_and_Future_Prospects_ A_Comparative_Analysis_of_Some_ Indian_States_Employment_Skill_and_Health
11. http://www.yourarticlelibrary.com/essay/achievements-of-the-education-sector-in-india/40427
12. https://www.indiastat.com/education-data/6370/educational-schemes/6374/sarva-shiksha-abhiyan-ssa-1987-2018/368236/stats.aspx
13. https://www.aicte-india.org/reports/overview/Sarva-Shiksha-Abhiyan


*****************

# ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು

## ಘಟಕ–3 : ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ಘಟಕದ ರಚನೆ :**


3.3.1. ಕಲಿಕೆಯ ಉದ್ದೇಶಗಳು

3.3.2. ಪೀಠಿಕೆ

3.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.3.3.1. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಪರಿಕಲ್ಪನೆ, ಕಾರ್ಯಚಟುವಟಿಕೆಗಳು ಮತ್ತು ಪ್ರಮುಖ ಕ್ಷೇತ್ರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

3.3.3.2. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿನ ತಿದ್ದುಪಡಿಗಳು, ಅನುಷ್ಠಾನ ಮತ್ತು ಮೇಲ್ವಿಚಾರಣೆ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

3.3.4. ಸಾರಾಂಶಿಸೋಣ

3.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

3.3.6. ಘಟಕಾಂತ್ಯ ಅಭ್ಯಾಸಗಳು

3.3.7. ಪರಾಮರ್ಶನ ಸೂಚಿ


## 3.3.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ರಾಷ್ಟ್ರೀಯ ಮಾದ್ಯಮಿಕ ಶಿಕ್ಷಣ ಅಭಿಯಾನದ ಅರ್ಥ, ವ್ಯಾಪ್ತಿ, ಗುರಿ ಮತ್ತು ಉದ್ದೇಶಗಳನ್ನು ವಿವರಿಸುವರು;
- ಕಾರ್ಯಕ್ರಮದಲ್ಲಿ ಅಳವಡಿಸಿರುವ ವಿವಿಧ ನಿಬಂಧನೆಗಳನ್ನು ವಿಶ್ಲೇಷಿಸುವರು ಹಾಗೂ ವಿವರಿಸುವರು; ಮತ್ತು
- ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಅದರ ಗುರಿಗಳನ್ನು ಸಾಧಿಸುವಲ್ಲಿ ಅನುಸರಿಸಿದ ತಂತ್ರಗಳನ್ನು ಸ್ಪಷ್ಟಪಡಿಸುವರು.

## 3.3.2 ಪೀಠಿಕೆ

ಸ್ವಾತಂತ್ರ್ಯಾನಂತರದಲ್ಲಿ ಭಾರತವು ಶಿಕ್ಷಣಕ್ಕೆ ನೀಡಿರುವ ಮಹತ್ವವನ್ನು ಹಿಂದಿನ ಘಟಕಗಳಲ್ಲಿ ಗಮನಿಸಿದ್ದೇವೆ. ಅಧ್ಯಯನದಿಂದ ತಿಳಿದಿದ್ದೇವೆ. ಸಂವಿಧಾನವು 14 ವರ್ಷದ ವಯಸ್ಸಿನವರೆಗಿನ ಮಕ್ಕಳಿಗೆ ಉಚಿತ ಹಾಗೂ

ಕಡ್ಡಾಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದೆ. ಇದು ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳಲ್ಲಿ ಪ್ರತಿಬಿಂಬಿತವಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕಕ್ಕಾಗಿಯೇ ಯೋಜಿತವಾಗಿ ಅನುಷ್ಠಾನಗೊಂಡ ನಿರ್ದಿಷ್ಟ ಕಾರ್ಯಕ್ರಮವಾದ ಸರ್ವಶಿಕ್ಷಾ ಅಭಿಯಾನದ ಕುರಿತೂ ನಾವು ವಿವರವಾಗಿ ಚರ್ಚಿಸಿದ್ದೇವೆ. ಆದರೆ, ವೇಗಗತಿಯಲ್ಲಿ ಬದಲಾಗುತ್ತಿರುವ ಈ ಸಮಾಜದಲ್ಲಿ 14ನೆಯ ವಯಸ್ಸಿನವರೆಗೆ ಅಥವಾ 8 ವರ್ಷಗಳಲ್ಲಿ ಪಡೆದ ಶಿಕ್ಷಣದ ಜ್ಞಾನ, ಕೌಶಲ್ಯ ಮತ್ತು ಅನುಭವಗಳು ಮಗುವನ್ನು ವೃತ್ತಿಪರ ಜಗತ್ತಿಗೆ ಸಜ್ಜುಗೊಳಿಸಲು ಅಥವಾ ಸಮರ್ಥ ಪ್ರಜೆಯಾಗಲು ಸಾಕಾಗುವುದಿಲ್ಲ. ಹಾಗಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ನಮ್ಮ ಮುಂಗಾಣ್ಕೆಯನ್ನು ಸೆಕೆಂಡರಿ ಶಿಕ್ಷಣದವರೆಗೆ ವಿಸ್ತರಿಸಬೇಕಾದ ಅನಿವಾರ್ಯತೆ ಇಂದು ಒದಗಿಬಂದಿದೆ. ಸೆಕೆಂಡರಿ ಶಿಕ್ಷಣದ ಸಾರ್ವತ್ರೀಕರಣದ ಆವಶ್ಯಕತೆಯನ್ನು ಮನಗಂಡು 1976ರ ರಾಷ್ಟ್ರೀಯ ಶಿಕ್ಷಣ ನೀತಿಯೂ ಈ ಕುರಿತ ಶಿಫಾರಸನ್ನು ಮಾಡಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಈ ಅಭಿಯಾನದ ಕುರಿತು ಈ ಘಟಕದಲ್ಲಿ ವಿವರವಾಗಿ ಗಮನಿಸೋಣ.

## 3.3.3 ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

## 3.3.3.1 ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಪರಿಕಲ್ಪನೆ, ಕಾರ್ಯಚಟುವಟಿಕೆಗಳು ಮತ್ತು ಪ್ರಮುಖ ಕ್ಷೇತ್ರಗಳು

### ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಪರಿಕಲ್ಪನೆ

ಇದು ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಒಂದು ರಾಷ್ಟ್ರೀಯ ಗುರಿ. ದೇಶಾದ್ಯಂತ ಸಾರ್ವಜನಿಕ ಶಾಲೆಗಳಲ್ಲಿ ಪ್ರೌಢಶಿಕ್ಷಣದ ಅಭಿವೃದ್ಧಿಗೆ ಸೀಮಿತವಾದುದು. ಭಾರತ ಸರ್ಕಾರದ ಮಾನವ ಸಂಪನ್ಮೂಲ ವಿಭಾಗದ ಪ್ರಾಯೋಜಿತವಾಗಿರುವ ಕಾರ್ಯಕ್ರಮವಾಗಿರುವ ಇದನ್ನು 2009ರಲ್ಲಿ ಅನುಷ್ಠಾನಕ್ಕೆ ತರಲಾಯಿತು. ಸಮಾಜದ ಉದಯೋನ್ಮುಖ ಬೇಡಿಕೆಗಳು, ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮುಂತಾದವುಗಳಿಂದ ಉಂಟಾದ ಪರಿಣಾಮಕಾರಿ ಬೆಳವಣಿಗೆಗೆ ಸ್ಪಂದಿಸುವ ವಿಭಿನ್ನ ಶೈಕ್ಷಣಿಕ ಕಾರ್ಯಕ್ರಮವಿದು. ಇದು ಭಾರತದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕವಾದ ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯನ್ನು ಗುರಿಯಾಗಿಸಿದ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವೂ ಹೌದು.

### ಅಭಿಯಾನದ ಕಾಣ್ಕೆ

ಯಾವುದೇ ಬೇಧ ಭಾವವಿಲ್ಲದೆ 14–18 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣವನ್ನು ಒದಗಿಸುವುದೇ ಇದರ ಮುಖ್ಯ ಗುರಿ. ಇದರಲ್ಲಿ ಮೂರು ಅಂಶಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಅವು ಉತ್ತಮ ಗುಣಮಟ್ಟದ ಸೆಕೆಂಡರಿ ಶಿಕ್ಷಣಕ್ಕೆ ಲಭ್ಯತೆ, ಅವಕಾಶ, ಮತ್ತು ಅದನ್ನು ಪಡೆಯುವ ಸಾಮರ್ಥ್ಯವಿರುವಂತೆ ನೋಡಿಕೊಳ್ಳುವುದು.

### ಅಭಿಯಾನದ ಧ್ಯೇಯಗಳು

- ಮಕ್ಕಳ ವಾಸಸ್ಥಳದಿಂದ 5 ಕಿ.ಮೀ ಅಂತರದಲ್ಲಿ ಪೌಢಶಾಲೆಯನ್ನೂ 7 ರಿಂದ 10 ಕಿ.ಮೀ.ಗಳ ಅಂತರದಲ್ಲಿ ಉನ್ನತ ಪ್ರೌಢಶಾಲೆಯನ್ನೂ ಒದಗಿಸುವುದು;
- ಅಗತ್ಯವಿರುವಲ್ಲಿ ಬಾಲಕಿಯರಿಗೆ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಮತ್ತು ವಿರಳವಾದ ಪ್ರದೇಶದಲ್ಲಿ ವಾಸಿಸುವ ಮಕ್ಕಳಿಗೆ ವಸತಿ ಶಾಲೆಗಳನ್ನು ಪ್ರಾರಂಭಿಸುವುದು;
- ರಾಜ್ಯದಲ್ಲಿ ಸಾರ್ವತ್ರಿಕ ಅವಕಾಶವನ್ನು, ಆ ಮೂಲಕ ಸೆಕೆಂಡರಿ ಶಿಕ್ಷಣದ ಸಾರ್ವತ್ರೀಕರಣವನ್ನು ಖಚಿತಪಡಿಸಿಕೊಂಡು 2012ರ ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ ವೇಳೆಗೆ ಒಟ್ಟು

ಶಿಕ್ಷಣದ ಅನುಪಾತ (Gross Enrolment Ration) ಶೇ.80 ಹಾಗೂ 2017ರ ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ವೇಳೆಗೆ ಒಟ್ಟು ಶಿಕ್ಷಣದ ಅನುಪಾತ (Gross Enrolment Ration) ಶೇ. 100 ಆಗಿರುವಂತೆ ಖಚಿತಪಡಿಸಿಕೊಳ್ಳುವುದು;

- 2020ರ ವೇಳೆಗೆ ಸಾರ್ವತ್ರಿಕವಾಗಿ ಮಕ್ಕಳು ಶಾಲೆಯನ್ನು ಬಿಡದೆ ಉದ್ದೇಶಿತ ಶಿಕ್ಷಣವನ್ನು ಪೂರ್ಣಗೊಳಿಸಬೇಕು;
- ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದವರಿಗೆ, ಶೈಕ್ಷಣಿಕವಾಗಿ ಹಿಂದುಳಿದವರಿಗೆ, ಬಾಲಕಿಯರಿಗೆ, ಅಸಾಮರ್ಥ್ಯವುಳ್ಳ ಮಕ್ಕಳಿಗೆ, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರಿಗೆ, ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗ ಮುಂತಾಗಿ ಸಮಾಜದ ಅಂಚಿನಲ್ಲಿರುವವರಿಗೆ ಸೆಕೆಂಡರಿ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿಕೊಡುವುದು.
- ಎಲ್ಲ ಪ್ರೌಢಶಾಲೆಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು  ಉತ್ತಮಪಡಿಸುವುದು.

## ಅಭಿಯಾನದ ಉದ್ದೇಶಗಳು

- 9 ಮತ್ತು 10 ನೇ ತರಗತಿಗಳಿಗೆ 2005ರಲ್ಲಿದ್ದ ಒಟ್ಟು ದಾಖಲಾತಿ ಅನುಪಾತವನ್ನು ಶೇ. 52.56 ರಿಂದ  ಯೋಜನೆಯ ಅನ್ವಯದ 5 ವರ್ಷದೊಳಗೆ ಶೇ 75ರಷ್ಟು ಸಾಧಿಸುವುದು;
- ಎಲ್ಲ ಸೆಕೆಂಡರಿ ಶಾಲೆಗಳೂ ನಿಗದಿತ ಮಾನಕಗಳಿಗೆ ಅನುಗುಣವಾಗಿ ಕೆಲಸ ಮಾಡುವಂತೆ ಮಾಡುವುದರ ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು;
- ಲಿಂಗತ್ವ, ಸಾಮಾಜಿಕ–ಆರ್ಥಿಕ ಮತ್ತು ಅಸಾಮರ್ಥ್ಯಗಳ ಅಡೆತಡೆಗಳನ್ನು ನಿವಾರಿಸುವುದು; 12ನೇ ಪಂಚವಾರ್ಷಿಕ ಯೋಜನೆ, ಅಂದರೆ 2017ರ ವೇಳೆಗೆ ಸೆಕೆಂಡರಿ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವನ್ನು ಒದಗಿಸುವುದು;
- ಸೆಕೆಂಡರಿ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವನ್ನು ವಿಸ್ತರಿಸಿ, 2020ರ ವೇಳೆಗೆ ಉಳಿಕೆಯನ್ನು ಸಾರ್ವತ್ರೀಕರಣಗೊಳಿಸುವುದು.

## ಅಭಿಯಾನದ ಚಟುವಟಿಕೆಗಳು ಮತ್ತು ಅದು ಗಮನವಹಿಸಿದ ಕ್ಷೇತ್ರಗಳು

ಅಭಿಯಾನದ ಕಾರ್ಯಚಟುವಟಿಕೆಗಳನ್ನು ಮೂರು ಶೀರ್ಷಿಕೆಗಳ ಅಡಿಯಲ್ಲಿ ವಿಂಗಡಿಸಬಹುದು:

- ಯೋಜನೆ ಮತ್ತು ಮೌಲ್ಯಮಾಪನ
- ಮೇಲ್ವಿಚಾರಣೆ
- ಹಣಕಾಸು ನಿರ್ವಹಣೆ ಮತ್ತು ಸಂಗ್ರಹಣೆ

## ಯೋಜನೆ ಮತ್ತು ಮೌಲ್ಯಮಾಪನ

ವಿಭಿನ್ನ ಸಾಮಾಜಿಕ–ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳ ಮಕ್ಕಳ ಅಗತ್ಯಗಳನ್ನು ಪೂರೈಸುವುದು ಮತ್ತು ಉನ್ನತ ಶಿಕ್ಷಣಕ್ಕೆ ಮುಂದುವರಿಸುವ ಅಥವಾ ಕಾರ್ಯಕ್ಷೇತ್ರವನ್ನು ಪ್ರವೇಶಿಸುವ ಅವರ ಅಗತ್ಯಗಳನ್ನು ಆಶಯಗಳನ್ನು ಪೂರೈಸುವುದನ್ನು ಒಳಗೊಂಡಂತೆ ಇದರ ಲಕ್ಷಣಗಳು ಅನನ್ಯವಾಗಿದ್ದವು. ಅಭಿಯಾನದ ಅನುಷ್ಠಾನಕ್ಕೆ ಅಗತ್ಯ ಯೋಜನೆಗಳು, ವಿಧಾನಗಳು, ಮಧ್ಯಸ್ಥಿಕೆಗಳು ಮತ್ತು ಇತರ ಸಂಪನ್ಮೂಲಗಳನ್ನು ಪೂರೈಸಬೇಕಾಗಿತ್ತು. ಅಧಿಕಾರ ಮತ್ತು ನಿರ್ವಹಣಾ ಕಾರ್ಯಗಳನ್ನು ಪಂಚಾಯತ್ ರಾಜ್ ಮತ್ತು ಇತರ ಪಾಲುದಾರರಿಗೆ ನೀಡಿ ವಿಕೇಂದ್ರೀಕರಣಕ್ಕೆ ಅನುವು ಮಾಡಿದ್ದರಿಂದ ಅಭಿವೃದ್ಧಿ ಮತ್ತು ಮೌಲ್ಯಮಾಪನದಲ್ಲಿ ಪ್ರಾಯೋಗಿಕ ವಿಧಾನಗಳ

ಅಗತ್ಯವಿತ್ತು. ಪರಿಣಾಮಾತ್ಮಕ ಅಂಶಗಳನ್ನು ಎದುರಿಸಲು ಮತ್ತು ಗುಣಮಟ್ಟದ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ಪರಿಹರಿಸಲು ತಾಂತ್ರಿಕ ಜ್ಞಾನದ ಅಗತ್ಯವೂ ಇತ್ತು. ಯೋಜನಾ ತಂಡಗಳ ಸಾಮರ್ಥ್ಯವನ್ನು ನಿರ್ಮಿಸುವುದು ಇವೆಲ್ಲವೂ ಒಂದು ದೊಡ್ಡ ಸವಾಲಾಗಿ ಪರಿಣಮಿಸಿತು

ಯೋಜನೆ ಮತ್ತು ಮೌಲ್ಯಮಾಪನವು ಕೆಳಕಂಡ ಅಂಶಗಳನ್ನು ಒಳಗೊಂಡಿದೆ.

- ಆದ್ಯತೆಯ ನಿರ್ಧಾರ ಮತ್ತು ಪ್ರಕ್ರಿಯೆಗಳ ಪ್ರಾರಂಭ
- ಯೋಜನೆಗಳ ತಯಾರಿಕೆ
- ಯೋಜನೆಗಳ ಸಲ್ಲಿಕೆ ಮತ್ತು ಅಂತಿಮ ಅನುಮೋದನೆ

## ಮೇಲ್ವಿಚಾರಣೆ ಅಥವಾ ಉಸ್ತುವಾರಿ

ಈ ಮೇಲ್ವಿಚಾರಣೆಯು ಎರಡು ಪ್ರಮುಖ ಅಂಶಗಳನ್ನು ಒಳಗೊಂಡಿರುತ್ತದೆ. ಮೊದಲನೆಯದು ಜಂಟಿ ವಿಮರ್ಶೆ ಸಮಿತಿಯ ಅವಲೋಕನಗಳು ಮತ್ತು ಎರಡನೆಯದು ತ್ರೈಮಾಸಿಕ ಮತ್ತು ವಾರ್ಷಿಕ ವರದಿ ತಯಾರಿಕೆ. ಇದರ ಜೊತೆಗೆ ಕೇಂದ್ರ ಮಾನವ ಸಂಪನ್ಮೂಲ ವಿಭಾಗ ಮತ್ತು ರಾಜ್ಯ ಸರ್ಕಾರಗಳು ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆಯನ್ನು ನಿರಂತರವಾಗಿ ಕೈಗೊಂಡವು.

## ಪ್ರಮುಖ ಕ್ಷೇತ್ರಗಳು

ಅಭಿಯಾನವು ಕೆಳಕಂಡ ಕ್ಷೇತ್ರಗಳಿಗೆ ಒತ್ತು ನೀಡಿದೆ

- ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ)
- ಗುಣಮಟ್ಟ ಸುಧಾರಣೆ

ಪ್ರವೇಶ ಮತ್ತು ಸಮಾನತೆ: ಉಚಿತ ಪ್ರವೇಶವನ್ನು ಒದಗಿಸಲು ಮತ್ತು ಅಸ್ತಿತ್ವದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು ಕೆಳಗಿನ ತಂತ್ರಗಳನ್ನು ಜಾರಿಗೆ ತರಲಾಗಿದೆ. ಅವುಗಳೆಂದರೆ, ಅನನುಕೂಲ ಗುಂಪುಗಳನ್ನು ಗುರುತಿಸುವಿಕೆ, ಅಗತ್ಯಗಳ ಪರಿಶೀಲನೆ, ಅಂತರಗಳನ್ನು ಕಡಿಮೆ ಮಾಡಲು ಕಾರ್ಯತಂತ್ರ, ಯೋಜನಾಧಾರಿತ ಪ್ರಸ್ತಾಪ ಇತ್ಯಾದಿ. ಇದಲ್ಲದೆ ಈ ಕೆಳಗಿನವುಗಳ ಬಗ್ಗೆಯೂ ಗಮನ ನೀಡಲಾಗಿದೆ. ಮೈಕ್ರೋ ಯೋಜನೆಯ ಬಗ್ಗೆ ವಿಶೇಷ ಗಮನ, ಆಶ್ರಮದ ಶಾಲೆಗಳ ಉನ್ನತೀಕರಣ, ಹಿಂದುಳಿದ ವರ್ಗದವರು ಹೆಚ್ಚಿರುವ ಕ್ಷೇತ್ರಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು, ದುರ್ಬಲ ವಿಭಾಗದವರಿಗೆ ವಿಶೇಷ ದಾಖಲಾತಿ ವ್ಯವಸ್ಥೆ, ಶಾಲೆಗಳಲ್ಲಿ ಹೆಚ್ಚು ಮಹಿಳಾ ಶಿಕ್ಷಕರು, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ.

## ಭೌತಿಕ ಸೌಲಭ್ಯಗಳು

- ಭೌತಿಕ ಸೌಲಭ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ. ಹೆಚ್ಚುವರಿ ವರ್ಗದ ಕೊಠಡಿಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ಕಲೆ ಮತ್ತು ಕರಕುಶಲ ಕೊಠಡಿಗಳು, ಕುಡಿಯುವ ನೀರು, ಶೌಚಾಲಯಗಳು, ದೂರದೂರಿನಲ್ಲಿರುವ ಶಿಕ್ಷಕರಿಗೆ ವಸತಿ ಸೌಕರ್ಯಗಳು.

## ಶಿಕ್ಷಕರ ಅಭಿವೃದ್ಧಿ

ಇದರಲ್ಲಿ ಹಲವಾರು ಕಾರ್ಯಕ್ರಮಗಳು ಅಡಗಿದ್ದವು. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿಮಾಡಲಾಗಿದೆ.

ತರಬೇತಿಯ ಮಾಡ್ಯೂಲ್ ಅಥವಾ ಶ್ವೇತಪತ್ರ, ಪ್ರಮುಖ ಸಂಪನ್ಮೂಲ ವ್ಯಕ್ತಿಗಳು ಮತ್ತು ತರಬೇತುದಾರರ ತರಬೇತಿ, ಸೇವೆಯಲ್ಲಿರುವವರ ತರಬೇತಿ, ಅಲ್ಪಾವಧಿಯ ವೃತ್ತಿಪರ ತರಬೇತಿ, ಸೈಟ್ ಆಧಾರಿತ ವೃತ್ತಿಪರ ತರಬೇತಿ, ತಜ್ಞರಿಂದ ಸೂಚನೆಗಳು, ನಿಯಮಿತ ಬೆಂಬಲ, ವೀಕ್ಷಣೆ ಮತ್ತು ಪ್ರತಿಕ್ರಿಯೆ, ಹೊಸ ತಂತ್ರಗಳು ಮತ್ತು

ಕಾರ್ಯಕ್ರಮಗಳಲ್ಲಿ ತರಬೇತಿ, ದೂರ ಶಿಕ್ಷಣ ಕಾರ್ಯಕ್ರಮ, ಹೊಸದಾಗಿ ನೇಮಕವಾದ ಶಿಕ್ಷಕರ ತರಬೇತಿ.

ಈ ಎಲ್ಲ ಕಾರ್ಯಕ್ರಮಗಳಿಗೆ ಹಣಕಾಸು ವ್ಯವಸ್ಥೆಯಾಗಿತ್ತು. ಆದರೆ ಇದು ರಾಜ್ಯದ ನಿರ್ದಿಷ್ಟ ಅಗತ್ಯಗಳನ್ನು ಗಮನದಲಿಟ್ಟುಕೊಂಡು ಕಾರ್ಯಕ್ರಮಗಳನ್ನು ಯೋಜಿಸಬೇಕು; ರಾಜ್ಯಗಳು ನವೀನ ವಿಧಾನಗಳನ್ನು ಅನ್ವೇಷಿಸಲು ಬಯಸಿದರೆ ರಾಜ್ಯಗಳೇ ಅದಕ್ಕನುಗುಣವಾಗಿ ತಯಾರಿ ನಡೆಸಬೇಕು.; ಶಿಕ್ಷಕರ ತರಬೇತಿ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ರಾಜ್ಯಗಳು ವಿವಿಧ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಬೇಕು ಎಂಬ ಅಂಶಗಳನ್ನು ಒಳಗೊಂಡಿದ್ದವು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಮುಖ್ಯ ಚಟುವಟಿಕೆಗಳು ಯಾವುವು?
2. ಪ್ರೌಢ ಶಿಕ್ಷಣದ ಮಕ್ಕಳಲ್ಲಿನ ಅಸಮಾನತೆಯನ್ನು ಕಡಿಮೆಮಾಡಲು ಅಳವಡಿಸಿಕೊಂಡ ತಂತ್ರಗಳು ಯಾವುವು?

## 3.3.3.2 ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿನ ತಿದ್ದುಪಡಿಗಳು, ಅನುಷ್ಠಾನ ಮತ್ತು ಯೋಜನೆಗಳ ಮೇಲ್ವಿಚಾರಣೆ

### ಅ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿನ ತಿದ್ದುಪಡಿಗಳು

ಕೇಂದ್ರಸರ್ಕಾರ ಅನುಷ್ಠಾನಗೊಳಿಸಿದ್ದ ಇತರ ಪ್ರೌಢಶಿಕ್ಷಣ ಯೋಜನೆಗಳನ್ನು ಈ ಯೋಜನೆಯಡಿಯಲ್ಲಿ ಅಳವಡಿಸಿಕೊಳ್ಳುವುದು ಒಂದು ಮುಖ್ಯ ತಿದ್ದುಪಡಿಯಾಗಿತ್ತು. ಮಾಹಿತಿ ಸಂವಹನ ತಂತ್ರಜ್ಞಾನ, ಬಾಲಕಿಯರ ಹಾಸ್ಟೆಲ್, ಅಂಗವಿಕಲರಿಗೆ ಅಂತರ್ಗತ ಶಿಕ್ಷಣ, ವೃತ್ತಿಪರ ಶಿಕ್ಷಣ ಮುಂತಾದವುಗಳು ಈ ಯೋಜನೆಯಡಿಯಲ್ಲಿ ಸೇರಿಕೊಂಡವು. ಇದರಿಂದಾಗಿ ಗಮನಾರ್ಹ ಹಣಕಾಸು ಉಳಿತಾಯ ಮಾತ್ರವಲ್ಲದೆ ಯೋಜನೆಗಳ ನಿಬಂಧನೆಗಳು ತರ್ಕಬದ್ಧವಾಗಲು ಕಾರಣವಾಯಿತು. ಈ ಅಭಿಯಾನದ ಸವಲತ್ತುಗಳನ್ನು ಅನುದಾನಿತ ಮತ್ತು ಉನ್ನತ ಪ್ರೌಢ ಶಿಕ್ಷಣ ಶಾಲೆಗಳಿಗೆ ವಿಸ್ತರಿಸಿದ್ದರಿಂದ ಇವುಗಳೆಲ್ಲವೂ ಆರ್.ಎಮ್.ಎಸ್.ಎ. ಯ ಘಟಕಗಳಾದವು.

### ಆ. ಅನುಷ್ಠಾನದ ಯೋಜನೆ

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಚಟುವಟಿಕೆಗಳನ್ನು ಸಂಘಟಿಸಲು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯವು ಕೇಂದ್ರ ಬಿಂದುವಾಯಿತು. ರಾಜ್ಯದ ಅನುಷ್ಠಾನ ಸಂಘಸಂಸ್ಥೆಗಳು ಸಹಾಯ ಹಸ್ತ ನೀಡಿದವು. ಕಲಿಕೆಯ ಪ್ರಕ್ರಿಯೆಗಳು, ಪಠ್ಯಕ್ರಮ, ಬೋಧನಾ–ಕಲಿಕಾ ಸಾಮಗ್ರಿಗಳು, ಐಸಿಟಿ ಶಿಕ್ಷಣ, ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯ ಕಾರ್ಯವಿಧಾನಗಳಲ್ಲಿ ಸುಧಾರಣೆಗಳನ್ನು ತರಲು ರಾಷ್ಟ್ರೀಯ ಸಂಪನ್ಮೂಲ ತಂಡವು ಮಾರ್ಗದರ್ಶನ ನೀಡಿತು. ಇದರ ಮತ್ತೊಂದು ಘಟಕವಾದ ತಾಂತ್ರಿಕ ಸಹಾಯ ತಂಡವು ರಾಷ್ಟ್ರ ಮತ್ತು ರಾಜ್ಯ ಮಟ್ಟದ ತಂಡಗಳಿಗೆ ತಾಂತ್ರಿಕ ಮತ್ತು ಕಾರ್ಯಾಚರಣೆಯ ಬೆಂಬಲ ಮತ್ತು ಪರಿಣತಿಯನ್ನು ನೀಡಿತು.

### ಇ. ಯೋಜನಾ ಮೇಲ್ವಿಚಾರಣ ವ್ಯವಸ್ಥೆ

ಯೋಜನಾ ಮೇಲ್ವಿಚಾರಣಾ ವ್ಯವಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಅನುಷ್ಠಾನವನ್ನು ಸುಸೂತ್ರವಾಗಿ ನಿರ್ವಹಿಸಲು ಈ ವ್ಯವಸ್ಥೆಯು ಪ್ರಮುಖ ಅಂಶವಾಗಿದ್ದಿತು. ಇದಕ್ಕಾಗಿ ಒಂದು ವೆಬ್ ಸೈಟ್ ರೂಪಿಸಲಾಗಿದ್ದು ಇದರಡಿಯಲ್ಲಿ ಅಗತ್ಯ ಮಾಹಿತಿಯನ್ನು ನೀಡಲಾಗಿತ್ತು. ರಾಜ್ಯಗಳು ತಮ್ಮ ಮಾಸಿಕ ಮತ್ತು ಇತರ ನಿಯತಕಾಲಿಕ ವರದಿಗಳನ್ನು ಇದರಲ್ಲಿ ಸೇರಿಸಬಹುದಾಗಿತ್ತು ಹಾಗೂ ವಿವಿಧ ಘಟಕಗಳ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆಯಬಹುದಾಗಿತ್ತು. ಇದರ ಆಧಾರದ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದಾಗಿತ್ತು. ಇದಲ್ಲದೆ ಇತರ ಪ್ರಯೋಜನಗಳೂ ಉಂಟಾದವು. ಅವಶ್ಯವಿದ್ದಲ್ಲಿ ಮಾತ್ರ ಪೇಪರ್ ಪ್ರತಿಯನ್ನು ಸಲ್ಲಿಸಬಹುದು, ಅನುಮೋದನೆ, ಹಣಕಾಸು ಬಿಡುಗಡೆ ಮುಂತಾದವು ಪಾರದರ್ಶಕವಾದವು, ಹಣಕಾಸು ನಿರ್ವಹಣೆ ಸುಗಮವಾಯಿತು.

2015–16 ರ ವರದಿಯ ಪ್ರಕಾರ ಅಭಿಯಾನದ ಸಾಧನೆಗಳು ನಿರೀಕ್ಷಿತ ಮಟ್ಟವನ್ನು ತಲುಪಲಿಲ್ಲ. 'ಪ್ರೌಢ ಶಿಕ್ಷಣದಲ್ಲಿ ಅಸಮಾನತೆ : ಆರ್.ಎಮ್.ಎಸ್.ಎ. ಯ ಒಂದು ಅಧ್ಯಯನ' ಎಂಬ ಸಂಶೋಧನಾತ್ಮಕ ಅಧ್ಯಯನದಲ್ಲಿ ಈ ಕೊರತೆಗೆ ಕೆಳಕಂಡ ಕಾರಣಗಳನ್ನು ಸೂಚಿಸಲಾಗಿದೆ.

ಶಿಕ್ಷಕರ ಕೊರತೆ, ವಿದ್ಯಾರ್ಥಿ– ಶಿಕ್ಷಕರ ಅನುಪಾತ, ಅರ್ಹ ಮತ್ತು ತರಬೇತಿ ಪಡೆದ ಶಿಕ್ಷಕರ ಕೊರತೆ, ನಾಗರಿಕ ಕೆಲಸದಲ್ಲಿ ವಿಳಂಬ ಇತ್ಯಾದಿ. ಇವೆಲ್ಲವನ್ನೂ ಮತ್ತೆ ವಿವಿಧ ರೀತಿಯ ಸಂಪನ್ಮೂಲಗಳ ಕೊರತೆಗೆ ಸಂಬಂಧಿಸಿದುದೆಂದು ಹೇಳಬಹುದು. ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು 'ಸಮಗ್ರ ಶಿಕ್ಷಣ' ಯೋಜನೆಯಡಿ ಸೇರಿಸಲಾಗಿದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿನ ಮುಖ್ಯ ತಿದ್ದುಪಡಿ ಏನು? ಅದರಿಂದಾದ ಪ್ರಯೋಜನವೇನು?
2. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಲ್ಲಿನ ಮೇಲ್ವಿಚಾರಣೆಯ ವ್ಯವಸ್ಥೆಯನ್ನು ವಿವರಿಸಿ.

## 3.3.4 ಸಾರಾಂಶಿಸೋಣ

- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಮಾಧ್ಯಮಿಕ ಶಿಕ್ಷಣಕ್ಕೆ ಮೀಸಲಾದುದು.
- ಇದು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಸಂಯೋಜನೆ.
- 14–18 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ ಯಾವುದೇ ಬೇಧವಿಲ್ಲದೆ ಉತ್ತಮ ಗುಣಮಟ್ಟದ ಮಾಧ್ಯಮಿಕ ಶಿಕ್ಷಣವನ್ನು ನೀಡುವುದೇ ಇದರ ಮುಖ್ಯ ಗುರಿ.
- ಅಭಿಯಾನವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಸೂಕ್ತ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸಿದೆ.
- ಮಾಹಿತಿ ಸಂವಹನ ತಂತ್ರಜ್ಞಾನ, ಗುಣಮಟ್ಟದ ಸುಧಾರಣೆ, ಎಲ್ಲರಿಗೂ ಪ್ರವೇಶ ಮತ್ತು ಸಮಾನತೆ ಮುಂತಾದ ಕ್ಷೇತ್ರಗಳಿಗೆ ಒತ್ತು ನೀಡಿದೆ.
- ಶಿಕ್ಷಕರ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಒಳಗೊಂಡಿದೆ.
- ವಿವಿಧ ಪ್ರಯೋಜನಗಳನ್ನು ಗಮನಿಸಿ ಈ ಅಭಿಯಾನವನ್ನು 'ಸಮಗ್ರ ಶಿಕ್ಷ' ಯೋಜನೆಯ ಅಡಿಯಲ್ಲಿ ಸೇರಿಸಲಾಗಿದೆ.

## 3.3.5 'ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1 ಮತ್ತು 2' ಉತ್ತರಗಳು

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಕಲಿಕಾ ಸಾಮಗ್ರಿ ಭಾಗ 3.3.3.1 ಗಮನಿಸಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಕಲಿಕಾ ಸಾಮಗ್ರಿ ಭಾಗ 3.3.3.2 ಗಮನಿಸಿ.

## 3.3.6. ಘಟಕಾಂತ್ಯ ಅಭ್ಯಾಸಗಳು

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಕಾರ್ಯಚಟುವಟಿಕೆಗಳು ಯಾವುವು? ಅದರ ಗುರಿಗಳನ್ನು ಸಾಧಿಸುವಲ್ಲಿ ಉಂಟಾದ ಅಡಚಣೆಗಳೇನು? ವಿವರಿಸಿ.

## 3.3.7. ಪರಾಮರ್ಶನ ಸೂಚಿ


1. http://www.rmsaindia.gov.in/en/prog-management.html
2. http://mhrd.gov.in/rmsa
3. https://en.wikipedia.org/wiki/Rashtriya_Madhyamik_Shiksha_Abhiyan
4. https://www.india.gov.in/spotlight/rashtriya-madhyamik-shiksha-abhiyan#tab=tab-1
5. http://shodhganga.inflibnet.ac.in/bitstream/10603/72876/10/10_chapter%205.pdf


**************

# ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು

## ಘಟಕ–4 : ಶಾಲಾ ಮಕ್ಕಳಿಗಾಗಿ ವಿಶೇಷ ಯೋಜನೆಗಳು

**ಘಟಕದ ರಚನೆ :**


3.4.1. ಕಲಿಕೆಯ ಉದ್ದೇಶಗಳು

3.4.2. ಪೀಠಿಕೆ

3.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.4.3.1. ಬಾಲಕಿಯರ ಶಿಕ್ಷಣಕ್ಕಾಗಿ ವಿಶೇಷ ಯೋಜನೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

3.4.3.2. ಅಸಾಮರ್ಥ್ಯವುಳ್ಳವರ ಶಿಕ್ಷಣಕ್ಕಾಗಿ ವಿಶೇಷ ಯೋಜನೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

3.4.4. ಸಾರಾಂಶಿಸೋಣ

3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

3.4.6. ಘಟಕಾಂತ್ಯ ಅಭ್ಯಾಸಗಳು

3.4.7. ಪರಾಮರ್ಶನ ಸೂಚಿ


### 3.4.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ರಾಷ್ಟ್ರದಲ್ಲಿ ಬಾಲಕಿಯರ ಶಿಕ್ಷಣಕ್ಕಾಗಿ ಇರುವ ವಿಶೇಷ ಯೋಜನೆಗಳನ್ನು ವಿವರಿಸುವರು;
- ರಾಷ್ಟ್ರದಲ್ಲಿ ಅಸಾಮರ್ಥ್ಯವಿರುವವರ ಶಿಕ್ಷಣಕ್ಕಾಗಿ ಇರುವ ವಿಶೇಷ ಯೋಜನೆಗಳನ್ನು ವಿವರಿಸುವರು; ಮತ್ತು
- ಬಾಲಕಿಯರನ್ನು ಮತ್ತು ಅಸಾಮರ್ಥ್ಯವಿರುವವರನ್ನು ಕಲಿಯಲು ಅಭಿಪ್ರೇರಿಸುವರು.

### 3.4.2 ಪೀಠಿಕೆ

ಹಿಂದಿನ ಘಟಕಗಳಲ್ಲಿ ರಾಷ್ಟ್ರದ ಮತ್ತು ವೈಯಕ್ತಿಕ ಪ್ರಗತಿಗೆ ಶಿಕ್ಷಣ ಏಕೆ ಮತ್ತು ಹೇಗೆ ಅವಶ್ಯಕ ಎಂಬುದನ್ನು ಮನಗಂಡಿದ್ದೀರಿ. ಶಿಕ್ಷಣದ ಮಹತ್ತರವಾದ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ನಮ್ಮ ದೇಶದ ಶಿಕ್ಷಣವು ಅನೇಕ ಮೈಲಿಗಲ್ಲುಗಳನ್ನು ದಾಟಿ ಇಂದಿನ ಹಂತವನ್ನು ತಲುಪಿದೆ. ಶಿಕ್ಷಣದ ಅವಕಾಶಕ್ಕಾಗಿ ಮತ್ತು ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದಕ್ಕಾಗಿ ನಮ್ಮ ರಾಷ್ಟ್ರವು ಅನೇಕ ಸೌಕರ್ಯಗಳನ್ನು ಒದಗಿಸುತ್ತಲೇ ಬಂದಿದೆ. ಈ ಸೌಲಭ್ಯಗಳಲ್ಲಿ ಸಮಾನತೆ ಇರಬೇಕು ಎಂಬುದು ಸತ್ಯವಾದರೂ ಎಲ್ಲರಿಗೂ ಒದಗಿಸುವ ಸೌಲಭ್ಯಗಳು ಸಮನಾಗಿಯೇ ಇರಬೇಕಾಗಿಲ್ಲ ಎಂಬುದನ್ನೂ ನಾವು ಈಗಾಗಲೇ 'ಸಮತೆ'ಯ ಪರಿಕಲ್ಪನೆಯ ಅಡಿಯಲ್ಲಿ ಸ್ಪಷ್ಟಪಡಿಸಿಕೊಂಡಿದ್ದೇವೆ.

ಈ ಸೌಲಭ್ಯಗಳು ವಿದ್ಯಾರ್ಥಿಗಳ ಅಗತ್ಯಗಳನ್ನು ಅವಲಂಬಿಸಿರುತ್ತವೆ. ಕೆಲವು ಸೌಲಭ್ಯಗಳು ಸಮಾನವಾಗಿದ್ದರೂ ಕೆಲವು ಅಗತ್ಯಗಳಿಗನುಗುಣವಾಗಿ ಭಿನ್ನವಾಗಿರುತ್ತದೆ. ನಿಮ್ಮ ಶಾಲೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಒದಗಿಸುವ ಈ ಸಮಾನ ಹಾಗೂ ವಿಶೇಷ ಸೌಲಭ್ಯಗಳನ್ನು ಪಟ್ಟಿಮಾಡಿ.

**ಅಭ್ಯಾಸ : I**

| ಸಮಾನ ಸೌಲಭ್ಯಗಳು | ವಿಶೇಷ ಸೌಲಭ್ಯಗಳು |
|---|---|
| | |

ಈ ಸೌಲಭ್ಯಗಳ ಅರಿವು ಅಧ್ಯಾಪಕರಿಗೆ, ಶಾಲೆಯ ಎಲ್ಲ ಸಿಬ್ಬಂದಿಗಳಿಗೆ ಪೋಷಕರಿಗೆ ಹಾಗೂ ಸಮುದಾಯದ ಎಲ್ಲರಿಗೂ ಇರಬೇಕಾದುದು ಅಗತ್ಯ. ಪ್ರಮುಖವಾಗಿ ಬಾಲಕಿಯರ ಶಿಕ್ಷಣ ಮತ್ತು ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣಕ್ಕೆ ಇರುವ ವಿಶೇಷ ಯೋಜನೆಗಳನ್ನು ಈ ಘಟಕದಲ್ಲಿ ಚರ್ಚಿಸಬೇಕಾಗಿದೆ. ಅಸಾಮರ್ಥ್ಯವಿರುವ ಮಕ್ಕಳ ಶಿಕ್ಷಣಕ್ಕೆ ಇರುವ ವಿಶೇಷ ಯೋಜನೆಗಳನ್ನು ಅಂತರ್ಗತ ಶಿಕ್ಷಣ ಕೋರ್ಸಿನ 1.6 ಶೀರ್ಷಿಕೆಯ ಅಡಿಯಲ್ಲಿ ವಿವರವಾಗಿ ಚರ್ಚಿಸಿರುವುದರಿಂದ ಈ ಘಟಕದಲ್ಲಿ ಬಾಲಕಿಯರ ಶಿಕ್ಷಣಕ್ಕಾಗಿ ಇರುವ ವಿಶೇಷ ಯೋಜನೆಗಳನ್ನು ಗಮನಿಸೋಣ.

## 3.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.4.3.1. ಬಾಲಕಿಯರ ಶಿಕ್ಷಣಕ್ಕಾಗಿ ವಿಶೇಷ ಯೋಜನೆಗಳು

ಬಾಲಕಿಯರ ಶಿಕ್ಷಣಕ್ಕಾಗಿ ನಮ್ಮ ದೇಶದಲ್ಲಿ ವಿಶೇಷ ಯೋಜನೆಗಳಿವೆ. ಅವುಗಳನ್ನು ವಿವರವಾಗಿ ತಿಳಿಯೋಣ.

### ಎ) ಬಾಲಿಕಾ ಸಮೃದ್ಧಿ ಯೋಜನೆ

ಈ ಯೋಜನೆಯು ಭಾರತ ಸರ್ಕಾರದಿಂದ 15ನೇ ಆಗಸ್ಟ್ 1997ರಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಉದ್ದೇಶಗಳು:

- ಹೆಣ್ಣುಮಗುವಿನ ಜನನದ ಕುರಿತ ತಾಯಿಯ ಮತ್ತು ಸಮುದಾಯದವರ ಋಣಾತ್ಮಕ ಮನೋಭಾವವನ್ನು ಬದಲಿಸುವುದು;
- ಶಾಲೆಗಳಲ್ಲಿ ಹೆಣ್ಣುಮಕ್ಕಳ ದಾಖಲಾತಿ ಮತ್ತು ಉಳಿಕೆಯನ್ನು ಹೆಚ್ಚಿಸುವುದು;
- ಹೆಣ್ಣುಮಕ್ಕಳಿಗೆ ಆದಾಯ ತರುವ ಚಟುವಟಿಕೆಗಳಿಗೆ ಸಹಾಯಮಾಡುವುದು.

**ವ್ಯಾಪ್ತಿ**

ಈ ಯೋಜನೆಯು ಗ್ರಾಮಾಂತರ ಹಾಗೂ ನಗರ ಪ್ರದೇಶಗಳೆರಡನ್ನೂ ಒಳಗೊಂಡಿತ್ತು

**ಅರ್ಹತೆ:**

ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬದ ಹೆಣ್ಣುಮಕ್ಕಳಿಗೆ, 15ನೇ ಆಗಸ್ಟ್ 1997ರ ನಂತರ ಜನಿಸಿದವರಿಗೆ, ಒಂದು ಮನೆಯಲ್ಲಿ ಇಬ್ಬರು ಹೆಣ್ಣುಮಕ್ಕಳಿಗೆ ಮಾತ್ರ ಸೀಮಿತ.

## ಯೋಜನೆಯ ಲಾಭಗಳು

ಜನನದ ನಂತರ ಅನುದಾನದ ಮೊತ್ತ ರೂ 500/–

ಪ್ರತಿ ತರಗತಿಯನ್ನು ಯಶಸ್ವಿಯಾಗಿ ಮುಗಿಸಿದ ನಂತರ ವಾರ್ಷಿಕ ವಿದ್ಯಾರ್ಥಿವೇತನ.

| ವರ್ಗ | ವಾರ್ಷಿಕ ವಿದ್ಯಾರ್ಥಿವೇತನದ ಮೊತ್ತ |
|---|---|
| 1 ರಿಂದ 3 | ರೂ. 300/– ಪ್ರತಿ ವರ್ಗಕ್ಕೆ |
| 4 | ರೂ. 500/– |
| 5 | ರೂ. 600/– |
| 6–7 | ರೂ. 700/– ಪ್ರತಿ ವರ್ಗಕ್ಕೆ |
| 8 | ರೂ. 800/– |
| 9–10 | ರೂ. 1,000/– ಪ್ರತಿ ವರ್ಗಕ್ಕೆ |

## ಬಿ) ಬೇಟಿ ಬಚಾವೋ ಬೇಟಿ ಪಢಾವೋ

ಭಾರತೀಯ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ತೋರುವ ತಾರತಮ್ಯವನ್ನು ಹಾಗೂ ಲಿಂಗ ಅಸಮಾನತೆಯನ್ನು ಗುರುತಿಸಿ ನಿವಾರಿಸುವ ಗುರಿ ಹೊಂದಿದ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮವಿದು. ಈ ಯೋಜನೆಯು 22ನೇ ಜನವರಿ 2015ರಂದು ಪಾಣಿಪಟ್, ಹರಿಯಾಣದಲ್ಲಿ ಪ್ರಧಾನಮಂತ್ರಿಯವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಹೆಣ್ಣು ಮಗುವಿನ ಲಿಂಗ ಅನುಪಾತ ಕ್ಷೀಣಿಸುತ್ತಿರುವುದನ್ನು ತಡೆಯುವುದು, ಮಹಿಳಾ ಸಬಲೀಕರಣದ ಮೂಲಕ ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ಈ ಪ್ರಯತ್ನಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ಮಾನವ ಸಂಪನ್ಮೂಲ ಸಚಿವಾಲಯದ ಸಹಭಾಗಿತ್ವದೊಂದಿಗೆ ಸಾಧ್ಯವಾದವು.

### ಯೋಜನೆಯ ಉದ್ದೇಶಗಳು

- ಹೆಣ್ಣುಮಗುವಿನ ಜನನದಿಂದ ಸಂಭ್ರಮಿಸುವಂತೆ ಮಾಡುವುದು, ಹೆಣ್ಣುಮಕ್ಕಳ ಮೇಲಿನ ಹಿಂಸೆ ಮತ್ತು ದೌರ್ಜನ್ಯಗಳನ್ನು ತಡೆಗಟ್ಟುವುದು;
- ಲಿಂಗ ನಿರ್ಧಾರಕ ಪರೀಕ್ಷೆಗಳನ್ನು ತಡೆಹಿಡಿಯುವುದು ಮತ್ತು ಹೆಣ್ಣುಮಗು ಎಂಬ ತಾರತಮ್ಯವನ್ನು ಹೋಗಲಾಡಿಸುವುದು;
- ಬಾಲಕಿಯರನ್ನು ರಕ್ಷಿಸಿ ಅವರ ಬದುಕನ್ನು ಖಚಿತಪಡಿಸುವುದು;
- ಶಿಕ್ಷಣ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಬಾಲಕಿಯರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳುವುದು.

### ಯೋಜನೆಯ ಪ್ರಮುಖ ಲಕ್ಷಣಗಳು :

- ಶಾಲಾ ನಿರ್ವಹಣಾ ಸಮಿತಿಯ ಮೂಲಕ ಬಾಲಕಿಯರ ಸಾರ್ವತ್ರಿಕ ದಾಖಲಾತಿ ಮತ್ತು ಉಳಿಕೆಯನ್ನು ಖಚಿತಪಡಿಸಿಕೊಳ್ಳುವುದು;

- ಬಾಲಿಕಾ ಮಂಚ್' ಮೂಲಕ ಬಾಲಕಿಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ವೇದಿಕೆಗಳನ್ನು ಸೃಷ್ಟಿಸುವುದು;
- ಹೆಣ್ಣುಮಕ್ಕಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದು;
- ಕಸ್ತೂರ್‌ಬಾ ಬಾಲಿಕಾ ವಿದ್ಯಾಲಯಗಳನ್ನು ನಿರ್ಮಾಣ ಮಾಡುವುದು;
- ಪ್ರೌಢಶಾಲೆಗಳಲ್ಲಿ ಶಾಲೆ ಬಿಟ್ಟ ಬಾಲಕಿಯರ ಪುನರ್ ನೋಂದಣಿಗಾಗಿ ಶಿಬಿರಗಳನ್ನು ಆಯೋಜಿಸುವುದು;
- ಪ್ರೌಢಶಾಲೆ ಮತ್ತು ಉನ್ನತ ಪ್ರೌಢಶಾಲೆಗಳ ಬಾಲಕಿಯರಿಗೆ ವಸತಿ ನಿಲಯಗಳನ್ನು ನಿರ್ಮಿಸುವುದು;
- ಸರ್ವಶಿಕ್ಷಾ ಅಭಿಯಾನದ ಮೂಲಕ ಶಿಕ್ಷಕರು ಮಕ್ಕಳ ಲಿಂಗ ಅನುಪಾತದ ಮಾಹಿತಿ ಒದಗಿಸುವಂತೆ ಮಾಡುವುದು;
- ಶಿಕ್ಷಣ ಸಂಸ್ಥೆಗಳನ್ನು ಉನ್ನತೀಕರಿಸಿ ಬಾಲಕಿಯರ ಸ್ನೇಹಿ ಶಾಲೆಗಳು, ವಸತಿ ಶಾಲೆಗಳಲ್ಲಿ ನೀತಿ ಸಂಹಿತೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸಾಧನೆ ಮಾಡಿದ ಬಾಲಕಿಯರಿಗೆ ಜಿಲ್ಲಾ ಮಟ್ಟದಲ್ಲಿ ಸನ್ಮಾನ ಹಾಗೂ ಪ್ರಶಸ್ತಿಗಳನ್ನು ನೀಡಲು ಪ್ರಾರಂಭಿಸುವುದು.

**ಮಾರ್ಗೋಪಾಯಗಳು :**

- ಸಾಮಾಜಿಕ ಚಲನೆ ಮತ್ತು ಸಂವಹನ ಶಿಬಿರಗಳ ಮೂಲಕ ಹೆಣ್ಣುಮಗುವಿಗೆ ಸಮಾನ ಸ್ಥಾನ ಸೃಷ್ಟಿಸಿ ಅವಳು ಶಿಕ್ಷಣ ಮುಂದುವರಿಸಲು ಅನುವು ಮಾಡಿಕೊಡುವುದು;
- ಹೆಣ್ಣುಮಕ್ಕಳ ಜನನ ಕಾಲದ ಅನುಪಾತ ಕಡಿಮೆ ಇರುವ ಪ್ರದೇಶಗಳಲ್ಲಿ ಹಾಗೂ ತೀವ್ರ ಲಿಂಗತ್ವ ಸಮಸ್ಯೆ ಇರುವ ಜಿಲ್ಲೆಗಳಲ್ಲಿ ಕ್ರಮಗಳನ್ನು ಕೇಂದ್ರೀಕರಿಸುವುದು;
- ಪಂಚಾಯತ್ ರಾಜ್ ಸಂಸ್ಥೆಗಳನ್ನು/ನಗರ ಸ್ಥಳೀಯ ಸಂಸ್ಥೆಗಳನ್ನು / ತೃಣಮೂಲ ಕಾರ್ಯಕರ್ತರನ್ನು ಸಾಮಾಜಿಕ ಬದಲಾವಣೆಗೆ ವೇಗವರ್ಧಕಗಳಂತೆ ಕೆಲಸಮಾಡುವುದಕ್ಕೆ ಚಾಲನೆ ನೀಡುವುದು;
- ವಿವಿಧ ಸೇವೆಗಳು ಲಿಂಗತ್ವ ಮತ್ತು ಮಕ್ಕಳ ಹಕ್ಕುಗಳಿಗೆ ಸಂವೇದನಾಶೀಲವಾಗಿರುವಂತೆ ನೋಡಿಕೊಳ್ಳುವುದು; ಮತ್ತು
- ಜಿಲ್ಲೆ, ಬ್ಲಾಕ್ ಮತ್ತು ತೃಣಮೂಲ ಕಾರ್ಯಕರ್ತರ ಹಂತಗಳಲ್ಲಿ ಅಂತರ್ ಕ್ಷೇತ್ರೀಯ ಮತ್ತು ಅಂತರ್ ಸಾಂಸ್ಥಿಕ ಸಂಯೋಜನೆಗಳನ್ನು ಬಲಗೊಳಿಸುವುದು.

## ಸಿ) ಸುಕನ್ಯಾ ಸಮೃದ್ಧಿ ಯೋಜನೆ :

ಇದು ಭೇಟಿ ಬಚಾವೋ ಭೇಟಿ ಪಡಾವೋ ಕಾರ್ಯಕ್ರಮದ ಒಂದು ಅಂಗ. ಇದು ಸಣ್ಣಮಟ್ಟದ ಒಂದು ಸೇವಾ ಯೋಜನೆ. ಹೆಣ್ಣುಮಗುವಿನ ಪೋಷಕರನ್ನು ಆರ್ಥಿಕವಾಗಿ ಸ್ವತಂತ್ರಗೊಳಿಸಿ ಅವರ ಮಕ್ಕಳ ಶಿಕ್ಷಣ ಮತ್ತು ವಿವಾಹಕ್ಕೆ ನೆರವು ಮಾಡಿಕೊಡುವ ಯೋಜನೆ ಇದು. ಜನವರಿ 2015ರಲ್ಲಿ ಇದು ಪ್ರಾರಂಭವಾಯಿತು. ಹೆಣ್ಣುಮಗುವು 10ವರ್ಷ ತಲುಪುವವರೆಗೆ ಪೋಷಕರು ಆ ಮಗುವಿನ ಹೆಸರಿನಲ್ಲಿ ಒಂದು ಬ್ಯಾಂಕ್ ಖಾತೆಯನ್ನು ತೆರೆಯುವುದು. ಈ ಖಾತೆ ತೆರೆಯಲು ರೂ 250 ಪಾವತಿಸಬೇಕು. ಬಡ್ಡಿದರ ಶೇ. 8.1. ಇದಕ್ಕೆ ತೆರಿಗೆ ವಿನಾಯಿತಿ ಇದೆ. ಸುಕನ್ಯಾ ಸಮೃದ್ಧಿ ಖಾತೆಯಲ್ಲಿರುವ ಹಣ ಖಾತೆ ಆರಂಭಿಸಿ 21 ವರ್ಷವಾದಾಗ ಪೂರ್ಣಅವಧಿ ತಲುಪುತ್ತದೆ. ಈ ಹಣದಲ್ಲಿ ಶೇ. 50ರಷ್ಟನ್ನು 18 ವರ್ಷಕ್ಕೆ ಹಿಂಪಡೆಯಬಹುದು. ಅವಧಿ ಪೂರ್ಣವಾದಾಗ ಪೂರ್ಣ ಹಣವನ್ನು ಹಿಂಪಡೆಯಬಹುದು.

## ಡಿ) ಬೇಗಂ ಹಜರತ್ ಮಹಲ್ ರಾಷ್ಟ್ರೀಯ ವಿದ್ಯಾರ್ಥಿನಿ ವೇತನ

ಇದು ಅಲ್ಪಸಂಖ್ಯಾತ ಹೆಣ್ಣುಮಕ್ಕಳಿಗೆ ಇರುವ ಶೈಕ್ಷಣಿಕ ಯೋಜನೆ. ಇದನ್ನು ಮೊದಲಿಗೆ ಮೌಲಾನಾ ಆಜಾದ್ ರಾಷ್ಟ್ರೀಯ ವಿದ್ಯಾರ್ಥಿವೇತನ ಎಂದು ಕರೆಯಲಾಗುತ್ತಿತ್ತು. ಪ್ರತಿಭಾವಂತ ಹೆಣ್ಣುಮಕ್ಕಳಿಗೆ ಆರ್ಥಿಕ ಸಹಾಯ ಒದಗಿಸುವುದು ಇದರ ಉದ್ದೇಶ. ಈ ಯೋಜನೆಯನ್ನು ಆಗಿನ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು 2003ರಲ್ಲಿ ಜಾರಿಗೆ ತಂದರು.

**ಅರ್ಹತೆ:**

- ಆರು ಸೂಚಿತ ಅಲ್ಪಸಂಖ್ಯಾತ ಹೆಣ್ಣುಮಕ್ಕಳಿಗೆ ಮಾತ್ರ ಇದು ಅನ್ವಯವಾಗುತ್ತದೆ. ಇಸ್ಲಾಂ, ಕ್ರಿಶ್ಚಿಯನ್, ಸಿಕ್, ಬೌದ್ಧರು, ಜೈನರು ಮತ್ತು ಪಾರ್ಸಿ ಹೆಣ್ಣುಮಕ್ಕಳಿಗೆ ಮಾತ್ರ.
- 9 ರಿಂದ 12ನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ, ಪರೀಕ್ಷೆಯಲ್ಲಿ ಶೇ.50ರಷ್ಟು ಅಂಕಗಳಿಸಿರುವ ಹೆಣ್ಣುಮಕ್ಕಳಿಗೆ ಮಾತ್ರ;
- ಪೋಷಕರ ವಾರ್ಷಿಕ ವರಮಾನ ಎಲ್ಲಾ ಮೂಲಗಳೂ ಸೇರಿ 2ಲಕ್ಷ ಮೀರಬಾರದು;
- ಒಂದು ವಿದ್ಯಾರ್ಥಿನಿ ಒಂದು ಅರ್ಜಿ ಮಾತ್ರ ಸಲ್ಲಿಸಬೇಕು;
- ವಿದ್ಯಾರ್ಥಿನಿ ವೇತನವನ್ನು ಶಾಲೆಯ ಶುಲ್ಕ, ಲೇಖನ ಸಾಮಗ್ರಿಗಳನ್ನು ಖರೀದಿಸಲು ಹಾಗೂ ವಸತಿ ನಿಲಯದ ಖರ್ಚು ಎಂದು ನೀಡಲಾಗುತ್ತದೆ.
- 9 ಮತ್ತು 10ನೆಯ ತರಗತಿಯವರಿಗೆ ಗರಿಷ್ಠ ರೂ. 10,000/– ಹಣವನ್ನು ರೂ. 5000/–ರ ಎರಡು ಕಂತುಗಳಲ್ಲಿ ಕೊಡಲಾಗುತ್ತದೆ.
- 11 ಮತ್ತು 12ನೇ ತರಗತಿಯವರಿಗೆ ಗರಿಷ್ಠ ರೂ. 12,000/– ಹಣವನ್ನು ರೂ. 6000/–ರ ಎರಡು ಕಂತುಗಳಲ್ಲಿ ಕೊಡಲಾಗುತ್ತದೆ.

## ಇ) ಪ್ರೌಢಶಾಲೆಯ ಹೆಣ್ಣುಮಕ್ಕಳಿಗೆ ರಾಷ್ಟ್ರೀಯ ಪ್ರೋತ್ಸಾಹ ಯೋಜನೆ

ಇದು ಮೇ 2008ರಲ್ಲಿ ಕೇಂದ್ರದಿಂದ ಅನುಮೋದನೆಯಾಗಿ ಪ್ರಾರಂಭವಾದ ಯೋಜನೆ. 14–18ವರ್ಷಗಳ ನಡುವಿನ ಹೆಣ್ಣುಮಕ್ಕಳಿಗೆ ವಿಶೇಷವಾಗಿ 8ನೇ ತರಗತಿ ಉತ್ತೀರ್ಣರಾಗಿರುವವರಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಿದ ಯೋಜನೆ ಇದು. ಅರ್ಹ ಹೆಣ್ಣುಮಗಳ ಹೆಸರಿನಲ್ಲಿ ಅಂಚೆ ಇಲಾಖೆ ಅಥವಾ ಸಾರ್ವಜನಿಕ ಕ್ಷೇತ್ರದ ಬ್ಯಾಂಕ್ ಗಳಲ್ಲಿ ರೂ. 3,000/– ಮೊತ್ತದ ಹಣವನ್ನು ಠೇವಣಿ ಇಡಲಾಗುತ್ತದೆ. ಈ ಹಣ ಠೇವಣಿ ಇಟ್ಟ ದಿನಾಂಕದಿಂದ ಆ ಹೆಣ್ಣು ಮಗು 18ವರ್ಷ ತಲಪುವವರೆಗೆ ಮುಂದುವರಿಯುತ್ತದೆ. ಬಡ್ಡಿ ಸೇರಿದ ಒಟ್ಟು ಮೊತ್ತವನ್ನು ಆಕೆ 18ವರ್ಷ ತಲುಪಿದ ನಂತರ ಹತ್ತನೇ ತರಗತಿ ತೇರ್ಗಡೆಯಾಗಿದ್ದಲ್ಲಿ ಪಡೆಯಬಹುದು.

## ಎಫ್) 'ನ್ಯಾಷನಲ್ ಮೀನ್ಸ ಕಮ್ ಮೆರಿಟ್ ವಿದ್ಯಾರ್ಥಿವೇತನ' ಯೋಜನೆ

ಇದು ರಾಷ್ಟ್ರೀಯ ಮಟ್ಟದ ವಿದ್ಯಾರ್ಥಿವೇತನ ಕಾರ್ಯಕ್ರಮ. 8ನೆಯ ತರಗತಿಯ ನಂತರದಲ್ಲಿ ಆರ್ಥಿಕ ಪರಿಸ್ಥಿತಿಯ ಕಾರಣದಿಂದಾಗಿ ಶಾಲೆ ಬಿಡುವ ಸನ್ನಿವೇಶವಿರುವ ಮಕ್ಕಳಿಗಾಗಿ ಈ ವಿದ್ಯಾರ್ಥಿವೇತನವನ್ನು ಪ್ರಾರಂಭಿಸಲಾಗಿದೆ. ಇದು ಜವಾಹರ್ ನವೋದಯ ವಿದ್ಯಾಲಯ, ಕೇಂದ್ರೀಯ ವಿದ್ಯಾಲಯ ಮತ್ತು ಸರ್ಕಾರಿ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರನ್ನುಳಿದು ಇತರ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ದೊರೆಯುತ್ತದೆ. ಈ ವಿದ್ಯಾರ್ಥಿವೇತನದ ಒಟ್ಟು ಸಂಖ್ಯೆ ಒಂದು ಲಕ್ಷ. ಇದು 9 ರಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ದೊರೆಯುತ್ತದೆ. ಈ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದವರಿಗೆ ಮಾಸಿಕ ರೂ. 500/– ರಂತೆ ವಾರ್ಷಿಕ ರೂ. 6,000/– ದೊರೆಯುತ್ತದೆ. ಇದನ್ನು

ಪಡೆಯಲು ಕುಟುಂಬದ ವಾರ್ಷಿಕ ಆದಾಯ ರೂ. 1,50,000/– ಮೀರಬಾರದು. ವಿದ್ಯಾರ್ಥಿಯು 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. 8ನೇ ತರಗತಿಯಲ್ಲಿ ಕನಿಷ್ಟ ಶೇ. 55 ಅಂಕಗಳನ್ನು ಗಳಿಸಿರಬೇಕು.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನೀವು ಈಗ ಅಧ್ಯಯನ ಮಾಡಿದ ಯೋಜನೆಗಳ ಇಬ್ಬರು ಫಲಾನುಭವಿಗಳನ್ನು ಗುರುತಿಸಿ, ಅದರ ಕುರಿತ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ.

## 3.4.3.2. ಅಸಾಮರ್ಥ್ಯವುಳ್ಳವರ ಶಿಕ್ಷಣಕ್ಕಾಗಿ ವಿಶೇಷ ಯೋಜನೆಗಳು

ಈ ಕುರಿತಂತೆ ಅಂತರ್ಗತ ಶಿಕ್ಷಣದ ಕೋರ್ಸಿನ ಕಲಿಕಾ ಸಾಮಗ್ರಿ ಭಾಗ 1.6 ಗಮನಿಸಿ. ಅಲ್ಲಿ ಈ ವಿಷಯವನ್ನು ಕುರಿತಂತೆ ದೀರ್ಘವಾಗಿ ಚರ್ಚಿಸಲಾಗಿದೆ. ಅವುಗಳಲ್ಲಿ ಅಸಾಮರ್ಥ್ಯವಿರುವ ಮಕ್ಕಳಿಗಾಗಿ ಸರ್ಕಾರ ಪ್ರಾಯೋಜಿಸಿರುವ ವಿಶೇಷ ಯೋಜನೆಗಳನ್ನು ಗುರುತಿಸಿಕೊಳ್ಳಿ. ಈ ಯೋಜನೆಗಳನ್ನು ಈ ಕೋರ್ಸಿನ ದೃಷ್ಟಿಯ ಹಿನ್ನೆಲೆಯಲ್ಲಿ ಓದಿಕೊಳ್ಳಬೇಕು.

## 3.4.4. ಸಾರಾಂಶಿಸೋಣ

- ಬಾಲಕಿಯರ ಶಿಕ್ಷಣಕ್ಕಾಗಿ ನಮ್ಮ ದೇಶದಲ್ಲಿ ವಿಶೇಷ ಯೋಜನೆಗಳಿವೆ.
- ಬಾಲಿಕಾ ಸಮೃದ್ಧಿ ಯೋಜನೆ, ಬೇಟಿ ಬಚಾವೋ ಬೇಟಿ ಪಢಾವೋ, ಸುಕನ್ಯಾ ಸಮೃದ್ಧಿ ಯೋಜನೆ, ಬೇಗಂ ಹಜರತ್ ಮಹಲ್ ರಾಷ್ಟ್ರೀಯ ವಿದ್ಯಾರ್ಥಿನಿವೇತನ, ಪ್ರೌಢಶಾಲೆಯ ಹೆಣ್ಣುಮಕ್ಕಳಿಗೆ ರಾಷ್ಟ್ರೀಯ ಪ್ರೋತ್ಸಾಹ ಯೋಜನೆ, 'ನ್ಯಾಷನಲ್ ಮೀನ್ಸ ಕಮ್ ಮೆರಿಟ್ ವಿದ್ಯಾರ್ಥಿವೇತನ' ಯೋಜನೆ ಇವು ಪ್ರಮುಖವಾದವು.
- ಈ ಪ್ರತಿಯೊಂದು ಯೋಜನೆಯೂ ಆಯಾ ಅವಧಿಗಳಲ್ಲಿ ಅನುಷ್ಠಾನಗೊಂಡಿದ್ದು, ಬಾಲಕಿಯರ ಶಿಕ್ಷಣದ ಮುಂದುವರಿಕೆ, ಬಾಲಕಿಯರ ಸಬಲೀಕರಣ ಮತ್ತು ಬಾಲಕಿಯರ ಕುರಿತ ಧನಾತ್ಮಕ ಮನೋಭಾವದ ಬೆಳವಣಿಗೆ ಇವುಗಳಿಗೆ ಪೂರಕವಾಗಿವೆ.

## 3.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನೀವು ಸಂಗ್ರಹಿಸಿದ ಅಭಿಪ್ರಾಯಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

## 3.4.6. ಘಟಕಾಂತ್ಯ ಅಭ್ಯಾಸಗಳು

1. ಬಾಲಕಿಯರ ಶಿಕ್ಷಣಕ್ಕಾಗಿ ವಿಶೇಷ ಯೋಜನೆಗಳನ್ನುವಿವರಿಸಿ.

## 3.4.7. ಪರಾಮರ್ಶನ ಸೂಚಿ


1. Das, A. K., & Pillay, A. N. (1999, December). *Inclusive education for disabled students: Challenges for teacher education.* Paper presented at the 5th UNESCO-ACEID Conference, Bangkok, Thailand.
2. Mani, R. (1988). *Physically handicapped in India*. Delhi: Ashish Publishing House.
3. https://parenting.firstcry.com/articles/list-of-government-schemes-for-girl-child-in-india/

4. https://mhrd.gov.in/schemes-school
5. https://en.wikipedia.org/wiki/List_of_central_government_schemes_in_India
6. http://vikaspedia.in/education/policies-and-schemes/schemes-for-elementary-secondary-higher-education
7. https://www.sukanyasamriddhiaccountyojana.in/all-child-schemes-and-plans-in-india/
8. https://scholarship-positions.com/blog/scholarships-for-single-girl-child/201406/
9. https://www.savethechildren.in/articles/benefits-of-beti-bachao-beti-padhao-scheme?gclid=CjwKCAiAqt7jBRAcEiwAof2uK3J1x86aSI4WxLMxK6frDA1sYlrOW_tNLGBNaRlzbqW7G87RUKrezRoC2J8QAvD_BwE
10. http://www.wcd.nic.in/bbbp-schemes
11. https://www.onlineteacherstraining.com/special-teacher-course.php?gclid=CjwKCAiAqt7jBRAcEiwAof2uKzv8bY8-2ILEjEZWhOaCmUGEF8e-iArL8QTyfz0QXOYe5OvI3UC5fBoCm94QAvD_BwE
12. https://www.unicef.org/disabilities/index_65316.html
13. https://www.right-to-education.org/issue-page/marginalised-groups/persons-disabilities
14. https://www.humanrights.gov.au/publications/access-education-students-disability-barriers-and-difficulties

***************

# ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು

## ಘಟಕ–5 : ಶಾಲಾ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ : ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ (National Repositiory of Open Educatonal Resources – NROER)

**ಘಟಕದ ರಚನೆ :**


3.5.1. ಕಲಿಕೆಯ ಉದ್ದೇಶಗಳು

3.5.2. ಪೀಠಿಕೆ

3.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.5.3.1. ಶಾಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಮತ್ತು ಸಂಬಂಧಿತ ವಿಚಾರಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

3.5.3.2. ಶಾಲೆಗಳಲ್ಲಿ ಐಸಿಟಿ ಅನುಷ್ಠಾನ ಮತ್ತು ಸವಾಲುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

3.5.3.3. ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ

3.5.4. ಸಾರಾಂಶಿಸೋಣ

3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

3.5.6. ಘಟಕಾಂತ್ಯ ಅಭ್ಯಾಸಗಳು

3.5.7. ಪರಾಮರ್ಶನ ಸೂಚಿ


### 3.5.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಾಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಎಂದರೇನು ಎಂಬುದನ್ನು ವಿವರಿಸುವರು;
- ವಿವಿಧ ಮಟ್ಟಗಳಲ್ಲಿ ತೆರೆದ ಶೈಕ್ದಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರಗಳನ್ನು ಸ್ಥಾಪಿಸುವ ಅವಶ್ಯಕತೆಯನ್ನು ಸ್ಪಷ್ಟಪಡಿಸುವರು;
- ತೆರೆದ ಶೈಕ್ದಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರವನ್ನು ಸ್ಥಾಪಿಸಿರುವ ಸರ್ಕಾರದ ಪ್ರಯತ್ನಗಳನ್ನು ಪ್ರಶಂಸಿಸುವರು ; ಮತ್ತು
- ತೆರೆದ ಶೈಕ್ದಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರದ ಪ್ರಯೋಜನ ಪಡೆದುಕೊಳ್ಳುವ ಮನಸ್ಸುಮಾಡುವರು.

## 3.5.2 ಪೀಠಿಕೆ

ನಮ್ಮ ದೇಶದಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸರ್ಕಾರವು ಮಾಡಿರುವ ಅನೇಕ ಪ್ರಯತ್ನಗಳು ಮತ್ತು ಅನುಷ್ಠಾನಕ್ಕೆ ತಂದಿರುವ ಅನೇಕ ಕಾರ್ಯಕ್ರಮಗಳ ಕುರಿತು ಹಿಂದಿನ ಘಟಕಗಳಲ್ಲಿ ತಿಳಿದಿದ್ದೇವೆ. ಶಿಕ್ಷಣದಲ್ಲಿ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಆಗಿಂದಾಗ್ಗೆ ಅನೇಕ ಆಯೋಗಗಳನ್ನು ನೇಮಿಸಿ ಶಿಫಾರಸುಗಳನ್ನು ಗುರುತಿಸಿಕೊಂಡಿರುವುದೂ ನಮಗೆ ಸ್ಪಷ್ಟವಾಗಿ ತಿಳಿದಿದೆ. ಗುಣಮಟ್ಟವನ್ನು ಹೆಚ್ಚಿಸುವ ಪ್ರಯತ್ನದಲ್ಲಿ ಈಚಿನ ದಿನಗಳಲ್ಲಿ ಸರ್ಕಾರ ಪ್ರಯತ್ನಿಸುತ್ತಿರುವ ಒಂದು ಪ್ರಮುಖ ಅಂಶ ಎಂದರೆ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಅಳವಡಿಕೆ. 1992ರ ಪರಿಷ್ಕೃತ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೇ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನವನ್ನು ಅಳವಡಿಸಬೇಕಾದ ಅಗತ್ಯವನ್ನು ಸ್ಪಷ್ಟಪಡಿಸಲಾಗಿತ್ತು. ಅದಕ್ಕನುಗುಣವಾಗಿ ಸರ್ಕಾರವು Information and Communication Technology @ School ಎಂಬಿತ್ಯಾದಿ ಕಾರ್ಯಕ್ರಮಗಳನ್ನು 2004ರಲ್ಲಿಯೇ ಪ್ರಾರಂಭಿಸಿತು. ಶಾಲಾ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಮಹತ್ವದ ಪಾತ್ರವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ದಾಖಲೆಯೂ ಸ್ಪಷ್ಟವಾಗಿಯೇ ಗುರುತಿಸಿತ್ತು. ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರಗಳನ್ನು ಸ್ಥಾಪಿಸುವ ಅವಶ್ಯಕತೆಯನ್ನೂ ಶಾಲಾ ಶಿಕ್ಷಣದಲ್ಲಿ ಐಸಿಟಿಯ ಬಳಕೆಯನ್ನು ಕುರಿತ ರಾಷ್ಟ್ರೀಯ ನೀತಿಯ ಗುರುತಿಸಿತ್ತು. ಇದಕ್ಕನುಗುಣವಾಗಿ ಭಾರತ ಸರ್ಕಾರ ಎಲ್ಲ ಶಾಲೆ/ಶಿಕ್ಷಕರಿಗೆ ಅತ್ಯಂತ ಉಪಯುಕ್ತವಾಗುವ ರೀತಿಯಲ್ಲಿ ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರವನ್ನು ಸ್ಥಾಪಿಸಿದೆ. ಹೀಗೆ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಪಾತ್ರ, ಅದಕ್ಕೆ ಸಂಬಂಧಿಸಿದ ಇತರ ವಿಚಾರಗಳು ಹಾಗೂ ಈ ನಿಟ್ಟಿನಲ್ಲಿ ಸರ್ಕಾರ ಸ್ಥಾಪಸಿರುವ ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ ಇವುಗಳ ಕುರಿತು ಈ ಘಟಕದಲ್ಲಿ ತಿಳಿಯೋಣ.

## 3.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.5.3.1. ಶಾಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಮತ್ತು ಸಂಬಂಧಿತ ವಿಚಾರಗಳು

ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕುರಿತ ರಾಷ್ಟ್ರೀಯ ನೀತಿಯನ್ನು 2004ರ ಡಿಸೆಂಬರ್‌ನಲ್ಲಿ ಪ್ರಕಟಿಸಲಾಯಿತು. ರಾಷ್ಟ್ರೀಯ ನೀತಿ ಚೌಕಟ್ಟಿನೊಳಗೆ ಶಾಲಾ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಗರಿಷ್ಠ ಬಳಕೆಗೆ ರಾಜ್ಯಗಳೊಂದಿಗೆ ಸಹಕರಿಸುವುದು ಇದರ ಆಶಯವಾಗಿತ್ತು. ಸಂಬಂಧಿಸಿದ ಇಲಾಖೆಯು ಇದಕ್ಕಾಗಿ ಕ್ರಿಯಾಶೀಲವಾಗಿ ಕೆಲಸಮಾಡಿದೆ. ಇದಕ್ಕೆ ಸಂಬಂಧಿಸಿದಂತೆ ಇಲಾಖೆಯು ಪ್ರಮುಖವಾಗಿ ನಾಲ್ಕು ಕ್ಷೇತ್ರಗಳಿಗೆ ಗಮನ ನೀಡಿದೆ:

- ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಕ್ಕೆ ಅಗತ್ವಯವಾದ ಮೂಲ ಸೌಲಭ್ಯಗಳಿಗೆ ಅವಕಾಶ;
- ಶಾಲೆಗಳಲ್ಲಿ ಅಗತ್ಯವಾದ ಬ್ರಾಡ್ ಬ್ಯಾಂಡ್ ಸಂಪರ್ಕಕ್ಕೆ ಅವಕಾಶ;
- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದಲ್ಲಿ ಅಧ್ಯಾಪಕರ ನಿರಂತರ ಮತ್ತು ವೃತ್ತಿಪರ ಬೆಳವಣಿಗೆ; ಮತ್ತು
- ಪಠ್ಯಕ್ರಮದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅಳವಡಿಕೆ ಮತ್ತು ಪಠ್ಯಕ್ರಮಕ್ಕೆ ಸಮರ್ಪಕವಾದ ಡಿಜಿಟಲ್ ವಿಷಯಾಂಶಗಳು ಮತ್ತು ತಂತ್ರಾಂಶಗಳನ್ನು ಒದಗಿಸುವಿಕೆ.

ಜ್ಞಾನ ಸಮಾಜದ ಬೆಳವಣಿಗೆಯ ಸ್ಥಾಪನೆ, ಸ್ಥಿರತೆ ಮತ್ತು ಅಭಿವೃದ್ಧಿಯಲ್ಲಿ ಭಾಗವಹಿಸಲು ಯುವ ಜನರನ್ನು ತಯಾರು ಮಾಡುವುದೇ ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕುರಿತ ರಾಷ್ಟ್ರೀಯ ನೀತಿಯ ಗುರಿ. ಶಾಲಾ ವ್ಯವಸ್ಥೆಯಲ್ಲಿ ಅವಕಾಶ, ಗುಣಮಟ್ಟ ಮತ್ತು ಉತ್ಕೃಷ್ಟತೆಯನ್ನು ಹೆಚ್ಚಿಸಲು, ಮಾಹಿತಿ

ಸಂವಹನ ತಂತ್ರಜ್ಞಾನ ಮತ್ತು ಸಂಬಂಧಿತ ಚಟುವಟಿಕೆ ಮತ್ತು ಪ್ರಕ್ರಿಯೆಗಳನ್ನು ಚುರುಕುಗೊಳಿಸುವುದು, ಬೆಂಬಲಿಸುವುದು ಮತ್ತು ಸ್ಥಿರಗೊಳಿಸುವುದು ಈ ನೀತಿಯ ಉದ್ದೇಶ. ಇವುಗಳನ್ನು ಸಾಧಿಸಲು ನೀತಿಯು ಕೆಳಗಿನವುಗಳನ್ನು ಮಾಡಲು ಪ್ರಯತ್ನಿಸಿದೆ :

- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಜ್ಞಾನವುಳ್ಳ ಸಮುದಾಯವನ್ನು ಬೆಳೆಸಲು ಅಗತ್ಯವಾದ ಪರಿಸರವನ್ನು ಬೆಳಸುವುದು;
- ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ನಿಯೋಜನೆ, ಬಳಕೆ ಮತ್ತು ಪ್ರಯೋಜನ ಪಡೆದು ರಾಷ್ಟ್ರವನ್ನು ಕಟ್ಟಬಲ್ಲ ಐಸಿಟಿ ಸಮುದಾಯವನ್ನು ಸೃಷ್ಟಿಸುವುದು;
- ಶಿಕ್ಷಣದಲ್ಲಿ ಐಸಿಟಿಯ ಸಾಮರ್ಥ್ಯದ ಗರಿಷ್ಠ ಬಳಕೆಯ ಬೇಡಿಕೆಯನ್ನುಂಟುಮಾಡಲು ಸೂಕ್ತವಾದ ಸಹಕಾರ, ಸಹಯೋಗ ಮತ್ತು ಹಂಚಿಕೆಯನ್ನೊಳಗೊಂಡ ಪರಿಸರವನ್ನು ಸೃಷ್ಟಿಸುವುದು.

## ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅರ್ಥ

ಶಾಲಾ ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕುರಿತ ರಾಷ್ಟ್ರೀಯ ನೀತಿಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕುರಿತಂತೆ ಕೆಳಕಂಡಂತೆ ವ್ಯಾಖ್ಯೆ ನೀಡಿದೆ: ಬೋಧನೆ ಮತ್ತು ಕಲಿಕೆಯ ಗುರಿಗಳನ್ನು ಸಾಧಿಸಲು, ಶಿಕ್ಷಣದ ಅವಕಾಶಗಳನ್ನು ವಿಸ್ತರಿಸಲು, ಸಂಪನ್ಮೂಲಗಳನ್ನು ಪಡೆದುಕೊಳ್ಳಲು, ಸಾಮರ್ಥ್ಯಗಳನ್ನು ಬೆಳೆಸಲು, ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ವಹಿಸಲು ಡಿಜಿಟಲ್ ರೂಪದಲ್ಲಿ ಪರಿವರ್ತಿಸಬಹುದಾದ ಅಥವಾ ಡಿಜಿಡಲ್ ರೂಪದಲ್ಲಿ ರವಾನಿಸಬಹುದಾದ, ಬಳಸಬಹುದಾದ ಎಲ್ಲ ಸಾಧನಗಳು, ಸಲಕರಣೆಗಳು, ವಿಷಯಗಳು, ಸಂಪನ್ಮೂಲಗಳು ಮತ್ತು ಸೇವೆಗಳು ಒಟ್ಟಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಎನಿಸಿಕೊಳ್ಳುತ್ತದೆ. ಇದು ಕಂಪ್ಯೂಟರ್‌ಗೆ ಹೊಂದಿಸಲಾದ ಯಂತ್ರಾಂಶಗಳು ಮತ್ತು ತಂತ್ರಾಂಶ ಅನ್ವಯಗಳನ್ನು ಮಾತ್ರವಲ್ಲದೆ, ಅಂತರ್ ಕ್ರಿಯಾ ಡಿಜಿಟಲ್ ಅಂಶಗಳನ್ನೂ ಮತ್ತು ಇತರ ಉಪಗ್ರಹ ಸಂವಹನ ಸಾಧನಗಳನ್ನೂ ರೇಡಿಯೋ ಮತ್ತು ದೂರದರ್ಶನ ಸೇವೆಗಳನ್ನೂ ಜಾಲ ಆಧಾರಿತ ವಿಷಯ ಭಂಡಾರಗಳನ್ನೂ ಅಂತರ್‌ಕ್ರಿಯಾ ವೇದಿಕೆಗಳನ್ನೂ ಕಲಿಕಾ ನಿರ್ವಹಣಾ ವ್ಯವಸ್ಥೆಗಳನ್ನು ಮತ್ತು ಮಾಹಿತಿ ನಿರ್ವಹಣಾ ವ್ಯವಸ್ಥೆಗಳನ್ನೂ ಒಳಗೊಳ್ಳುತ್ತದೆ. ಅಲ್ಲದೆ ಡಿಜಿಟಲೀಕರಣ ಪ್ರಕ್ರಿಯೆಗಳನ್ನೂ ವಿಷಯಗಳ ಬಳಸಿಕೊಳ್ಳುವಿಕೆ ಮತ್ತು ವಿಷಯ ನಿರ್ವಹಣಾ ಪ್ರಕ್ರಿಯೆಗಳನ್ನೂ ಸಾಮರ್ಥ್ಯವರ್ಧನ ವೇದಿಕೆಗಳ ರೂಪಿಸುವಿಕೆ ಮತ್ತು ಬಳಕೆಯನ್ನೂ ಪ್ರಕ್ರಿಯೆಗಳನ್ನೂ ಅಂತರ್ ಕ್ರಿಯೆ ಮತ್ತು ವಿನಿಮಯ ವೇದಿಕೆಗಳನ್ನೂ ಒಳಗೊಳ್ಳುತ್ತದೆ.

## ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅನ್ವಯ

ಅಧ್ಯಾಪಕರು ಡಿಜಿಟಲ್ ಸಾಕ್ಷರರಾಗಿ ಅದನ್ನು ಪಠ್ಯಕ್ರಮದಲ್ಲಿ ಹೇಗೆ ಅಳವಡಿಸಬಹುದೆಂಬುದನ್ನು ತಿಳಿದಿದ್ದರೆ ಮಾತ್ರ, ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರಬಲ್ಲುದು. ಶಾಲೆಗಳಲ್ಲಿ ಐಸಿಟಿಯ ಪರಿಣಾಮಕಾರಿ ಅನ್ವಯವನ್ನು ಖಚಿತಪಡಿಸಿಕೊಳ್ಳಲು ತಜ್ಞರು ಐದು ಮಾರ್ಗೋಪಾಯಗಳನ್ನು ಗುರುತಿಸಿದ್ದಾರೆ.

**21ನೇ ಶತಮಾನದ ಶಿಕ್ಷಕರನ್ನು ಪ್ರಚುರಪಡಿಸಿ :** ಎಲ್ಲ ಶಿಕ್ಷಕರೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದೊಳಗೆ ಎಲ್ಲ ಗುಣಾತ್ಮಕ ಕಲಿಕಾ ಚಟುವಟಿಕೆಗಳನ್ನು ಸಂಯೋಜಿಸುವ ಜ್ಞಾನ, ಸಾಧನಗಳು ಮತ್ತು ಉತ್ಸಾಹವನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಇದು ಮಗುವಿನ ತರಗತಿ ಅನುಭವದ ಮೇಲೆ ಮತ್ತು ಒಟ್ಟು ಶಿಕ್ಷಣದ ಮೇಲೆ ಗರಿಷ್ಠ ಪ್ರಭಾವಬೀರುತ್ತದೆ.

ಎಲ್ಲ ಐಸಿಟಿ ಯಂತ್ರಾಂಶ ಮತ್ತು ತಂತ್ರಾಂಶಗಳಿಗೆ ಉತ್ತಮ ಪರಿಣಾಮಕ್ಕಾಗಿ ಬಳಕೆಯ ಮಾರ್ಗದರ್ಶನಗಳಿರುವಂತೆ ಗಮನಿಸಿಕೊಳ್ಳಿ: ಶಾಲೆಗಳಲ್ಲಿ ಉಪಲಬ್ಧವಿರುವ ಯಂತ್ರಾಂಶಗಳು ಮತ್ತು ತಂತ್ರಾಂಶಗಳು ಕೇವಲ ಆಡಳಿತಾತ್ಮಕ ಸಾಧನಗಳಾಗಲೀ ಅಥವಾ ಎಲೆಕ್ಟ್ರಾನಿಕ್ ಬದಲಿ ಯಂತ್ರಗಳಾಗಲೀ ಆಗದೆ, ತರಗತಿಯ ಮತ್ತು ಪಾಠ ಯೋಜನೆಯ ಅವಿನಾಭಾವ ಅಂಗವಾಗಿ ಬಳಕೆಯಾಗುವಂತೆ ನೋಡಿಕೊಳ್ಳಿ.

**ಐಸಿಟಿ ಮತ್ತು ಆವಿಷ್ಕಾರಾತ್ಮಕ ಬೋಧನೆಯಲ್ಲಿ ಆಸಕ್ತರಾದ ಗುಣಾತ್ಮಕ ಶಿಕ್ಷಕರ ಗುಂಪನ್ನು ರೂಪಿಸಿ:**

ಐಸಿಟಿ ಬಳಕೆಯೊಂದಿಗೆ ತೊಡಗಿಕೊಂಡ ಅಧ್ಯಾಪಕರು ಹೆಚ್ಚು ಆವಿಷ್ಕಾರಾತ್ಮಕವಾದ ವಿಧಾನಗಳನ್ನು ಬಳಸುತ್ತಾರೆ. ಈ ಅಧ್ಯಾಪಕರು ತರಗತಿಗೆ ಸೂಕ್ತವಾದ ಐಸಿಟಿ ತಂತ್ರಗಳನ್ನೂ ಬಳಸುತ್ತಾರೆ. ಹಾಗಾಗಿ ಇಂತಹ ಆಸಕ್ತರನ್ನು ಒಟ್ಟುಮಾಡಿ.

**ಶಾಲೆ ಮತ್ತು ಕುಟುಂಬಗಳನ್ನು ಬೆಸೆಯಲು ಐಸಿಟಿ ಬಳಸಿ:**

ಹೆಚ್ಚಿನ ಸಂವಹನ, ಪಾರದರ್ಶಕತೆ ಮತ್ತು ಧನಾತ್ಮಕ ಪರಿಸರಗಳ ಸೃಷ್ಟಿಯಿಂದ ಐಸಿಟಿ ಶಾಲೆ ಮತ್ತು ಕುಟುಂಬಗಳನ್ನು ಬೆಸೆಯುವಲ್ಲಿ ಯಶಸ್ವಿಯಾಗಬಹುದು. ಈ ರೀತಿ ಪೋಷಕರ ಭಾಗವಹಿಕೆಯನ್ನು ಖಚಿತಪಡಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳನ್ನೂ ಅಭಿಪ್ರೇರಿಸಬಹುದು.

**ಕಂಪ್ಯೂಟರ್ ಜೊತೆಗೆ ಧನಾತ್ಮಕ ಸಂಬಂಧಗಳನ್ನು ಬೆಳೆಸಿಕೊಳ್ಳಿ:**

ಮಕ್ಕಳಿಗೆ ಕಂಪ್ಯೂಟರ್ ಎಂದರೆ ಇಷ್ಟ ಹಾಗಾಗಿ ಇದನ್ನು ಒಂದು ಕಲಿಕಾ ವೇದಿಕೆಯಾಗಿ ಬಳಸಿಕೊಳ್ಳಬಹುದು. ತಂತ್ರಜ್ಞಾನವನ್ನು ಧನಾತ್ಮಕವಾಗಿ ಒಪ್ಪಿಕೊಳ್ಳಬೇಕು ಮತ್ತು ಮಕ್ಕಳು ಇದಕ್ಕೆ ತೋರುವ ಆಕರ್ಷಣೆಯನ್ನು ಧನಾತ್ಮಕವಾಗಿ ಪರಿಗಣಿಸಬೇಕು.

**ಐಸಿಟಿ ಮೂಲಕ ಸಾಮರ್ಥ್ಯವರ್ಧನೆ**

ಐಸಿಟಿ ನೀತಿಯ ಮತ್ತೊಂದು ಗಮನವೆಂದರೆ ಅಧ್ಯಾಪಕರಲ್ಲಿ ಸಾಮರ್ಥ್ಯವರ್ಧನೆ. ಶಾಲಾ ವ್ಯವಸ್ಥೆಯಲ್ಲಿ ವಿಶಾಲವಾಗಿ ವ್ಯಾಪಿಸಿರುವ ಐಸಿಟಿ ಪೂರಕ ಅಭ್ಯಾಸಗಳಿಗೆ ಈ ಸಾಮರ್ಥ್ಯವರ್ಧನೆ ಅತ್ಯಂತ ಅವಶ್ಯಕವಾದುದು ಎಂದು ಪರಿಗಣಿಸಲಾಗಿತ್ತು. ಇದಕ್ಕಾಗಿ ನೀತಿಯು ಕೆಳಕಂಡ ಅಂಶಗಳನ್ನು ಗುರುತಿಸಿಕೊಂಡಿತ್ತು.

**ಸೇವಾನಿರತ ಅಧ್ಯಾಪಕರಲ್ಲಿ ಸಾಮರ್ಥ್ಯವರ್ಧನೆ**

ಸೇವಾನಿರತ ಶಿಕ್ಷಕರ ತರಬೇತಿ ಮತ್ತು ಪ್ರವೇಶ ತರಬೇತಿ ಮತ್ತು ಪುನಶ್ಚೇತನ ಕೋರ್ಸುಗಳನ್ನು ಒಳಗೊಳ್ಳುತ್ತದೆ. ಪ್ರವೇಶ ತರಬೇತಿಗಳನ್ನು ಸಾಮಾನ್ಯವಾಗಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಎನ್.ಸಿ.ಇ.ಆರ್.ಟಿ. ಅಥವಾ ಎಸ್.ಸಿ.ಇ.ಆರ್.ಟಿ. ಗಳು ನೀಡುತ್ತವೆ. ಅಧ್ಯಾಪಕರು ಆಯಾ ಕಾಲದ ಕಾಳಜಿಗಳಿನಸಾರವಾಗಿ ಸಾಮರ್ಥ್ಯಹೊಂದಲು ಪುನಶ್ಚೇತನ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಇಂತಹ ಶಿಬಿರಗಳು ಐಸಿಟಿ ತರಬೇತಿಗೆ ಸೂಕ್ತವಾದವುಗಳು. ಈ ಪುನಶ್ಚೇತನ ಶಿಬಿರಗಳ ಕೊನೆಯಲ್ಲಿ ಅಧ್ಯಾಪಕರ ಮೌಲ್ಯಮಾಪನವು ಅಪೇಕ್ಷಿತ ಸಾಮರ್ಥ್ಯಗಳನ್ನು ಗಳಿಸಿಕೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಸಹಾಯಕವಾಗುತ್ತವೆ.

ಐಸಿಟಿಯ ಬಳಕೆಯನ್ನು ಜನಪ್ರಿಯಗೊಳಿಸಲು ಮತ್ತು ಅದರ ಅಭ್ಯಾಸದ ಪರಿಣಾಮಕಾರಿತ್ವವನ್ನು ತೋರಿಸಿಕೊಡಲು ಅಧ್ಯಾಪಕರಿಗೆ ಮತ್ತು ಶಾಲಾ ನಾಯಕರಿಗೆ ನೀಡುವ ಸಾಮಾನ್ಯ ತರಬೇತಿ ಕಾರ್ಯಕ್ರಮಗಳಲ್ಲಿ ಐಸಿಟಿ ಯನ್ನು ಸಂಯೋಜಿಸಿಕೊಳ್ಳಬೇಕು.

ಮೊದಲಿಗೆ ಐಸಿಟಿ ಬಳಸುವ ಕೌಶಲಗಳು ಮತ್ತು ಐಸಿಟಿ ಆಧರಿತ ವಿಷಯಬೋಧನಾ ಕೌಶಲಗಳನ್ನು ಹೇಳಿಕೊಟ್ಟು ಅವುಗಳಿಗೆ ಸಂವೇದನೆಯನ್ನುಂಟುಮಾಡುವುದರ ಮೂಲಕ ಅಧ್ಯಾಪಕರು ಆಯಾ ವೃತ್ತಿಪರ ಆನ್‌ಲೈನ್ ಗುಂಪುಗಳ(ಉದಾಹರಣೆಗೆ ವಿಜ್ಞಾನ ಅಧ್ಯಾಪಕ ಆನ್ ಲೈನ್ ಗುಂಪು) ಸದಸ್ಯರಾಗುತ್ತಾರೆ. ಇದು ಅವರ ಶಿಕ್ಷಣವನ್ನು ಮುಂದುವರಿಸಲು, ಬೋಧನಾ ಸಂಪನ್ಮೂಲಗಳನ್ನು ಪಡೆಯಲು ಮತ್ತು ಆಯಾ ಶಿಸ್ತು ಆಧರಿತ ಜ್ಞಾನವನ್ನು ಸಶಕ್ತೀಕರಿಸುವಲ್ಲಿ ಕೊಡುಗೆ ನೀಡಲು ಸಹಕಾರಿಯಾಗುತ್ತದೆ. ಈ ವೇದಿಕೆಗಳು ಅಧ್ಯಾಪಕರ ಚಿಂತನೆಗಳನ್ನು, ಸಂಪನ್ಮೂಲಗಳನ್ನು ವಿಷಯತಜ್ಞತೆಯನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಐಸಿಟಿ ಕೌಶಲಗಳನ್ನು

ಉತ್ತಮಪಡಿಸಿಕೊಳ್ಳಲು ಸಹಾಯಕವಾಗುತ್ತದೆ.

ಡಿಜಿಟಲ್ ವಿಷಯಗಳ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಅಧ್ಯಾಪಕರ ಭಾಗವಹಿಕೆಯು ತರಗತಿಯಲ್ಲಿ ಐಸಿಟಿಯ ವ್ಯಾಪಕವಾದ ಬಳಕೆಯನ್ನು ಚುರುಕುಗೊಳಿಸುತ್ತದೆ. ಇದು ಬೋಧನಾ ವಿನ್ಯಾಸ, ಡಿಜಿಟಲ್ ವಿಷಯಗಳ ಆಯ್ಕೆ ಮತ್ತು ವಿಮರ್ಶೆ ಹಾಗೂ ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚಿಸಲು ಡಿಜಿಟಲ್ ವಿಷಯಗಳ ಪರಿಣಾಮಕಾರಿ ಬಳಕೆ ಇವುಗಳಲ್ಲಿ ಅಧ್ಯಾಪಕರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

## ಸೇವಾಪೂರ್ವ ಶಿಕ್ಷಕ ಶಿಕ್ಷಣದ ಮೂಲಕ ಸಾಮರ್ಥ್ಯವರ್ಧನೆ

ವಿದ್ಯಾರ್ಥಿಶಿಕ್ಷಕರನ್ನು ಐಸಿಟಿ ಬಳಸಲು ಸಮರ್ಥವಾಗಿಸಬೇಕು. ಅವರು ಐಸಿಟಿ ಬಳಸುವಂತೆ ಮತ್ತು ಅದನ್ನು ಬಳಸುವ ರೀತಿಯನ್ನು ಅಭ್ಯಸಿಸುವಂತೆ ನೋಡಿಕೊಳ್ಳಬೇಕು ಎಂಬುದು ಇದರ ಆಶಯವಾಗಿತ್ತು.

ಎಲ್ಲ ಸೇವಾಪೂರ್ವ ಶಿಕ್ಷಕ ಕಾರ್ಯಕ್ರಮಗಳಲ್ಲೂ ಐಸಿಟಿಯನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಬೇಕು. ಸಮರ್ಪಕವಾದ ಐಸಿಟಿಯ ಅನ್ವಯಗಳನ್ನು ಒಳಗೊಳ್ಳುವಂತೆ ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಶಿಕ್ಷಕ ಶಿಕ್ಷಣದಿಂದ ಹೊರಬರುವ ಎಲ್ಲ ವಿದ್ಯಾರ್ಥಿಗಳೂ ಐಸಿಟಿಯಲ್ಲಿ ಐಸಿಟಿ ಆಧಾರಿತ ಶಿಕ್ಷಣದಲ್ಲಿ ಸಮರ್ಪಕ ಮಟ್ಟದ ಸಾಮರ್ಥ್ಯವನ್ನು ಪಡೆದಿರಬೇಕು. ಮುಂದೆ ಈ ಸಾಮರ್ಥ್ಯವೇ ಅಧ್ಯಾಪಕರ ನೇಮಕಾತಿಯ ಮಾನದಂಡವೂ ಆಗುವುದು. ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಲಭ್ಯವಿರಬೇಕಾದ ಐಸಿಟಿ ಸೌಲಭ್ಯಗಳನ್ನು ಕುರಿತಂತೆ ಎನ್.ಸಿ.ಟಿ.ಇ. ಸಂಸ್ಥೆಯು ಈಗಾಗಲೇ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಿದೆ. ಇದೇ ಸಂಸ್ಥೆ ಈ ನಿಟ್ಟಿನಲ್ಲಿ ಸೂಕ್ತ ಪಠ್ಯಕ್ರಮವನ್ನೂ ಒದಗಿಸುತ್ತದೆ.

## ಶಾಲಾ ನಾಯಕರ ಸಾಮರ್ಥ್ಯವರ್ಧನೆ

ಶಾಲೆಗಳಲ್ಲಿ ಐಸಿಟಿಯ ಗರಿಷ್ಠ ಬಳಕೆ ಮತ್ತು ಐಸಿಟಿ ಆಧಾರಿತ ಶೈಕ್ಷಣಿಕ ಅಭ್ಯಾಸಗಳನ್ನು ಜಾರಿಗೆ ತರುವಲ್ಲಿ ಶಾಲಾ ನಾಯಕರು ಪ್ರಮುಖ ಪಾತ್ರ ವಹಿಸಬೇಕು. ಎಲ್ಲ ಶಾಲಾ ನಾಯಕರೂ ಐಸಿಟಿ ಕುರಿತ ಪರಿಚಯಾತ್ಮಕ ಕೌಶಲಗಳು ಮತ್ತು ಐಸಿಟಿ ಆಧರಿತ ಶಿಕ್ಷಣದಲ್ಲಿ ಸಮರ್ಪಕ ತರಬೇತಿ ಪಡೆಯಬೇಕು. ಇದು ಶಾಲೆಗ ಡಿಜಿಟಲ್ ಸಂಪನ್ಮೂಲಗಳನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ.

ಆಡಳಿತ, ನಿರ್ವಹಣೆ ಮತ್ತು ಶಾಲಾ ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಪೂರಕವಾಗುವ ಪ್ರಕ್ರಿಯೆಗಳಲ್ಲೂ ತರಬೇತಿ ಅಗತ್ಯ. ಶಾಲಾ ಶಿಕ್ಷಣ ನಿರ್ವಹಣಾ ಮಾಹಿತಿ ವ್ಯವಸ್ಥೆಯ ಅಳವಡಿಕೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಇದು ಸಹಾಯವಾಗುತ್ತದೆ.

ಐಸಿಟಿ ಭೌತಿಕ ಸೌಲಭ್ಯಗಳನ್ನು ಕಾಪಾಡುವುದು ಮತ್ತು ಅವುಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವುದು ಈ ಕುರಿತೂ ತರಬೇತಿ ಪಡೆಯಬೇಕು.

## ರಾಜ್ಯ/ಜಿಲ್ಲಾ ಶಿಕ್ಷಣ ಇಲಾಖೆಗಳ ಸಿಬ್ಬಂದಿಗಳ ಸಾಮರ್ಥ್ಯವರ್ಧನೆ

ರಾಜ್ಯ/ಜಿಲ್ಲಾ ಶಿಕ್ಷಣ ಇಲಾಖೆಗಳ ಎಲ್ಲ ಸಿಬ್ಬಂದಿಗಳಿಗೆ ಅವರವರ ಕೆಲಸದಲ್ಲಿ ಐಸಿಟಿಯನ್ನು ಅನ್ವಯಿಸಿಕೊಳ್ಳಲು ತರಬೇತಿ ನೀಡುವುದು, ಶಾಲಾ ಹಂತದಲ್ಲಿ ಐಸಿಟಿಯನ್ನು ಅನ್ವಯಿಸುವುದಕ್ಕೆ ಸಂಬಂಧಿಸಿದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆಯೂ ಈ ಯೋಜನೆ ಗಮನವಿಟ್ಟಿತ್ತು.

ನೆರೆಕೆರೆ ಶಾಲೆಗಳನ್ನೊಳಗೊಂಡಂತೆ ಶಾಲಾ ಕ್ಲಸ್ಟರ್‌ಗಳನ್ನು ಸ್ಥಾಪಿಸಿ, ಶಾಲಾವ್ಯವಸ್ಥೆಯ ಎಲ್ಲ ವಿಷಯಗಳಲ್ಲಿ ಐಸಿಟಿ ಅಳವಡಿಸುವುದನ್ನು ಕುರಿತಂತೆ ವಿಚಾರವಿನಿಮಯ ಮಾಡಿಕೊಳ್ಳಲು ಅನುವು ಮಾಡಿಕೊಡಲಾಗಿತ್ತು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಸೇವಾನಿರತ, ಸೇವಾಪೂರ್ವ ಶಿಕ್ಷಕರಲ್ಲಿ ಮತ್ತು ಶಾಲಾನಾಯಕರಲ್ಲಿ ಐಸಿಟಿ ಸಾಮರ್ಥ್ಯಗಳನ್ನು ಬೆಳೆಸಲು ಶಾಲಾ ಶಿಕ್ಷಣದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕುರಿತ ರಾಷ್ಟ್ರೀಯ ನೀತಿ ರೂಪಿಸಿದ ಕಾರ್ಯಕ್ರಮಗಳನ್ನು ವಿವರಿಸಿ.

## 3.5.3.2. ಶಾಲೆಗಳಲ್ಲಿ ಐಸಿಟಿ ಅನುಷ್ಠಾನ ಮತ್ತು ಸವಾಲುಗಳು

ದೇಶದಾದ್ಯಂತ ಕಾರ್ಯಕ್ರಮವನ್ನು ಜಾರಿಗೊಳಿಸುವ ಮಾರ್ಗದರ್ಶನ ಮಾಡುವ ಜವಾಬ್ದಾರಿಯನ್ನು ರಾಷ್ಟ್ರಮಟ್ಟದಲ್ಲಿ ಭಾರತ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಾನವ ಸಂಪನ್ಮೂಲ ಸಚಿವಾಲಯ, ಇವುಗಳಿಗೆ ವಹಿಸಲಾಗಿದೆ.

ಶಾಲೆಗಳಲ್ಲಿ ಐಸಿಟಿ ಶಿಕ್ಷಣವನ್ನು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದ ಅಧೀನದಲ್ಲಿ ತರಲಾಗಿದೆ. ಇದು ಅಭಿಯಾನದ ಒಂದು ಘಟಕವೂ ಹೌದು. ಈ ಯೋಜನೆಯು ಪ್ರಸ್ತುತ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳನ್ನೂ ಮತ್ತು ಸೆಕೆಂಡರಿ ಶಾಲೆಗಳನ್ನೂ ಒಳಗೊಂಡಿದೆ.

### ಈ ಪರಿಷ್ಕೃತ ಯೋಜನೆಯ ಪ್ರಮುಖ ಅಂಶಗಳು:

ಶಾಲೆಗೆ ಮರುಕಳಿಸದ (non-recurring) ವೆಚ್ಚವು 6.7ಲಕ್ಷದಿಂದ 6.4ಲಕ್ಷಕ್ಕೆ, ವಾರ್ಷಿಕ ಮರುಕಳಿಸುವ (ವೆಚ್ಚವು 1.34ಲಕ್ಷದಿಂದ 2.70 ಲಕ್ಷಕ್ಕೆ ಪರಿಷ್ಕೃತವಾಗಿದೆ. ಮರುಕಳಿಸುವ ವೆಚ್ಚವನ್ನು ಅದು ಅನುಮೋದನೆಯಾದ ವರ್ಷದಿಂದ ಐದು ವರ್ಷಗಳ ಅವಧಿಗೆ ನೀಡಲಾಗುವುದು;

ಶೈಕ್ಷಣಿಕವಾಗಿ ಹಿಂದುಳಿದ ಶಾಲೆಗಳನ್ನು, ಪರಿಶಿಷ್ಟ ಜಾತಿ/ಪಂಗಡ/ಅಲ್ಪಸಂಖ್ಯಾತ/ ಹಿಂದುಳಿದ ವರ್ಗದವರೆಲ್ಲರಿಗೆ ವಿಶೇಷ ಆದ್ಯತೆ ನೀಡಿ, ಎಲ್ಲ ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳಿಗೆ ಸೌಲಭ್ಯಗಳು ದೊರೆಯಬೇಕೆಂಬುದು ಯೋಜನೆಯ ಗುರಿ.

- ಪರಿಷ್ಕೃತ ಯೋಜನೆಯ ಅಡಿಯಲ್ಲಿ ಪ್ರತಿ ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಒಂದು ಸೂಕ್ತ ಅರ್ಹ ಕಂಪ್ಯೂಟರ್ ಪೂರ್ಣಕಾಲಿಕ ಶಿಕ್ಷಕರಿಗೆ ಅವಕಾಶವಿದೆ.
- ಐಸಿಟಿ ಆಧರಿತ ಬೋಧನೆಯನ್ನು ತಿಳಿಸಿಕೊಡಲು ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಶಾಲೆಗಳ ಸೇವಾನಿರತ ಅಧ್ಯಾಪಕರಿಗೆ ಸೇವಾನಿರತ ತರಬೇತಿಗೆ ಅವಕಾಶವಿದೆ;
- ರೂ 25ಲಕ್ಷ ಮರುಕಳಿಸದ ಅನುದಾನ ಮತ್ತು 2.5 ಲಕ್ಷ ವಾರ್ಷಿಕ ಅನುದಾನ ಮಂಜೂರು ಮಾಡಿ ಪ್ರತಿ ರಾಜ್ಯಸರ್ಕಾರ ಮತ್ತು ಒಕ್ಕೂಟ ಪ್ರದೇಶಗಳ ತಾಲ್ಲೂಕು ಹಂತದಲ್ಲಿ 150 'ಸ್ಮಾರ್ಟ್ ಶಾಲೆ'ಗಳನ್ನು ರೂಪಿಸಲಾಗುವುದು. ಇದರ ಅಡಿಯಲ್ಲಿ ಪ್ರತಿ ಶಾಲೆಗೆ 40 ಕಂಪ್ಯೂಟರ್‌ಗಳನ್ನು ಒದಗಿಸಲಾಗುವುದು.
- ನಿರ್ವಹಣೆ ಮತ್ತು ಮೌಲ್ಯಮಾಪನವನ್ನು ಬಲಪಡಿಸಲಾಗುವುದು.
- ಈ ಯೋಜನೆಗೆ ಅಗತ್ಯವಾದ ವಿದ್ಯುಚ್ಛಕ್ತಿ ಪೂರೈಕೆ ಮತ್ತು ಇಂಟರ್‌ನೆಟ್ ಸಂಪರ್ಕ ಇವುಗಳನ್ನು ಖಚಿತಪಡಿಸಿಕೊಳ್ಳಬೇಕು.
- ಈ ಯೋಜನೆಯು ಶಾಲೆಗಳಲ್ಲಿ ಐಸಿಟಿ ಬಳಸುವ ಶಿಕ್ಷಕರಿಗೆ ಒಂದು ರಾಷ್ಟ್ರ ಪ್ರಶಸ್ತಿಯನು ಒಳಗೊಳ್ಳುತ್ತದೆ.
- ಇದರಲ್ಲಿ ರಾಜ್ಯ ಮತ್ತು ಕೇಂದ್ರದ ಹಣಕಾಸು ಖರ್ಚು ಹಂಚಿಕೆ 25:75 ಆಗಿರುತ್ತದೆ.

### ಪರಿಸರಾತ್ಮಕ ಸವಾಲುಗಳು

ವ್ಯಕ್ತಿಗಳು ಅವರಿಗೆ ಬೇಕಾದ ಕೆಲಸ, ಕಲಿಕೆ ಮತ್ತು ಅಧ್ಯಯನಗಳನ್ನು ಅವರಿಗೆ ಬೇಕಾದ ಕಾಲದಲ್ಲಿ ಮಾಡುವ ಅಪೇಕ್ಷೆ ಇರುತ್ತದೆ. ಆದರೆ ಇದು ಪ್ರಗತಿಪರ ರಾಷ್ಟ್ರಗಳಲ್ಲಿ ಸಾಧ್ಯವಾಗದು. ಒಂದು ದೇಶದ ಶೈಕ್ಷಣಿಕ ತಂತ್ರಜ್ಞಾನದ ಭೌತಿಕ ಸೌಲಭ್ಯವು ಆ ದೇಶದ ಮೇಲ್‌ಸ್ತರದ ಟೆಲಿ ಕಮ್ಯುನಿಕೇಷನ್ ಮತ್ತು ಇನ್‌ಫರ್ಮೇಷನ್ ಟೆಕ್ನಾಲಜಿಯ ಭೌತಿಕ ಸೌಲಭ್ಯವನ್ನವಲಂಬಿಸಿರುತ್ತದೆ. ಶಿಕ್ಷಣದಲ್ಲಿ ಐಸಿಟಿಯ ಸಂಪೂರ್ಣ ಅಳವಡಿಕೆಗೆ ಇರುವ ಪ್ರಾಂತೀಯ ಸೌಲಭ್ಯಗಳು ಮಿತವಾದುದು. ಈ ನಿಟ್ಟಿನಲ್ಲಿ ಶಿಕ್ಷಣದ ನೀತಿ ನಿರೂಪಕರು ಮತ್ತು ಯೋಜಕರು ಈ

ಕೆಳಗಿನ ಅಂಶಗಳನ್ನು ಎಚ್ಚರಿಕೆಯಿಂದ ಗಮನಕ್ಕೆ ತೆಗೆದುಕೊಳ್ಳಬೇಕು:

- ಐಸಿಟಿ ಸಾಧನಗಳನ್ನು ಇಡಲು ಸಮರ್ಪಕ ಕೊಠಡಿಗಳು ಅಥವಾ ಕಟ್ಟಡಗಳು;
- ಹಳೇ ಕಟ್ಟಡಗಳಿರುವಲ್ಲಿ ವೈರಿಂಗ್, ವೆಂಟಿಲೇಷನ್‌ಗಳ ಸಮರ್ಪಕತೆಯನ್ನು ಖಚಿತಪಡಿಸಿಕೊಳ್ಳುವುದು;
- ವಿದ್ಯುಚ್ಛಕ್ತಿ ಪೂರೈಕೆ ಮತ್ತು ಟೆಲಿಫೋನ್‌ಗಳ ಸೌಕರ್ಯವನ್ನು ಖಚಿತಪಡಿಸಿಕೊಳ್ಳುವುದು;
- ವಿವಿಧ ಐಸಿಟಿ ಸಾಧನಗಳು ಸಾಮಾನ್ಯವಾಗಿ ಮತ್ತು ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾಗಿ ಉಪಲಬ್ಧವಾಗುವಂತೆ ನೋಡಿಕೊಳ್ಳಬೇಕು.

## ಸಾಂಸ್ಕೃತಿಕ ಸವಾಲುಗಳು

ಜಗತ್ತಿನಾದ್ಯಂತ ಇರುವ ಸಾಂಸ್ಕೃತಿಕ ವೈವಿಧ್ಯತೆ ಶಿಕ್ಷಣದಲ್ಲಿ ಐಸಿಟಿ ಬಳಕೆಗೆ ಒಂದು ಸವಾಲಾಗಿದೆ. ಅಂತರ್ಜಾಲದಲ್ಲಿ ಇಂಗ್ಲಿಷ್ ಪ್ರಮುಖ ಭಾಷೆ. ಅಂತರ್ಜಾಲದಲ್ಲಿನ ಶೇ.80 ಭಾಗ ಇಂಗ್ಲಿಷ್ ಭಾಷೆಯಲ್ಲಿದೆ. ಶಿಕ್ಷಣದ ತಂತ್ರಾಂಶಗಳಲ್ಲಿ ಶೇ. 80ಭಾಗ ಇಂಗ್ಲಿಷ್ ಭಾಷೆಯಲ್ಲಿದೆ. ಇಂಗ್ಲಿಷ್ ಪ್ರಮುಖ ಭಾಷೆಯಾಗಿಲ್ಲದ ಅನೇಕ ದೇಶಗಳಲ್ಲಿ ಇಂಟರ್‌ನೆಟ್ ಬಳಕೆ ಒಂದು ಸವಾಲಾಗಿ ಪರಿಣಮಿಸಿದೆ.

## ಶೈಕ್ಷಣಿಕ ಸವಾಲುಗಳು

ಶಿಕ್ಷಣದಲ್ಲಿ ಐಸಿಟಿ ಅಳವಡಿಕೆಯಲ್ಲಿ ಪ್ರಮುಖ ಸವಾಲಾಗಿರುವುದೆಂದರೆ, ಶೈಕ್ಷಣಿಕ ಗುರಿಗಳು ಆರ್ಥಿಕ ವಾಸ್ತವಿಕತೆಗಳನ್ನು ಸರಿದೂಗಿಸುವುದು. ಶಿಕ್ಷಣದಲ್ಲಿ ಐಸಿಟಿ ಅಳವಡಿಸಲು ಹೆಚ್ಚಿನ ಪ್ರಮಾಣದ ಬಂಡವಾಳ ಅಗತ್ಯವಿದೆ. ಈ ಹಣಕಾಸಿನ ಕೊರತೆಯಿಂದಾಗಿ ಜಗತ್ತಿನ ಹಲವಾರು ಭಾಗಗಳಲ್ಲಿ ಹಳೆಯ ಕಟ್ಟಡಗಳ ದುರಸ್ತಿ ಮತ್ತು ಶಿಕ್ಷಕರ ಕ್ಷೇಮಾಭಿವೃದ್ಧಿ ಆದ್ಯತೆಯ ವಿಷಯಗಳಾಗಿವೆ. ಹಾಗಾಗಿ ಶಿಕ್ಷಣದಲ್ಲಿ ಐಸಿಟಿಯ ಅಳವಡಿಕೆ ಇನ್ನೂ ಆದ್ಯತೆಯನ್ನು ಪಡೆದುಕೊಂಡಿಲ್ಲ. ಮಾನವ ಸಂಪನ್ಮೂಲದ ಕೊರತೆಯೂ ಒಂದು ಸಮಸ್ಯೆಯೇ. ಈ ಕ್ಷೇತ್ರದಲ್ಲಿ ತರಬೇತಿ ಹೊಂದಿದ ಶಿಕ್ಷಕರ ಕೊರತೆ ಹಾಗೂ ಶಿಕ್ಷಕರಲ್ಲಿ ಐಸಿಟಿ ಬಳಸುವಿಕೆಯನ್ನು ಕುರಿತಂತೆ ಇರುವ ಅಭಿಪ್ರೇರಣೆಯ ಕೊರತೆಯೂ ಐಸಿಟಿ ಅನ್ವಯಕ್ಕೆ ಒಂದು ಸವಾಲಾಗಿದೆ. ಐಸಿಟಿ ಬಳಕೆಯು ಹೆಚ್ಚಿನ ಪ್ರಯತ್ನ ಮತ್ತು ಕಾಲವನ್ನು ಬಯಸುತ್ತದೆ. ಜಗತ್ತಿನ ಹಲವು ಭಾಗಗಳಲ್ಲಿ ಉನ್ನತ ಶಿಕ್ಷಣವನ್ನು ಪ್ರವೇಶಿಸುವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಬಳಕೆಯನ್ನು ಕುರಿತ ಸಿದ್ಧತೆಯೂ ಸಾಕಷ್ಟು ಇರುವುದಿಲ್ಲ. ಇದಲ್ಲದೆ ಶಿಕ್ಷಣದಲ್ಲಿ ಐಸಿಟಿ ಜ್ಞಾನವನ್ನು ವರ್ಗಾಯಿಸುವ ವಿಧಾನಗಳಲ್ಲೂ ಸವಾಲುಗಳಿವೆ. ಶಾಲಾ ವಿಷಯಗಳಲ್ಲಿ ಕೆಲವು ಇಲ್ಲಿಯವರೆಗೆ ತಂತ್ರಜ್ಞಾನಕ್ಕೆ ಅಳವಡಿಕೆಯಾಗಿಲ್ಲ. ಅಳವಡಿಕೆಯಾಗಿರುವುದೂ ಕಡಿಮೆ ಬೆಲೆಗೆ ಸಿಗುವುದಿಲ್ಲ. ಮಾರುಕಟ್ಟೆಯಲ್ಲಿ ಯಾವ ತಂತ್ರಾಂಶಗಳ ಲಭ್ಯವಿದೆ ಎಂಬುದು ಅಧ್ಯಾಪಕರಿಗೆ ತಿಳಿದಿರುವುದಿಲ್ಲ. ಶಾಲೆಗಳು ಆ ಮೊತ್ತವನ್ನು ಭರಿಸಲು ತಯಾರಿರುವುದಿಲ್ಲ.

ಒಟ್ಟಿನಲ್ಲಿ ಐಸಿಟಿಯನ್ನು ಶಿಕ್ಷಣದಲ್ಲಿ ಅಳವಡಿಸಲು ಸಾಕಷ್ಟು ಭೌತಿಕ ಸೌಲಭ್ಯಗಳು, ತಂತ್ರಜ್ಞಾನಗಳ ಲಭ್ಯತೆ, ಕಾಲಕಾಲಕ್ಕೆ ಅವುಗಳನ್ನು ಉನ್ನತೀಕರಿಸುವಿಕೆ, ವೃತ್ತಿಪರ ಬೆಂಬಲ ಸೇವೆಗಳ ನಿರ್ವಹಣೆ ಈ ಎಲ್ಲದರ ಅವಶ್ಯಕತೆ ಇದೆ. ಹಿಂದೆ ಹೇಳಿದಂತೆ, ಶಾಲೆಗಳಲ್ಲಿ ಐಸಿಟಿ ಅನ್ವಯ ಕಾರ್ಯಕ್ರಮ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದಲ್ಲಿ ಸೇರ್ಪಡೆಯಾಗಿದ್ದು ಇದೀಗ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವು 'ಸಮಗ್ರ ಶಿಕ್ಷಾ' ಕಾರ್ಯಕ್ರಮದ ಅಡಿಯಲ್ಲಿ ಸೇರ್ಪಡೆಯಾಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಕೆಳಗಿನವುಗಳಲ್ಲಿ ಶಾಲೆಗಳಲ್ಲಿ ಐಸಿಟಿ ಅಳವಡಿಸುವಿಕೆಯ ಪರಿಸರಾತ್ಮಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕ ಸವಾಲುಗಳನ್ನು ವರ್ಗೀಕರಿಸಿ.

1. ಐಸಿಟಿ ಸಾಧನಗಳನ್ನು ಇಡಲು ಸಮರ್ಪಕ ಕೊಠಡಿಗಳು ಅಥವಾ ಕಟ್ಟಡಗಳ ಕೊರತೆ

2. ಶಿಕ್ಷಣದಲ್ಲಿ ಐಸಿಟಿ ಅಳವಡಿಸಲು ಹೆಚ್ಚಿನ ಪ್ರಮಾಣದ ಬಂಡವಾಳ ಅಗತ್ಯವಿದೆ.
3. ಹಳೇ ಕಟ್ಟಡಗಳಿರುವಲ್ಲಿ ವೈರಿಂಗ್, ವೆಂಟಿಲೇಷನ್‌ಗಳ ಸಮರ್ಪಕತೆಯ ಕೊರತೆ
4. ಶಿಕ್ಷಣದಲ್ಲಿ ಐಸಿಟಿಯ ಅಳವಡಿಕೆ ಇನ್ನೂ ಆದ್ಯತೆಯನ್ನು ಪಡೆದುಕೊಂಡಿಲ್ಲ.
5. ವಿದ್ಯುಚ್ಛಕ್ತಿ ಪೂರೈಕೆ ಮತ್ತು ಟೆಲಿಫೋನ್‌ಗಳ ಸೌಕರ್ಯ ಇಲ್ಲದಿರುವುದು
6. ಶಿಕ್ಷಣದಲ್ಲಿ ಐಸಿಟಿ ಅಳವಡಿಸಲು ಹೆಚ್ಚಿನ ಪ್ರಮಾಣದ ಬಂಡವಾಳ ಅಗತ್ಯವಿದೆ.
7. ವಿವಿಧ ಐಸಿಟಿ ಸಾಧನಗಳ ಉಪಲಬ್ಧತೆಯ ಕೊರತೆ
8. ಶಿಕ್ಷಣದ ತಂತ್ರಾಂಶಗಳಲ್ಲಿ ಶೇ.80 ಭಾಗ ಇಂಗ್ಲಿಷ್ ಭಾಷೆಯಲ್ಲಿದೆ.
9. ಶೈಕ್ಷಣಿಕ ಗುರಿಗಳು ಆರ್ಥಿಕ ವಾಸ್ತವಿಕತೆಗಳನ್ನು ಸರಿದೂಗಿಸುವುದು.
10. ಇಂಗ್ಲಿಷ್ ಪ್ರಮುಖ ಭಾಷೆಯಾಗಿಲ್ಲದ ಅನೇಕ ದೇಶಗಳಲ್ಲಿ ಇಂಟರ್‌ನೆಟ್ ಬಳಕೆ ಒಂದು ಸವಾಲಾಗಿ ಪರಿಣಮಿಸಿದೆ.
11. ಶಾಲಾ ವಿಷಯಗಳಲ್ಲಿ ಕೆಲವು ಇಲ್ಲಿಯವರೆಗೆ ತಂತ್ರಜ್ಞಾನಕ್ಕೆ ಅಳವಡಿಕೆಯಾಗಿಲ್ಲ.

### 3.5.3.3. ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ (The National Repository of Open Educational Resources )

ಶಾಲಾ ಶಿಕ್ಷಣದಲ್ಲಿ ಐಸಿಟಿಯ ಬಳಕೆಯನ್ನು ಕುರಿತ ರಾಷ್ಟ್ರೀಯ ನೀತಿಯ ರೂಪಣೆ ಮತ್ತು ಅನುಷ್ಠಾನಗಳನ್ನು ಕುರಿತಂತೆ ಅನೇಕ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಶಿಕ್ಷಕರಿಗೆ ಅರಿವು ನೀಡಿ ತರಬೇತಿಗೊಳಿಸಲಾಯಿತು. ಈ ನೀತಿಯೇ ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ ಡಿಜಿಟಲ್ ಭಂಡಾರಗಳನ್ನು ಸ್ಥಾಪಿಸಬೇಕೆಂಬುದನ್ನು ಇದು ಅಧ್ಯಾಪಕರಿಗೆ ಅಗತ್ಯವಾದ ಡಿಜಿಟಲ್ ಸಂಪನ್ಮೂಲಗಳನ್ನು ಸಂಗ್ರಹಿಸಿಕೊಂಡಿರಬೇಕೆಂದೂ ಸೂಚಿಸಿತ್ತು. ಮೇಲೆ ಹೇಳಿದ ಈ ನೀತಿ ಮತ್ತು ICT @ School ಯೋಜನೆಗಳು ಕಲಿಕಾ ಸಂಪನ್ಮೂಲಗಳ ಸಂಯೋಜಿತ ಸೃಷ್ಟಿ ಮತ್ತು ವ್ಯಾಪಕ ಪ್ರಸಾರವನ್ನು ಶಿಫಾರಸು ಮಾಡಿದವು. ಇದು ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ ಸ್ಥಾಪನೆಗೆ ಕಾರಣವಾಯಿತು.

ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗ, ಮಾನವ ಸಂಪನ್ಮೂಲ ಬೆಳವಣಿಗೆ ಸಚಿವಾಲಯಗಳಿಂದ ಮಾಡಲಾದ ಒಂದು ಪ್ರಯತ್ನ. ಇದು ರಾಷ್ಟ್ರದಲ್ಲಿನ ಶಿಕ್ಷಣ ಕ್ಷೇತ್ರದಲ್ಲಿ ಎದುರಿಸಲಾಗುತ್ತಿರುವ ಅನೇಕ ಸವಾಲುಗಳನ್ನು ಎದುರಿಸಲು ಒಂದು ಪರಿಹಾರ ಎಂದು ಪರಿಗಣಿಸಲಾಗಿದೆ. ಈವರೆಗೆ ತಲುಪಲಾಗದವರನ್ನು ತಲುಪುವುದು, ಎಲ್ಲರಿಗೂ ಶಿಕ್ಷಣ ಸಿಗುವಂತೆ ಮಾಡುವುದು ಇದರ ಗುರಿ. ಇದು ಎಲ್ಲ ಶಾಲಾ ವಿಷಯಗಳಿಗೆ ಎಲ್ಲ ತರಗತಿಗಳಿಗೆ ಬಹುಭಾಷೆಗಳಲ್ಲಿ ಸಂಪನ್ಮೂಲಗಳನ್ನು ಒದಗಿಸುತ್ತದೆ. ಶಾಲಾ ಶಿಕ್ಷಣಕ್ಕೆ ಎಲ್ಲ ಡಿಜಿಟಲ್ ಸಂಪನ್ಮೂಲಗಳನ್ನು ಇದು ಒಂದೆಡೆ ಶೇಖರಿಸುತ್ತದೆ. ಈ ಭಂಡಾರದ ಸುಗಮ ಕಾರ್ಯಾಚರಣೆ ಮತ್ತು ಬಳಕೆಗಾಗಿ ವಿವಿಧ ಐಸಿಟಿ ಸಾಧನಗಳ ಬೆಂಬಲವನ್ನು ಪಡೆದುಕೊಳ್ಳಬೇಕಾಗುತ್ತದೆ. ಇದು ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಅಂತರ್ ಕ್ರಿಯಾ ಕಲಿಕೆಗೆ ಅವಕಾಶ ಮಾಡಿಕೊಡುತ್ತದೆ. ಇದರಿಂದ ಸಂಪನ್ಮೂಲಗಳನ್ನು ತೆಗೆದುಕೊಂಡು ಬಳಸುವುದಲ್ಲದೆ ನಾವು ತಯಾರಿಸಿದ ಸಂಪನ್ಮೂಲಗಳನ್ನು ಇದರೊಳಗೆ ಸೇರಿಸಲು ಅವಕಾಶವಿದೆ. ಇದರಿಂದ ಸಂಪನ್ಮೂಲಗಳ ತಯಾರಿಕೆಯನ್ನೂ ಕಲಿಯುವ, ಮೌಲ್ಯೀಕರಿಸುವ ಅವಕಾಶಗಳು ದೊರೆಯುತ್ತವೆ. ಈ ಭಂಡಾರದ ಉದ್ದೇಶಗಳು ಕೆಳಕಂಡಂತಿವೆ:

- ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ವಿಭಿನ್ನ ರೀತಿಯ ಡಿಜಿಟಲ್ ಸಂಪನ್ಮೂಲಗಳ ಬಳಕೆಗೆ ಅವಕಾಶ ಮಾಡಿಕೊಡುವುದು;

- ಸಮುದಾಯಗಳಿಗೆ ಡಿಜಿಟಲ್ ಸಂಪನ್ಮೂಲಗಳನ್ನು ಬೆಳೆಸುವ ಹಾಗೂ ವಿನಿಮಯ ಮಾಡಿಕೊಳ್ಳುವಲ್ಲಿ ಭಾಗವಹಿಸಲು ಅನುವು ಮಾಡಿಕೊಡುವುದು;
- ದೇಶದ ಶಿಕ್ಷಣ ವ್ಯವಸ್ಥೆಯ ಗುಣಮಟ್ಟವನ್ನು ಸುಧಾರಿಸುವುದು;
- ಸನ್ನಿವೇಶಗಳಿಗನುಗುಣವಾದ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳನ್ನು ರೂಪಿಸಲು ಮತ್ತು ವಿನಿಮಯ ಮಾಡಿಕೊಳ್ಳಲು ಅಧ್ಯಾಪಕರಿಗೆ ಅನುಕೂಲಿಸುವುದು;
- ಸಂಪನ್ಮೂಲ ಸೃಷ್ಟಿಯಲ್ಲಿನ ಆವಿಷ್ಕಾರಗಳನ್ನು ಸಂಭ್ರಮಿಸುವುದು.

**ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರದ ಲಕ್ಷಣಗಳು**

- ಬಯಸಿದವರೆಲ್ಲರಿಗೂ ಸಂಪನ್ಮೂಲವನ್ನು ಪಡೆಯಬಹುದಾದ ಮುಕ್ತ ಅವಕಾಶ
- ಉಚಿತವಾಗಿ ಸಂಪನ್ಮೂಲಗಳ ಲಭ್ಯತೆ
- ವಿನಿಮಯ ಮಾಡಿಕೊಳ್ಳಬಹುದಾದ ಸಂಪನ್ಮೂಲಗಳು
- ಸಂಪನ್ಮೂಲಗಳು ವಿಭಿನ್ನ ಗುಂಪುಗಳಲ್ಲಿ ಉಪಲಬ್ಧ
- ಒಂದು ವಿಷಯಕ್ಕೆ ಸಂಬಂಧಿಸಿದ ಎಲ್ಲ ಸಂಪನ್ಮೂಲವೂ ಒಂದೇ ಸ್ಥಳದಲ್ಲಿ ಲಭ್ಯ ಮತ್ತು ಅದು ಸಮಗ್ರವೂ ಹೌದು.
- ಕೆಲವು ಬಾರಿ ಸಂಪನ್ಮೂಲಗಳನ್ನು ಸನ್ನಿವೇಶಕ್ಕನುಗುಣವಾಗಿ ಬಳಸಿಕೊಳ್ಳಬೇಕಾಗಿರುವಂತಹುದು.
- ಸೂಕ್ತ ಪರವಾನಿಗೆಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಭಂಡಾರಕ್ಕೆ ಸೇರಿಸಬಹುದು.

ಈ ಭಂಡಾರದ ವಿಶಿಷ್ಟ ಲಕ್ಷಣವೆಂದರೆ ಇದರಲ್ಲಿನ ವಿಷಯಗಳ ಸಂಘಟನೆ. ಇದರಲ್ಲಿರುವ ಪರಿಕಲ್ಪನಾ ನಕ್ಷೆಗಳೇ ಅಧ್ಯಾಪಕರಿಗೊಂದು ಉತ್ತಮ ಕಲಿಕೆಯ ಸಂಪನ್ಮೂಲ. ಇದು ಪಠ್ಯಕ್ರಮವನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವ ಮತ್ತು ಅವರದೇ ತರಗತಿಗಳಿಗೆ ವಿಶಿಷ್ಟ ಕಲಿಕಾ ವಸ್ತುಗಳನ್ನು ರೂಪಿಸುವ ಅವಕಾಶಗಳನ್ನು ಒದಗಿಸಿಕೊಡುತ್ತವೆ. ಜ್ಞಾನದ ಸಮಷ್ಟಿರೂಪದ ಪರಿಚಯ ಮಾಡುವುದು ಮತ್ತು ಅಂತರ್ ಶಿಸ್ತೀಯ ಸಂಬಂಧಗಳನ್ನು ಮನದಟ್ಟು ಮಾಡುವುದು ಈ ಪರಿಕಲ್ಪನಾ ನಕ್ಷೆಗಳ ಉದ್ದೇಶ. ಕೀವರ್ಡ್ ಸರ್ಚ್ ಮೂಲಕ ಪರಕಲ್ಪನಾ ನಕ್ಷೆಗಳನ್ನು ಪಡೆಯಬಹುದು. ಯಾವುದೇ ಪರಿಕಲ್ಪನೆಯ ಮೇಲೆ ಕಂಟ್ರೋಲ್ ಬಟನ್ ಕ್ಲಿಕ್ಕಿಸುವುದರಿಂದ ನಕ್ಷೆಯ ವಿಸ್ತೃತ ರೂಪವನ್ನು ನೋಡಬಹುದು. ಒಂದು ಪರಿಕಲ್ಪನೆಯಿಂದ ಒಳಹೊಕ್ಕರೆ ಅದು ಸಂಬಂಧಿಸಿದ ಹಲವಾರು ಪರಿಕಲ್ಪನೆಗಳನ್ನು ತೆರೆದಿಡುತ್ತದೆ. ಡಿಜಿಟಲ್ ಸಂಪನ್ಮೂಲಗಳಾದ ದಾಖಲೆಗಳು, ದೃಕ್ ಶ್ರವಣಗಳು, ಅಂತರ್ ಕ್ರಿಯಾ ವಸ್ತುಗಳು, ಚಿತ್ರಗಳು ಇವುಗಳನ್ನು ಪರಿಕಲ್ಪನೆಗಳಿಗನುಗುಣವಾಗಿ ಜೋಡಿಸಲಾಗಿದ್ದು ಅವು ಭಂಡಾರದಲ್ಲಿ ಉಪಲಬ್ಧವಿದೆ. ಇದು ಅಧ್ಯಾಪಕರಿಗೆ ಎಟುಕುವ ವಿಶಿಷ್ಟ ಗ್ರಂಥಾಲಯ. ಈ ಭಂಡಾರದಲ್ಲಿ ವಿಶಾಲ ವ್ಯಾಪ್ತಿಯ ವೀಡಿಯೋಗಳೂ ಸಿಗುತ್ತವೆ. ಭೂಪ್ರದೇಶಗಳು ಮತ್ತು ಜನರು, ಭಾರತದ ನೃತ್ಯಪ್ರಕಾರಗಳು, ವಿಜ್ಞಾನ ಪ್ರಯೋಗಗಳು ಇತ್ಯಾದಿ ಅನೇಕ ವೀಡಿಯೋಗಳು ಇದರಲ್ಲಿ ಉಪಲಬ್ಧವಿವೆ.

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 3**

ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರದ ಬಳಕೆಯನ್ನು ಪ್ರಾರಂಭಿಸಿ. ನೀವು ಕಂಡ ಕೆಲವು ಅಂಶಗಳನ್ನು ವಿಮರ್ಶಿಸಿ.

### 3.5.4 ಸಾರಾಂಶಿಸೋಣ

- ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಕುರಿತ ರಾಷ್ಟ್ರೀಯ ನೀತಿಯನ್ನು 2004ರ

ಡಿಸೆಂಬರ್‌ನಲ್ಲಿ ಪ್ರಕಟಿಸಲಾಯಿತು. ರಾಷ್ಟ್ರೀಯ ನೀತಿ ಚೌಕಟ್ಟಿನೊಳಗೆ ಶಾಲಾ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಗರಿಷ್ಠ ಬಳಕೆಗೆ ರಾಜ್ಯಗಳೊಂದಿಗೆ ಸಹಕರಿಸುವುದು ಇದರ ಆಶಯವಾಗಿತ್ತು.

- ಬೋಧನೆ ಮತ್ತು ಕಲಿಕೆಯ ಗುರಿಗಳನ್ನು ಸಾಧಿಸಲು, ಶಿಕ್ಷಣದ ಅವಕಾಶಗಳನ್ನು ವಿಸ್ತರಿಸಲು, ಸಂಪನ್ಮೂಲಗಳನ್ನು ಪಡೆದುಕೊಳ್ಳಲು, ಸಾಮರ್ಥ್ಯಗಳನ್ನು ಬೆಳೆಸಲು, ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ವಹಿಸಲು ಡಿಜಿಟಲ್ ರೂಪದಲ್ಲಿ ಪರಿವರ್ತಿಸಬಹುದಾದ ಅಥವಾ ಡಿಜಿಡಲ್ ರೂಪದಲ್ಲಿ ರವಾನಿಸಬಹುದಾದ, ಬಳಸಬಹುದಾದ ಎಲ್ಲ ಸಾಧನಗಳು, ಸಲಕರಣೆಗಳು, ವಿಷಯಗಳು, ಸಂಪನ್ಮೂಲಗಳು ಮತ್ತು ಸೇವೆಗಳು ಒಟ್ಟಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಎನಿಸಿಕೊಳ್ಳುತ್ತದೆ.
- ಐಸಿಟಿ ನೀತಿಯ ಮತ್ತೊಂದು ಗಮನವೆಂದರೆ ಅಧ್ಯಾಪಕರಲ್ಲಿ ಸಾಮರ್ಥ್ಯವರ್ಧನೆ. ಇದು ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕರಲ್ಲಿ ಐಸಿಟಿ ಕುರಿತ ಸಾಮರ್ಥ್ಯವರ್ಧನೆಗೆ ಪ್ರಯತ್ನಿಸಿದೆ.
- ಐಸಿಟಿಯನ್ನು ಶಿಕ್ಷಣದಲ್ಲಿ ಅಳವಡಿಸಲು ಸಾಕಷ್ಟು ಭೌತಿಕ ಸೌಲಭ್ಯಗಳು, ತಂತ್ರಜ್ಞಾನಗಳ ಲಭ್ಯತೆ, ಕಾಲಕಾಲಕ್ಕೆ ಅವುಗಳನ್ನು ಉನ್ನತೀಕರಿಸುವಿಕೆ, ವೃತ್ತಿಪರ ಬೆಂಬಲ ಸೇವೆಗಳ ನಿರ್ವಹಣೆ ಈ ಎಲ್ಲದರ ಅವಶ್ಯಕತೆ ಇದೆ. ಹಿಂದೆ ಹೇಳಿದಂತೆ, ಶಾಲೆಗಳಲ್ಲಿ ಐಸಿಟಿ ಅನ್ವಯ ಕಾರ್ಯಕ್ರಮ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನದಲ್ಲಿ ಸೇರ್ಪಡೆಯಾಗಿದ್ದು ಇದೀಗ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನವು 'ಸಮಗ್ರ ಶಿಕ್ಷಾ' ಕಾರ್ಯಕ್ರಮದ ಅಡಿಯಲ್ಲಿ ಸೇರ್ಪಡೆಯಾಗಿದೆ.
- ಅಧ್ಯಾಪಕರು ಡಿಜಿಟಲ್ ಸಾಕ್ಷರರಾಗಿ ಅದನ್ನು ಪಠ್ಯಕ್ರಮದಲ್ಲಿ ಹೇಗೆ ಅಳವಡಿಸಬಹುದೆಂಬುದನ್ನು ತಿಳಿದಿದ್ದರೆ ಮಾತ್ರ, ಶಾಲೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರಬಲ್ಲುದು. ಶಾಲೆಗಳಲ್ಲಿ ಐಸಿಟಿಯ ಪರಿಣಾಮಕಾರಿ ಅನ್ವಯವನ್ನು ಖಚಿತಪಡಿಸಿಕೊಳ್ಳಲು ತಜ್ಞರು ಐದು ಮಾರ್ಗೋಪಾಯಗಳನ್ನು ಗುರುತಿಸಿದ್ದಾರೆ.
- ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ವಿಭಾಗ, ಮಾನವ ಸಂಪನ್ಮೂಲ ಬೆಳವಣಿಗೆ ಸಚಿವಾಲಯಗಳಿಂದ ಮಾಡಲಾದ ಒಂದು ಪ್ರಯತ್ನ. ಇದು ರಾಷ್ಟ್ರದಲ್ಲಿನ ಶಿಕ್ಷಣ ಕ್ಷೇತ್ರದಲ್ಲಿ ಎದುರಿಸಲಾಗುತ್ತಿರುವ ಅನೇಕ ಸವಾಲುಗಳನ್ನು ಎದುರಿಸಲು ಒಂದು ಪರಿಹಾರ ಎಂದು ಪರಿಗಣಿಸಲಾಗಿದೆ. ಈವರೆಗೆ ತಲುಪಲಾಗದವರನ್ನು ತಲುಪುವುದು, ಎಲ್ಲರಿಗೂ ಶಿಕ್ಷಣ ಸಿಗುವಂತೆ ಮಾಡುವುದು ಇದರ ಗುರಿ.

## 3.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1, 2 ಮತ್ತು 3

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಸ್ವಕಲಿಕಾ ಸಾಮಗ್ರಿಯಲ್ಲಿ ಭಾಗ 3.5.3.1 ಗಮನಿಸಿ

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1, 3, 5, 7 – ಪರಿಸರಾತ್ಮಕ ಸವಾಲುಗಳು

2, 6, 9 – ಆರ್ಥಿಕ ಸವಾಲುಗಳು

4, 11 – ಶೈಕ್ಷಣಿಕ ಸವಾಲುಗಳು

8, 10 – ಸಾಂಸ್ಕೃತಿಕ ಸವಾಲುಗಳು

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 3**

ನಿಮ್ಮ ಇಬ್ಬರು ಅಧ್ಯಾಪಕ ಸ್ನೇಹಿತ/ಸ್ನೇಹಿತೆಯರಿಗೆ ನೀವು ಭಂಡಾರದಲ್ಲಿ ಮೆಚ್ಚಿಕೊಂಡ ವಿಷಯಗಳನ್ನೂ ಅದನ್ನು ಬಳಸುವ ರೀತಿಯನ್ನೂ ಪರಿಚಯ ಮಾಡಿಕೊಡಿ.

## 3.5.6. ಘಟಕಾಂತ್ಯ ಅಭ್ಯಾಸಗಳು

1. ಶಾಲೆಗಳಲ್ಲಿ ಐಸಿಟಿ ಬಳಸಬೇಕಾದ ಮತ್ತು ಬೆಳೆಸಬೇಕಾದ ಅವಶ್ಯಕತೆಯನ್ನು ಸ್ಪಷ್ಟಪಡಿಸಿ.
2. ತೆರೆದ ಶೈಕ್ಷಣಿಕ ಸಂಪನ್ಮೂಲಗಳ ರಾಷ್ಟ್ರೀಯ ಭಂಡಾರ ಪ್ರಮುಖ ಅಂಶಗಳನ್ನು ಪರಿಚಯಿಸಿ.

## 3.5.7. ಪರಾಮರ್ಶನ ಸೂಚಿ


1. http://www.rmsaindia.gov.in/en/about-rmsa/ict.html
2. https://www.education.ie/en/Schools-Colleges/Information/Information-Communications-Technology-ICT-in-Schools/
3. https://learningportal.iiep.unesco.org/en/issue-briefs/improve-learning/curriculum-and-materials/information-and-communication-technology-ict
4. http://www.educationbusinessuk.net/features/role-technology-and-ict-primary-and-secondary-education
5. https://www.google.com/search?q=ict+in+ schools&rlz=1 C1HLDY_enIN 83 1IN831 &oq=ICT+i n+school&aqs=chrome. 0.0j69i57j69i60j0l3. 14994j0 j7 &sourceid=chrome&ie=UTF-8
6. https://ictcurriculum.gov.in/
7. https://www.franchiseindia.com/education/Effectiveness-of-ICT-in-Education.10155
8. https://www.researchgate.net/publication/232607668_Does_ICT_Improve_Learning_and_Teaching_in_Schools
9. https://en.wikipedia.org/wiki/National_Repository_of_Open_Educational_Resources
10. http://edtechreview.in/news/561-national-repository-of-open-educational-resources-by-mhrd
11. http://www.ncert.nic.in/writeupnroer.pdf
12. https://creativecommons.org/2013/08/14/india-launches-national-repository-of-open-educational-resources/
13. https://oerknowledgecloud.org/sites/oerknowledgecloud.org/files/NROER%20brief_0.pdf


***************

# ಬ್ಲಾಕ್–3 : ಭಾರತದಲ್ಲಿ ಶಿಕ್ಷಣದ ಬೆಳವಣಿಗೆಗಾಗಿ ನೀತಿ ಚೌಕಟ್ಟು ಮತ್ತು ಪ್ರಯತ್ನಗಳು

## ಘಟಕ–6 : ಶಿಕ್ಷಕ ಮತ್ತು ಬೋಧನೆಯ ಕುರಿತು ಪಂಡಿತ ಮದನ ಮೋಹನ ಮಾಲವೀಯ ರಾಷ್ಟ್ರೀಯ ಮಿಶನ್

**ಘಟಕದ ರಚನೆ :**


3.6.1. ಕಲಿಕೆಯ ಉದ್ದೇಶಗಳು

3.6.2. ಪೀಠಿಕೆ

3.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

3.6.3.1. ನಿಯೋಗದ ಹಿನ್ನೆಲೆ ಮತ್ತು ಅಂಶಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

3.6.3.2. ನಿಯೋಗದ ನಿರ್ವಹಣೆ ಮತ್ತು ಮೌಲ್ಯಮಾಪನ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

3.6.4. ಸಾರಾಂಶಿಸೋಣ

3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

3.6.6. ಘಟಕಾಂತ್ಯ ಅಭ್ಯಾಸಗಳು

3.6.7. ಪರಾಮರ್ಶನ ಸೂಚಿ


### 3.6.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಮದನ ಮೋಹನ ಮಾಳವೀಯರವರ ಕುರಿತು ಮತ್ತು ಶಿಕ್ಷಣಕ್ಕೆ ಅವರ ಕೊಡುಗೆಗಳ ಕುರಿತು ವಿವರಿಸುವರು;
- ಈ ನಿಯೋಗದ ಗುರಿ, ಘಟಕಾಂಶಗಳು ಮತ್ತು ವಿಮೋಚಕಗಳ ಕುರಿತು ವಿಶ್ಲೇಷಿಸುವರು; ಮತ್ತು
- ನಮ್ಮ ಶೈಕ್ಷಣಿಕ ಕ್ರಮದಲ್ಲಿನ ಗುಣಾಂಶಗಳು ಮತ್ತು ಆದರ್ಶ ಶೈಕ್ಷಣಿಕ ಕ್ರಮದ ನಡುವಿನ ಅಂತರವನ್ನು ಗರುತಿಸುವರು ; ಮತ್ತು
- ಈ ಅಂತರವನ್ನು ಹೋಗಲಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಪ್ರಶಂಸಿಸುವರು.

### 3.6.2 ಪೀಠಿಕೆ

ಒಟ್ಟು ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವವಾದುದು ಎಂಬುದು ನಿಮಗೆ ತಿಳಿದಿದೆ. ಡಾ ಅಬ್ದುಲ್ ಕಲಾಂ ಅವರೂ "ಶಿಕ್ಷಕರು ಶಿಕ್ಷಣದ ಬೆನ್ನೆಲುಬು, ಆಧಾರಸ್ತಂಭಗಳಂತೆ. ಅವರು ವಿದ್ಯಾರ್ಥಿಗಳ ಮಹತ್ವಾಕಾಂಕ್ಷೆಗಳನ್ನು ಸಾಕಾರಗೊಳಿಸುವಂತಹವರು, ಶಿಕ್ಷಕರು ಬೌದ್ಧಿಕ ಸಮಗ್ರತೆ ಮತ್ತು ಸಾರ್ವತ್ರಿಕ ಸಹಾನುಭೂತಿಗಳ ಸಾರ್ವಕಾಲಿಕ ಅನ್ವೇಷಕರಾಗಿರುತ್ತಾರೆ' ಎಂದು ಹೇಳಿದ್ದಾರೆ. ಈ ರೀತಿಯಲ್ಲಿ ಶಿಕ್ಷಕರು ಪಾತ್ರವಹಿಸಬೇಕಾಗಿದ್ದು ಅವರಿಗೆ ಅತಿ

ಉನ್ನತಮಟ್ಟದ ತರಬೇತಿ ಹಾಗೂ ಪುಷ್ಟಿ ಬೇಕಾಗುತ್ತದೆ. ಇಂದು ಶಿಕ್ಷಣದ ಬೇಡಿಕೆಯು ಹೆಚ್ಚಾಗುತ್ತಿದ್ದು, ದೇಶದಲ್ಲಿನ ಶೈಕ್ಷಣಿಕ ಕ್ರಮಗಳನ್ನು ಎಲ್ಲಾ ಹಂತಗಳಲ್ಲಿ ಗುಣಾತ್ಮಕತೆಯೊಂದಿಗೆ ವಿಸ್ತರಿಸಬೇಕಾಗಿದೆ. ಶಿಕ್ಷಣ ವ್ಯವಸ್ಥೆಯ ಇಂದಿನ ಪ್ರಮುಖ ಮಿತಿಯಾಗಿರುವ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಂತರವನ್ನು ಸರಿದೂಗಿಸಬೇಕಾಗಿದೆ. ಈ ದಿಸೆಯಲ್ಲಿ ಶಿಕ್ಷಕರ ತಯಾರಿ ಮತ್ತು ಅವರ ತರಗತಿ, ಶಾಲೆ ಮತ್ತು ಕಾಲೇಜುಗಳ ಕಾರ್ಯವೈಖರಿಗಳ ಕುರಿತು ಗಮನಹರಿಸುವುದು ಅಗತ್ಯವಾಗಿದೆ. ಈ ಅಗತ್ಯತೆಗೆ ಸಹಾಯಕವಾಗುವಂತೆ ನಿರಂತರ ವೃತ್ತಿಪರ ಬೆಳವಣಿಗೆಯನ್ನು ನೀಡಿ, ಅವರೆಲ್ಲರ ಸಾಮರ್ಥ್ಯಗಳನ್ನು ದೇಶದ ಭವಿಷ್ಯದ ಸಂತತಿಗೆ ರೂಪುನೀಡಲು ಅವಶ್ಯಕವಾಗಿ ಲಭ್ಯವಾಗುವಂತೆ ಮಾಡುವುದೊಂದು ಸವಾಲಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಈ ರೀತಿಯ ವ್ಯವಸ್ಥೆಯನ್ನು ಅನುಕೂಲಿಸಲು ಪ್ರಧಾನಮಂತ್ರಿಯವರು "ಪಂಡಿತ ಮದನ ಮೋಹನ ಮಾಳವೀಯ ರಾಷ್ಟ್ರೀಯ ಶಿಕ್ಷಣ ನಿಯೋಗ"ವನ್ನು ಪ್ರಾರಂಭಿಸಿದ್ದಾರೆ. ಈ ನಿಯೋಗದ ಕುರಿತು ಈ ಘಟಕದಲ್ಲಿ ಚರ್ಚಿಸೋಣ.

## 3.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 3.6.3.1. ನಿಯೋಗದ ಹಿನ್ನೆಲೆ ಮತ್ತು ಅಂಶಗಳು

ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯು, ಶಿಕ್ಷಣದ ಗುಣಾತ್ಮಕತೆಯನ್ನು ಉತ್ತಮಪಡಿಸುವಲ್ಲಿ ಶಿಕ್ಷಕರ ಕೇಂದ್ರ ಪಾತ್ರವನ್ನು ಗುರುತಿಸಲು, ಅಧ್ಯಾಪಕರು ಮತ್ತು ಬೋಧನೆಯನ್ನು ಕುರಿತ ಒಂದು ರಾಷ್ಟ್ರೀಯ ನಿಯೋಗವನ್ನು ಪ್ರಾರಂಭಿಸಬೇಕೆಂದು ಆಶಿಸಿತ್ತು. ಸಂಸದೀಯ ಸ್ಥಾಯೀ ಸಮಿತಿ ವಿಭಾಗದ 274ನೇ ವರದಿಯು ಈ ನಿಟ್ಟಿನಲ್ಲಿ ಒಂದು ರಾಷ್ಟ್ರೀಯ ನಿಯೋಗವನ್ನು ಸರಿಯಾದ ಮಾರ್ಗ ಎಂದು ಭಾವಿಸಿ, ಇದಕ್ಕಾಗಿ ತಕ್ಷಣವೇ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವನ್ನು ವಿನಂತಿಸಿಕೊಂಡಿತು. ಇದೆಲ್ಲದರ ಪರಿಣಾಮವಾಗಿ 18ನೇ ಡಿಸೆಂಬರ್ 2014 ರಂದು ಈ ನಿಯೋಗವು ಅನುಮೋದನೆಗೊಂಡಿತು.

ಸ್ವಾತಂತ್ರ್ಯ ಸಂಗ್ರಾಮದ ರೂವಾರಿಗಳಲ್ಲೊಬ್ಬರಾಗಿದ್ದ ಪಂಡಿತ ಮದನ ಮೋಹನ ಮಾಳವೀಯ(1861–1946)ರವರ 153ನೇ ವಾರ್ಷಿಕ ಜನ್ಮದಿನಾಚರಣೆಯಂದು, ಭಾರತೀಯ ಸರ್ಕಾರದ ಅಧೀನದಲ್ಲಿನ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ದಿನಾಂಕ 25ನೇ ಡಿಸೆಂಬರ್ 2014ರಂದು ಈ ಯೋಜನೆಯನ್ನು ಜಾರಿಗೊಳಿಸಿತು. ಈ ನಿಯೋಗವನ್ನು ಪಂಡಿತ ಮದನ ಮೋಹನ ಮಾಳವೀಯ ಶಿಕ್ಷಕ ಮತ್ತು ಬೋಧನಾ ರಾಷ್ಟ್ರೀಯ ನಿಯೋಗ ಎಂಬ ಹೆಸರಿನಿಂದ ಕರೆಯಲಾಗಿದೆ. ಶಾಲೆ ಮತ್ತು ಉನ್ನತ ಶಿಕ್ಷಣದ ಅಭಿವೃದ್ಧಿಪಡಿಸುವುದು ಮತ್ತು ಈ ಕ್ಷೇತ್ರದ ಸಮಗ್ರ ಸಮಸ್ಯೆಗಳಿಗೆ ಸಂಬಂಧಿಸಿದಂತೆ–ಶಿಕ್ಷಕರು, ಬೋಧನೆ, ಶಿಕ್ಷಕ ತಯಾರಿ, ವೃತ್ತಿ ಬೆಳವಣಿಗೆ, ಪಠ್ಯಕ್ರಮ ವಿನ್ಯಾಸ, ಮೌಲ್ಯಮಾಪನದ ವಿನ್ಯಾಸಗೊಳಿಸುವಿಕೆ ಮತ್ತು ಅಭಿವೃದ್ಧಿಪಡಿಸುವಿಕೆ, ಮೌಲ್ಯಮಾಪನ ವಿಧಾನ ಮತ್ತು ಬೋಧನಾ ವಿಧಾನಗಳಲ್ಲಿ ಸಂಶೋಧನೆ, ಪ್ರಗತಿ ಮುಂತಾದವುಗಳಿಗೆ ಪರಿಹಾರ ಕಂಡುಹಿಡಿಯುವುದಾಗಿದೆ. ಇದು ಒಂದು ಸಮಗ್ರ ಯೋಜನೆಯಾಗಿದ್ದು, ಶಿಕ್ಷಕರ ಬೆಳವಣಿಗೆ ಮತ್ತು ಬೋಧನೆಯ ಪರಿಣಾಮಕಾರಿತ್ವಕ್ಕೆ ಅಗತ್ಯವಾದ ಸಹಕಾರವನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಅಧೀನದಲ್ಲಿ ನೀಡಲಾಗಿದೆ. ಈ ನಿಯೋಗವು ದೀರ್ಘಕಾಲದ ಮತ್ತು ಅಲ್ಪಕಾಲದ ಉದ್ದೇಶಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯಪ್ರವೃತ್ತವಾಗಿದೆ. ಇದರ ಪ್ರಸ್ತುತ ಉದ್ದೇಶ ಗುಣಾತ್ಮಕ ಶಿಕ್ಷಕರನ್ನು ಒದಗಿಸುವುದು, ಶಿಕ್ಷಕ ವೃತ್ತಿಗೆ ಕ್ರಿಯಾಶೀಲರನ್ನು ಆಕರ್ಷಿಸುವುದು, ಶಾಲೆ ಮತ್ತು ಕಾಲೇಜು ಶಿಕ್ಷಕರ ಗುಣಮಟ್ಟವನ್ನು ಹೆಚ್ಚಿಸುವುದು, ಶ್ರೇಷ್ಠ ದರ್ಜೆಯ ಸಂಸ್ಥೆಗಳನ್ನು ಬೆಳೆಸುವುದು ಮತ್ತು ಶಿಕ್ಷಕರ ವೃತ್ತಿ ಬೆಳವಣಿಗೆಗೆ ಅನುವುಮಾಡಿಕೊಡುವುದು.

ಇದರ ಅವಧಿ ಮೊದಲಿಗೆ 2014ರ ವರೆಗೆ ಎಂದು ನಿಗದಿಯಾದದ್ದು ಈಗ 2020ರವರೆಗೆ ಮುಂದುವರಿಸಲಾಗಿದೆ.



ಮದನ ಮೋಹನ ಮಾಳವೀಯ ಅವರು ಅಲಹಾಬಾದಿನ ಸಂಪ್ರದಾಯಸ್ಥ ಕುಟುಂಬದಲ್ಲಿ 25ನೇ ಡಿಸೆಂಬರ್ 1861ರಲ್ಲಿ ಜನಿಸಿದರು. ಇವರು ತಮ್ಮ ನೈತಿಕ ಬಲ ಮತ್ತು ಬೌದ್ಧಿಕ ಸಾಮರ್ಥ್ಯಗಳಿಂದ ಬ್ರಿಟಿಷ್ ಸಾಮ್ರಾಜ್ಯದ ಬುನಾದಿಯನ್ನು ಅಲುಗಾಡಿಸಿದರು. ಭಾರತೀಯರ ಪೂರ್ವ ನಾಗರೀಕತೆಯ ಸಾಂಸ್ಕೃತಿಕ ಪರಂಪರೆ ಮತ್ತು ಆತ್ಮದ ಪುನರುತ್ಥಾನ ಇತ್ಯಾದಿ ಅಂಶಗಳನ್ನು ಸಚೇತನಗೊಳಿಸಿದರು. ಒಬ್ಬ ದಾರ್ಶನಿಕ ಶಿಕ್ಷಣ ತಜ್ಞರಾಗಿ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವನ್ನು ಕಟ್ಟಿ, ವೈಜ್ಞಾನಿಕ, ತಾಂತ್ರಿಕ ಮತ್ತು ವೃತ್ತಿಪರ ಜ್ಞಾನವನ್ನೂ ಬೆಳೆಸಿದುದಲ್ಲದೆ ಅದರ ಪ್ರಸಾರ ಕಾರ್ಯವನ್ನೂ ಮಾಡಿದರು. ಯುವಕರಲ್ಲಿ ಒಳ್ಳೆಯ ನಡತೆ ಮತ್ತು ವ್ಯಕ್ತಿತ್ವವನ್ನು ಬೆಳೆಸುವುದರ ಮೂಲಕ ಶಿಕ್ಷಣದಲ್ಲಿ ಧರ್ಮ ಮತ್ತು ನೈತಿಕತೆಯನ್ನು ಸಮಗ್ರಗೊಳಿಸಿದರು. 1919–1938ರ ಅವಧಿಯಲ್ಲಿ ಇದೇ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿ ಒಟ್ಟು ಶಿಕ್ಷಣವನ್ನು ಬೆಳೆಸಿದ ಹಿರಿಯ ನಾಯಕರ ಶ್ರೇಣಿಯಲ್ಲಿ ಅಜರಾಮರರಾಗಿದ್ದಾರೆ.

## ನಿಯೋಗದ ಪ್ರಮುಖ ಅಂಶಗಳು :

ಕೇಂದ್ರ ಮಾನವ ಸಂಪನ್ಮೂಲ  ಇಲಾಖೆಯು 5 ಶೀರ್ಷಿಕೆಗಳಲ್ಲಿ ವರದಿಯನ್ನು ಸಂಕ್ಷಿಪ್ತವಾಗಿ ವಿವರಿಸಿದೆ:

- ಗುರಿಗಳು
- ಆಂದೋಲನ ತಂತ್ರಗಳು
- ವಿಮೋಚಕಗಳು
- ಘಟಕಾಂಶಗಳು ಮತ್ತು
- ಫಲಿತಾಂಶಗಳು

## ಎ. ನಿಯೋಗದ ಗುರಿಗಳು :

ಈ ನಿಯೋಗವು ಗುರಿಗಳನ್ನು ಮೂರು ಹಂತಗಳಲ್ಲಿ ಗುರುತಿಸಿಕೊಂಡಿದೆ:

- ಸಂಯೋಜಿತ ವಿಧಾನದ ಮೂಲಕ ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗಿನ ಶೈಕ್ಷಣಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು;
- ಸಾಂಸ್ಥಿಕ ವ್ಯವಸ್ಥೆಯ ಸಂರಚನೆ ಮತ್ತು ಬಲವರ್ಧನೆಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ತರಬೇತಿ ಮತ್ತು ಸಿಬ್ಬಂದಿ ವರ್ಗದಲ್ಲಿ ಸಾಮರ್ಥ್ಯ ವರ್ಧನೆ ಮತ್ತು ಅವರ ಉತ್ಕೃಷ್ಟತೆಯ ಮೌಲ್ಯಮಾಪನ ಮಾಡುವುದು;
- ತರಬೇತಿ, ಮರು ತರಬೇತಿ, ಪುನಶ್ಚೇತನ, ಸಾಮಾನ್ಯ ಕೌಶಲಗಳು, ಬೋಧನಾ ಕೌಶಲಗಳನ್ನು ಶ್ರೀಮಂತಗೊಳಿಸುವುದು, ಐಸಿಟಿ ಮತ್ತು ತಂತ್ರಜ್ಞಾನ ಆಧರಿತ ತರಬೇತಿ ಮತ್ತು ಸೂಕ್ತ ಮಧ್ಯವರ್ತನ ಕಾರ್ಯಕ್ರಮಗಳ ಮೂಲಕ ಶಿಕ್ಷಕರ ಮತ್ತು ಸಿಬ್ಬಂದಿ ವರ್ಗದವರ ಬಲವರ್ಧನೆ.

## ಬಿ. ತಂತ್ರಗಳು

ಈ ನಿಯೋಗದ ಗುರಿಗಳನ್ನು ಕೆಳಕಂಡ ತಂತ್ರಗಳ ಮೂಲಕ ಸಾಧಿಸಲು ಪ್ರಯತ್ನಿಸಲಾಗುತ್ತಿದೆ.

- ಪ್ರಾಯೋಗಿಕ ಮತ್ತು ಯೋಜನಾ ಆಧರಿತ ಮಧ್ಯವರ್ತನಗಳು: ಸೇವಾಪೂರ್ವ ಮತ್ತು ಸೇವಾನಿರತ ತರಬೇತಿಗಳ ಮೂಲಕ ಈಗಾಗಲೇ ಸ್ಥಾಪಿತವಾಗಿರುವ ಮತ್ತು ಹೊಸದಾಗಿ ರೂಪಿಸಲಾಗುವ

ಸಾಂಸ್ಥಿಕ ರಚನೆಗಳ ಬಲವರ್ಧನೆ, ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮತ್ತು ವಿಭಾಗಗಳನ್ನು ಪ್ರಾರಂಭಿಸುವುದು, ಉನ್ನತ ವ್ಯಾಸಂಗ ಮತ್ತು ಡಾಕ್ಟರೇಟ್ ಕಾರ್ಯಕ್ರಮಗಳ ಪುಷ್ಟೀಕರಣ, ಪೂರ್ವ ನಿರ್ಧರಿತ ವಾರ್ಷಿಕ ತರಬೇತಿ ಕ್ಯಾಲೆಂಡರ್ ರೂಪಣೆ ಮತ್ತು ಅಂತರ್ಜಾಲ ತರಬೇತಿ ನೀಡುವ ಕಾರ್ಯಕ್ರಮಗಳು.

- ಯೋಜನಾ ಆಧರಿತ ಚಟುವಟಿಕೆಗಳು: ಶಾಲಾ ಹಂತದ ಗಣಿತ, ವಿಜ್ಞಾನ ಮತ್ತು ಭಾಷಾ ಶಿಕ್ಷಕರಿಗೆ, ಮೂಲ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಭಾಗದ ತಾಂತ್ರಿಕ ಶಿಕ್ಷಣದ ಶಿಕ್ಷಕರುಗಳಿಗೆ, ಮಾನವಿಕ ಮತ್ತು ಔದ್ಯೋಗಿಕ ವಿಭಾಗದ ಶಿಕ್ಷಕರುಗಳಿಗೆ ಐಸಿಟಿ ಆಧರಿತ ತರಬೇತಿ ನೀಡುವುದು.

## ಸಿ. ವಿಮೋಚಕಗಳು (Deliverables) :

ಒಟ್ಟಾರೆಯಾಗಿ, ಅಂಕಿ ಅಂಶಗಳ ಪ್ರಕಾರವಾಗಿ, ಕೆಳಕಂಡ ಉದ್ದೇಶಗಳನ್ನು ಸಾಧಿಸುವುದು:

- ಶಾಲೆಗಳು, ಸಾಮಾನ್ಯ ಮತ್ತು ತಾಂತ್ರಿಕ ಶಿಕ್ಷಣ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳ ವಿವಿಧ ಶಾಸ್ತ್ರೀಯ ವಿಭಾಗಗಳಿಗೆ, ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಅರ್ಹತೆ ಹೊಂದಿದ ಸಮರ್ಥ ಶಿಕ್ಷಕರನ್ನು ತಯಾರುಮಾಡುವುದು. ಈ ಒಂದು ಲಕ್ಷದಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಸ್ತ್ರೀಯರು ಅಧಿಕ ಸಂಖ್ಯೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದು;
- ಶೈಕ್ಷಣಿಕ ನಾಯಕತ್ವ ಸ್ಥಾನಗಳಿಗಾಗಿ ಪ್ರಶಿಕ್ಷಕರು ಮತ್ತು ಸಿಬ್ಬಂದಿಯ ಉತ್ಕೃಷ್ಟತೆಯನ್ನು ಉತ್ತೇಜಿಸಲು ಅಗತ್ಯವಾದ ಮೂಲ ಜ್ಞಾನದ ಅರಿವನ್ನು ಹೆಚ್ಚಿಸುವುದು;
- 87ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಹೊಸ ಸಾಂಸ್ಥಿಕ ಸಂಘಟನೆಗಳನ್ನು (30 ಶಿಕ್ಷಣ ಕಾಲೇಜುಗಳು, ಬೋಧನಾ ವಿಧಾನ ಮತ್ತು ಪಠ್ಯವಸ್ತು ನಿರ್ವಹಣೆಗಾಗಿ 50 ಶ್ರೇಷ್ಠತಾ ಕೇಂದ್ರಗಳು (Centres of Excellence). 5 ಶೈಕ್ಷಣಿಕ ನಾಯಕತ್ವ ಮತ್ತು ಶೈಕ್ಷಣಿಕ ನಿರ್ವಹಣಾ ಸಂಸ್ಥೆಗಳು ಮತ್ತು 2 ಅಂತರ್ ವಿಶ್ವವಿದ್ಯಾನಿಲಯ ಶಿಕ್ಷಕ ತರಬೇತಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ವಿವಿಧ ಶೈಕ್ಷಣಿಕ ವಿಭಾಗಗಳಲ್ಲಿ ವಿಷಯವಾರು ಅಂತರ್ಜಾಲ ಬಂಧಗಳನ್ನು ಸೃಷ್ಟಿಸುವುದು.

## ಡಿ. ಘಟಕಾಂಶಗಳು

ಈ ನಿಯೋಗವು ಒಂಬತ್ತು ಘಟಕಗಳನ್ನು ಹೊಂದಿದೆ. ಸಚಿವಾಲಯವು ಘಟಕದ ಉದ್ದೇಶಗಳನ್ನು ಸ್ಪಷ್ಟಪಡಿಸಿದೆ :

ಅವು ಕೆಳಗಿನಂತಿವೆ:

- ಕೇಂದ್ರ ಮತ್ತು ರಾಜ್ಯ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು;
- 50 ವಿಜ್ಞಾನ ಮತ್ತು ಗಣಿತ ವಿಷಯಗಳ ಶೇಷ್ಠತಾ ಕೇಂದ್ರಗಳನ್ನು ತೆರೆಯುವುದು;
- ಬೋಧನೆ –ಕಲಿಕಾ ಕೇಂದ್ರಗಳನ್ನು ಸ್ಥಾಪಿಸುವುದು;
- ಸಿಬ್ಬಂದಿ ಬೆಳವಣಿಗೆ ಕೇಂದ್ರಗಳು;
- ಶಿಕ್ಷಕರ ಶಿಕ್ಷಣಕ್ಕಾಗಿ ಅಂತರ ವಿಶ್ವವಿದ್ಯಾಲಯ ಕೇಂದ್ರಗಳ ಸ್ಥಾಪನೆ;
- ಆವಿಷ್ಕಾರಗಳು, ಪ್ರಶಸ್ತಿಗಳು, ಬೋಧನಾ ಸಂಶೋಧನಾ ನಿಧಿ, ಜೊತೆಗೆ ಕಾರ್ಯಾಗಾರಗಳು ಮತ್ತು ವಿಚಾರಸಂಕಿರಣಗಳ ಆಯೋಜನೆ ;
- ಪಠ್ಯಕ್ರಮದ ಪುನಾರಚನೆ ಮತ್ತು ಸುಧಾರಣೆಗಳ ವಿಷಯವಾರು ಜಾಲಬಂಧಗಳ (Subject networks) ಸ್ಥಾಪನೆ;

- ರಾಷ್ಟ್ರೀಯ ಸಂಪನ್ಮೂಲ ಶೈಕ್ಷಣಿಕ ಕೇಂದ್ರ/ ಉನ್ನತ ಶಿಕ್ಷಣ ಅಕಾಡೆಮಿಯ ಸ್ಥಾಪನೆ
- ಶೈಕ್ಷಣಿಕ ನಾಯಕತ್ವ ಮತ್ತು ಶೈಕ್ಷಣಿಕ ನಿರ್ವಹಣಾ ಕೇಂದ್ರಗಳ ಸ್ಥಾಪನೆ.

ಶಿಕ್ಷಣ ಶಾಲೆಗಳು, ಶ್ರೇಷ್ಠತಾ ಕೇಂದ್ರಗಳು ಮತ್ತು ಅಂತರ ವಿಶ್ವವಿದ್ಯಾಲಯಗಳು ಸಂಸ್ಥಾ ಆಧರಿತ ಕೇಂದ್ರಗಳು. ಅನ್ವೇಷಣೆಗಳು, ಪ್ರಶಸ್ತಿಗಳು ಮತ್ತು ಶಿಕ್ಷಕ ಸಂಪನ್ಮೂಲ ದತ್ತಿ ನಿಧಿಗಳು ವ್ಯಕ್ತಿ ಕೇಂದ್ರಿತ ಘಟಕಗಳಾಗಿವೆ. ವಿಷಯವಾರು ಜಾಲಬಂಧಗಳು ಮತ್ತು ರಾಷ್ಟ್ರೀಯ ಸಂಪನ್ಮೂಲ ಕೇಂದ್ರಗಳು ಜಾಲ ಆಧರಿತ ಘಟಕಗಳಾಗಿವೆ. ಇತರೆ ಅಂಶಗಳು ಶೈಕ್ಷಣಿಕ ನಾಯಕತ್ವ ಕೇಂದ್ರಿತವಾಗಿವೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಕೆಳಗಿನವುಗಳಲ್ಲಿ, ನೀವು ಈಗ ಅಭ್ಯಾಸ ಮಾಡಿದ ನಿಯೋಗದ ಘಟಕಗಳನ್ನು ಗುರುತಿಸಿ

ಅವು ಕೆಳಗಿನಂತಿವೆ:

1. ಕೇಂದ್ರ ಮತ್ತು ರಾಜ್ಯ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು
2. ಪ್ರಾಥಮಿಕ ಶಿಕ್ಷಕ ತರಬೇತಿ ಕೇಂದ್ರಗಳ ಸ್ಥಾಪನೆ
3. 50 ವಿಜ್ಞಾನ ಮತ್ತು ಗಣಿತ ವಿಷಯಗಳ ಶ್ರೇಷ್ಠತಾ ಕೇಂದ್ರಗಳನ್ನು ತೆರೆಯುವುದು
4. ಅಧ್ಯಾಪಕ ತರಬೇತಿ ಸಂಸ್ಥೆಗಳ ಪುನಾರಚನಾ ಕೇಂದ್ರಗಳು
5. ಬೋಧನೆ–ಕಲಿಕಾ ಕೇಂದ್ರಗಳನ್ನು ಸ್ಥಾಪಿಸುವುದು
6. ವಿದೇಶೀ ವಿದ್ಯಾರ್ಥಿ ತರಬೇತಿ ಕೇಂದ್ರಗಳು
7. ಶಿಕ್ಷಕರ ಶಿಕ್ಷಣಕ್ಕಾಗಿ ಅಂತರ ವಿಶ್ವವಿದ್ಯಾಲಯ ಕೇಂದ್ರಗಳ ಸ್ಥಾಪನೆ
8. ಆವಿಷ್ಕಾರಗಳು, ಪ್ರಶಸ್ತಿಗಳು, ಬೋಧನಾ ಸಂಶೋಧನಾ ನಿಧಿ, ಜೊತೆಗೆ ಕಾರ್ಯಾಗಾರಗಳು ಮತ್ತು ವಿಚಾರಸಂಕಿರಣಗಳ ಆಯೋಜನೆ

## 3.6.3.2. ನಿಯೋಗದ ನಿರ್ವಹಣೆ ಮತ್ತು ಮೌಲ್ಯಮಾಪನ

ಪಂಡಿತ ಮದನ ಮೋಹನ ಮಾಳವೀಯರವರ ರಾಷ್ಟ್ರೀಯ ನಿಯೋಗದ ನಿರ್ವಹಣಾ ರಚನೆ: ಈ ನಿಯೋಗವನ್ನು ಒಂದು ಸಾಂಸ್ಥಿಕ ರಚನೆಯ ಮೂಲಕ ಅನುಷ್ಠಾನ ಮಾಡಿ ನಿರ್ವಹಣೆ ಮಾಡಲಾಗಿದೆ. ಈ ರಚನೆಯು ಕೇಂದ್ರ ಮಟ್ಟದಲ್ಲಿ ಒಂದು ಕಾರ್ಯಕಾರಿ ಸಮಿತಿ, ಯೋಜನಾ ಅನುಮೋದನಾ ಮಂಡಳಿ, ಪರಿಶೀಲನಾ ಮಂಡಳಿ, ರಾಷ್ಟ್ರೀಯ ಯೋಜನಾ ನಿರ್ದೇಶನಾಲಯ ಮತ್ತು ತಾಂತ್ರಿಕ ಸಹಾಯಕ ಗುಂಪು ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಾರ್ಯಕಾರಿ ಸಮಿತಿಯೇ ಉನ್ನತ ಮಟ್ಟದ ಅಂಗವಾಗಿದೆ. ಇದೇ ಕಾರ್ಯಾಚರಣೆಯ ಚೌಕಟ್ಟು ಮತ್ತು ರೂಪುರೇಖೆಗಳನ್ನು ನಿರ್ಧರಿಸುತ್ತದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವರು ಇದರ ಅಧ್ಯಕ್ಷರು. ಮಾನವ ಸಂಪನ್ಮೂಲ ಇಲಾಖೆಯ ಉನ್ನತ ಶಿಕ್ಷಣ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆಯ ಕಾರ್ಯದರ್ಶಿಗಳು, ಇತರ ಸಂಯೋಜಿತ ಇಲಾಖೆಗಳಾದ ಯೋಜನೆ ಮತ್ತು ಖರ್ಚು ಇವುಗಳ ಸದಸ್ಯರು ಈ ಕಾರ್ಯಕಾರಿ ಸಮಿತಿಯ ಸದಸ್ಯರುಗಳು. ಇದರ ಜೊತೆಗೆ UGC, AICTE, NCTE, DEC, NCERT ಮತ್ತು NUEPAದ ಪ್ರತಿನಿಧಿಗಳು ಮತ್ತು ವಿಶ್ವವಿದ್ಯಾನಿಲಯ ಮತ್ತು ಶಾಲಾ ವಿಭಾಗದಿಂದ ಕೆಲವು ತಜ್ಞರು ಇದರ ಸದಸ್ಯರು.

### ಕಾರ್ಯಕಾರಿ ಸಮಿತಿಯ ಉಲ್ಲೇಖದ ನಿಯಮಗಳು

- ನಿಯೋಗದ ಕಾರ್ಯಕ್ರಮ ರೂಪಣೆ ಮತ್ತು ಅನುಷ್ಠಾನದ ಚೌಕಟ್ಟಿಗೆ ನಿರ್ದೇಶನಗಳನ್ನು ನೀಡುವುದು;

- ಈ ನಿಯೋಗದ ಸಾಮಾನ್ಯ ಮೇಲ್ವಿಚಾರಣೆಯ ಜೊತೆಗೆ ಫಲಿತಾಂಶಗಳ ಸಕಾಲಿಕ ವಿಮರ್ಶೆ ಮಾಡುವುದು;
- ವಿವಿಧ ಕೇಂದ್ರೀಯ ಸಚಿವಾಲಯಗಳ ನಡುವೆ ಮತ್ತು ಕೇಂದ್ರ, ರಾಜ್ಯ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಹಕಾರ ಏರ್ಪಡಿಸುವುದು;
- ನಿಯೋಗದ ಕಾರ್ಯಯೋಜನೆಯ ಅಡಿಯಲ್ಲಿ ಸಮಿತಿಗಳ ಅಧಿಕಾರ ಅಥವಾ ಕಾರ್ಯಗಳನ್ನು ಸೇರಿಸುವುದು ಅಥವಾ ಬದಲಿಸುವುದು;
- ವಿವಿಧ ಸಮಿತಿ ಅಥವಾ ಅಧಿಕಾರಿಗಳು ಅಥವಾ ಕಾರ್ಯಕರ್ತರಿಗೆ ನಿಯೋಜಿಸಬೇಕಾದ ಅಧಿಕಾರವನ್ನು ಕುರಿತ ನಿರ್ಧಾರಗಳನ್ನು ಕೈಗೊಳ್ಳುವುದು.

ಈ ನಿಯೋಗದ ಪ್ರಾಮುಖ್ಯತೆಯನ್ನು ಗುರುತಿಸಿದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಈ ನಿಯೋಗದ ಕಾರ್ಯಕ್ರಮಗಳನ್ನು ಮೌಲ್ಯಮಾಪನ ಮಾಡಿ ವರದಿ ಸಲ್ಲಿಸಲು Centre for Policy Research in Higher Education (CPRHE)ಗೆ ನಿರ್ದೇಶಿಸಿತು. ಇದು ಕೊಟ್ಟ ವರದಿಗನುಗುಣವಾಗಿ ನಿಯೋಗವು ಕೆಳಗಿನವುಗಳನ್ನು ಸಾಧಿಸಿದೆ.

ಪರಿಮಾಣಾತ್ಮಕವಾಗಿ, ಗುರುತಿಸಿಕೊಂಡ ಘಟಕಾಂಶಗಳಿಗನುಗುಣವಾಗಿ ಕೆಳಗಿನ ವೀಕ್ಷಣೆಗಳನ್ನು ನೀಡಲಾಗಿದೆ.

| ಕ್ರಮ ಸಂಖ್ಯೆ | ಘಟಕಾಂಶಗಳು | ನಿರ್ದೇಶಿತವಾದ ಒಟ್ಟು ಸಂಸ್ಥೆಗಳು | ಅನುಮೋದಿತ ಸಂಸ್ಥೆಗಳು |
|---|---|---|---|
| 1 | ಶಿಕ್ಷಣ ಶಾಲೆಗಳು | 30 | 12 |
| 2 | ಶ್ರೇಷ್ಠತಾ ಕೇಂದ್ರಗಳು ಪಠ್ಯಕ್ರಮ ಮತ್ತು ಬೋಧನಾ ಶಾಸ್ತ್ರದ ಬೆಳವಣಿಗೆಗೆ ಸ್ಪರ್ಧಾತ್ಮಕ ಆಧಾರದ ಮೇಲೆ ಆಯ್ಕೆ-ವಿಜ್ಞಾನ ಮತ್ತು ಗಣಿತಗಳಿಗೆ ವಿಶೇಷ ಪ್ರಾಮುಖ್ಯತೆಯೊಂದಿಗೆ | 50 | 23 |
| 3ಅ | ಶಿಕ್ಷಕ ಶಿಕ್ಷಣಕ್ಕೆ ಅಂತರ್ ವಿಶ್ವವಿದ್ಯಾನಿಲಯ ಕೇಂದ್ರಗಳು | 2 | 2 |
| 4 | ರಾಷ್ಟ್ರೀಯ ಸಂಪನ್ಮೂಲ ಕೇಂದ್ರ | 1 | 1 |
| 5 | ಶೈಕ್ಷಣಿಕ ನಾಯಕತ್ವ ಮತ್ತು ಶಿಕ್ಷಣ ನಿರ್ವಹಣಾ ಕೇಂದ್ರಗಳು | 5 | 3 |
| 6 | ಅನ್ವೇಷಣೆ, ಪ್ರಶಸ್ತಿಗಳು, ಬೋಧನಾ ಸಂಪನ್ಮೂಲ ಅನುದಾನ, ಕಾರ್ಯಾಗಾರಗಳು ಮತ್ತು ಸಂಕಿರಣಗಳನ್ನು ಒಳಗೊಂಡಂತೆ | ಅನುಮೋದನೆಯಂತೆ | 6 |
| 7 | ಪಠ್ಯಕ್ರಮ ನವೀಕರಣ ಮತ್ತು ಸುಧಾರಣೆಗಳು | | 3 |

ಇದರ ಜೊತೆಗೆ 3 ರಾಷ್ಟ್ರೀಯ ಕಾರ್ಯಾಗಾರಗಳನ್ನೂ ಬೆಂಗಳೂರಿನಲ್ಲಿ ಪ್ರಾದೇಶಿಕ ಕಾರ್ಯಾಗಾರಗಳನ್ನೂ ನಡೆಸಲಾಗಿದೆ. ನಾಯಕತ್ವ ತರಬೇತಿಗಾಗಿ ವಿಷಯ ಚೌಕಟ್ಟನ್ನು ತಯಾರಿಸಿ ಪ್ರಸರಣ ಮಾಡಲಾಗಿದೆ. ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಮತ್ತು ಶೈಕ್ಷಣಿಕ ನಾಯಕತ್ವ ಮತ್ತು ಶಿಕ್ಷಣ ನಿರ್ವಹಣೆಗೆ 10 ಸ್ಥಳಗಳನ್ನು ಗುರುತಿಸಲಾಗಿದೆ. ಈ ಕೇಂದ್ರಗಳಲ್ಲಿ 2017ರಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ. ಸಿಬ್ಬಂದಿಗಳ ಪೂರ್ವತರಬೇತಿಗಾಗಿ ವಿವರವಾದ ಮಾಡ್ಯೂಲ್‌ಗಳನ್ನು ತಯಾರಿಸಲಾಗಿದೆ. ಮೊದಲ ವರ್ಷದಲ್ಲಿ 4800 ಹೊಸ ಸಿಬ್ಬಂದಿಗಳನ್ನು ತರಬೇತುಗೊಳಿಸಲು 40 ಸಂಸ್ಥೆಗಳನ್ನು ಗುರುತಿಸಲಾಗಿದೆ.

### ನಿಯೋಗದ ಕುರಿತಂತೆ ಗಮನಿಸಬಹುದಾದ ಇತರ ಅಂಶಗಳು:

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಅಡಿಯಲ್ಲಿ ಪಂಡಿತ ಮದನ ಮೋಹನ ಮಾಳವೀಯರವರ ರಾಷ್ಟ್ರೀಯ ನಿಯೋಗವು ಒಂದು ಪ್ರಮುಖ ಸಂಸ್ಥೆ. ಈ ಯೋಜನೆಯು ಕಲಿಕಾ ಫಲಿತಾಂಶವನ್ನು ಪ್ರಭಾವಿಸುವ ಶಿಕ್ಷಕರ ಪ್ರಮುಖ ಪಾತ್ರವನ್ನು ಸ್ಪಷ್ಟವಾಗಿ ಗುರುತಿಸುತ್ತದೆ. ಇದು ಬೋಧನಾ ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಮುಖವೂ ವಿಭಿನ್ನವೂ ಆದ ಅಂಶಗಳನ್ನು ಒಳಗೊಂಡ ಸಮಗ್ರ ಯೋಜನೆಯಾಗಿದೆ. ಭಾರತದ ಹಲವಾರು ಉನ್ನತ ದರ್ಜೆಯ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣದ ಸಂಸ್ಥೆಗಳಿಗೆ ಚಾಲಕ ಶಕ್ತಿಯಾಗಿರುವುದು ಇದರ ವಿಶೇಷ. ಉನ್ನತ ಶಿಕ್ಷಣದಲ್ಲಿ ಅಗತ್ಯವಾದ ಶೈಕ್ಷಣಿಕ ಬದಲಾವಣೆಗಳನ್ನು ತರಲು ಅಗತ್ಯವಾದ ನಾಯಕತ್ವವನ್ನು ಸ್ಥಾಪಿಸಲು ಈ ನಿಯೋಗವು ಸಹಕಾರಿಯಾಗಿದೆ. ಈ ಉನ್ನತ ದರ್ಜೆಯ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳ ಅತ್ಯುತ್ತಮ ತಜ್ಞರನ್ನು ಆಕರ್ಷಿಸುವಲ್ಲಿ ಇದು ಯಶಸ್ವಿಯಾಗಿದೆ.

ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೆಲವು ಕಾಳಜಿಯ ಅಂಶಗಳನ್ನು ನಿಯೋಗವು ಗುರುತಿಸಿಕೊಂಡಿದೆ:

- ಕಾರ್ಯಕ್ರಮಗಳ ಅಡಿಯಲ್ಲಿ ಕೆಲವು ಅಂಶಗಳು ಪುನರಾವರ್ತನೆಯಾಗುವುದು;
- ಹಣ ವಿನಿಮಯ;
- ಯೋಜನೆಯ ಮುಂದುವರಿಕೆಯಲ್ಲಿ ಅನಿಶ್ಚಿತತೆ;
- ಸ್ವಯಂ ತೊಡಗಿಸಿಕೊಳ್ಳುವಿಕೆ;
- ಅಭ್ಯರ್ಥಿಗಳ ಆಕರ್ಷಣೆ;
- ಹಣಕಾಸಿನ ಅಂಶಗಳು;
- ನಿರ್ವಹಣೆಗೆ ರಚನೆಗಳು;
- ಅನುಭವಗಳನ್ನು ವಿನಿಮಯ ಮಾಡಿಕೊಳ್ಳಲು ಸಭೆಗಳು;
- ವಿಭಿನ್ನ ಘಟಕಗಳ ಅಡಿಯಲ್ಲಿ ಕಾರ್ಯಕ್ರಮಗಳ ವ್ಯಾಪಕ ಪ್ರಸರಣ.

ಈ ಎಲ್ಲ ಗುರಿಗಳ, ಕಾಳಜಿಗಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಗಳು ಮುಂದುವರಿಯುತ್ತಿವೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಈ ನಿಯೋಗದ ಇತ್ತೀಚಿನ ಬೆಳವಣಿಗೆಯನ್ನು(1918–19) ಅಂತರ್ಜಾಲ ಮಾಹಿತಿಯ ಸಹಾಯದಿಂದ ಸಂಗ್ರಹಿಸಿ ನಿಮ್ಮ ವೀಕ್ಷಣೆಗಳನ್ನು ಗುರುತಿಸಿ.

## 3.6.4. ಸಾರಾಂಶಿಸೋಣ

- ಸ್ವಾತಂತ್ರ್ಯ ಸಂಗ್ರಾಮದ ರೂವಾರಿಗಳಲ್ಲೊಬ್ಬರಾಗಿದ್ದ ಪಂಡಿತ ಮದನ ಮೋಹನ ಮಾಳವೀಯ(1861–1946)ರವರ 153ನೇ ವಾರ್ಷಿಕ ಜನ್ಮದಿನಾಚರಣೆಯಂದು, ಭಾರತೀಯ ಸರ್ಕಾರದ ಅಧೀನದಲ್ಲಿನ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ದಿನಾಂಕ 25ನೇ ಡಿಸೆಂಬರ್ 2014ರಂದು ಪಂಡಿತ ಮದನ ಮೋಹನ ಮಾಳವೀಯರವರ ರಾಷ್ಟ್ರೀಯ ನಿಯೋಗವನ್ನು ಜಾರಿಗೊಳಿಸಿತು.
- ಈ ನಿಯೋಗವನ್ನು ಪಂಡಿತ ಮದನ ಮೋಹನ ಮಾಳವೀಯ ಶಿಕ್ಷಕ ಮತ್ತು ಬೋಧನಾ ರಾಷ್ಟ್ರೀಯ ನಿಯೋಗ ಎಂಬ ಹೆಸರಿನಿಂದ ಕರೆಯಲಾಗಿದೆ.

- ಶಾಲೆ ಮತ್ತು ಉನ್ನತ ಶಿಕ್ಷಣದ ಅಭಿವೃದ್ಧಿಪಡಿಸುವುದು ಮತ್ತು ಈ ಕೇತ್ರದ ಸಮಗ್ರ ಸಮಸ್ಯಗಳಿಗೆ ಸಂಬಂಧಿಸಿದಂತೆ–ಶಿಕ್ಷಕರು, ಬೋಧನೆ, ಶಿಕ್ಷಕ ತಯಾರಿ, ವೃತ್ತಿ ಬೆಳವಣಿಗೆ, ಪಠ್ಯಕ್ರಮ ವಿನ್ಯಾಸ, ಮೌಲ್ಯಮಾಪನದ ವಿನ್ಯಾಸಗೊಳಿಸುವಿಕೆ ಮತ್ತು ಅಭಿವೃದ್ಧಿಪಡಿಸುವಿಕೆ, ಮೌಲ್ಯಮಾಪನ ವಿಧಾನ ಮತ್ತು ಬೋಧನಾ ವಿಧಾನಗಳಲ್ಲಿ ಸಂಶೋಧನೆ, ಪ್ರಗತಿ ಮುಂತಾದವುಗಳಿಗೆ ಪರಿಹಾರ ಕಂಡುಹಿಡಿಯುವುದಾಗಿದೆ. ಇದು ಒಂದು ಸಮಗ್ರಯೋಜನೆಯಾಗಿದ್ದು, ಶಿಕ್ಷಕರ ಬೆಳವಣಿಗೆ ಮತ್ತು ಬೋಧನೆಯ ಪರಿಣಾಮಕಾರಿತ್ವಕ್ಕೆ ಅಗತ್ಯವಾದ ಸಹಕಾರವನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ಅಧೀನದಲ್ಲಿ ನೀಡಲಾಗಿದೆ.
- ಈ ನಿಯೋಗವು ಗುರಿಗಳನ್ನು ಮೂರು ಹಂತಗಳಲ್ಲಿ ಗುರುತಿಸಿಕೊಂಡಿದೆ: ಈ ನಿಯೋಗದ ಗುರಿಗಳನ್ನು ನಿರ್ದಿಷ್ಟ ತಂತ್ರಗಳ ಮೂಲಕ ಸಾಧಿಸಲು ಪ್ರಯತ್ನಿಸಲಾಗುತ್ತಿದೆ. ಈ ನಿಯೋಗವು ಒಂಬತ್ತು ಘಟಕಗಳನ್ನು ಹೊಂದಿದೆ. ಸಚಿವಾಲಯವು ಘಟಕದ ಉದ್ದೇಶಗಳನ್ನು ಸ್ಪಷ್ಟಪಡಿಸಿದೆ.
- ಈ ನಿಯೋಗವನ್ನು ಒಂದು ಸಾಂಸ್ಥಿಕ ರಚನೆಯ ಮೂಲಕ ಅನುಷ್ಠಾನ ಮಾಡಿ ನಿರ್ವಹಣೆ ಮಾಡಲಾಯಿತು. ಈ ರಚನೆಯು ಕೇಂದ್ರ ಮಟ್ಟದಲ್ಲಿ ಒಂದು ಕಾರ್ಯಕಾರಿ ಸಮಿತಿ, ಯೋಜನಾ ಅನುಮೋದನಾ ಮಂಡಳಿ, ಪರಿಶೀಲನಾ ಮಂಡಳಿ, ರಾಷ್ಟ್ರೀಯ ಯೋಜನಾ ನಿರ್ದೇಶನಾಲಯ ಮತ್ತು ತಾಂತ್ರಿಕ ಸಹಾಯಕ ಗುಂಪು ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಾರ್ಯಕಾರಿ ಸಮಿತಿಯೇ ಉನ್ನತ ಮಟ್ಟದ ಅಂಗವಾಗಿದೆ.
- ಒಟ್ಟು ಉದ್ದೇಶಗಳಲ್ಲಿ ಹೆಚ್ಚಿನ ಮಟ್ಟದ ಉದ್ದೇಶಗಳನ್ನು ತಕ್ಕಮಟ್ಟಿಗೆ ಸಾಧಿಸುವಲ್ಲಿ ನಿಯೋಗ ಯಶಸ್ವಿಯಾಗಿದೆ.

## 3.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1,3,5,7,8– ಸರಿ ಉತ್ತರಗಳು

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ನೀವು ಸಂಗ್ರಹಿಸಿದ ಅಂಶಗಳನ್ನೂ ನಿಮ್ಮ ವೀಕ್ಷಣೆಗಳನ್ನೂ ನಿಮ್ಮ ಸಹಪಾಠಿಯೊಂದಿಗೆ ಹಂಚಿಕೊಳ್ಳಿ.

## 3.6.6. ಘಟಕಾಂತ್ಯ ಅಭ್ಯಾಸಗಳು

1. ಪಂಡಿತ ಮದನ ಮೋಹನ ಮಾಳವೀಯರವರ ರಾಷ್ಟ್ರೀಯ ನಿಯೋಗದ ಹಿನ್ನೆಲೆ, ನಿರ್ವಹಣೆ ಮತ್ತು ಮೌಲ್ಯಮಾಪನದ ಅಂಶಗಳನ್ನು ವಿವರಿಸಿ.

## 3.6.7. ಪರಾಮರ್ಶನ ಸೂಚಿ

1. http://mhrd.gov.in/sites/upload_files/mhrd/files/document-reports/PMMMNMTT_Guidelines.pdf
2. http://mhrd.gov.in/pmmmnmtt
3. http://www.vinsonias.com/DynImg/d1fe7d3b-2261-45c1-83de-99765ae63656.pdf

4. http://www.tezu.ernet.in/tlc/pdf/MHRD%20VISIT.pdf
5. https://currentaffairs.gktoday.in/tags/pmmmnmtt
6. http://calem.tiss.edu/?page_id=425
7. http://www.indiagk.net/2015/07/pandit-madan-mohan-malaviya-national.html

****************

# ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ: ಕಾಳಜಿಗಳು ಮತ್ತು ವಿಚಾರಗಳು

## ಘಟಕ–1 : ಆರ್.ಟಿ.ಇ. ಕಾಯಿದೆ 2009ರ ಅನುಷ್ಠಾನಕ್ಕೆ ಸಂಬಂಧಿಸಿದ ಸವಾಲುಗಳು

**ಘಟಕದ ರಚನೆ :**


4.1.1. ಕಲಿಕೆಯ ಉದ್ದೇಶಗಳು

4.1.2. ಪೀಠಿಕೆ

4.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.1.3.1. ಆರ್.ಟಿ.ಇ. ಅವಲೋಕನ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ – 1

4.1.3.2. ಆರ್.ಟಿ.ಇ.–ಅನುಷ್ಠಾನದಲ್ಲಿನ ಸವಾಲುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

4.1.4. ಸಾರಾಂಶಿಸೋಣ

4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

4.1.6. ಘಟಕಾಂತ್ಯ ಅಭ್ಯಾಸಗಳು

4.1.7. ಪರಾಮರ್ಶನ ಸೂಚಿ


## 4.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಆರ್.ಟಿ.ಇ. ಕಾಯಿದೆಯ ಪ್ರಮುಖ ಲಕ್ಷಣಗಳನ್ನು ವಿವರಿಸುವರು;
- ಆರ್.ಟಿ.ಇ. ಕಾಯಿದೆಯ ಅನುಷ್ಠಾನದ ಹಿನ್ನೆಲೆಯನ್ನು ವಿಶ್ಲೇಷಿಸುವರು;
- ಆರ್.ಟಿ.ಇ. ಕಾಯಿದೆಯ ಅನುಷ್ಠಾನದ ಸವಾಲುಗಳನ್ನು ಸ್ಪಷ್ಟಪಡಿಸುವರು; ಮತ್ತು
- ಆರ್.ಟಿ.ಇ.ಕಾಯಿದೆಯನ್ನು ನಿಗದಿತ ಸಮಯದಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಗದುದಕ್ಕೆ ಕಾರಣಗಳನ್ನು ವಿವರಿಸುವರು.

## 4.1.2. ಪೀಠಿಕೆ

'ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಾಂವಿಧಾನಿಕ ಮಧ್ಯವರ್ತನಗಳು ಮತ್ತು ಆರ್.ಟಿ.ಇ. ಕಾಯಿದೆ' ಎಂಬ ಘಟಕದಲ್ಲಿ ಶಿಕ್ಷಣದ ಹಕ್ಕು ಕಾಯಿದೆಯ ಹಿನ್ನೆಲೆ, ಉದ್ದೇಶಗಳು ಮತ್ತು ನಿಬಂಧನೆಗಳನ್ನು ಕುರಿತು ನಾವು ವಿವರವಾಗಿ ಚರ್ಚಿಸಿದ್ದೇವೆ. ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡು ಅದನ್ನು ಸಾಧಿಸುವ ಉದ್ದೇಶದ ಹಿನ್ನೆಲೆಯಲ್ಲಿ ಈ ಕಾಯಿದೆಯಲ್ಲಿನ ನಿಬಂಧನೆಗಳನ್ನು ಮಾಡಲಾಗಿದೆ ಎಂಬುದೂ ನಮಗೆ ತಿಳಿದಿದೆ. ಸರ್ಕಾರವು

ಶಿಕ್ಷಣವನ್ನು 'ನಿರ್ದೇಶನ ತತ್ವ'ದಲ್ಲಿನ ಸ್ಥಾನದಿಂದ ಪಲ್ಲಟಗೊಳಿಸಿ 'ಮೂಲಭೂತ ಹಕ್ಕು'ಗಳ ಅಡಿಯಲ್ಲಿ ಸ್ಥಾನ ನಿರ್ದೇಶನ ಮಾಡಿರುವುದು ಶಿಕ್ಷಣಕ್ಕೆ ನೀಡಿರುವ ಪ್ರಾಮುಖ್ಯತೆಗೆ ಸಾಕ್ಷಿಯಾಗಿದೆ. ಆರ್.ಟಿ.ಇ. ಕಾಯಿದೆಯ ಮೂಲಕ ಸಮಾನತೆ, ಸಾಮಾಜಿಕ ನ್ಯಾಯ, ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನೂ ಬಲಪಡಿಸಿದೆ. ಈ ಎಲ್ಲ ಮಹದಾಶೆಗಳಿಂದ ಆರ್.ಟಿ.ಇ. ಕಾಯಿದೆಯನು ರೂಪಿಸಿರುವುದಾದರೂ ಅದರ ಅನ್ವಯದಲ್ಲಿ ಅನೇಕ ಸಮಸ್ಯೆಗಳಿವೆ. ಇವುಗಳನ್ನು ಪರಿಹರಿಸಿಕೊಳ್ಳುವುದು ಇಂದಿನ ಸವಾಲಾಗಿ ಪರಿಣಮಿಸಿದೆ. ಹೀಗಾಗಿ ಆರ್.ಟಿ.ಇ. ಕಾಯಿದೆಯ ಅನ್ವಯದ ಸವಾಲುಗಳಾವುವು ಎಂಬುದನ್ನು ಈ ಘಟಕದಲ್ಲಿ ಗುರುತಿಸೋಣ.

## 4.1.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.1.3.1. ಆರ್.ಟಿ. ಇ. ಕಾಯಿದೆಯನ್ನು ಅನುಷ್ಠಾನಗೊಳಿಸುವಲ್ಲಿನ ಸವಾಲುಗಳು

**ಬಾಲಕಾರ್ಮಿಕರಿಗೆ ಸಂಬಂಧಿಸಿದ ಸವಾಲುಗಳು:**

ಅತಿ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಭಾರತದಲ್ಲಿ ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳನ್ನು ಮುಕ್ತಗೊಳಿಸುವುದು ಆರ್.ಟಿ.ಇ. ಕಾಯಿದೆಯ ಅನುಷ್ಠಾನದ ಮೊದಲ ಸವಾಲು. ಶಾಲೆಗೆ ಹೋಗುವ ವಯಸ್ಸಿನ ಮಕ್ಕಳು ಮನೆ, ಹೋಟೆಲುಗಳು, ಕಾರ್ಖಾನೆಗಳು, ಗ್ಯಾರೇಜುಗಳು, ರಸ್ತೆಬದಿ ಇತ್ಯಾದಿ ಸ್ಥಳಗಳಲ್ಲಿ ಕೆಲಸ ಮಾಡುವುದನ್ನು ನಾವು ದಿನನಿತ್ಯ ನೋಡುತ್ತೇವೆ. ಈ ಎಲ್ಲ ಮಕ್ಕಳನ್ನೂ ಶಾಲೆಗೆ ಕರೆತರುವುದು ಸುಲಭದ ಕೆಲಸವಲ್ಲ. ಏಕೆಂದರೆ ಅವರನ್ನು ಶಾಲೆಗೆ ತರುವಲ್ಲಿ ಅನೇಕ ಸರ್ಕಾರಿ ನಿಯೋಗಗಳ ಪಾತ್ರವಿದೆ. ಸಾಮಾನ್ಯ ಜನರು ಆ ಮಕ್ಕಳನ್ನು ಕರೆತಂದು ಶಾಲೆಗೆ ಸೇರಿಸುವುದು ಸರಳವಲ್ಲ.

**ಹಲವು ಸರ್ಕಾರಿ ನಿಯೋಗಗಳ ಪಾತ್ರದ ಗೊಂದಲ**

ಈಗಾಗಲೇ ಹೇಳಿದಂತೆ ಬಾಲಕಾರ್ಮಿಕ ಸಮಸ್ಯೆಯನ್ನೆದುರಿಸುವುದು ಒಂದು ದೊಡ್ಡ ಸವಾಲು. ಬಾಲಕಾರ್ಮಿಕರನ್ನು ರಕ್ಷಿಸುವುದು ಮತ್ತು ಆ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡವರನ್ನು ಶಿಕ್ಷಿಸುವುದು ಕಾರ್ಮಿಕ ಸಚಿವಾಲಯ ಮತ್ತು ಪೋಲೀಸರ ಕೆಲಸ. ಅವರನ್ನು ಶಾಲೆಗೆ ಕರೆತರುವುದು ಮತ್ತು ಅವರಿಗೆ ಗುಣಮಟ್ಟದ ಶಿಕ್ಷಣದ ಏರ್ಪಾಡು ಮಾಡುವುದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಜವಾಬ್ದಾರಿ. ಇದಲ್ಲದೆ, ಆರ್.ಟಿ.ಇ. ಕಾಯಿದೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ನಡೆಯಬೇಕಾದುದು. ಈ ಎಲ್ಲ ನಿಯೋಗಗಳ ಪ್ರಯತ್ನಗಳು ಮಿಳಿತಗೊಂಡರೆ ಮಾತ್ರ ಆರ್.ಟಿ. ಇ. ಕಾಯಿದೆಯ ಸಮರ್ಪಕ ಅನುಷ್ಠಾನ ಸಾಧ್ಯ. ಇದು ಎಷ್ಟು ಜಟಿಲವಾದುದು ಎಂಬುದು ಮೇಲ್ನೋಟಕ್ಕೇ ಕಾಣಬರುತ್ತದೆ. ಇಷ್ಟು ಮಾತ್ರವಲ್ಲ, ಈ ಸಚಿವಾಲಯಗಳ ಜೊತೆಗೆ ಪಂಚಾಯತ್ ರಾಜ್ ಸಚಿವಾಲಯ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವಾಲಯಗಳೂ ಇವುಗಳೊಡನೆ ಕೈಜೋಡಿಸಬೇಕು. ಏಕೆಂದರೆ ಹೆಚ್ಚಿನ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶಗಳಲ್ಲೇ ನಡೆಯಬೇಕಾದದು ಅಗತ್ಯ.

**ಲಿಂಗ ತಾರತಮ್ಯದಿಂದಾಗಿ ಶಾಲೆಯ ಹೊರಗುಳಿದ ಹೆಚ್ಚಿನ ಸಂಖ್ಯೆಯ ಹೆಣ್ಣುಮಕ್ಕಳನ್ನು ಶಾಲೆಯೊಳಗೆ ತರುವುದು**

2014ರ ರಾಷ್ಟ್ರೀಯ ಸಮೀಕ್ಷೆಯ ಪ್ರಕಾರ 6–13 ವಯೋಮಾನದಲ್ಲಿ ಸುಮಾರು 20.14 ಕೋಟಿ ಮಕ್ಕಳಿದ್ದಾರೆ. ಇವರಲ್ಲಿ 60.41ಲಕ್ಷ (2.97%) ಮಕ್ಕಳು ಶಾಲೆಯಿಂದ ಹೊರಗಿದ್ದಾರೆ. ಶಾಲೆಯ ಹೊರಗಿರುವ ಮಕ್ಕಳ ಪ್ರಮಾಣ 2009ರಲ್ಲಿ 4.28% ಮತ್ತು 2006ರಲ್ಲಿ 6,94% ಆಗಿದ್ದು ಇದು ಮೊದಲೆರಡು ಹಂತಗಳಿಗಿಂತ ಕಡಿಮೆ ಮಟ್ಟದಲ್ಲಿದೆ ಎಂಬುದು ಸಮಾಧಾನಕರ ಅಂಶ. ರಾಷ್ಟ್ರಮಟ್ಟದಲ್ಲಿ ಶಾಲೆಯ ಹೊರಗಿರುವವರಲ್ಲಿ ಹುಡುಗರಿಗಿಂತ ಹುಡುಗಿಯರ ಸಂಖ್ಯೆ ಹೆಚ್ಚು. ಹಾಗೆಯೇ ಈ ಸಂಖ್ಯೆ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು. ಆರ್.ಟಿ.ಇ. ಕಾಯಿದೆಯಲ್ಲಿ ಸೂಚಿತವಾಗಿರುವ ವಯಸ್ಸಿನ ಗುಂಪಿನಲ್ಲಿ ಸಾಂಪ್ರದಾಯಿಕ ಲಿಂಗತ್ವ ನಿಯಮಗಳಿಂದಾಗ ಹುಡುಗಿಯರನ್ನು ಮನೆಕೆಲಸ ಮತ್ತು ಒಡಹುಟ್ಟಿದವರ ಆರೈಕೆಗೆ ಸಹಾಯ ಮಾಡಲು ನೇಮಿಸಿಕೊಳ್ಳಲಾಗುತ್ತದೆ.

ಇದು ಶಾಲೆಗಳಿಗೆ ಮಕ್ಕಳ ಅನಿಯಮಿತ ಹಾಜರಾತಿಗೆ ಕಾರಣವಾಗಿ, ಕೊನೆಗೆ ಮಗು ಶಾಲೆಯಿಂದ ಹೊರಗುಳಿಯುವಲ್ಲಿ ಪರ್ಯವಸಾನವಾಗುತ್ತದೆ. ಬಾಲ್ಯವಿವಾಹ ಸಂಸ್ಕೃತಿ, ಶಾಲೆಗಳಲ್ಲಿ ಅಭದ್ರತೆ ಇವುಗಳೂ ಹೆಂಗಳೆಯರು ಶಾಲೆ ಬಿಡುವಂತೆ ಮಾಡುತ್ತವೆ. ಹೆಣ್ಣುಮಕ್ಕಳಿಗೆ ಶಿಕ್ಷಣದ ಅಗತ್ಯವಿಲ್ಲ ಎಂಬ ಸಾಂಪ್ರದಾಯಿಕ ನಂಬಿಕೆಯೂ ಅವರನ್ನು ಶಿಕ್ಷಣದಿಂದ ದೂರವಿಡುತ್ತದೆ. ಒಮ್ಮೆ ಅವರ ಶಾಲೆಯಿಂದ ಹೊರಬಂದರೆಂದರೆ ಅವರನ್ನು ಪುನಃ ಒಳಗೆ ತರುವುದು ಕಷ್ಟದ ಕೆಲಸ. ಸಾಮಾನ್ಯವಾಗಿ 14ನೇ ವಯಸ್ಸಿನವರೆಗೆ ಶಾಲೆಯಲ್ಲಿ ಉಳಿಯುವವರಲ್ಲಿ 1/3 ಭಾಗದಷ್ಟು ಮಕ್ಕಳು ಮುಂದಿನ ತರಗತಿಗಳಿಗೆ ದಾಖಲಾಗುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಲಿಸಿದರೆ ಸೆಕೆಂಡರಿ ಶಾಲೆಗಳ ಸಂಖ್ಯೆ ಕಡಿಮೆ ಇರುವುದು ಇದಕ್ಕೆ ಕಾರಣವಿರಬಹುದು. ಮನೆ ಮತ್ತು ಶಾಲೆಗಳ ನಡುವಿನ ದೂರ ಹುಡುಗಿಯರು ಶಾಲೆಯಿಂದ ಹೊರಗುಳಿಯಲು ಪ್ರಮುಖ ಕಾರಣವಾಗಿದೆ. ಈ ನಿಟ್ಟಿನಲ್ಲಿ ಹುಡುಗಿಯರಿಗೆ ಸೈಕಲ್ಲುಗಳ ವಿತರಣೆ ಮತ್ತು ಬೆಂಗಾವಲಿಗರ ನೇಮಕ ಮುಂತಾದ ಉಪಕ್ರಮಗಳು ಶಾಲಾ ಶಿಕ್ಷಣ ಸುರಕ್ಷಿತವಾಗಿರುವಂತೆ ಮಾಡಿ, ಹುಡುಗಿಯರು ಶಿಕ್ಷಣವನ್ನು ಮುಂದುವರಿಸುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಇದಲ್ಲದೆ ಶಾಲೆಗಳಲ್ಲಿ ಶುಚಿಯನ್ನು ಕಾಪಾಡಿದ ಶೌಚಾಲಯಗಳು ಲಭ್ಯವಾಗುವಂತೆ ಮಾಡುವುದೂ ಒಂದು ಸವಾಲಿನ ಕೆಲಸ. ಈ ಮೂಲಕ ಶಾಲೆಯ ಮೂಲ ಸೌಕರ್ಯಗಳನ್ನು ಸುಧಾರಿಸಬೇಕಾಗಿದೆ. ಇದಲ್ಲದೆ ಹುಡುಗಿಯರಿಗೇ ವಿಶಿಷ್ಟವಾದ ಕೆಲವು ಸಮಸ್ಯೆಗಳಿವೆ. ಋತುಕಾಲದ ಸಮಯದಲ್ಲಿ ಅವರಿಗೆ ವಿಶೇಷ ವ್ಯವಸ್ಥೆಗಳ ಅಗತ್ಯವಿರುತ್ತದೆ. ಅವರಿಗೆ ಶುದ್ಧ ಪ್ಯಾಡುಗಳ ವ್ಯವಸ್ಥೆ ಮಾಡಬೇಕಾಗುತ್ತದೆ. ಇಂತಹ ಕಾರಣಗಳಿಗಾಗಿಯೇ ಹೆಣ್ಣುಮಕ್ಕಳು ಆ ದಿನಗಳಲ್ಲಿ ಶಾಲೆಗೆ ಗೈರುಹಾಜರಾಗುತ್ತಾರೆ. ಈ ನಿಟ್ಟಿನಲ್ಲಿ ಎಲ್ಲ ರಾಜ್ಯಗಳೂ ಕೇರಳ ರಾಜ್ಯದ ಮಾದರಿಯನ್ನು ಅನುಸರಿಸಬೇಕು. ಈ ಅಗತ್ಯವನ್ನು ಪೂರೈಸಲು ಮೊದಲು ಮಾಡಿದುದು ಕೇರಳ ರಾಜ್ಯ. ಶಾಲೆಯ ಹೊರಗುಳಿದ ಮಕ್ಕಳಲ್ಲಿ ಶೇ. 70.7% ಮಕ್ಕಳ ತಾಯಂದಿರು ಶಾಲೆಯ ಮೆಟ್ಟಿಲೇರಿದವರಲ್ಲ. ಹೀಗಾಗಿ ಪೀಳಿಗೆಯವರ ಮನೋಭಾವವೂ ಹೆಣ್ಣುಮಕ್ಕಳಿಗೆ ಶಿಕ್ಷಣ ಸಿಗುವಲ್ಲಿ ಅಡ್ಡಿಯಾಗುತ್ತದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೌಟುಂಬಿಕ ನಿರ್ಬಂಧಗಳು ಬಹಳಮಟ್ಟಿಗೆ ಅಡ್ಡಿಯಾಗುತ್ತವೆ. ಹಾಗಾಗಿ ಹೆಣ್ಣುಮಕ್ಕಳನ್ನು ಶಾಲೆಗಳಲ್ಲಿ ಉಳಿಸಿಕೊಳ್ಳುವಲ್ಲಿ ಪೋಷಕರಿಗೆ ಸಮಾಲೋಚನೆ ಮತ್ತು ಮಾರ್ಗದರ್ಶನದ ಕಾರ್ಯಕ್ರಮಗಳು ಅನಿವಾರ್ಯವಾಗುತ್ತವೆ.

**ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ಕನಿಷ್ಟ ಶೇ25 ಸೀಟುಗಳ ಮೀಸಲಾತಿಯ ಅಡಚಣೆಗಳನ್ನು ನಿಭಾಯಿಸುವಿಕೆ**

ಎಲ್ಲ ಅನುದಾನರಹಿತ ಖಾಸಗಿ ಶಾಲೆಗಳು ಅವರ ಒಟ್ಟು ಪ್ರವೇಶಾತಿಯ ಶೇ 25ರಷ್ಟು ಭಾಗವನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರ ಮಕ್ಕಳಿಗೆ ಉಚಿತವಾಗಿ ಕಾಯ್ದಿರಿಸಬೇಕೆಂದು ಆರ್.ಟಿ.ಇ. ಆದೇಶಿಸಿದೆ. ಅವರ ಶುಲ್ಕವನ್ನು ಸರ್ಕಾರವೇ ಪಾವತಿಸುತ್ತದೆ. 7ನೇ ಶೈಕ್ಷಣಿಕ ಸಮೀಕ್ಷೆಯ ಪ್ರಕಾರ, 6–14 ವಯೋಮಾನದ 19ಕೋಟಿ ಮಕ್ಕಳನ್ನು ಶಾಲೆಗಳಿಗೆ ದಾಖಲಿಸಲಾಗಿದೆ. ಇವರಲ್ಲಿ ಕೇವಲ 4 ಕೋಟಿ ಮಕ್ಕಳು ಖಾಸಗಿ ಶಾಲೆಗಳಲ್ಲಿ ದಾಖಲಾಗಿದ್ದಾರೆ. ಇದರ ಶೇ. 25 ಭಾಗ ಎಂದರೆ 1 ಕೋಟಿ. ಉಳಿದ 15 ಕೋಟಿ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಆರ್.ಟಿ.ಇ. ಆದೇಶಿಸಿರುವ ಈ ಶೇ. 25 ಮಕ್ಕಳನ್ನು ಆಯ್ಕೆ ಮಾಡುವುದು ಹೇಗೆ ಎಂಬುದರ ಕುರಿತಾದ ಸ್ಪಷ್ಟತೆ ಇಲ್ಲ. ಕಾಯಿದೆಯಲ್ಲಿ ಇದಕ್ಕೆ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲದ ಕಾರಣ ಇದನ್ನು ನಿರ್ವಹಿಸುವುದು ಒಂದು ಸವಾಲೇ ಆಗಿದೆ. ಇದಲ್ಲದೆ ಇವರ ಶುಲ್ಕವನ್ನು ಸರಕಾರ ಪಾವತಿಸುತ್ತದೆ ಎಂಬುದರ ಕುರಿತ ಸ್ಪಷ್ಟತೆ ಇದೆ. ಆದರೆ ಇದೊಂದರಿಂದಲೇ ಶಾಲೆಗೆ ಸಂಬಂಧಿಸಿದಂತೆ ಮಗುವಿನ ಖರ್ಚು ಮುಗಿಯುವುದಿಲ್ಲ. ಸಮವಸ್ತ್ರ, ಪಠ್ಯಪುಸ್ತಕಗಳು, ಇತ್ಯಾದಿಗಳನ್ನು ನಿರ್ವಹಿಸುವವರಾರು, ಹೇಗೆ ನಿರ್ವಹಿಸುವುದು ಎಂಬುದರ ಕುರಿತು ಕಾಯಿದೆಯಲ್ಲೇ ಸ್ಪಷ್ಟತೆ ಇಲ್ಲ. ಇದನ್ನು ಪರಿಹರಿಸುವುದೂ ಸವಾಲಿನ ವಿಷಯ.

## ತರಗತಿಯಲ್ಲಿನ ವೈವಿಧ್ಯತೆಯ ನಿರ್ವಹಣೆ

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಿದ್ಯಾರ್ಥಿಗಳ ನಡುವಣ ವೈವಿಧ್ಯತೆಯನ್ನು ನಿರ್ವಹಿಸುವುದು ಬಲು ದೊಡ್ಡ ಸವಾಲು. ಆರ್ಥಿಕವಾಗಿ ದುರ್ಬಲ ಗುಂಪು ಮತ್ತು ಸಮಾಜದ ಗಣ್ಯರ ಗುಂಪಿನ ಮಕ್ಕಳ ನಡುವೆ ಸಾಮರಸ್ಯವನ್ನುಂಟುಮಾಡುವುದು ಶಿಕ್ಷಕರಿಗೆ ಕಷ್ಟದ ವಿಷಯ. ಶಾಲೆಯ ಹೊರಗಿನ ವಾತಾವರಣವು ಕಲಿಕೆಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರುತ್ತದೆ.

## ಬಡಮಕ್ಕಳಿಗೆ ಆಘಾತಕಾರಿಯಾದ ಅನುಭವಗಳ ಸಂಭಾವ್ಯತೆಯನ್ನು ಗುರುತಿಸಿ ಹಾಗಾಗದಂತೆ ಕ್ರಮ ಕೈಗೊಳ್ಳುವುದು

ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಪಡೆಯುವುದು, ಅಲ್ಲಿನ ಪ್ರಯೋಜನಗಳನ್ನು ಬಳಸಿಕೊಳ್ಳುವುದು ಸರಿಯೇ. ಆದರೆ ಅಲ್ಲಿಯ ವಾತಾವರಣದಲ್ಲಿ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಆರ್ಥಿಕವಾಗಿ ಸಬಲರಾಗಿರುವ ಮಕ್ಕಳಿಗೆ ದೊರೆಯುವ ಮನ್ನಣೆ, ಪರಿಗಣನೆ, ಇವು ದೊರಕುವುದು ಖಚಿತವಿಲ್ಲ. ಇದು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಆಘಾತಕಾರಿಯಾದ ಪರಿಣಾಮಗಳನ್ನು ಬೀರಬಹುದು. ಕಲಿಕೆಗೆ ಅಡ್ಡಿಯಾಗಬಹುದು. ಇದನ್ನು ಸರಿದೂಗಿಸುವುದು ಒಂದು ಸವಾಲು. ಅವರು ಸ್ವೀಕರಿಸಿದರೂ ವಿದ್ಯಾರ್ಥಿಗಳು ವಿಭಿನ್ನ ಮಟ್ಟದ ಜೀವನಕ್ಕೆ ಆಕರ್ಷಿತರಾಗುತ್ತಾರೆ. ಅವರನ್ನು ಆ ಮನಸ್ಥಿತಿಯಲ್ಲಿ ಸುಧಾರಿಸುವುದೂ ಕಷ್ಟವೇ. ಈ ಕುರಿತು ತಜ್ಞರ ಆಲೋಚನೆ, ಸೂಚನೆಗಳಿವೆ: ಬಡತನದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕೆ ಅವಕಾಶ ದೊರೆಯುವುದು ಸ್ವಾಗತಾರ್ಹ. ಈ ಮಕ್ಕಳು ಆರ್ಥಿಕವಾಗಿ ಮೇಲ್ಮಟ್ಟದಲ್ಲಿರುವ ಮಕ್ಕಳೊಡನೆ ಬೆರೆತಾಗ ಉಂಟಾಗಬಹುದಾದ ಮಾನಸಿಕ ಪ್ರಭಾವಗಳ ಕುರಿತು ಕಾಳಜಿ ವಹಿಸುವುದು ಅಗತ್ಯ. ಈ ಸಂದರ್ಭದಲ್ಲಿ ಬಡತನದ ಅಂಚಿನಲ್ಲಿರುವ ಮಕ್ಕಳು ಕೀಳರಿಮೆಯನ್ನು ಬೆಳೆಸಿಕೊಳ್ಳಬಹುದು. ಇಲ್ಲವೇ ಇತರ ವಿಧಾನಗಳ ಮೂಲಕ ತಾವು ಬಯಸಿದುದನ್ನು ಪಡೆಯಲು ಪ್ರಯತ್ನಿಸಬಹುದು. ಇದನ್ನು ಅಧ್ಯಾಪಕರು ಅತಿ ಸೂಕ್ಷ್ಮವಾಗಿ ನಿರ್ವಹಿಸಬೇಕಾಗುತ್ತದೆ.

## ಪ್ರತಿ ಮಗುವಿಗೆ ತಗಲುವ ವೆಚ್ಚದ ಕುರಿತ ಮಾಹಿತಿಯ ಕೊರತೆ

ಆರ್.ಟಿ.ಐ. ಕಾಯಿದೆಯಡಿಯಲ್ಲಿ ಪ್ರವೇಶ ಪಡೆದ ಮಕ್ಕಳು ಖಾಸಗಿ ಶಾಲೆಗಳಿಗೆ ಪಾವತಿಸಬೇಕಾದ ಹಣವನ್ನು ಸರ್ಕಾರ ಪಾವತಿಸುವುದು. ಆದರೆ ಇದಕ್ಕೆ ಅಗತ್ಯವಾದ ವೆಚ್ಚ ಎಷ್ಟು ಎಂಬುದನ್ನು ರಾಜ್ಯಗಳು ತಿಳಿಸಬೇಕು. ಆದರೆ 29 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳಲ್ಲಿ 14 ರಾಜ್ಯಗಳು ಮಾತ್ರ ಈ ಮಾಹಿತಿಯನ್ನೊದಗಿಸಿವೆ. ಮಧ್ಯಪ್ರದೇಶ, ರಾಜಾಸ್ಥಾನ ಮತ್ತು ಕರ್ನಾಟಕ– ಈ ಮೂರು ರಾಜ್ಯಗಳು ಸಂಖ್ಯೆಯ ದೃಷ್ಟಿಯಿಂದ ದೇಶಾದ್ಯಂತ ಅತಿ ಹೆಚ್ಚು ದಾಖಲಾತಿಗಳನ್ನು ಹೊಂದಿವೆ. ಅರ್ಜಿ, ಹಂಚಿಕೆ ಮತ್ತು ಪ್ರವೇಶ ಪ್ರಕ್ರಿಯೆಯನ್ನು ನಿರ್ವಹಿಸಲು ಈ ಮೂರು ರಾಜ್ಯಗಳು ಆನ್‌ಲೈನ್ ವ್ಯವಸ್ಥೆಯನ್ನು ಬಳಸುತ್ತವೆ. ಕೆಲವು ರಾಜ್ಯಗಳು ಇ–ಆಡಳಿತ ವ್ಯವಸ್ಥೆಯನ್ನೂ ಸಹ ಬಳಸುತ್ತವೆ. ಈ ಮೂಲಕವೇ ಶಾಲಾ ನೋಂದಣಿಯಿಂದ ಮರುಪಾವತಿಯವರೆಗೆ ಎಲ್ಲ ಕಾರ್ಯಗಳನ್ನು ನಡೆಸುತ್ತವೆ. ಆದರೆ ರಾಜ್ಯಗಳ ಅಸಂಪೂರ್ಣ ಮಾಹಿತಿಯು ಒಂದು ಗಂಭೀರ ಸಮಸ್ಯೆಯಾಗಿದೆ. ಇದಲ್ಲದೆ ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಸೌಲಭ್ಯಗಳ ವಿತರಣೆಗೆ ಯಾವುದೇ ಸುವ್ಯವಸ್ಥಿತ ಚೌಕಟ್ಟು ಇಲ್ಲ. ಕೇಂದ್ರಸರ್ಕಾರದಿಂದ ಸಕಾಲದಲ್ಲಿ ಹಣ ಪಾವತಿಯಾಗದ ಕಾರಣ ಅನೇಕ ಖಾಸಗಿ ಶಾಲೆಗಳು ಆರ್.ಟಿ.ಇ. ನಿಬಂಧನೆಯಡಿ ಮಕ್ಕಳಿಗೆ ಪ್ರವೇಶ ನೀಡಲು ನಿರಾಕರಿಸಿದ ಉದಾಹರಣೆಗಳಿವೆ.

## ನಪಾಸು ಇಲ್ಲದ ನೀತಿಯ ಮಿತಿಗಳನ್ನು ಎದುರಿಸುವ ಸವಾಲು

ಆರ್.ಟಿ.ಇ. ಕಾಯಿದೆ ಜಾರಿಗೆ ಬಂದ ನಂತರವೂ ಶಿಕ್ಷಣದಲ್ಲಿ ಕಲಿಕೆಯ ಮಟ್ಟ ಕುಸಿಯುತ್ತಿರುವುದನ್ನು ಕೇಂದ್ರ ಶಿಕ್ಷಣ ಸಲಹಾ ಮಂಡಳಿ(ಸಿಎಬಿಇ2014) 2014), ರಾಷ್ಟ್ರೀಯ ಸಾಧನೆ ಸಮೀಕ್ಷೆ(2012) ಮತ್ತು ಆರ್ಥಿಕ ಸಮೀಕ್ಷೆ(2016–17) ಗಮನಿಸಿವೆ. 2016ರಲ್ಲಿ ನಡೆಸಿದ ಅಧ್ಯಯನದ ಪ್ರಕಾರ, 3ನೇ ತರಗತಿಯ ಸುಮಾರು ಶೇ. 58 ಮಕ್ಕಳಿಗೆ 1ನೇ ಹಂತದ ಪಠ್ಯವನ್ನು ಓದಲು ಸಾಧ್ಯವಾಗಲಿಲ್ಲ. ರಾಷ್ಟ್ರಮಟ್ಟದಲ್ಲಿ 3ನೇ ತರಗತಿಯ ಶೇ. 73 ಮಕ್ಕಳು ಮೂಲ ಅಂಕಗಣಿತವನ್ನು ಮಾಡಲು ಸಾಧ್ಯವಾಗಲಿಲ್ಲ. ಮುಂದಿನ ತರಗತಿಗೆ ಮಕ್ಕಳು ತೇರ್ಗಡೆಯನ್ನು ನಿರ್ಧರಿಸಬೇಕಾದರೆ ಕಲಿಕೆಯ ಫಲಿತಾಂಶಗಳ ಮೌಲ್ಯಮಾಪನ ಮಾಡಬೇಕು ಎಂದು ಸಿಎಬಿಇ(2014) ಉಪಸಮಿತಿ ಶಿಫಾರಸು ಮಾಡಿದೆ. ಇದು ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಶಾಲೆಗಳ ಮತ್ತು ಶಿಕ್ಷಕರ ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ. ಆರು ವರ್ಷಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ದಾಖಲಾದ 6–14 ವಯೋಮಾನದ ಮಕ್ಕಳ ಪ್ರಮಾಣವು ಶೇ. 96ಕ್ಕಿಂತ ಹೆಚ್ಚಾಗಿದ್ದರೂ 5ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಶೇ. 50ಕ್ಕಿಂತ ಹೆಚ್ಚು ಮಕ್ಕಳಿಗೆ 2ನೇ ತರಗತಿಯ ಪಠ್ಯವನ್ನು ಓದಲು ಸಾಧ್ಯವಿಲ್ಲ ಎಂದು ವಾರ್ಷಿಕ ಶಿಕ್ಷಣ ವರದಿ 2014 ತಿಳಿಸಿದೆ. ಇದಲ್ಲದೆ ಅನೇಕ ರಾಜ್ಯಗಳು ಆರ್.ಟಿ.ಇ. ಕಾಯಿದೆಯಲ್ಲಿ ಬದಲಾವಣೆಗಳಿಗೆ ಅನುಮತಿ ಕೋರಿವೆ. ಇತ್ತೀಚೆಗೆ ಇದಕ್ಕೆ ಸೂಕ್ತ

ರೀತಿಯಲ್ಲಿ ಅನುಮತಿ ದೊರೆತಿದೆ. ಇದಲ್ಲದೆ ವಿದ್ಯಾರ್ಥಿಗಳಿಗೆ ಕಲಿಯಲು ಮತ್ತು ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಲು ಯಾವುದೇ ಪ್ರೋತ್ಸಾಹವಿಲ್ಲ. ಜೀವನದಲ್ಲಿ ಯಶಸ್ಸಿಗೆ ಕಾರಣವಾದ ಕಲಿಕೆಯ ಸಾಮರ್ಥ್ಯವನ್ನು ಈ ನೀತಿಯು ಹೀಗೆ ರಾಜಿಮಾಡಿಕೊಳ್ಳುತ್ತದೆ. ಇದು ಶಿಕ್ಷಕರಲ್ಲಿ ಅಸಡ್ಡೆ ಮತ್ತು ಅಜಾಗರೂಕತೆಯನ್ನು ಬೆಳೆಸುತ್ತದೆ. 'ನಪಾಸು ರಹಿತ ನೀತಿ'ಯ ಕಾರಣದಿಂದಾಗಿ ಶಿಕ್ಷಕರಿಗೆ ಅವರ ಬೋಧನಾ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಲು ಮತ್ತು ಮಕ್ಕಳಿಗೆ ಕಲಿಯಲು ಯಾವುದೇ ಪ್ರೋತ್ಸಾಹವಿಲ್ಲ. ಹೀಗಾಗಿ ಎನ್.ಐ.ಟಿ.ಐ. ಆಯೋಗ ಆರ್.ಟಿ.ಇ. ಕಾಯಿದೆಯ ಪರಿಷ್ಕರಣೆಗೆ ಕರೆದಿದ್ದು ನಪಾಸುರಹಿತ ನೀತಿಯನ್ನು ತೆಗೆದುಹಾಕಲು ಆರ್.ಟಿ.ಇ. ಕಾಯಿದೆಗೆ ತಿದ್ದುಪಡಿ ತಂದಿದೆ. 5ನೇ ಮತ್ತು 8ನೇ ತರಗತಿಗಳಲ್ಲಿ ನಿಯಮಿತ ಪರೀಕ್ಷೆಗಳಿಗೆ ಅವಕಾಶ ನೀಡುವ ಸ್ವಾತಂತ್ರ್ಯವನ್ನು ರಾಜ್ಯಗಳಿಗೆ ನೀಡಿದೆ. ಅದರಲ್ಲಿ ಒಬ್ಬ ವಿದ್ಯಾರ್ಥಿ ನಪಾಸಾದರೆ ಅವನಿಗೆ ಹೆಚ್ಚುವರಿ ಮಾರ್ಗದರ್ಶನವನ್ನು ನೀಡಿ ಮರು ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಮರುಪರೀಕ್ಷೆಯಲ್ಲೂ ನಪಾಸಾದರೆ ಸಂಬಂಧಿತ ರಾಜ್ಯ ಅಥವಾ ಕೇಂದ್ರ ಪ್ರಾಧಿಕಾರವು ಆ ಮಗುವನ್ನು ನಪಾಸು ಮಾಡಿ ಅದೇ ತರಗತಿಯಲ್ಲಿ ಉಳಿಸಿಕೊಳ್ಳಬೇಕೇ ಬೇಡವೇ ಎಂದು ನಿರ್ಧರಿಸುವುದು. ಹೀಗೆ ಶೈಕ್ಷಣಿಕ ಅರ್ಹತೆ ಇಲ್ಲದ ಮಕ್ಕಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆಗೊಳಿಸಬೇಕೇ ಬೇಡವೇ, ಅದರ ಮಾನದಂಡಗಳೇನು ಎಂಬುದನ್ನು ಪರಿಹರಿಸಿಕೊಳ್ಳುವುದು ಮತ್ತೊಂದು ಸವಾಲು.

## ತರಬೇತಿ ಪಡೆದ ಶಿಕ್ಷಕರ ಕೊರತೆಯನ್ನು ಎದುರಿಸುವುದು

ವಿಭಿನ್ನ ರೀತಿಯ ಮಕ್ಕಳಿಗೆ ಪ್ರಜಾಪ್ರಭುತ್ವಕ್ಕನುಗುಣವಾಗಿ ಶಿಕ್ಷಣ ನೀಡಲು ಯೋಜಿಸಿದ ಆರ್.ಟಿ.ಇ. ನೀತಿಯ ಪ್ರಮುಖ ಅಂಗ ಶಿಕ್ಷಕರು. ಈ ಕಾಯಿದೆ ಅಂಗೀಕಾರವಾದಾಗ ಸುಮಾರು 10.6 ಲಕ್ಷ ಶಿಕ್ಷಕರಿಗೆ ವೃತ್ತಿಪರ ತರಬೇತಿಯ ಅಗತ್ಯವಿದೆ ಎಂದು ಅಂದಾಜಿಸಲಾಗಿತ್ತು. ಈ ಕೆಲಸ 2015ರ ವೇಳೆಗೆ ಪೂರ್ಣಗೊಳ್ಳಬೇಕಾಗಿತ್ತು. ಆದರೂ 2017ರಲ್ಲಿ ಸಂಸತ್ತಿನಲ್ಲಿ ಹೇಳಿರುವಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಪ್ರಕಾರ ಅನರ್ಹ ಶಿಕ್ಷಕರ ಸಂಖ್ಯೆ 11 ಲಕ್ಷ ಇದ್ದಿತು. ಹಾಗಾಗಿ ಶಿಕ್ಷಕರಿಗೆ ಕನಿಷ್ಠ ಅರ್ಹತೆಯನ್ನು ಪಡೆಯಲು 2019ರ ಮಾರ್ಚ್‌ವರೆಗೆ ಅವಕಾಶ ನೀಡುವ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲಾಯಿತು. ಇಂದಿಗೂ ಎಲ್ಲ ಶಿಕ್ಷಕರೂ ತರಬೇತಿ ಪಡೆದಿರುವಂತೆ ನೋಡಿಕೊಳ್ಳುವುದು ಒಂದು ಸವಾಲಾಗಿಯೇ ಉಳಿದಿದೆ.

## ಮೂಲಭೂತ ಸೌಕರ್ಯವನ್ನು ಒದಗಿಸುವ ಸವಾಲು

'ಭಾರತದಲ್ಲಿ ಪ್ರಾಥಮಿಕ ಶಿಕ್ಷಣ'ವನ್ನು ಕುರಿತ ಸಮೀಕ್ಷೆಯು, ದೇಶದಲ್ಲಿ ಮಾನ್ಯತೆ ಪಡೆದ ಪ್ರಾಥಮಿಕ ಶಾಲೆಗಳಲ್ಲಿ ಅರ್ಧದಷ್ಟು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ ಎಂಬ ಅಂಶವನ್ನು ಹೊರಹಾಕಿದೆ. ಇದು ನಮ್ಮ ಶಾಲೆಗಳ ವಿಷಾದಕರ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಹೀಗೆ ಕಾಯಿದೆಯು ನಿರೀಕ್ಷಿಸುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಒಂದು ಪ್ರಮುಖ ಸವಾಲಾಗಿದೆ. ಕಾಯಿದೆಯ ಪ್ರಕಾರ ಪ್ರತಿ 30 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇರಬೇಕು. ಈ ನಿಟ್ಟಿನಲ್ಲಿಯೂ ಸಮೀಕ್ಷೆಯು ಅತೃಪ್ತಿಕರ ಅಂಶವನ್ನೇ ತೋರಿಸಿದೆ. ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ 5.79ಮಿಲಿಯನ್ ಶಿಕ್ಷಕರು ಬೋಧಿಸುತ್ತಿದ್ದಾರೆ. ಪ್ರತಿ ಶಾಲೆಯಲ್ಲಿ ಸರಾಸರಿ 4.5 ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ. ಹೀಗೆ ಕಾಯಿದೆಯ ಪ್ರಕಾರ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಒಂದು ಸವಾಲಾಗಿದೆ.

## ವಯಸ್ಸಿನ ಪ್ರಕಾರ ಮಕ್ಕಳ ಶೈಕ್ಷಣಿಕ ವರ್ಗ ಅಥವಾ ತರಗತಿಯ ನಿರ್ಧಾರದ ಕೊರತೆಯನ್ನು ಸರಿದೂಗಿಸುವುದು

ಶಿಕ್ಷಣದ ಕಾಯಿದೆಯ ಪ್ರಕಾರ ಕಲಿಕೆಯ ಮಟ್ಟಕ್ಕನುಗುಣವಾಗಿಯಲ್ಲದೆ ಅವರ ವಯಸ್ಸಿಗನುಗುಣವಾಗಿ ವರ್ಗವನ್ನು ಅಥವಾ ಅವರ ಅಧ್ಯಯನ ಮಾಡಬೇಕಾದ ತರಗತಿಯನ್ನು ನಿರ್ಧರಿಸಬೇಕು. ಇದು ಒಳ್ಳೆಯ ಕ್ರಮವೇ. ವ್ಯರ್ಥವಾಗಿಹೋದ ವರ್ಷಗಳನ್ನು ಇದರಿಂದ ತುಂಬಬಹುದು. ಆದರೆ ಈ ಕ್ರಮವು ಒಂದೇ ವರ್ಗದಲ್ಲಿ ವಿಭಿನ್ನ ಕಲಿಕಾ ಅವಶ್ಯಕತೆಗಳನ್ನುಳ್ಳ ಸನ್ನಿವೇಶವನ್ನು ಸೃಷ್ಟಿಸಿದೆ. ಇದನ್ನು ಹೊಂದಾಣಿಕೆ ಮಾಡಿಕೊಳ್ಳಲು ಸರ್ಕಾರದ ಕಡೆಯಿಂದ ಯಾವುದೇ ಒತ್ತಾಸೆ ಇರುವುದಿಲ್ಲ. ವಿಭಿನ್ನ ಶೈಕ್ಷಣಿಕ ಅಗತ್ಯಗಳನ್ನುಳ್ಳ ಮಕ್ಕಳಿಗೆ ಒಂದೇ ಅಧ್ಯಾಪಕಿ ಏಕಕಾಲದಲ್ಲಿ ಸ್ಪಂದಿಸುವುದು ಹೇಗೆ ಸಾಧ್ಯ? ಇದನ್ನು ಸರಿದೂಗಿಸುವುದೂ ಒಂದು ಸವಾಲಾಗಿದೆ.

### ಶಾಲಾ ನಿರ್ವಹಣಾ ಸಮಿತಿ

ಆರ್.ಟಿ.ಇ. ನೀತಿಯ ಸೆಕ್ಷನ್ 21ರ ಅಡಿಯಲ್ಲಿ ಎಲ್ಲ ಸರ್ಕಾರಿ, ಸರ್ಕಾರಿ ಅನುದಾನಿತ ಶಾಲೆಗಳು ಮತ್ತು ವಿಶೇಷ ಶಾಲೆಗಳು ಶಾಲಾ ನಿರ್ವಹಣಾ ಸಮಿತಿಗಳನ್ನು ರಚಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಇದರಲ್ಲಿ ಶೇ.75ರಷ್ಟು ಸದಸ್ಯರು ಪೋಷಕರಾಗಿದ್ದು ಉಳಿದ ಶೇ.25 ರಷ್ಟು ಸದಸ್ಯರು ಶಾಲೆಯ ಮುಖ್ಯ ಶಿಕ್ಷಕರು, ಇತರ ಶಿಕ್ಷಕರು, ಸಮಾಜ ಕಾರ್ಯಕರ್ತರು, ಶಿಕ್ಷಣ ತಜ್ಞರು, ಸ್ಥಳೀಯ ಚುನಾಯಿತ ಪ್ರತಿನಿಧಿಗಳಾಗಿರುತ್ತಾರೆ. ಗ್ರಾಮದಲ್ಲಿನ ಹಿಂದುಳಿದ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಅವರು ಎಸ್.ಎಂ.ಸಿ. ಗಳಲ್ಲಿ ಪ್ರತಿನಿಧಿಸಬೇಕು. ಇದರಲ್ಲಿ ಶೇ. 50ರಷ್ಟು ಮಹಿಳಾ ಸದಸ್ಯರಿರಬೇಕು.

ರಾಜ್ಯ, ಶಾಲೆ ಮತ್ತು ಸಮಾಜದ ನಡುವಿನ ಅಂತರವನ್ನು ನಿವಾರಿಸುವುದು ಎಸ್.ಎಂ.ಸಿ. ಗಳ ನಿಜವಾದ ಉದ್ದೇಶ. ಪೋಷಕರನ್ನು ಶಾಲಾ ಚಟುವಟಿಕೆಗಳಲ್ಲಿ ಕೂಡಿಸಿಕೊಳ್ಳುವ ಮೂಲಕ ಅವರಲ್ಲಿ ಮಾಲೀಕತ್ವದ ಪ್ರಜ್ಞೆಯನ್ನು ಸೃಷ್ಟಿಸಲಾಗುತ್ತದೆ. ಅವರ ಸಕ್ರಿಯ ಭಾಗವಹಿಕೆಯು ಆರ್.ಟಿ.ಇ. ಕಾಯಿದೆಯ ಮಾರ್ಗಸೂಚಿಗಳ ಅನುಷ್ಠಾನದ ಕುರಿತ ಜಾಗರೂಕ ಮೇಲ್ವಿಚಾರಣೆಯನ್ನು ಅವರಿಗೆ ವಹಿಸುತ್ತದೆ. ಎಸ್.ಎಂ.ಸಿ. ಗಳಿಗೆ ಶಾಲೆಯ ಕೆಲಸಗಳ ಮೇಲ್ವಿಚಾರಣೆ, ಹಣದ ಬಳಕೆ ಮತ್ತು ವಾರ್ಷಿಕ ಮತ್ತು ಮೂರು ವರ್ಷಗಳ ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ಕಾರ್ಯಗಳನ್ನು ನಿಯೋಜಿಸಲಾಗಿದೆ. ಶಾಲೆಗಳ ಕಾರ್ಯಗಳನ್ನು ಯೋಜಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಪೋಷಕರ ಸಕ್ರಿಯ ಪಾಲುಗೊಳ್ಳುವಿಕೆಯೊಂದಿಗೆ ವಿಕೇಂದ್ರೀಕೃತ ಆಡಳಿತದ ಮೂಲ ಘಟಕವಾಗಿ ಎಸ್.ಎಂ.ಸಿ. ರೂಪುಗೊಂಡಿದೆ. ಇದರ ಸದಸ್ಯರು ತಮ್ಮ ಸಮಯ ಮತ್ತು ಶ್ರಮವನ್ನು ತೊಡಗಿಸಿ ಸ್ವಯಂ ಸೇವಕರಾಗಿ ಕೆಲಸಮಾಡಬೇಕಾಗುತ್ತದೆ. ಇದ ಬಡ ಪೋಷಕರಿಗೆ ಹೊರೆಯಾಗಬಹುದು. ಇದಲ್ಲದೆ, ಎಸ್.ಎಂ.ಸಿ. ಸದಸ್ಯರಿಗೆ ತರಬೇತಿ ನೀಡಿ ಅವರ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ. ಆದರೆ ಸರ್ಕಾರದಿಂದ ಬರಬೇಕಾದ ಹಣಕಾಸಿನ ನಿಧಿಯ ಅಕಾಲಿಕ ಹರಿವು ಅವರು ಸಕಾಲದಲ್ಲಿ ಯೋಜಿಸಿಕೊಂಡಂತೆ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಅಡ್ಡಿಯಾಗುತ್ತದೆ. ಸರ್ಕಾರವು ಕಾಲಕಾಲಕ್ಕೆ ಹಣಬಿಡುಗಡೆ ಮಾಡಿ ಸಕಾಲಿಕವಾಗಿ ಕಾರ್ಯಕ್ರಮಗಳು ನಡೆಯುವಂತೆ ಮಾಡುವುದು ಒಂದು ಸವಾಲಾಗಿದೆ.

### ಬದ್ಧತೆಗೆ ಕ್ರಮದ ಕೊರತೆ

ಆರ್.ಟಿ.ಇ. ಕಾಯಿದೆಯ ಪ್ರಕಾರ ಶಾಲಾ ಚಟುವಟಿಕೆಗಳಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳೆರಡರ ಪಾತ್ರವೂ ಇದೆ. ಕಾರ್ಯವಿಂಗಡಣೆಯಲ್ಲಿ ಸ್ಪಷ್ಟತೆ ಇಲ್ಲ. ಹೀಗಾಗಿ ಬದ್ಧತೆ ಮತ್ತು ಅದರ ಕೊರತೆಯನ್ನು ಗುರುತಿಸುವುದು ಕಷ್ಟವಾಗುತ್ತದೆ. ಸರ್ಕಾರಿ ಆಧಿಕಾರಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ತಪ್ಪಿದರೆ ಅವರ ವಿರುದ್ಧ ಯಾವ ಕ್ರಮಗಳನ್ನೂ ತೆಗೆದುಕೊಳ್ಳಲಾಗುವುದಿಲ್ಲ. ರಾಜ್ಯಸರ್ಕಾರಗಳು ಹಣಕಾಸನ್ನು ವ್ಯಯಮಾಡಲು ಮುಂದೆಬರುವುದಿಲ್ಲ. ಕೇಂದ್ರ ಸರ್ಕಾರವನ್ನು ಅವಲಂಬಿಸಿ ಕೂರುತ್ತವೆ. ಈ ಎರಡು ಸಂಸ್ಥೆಗಳ ನಡುವೆ ಶಾಲೆಯ ಕೂಸು ಬಡವಾಗುತ್ತದೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ಆರ್.ಟಿ.ಇ. ಕಾಯಿದೆಯನ್ನು ಅನ್ವಯಿಸುವಲ್ಲಿ ನಿಮ್ಮ ಶಾಲಾ ಸಂದರ್ಭದಲ್ಲಿ ನೀವು ಎದುರಿಸಿದ ತೊಡಕುಗಳನ್ನು ಪಟ್ಟಿಮಾಡಿ ಅವುಗಳನ್ನು ನೀವು ಪರಿಹರಿಸಿಕೊಂಡ ರೀತಿಯನ್ನೂ ಪರಿಹಾರ ಸಿಗದೆ ಉಳಿದುಕೊಂಡಿರುವ ಸಮಸ್ಯೆಗಳನ್ನೂ ಗುರುತಿಸಿ.

## 4.1.3.2. ಸವಾಲುಗಳನ್ನೆದುರಿಸಲು ಕ್ರಮಗಳು :

ಈ ಸವಾಲುಗಳನ್ನೆದುರಿಸಲು ತಜ್ಞರು ಕೆಳಗಿನ ಮಾರ್ಗಗಳನ್ನು ಸೂಚಿಸಿದ್ದಾರೆ.

- ಪ್ರತಿಯೊಂದು ರಾಜ್ಯವೂ ಸಮುದಾಯ ಮತ್ತು ತಜ್ಞ ಮಧ್ಯಸ್ಥಗಾರರ ಭಾಗವಹಿಸುವಿಕೆಯ ಮೂಲಕ

ಶಿಕ್ಷಣದ ಹಕ್ಕನ್ನು ಅನುಷ್ಠಾನಗೊಳಿಸಲು ಮಾದರಿ ನಿಯಮಗಳನ್ನು ರೂಪಿಸಬೇಕು.

- ಆರ್.ಟಿ.ಇ ಕಾಯಿದೆಯು ಅನ್ವಯವಾಗುವ ವಯಸ್ಸು 6–14 ಎಂದು ಸೂಚಿಸಿದೆಯಾದರೂ ಅವುಗಳ ಅಂತಿಮ ನಿರ್ಧಾರವನ್ನು ರಾಜ್ಯಗಳಿಗೇ ಬಿಡಲಾಗಿದೆ. ಈ ಅವಧಿಯನ್ನು ಹಿಗ್ಗಿಸುವ ಕುರಿತು ಆಲೋಚನೆ ಮಾಡಬೇಕು. ಕೇರಳದ ಉದಾಹರಣೆಯಂತೆ ಇದನ್ನು 1–18 ಎಂದು ಗುರುತಿಸಿಕೊಂಡು ಈ ಕಾಯಿದೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಮಕ್ಕಳು ಸೇರುವಂತೆ ನೋಡಿಕೊಳ್ಳಬೇಕು.
- ಈ ಕಾಯಿದೆಯಿಂದಾಗಿ ಶಾಲೆಗಳಲ್ಲಿ 12–13 ಲಕ್ಷ ಶಿಕ್ಷಕರ ಕೊರತೆ ಕಾಣಬರುತ್ತಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ರಾಜ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. ತಾತ್ಕಾಲಿಕ ಶಿಕ್ಷಕರ ಸೇವೆಯನ್ನು ಅವಲಂಬಿಸಬಾರದು.
- ಎಲ್ಲ ಸರ್ಕಾರಿ ಶಾಲೆಗಳನ್ನು ಭೌತಿಕವಾಗಿ ಹಾಗೂ ಶೈಕ್ಷಣಿಕವಾಗಿ ಸಜ್ಜುಗೊಳಿಸಿ, ಅಲ್ಲಿಯ ಗುಣಮಟ್ಟವನ್ನು ಹೆಚ್ಚಿಸಿ ಕಾಪಾಡಬೇಕು. ಇದರಿಂದಾಗಿ ಖಾಸಗಿ ಶಾಲೆಗಳಿಗೆ ಮಕ್ಕಳು ಹೋಗಬೇಕಾದ ಅಗತ್ಯವಿರುವುದಿಲ್ಲ.
- ಸಮುದಾಯ ಮಟ್ಟದಲ್ಲಿ ಮತ್ತು ಪಂಚಾಯಿತಿಗಳಲ್ಲಿ ಈ ಕಾಯಿದೆಯ ಕುರಿತು ಜಾಗೃತಿ ಮೂಡಿಸಲು ಶಾಲಾ ನಿರ್ವಹಣಾ ಸಮಿತಿಗಳು ಗಮನ ಹರಿಸಬೇಕು. ಇದರಿಂದ ಸಮುದಾಯದ ಸದಸ್ಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರೋತ್ಸಾಹಿಸಿದಂತಾಗುತ್ತದೆ.
- ಶಾಲಾ ನಿರ್ವಹಣಾ ಸಮಿತಿಗಳು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಾದ ಹಣಕಾಸನ್ನು ರಾಜ್ಯಗಳು ಸಕಾಲದಲ್ಲಿ ಒದಗಿಸಿಕೊಡಬೇಕು. ಜೊತೆಗೆ ಇತರ ಬೆಂಬಲವನ್ನು ನೀಡಬೇಕು.
- ರಾಜ್ಯಗಳು ಶಾಲಾ ಇಲಾಖೆಗೆ ಒಂದು ರೀತಿಯ ನ್ಯಾಯಾಂಗ ಅಧಿಕಾರವನ್ನು ನೀಡಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಬೇಕು.
- ಪ್ರಾಥಮಿಕ ಶಿಕ್ಷಣದಲ್ಲಿ ಖಾಸಗಿ ಸಹಭಾಗಿತ್ವ ಮಾದರಿಯು ಯಾವುದೇ ಕಾರಣಕ್ಕೆ ಶಿಕ್ಷಣದ ವಾಣಿಜ್ಯೀಕರಣವಾಗದಂತೆ ಎಚ್ಚರ ವಹಿಸಬೇಕು.
- ಬಾಲಕಾರ್ಮಿಕ ಕಾನೂನು ಮತ್ತು ಶಿಕ್ಷಣ ಹಕ್ಕು ಕಾಯಿದೆಯ ನಡುವೆ ಸಂಘರ್ಷವಿದೆ. ಎರಡೂ ಸಂಬಂಧಿತ ವಿಷಯಗಳೊಂದಿಗೆ ವ್ಯವಹರಿಸುತ್ತವೆ ಮತ್ತು ಮಕ್ಕಳ ಬೆಳವಣಿಗೆಯನ್ನು ಉತ್ತೇಜಿಸುತ್ತವೆ. ಹಾಗಾಗಿ ಈ ಕುರಿತ ಸ್ಪಷ್ಟತೆಯನ್ನು ಗುರುತಿಸಿಕೊಳ್ಳಬೇಕು.
- ಈ ಕಾಯಿದೆ ಪರಿಣಾಮಕಾರಿಯಾಗಿ ಜಾರಿಗೆ ಬರಬೇಕಾದರೆ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಕಾರ್ಮಿಕ ಸಚಿವಾಲಯ, ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಸಚಿವಾಲಯ, ಪಂಚಾಯಿತ್‌ರಾಜ್ ಸಚಿವಾಲಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯಗ ಇವೆಲ್ಲವೂ ಒಟ್ಟಾಗಿ ಸೇರಿ ಕೆಲಸಮಾಡಬೇಕು. ಈ ಸಮನ್ವಯವನ್ನು ಬಲಪಡಿಸಬೇಕು.
- ಇದರ ಅನುಷ್ಠಾನಕ್ಕೆ ಶಿಕ್ಷಣ ತೆರಿಗೆ ಮತ್ತು ಇತರ ತೆರಿಗೆಗಳನ್ನು ಬಳಸಿಕೊಂಡು ಸರ್ಕಾರವು ಸ್ವಾವಲಂಬಿಯಾಗಲು ಎಲ್ಲ ರೀತಿಯಲ್ಲಿ ಸಜ್ಜುಗೊಳ್ಳಬೇಕು. ಅದು ಎಂದಿಗೂ ಖಾಸಗಿ ವಲಯಗಳಿಂದ ಅಪೇಕ್ಷೆಗಳನ್ನಿಟ್ಟುಕೊಳ್ಳಬಾರದು.
- ಶಾಲೆಗಳಲ್ಲಿ ಸೂಕ್ತ ಶೌಚಾಲಯ ವ್ಯವಸ್ಥೇ ಇರಬೇಕು. ಇದು ಅಗತ್ಯ ಮಾತ್ರವಲ್ಲ; ಅನಿವಾರ್ಯ ಕೂಡ. ಇದರ ಜೊತೆಗೆ ಗಾಳಿ ಬೆಳಕು ಬರುವ ಕೊಠಡಿಗಳು, ಸೂಕ್ತ ಪೀಠೋಪಕರಣಗಳು, ಕಂಪ್ಯೂಟರ್ ಸಂಬಂಧಿ ಸೌಲಭ್ಯಗಳು, ಸುರಕ್ಷಿತ ಕೊಠಡಿಗಳು ಇವುಗಳನ್ನೊಳಗೊಂಡಂತೆ ಉತ್ತಮ ಭೌತಿಕ ಸೌಲಭ್ಯಗಳನ್ನೊದಗಿಸಬೇಕು.

- ಮಕ್ಕಳಿಗೆ ಒದಗಿಸುವ ಸಮವಸ್ತ್ರ, ಪಠ್ಯಪುಸ್ತಕ ಇತ್ಯಾದಿಗಳನ್ನು ಸಕಾಲದಲ್ಲಿ ವಿತರಿಸಬೇಕು.
- ಅಧ್ಯಾಪಕರಿಗೆ ಈ ಕಾಯಿದೆಯ ಕುರಿತಾದ ಸಂಪೂರ್ಣ ಅರಿವು ಮೂಡಿಸಬೇಕು
- ಶಾಲೆಯ ಅಭಿವೃದ್ಧಿಯಲ್ಲಿ ಸ್ಥಳೀಯ ಸರ್ಕಾರದ ಪಾತ್ರವನ್ನು ಖಚಿತಪಡಿಸಿಕೊಳ್ಳಬೇಕು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮತ್ತು ಮೊದಲನೇ ತಲೆಮಾರಿನ ಕಲಿಕಾರ್ಥಿಗಳಿಗೆ ವಿಶೇಷ ಉಪಕ್ರಮಗಳನ್ನು ಹೊಂದಿಸಿ ಕಲಿಕೆಗೆ ಸಹಾಯಮಾಡಬೇಕು.

## 1. ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –2

2. ಆರ್.ಟಿ.ಇ. ಕಾಯಿದೆಯ ನಿಯಮಗಳ ಕುರಿತ ನಿಮ್ಮ ವೈಯಕ್ತಿಕ ವೀಕ್ಷಣೆಗಳೇನು? ನಿಮ್ಮ ಆಲೋಚನೆಯ ಪ್ರಕಾರ ಅವುಗಳಲ್ಲಿ ಯಾವ ಬದಲಾವಣೆಗಳನ್ನು ತರಬೇಕು? ವಿವರಿಸಿ.

## 4.1.4. ಸಾರಾಂಶಿಸೋಣ

ಆರ್.ಟಿ.ಇ. ಕಾಯಿದೆಯನ್ನು ಅನುಷ್ಠಾನಗೊಳಿಸುವಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದೇವೆ. ಅವುಗಳಲ್ಲಿ ಮುಖ್ಯವಾದವು: ಬಾಲಕಾರ್ಮಿಕರಿಗೆ ಸಂಬಂಧಿಸಿದ ಸವಾಲುಗಳು, ಹಲವು ಸರ್ಕಾರಿ ನಿಯೋಗಗಳ ಪಾತ್ರದ ಗೊಂದಲ, ಲಿಂಗ ತಾರತಮ್ಯದಿಂದಾಗಿ ಶಾಲೆಯ ಹೊರಗುಳಿದ ಹೆಚ್ಚಿನ ಸಂಖ್ಯೆಯ ಹೆಣ್ಣುಮಕ್ಕಳನ್ನು ಶಾಲೆಯೊಳಗೆ ತರುವುದು, ಅನುದಾನರಹಿತ ಖಾಸಗಿ ಶಾಲೆಗಳಲಿ ಕನಿಷ್ಟ ಶೇ.25 ಸೀಟುಗಳ ಮೀಸಲಾತಿಯ ಅಡಚಣೆಗಳನ್ನು ನಿಭಾಯಿಸುವಿಕೆ, ತರಗತಿಯಲ್ಲಿನ ವೈವಿಧ್ಯತೆಯ ನಿರ್ವಹಣೆ, ಬಡಮಕ್ಕಳಿಗೆ ಆಘಾತಕಾರಿಯಾದ ಅನುಭವಗಳ ಸಂಭಾವ್ಯತೆಯನ್ನು ಗುರುತಿಸಿ ಹಾಗಾಗದಂತೆ ಕ್ರಮ ಕೈಗೊಳ್ಳುವುದು, ತರಬೇತಿ ಪಡೆದ ಶಿಕ್ಷಕರ ಕೊರತೆಯನ್ನು ಎದುರಿಸುವುದು, ಮೂಲಭೂತ ಸೌಕರ್ಯವನ್ನು ಒದಗಿಸುವ ಸವಾಲು, ವಯಸ್ಸಿನ ಪ್ರಕಾರ ಮಕ್ಕಳ ಶೈಕ್ಷಣಿಕ ವರ್ಗ ಅಥವಾ ತರಗತಿಯ ನಿರ್ಧಾರದ ಕೊರತೆಯನ್ನು ಸರಿದೂಗಿಸುವುದು.

ಬದ್ಧತೆಗೆ ಕ್ರಮದ ಕೊರತೆ ಇವುಗಳನ್ನು ಎದುರಿಸಲು ತಜ್ಞರು ಅನೇಕ ಸೂಚನೆಗಳನ್ನು ಸಲಹೆಗಳನ್ನು ನೀಡಿದ್ದಾರೆ. ಈ ಸಲಹೆಗಳನ್ನು ಜವಾಬ್ದಾರಿಯುತವಾಗಿ ಅನ್ವಯಿಸಿಕೊಳ್ಳಬೇಕು.

## 4.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ –1

ನಿಮ್ಮ ಅನುಭವಗಳನ್ನು ನಿಮ್ಮ ಪ್ರದೇಶದ ಇತರ ಶಾಲಾ ಶಿಕ್ಷಕರ ಜೊತೆಗೆ ಹಂಚಿಕೊಳ್ಳಿ, ಅವರು ಎದುರಿಸಿದ ಸಮಸ್ಯೆಗಳನ್ನೂ ಕಂಡುಕೊಂಡ ಪರಿಹಾರಗಳನ್ನೂ ಗಮನಿಸಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ–2

ಈ ಕುರಿತಂತೆ ನಿಮ್ಮ ಸುತ್ತಮುತ್ತಲಿನ ಶಾಲೆಗಳ ಶಿಕ್ಷಕರನ್ನು ಒಟ್ಟುಮಾಡಿ ನಿಮ್ಮ ಆಲೋಚನೆಗಳನ್ನು ಹಂಚಿಕೊಂಡು, ಚರ್ಚಿಸಿ, ನಿಮ್ಮೆಲ್ಲರ ತೀರ್ಮಾನಗಳನ್ನು ಸಂಗ್ರಹಿಸಿ, ಶಿಕ್ಷಣ ಅಧಿಕಾರಿಗಳಿಗೆ ನಿವೇದಿಸಿ.

## 4.1.6. ಘಟಕಾಂತ್ಯ ಅಭ್ಯಾಸಗಳು

1. ಆರ್.ಟಿ.ಇ. ಕಾಯಿದೆಯ ಅನುಷ್ಠಾನದಲ್ಲಿ ಎದುರಾಗುವ ಸವಾಲುಗಳನ್ನು ವಿವರಿಸಿ
2. ಆರ್.ಟಿ.ಇ. ಕಾಯಿದೆಯ ಅನುಷ್ಠಾನದಲ್ಲಿ ಎದುರಾಗುವ ಸವಾಲುಗಳನ್ನು ಪರಿಹರಿಸಿಕೊಳ್ಳಲು ಮಾರ್ಗಗಳನ್ನು ಸೂಚಿಸಿ. ಈ ಕಾಯಿದೆಯ ನಿಯಮಗಳಿಗೆ ಸಂಬಂಧಿಸಿದಂತೆ ನಿಮ್ಮ ಅಭಿಪ್ರಾಯಗಳನ್ನು ಸಕಾರಣವಾಗಿ ಸ್ಪಷ್ಟಪಡಿಸಿ.

## 4.1.7. ಪರಾಮರ್ಶನ ಸೂಚಿ


1. https://www.thehindu.com/news/cities/bangalore/government-has-not-addressed-the-gap-in-universal-access-to-school/article23402575.ece

2. https://www.infochangeindia.org/education/185-education/backgrounders/9215-challengees-in-implementing-the-rte-act

3. https://socialissuesindia.wordpress.com/2010/07/15/rte-act-2009-anomalies-and-challengees/

4. *SRJIS / BIMONTHLY / DR. AASAVARI …°µ¿,¦Í¶¿,§Æ (2552-2558 )* œ¨µ°¿ - «Æ¬Í°µ°¿, 2015 ¸,ªÁŸ III ¨ÆÕ / XVI www.srjis.com ªÁŸ 2556

5. http://www.dise.in/Downloads/Publications/Publications%202011- 2 / °¾œÍ¯% 20 µ°¦¿% 20 •¾°Í¡Í—³Á% 202011-12.ª¿¡¿•«Í

6. http://indiacode.nic.in/coiweb/amend/amend86.htm

7. http://mhrd.gov.in/si tes / upload_files / mhrd / files / RTI_Mode l_Rules.pdf

8. https://www.academia.edu/11348054/challengees_for_implementation_of_right_to_education_act_rte_for_children_ with_hearing_impairment_in_inclusive_education_-_a_survey

9. http://repository.christuniversity.in/7123/1/final_dissertation_ishita_g.pdf

10. https://www.speakingtree.in/blog/challengees-in-implementing-the-right-to-education-act-rtea-bahai-viewpoint

11. https://www.careerride.com/view/rte-features-hurdles-and-solutions-for-effective-implementation-19689.aspx

12. http://www.iaspar Parliament.com/current-affairs/editorial/challengees-to-rte-act

13. https://educationposter.blogspot.com/2015/01/the-challengees-and-hurdles-faced-in.html

14. https://www.onlinejournal.in/IJIRV2I11/135.pdf

15. https://www.iastoppers.com/right-education-rte-act-challengees-ahead/

16. https://www.dnaindia.com/india/report-right-to-education-act-implemented-challengees-still-remain-1366189


**************

# ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ: ಕಾಳಜಿಗಳು ಮತ್ತು ವಿಚಾರಗಳು

## ಘಟಕ–2 : ಶಿಕ್ಷಣದ ಹಕ್ಕು ಮತ್ತು ಸಾರ್ವತ್ರಿಕ ಅವಕಾಶ

**ಘಟಕದ ರಚನೆ :**


4.2.1. ಕಲಿಕೆಯ ಉದ್ದೇಶಗಳು

4.2.2. ಪೀಠಿಕೆ

4.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.2.3.1. ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ–ಪರಿಕಲ್ಪನೆ ಮತ್ತು ವಿಧಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4.2.3.2. ಶಿಕ್ಷಣದ ಸಾರ್ವತ್ರಿಕ ಅವಕಾಶಕ್ಕೆ ಅಡೆತಡೆಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

4.2.4. ಸಾರಾಂಶಿಸೋಣ

4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

4.2.6. ಘಟಕಾಂತ್ಯ ಅಭ್ಯಾಸಗಳು

4.2.7. ಪರಾಮರ್ಶನ ಸೂಚಿ


### 4.5.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದ ಸಾರ್ವತ್ರಿಕ ಅವಕಾಶದ ಅರ್ಥವನ್ನು ವಿವರಿಸುವರು;
- ಶಿಕ್ಷಣದ ಸಾರ್ವತ್ರಿಕ ಅವಕಾಶಕ್ಕೆ ಅಡ್ಡಿಯಾಗುತ್ತಿರುವ ಅಂಶಗಳನ್ನು ವಿಶ್ಲೇಷಿಸುವರು;
- ಶಿಕ್ಷಣದ ಸಾರ್ವತ್ರಿಕ ಅವಕಾಶಕ್ಕೆ ಅಡ್ಡಿಯಾಗುತ್ತಿರುವ ಅಂಶಗಳನ್ನು ನಿವಾರಿಸಲು ಕ್ರಮಗಳನ್ನು ವಿಶ್ಲೇಷಿಸುವರು ; ಮತ್ತು
- ಶಿಕ್ಷಣದ ಸಾರ್ವತ್ರಿಕ ಅವಕಾಶಕ್ಕೆ ಅಡ್ಡಿಯಾಗುತ್ತಿರುವ ಅಂಶಗಳನ್ನು ನಿವಾರಸಲು ಸಲಹೆ/ಸೂಚನೆಗಳನ್ನು ನೀಡುವರು.

### 4.5.2. ಪೀಠಿಕೆ

ಮಾನವ ಕುಲದ ಇತಿಹಾಸದುದ್ದಕ್ಕೂ ಸಾಮಾಜಿಕ ಜೀವನದಲ್ಲಿ ಮಾನವ ಪ್ರಗತಿ ಮತ್ತು ಘನತೆಗೆ ಅತ್ಯಂತ ನಿರ್ಣಾಯಕ ಅಂಶವಾಗಿರುವ ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಸ್ಥಾನವನ್ನು ನೀಡಲಾಗಿದೆ. ಈ ಮಹತ್ವವನ್ನು ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಗುರುತಿಸಲಾಗಿದೆ. ಇದನ್ನು ಗಮನಿಸಿಯೇ ವಿವಿಧ ರಾಷ್ಟ್ರಗಳು ಶಿಕ್ಷಣವನ್ನು ತಮ್ಮ ನಾಗರಿಕರ ಮೂಲ ಹಕ್ಕು ಎಂಬುದಾಗಿ ಪರಿಗಣಿಸಿವೆ. ಪ್ರತಿಯೊಬ್ಬರಿಗೂ ಶಿಕ್ಷಣಕ್ಕೆ ಅವಕಾಶ ಮತ್ತು ಪ್ರವೇಶವಿಲ್ಲದೆ ಈ ಹಕ್ಕನ್ನು ಸಾಧಿಸಲು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಶಿಕ್ಷಣಕ್ಕೆ ಇರುವ ಈ ಸೌಲಭ್ಯವನ್ನೇ

'ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ' ಎಂದು ಹೇಳಲಾಗುತ್ತದೆ. ಇದೇ ಪರಿಕಲ್ಪನೆಯನ್ನು ಕುರಿತಂತೆ ಈ ಘಟಕದಲ್ಲಿ ಹೆಚ್ಚಿನ ವಿಷಯವನ್ನು ತಿಳಿಯೋಣ.

## 4.2.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.2.3.1. ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ–ಪರಿಕಲ್ಪನೆ ಮತ್ತು ವಿಧಗಳು

ಸಾಮಾಜಿಕ ವರ್ಗ, ಧರ್ಮ, ಲಿಂಗ, ಜನಾಂಗ, ಜನಾಂಗೀಯ ಹಿನ್ನೆಲೆ ಅಥವಾ ದೈಹಿಕ ವಿಕಲಾಂಗತೆ ಇತ್ಯಾದಿ ಯಾವುದೇ ಅಂಶಗಳ ಪರಿಗಣನೆ ಇಲ್ಲದೆ ಸಮಾಜದಲ್ಲಿ ಎಲ್ಲ ವ್ಯಕ್ತಿಗಳಿಗೂ ಶಿಕ್ಷಣಕ್ಕೆ ಸಮಾನ ಅವಕಾಶಗಳ ಲಭ್ಯತೆ ಇರುವ ಸನ್ನಿವೇಶವನ್ನೇ 'ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ' ಎಂದು ಹೇಳಲಾಗುತ್ತದೆ. ಶಿಕ್ಷಣಕ್ಕೆ ಅಡ್ಡಿಯಾಗುವ ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಕುಂದುಕೊರತೆಗಳನ್ನು ನಿವಾರಿಸಿ ಶಿಕ್ಷಣಕ್ಕೆ ಅವಕಾಶವನ್ನು ಪಡೆಯುವ ಸಾಮರ್ಥ್ಯವಿದು. ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ, ರಾಷ್ಟ್ರೀಯ ಮತ್ತು ಜೈವಿಕ ಹಿನ್ನೆಲೆಯ ವೈವಿಧ್ಯತೆಯ ಸನ್ನಿವೇಶದಲ್ಲಿ ಜ್ಞಾನ ಪ್ರಸಾರದ ಗುರಿಯನ್ನು ಸಾಧಿಸಲು ವೈವಿಧ್ಯಮಯವಾದ ಬೋಧನಾ ಉಪಕ್ರಮಗಳನ್ನು ಪ್ರೋತ್ಸಾಹಿಸುತ್ತದೆ. ಮೊದಲಿಗೆ ಎಲ್ಲರಿಗೂ ಸಮಾನವಾದ ಅವಕಾಶಗಳನ್ನೊದಗಿಸುವ ಧ್ಯೇಯದಿಂದ ಇದನ್ನು ರೂಪಿಸಲಾಯಿತು. ಕಲಿಕೆ, ದೈಹಿಕ ಮತ್ತು ಬೌದ್ಧಿಕ ಅಸಾಮರ್ಥ್ಯವಿರುವ ಮಕ್ಕಳಿಗೆ ಕಲಿಕೆಗೆ ಅವಕಾಶ ಮತ್ತು ಅವರನ್ನು ಶಿಕ್ಷಣ ಕ್ಷೇತ್ರದಲ್ಲಿ ಒಳಗುಮಾಡಿಕೊಳ್ಳುವಿಕೆಯ ಧ್ಯೇಯದ ಹಿನ್ನೆಲೆಯಲ್ಲಿ ಸಾರ್ವತ್ರಿಕ ಅವಕಾಶದ ಪರಿಕಲ್ಪನೆ ಕ್ರಿಯಾಶೀಲವಾಗಿತ್ತು. ಇಂದು ಅದು ಎಲ್ಲ ರೀತಿಯ ಸಾಮರ್ಥ್ಯ ಹಾಗೂ ಅಸಾಮರ್ಥ್ಯವುಳ್ಳವರಿಗೂ ವ್ಯಾಪಿಸಿದೆ.

ಶೈಕ್ಷಣಿಕ ಸುಧಾರಣೆಯ ಶಬ್ದಕೋಶದ ಪ್ರಕಾರ, ಶಿಕ್ಷಣದಲ್ಲಿ 'ಅವಕಾಶ' ಎಂಬ ಪದವು ಶೈಕ್ಷಣಿಕ ಸಂಸ್ಥೆಗಳು ಮತ್ತು ನೀತಿಗಳು ಶಿಕ್ಷಣದಿಂದ ಸಂಪೂರ್ಣ ಲಾಭಪಡೆಯಲು ವಿದ್ಯಾರ್ಥಿಗಳಿಗೆ ಸಮಾನವಾದ ಮತ್ತು ಸಮಮಟ್ಟದ ಅವಕಾಶಗಳನ್ನು ಒದಗಿಸುವ ಅಥವಾ ಒದಗಿಸಲು ಪ್ರಯತ್ನಿಸುವ ಮಾರ್ಗಗಳನ್ನು ಖಚಿತಪಡಿಸುವ ರೀತಿಗಳಿಗೆ ಸಂಬಂಧಿಸಿದುದಾಗಿರುತ್ತದೆ. ಅವಕಾಶವನ್ನು ಹೆಚ್ಚಿಸುವಿಕೆಗೆ, ಶಾಲೆಗಳ ವತಿಯಿಂದ ಹೆಚ್ಚುವರಿ ಸೇವೆಗಳನ್ನು ಒದಗಿಸುವುದು ಅಥವಾ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಇತರರಿಗೆ ಸಮನಾಗಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಇರುವ ಅಡೆತಡೆಗಳನ್ನು ನಿವಾರಿಸುವುದು ಅವಶ್ಯಕ. ಜನಾಂಗ, ಧರ್ಮ, ಲೈಂಗಿಕ ದೃಷ್ಟಿಕೋನಗಳು, ಗ್ರಹಿಸಿದ ಬೌದ್ಧಿಕ ಸಾಮರ್ಥ್ಯ, ಹಿಂದಿನ ಶೈಕ್ಷಣಿಕ ಸಾಧನೆ, ವಿಶೇಷ ಶೈಕ್ಷಣಿಕ ಸ್ಥಾನಮಾನ, ಇಂಗ್ಲಿಷ್ ಭಾಷಾ ಸಾಮರ್ಥ್ಯ, ಕುಟುಂಬದ ವರಮಾನ ಅಥವಾ ಶೈಕ್ಷಣಿಕ ಮಟ್ಟ, ಸಾಂಸ್ಕೃತಿಕ ಶ್ರೀಮಂತಿಕೆ, ಭೌಗೋಳಿಕ ಸ್ಥಳ ಅಥವಾ ಶಾಲಾ ಸೌಲಭ್ಯಗಳು ಇತ್ಯಾದಿ ಅಂಶಗಳು ಇತರ ವಿದ್ಯಾರ್ಥಿಗಳಿಗಿಂತ ಕಡಿಮೆ 'ಅವಕಾಶ' ಪಡೆಯಲು ಕಾರಣಗಳಾಗಿರುತ್ತವೆ.

ಶಿಕ್ಷಣಕ್ಕೆ ಅವಕಾಶವನ್ನು ನಿರ್ದಿಷ್ಟವಾಗಿ ವಿವಿಧ ರೀತಿಯ ಶೈಕ್ಷಣಿಕ ಅವಕಾಶಗಳ ಲಭ್ಯತೆ ಎಂದು ಪರಿಗಣಿಸಲಾಗುತ್ತದೆ. ವ್ಯಕ್ತಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅರಳಿಸಿಕೊಳ್ಳಲು ಅಗತ್ಯವಾದ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸಿಗುವ ಅವಕಾಶವೇ ಶಿಕ್ಷಣದ ಅವಕಾಶ. ಹಾಗಾಗಿ ಒಂದು ಕೋರ್ಸಿನ ಪ್ರಾರಂಭ ಹಂತದಲ್ಲಿ ಸಿಗಬೇಕಾಗಿರುವ ಅವಕಾಶವಿದು. ಇದು ಒಂದು ಪದವಿ ಅಥವಾ ಯಶಸ್ವಿ ಸಾಧನೆಗೆ ಇರುವ ಹಕ್ಕು ಎಂದು ಹೇಳಲಾಗುವುದಿಲ್ಲ. ಇವುಗಳಾದರೋ ವ್ಯಕ್ತಿಯ ಪ್ರಾವೀಣ್ಯತೆ ಅಥವಾ ಶ್ರಮಕ್ಕೆ ಸಂಬಂಧಿಸಿದುದು. ಸಾರ್ವತ್ರಿಕ ಅವಕಾಶ ಈ ಅಂಶಗಳನ್ನು ಅವಲಂಬಿಸಿರುವಂತಹುದಲ್ಲ. ಅದು ಶಿಕ್ಷಣದ ಗುರಿಯನ್ನು ಬೆಂಬಲಿಸಲು ಮತ್ತು ನೇರವಾಗಿ ಸಾಧಿಸಲು ವ್ಯಕ್ತಿಗೆ ವ್ಯವಸ್ಥೆಯೊಳಗಿನ ಪ್ರವೇಶವನ್ನು ನೀಡುವಂತಹುದು.

ಶಿಕ್ಷಣಕ್ಕೆ ಅವಕಾಶ ಎಂಬುದು ಕೇವಲ ಲಭ್ಯತೆಯನ್ನು ಮೀರಿದುದು. ಲಭ್ಯತೆ ಎಂಬುದು ಅವಕಾಶಕ್ಕೆ ಒಂದು ಪೂರ್ವ ಆವಶ್ಯಕತೆ. ಮೂಲಸೌಕರ್ಯ ಮತ್ತು ಸಂಪನ್ಮೂಲಗಳಲ್ಲಿ ಹೂಡಿಕೆ ಮಾಡುವುದರ ಮೂಲಕ ಸಾಮರ್ಥ್ಯವನ್ನು ಹೆಚ್ಚಿಸಿ ಶಿಕ್ಷಣದ ಲಭ್ಯತೆಯನ್ನು ಉತ್ತಮಪಡಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ ಕಾಲೇಜುಗಳು, ಉತ್ತಮ ಗುಣಮಟ್ಟದ ಅಧ್ಯಾಪಕರು, ಗ್ರಂಥಾಲಯಗಳು ಮತ್ತು ಪ್ರಯೋಗಾಲಯಗಳು ಇತ್ಯಾದಿ ಸೌಕರ್ಯಗಳು

ಶಿಕ್ಷಣ ಪಡೆಯಬಯಸುವವರು ಎದುರಿಸುವ ಸಮಸ್ಯೆಗಳನ್ನು ಹಗುರಗೊಳಿಸುತ್ತವೆ. ಇದು ಒಟ್ಟು ಸಮಸ್ಯೆಗೆ ಪರಿಹಾರವಲ್ಲ. ಆರ್ಥಿಕವಾಗಿ ಕಡಿಮೆ ಸೌಕರ್ಯವಿರುವವರು ಹಣಕಾಸಿನ ಅಡಚಣೆಗಳನ್ನು ನಿವಾರಣೆಯ ಮೂಲಕ, ವಿಕಲಾಂಗರು ಅವರಿಗೆ ತಕ್ಕುದಾದ ಕಟ್ಟಡ ರಚನೆಯ ಮೂಲಕ, ನಗರದಿಂದ ಬಲು ದೂರ ವಾಸಿಸುವವರು ವಿದ್ಯುಚ್ಛಕ್ತಿ ಪೂರೈಕೆ, ಇಂಟರ್ನೆಟ್ ಸೌಕರ್ಯಗಳು ಮತ್ತು ಸ್ಥಳೀಯವಾಗಿ ಶಾಲೆಗಳ ಸ್ಥಾಪನೆ ಇತ್ಯಾದಿಗಳ ಮೂಲಕ ಶಿಕ್ಷಣಕ್ಕೆ ಅವಕಾಶವನ್ನು ಬಯಸುತ್ತಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಕಾಶ ಸಾಮಾನ್ಯವಾಗಿ ಸಮರ್ಪಕ ಶೌಚಾಲಯಗಳ ಸೌಕರ್ಯ, ಇತರರಿಗೆ ಮಧ್ಯಾಹ್ನದ ಊಟ ಇತ್ಯಾದಿಗಳ ಶಿಕ್ಷಣದ ಅವಕಾಶದ ಬೇಡಿಕೆಯನ್ನು ಅರ್ಥೈಸುತ್ತವೆ. ಹೀಗಾಗಿ ಶಿಕ್ಷಣಕ್ಕೆ ಅವಕಾಶ ಎಂಬುದು ಕೇವಲ ಪ್ರವೇಶಕ್ಕೆ ಇರುವ ಲಭ್ಯತೆಯಷ್ಟೇ ಅಲ್ಲ. ಇರುವ ಮಿತಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಸಾಧಕ ಮಾರ್ಗಗಳನ್ನೂ ಒಳಗೊಳ್ಳುತ್ತದೆ. ಹಾಗಾಗಿ ಅವಕಾಶ ಎಂಬುದು ಬಹು ಆಯಾಮವುಳ್ಳುದು. ಇದನ್ನು ಸಮಗ್ರ ದೃಷ್ಟಿಯಿಂದ ಪರಿಗಣಿಸಬೇಕು. ಇದರ ಪ್ರಮುಖ ಆಯಾಮಗಳೆಂದರೆ ಕೈಗೆಟುಕುವಿಕೆ, ಲಭ್ಯತೆ, ಅವಕಾಶವಿರುವಿಕೆ, ಸರಿಹೊಂದಿಸಿಕೊಳ್ಳುವಿಕೆ, ಮತ್ತು ಸ್ವೀಕಾರ. ಈ ಎಲ್ಲ ಆಯಾಮಗಳೂ ಸಿದ್ಧಿಸಿದರೆ ಶೈಕ್ಷಣಿಕ ಅವಕಾಶ ಸಿದ್ಧಿಸಿದಂತೆ.

ಸಾಮಾನ್ಯವಾಗಿ ಹೇಳುವುದಾದರೆ, 'ಶಿಕ್ಷಣಕ್ಕೆ ಅವಕಾಶ' ಎಂಬ ಪದದ ವ್ಯಾಪಕವಾದ ಬಳಕೆಯು ಐತಿಹಾಸಿಕವಾಗಿ ಶಿಕ್ಷಣದ ಪೂರ್ಣ ಲಾಭವನ್ನು ಪಡೆಯಲಾಗದ ಶಾಲೆಯಿಂದ ಮಾನ್ಯಮಾಡದ, ಕಲಿಕಾ ಅಗತ್ಯಗಳನ್ನು ಕಡೆಗಣಿಸಲಾದ ವಿದ್ಯಾರ್ಥಿಗಳ ಅಗತ್ಯಗಳ ಕುರಿತಾದ ಗಮನಕ್ಕೆ ಇರುವ ಹೆಚ್ಚಿನ ರಾಷ್ಟ್ರೀಯ ಗಮನವನ್ನು ಬಿಂಬಿಸುತ್ತದೆ. ಶೈಕ್ಷಣಿಕ ಸುಧಾರಣೆಗಳಿಗೆ ಸಂಬಂಧಿಸಿದ ಅರ್ಥದಲ್ಲಿ 'ಅವಕಾಶ' ಎಂಬುದು ಉದ್ದೇಶಪೂರ್ವಕವಾಗಿ ಅಥವಾ ಅನುದ್ದೇಶ ಪೂರಕವಾಗಿ, ಸಾಂಸ್ಥಿಕವಾದ ಶೈಕ್ಷಣಿಕ ಯಶಸ್ಸಿಗೆ ಅಡ್ಡಿಯಾಗುವ ಉತ್ತೇಜಕರಾಹಿತ್ಯವನ್ನು, ಅಡೆತಡೆಗಳನ್ನು ನಿವಾರಿಸುವ ಶಾಲಾ ಮಾರ್ಗೋಪಾಯಗಳು ಅಥವಾ ನೀತಿ ನಿಯಮಗಳನ್ನು ಅಥವಾ ಕೆಲವು ಮಕ್ಕಳಿಗೆ ಅಗತ್ಯವಾದ ಸಂಪನ್ಮೂಲಗಳು, ಸಮಾಜ ಸೇವೆಗಳು ಮತ್ತು ಶೈಕ್ಷಣಿಕ ಬೆಂಬಲಗಳ ಒದಗಿಸುವಿಕೆಯನ್ನು ಸೂಚಿಸುತ್ತದೆ. ಈ ರೀತಿಯ ಅವಕಾಶವನ್ನು ನಿರಾಕರಿಸಿದರೆ ಅಥವಾ ಗಮನಕ್ಕೆ ತೆಗೆದುಕೊಳ್ಳದೇ ಹೋದರೆ, ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಬಳಲುವುದು, ಶಾಲೆ ಬಿಡುವುದು, ಕಲಿಕೆಯಲ್ಲಿ ತೊಂದರೆಯನ್ನನುಭವಿಸುವುದು, ಪೂರ್ಣ ಸಿದ್ಧತೆ ಇಲ್ಲದೆ ಶಿಕ್ಷಣವನ್ನು ಪೂರ್ಣಗೊಳಿಸುವುದು, ಉದ್ಯೋಗಗಳಿಗೆ ನಾಲಾಯಕ್ಕಾಗುವುದು, ಕೆಲವು ಕೋರ್ಸುಗಳಿಗೆ ಪ್ರವೇಶಪಡೆಯಲಾಗದಿರುವುದು ಇತ್ಯಾದಿ ಪರಿಣಾಮಗಳನ್ನು ಅನುಭವಿಸುತ್ತಾರೆ.

## ಶಿಕ್ಷಣದ ಸಾರ್ವತ್ರಿಕ ಅವಕಾಶದ ವಿಧಗಳು:

ಶೈಕ್ಷಣಿಕ ಸುಧಾರಣೆಯ ಶಬ್ದಕೋಶವು ಸರ್ಕಾರಿ ಸಂಸ್ಥೆಗಳು, ಜಿಲ್ಲಾಡಳಿತ ಮತ್ತು ಶಾಲೆಗಳು ವಿದ್ಯಾರ್ಥಿಗಳಿಗೆ ಒದಗಿಸಬಹುದಾದ ಕೆಳಗಿನ ಅವಕಾಶದ ವಿಧಗಳನ್ನು ವ್ಯಾಖ್ಯಾನಿಸುತ್ತದೆ.

ವಿವಿಧ ರೀತಿಯ ಅಂಗವೈಕಲ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಶಾಲಾ ಕಾರ್ಯಕ್ರಮಗಳಲ್ಲಿ ಪೂರ್ಣ ಭಾಗವಹಿಕೆಯನ್ನು ಸಾಧ್ಯವಾಗಿಸುವ ಸಹಾಯಕ ತಂತ್ರಜ್ಞಾನಗಳು, ವಸತಿ ಮತ್ತು ಇತರ ಶಾಲಾ ಸೌಕರ್ಯಗಳನ್ನು ಬಳಸಿಕೊಳ್ಳುವ ಅವಕಾಶ;

ಲಿಂಗ ಅಥವಾ ಜನಾಂಗವನ್ನು ಲೆಕ್ಕಿಸದೆ ಪಠ್ಯೇತರ ಚಟುವಟಿಕೆಗಳು ಮತ್ತು ಕ್ರೀಡೆಗಳನ್ನು ಒಳಗೊಂಡಂತೆ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸಲು ಎಲ್ಲರಿಗೂ ಸಮಾನ ಅವಕಾಶ;

ಬಡತನದಲ್ಲಿ ವಾಸಿಸುತ್ತಿರುವ ಮಕ್ಕಳು ಅನಾರೋಗ್ಯ ಅಥವಾ ಹಸಿವಿನಿಂದ ಶಾಲೆಗೆ ಬಾರದಿರುವುದನ್ನು ತಪ್ಪಿಸಲು ಉಚಿತ ಉಪಹಾರ, ಊಟ ಸೇರಿದಂತೆ ಪೌಷ್ಟಿಕ ಆಹಾರಗಳನ್ನು ಪಡೆಯುವ ಅವಕಾಶ;

ಶಾಲೆಗೆ ಹಾಜರಾಗಲು ಸಮರ್ಪಕ ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಪಡೆಯುವ ಅವಕಾಶ;

ಕುಟುಂಬದ ಸಾಮರ್ಥ್ಯ ಅಥವಾ ಆದಾಯವನ್ನು ಲೆಕ್ಕಿಸದೆ, ಮಗುವು ಪ್ರಾಥಮಿಕ ಶಾಲೆಗೆ ಸಶಕ್ತವಾಗಿ

ಸಿದ್ಧವಾಗಲು ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಅವಕಾಶ;

ಇಂಗ್ಲಿಷ್ ಭಾಷೆ ಅಗತ್ಯವಿದ್ದರೆ, ಅದು ಮಗುವಿಗೆ ಅರ್ಥವಾಗುವ ಸನ್ನಿವೇಶವಿಲ್ಲದಿದ್ದರೆ ಅನುವಾದ ಪಡೆಯುವ ಅವಕಾಶ;

ತರಗತಿಯಲ್ಲಿ ಅನುತ್ತೀರ್ಣರಾಗುವ ಅಥವಾ ಶಾಲೆಯಿಂದ ಹೊರಗುಳಿಯುವ ಸಂಭವವಿರುವವರಿಗೆ ಶೈಕ್ಷಣಿಕವಾಗಿ ಯಶಸ್ವಿಯಾಗಲು ಸಮಾಲೋಚನೆ, ಸಾಮಾಜಿಕ ಸೇವೆ, ಶೈಕ್ಷಣಿಕ ಬೆಂಬಲ ಮತ್ತು ಅಗತ್ಯ ಸಂಪನ್ಮೂಲಗಳಿಗೆ ಅವಕಾಶ;

ವಿಶೇಷ ಶಿಕ್ಷಣದ ವಿದ್ಯಾರ್ಥಿಗಳಿಗೆ ವೈಯಕ್ತಿಕ ಶಿಕ್ಷಣ ಕಾರ್ಯಕ್ರಮಗಳಿಗೆ, ವಿಶೇಷ ತರಗತಿಗಳಿಗೆ ಅವಕಾಶ; ಹೈ ಸ್ಪೀಡ್ ಇಂಟರ್ ನೆಟ್ ಸಂಪರ್ಕಗಳು, ಕಂಪ್ಯೂಟರ್, ಲ್ಯಾಪ್–ಟಾಪ್, ಟ್ಯಾಬ್ಲೆಟ್ ಮುಂತಾದ ಅಗತ್ಯ ಹಾರ್ಡ್‌ವೇರ್ ಮತ್ತು ಸಾಫ್ಟ್ ವೇರ್‌ಗಳು ಸೇರಿದಂತೆ ತಂತ್ರಜ್ಞಾನದ ಬಳಕೆಗೆ ಅವಕಾಶ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಶೈಕ್ಷಣಿಕ ಅವಕಾಶದ ನಿಜವಾದ ಅರ್ಥವನ್ನು ಬಿಂಬಿಸುವ ಹೇಳಿಕೆಗಳನ್ನು '✓' ಗುರುತಿನ ಮೂಲಕ ಸೂಚಿಸಿರಿ.

1. ಸಾಮರ್ಥ್ಯಕ್ಕನುಗುಣವಾದ ಅವಕಾಶಗಳನ್ನು ಒದಗಿಸುವಿಕೆ
2. ಶಿಕ್ಷಣಕ್ಕೆ ಸಿಗುವ ಲಭ್ಯತೆ ಮಾತ್ರ.
3. ಉತ್ತಮ ಪ್ರಯತ್ನ ಮಾಡುವವರಿಗೆ ಒದಗಿಸುವ ಅವಕಾಶಗಳು.
4. ಶಿಕ್ಷಣದಿಂದ ಸಂಪೂರ್ಣ ಲಾಭಪಡೆಯಲು ವಿದ್ಯಾರ್ಥಿಗಳಿಗೆ ಸಮಾನವಾದ ಅವಕಾಶಗಳನ್ನು ಒದಗಿಸುವ ಮಾರ್ಗಗಳನ್ನು ಖಚಿತಪಡಿಸುವ ರೀತಿಗಳು.
5. ವಿಕಲಾಂಗರಿಗೆ ಅವರಿಗೆ ಅನುಕೂಲವಾದ ರೀತಿಯಲ್ಲಿ ಶಾಲಾ ಕಟ್ಟಡವ್ಯವಸ್ಥೆ.
6. ಸಾಂಸ್ಥಿಕವಾದ ಶೈಕ್ಷಣಿಕ ಯಶಸ್ಸಿಗೆ ಅಡ್ಡಿಯಾಗುವ ಉತ್ತೇಜಕರಾಹಿತ್ಯವನ್ನು, ಅಡೆತಡೆಗಳನ್ನು ನಿವಾರಿಸುವ ಶಾಲಾ ಮಾರ್ಗೋಪಾಯಗಳು.
7. ಕೆಲವು ಮಕ್ಕಳಿಗೆ ಅಗತ್ಯವಾದ ಸಂಪನ್ಮೂಲಗಳು, ಸಮಾಜ ಸೇವೆಗಳು ಮತ್ತು ಶೈಕ್ಷಣಿಕ ಬೆಂಬಲಗಳ ಒದಗಿಸುವಿಕೆ.

## 4.2.3.2. ಶಿಕ್ಷಣದ ಸಾರ್ವತ್ರಿಕ ಅವಕಾಶಕ್ಕೆ ಅಡೆತಡೆಗಳು

### ಮೂಲಭೂತ ಸೌಕರ್ಯಗಳ ಕೊರತೆ

ಉತ್ತಮ ಶಿಕ್ಷಣದ ಅವಕಾಶಗಳನ್ನು ಸಕ್ರಿಯಗೊಳಿಸಲು ಅಗತ್ಯವಾದ ಸೌಲಭ್ಯಗಳನ್ನು ಬಲಪಡಿಸುವುದು ಅತ್ಯಂತ ಪ್ರಮುಖವಾದ ಅಂಶ. ಇದು ಒಂದು ಸವಾಲಾಗಿದ್ದು, ಇದಕ್ಕೆ ಸಾಕಷ್ಟು ಕಾಲಾವಕಾಶ ಮತ್ತು ಸೂಕ್ತ ಸಂಪನ್ಮೂಲಗಳ ಅಗತ್ಯವಿದೆ. ಇದರಲ್ಲಿ ಮುಖ್ಯವಾದುದು ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿ, ಕಂಪ್ಯೂಟರ್, ಸಮರ್ಪಕ ತರಗತಿ ಕೋಣೆಗಳು, ಇಂಟರ್‌ನೆಟ್ ಹಾಗೂ ಇತರ ಸಂವಹನ ವ್ಯವಸ್ಥೆಗಳು. ಇವುಗಳ ಪೂರೈಕೆಯಾಗದಿರುವುದು ಸಾರ್ವತ್ರಿಕ ಅವಕಾಶಕ್ಕೆ ಒಂದು ಅಡ್ಡಿಯಾಗಿದೆ. ಇವೆಲ್ಲದರ ಪೂರೈಕೆಯಾಗದೆ ಗುಣಮಟ್ಟದ ಶಿಕ್ಷಣ ಅಸಾಧ್ಯ.

### ಸರ್ವರ ಸ್ನೇಹಿಯಾದ ಶಿಕ್ಷಣ ವ್ಯವಸ್ಥೆಯ ಕೊರತೆ

ಸಾರ್ವತ್ರಿಕ ಅವಕಾಶಕ್ಕೆ ಅಡ್ಡಿಯಾಗುವ ಅನೇಕ ಅಂಶಗಳಿವೆ. ಇವು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ,

ಮತ್ತು ರಾಜಕೀಯ ಕ್ಷೇತ್ರಗಳಿಂದ ಮೂಡಬಹುದು. ಶಿಕ್ಷಣ ವ್ಯವಸ್ಥೆಗೆ ಅವಕಾಶ ಸಿಗದಿರುವುದೇ ಒಂದು ತೊಡಕು. ಎಲ್ಲ ಮಕ್ಕಳ ಕಲಿಕಾ ಅನುಭವಗಳನ್ನು ಪ್ರಚೋದಿಸಿ ಪ್ರೋತ್ಸಾಹಿಸಲು ಶಾಲೆಗಳು ಮುದಗೊಳಿಸುವ ಪರಿಸರವನ್ನು ಸೃಷ್ಟಿಸಬೇಕು, ಇವು ಉತ್ತಮ ಮೂಲಭೂತ ಸೌಕರ್ಯಗಳು, ವಿಶಾಲವಾದ ಮಕ್ಕಳ ಸ್ನೇಹಿಯಾದ ಕಟ್ಟಡಗಳು, ಸಮರ್ಥ ಅಧ್ಯಾಪಕರು, ಕಲಿಕಾ ಸಾಮಗ್ರಿಗಳು, ಆಸಕ್ತಿಯುತವಾದ ಶೈಕ್ಷಣಿಕ ವಿಷಯಗಳು, ವಿದ್ಯುಚ್ಛಕ್ತಿ, ನೀರು, ಶೌಚಾಲಯ ಇತ್ಯಾದಿಗಳ ವ್ಯವಸ್ಥೆ ಇವೆಲ್ಲವನ್ನೂ ಒಳಗೊಳ್ಳಬೇಕು. ಇವೆಲ್ಲದರೆ ಕೊರತೆಯೇ ಸಾರ್ವತ್ರಿಕ ಅವಕಾಶಕ್ಕೆ ಅಡ್ಡಿಯಾಗಿ ಪರಿಣಮಿಸುತ್ತದೆ.

## ಬಡತನ

ಪ್ರಗತಿಪರ ರಾಷ್ಟ್ರಗಳಲ್ಲಿ ಬಡತನದ ಸಮಸ್ಯೆ ಬಲು ದೊಡ್ಡದು. ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗಿರಲು ಕಾರಣ ಬಡತನವೇ. ಹೆತ್ತವರಿಗೆ ಮಗುವಿಗೆ ಶಿಕ್ಷಣ ಕೊಡಲು ಅಗತ್ಯವಾದ ಹಣ ಮತ್ತು ಸೌಕರ್ಯಗಳಿರುವುದಿಲ್ಲ. ಬಡತನದ ಕುಟುಂಬದ ಮಕ್ಕಳು ಶಾಲೆ ಮತ್ತು ಕೆಲಸದ ನಡುವಿನ ಆಯ್ಕೆಯನ್ನು ಮಾಡಿಕೊಳ್ಳಬೇಕು. ಎರಡನೆಯದೇ ಬಹಳಷ್ಟು ಸನ್ನಿವೇಶಗಳಲ್ಲಿನ ಆಯ್ಕೆಯಾಗುವ ಅನಿವಾರ್ಯತೆ ಇರುತ್ತದೆ. ಮತ್ತೊಂದು ತೀಕ್ಷ್ಣವಾದ ಸಮಸ್ಯೆ ಎಂದರೆ ಅನಾರೋಗ್ಯ ಮತ್ತು ಶೈಕ್ಷಣಿಕ ಬೆಳವಣಿಗೆಯ ಕೊರತೆಗೆ ಕಾರಣವಾಗುವ ಅಪೌಷ್ಟಿಕತೆ. ಇದು ಸಾರ್ವತ್ರಿಕ ಅವಕಾಶಕ್ಕೆ ಮತ್ತೊಂದು ಅಡಚಣೆ.

## ಅಸಮರ್ಪಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಲೋಚನೆಗಳು

ಒಂದು ಸಮಾಜದಲ್ಲಿ ಯಾರು ಶಾಲೆಗೆ ಹೋಗಬೇಕು ಯಾರು ಹೋಗಬಾರದು ಎಂಬುದನ್ನು ತಂದೆ ತಾಯಿ ಮಾತ್ರವಲ್ಲದೆ ಆಯಾ ಸಮುದಾಯದ ಸಮಷ್ಟಿ ಸಂಸ್ಕೃತಿಯೂ ನಿರ್ಧರಿಸುತ್ತದೆ. ಶಿಕ್ಷಣ ಪಡೆಯುವುದಕ್ಕೆ ಸಂಬಂಧಿಸಿದಂತೆ ಹುಡುಗರು ಮತ್ತು ಹುಡುಗಿಯರ ಆಯ್ಕೆ ಎದುರಾದಾಗ ಹುಡುಗರ ಶಿಕ್ಷಣಕ್ಕೇ ಆದ್ಯತೆ ಸಿಗುತ್ತದೆ. ಹೆಣ್ಣು ಮಕ್ಕಳ ಶಿಕ್ಷಣದ ಅವಶ್ಯಕತೆಯನ್ನು ಹಲವು ಸಮುದಾಯಗಳು ಇನ್ನೂ ಸಂಪೂರ್ಣವಾಗಿ ಸಾರ್ವತ್ರಿಕವಾಗಿ ಒಪ್ಪಿಕೊಳ್ಳಬೇಕಾಗಿದೆ ಎಂಬ ಅಂಶ ಸಾರ್ವತ್ರಿಕ ಅವಕಾಶದ ಅಡ್ಡಿಯನ್ನು ಸ್ಪಷ್ಟವಾಗಿ ತೆರೆದಿಡುತ್ತದೆ. ಶೀಘ್ರ ವಿವಾಹ, ಬಸುರಿತನ, ಇತ್ಯಾದಿಗಳು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅನಿವಾರ್ಯವಾದ ಅಡಚಣೆಗಳಾಗುತ್ತವೆ. UNICEFನ ಅಂದಾಜಿನ ಪ್ರಕಾರ ಪ್ರತಿ ವರ್ಷ ಹುಡುಗರಿಗಿಂತ ಒಂಬತ್ತು ಮಿಲಿಯನ್ ಸಂಖ್ಯೆಯಷ್ಟು ಹೆಚ್ಚಿನ ಹೆಣ್ಣುಮಕ್ಕಳು ಶಿಕ್ಷಣ ಪಡೆಯದ ಸ್ಥಿತಿಯಲ್ಲಿರುತ್ತಾರೆ. ಇದು ಬಹಳಮಟ್ಟಿಗೆ ಆಯಾ ಸ್ಥಳದ ಸಂಸ್ಕೃತಿ ಮತ್ತು ಆಚರಣೆಗಳ ಕಾರಣದಿಂದಾಗಿ ಎಂಬುದೂ ಗಮನಾರ್ಹವಾದ ಅಂಶ.

## ಸುಭದ್ರತೆಯ ಕೊರತೆ ಮತ್ತು ಶಾಲೆಗೆ ಕ್ರಮಿಸಬೇಕಾಗಿರುವ ದೂರ

ಬಹಳಷ್ಟು ಪ್ರದೇಶಗಳಲ್ಲಿ ಶಾಲೆಗಳು ಮಕ್ಕಳಿಗೆ ಕ್ಷೇಮಕರವಾದ ಸ್ಥಳಗಳಲ್ಲ. ಅಸಹಿಷ್ಣುತೆ, ತಾರತಮ್ಯ, ಹಿಂಸೆ ಇವು ಸಮಾಜದಲ್ಲಿ ಇಂದಿಗೂ ಇವೆ. ಹೆಣ್ಣುಮಕ್ಕಳು ಅಧ್ಯಾಪಕರು ಮತ್ತು ಸಹಪಾಠಿಗಳಿಂದ ಅತ್ಯಾಚಾರಕ್ಕೊಳಗಾಗಿರುವ ವರದಿಗಳು ಕಾಣುತ್ತಲೇ ಇರುತ್ತವೆ. ಮನೆಯಿಂದ ಶಾಲೆಗಳೂ ಸಾಕಷ್ಟು ದೂರದಲ್ಲಿರುತ್ತವೆ. ಹೀಗಾಗಿ ಅವರನ್ನು ಶಾಲೆಗೆ ಕಳುಹಿಸುವುದಕ್ಕೇ ಕುಟುಂಬದವರು ಹಿಂಜರಿಯುತ್ತಾರೆ.

ಮೇಲೆ ವಿವರಿಸಿರುವ ಯಾವ ಅಡೆತಡೆಗಳೂ ಹೊಸತೇನಲ್ಲ. ಇವುಗಳನ್ನು ನಿವಾರಿಸಲು ಸರ್ಕಾರಗಳು ಸತತವಾಗಿ ಪ್ರಯತ್ನಿಸುತ್ತಲೇ ಬಂದಿವೆ. ಈ ಪ್ರತಿ ಸಮಸ್ಯೆಯನ್ನು ಕುರಿತಂತೆ ಸರ್ಕಾರದ ಪ್ರಯತ್ನಗಳನ್ನು ನಾವು 'ಶಿಕ್ಷಣದ ಹಕ್ಕು ಕಾಯಿದೆ', 'ಸರ್ವ ಶಿಕ್ಷಾ ಅಭಿಯಾನ', 'ಮಾಧ್ಯಮಿಕ ಶಿಕ್ಷಾ ಅಭಿಯಾನ', ಸಮಗ್ರ ಶಿಕ್ಷಾ ಮುಂತಾದ ಶೀರ್ಷಿಕೆಗಳಡಿಯಲ್ಲಿ ವಿವರವಾಗಿ ಚರ್ಚಿಸಿದ್ದೇವೆ. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದ ಜೊತೆಗೆ ಇನ್‌ಫೋಸಿಸ್ ಫೌಂಡೇಶನ್, ಯುನೆಸ್ಕೊ ಮುಂತಾದ ಇತರ ಸಂಸ್ಥೆಗಳೂ ಕೈಜೋಡಿಸಿವೆ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ನಿಮ್ಮ ಶಾಲಾ ಪರಿಸರದಲ್ಲಿ ಸಾರ್ವತ್ರಿಕ ಅವಕಾಶಕ್ಕೆ ಅಡ್ಡಿಯಾಗಿರುವ ಅಂಶಗಳನ್ನು ನಿಮ್ಮ ಮತ್ತು ನಿಮ್ಮ ಸಹೋದ್ಯೋಗಿಗಳ ಅನುಭವದ ಆಧಾರದ ಮೇಲೆ ಸಂಗ್ರಹಿಸಿ. ಅವುಗಳಲ್ಲಿ ಯಾವುದಾದರೂ ಎರಡನ್ನು ಪರಿಹರಿಸಲು ಶಾಲೆ ಮಾಡಬಹುದಾದ ಪ್ರಯತ್ನಗಳನ್ನು ಸಹ ಶಿಕ್ಷಕರೊಂದಿಗೆ ಆಲೋಚಿಸಿ, ಅದರ ಆಧಾರದ ಮೇಲೆ ಒಂದು ಕಾರ್ಯಯೋಜನೆಯನ್ನು ರೂಪಿಸಿ. ಇದನ್ನು ಅನ್ವಯಿಸಿ.

## 4.2.4. ಸಾರಾಂಶಿಸೋಣ

- ಸಾಮಾಜಿಕ ವರ್ಗ, ಧರ್ಮ, ಲಿಂಗ, ಜನಾಂಗ, ಜನಾಂಗೀಯ ಹಿನ್ನೆಲೆ ಅಥವಾ ದೈಹಿಕ ವಿಕಲಾಂಗತೆ ಇತ್ಯಾದಿ ಯಾವುದೇ ಅಂಶಗಳ ಪರಿಗಣನೆ ಇಲ್ಲದೆ ಸಮಾಜದಲ್ಲಿ ಎಲ್ಲ ವ್ಯಕ್ತಿಗಳಿಗೂ ಶಿಕ್ಷಣಕ್ಕೆ ಸಮಾನ ಅವಕಾಶಗಳ ಲಭ್ಯತೆ ಇರುವ ಸನ್ನಿವೇಶವನ್ನೇ 'ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ' ಎಂದು ಹೇಳಲಾಗುತ್ತದೆ.
- ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶವು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ, ರಾಷ್ಟ್ರೀಯ ಮತ್ತು ಜೈವಿಕ ಹಿನ್ನೆಲೆಯ ವೈವಿಧ್ಯತೆಯ ಸನ್ನಿವೇಶದಲ್ಲಿ ಜ್ಞಾನ ಪ್ರಸಾರದ ಗುರಿಯನ್ನು ಸಾಧಿಸಲು ವೈವಿಧ್ಯಮಯವಾದ ಬೋಧನಾ ಉಪಕ್ರಮಗಳನ್ನು ಪ್ರೋತ್ಸಾಹಿಸುತ್ತದೆ.
- ಶೈಕ್ಷಣಿಕ ಸುಧಾರಣೆಯ ಶಬ್ದಕೋಶದ ಪ್ರಕಾರ, ಶಿಕ್ಷಣದಲ್ಲಿ 'ಅವಕಾಶ' ಎಂಬ ಪದವು ಶೈಕ್ಷಣಿಕ ಸಂಸ್ಥೆಗಳು ಮತ್ತು ನೀತಿಗಳು ಶಿಕ್ಷಣದಿಂದ ಸಂಪೂರ್ಣ ಲಾಭ ಪಡೆಯಲು ವಿದ್ಯಾರ್ಥಿಗಳಿಗೆ ಸಮಾನವಾದ ಮತ್ತು ಸಮಮಟ್ಟದ ಅವಕಾಶಗಳನ್ನು ಒದಗಿಸುವ ಅಥವಾ ಒದಗಿಸಲು ಪ್ರಯತ್ನಿಸುವ ಮಾರ್ಗಗಳನ್ನು ಖಚಿತಪಡಿಸುವ ರೀತಿಗಳಿಗೆ ಸಂಬಂಧಿಸಿದುದಾಗಿರುತ್ತದೆ.
- ಶಿಕ್ಷಣದ ಸಾರ್ವತ್ರಿಕ ಅವಕಾಶದ ವಿಧಗಳನ್ನು ಹಲವಾರು ರೀತಿಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಇದು ವಿಭಿನ್ನ ಗುಂಪಿನವರಿಗೆ ವಿಭಿನ್ನ ರೀತಿಯ ಅವಕಾಶವನ್ನು ಒಳಗೊಳ್ಳುತ್ತದೆ.
- ಮೂಲಭೂತ ಸೌಕರ್ಯಗಳ ಕೊರತೆ, ಸರ್ವರ ಸ್ನೇಹಿಯಾದ ಶಿಕ್ಷಣ ವ್ಯವಸ್ಥೆಯ ಕೊರತೆ, ಬಡತನ, ಅಸಮರ್ಪಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಲೋಚನೆಗಳು, ಸುಭದ್ರತೆಯ ಕೊರತೆ ಮತ್ತು ಶಾಲೆಗೆ ಕ್ರಮಿಸಬೇಕಾಗಿರುವ ದೂರ ಇತ್ಯಾದಿ ಅಂಶಗಳು ಶಿಕ್ಷಣದ ಸಾರ್ವತ್ರಿಕ ಅವಕಾಶಗಳನ್ನು ಸಾಧಿಸುವಲ್ಲಿ ಅಡ್ಡಿಯೊಡ್ಡುತ್ತವೆ.

## 4.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4 ರಿಂದ 7 – '✓'

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ನಿಮ್ಮ ಯೋಜನೆಯ ಫಲಿತಾಂಶಗಳನ್ನು ಪ್ರಾದೇಶಿಕ ಮಟ್ಟದ ಶಾಲಾ ಶಿಕ್ಷಕರ ಸಭೆಯಲ್ಲಿ ಹಂಚಿಕೊಳ್ಳಿ

## 4.2.6. ಘಟಕಾಂತ್ಯ ಅಭ್ಯಾಸಗಳು

1. ಶಿಕ್ಷಣಕ್ಕೆ ಸಾರ್ವತ್ರಿಕ ಪ್ರವೇಶದ ಅರ್ಥ ಮತ್ತು ವಿಧಗಳನ್ನು ವಿವರಿಸಿ.
2. ಶಿಕ್ಷಣಕ್ಕೆ ಸಾರ್ವತ್ರಿಕ ಪ್ರವೇಶವನ್ನು ಸಾಧಿಸುವಲ್ಲಿನ ತೊಡಕುಗಳನ್ನು ವಿವರಿಸಿ. ನಿಮ್ಮ ನೆಲೆಯಲ್ಲಿ ಇವುಗಳನ್ನು ಪರಿಹರಿಸಲು ಸಲಹೆಗಳನ್ನು ನೀಡಿರಿ.

## 4.2.7. ಪರಾಮರ್ಶನ ಸೂಚಿ


1. https://www.edglossary.org/access/
2. http://www.gaps-education.org/about-us/access-defined-2/
3. https://www.erim.eur.nl/fileadmin/default/content/erim/research/centres/scope/research/issue_papers/state_-_civil_society/universal%20access%20to%20education-a%20study%20of%20innovative% 20stra.pdf (Check)
4. http://www.pri-bd.org/upload/file/bef_paper/1414214075.pdf
5. NCERT (2005). National curriculum framework(NCF 2005). New Delhi: NCERT.
6. NCERT (2006a). Position paper-National focus group on education with special needs.
7. NCERT (2006b). Position paper-National focus group on gender issues in the curriculum (NCF 2005). NCERT.
8. NCERT (2006c). Position paper-National focus group on problems of scheduled caste and scheduled tribe children (NCF 2005). New Delhi: NCERT.
9. NCERT (2006d). Position paper-National focus group on teaching of Indian language.
10. Ozial, A.O. 'Hand Book of School Administration and Management', London, Macmillan.


***********

# ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ: ಕಾಳಜಿಗಳು ಮತ್ತು ವಿಚಾರಗಳು

# ಘಟಕ–3 : ಶೈಕ್ಷಣಿಕ ಅವಕಾಶಗಳ ಸಮಾನತೆ

**ಘಟಕದ ರಚನೆ :**


4.3.1. ಕಲಿಕೆಯ ಉದ್ದೇಶಗಳು

4.3.2. ಪೀಠಿಕೆ

4.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.3.3.1. ಶಿಕ್ಷಣದ ಅವಕಾಶಗಳ ಸಮಾನತೆ ಅರ್ಥ ಮತ್ತು ಮಹತ್ವ

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4.3.3.2. ಶಿಕ್ಷಣದ ಅವಕಾಶಗಳ ಸಾರ್ವತ್ರಿಕ ಸ್ವೀಕಾರ ಮತ್ತು ಸಮಾನತೆಯ ಅನುಷ್ಠಾನದ ಸವಾಲುಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

4.3.4. ಸಾರಾಂಶಿಸೋಣ

4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

4.3.6. ಘಟಕಾಂತ್ಯ ಅಭ್ಯಾಸಗಳು

4.3.7. ಪರಾಮರ್ಶನ ಸೂಚಿ


## 4.3.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದ ಅವಕಾಶಗಳ ಸಮಾನತೆ ಅರ್ಥ ಮತ್ತು ಮಹತ್ವವನ್ನು ವಿವರಿಸುವರು;
- ಶಿಕ್ಷಣದ ಅವಕಾಶಗಳ ಸಾರ್ವತ್ರಿಕ ಸ್ವೀಕಾರದ ಕುರಿತು ವಿಶ್ಲೇಷಿಸುವರು; ಮತ್ತು
- ಶಿಕ್ಷಣದ ಅವಕಾಶಗಳ ಸಮಾನತೆಯ ಅನುಷ್ಠಾನದ ಸವಾಲುಗಳನ್ನು ಆಲೋಚಿಸಿ ಸ್ಪಷ್ಟಪಡಿಸುವರು

## 4.3.2 ಪೀಠಿಕೆ

'ಪ್ರಜಾಪ್ರಭುತ್ವ ಮತ್ತು ಅದರ ಮೌಲ್ಯಗಳು' ಎಂಬ ಘಟಕದಲ್ಲಿ ನಾವು ಈಗಾಗಲೇ ಸಮಾನತೆಯ ಅರ್ಥ ಮತ್ತು ಅದರ ವಿವಿಧ ಪ್ರಕಾರಗಳ ಕುರಿತು ಗಮನಿಸಿದ್ದೇವೆ. ಸಮಾನತೆಯು ಪ್ರಜಾಪ್ರಭುತ್ವದ ಬಹು ಪ್ರಮುಖ ಮೌಲ್ಯ ಎಂಬುದನ್ನೂ ಮನಗಂಡಿದ್ದೇವೆ. ವೈವಿಧ್ಯತೆಯ ಬೀಡಾಗಿರುವ ಭಾರತದಲ್ಲಿ ಸಮಾನತೆಯ ಜೊತೆಗೆ ಶಿಕ್ಷಣದ ಮಹತ್ವವನ್ನೂ ತಿಳಿದಿದ್ದೇವೆ. ಅದರಂತೆ, ಶಿಕ್ಷಣವು ಯಾವುದೇ ಭೇದಭಾವವಿಲ್ಲದೆ ದೇಶದ ಪ್ರತಿಯೊಬ್ಬ ವ್ಯಕ್ತಿಯನ್ನು ತಲುಪಬೇಕಾದರೆ, ಜೊತೆಗೆ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಎಲ್ಲರಿಗೂ ಶಿಕ್ಷಣಕ್ಕೆ ಗರಿಷ್ಠ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ಇದನ್ನು ಶಿಕ್ಷಣದ ಅವಕಾಶಗಳ ಸಮಾನತೆ ಎಂದು ಹೇಳಬಹುದು. ಶಿಕ್ಷಣದ ಈ ಸಮಾನತೆಯ ಪರಿಕಲ್ಪನೆಯ ಕುರಿತು ಈ ಘಟಕದಲ್ಲಿ ಹೆಚ್ಚಿನ ವಿವರಗಳನ್ನು ತಿಳಿಯೋಣ.

## 4.3.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.3.3.1. ಶಿಕ್ಷಣದ ಅವಕಾಶಗಳ ಸಮಾನತೆ ಅರ್ಥ ಮತ್ತು ಮಹತ್ವ

ಶೈಕ್ಷಣಿಕ ಅವಕಾಶದ ಸಮಾನತೆ ಎಂಬ ಪದಪುಂಜವು 'ಸಮಾನತೆ', 'ಅವಕಾಶದ ಸಮಾನತೆ' ಮತ್ತು 'ಶೈಕ್ಷಣಿಕ ಅವಕಾಶದ ಸಮಾನತೆ' ಎಂಬ ಮೂರು ಪರಿಕಲ್ಪನೆಗಳನ್ನು ಒಳಗೊಂಡಿದೆ. ಪ್ರತಿಯೊಬ್ಬ ವ್ಯಕ್ತಿಯೂ ಗರಿಷ್ಠ ಮಟ್ಟದಲ್ಲಿ ಬೆಳೆಯಲು ಅಗತ್ಯವಾದ ಅವಕಾಶಗಳು ಲಭ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದೇ ಸಮಾನತೆ. ಈ ಅವಕಾಶಗಳು ವ್ಯಕ್ತಿಯ ಹುಟ್ಟು, ಮೂಲ, ನಂಬಿಕೆಗಳು, ಅಸಾಮರ್ಥ್ಯ ಇತ್ಯಾದಿ ಯಾವುದೇ ಅಂಶಗಳನ್ನು ಆಧರಿಸದೇ ಎಲ್ಲರಿಗೂ ಒದಗಬೇಕು. ಇದೇ ಅವಕಾಶದ ಸಮಾನತೆ. ಶಿಕ್ಷಣಕ್ಕೆ ಈ ರೀತಿಯಲ್ಲಿ ಸಿಗುವ ಅವಕಾಶಗಳ ಸಮಾನತೆಯೇ ಶಿಕ್ಷಣದ ಅವಕಾಶಗಳ ಸಮಾನತೆ.

ಮೇಲುನೋಟಕ್ಕೆ ಸಮಾನತೆ ಎಂಬುದು ಎಲ್ಲರಿಗೂ ಒಂದೇ ರೀತಿಯ ನಿಯಮಗಳ ಅಥವಾ ಅವಕಾಶಗಳ ಅನ್ವಯ ಎಂಬಂತೆ ಕಾಣಬಹುದು. ಆದರೆ ಇದರ ನಿಜವಾದ ಅರ್ಥ ಇದಲ್ಲ. ಪ್ರತಿಯೊಬ್ಬರೂ ಒಂದೇ ರೀತಿಯ ಬಟ್ಟೆಯನ್ನು ಧರಿಸುವುದು, ಒಂದೇ ರೀತಿಯ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಇವುಗಳನ್ನು ಸಮಾನತೆ ಎಂದು ಹೇಳಲಾಗದು. ಸಮಾನತೆಯ ವ್ಯಾಪ್ತಿಯನ್ನು ಸಂಕುಚಿತಾರ್ಥದಲ್ಲಿ ಬಳಸಲಾಗದು. ಅದು ಹೆಚ್ಚು ವ್ಯಾಪಕವಾದುದು. ಉದಾಹರಣೆಗೆ, ಕಾನೂನು ಸವಲತ್ತುಗಳ ಸಮಾನತೆ, ಮತದಾನ ಹಕ್ಕುಗಳ ಸಮಾನತೆ, ಸಮಾಜದಲ್ಲಿ ಬದುಕುವ ರೀತಿನೀತಿಗಳಲ್ಲಿ ಸಮಾನತೆ ಇತ್ಯಾದಿ ಅಂಶಗಳು ಸಮಾನತೆಯ ವ್ಯಾಪ್ತಿಯೊಳಗೆ ಬರುತ್ತವೆ. ಸಮಾನತೆಯು ಯಾವಾಗ ಮತ್ತು ಎಲ್ಲಿ ಪ್ರಮುಖವಾಗುತ್ತದೆ ಎಂಬುದನ್ನು ಅವಕಾಶಗಳ ಸಮಾನತೆ ವಿವರಿಸುತ್ತದೆ.

ತತ್ವಜ್ಞಾನಿ ಪೀಟರ್ ವೆಸ್ಟರ್ ಎಂಬಾತ 'ಅವಕಾಶಗಳ ಸಮಾನತೆ'ಯನ್ನು ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ ಅವಕಾಶಗಳ ಸಮಾನತೆಯು ವ್ಯಕ್ತಿ, ಅಡೆತಡೆಗಳು ಮತ್ತು ಉದ್ದೇಶಿತ ಗುರಿ ಈ ತ್ರಿಕೋನ ಸಂಬಂಧವನ್ನು ಹೊಂದಿದೆ. ಒಬ್ಬ ವ್ಯಕ್ತಿಗೆ ಗುರಿಯನ್ನು ಸಾಧಿಸುವ ಸಾಧ್ಯತೆಗಳಿದ್ದರೆ ಮಾತ್ರ ಅವನಿಗೆ ಅವಕಾಶಗಳಿರುತ್ತವೆ. ಗುರಿಸಾಧನೆ ಅಸಾಧ್ಯವಾಗುವ ರೀತಿಯಲ್ಲಿ ಬೆಟ್ಟದಷ್ಟು ಅಡ್ಡಿಗಳಿದ್ದರೆ, ಆಗ ಅವಕಾಶಗಳಿರುವುದಿಲ್ಲ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಭಾರತೀಯ ಪ್ರಜೆಯಾಗಿಲ್ಲದಿದ್ದರೆ ಅವನು ಭಾರತದ ರಾಷ್ಟ್ರಪತಿಯಾಗಲು ಸಾಧ್ಯವಾಗದು. ಹಾಗಾಗಿ ಹಲವಾರು ಜನರಿಗೆ ಭಾರತೀಯ ರಾಷ್ಟ್ರಪತಿಯಾಗುವ ಅವಕಾಶವಿರುವುದಿಲ್ಲ.

ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯದ ಅಭಿವೃದ್ಧಿಗೆ ಸಮಾನ ಅವಕಾಶ ನೀಡುವುದು ಅವಕಾಶದ ಸಮಾನತೆ. ಈ ತತ್ವವನ್ನು ಪ್ರಜಾಪ್ರಭುತ್ವ ರಾಷ್ಟ್ರಗಳು ಒಪ್ಪಿಕೊಂಡಿವೆ. ಡಾ. ರಾಧಾಕೃಷ್ಣನ್ ಅವರ ಪ್ರಕಾರ, ಪ್ರಜಾಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಯ ಅಸಮಾನ ಪ್ರತಿಭೆಗಳ ಅಭಿವೃದ್ಧಿಗೆ ಸಮಾನ ಅವಕಾಶಗಳನ್ನು ಹೊಂದಿರಬೇಕು ಹಾಗೂ ಹಿಂದುಳಿದ ವರ್ಗದವರು ತಮ್ಮ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ಶಿಕ್ಷಣವನ್ನು ಆಧಾರವಾಗಿಸಿಕೊಳ್ಳಬೇಕು.

ಅವಕಾಶಗಳ ಸಮಾನತೆಯು ವಿವಿಧ ಹಿನ್ನೆಲೆಯವರು ಅಥವಾ ವಿವಿಧ ಸಾಮಾಜಿಕ ಗುಂಪುಗಳು ನಿರ್ದಿಷ್ಟ ಫಲಗಳನ್ನು ತಲುಪಲು–ಶೈಕ್ಷಣಿಕ ಅಥವಾ ಉದ್ಯೋಗಾತ್ಮಕ ಗುರಿಗಳು– ದಾರಿಯಾದ ಪ್ರಕ್ರಿಯೆಗಳ ನ್ಯಾಯಪರತೆಗೆ ಸಂಬಂಧಿಸಿದುದು. ಸ್ವಾತಂತ್ರ್ಯ ಮತ್ತು ಸಮಾನತೆಯ ಕಾಳಜಿಗಳನ್ನು ಸಂಯೋಜಿಸುವ ಸಾಮಾಜಿಕ ಆದರ್ಶವಿದು. ನಾವು ಹೇಗೆ ಬದುಕಬೇಕು ಎಂಬ ಆದರ್ಶವನ್ನು ಇದು ಒದಗಿಸುತ್ತದೆ. ಅವಕಾಶಗಳ ಸಮಾನತೆಯು ಸರಳವಾಗಿ ನಮ್ಮ ಕೆಲವು ಹಕ್ಕುಗಳನ್ನು ಮತ್ತು ಕಾನೂನಿನೆದುರು ನಾವೆಲ್ಲರೂ ಹೇಗೆ ಸಮಾನರು ಎಂಬುದನ್ನು ವರ್ಣಿಸುತ್ತದೆ. ಈ ರೀತಿಯ ಸಮಾನತೆಯು ಸ್ವಾತಂತ್ರ್ಯದ ಜೊತೆಗೆ ಹೊಂದಾಣಿಕೆ ಇರುವಂತಹುದುಲ್ಲ, ಆದರೆ ಅದರ ಒಂದು ಅವಿಭಾಜ್ಯ ಅಂಶ. ತಜ್ಞರ ಪ್ರಕಾರ, ಒಂದು ಉದ್ಯೋಗಕ್ಕೆ ಅಗತ್ಯವಾದ ಅರ್ಹತೆ ಇರುವ ವ್ಯಕ್ತಿಗೆ ಅವನ ಬಣ್ಣ, ಜನಾಂಗ, ಧರ್ಮ ಮುಂತಾದ ಕಾರಣಗಳಿಂದಾಗಿ ಆ ಉದ್ಯೋಗವನ್ನು ನಿರಾಕರಿಸಿದರೆ, ಅವನಿಗೆ ಸಮಾನ ಅವಕಾಶವನ್ನು ನಿರಾಕರಿಸಿದಂತಾಗುತ್ತದೆ.

ಒಂದು ಗುಂಪಿಗೆ ನೀಡಿರುವ ಅವಕಾಶಗಳು ಸಮಾನವಾಗಿವೆ ಎಂದಾದರೆ, ಆ ಗುಂಪಿನ ಪ್ರತಿಯೊಬ್ಬ ವ್ಯಕ್ತಿಯೂ ಆ ನಿರ್ದಿಷ್ಟ ಅವಕಾಶವನ್ನು ಪಡೆಯುವಲ್ಲಿ ಸಮನಾದ ಸಮರ್ಪಕ ಅಡ್ಡಿಗಳನ್ನು ಎದುರಿಸುವಂತಿರಬೇಕು. ಉದಾಹರಣೆಗೆ, ಭಾರತದಲ್ಲಿ ರಾಜಕೀಯ ನಾಯಕನಾಗಲು, ಸಮರ್ಪಕವಲ್ಲದ ವಂಶ, ಲಿಂಗ, ಧರ್ಮ ಇತ್ಯಾದಿ ಅಡ್ಡಿಗಳಿಲ್ಲದಾಗ, ಸಮರ್ಪಕವಾದ ಒಂದೇ ಒಂದು ಅಡ್ಡಿ ಎಂದರೆ ಆತ ಪ್ರಜಾಪ್ರಭುತ್ವದ ರೀತಿಯಲ್ಲಿ ಚುನಾಯಿತನಾಗಬೇಕು.

ವ್ಯಕ್ತಿಗಳು ಜ್ಞಾನ ಮತ್ತು ಕೆಲವು ಕೌಶಲ್ಯಗಳನ್ನು ಪಡೆಯಲು ಮತ್ತು ಹಲವು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಗುರಿ ಹೊಂದಿದ ಅವಕಾಶಗಳೇ ಶೈಕ್ಷಣಿಕ ಅವಕಾಶಗಳು. ಇವುಗಳಿಗೆ ಮಾನವೀಯವಾದ ಕೆಲವು ನೈಜ ಮೌಲ್ಯಗಳ ಅಥವಾ ಲೌಕಿಕವಾದ ಸ್ವೋಪಯೋಗಿಯಾದ ಮೌಲ್ಯಗಳ ಬೆಲೆ ಕಟ್ಟಬಹುದು. ಶೈಕ್ಷಣಿಕ ಅವಕಾಶಗಳ ಮಹತ್ವದ ಕುರಿತ ನಮ್ಮ ಕಾರಣಗಳೇನೇ ಇರಲಿ, ಶೈಕ್ಷಣಿಕ ಗುರಿಗಳ ಸಾಧನೆಗೆ ಯಾವುದೇ ಅಡಚಣೆಗಳಾಗಬಾರದೆಂಬುದಷ್ಟೇ ಮುಖ್ಯವಾದ ಅಂಶ. ಪ್ರಜಾಪ್ರಭುತ್ವ ಅಥವಾ ಸಮಾಜವಾದಿ ರಾಷ್ಟ್ರದಲ್ಲಿ ಶಿಕ್ಷಣದ ಮೂಲಭೂತ ಲಕ್ಷಣವೆಂದರೆ ಅದು ಶಿಕ್ಷಣದ ಸಮಾನ ಅವಕಾಶಗಳಿಗೆ ನೀಡಿರುವ ಮಹತ್ವ. ಭಾರತೀಯ ಶಿಕ್ಷಣ ಆಯೋಗ(1964–66)ವು ಶೈಕ್ಷಣಿಕ ಅವಕಾಶಗಳನ್ನು ಸಮಾನಗೊಳಿಸುವ ತತ್ವವನ್ನು 'ಶಿಕ್ಷಣದಲ್ಲಿನ ಕ್ರಾಂತಿ'ಯ ಒಂದು ಪ್ರಮುಖ ಅಂಶವೆಂದು ಗುರುತಿಸಿದೆ. 'ಸಮಾಜದ ಎಲ್ಲ ವರ್ಗದವರಿಗೆ ಪ್ರಗತಿಪರ ಸಮಾನತೆಯನ್ನು ಖಾತರಿಪಡಿಸುವುದು ಸಮತಾವಾದಿ ಮಾನವ ಸಮಾಜವನ್ನು ನಿರ್ಮಿಸುವ ಏಕೈಕ ಮಾರ್ಗ' ಎಂದೂ ಅದು ಹೇಳಿದೆ.

## ಶಿಕ್ಷಣದ ಅವಕಾಶಗಳ ಸಮಾನತೆಯ ಮಹತ್ವ

ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಕಲ್ಪಿಸುವುದು ಮೂಲಭೂತವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿನ ಸಮಾನತೆಯ ಕಲ್ಪನೆಗಳೊಂದಿಗೆ ಸಂಬಂಧ ಹೊಂದಿದೆ. ಅವಕಾಶಗಳ ಸಮಾನತೆಯನ್ನು ನೀಡುವ ಉದ್ದೇಶವನ್ನು ಹೊಂದಿರುವ ಸಮಾಜ ಸಹಜವಾಗಿಯೇ ಸಮಾನ ಶಿಕ್ಷಣದ ಅವಕಾಶವನ್ನೂ ಕಲ್ಪಿಸಬೇಕು. ಭಾರತದಲ್ಲಿ ಶೈಕ್ಷಣಿಕ ಅವಕಾಶಗಳನ್ನು ಉತ್ತೇಜಿಸುವ ಅಗತ್ಯವನ್ನು ಕುರಿತಂತೆ ವಿಶ್ಲೇಷಿಸುತ್ತಾ ಅದಕ್ಕೆ ಕಾರಣವಾಗುವ ಐದು ಅಂಶಗಳನ್ನು ತಜ್ಞರು ಗುರುತಿಸಿದ್ದಾರೆ:

- ಸಮತಾವಾದಿ ಸಮಾಜದ ಸ್ಥಾಪನೆಗೆ ಇದು ಅಗತ್ಯ. ಸಮತಾವಾದವು ಸಮಾಜದ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳು, ಪ್ರಯೋಜನಗಳು ಮತ್ತು ಅವಕಾಶಗಳು ಅಥವಾ ಪರಿಗಣನೆಗೆ ಸಂಬಂಧಿಸಿದ ಒಂದು ತತ್ವ ಅಥವಾ ಸಿದ್ಧಾಂತ. ಇದು ಪ್ರತಿಯೊಬ್ಬರನ್ನೂ ಇತರರಿಗೆ ಸಮಾನವಾದ ರೀತಿಯಲ್ಲಿ ಪರಿಗಣಿಸುತ್ತದೆ. ಸಮಾನ ಪರಿಗಣನೆ ಎಂಬುದು ನಿಜವಾಗಿ ಎಲ್ಲರಿಗೂ ಒಂದೇ ರೀತಿಯ ಪರಿಗಣನೆ ಎಂದರ್ಥವಲ್ಲ.
- ಪ್ರಜಾಪ್ರಭುತ್ವ ದೇಶದಲ್ಲಿ ಇದು ಅತ್ಯಗತ್ಯ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಶಿಕ್ಷಣದ ಮೂಲಕವೇ ಪ್ರಜಾಪ್ರಭುತ್ವದ ಯಶಸ್ಸು ಖಚಿತವಾಗಿದೆ.
- ಶೈಕ್ಷಣಿಕ ಅವಕಾಶದ ಸಮಾನತೆಯು ರಾಷ್ಟ್ರದ ಪ್ರಗತಿಯನ್ನು ಖಚಿತಪಡಿಸುವುದು. ಶಿಕ್ಷಣ ಪಡೆಯಲು ಜನರಿಗೆ ಅವಕಾಶ ನೀಡಿದಾಗ, ಅವರ ಸಹಜ ಪ್ರತಿಭೆಗಳನ್ನು ಬೆಳೆಸಿಕೊಳ್ಳುವ ಸಾಧ್ಯತೆಗಳುಂಟಾಗಿ ಆ ಮೂಲಕ ಸಮಾಜ ಶ್ರೀಮಂತವಾಗುವುದು.
- ಶೈಕ್ಷಣಿಕ ಅವಕಾಶದ ಸಮಾನತೆಯು ಪ್ರಜೆಗಳ ಪ್ರತಿಭೆಯನ್ನು ಗುರುತಿಸಲು ಸಹಕಾರಿಯಾಗುವುದು.
- ಸಮಾಜದ ಮಾನವಶಕ್ತಿ ಅಗತ್ಯಗಳು ಮತ್ತು ಲಭ್ಯವಿರುವ ಕುಶಲಿ ಸಿಬ್ಬಂದಿಗಳ ನಡುವೆ ಸಂಬಂಧ ಕಲ್ಪಿಸಲು ಸಹಕಾರಿಯಾಗುವುದು.
- ಎಲ್ಲಕ್ಕಿಂತ ಮಿಗಿಲಾಗಿ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸಲು ಶೈಕ್ಷಣಿಕ ಅವಕಾಶದ ಸಮಾನತೆಯು ಅಗತ್ಯವಾಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಶೈಕ್ಷಣಿಕ ಅವಕಾಶಗಳ ಸಮಾನತೆಯ ಪರಿಕಲ್ಪನೆಗೆ ಸಂಬಂಧಿಸಿದ ಕೆಳಗಿನ ಹೇಳಿಕೆಗಳಲ್ಲಿ ಸರಿಯಾಗಿರುವುದನ್ನು '✓' ಚಿಹ್ನೆಯಿಂದ ಗುರುತಿಸಿ.

1. ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯದ ಅಭಿವೃದ್ಧಿಗೆ ಸಮಾನ ಅವಕಾಶ ನೀಡುವುದು ಅವಕಾಶದ ಸಮಾನತೆ.
2. ಪ್ರಜಾಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಯ ಅಸಮಾನ ಪ್ರತಿಭೆಗಳ ಅಭಿವೃದ್ಧಿಗೆ ಸಮಾನ ಅವಕಾಶಗಳನ್ನು ಹೊಂದಿರಬೇಕು
3. ನ್ಯಾಯಪರತೆ ಇದ್ದರೆ ಸಮಾನ ಅವಕಾಶಗಳು ಒಬ್ಬರಿಂದೊಬ್ಬರಿಗೆ ಭಿನ್ನವಾಗಿರಬಹುದು.
4. ಅವಕಾಶಗಳ ಸಮಾನತೆಯು ನಮ್ಮ ಹಕ್ಕುಗಳನ್ನು ಮತ್ತು ಕಾನೂನಿನೆದುರು ನಾವೆಲ್ಲರೂ ಹೇಗೆ ಸಮಾನರು ಎಂಬುದನ್ನು ವರ್ಣಿಸುತ್ತದೆ.
5. ವ್ಯಕ್ತಿಗಳು ಉತ್ಪಾದಕತ್ವದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಗುರಿ ಹೊಂದಿದ ಅವಕಾಶಗಳೇ ಶೈಕ್ಷಣಿಕ ಅವಕಾಶಗಳು.
6. ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಕಲ್ಪಿಸುವುದು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿನ ಸಮಾನತೆಯ ಕಲ್ಪನೆಗಳು ಇವುಗಳ ನಡುವೆ ಸಂಬಂಧವಿಲ್ಲ.

## 4.3.3.2. ಶಿಕ್ಷಣದ ಅವಕಾಶಗಳ ಸಾರ್ವತ್ರಿಕ ಸ್ವೀಕಾರ ಮತ್ತು ಸಮಾನತೆಯ ಅನುಷ್ಠಾನದ ಸವಾಲುಗಳು

ಶಿಕ್ಷಣವು ಒಂದು ಮಾನವ ಹಕ್ಕು. ಈ ಅಂಶವನ್ನು ಅರಿಯುವುದಕ್ಕೂ ಶಿಕ್ಷಣದ ಅವಕಾಶಗಳು ಅಗತ್ಯ. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ 26ನೆಯ ಪರಿಚ್ಛೇದದಲ್ಲಿ ಘೋಷಿಸಿರುವಂತೆ ಶಿಕ್ಷಣವು ಪ್ರತಿ ಮಗುವಿನ ಅಳಿಸಲಾಗದ ಹಕ್ಕು. ಶಿಕ್ಷಣದಲ್ಲಿ ತಾರತಮ್ಯದ ವಿರುದ್ಧ ಯುನೆಸ್ಕೊದ ಸಮಾವೇಶ (1960) ಶಿಕ್ಷಣದ ಹಕ್ಕನ್ನು ಸಮಗ್ರವಾಗಿ ಒದಗಿಸಿದ ಮೊದಲ ಸಾಧನವಾಗಿದೆ. ಇದು ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶ ಮತ್ತು ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಖಚಿತಪಡಿಸುವುದರ ಮೂಲಭೂತ ತತ್ವಗಳನ್ನು ಮುಂದಿಟ್ಟಿದೆ. ಜನಾಂಗ, ಲಿಂಗ, ಅಥವಾ ಯಾವುದೇ ವ್ಯತ್ಯಾಸಗಳು ಅಥವಾ ಆರ್ಥಿಕ, ಸಾಮಾಜಿಕ ಹಿನ್ನೆಲೆಯನ್ನು ಪರಿಗಣಿಸದೆ ಶೈಕ್ಷಣಿಕ ಅವಕಾಶಗಳ ಸಮಾನತೆಯ ಆದರ್ಶವನ್ನು ಮುನ್ನಡೆಸುವ ರಾಷ್ಟ್ರಗಳ ನಡುವೆ ಸಹಯೋಗವನ್ನು ಸ್ಥಾಪಿಸುವ ಯುನೆಸ್ಕೊದ ಧ್ಯೇಯವನ್ನು ಈ ಸಮಾವೇಶ ಬಿಂಬಿಸುತ್ತದೆ.

ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಕುರಿತಾದ ಅಂತರರಾಷ್ಟ್ರೀಯ ಒಪ್ಪಂದದ 13ನೆಯ ಪರಿಚ್ಛೇದದಲ್ಲಿ ಶಿಕ್ಷಣದ ಹಕ್ಕನ್ನು ಸಮಗ್ರವಾಗಿ ಗಮನಿಸಿಕೊಳ್ಳಲಾಗಿದೆ. ಇದಕ್ಕನುಗುಣವಾಗಿ, ಸಮಾನತೆಯ ತತ್ವಕ್ಕೆ ಸಂಬಂಧಿಸಿದ ಕಟ್ಟುಪಾಡುಗಳೊಂದಿಗೆ ಶಿಕ್ಷಣದ ನೇರ ಜವಾಬ್ದಾರಿ ರಾಜ್ಯಗಳದ್ದಾಗಿದೆ. ಪರಿಚ್ಛೇದ 13(2)(ಎ), ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಮತ್ತು ಕಾರ್ಯಕ್ರಮಗಳಿಗೆ ತಾರತಮ್ಯವಿಲ್ಲದ ಪ್ರವೇಶದ ಹಕ್ಕನ್ನು ಮತ್ತು ಪ್ರಾಥಮಿಕ ಶಿಕ್ಷಣದ ಹಕ್ಕನ್ನು ಖಚಿತಪಡಿಸುತ್ತದೆ.

ಸಮಾನ ಅವಕಾಶದ ಆಧಾರದ ಮೇಲೆ ಪ್ರತಿ ಮಗುವಿನ ಶಿಕ್ಷಣದ ಹಕ್ಕನ್ನು ಮಕ್ಕಳ ಹಕ್ಕುಗಳ ಸಮಾವೇಶದ 28ನೇ ಪರಿಚ್ಛೇದದಲ್ಲಿ ಸ್ಥಾಪಿಸಲಾಗಿದೆ. ಮಕ್ಕಳ ಹಕ್ಕುಗಳ ಸಮಿತಿಯು ಸಮಾಜದ ಅಂಚಿನಲ್ಲಿರುವವರನ್ನು ಮತ್ತು ಹಿಂದುಳಿದ ಗುಂಪುಗಳನ್ನು ಗುರುತಿಸುವ ಮತ್ತು ಅವುಗಳಿಗೆ ಆದ್ಯತೆ ನೀಡುವ ಅಗತ್ಯವನ್ನು ಗುರುತಿಸಿದೆ. ಆದರೆ ರಾಷ್ಟ್ರಪಕ್ಷಗಳು ಒಪ್ಪಿಕೊಂಡಿರುವ ಕಟ್ಟುಪಾಡುಗಳನ್ನು ಸಡಿಲಗೊಳಿಸದಂತೆ ಜಾಗ್ರತೆ ವಹಿಸಿವೆ.

ಮಹಿಳೆಯರ ಕುರಿತಾದ ಎಲ್ಲ ರೀತಿಯ ತಾರತಮ್ಯಗಳನ್ನು ನಿರ್ಮೂಲನೆ ಮಾಡುವ ಸಮಾವೇಶದ

10ನೆಯ ವಿಧಿಯು (Convention on the Elimination of All Forms of Discrimination against Women (CEDAW, 2004) ಶಿಕ್ಷಣದಲ್ಲಿ ಅವಕಾಶದ ಸಮಾನತೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ಮತ್ತು ಪುರುಷರ ಸಮಾನ ಹಕ್ಕುಗಳಿಗೆ ಸಂಬಂಧಿಸಿದ ವಿವರವಾದ ನಿಬಂಧನೆಗಳನ್ನು ಹೊಂದಿದೆ. ಮಹಿಳೆಯರಿಗೆ ಫಲಿತಾಂಶಗಳ ಸಮಾನತೆಯನ್ನು ಸಾಧಿಸಲು ಅನುವು ಮಾಡಿಕೊಡುವ ವಾತಾವರಣವನ್ನೂ ನೀಡಬೇಕು ಎಂದು ಒತ್ತಾಯಿಸಿದೆ. ಜನಾಂಗೀಯ ತಾರತಮ್ಯವನ್ನು ತೊಡೆದುಹಾಕುವ ಸಮಿತಿಯು ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಕ್ರಮಗಳನ್ನು ಸೂಚಿಸಿದೆ. ಸಮಾವೇಶದ 5ನೆಯ ಪರಿಚ್ಛೇದವು ಎಲ್ಲರಿಗೂ ಯಾವುದೇ ತಾರತಮ್ಯವಿಲ್ಲದೆ ಶಿಕ್ಷಣ ಮತ್ತು ತರಬೇತಿಯ ಹಕ್ಕನ್ನು ರಕ್ಷಿಸುತ್ತದೆ. ಸಮಿತಿಯು ವಿಶೇಷವಾಗಿ ಶಿಕ್ಷಣದ ಅವಕಾಶ, ಗುಣಮಟ್ಟದ ಶಿಕ್ಷಣ, ಶಾಲೆ ಬಿಡುವಿಕೆಯ ಪ್ರಮಾಣ ಮತ್ತು ತಾರತಮ್ಯದ ಕಷ್ಟಗಳನ್ನೆದುರಿಸುತ್ತಿರುವ ಸಮುದಾಯಗಳನ್ನು ಶಿಕ್ಷಣದಲ್ಲಿ ಒಳಪಡಿಸಲು ವಿಶೇಷ ಕ್ರಮಗಳನ್ನು ಸೂಚಿಸಿದೆ. ಅಸಾಮರ್ಥ್ಯವುಳ್ಳವರ ಹಕ್ಕುಗಳನ್ನು ಕುರಿತ ವಿಶ್ವಸಂಸ್ಥೆಯ ಸಮಾವೇಶವು (The United Nations Convention on the Rights of Persons with Disabilities) ವಿಧಿ 3 ರ ಅಡಿಯಲ್ಲಿ ಅವಕಾಶದ ಸಮಾನತೆಯನ್ನು ಒಪ್ಪಂದದ ಸಾಮಾನ್ಯ ಅವಕಾಶವಾಗಿ ನಿರ್ದಿಷ್ಟವಾಗಿ ಗುರುತಿಸಿದೆ. ಸಮಾವೇಶದ 24ನೇ ವಿಧಿಯು ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಶಿಕ್ಷಣದ ಹಕ್ಕು ಕುರಿತಂತೆ ತಾರತಮ್ಯವಿಲ್ಲದ ಮತ್ತು ಸಮಾನ ಅವಕಾಶದ ಆಧಾರದ ಮೇಲೆ ವಿವರವಾದ ನಿಬಂಧನೆಗಳನ್ನು ಹೊಂದಿದೆ.

ಹೀಗಾಗಿ, ಶಿಕ್ಷಣದಲ್ಲಿ ಸಮಾನ ಅವಕಾಶಗಳ ಸಮಾನತೆಯು ಒಂದು ಮೂಲಭೂತ ತತ್ವವೇ ಆಗಿದೆ. ಇದು ಬಹುತೇಕ ಎಲ್ಲ ಅಂತರರಾಷ್ಟ್ರೀಯ ಮಾನವಹಕ್ಕುಗಳ ದಾಖಲೆಗಳಲ್ಲಿ ಕಾಣಬರುವಂತಹುದು. ಶೈಕ್ಷಣಿಕ ಅವಕಾಶಗಳ ಸಮಾನತೆಯ ಸಾಧನೆಗಾಗಿ ಈ ನಿಬಂಧನೆಗಳನ್ನು ಪ್ರಪಂಚದಾದ್ಯಂತ ಪ್ರತಿಯೊಂದು ದೇಶವೂ ಗಂಭೀರವಾಗಿ ಗಮನಿಸಿ, ಅನುಷ್ಠಾನಕ್ಕೆ ತರಬೇಕಾದುದು ಇಂದಿನ ಅನಿವಾರ್ಯ ಆಗತ್ಯವಾಗಿದೆ.

**ಶೈಕ್ಷಣಿಕ ಅವಕಾಶದ ಸಮಾನತೆಯನ್ನು ಅನುಷ್ಠಾನಗೊಳಿಸುವಲ್ಲಿನ ಸವಾಲುಗಳು:**

- ಶಿಕ್ಷಣದಲ್ಲಿ ಅವಕಾಶಗಳ ಸಮಾನತೆಯನ್ನು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಅಳವಡಿಸುವುದು ಒಂದು ನಿರಂತರ ಸವಾಲಾಗಿದೆ. ಇದಕ್ಕಾಗಿ ತಾರತಮ್ಯಗಳ ಅಭ್ಯಾಸಗಳನ್ನು ಹೋಗಲಾಡಿಸಬೇಕಾಗಿದೆ. ಮೂಲಭೂತ ಮಾನವ ಹಕ್ಕಾಗಿರುವ ಶಿಕ್ಷಣದಿಂದ ವಂಚಿತರಾಗಿರುವ ಎಲ್ಲರಿಗೂ ಬೆಂಬಲ ನೀಡುವ ಉದ್ದೇಶದಿಂದ ಈ ಕುರಿತು ವ್ಯಾಪಕವಾದ ಮಾಹಿತಿ ಪ್ರಸಾರ ಮತ್ತು ಪ್ರಚಾರಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ.
- ಭಾರತ ಹೆಚ್ಚಿನ ಜನಸಂಖ್ಯೆಯನ್ನುಳ್ಳ ದೇಶ. ಇಲ್ಲಿ ಎಲ್ಲರಿಗೂ ಶಿಕ್ಷಣಕ್ಕೆ ಅವಕಾಶಕೊಡಲು ಅತಿಹೆಚ್ಚಿನ ಮಟ್ಟದಲ್ಲಿ ಹಣದ ಹೂಡಿಕೆ ಮಾಡಬೇಕಾಗುತ್ತದೆ. ಎಲ್ಲರಿಗೂ ಉಚಿತ ಶಿಕ್ಷಣ ನೀಡುವ ಗುರಿಸಾಧನೆಗೆ ಅಗತ್ಯವಾದ ಹಣದ ಹೂಡಿಕೆ ಸಾಮಾನ್ಯವಾದುದೇನೂ ಅಲ್ಲ. ಇದನ್ನು ಭರಿಸುವುದು ಸವಾಲಿನ ವಿಷಯ.
- ಬಹುಭಾಷಾ ದೇಶವಿದು. ಮಾತೃಭಾಷೆಯಲ್ಲಿ ಶಿಕ್ಷಣವನ್ನು ಒದಗಿಸಿದರೆ ಮಾತ್ರ ಶಿಕ್ಷಣದ ಅವಕಾಶಗಳ ಸಾರ್ವತ್ರೀಕರಣ ಸಾಧ್ಯ. ಇದು ಅತಿ ಗಂಭೀರವಾದ ಸಮಸ್ಯೆ. ಇದನ್ನು ಎದುರಿಸುವುದು ಇನ್ನೂ ಸಂಪೂರ್ಣವಾಗಿ ಯಶಸ್ವಿಯಾಗದ ಸವಾಲು.
- ಭಾರತ ಸ್ವತಂತ್ರವಾದ ಏಳು ದಶಕಗಳ ನಂತರವೂ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನ ಮಾಡಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣಗಳನ್ನು ಈ ಹಿಂದೆ ಚರ್ಚಿಸಿದ್ದೇವೆ. ಇವರನ್ನು ಶಾಲೆಗೆ ತರುವುದು ಒಂದು ಸಮಸ್ಯೆಯಾಗಿದೆ.

ಈ ಸವಾಲುಗಳಿಗೆ ಅನೇಕ ಕಾರಣಗಳಿವೆ. ಮನೆಯ ಆರ್ಥಿಕ ಪರಿಸ್ಥಿತಿ, ಲಿಂಗ ಅಸಮಾನತೆ, ಪ್ರಾದೇಶಿಕ ಅಸಮತೋಲನ, ಶಾರೀರಿಕ ಶಕ್ತಿ ಭಿನ್ನತೆಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ಹಿಂದುಳಿದ ಮತ್ತು ಮುಂದುವರಿದ ವರ್ಗಗಳ ನಡುವಿನ ಅಸಮಾನತೆ ಮತ್ತು ಅವಕಾಶಗಳ ಕೊರತೆ ಇತ್ಯಾದಿ.

## ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಸಾಧಿಸಲು ಸರ್ಕಾರ ಕೈಗೊಂಡ ಕ್ರಮಗಳು

ಶೈಕ್ಷಣಿಕ ಅವಕಾಶಗಳ ಸಮಾನತೆಯ ಸ್ಥಾಪನೆ ಭಾರತಕ್ಕೇನೂ ಹೊಸ ವಿಷಯವಲ್ಲ. ನಮ್ಮ ಸಂವಿಧಾನ ರೂಪಿತವಾದ ಕಾಲದಿಂದಲೂ ಇದು ಜೀವಂತವಾಗಿಯೇ ಇದೆ. ಈ ದಿಶೆಯಲ್ಲಿ ಸಂವಿಧಾನದಲ್ಲಿಯೂ ಅನೇಕ ನಿಬಂಧನೆಗಳನ್ನು ಮಾಡಲಾಗಿದೆ. ಇವುಗಳನ್ನು ನೀವು ಈಗಾಗಲೇ ಹಿಂದಿನ ಘಟಕಗಳಲ್ಲಿ ಕಲಿತಿರುವಿರಿ. ಅವುಗಳನ್ನು ನೆನೆಪಿಸಿಕೊಳ್ಳೋಣ.

- ಪರಿಚ್ಛೇದ 26(1) ಶಿಕ್ಷಣ ಮೂಲಭೂತ ಹಕ್ಕು: ಜಾತಿ, ಮತ, ಬಣ್ಣ, ಧರ್ಮ ಮುಂತಾದ ಯಾವುದೇ ಅಂಶಗಳ ಆಧಾರದ ಮೇಲೆ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶವನ್ನು ನಿರಾಕರಿಸುವಂತಿಲ್ಲ.
- ಪರಿಚ್ಛೇದ 46: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸಮಾಜದ ದುರ್ಬಲ ವರ್ಗದವರ ಶಿಕ್ಷಣ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಾಜ್ಯವು ವಿಶೇಷ ಕಾಳಜಿಯಿಂದ ಉತ್ತೇಜಿಸುತ್ತದೆ.
- 6–14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಏರ್ಪಾಡು ಮಾಡಲಾಗಿದೆ.
- 6 ವರ್ಷದವರೆಗಿನ ಮಕ್ಕಳಿಗೆ ಬಾಲ್ಯದ ಆರೈಕೆ ಮತ್ತು ಶಿಕ್ಷಣ ನೀಡಿ ಪ್ರಾಥಮಿಕ ಶಿಕ್ಷಣ ಪಡೆಯಲು ಎಲ್ಲ ರೀತಿಯ ಸಿದ್ಧತೆ ಮಾಡಲಾಗುತ್ತಿದೆ.
- 14 ವರ್ಷ ವಯಸ್ಸಿನವರಿಗೆ ಉದ್ಯೋಗವಾಗಲೀ ಜೀವನ ನಡೆಸುವ ಚೈತನ್ಯವಾಗಲೀ ಇಲ್ಲದಿರುವುದರಿಂದ 18 ವರ್ಷಗಳವರೆಗೆ ಉಚಿತ ಮಾಧ್ಯಮಿಕ ಶಿಕ್ಷಣ ನೀಡಲಾಗುತ್ತದೆ.
- ಮಕ್ಕಳು ಶಾಲೆಗೆ ಹಾಜರಾಗಲು ಅನುಕೂಲವಾಗುವಂತೆ ಅವರ ಮನೆಗಳ ಸನಿಹದಲ್ಲೇ ಶಾಲೆಗಳನ್ನು ಒದಗಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.
- ಏಕರೂಪದ ಪಠ್ಯಪುಸ್ತಕಗಳು, ಮಧ್ಯಾಹ್ನದ ಬಿಸಿಯೂಟ ಮುಂತಾದವುಗಳನ್ನೊಳಗೊಂಡಂತೆ ಶಿಕ್ಷಣವನ್ನು ಉಚಿತವಾಗಿಸುವುದರ ಮೂಲಕ ಮಕ್ಕಳ ಕೈಗೆಟುಕುವಂತೆ ನೋಡಿಕೊಳ್ಳಲಾಗುತ್ತಿದೆ.
- ಬಾಲಕಿಯರ ಶಿಕ್ಷಣದ ಮಹತ್ವವನ್ನು ಪರಿಗಣಿಸಿ, ಅವರ ಶಿಕ್ಷಣಕ್ಕೆ ಅವಕಾಶಗಳನ್ನು ಒದಗಿಸುವ ಭಾರತ ಸರ್ಕಾರವು ಅವರ ಶಿಕ್ಷಣಕ್ಕೆ ಒದಗುವ ಯಾವುದೇ ಅವಕಾಶ ತಪ್ಪಿಹೋಗದಂತೆ ನೋಡಿಕೊಳ್ಳಲು ಅನೇಕ ಕಾರ್ಯಕ್ರಮಗಳನ್ನು ಮತ್ತು ನೀತಿನಿಯಮಗಳನ್ನು ಪ್ರಾರಂಭಿಸಿದೆ.
- ಭಾರತವು 1958ರಲ್ಲಿ ಮಹಿಳಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಸಮಿತಿಯನ್ನು ರಚಿಸಿ ಸ್ತ್ರೀ ಶಿಕ್ಷಣವು ಪುರುಷರ ಶಿಕ್ಷಣಕ್ಕೆ ಸಮಾನವಾಗಿರಬೇಕು ಎಂದು ಶಿಫಾರಸು ಮಾಡಿತ್ತು. 1964ರಲ್ಲಿನ ಶಿಕ್ಷಣ ಆಯೋಗವು ಹೆಣ್ಣುಮಗುವಿನ ಶಿಕ್ಷಣದ ಕುರಿತು ಅತ್ಯಂತ ಕಾಳಜಿ ವಹಿಸಿತ್ತು. ಸಂವಿಧಾನದ ಅನೇಕ ನಿಬಂಧನೆಗಳು ದುರ್ಬಲವರ್ಗದವರ ಅನುಕೂಲಕ್ಕಾಗಿ ರೂಪಿತವಾಗಿವೆ. ಬಾಲಕಿಯರಿಗೆ, ವಿಶೇಷವಾಗಿ ದುರ್ಬಲ ವರ್ಗದವರಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಮರಳಿ ಬಾ ಶಾಲೆಗೆ, ಉಚಿತ ಪಠ್ಯಪುಸ್ತಕ ವ್ಯವಸ್ಥೆ, ಬಾಲಕಿಯರಿಗೆ ವಿಶೇಷ ತರಬೇತಿ, ಶಿಕ್ಷಕರಿಗೆ ಸಂವೇದನಾ ಕಾರ್ಯಕ್ರಮಗಳು, ಬಾಲಕಿಯರಿಗೆ ಸಂಬಂಧಿಸಿದ ನವೀನ ಕಾರ್ಯಕ್ರಮಗಳಿಗೆ ವಿಶೇಷ ಗಮನ ಇವುಗಳನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಶಿಕ್ಷಣದ ಅವಕಾಶಗಳ ಸಮಾನತೆಯ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ನಿಮ್ಮ ಶಾಲೆಯಲ್ಲಿ ಲಭ್ಯವಾಗಬಹುದಾದ ಅವಕಾಶಗಳು, ಲಭ್ಯವಿರುವ ಅವಕಾಶಗಳು, ಅವುಗಳ ಅನುಷ್ಠಾನ ಮತ್ತು ಅನುಷ್ಠಾನದ ಯಶಸ್ಸಿನ ಮಟ್ಟ ಇವುಗಳನ್ನು ಕೆಳಕಂಡ ಸಾಧನದ ಸಹಾಯದಿಂದ ವಿಶ್ಲೇಷಿಸಿ.

| | ಲಭ್ಯವಾಗಬಹುದಾದ ಅವಕಾಶಗಳು | ಲಭ್ಯವಿರುವ ಅವಕಾಶಗಳು | ಅನುಷ್ಠಾನದಲ್ಲಿವೆ/ ಇಲ್ಲ | ಯಶಸ್ಸಿನ ಮಟ್ಟ ಉತ್ತಮ/ಸಾಧಾರಣ/ ಅತೃಪ್ತಿಕರ/ ಕಾರಣಗಳು |
|---|---|---|---|---|
| | | | | |
| | | | | |
| | | | | |
| | | | | |
| | | | | |

## 4.3.4. ಸಾರಾಂಶಿಸೋಣ

- ಪ್ರತಿಯೊಬ್ಬ ವ್ಯಕ್ತಿಯೂ ಗರಿಷ್ಠ ಮಟ್ಟದಲ್ಲಿ ಬೆಳೆಯಲು ಅಗತ್ಯವಾದ ಅವಕಾಶಗಳು ಲಭ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದೇ ಸಮಾನತೆ. ಈ ಅವಕಾಶಗಳು ವ್ಯಕ್ತಿಯ ಹುಟ್ಟು, ಮೂಲ, ನಂಬಿಕೆಗಳು, ಅಸಾಮರ್ಥ್ಯ ಇತ್ಯಾದಿ ಯಾವುದೇ ಅಂಶಗಳನ್ನು ಆಧರಿಸದೇ ಎಲ್ಲರಿಗೂ ಒದಗಬೇಕು. ಇದೇ ಅವಕಾಶದ ಸಮಾನತೆ. ಶಿಕ್ಷಣಕ್ಕೆ ಈ ರೀತಿಯಲ್ಲಿ ಸಿಗುವ ಅವಕಾಶಗಳ ಸಮಾನತೆಯೇ ಶಿಕ್ಷಣದ ಅವಕಾಶಗಳ ಸಮಾನತೆ.
- ಮೇಲುನೋಟಕ್ಕೆ ಸಮಾನತೆ ಎಂಬುದು ಎಲ್ಲರಿಗೂ ಒಂದೇ ರೀತಿಯ ನಿಯಮಗಳ ಅಥವಾ ಅವಕಾಶಗಳ ಅನ್ವಯ ಎಂಬಂತೆ ಕಾಣಬಹುದು. ಆದರೆ ಇದರ ನಿಜವಾದ ಅರ್ಥ ಇದಲ್ಲ.
- ಪ್ರತಿಯೊಬ್ಬ ವ್ಯಕ್ತಿಯ ಸಾಮರ್ಥ್ಯದ ಅಭಿವೃದ್ಧಿಗೆ ಸಮಾನ ಅವಕಾಶ ನೀಡುವುದು ಅವಕಾಶದ ಸಮಾನತೆ. ಈ ತತ್ವವನ್ನು ಪ್ರಜಾಪ್ರಭುತ್ವ ರಾಷ್ಟ್ರಗಳು ಒಪ್ಪಿಕೊಂಡಿವೆ.
- ವ್ಯಕ್ತಿಗಳು ಜ್ಞಾನ ಮತ್ತು ಕೆಲವು ಕೌಶಲ್ಯಗಳನ್ನು ಪಡೆಯಲು ಮತ್ತು ಹಲವು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಗುರಿ ಹೊಂದಿದ ಅವಕಾಶಗಳೇ ಶೈಕ್ಷಣಿಕ ಅವಕಾಶಗಳು.
- ಶಿಕ್ಷಣದ ಅವಕಾಶಗಳ ಸಮಾನತೆ ಅತಿ ಮಹತ್ವದ ಅಂಶ. ಇದಕ್ಕೆ ಅನೇಕ ಕಾರಣಗಳಿವೆ.
- ಶಿಕ್ಷಣದ ಅವಕಾಶಗಳ ಸಮಾನತೆಯನ್ನು ಸಾಧಿಸುವಲ್ಲಿ ಭಾರತ ಅನೇಕ ಸವಾಲುಗಳನ್ನು ಎದುರಿಸುತ್ತಿದೆ.
- ಇದನ್ನು ಫಲಕಾರಿಯಾಗಿ ಸಾಧಿಸಲು ಸರ್ಕಾರವು ಅನೇಕ ಕಾರ್ಯಕ್ರಮಗಳು, ನೀತಿ ನಿಯಮಗಳನ್ನು ರೂಪಿಸಿ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಿದೆ.
- ಆದರೂ ಶಿಕ್ಷಣದ ಅವಕಾಶಗಳ ಸಮಾನತೆಯನ್ನು ಸಾಧಿಸುವ ಗುರಿ ಸಾಧಿತವಾಗುವ ನಿಟ್ಟಿನಲ್ಲೇ ಇದೆ.

## 4.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1 ರಿಂದ 4: ✓

**ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2**

ಶಿಕ್ಷಣದ ಅವಕಾಶಗಳ ಸಮಾನತೆಯನ್ನು ಗರಿಷ್ಠ ಮಟ್ಟದಲ್ಲಿ ಸಾಧಿಸಲು ನಿಮ್ಮ ವಿಶ್ಲೇಷಣೆಗನುಗುಣವಾಗಿ ಒಂದು ಕಾರ್ಯಯೋಜನೆಯನ್ನು ತಯಾರಿಸಿ, ಅದನ್ನು ಉಪಾಧ್ಯಾಯರ ಸಭೆಯಲ್ಲಿ ಮಂಡಿಸಿ, ಅನುಷ್ಠಾನಕ್ಕೆ ತನ್ನಿ.

## 4.3.6. ಘಟಕಾಂತ್ಯ ಅಭ್ಯಾಸಗಳು

1. ಶೈಕ್ಷಣಿಕ ಅವಕಾಶಗಳ ಸಮಾನತೆಯ ಪರಿಕಲ್ಪನೆಯನ್ನು ವಿವರಿಸಿ ಅದರ ಮಹತ್ವವನ್ನು ಚರ್ಚಿಸಿ
2. ಶೈಕ್ಷಣಿಕ ಅವಕಾಶಗಳ ಸಮಾನತೆಯ ಸಾಧನೆಯ ಹಾದಿಯಲ್ಲಿನ ಸವಾಲುಗನ್ನು ವಿವರಿಸಿ
3. ಶೈಕ್ಷಣಿಕ ಅವಕಾಶಗಳ ಸಮಾನತೆಯ ಸಾಧನೆಗೆ ಭಾರತ ಸರ್ಕಾರದ ಪ್ರಯತ್ನಗಳನ್ನು ಗುರಿಸಾಧನೆಯಾಗದೆ ಉಳಿದಿರುವುದಕ್ಕೆ ಕಾರಣಗಳನ್ನೂ ಚರ್ಚಿಸಿ.

## 4.3.7. ಪರಾಮರ್ಶನ ಸೂಚಿ


1. http://www.shareyouressays.com/essays/essay-on-equality-of-educational-opportunities/87638
2. https://www.researchgate.net/publication/286013079_Equality_of_Educational_Opportunity_The_Role_of_Using_Technology_in_Education_Turkan_AKSU_Gokhan_CANTURK
3. https://johnparankimalil.wordpress.com/2015/11/08/equalization-of-educational-opportunities/
4. http://www.khpt.org/wp-content/uploads/2017/04/barriers-and-enablers-to-education.pdf
5. https://home.hiroshima-u.ac.jp/cice/wp-content/uploads/2014/10/16-2-1.pdf
6. http://www.khpt.org/wp-content/uploads/2017/04/barriers-and-enablers-to-education.pdf
7. https://plato.stanford.edu/entries/equal-ed-opportunity/
8. https://www.youthkiawaaz.com/2018/02/education-in-india-some-debates/
9. https://files.eric.ed.gov/fulltext/ED537169.pdf
10. https://www.slideshare.net/siva8492/sociology-equalization-of-educational-oppurtunity


***********

# ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ: ಕಾಳಜಿಗಳು ಮತ್ತು ವಿಚಾರಗಳು

## ಘಟಕ–4 : ಶಿಕ್ಷಣದಲ್ಲಿ ಅಸಮಾನತೆ

**ಘಟಕದ ರಚನೆ**


4.4.1. ಕಲಿಕೆಯ ಉದ್ದೇಶಗಳು

4.4.2. ಪೀಠಿಕೆ

4.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.4.3.1. ಶಿಕ್ಷಣದಲ್ಲಿ ಅಸಮಾನತೆ ಮತ್ತು ಇದಕ್ಕೆ ಕಾರಣಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4.4.3.2. ಶಿಕ್ಷಣದಲ್ಲಿ ಅಸಮಾನತೆಯನ್ನು ನಿವಾರಿಸಲು ಕ್ರಮಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

4.4.4. ಸಾರಾಂಶಿಸೋಣ

4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

4.4.6. ಘಟಕಾಂತ್ಯ ಅಭ್ಯಾಸಗಳು

4.4.7. ಪರಾಮರ್ಶನ ಸೂಚಿ


## 4.4.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದಲ್ಲಿ ಅಸಮಾನತೆ ಎಂದರೇನು ಎಂಬುದನ್ನು ವಿವರಿಸುವರು;
- ಶಿಕ್ಷಣದಲ್ಲಿ ಅಸಮಾನತೆಗೆ ಕಾರಣವಾದ ಅಂಶಗಳನ್ನು ವಿಶ್ಲೇಷಿಸುವರು ಹಾಗೂ ವಿವರಿಸುವರು; ಮತ್ತು
- ಶಿಕ್ಷಣದಲ್ಲಿ ಅಸಮಾನತೆಯನ್ನು ನಿವಾರಿಸಲು ಅನುಸರಿಸಬಹುದಾದ ಕ್ರಮಗಳನ್ನು ಸ್ಪಷ್ಟಪಡಿಸುವರು.

## 4.4.2 ಪೀಠಿಕೆ

'ಶಿಕ್ಷಣದ ಅವಕಾಶಗಳಲ್ಲಿ ಸಮಾನತೆ' ಎಂಬ ವಿಷಯವನ್ನು ಅಭ್ಯಾಸಮಾಡುವಾಗ ಸಮಾನತೆ ಎಂಬ ಪರಿಕಲ್ಪನೆಯ ಅರ್ಥ ಮತ್ತು ಶಿಕ್ಷಣದಲ್ಲಿ ಸಮಾನತೆಯ ಪ್ರಾಮುಖ್ಯತೆ ಏನು ಎಂಬುದನ್ನು ತಿಳಿದಿರುವಿರಿ. ಶಿಕ್ಷಣದಲ್ಲಿ ಸಮಾನತೆಯನ್ನು ಒದಗಿಸುವಲ್ಲಿನ ಸವಾಲುಗಳೇನು ಎಂಬುದೂ ನಿಮಗೆ ತಿಳಿದಿದೆ. ಇಷ್ಟಾದರೂ ಶಿಕ್ಷಣದಲ್ಲಿ ಅಸಮಾನತೆ ಅಸ್ತಿತ್ವದಲ್ಲಿದೆ ಎಂಬುದೂ ಸತ್ಯಸಂಗತಿ. ವಿವಿಧ ರೀತಿಯ ಸಂಪನ್ಮೂಲಗಳ ಅಸಮಾನ ವಿತರಣೆಯೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತದೆ. ಇದೇನೂ ಹೊಸದಾದ ಸನ್ನಿವೇಶವೇನೂ ಅಲ್ಲ. ಶ್ರೀಮಂತ–ಬಡವ, ಶಿಕ್ಷಿತ–ಅಶಿಕ್ಷಿತ, ಸೌಲಭ್ಯಪಡೆದವ–ಸೌಲಭ್ಯವಂಚಿತ ಇತ್ಯಾದಿ ಅಸಮಾನತೆಗಳು ಬಹಳ ಹಿಂದಿನ ಕಾಲದಿಂದಲೂ

ಭಾರತದಲ್ಲಿ ಮಾತ್ರವಲ್ಲದೆ ಇಡೀ ಜಗತ್ತಿನಲ್ಲೇ ಇದೆ. ಆದರೆ ಇದರ ಪ್ರಮಾಣ ಭಾರತದಲ್ಲಿ ಬಹಳ ಹೆಚ್ಚು ಎಂಬುದೇ ಇಂದಿನ ಸಮಸ್ಯೆ. ಭಾರತದ ಜನಸಂಖ್ಯೆಯಲ್ಲಿನ ಬಹುರೂಪತೆ, ಆರ್ಥಿಕ ಸನ್ನಿವೇಶದಲ್ಲಿರುವ ವ್ಯತ್ಯಾಸಗಳೂ ಇದಕ್ಕೆ ಕಾರಣವಾಗಿದೆ. ಈ ಅಸಮಾನತೆ ಎಂದರೇನು, ಇದಕ್ಕೆ ಕಾರಕಗಳಾವುವು, ಇದನ್ನು ನಿವಾರಿಸುವ ಕ್ರಮಗಳಾವುವು ಎಂಬುದನ್ನು ಈ ಘಟಕದಲ್ಲಿ ತಿಳಿಯೋಣ.

## 4.4.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.4.3.1. ಶಿಕ್ಷಣದಲ್ಲಿ ಅಸಮಾನತೆ ಮತ್ತು ಇದಕ್ಕೆ ಕಾರಣಗಳು

ಸಮಾಜದಲ್ಲಿನ ಸದಸ್ಯರಲ್ಲಿ ಕೆಲವರಿಗೆ ಇತರರಿಗಿಂತ ಹೆಚ್ಚಿನ ಅವಕಾಶಗಳು, ಸಂಪತ್ತು ಇರುವ ನ್ಯಾಯವಲ್ಲದ ಸನ್ನಿವೇಶವನ್ನು ಅಸಮಾನತೆ ಎಂದು ಹೇಳಲಾಗುತ್ತದೆ. ಆರ್ಥಿಕ ದೃಷ್ಟಿಯಿಂದ, ಸಮಾಜದ ವಿವಿಧ ಗುಂಪುಗಳಲ್ಲಿ ಹಣ ಮತ್ತು ಅವಕಾಶಗಳು ಸಮನಾಗಿ ಹಂಚಿಕೆಯಾಗಿಲ್ಲದಿರುವ ಸ್ಥಿತಿಯೇ ಅಸಮಾನತೆ. ಅಸಮಾನತೆಯು ಸಂಪನ್ಮೂಲಗಳ ಅಸಮಾನ ಹಂಚಿಕೆಗೆ ಸಂಬಂಧಿಸಿದುದರಿಂದ ಅದು ಶ್ರೀಮಂತರು, ಬಡವರು ಈ ವ್ಯತ್ಯಾಸಗಳಿಗೆ ಸಂಬಂಧಿಸಿದುದಾಗಿರುತ್ತದೆ. ಈ ಅಸಮಾನ ಹಂಚಿಕೆ ಲಿಂಗ, ವಯಸ್ಸು, ವಂಶ, ಸಾಮಾಜಿಕ ಸ್ಥಾನಮಾನ ಇತ್ಯಾದಿ ಸಾಮಾಜಿಕ ಅಡೆತಡೆಗಳನ್ನು ಸೃಷ್ಟಿಸುವ ಸಾಂಸ್ಥಿಕ ರಚನೆಗಳಿಗೂ ಸಂಬಂಧಪಟ್ಟುದಾಗಿರುತ್ತದೆ.

ಶೈಕ್ಷಣಿಕ ಸಂಪನ್ಮೂಲಗಳ ಅಸಮಾನ ಹಂಚಿಕೆಯೇ ಶೈಕ್ಷಣಿಕ ಅಸಮಾನತೆ. ಇದು ಶಾಲಾ ನಿಧಿಯನ್ನೂ ಒಳಗೊಂಡಂತೆ, ಆದರೆ ಅದಕ್ಕೆ ಮಾತ್ರ ಪರಿಮಿತವಾಗದೆ, ಅರ್ಹ ಹಾಗೂ ಅನುಭವಸ್ಥ ಶಿಕ್ಷಕರು, ಪುಸ್ತಕಗಳು, ತಂತ್ರಜ್ಞಾನ ಇವುಗಳಿಗೆ ಸಂಬಂಧಿಸಿದಂತೆ ಸಾಮಾಜಿಕವಾಗಿ ವಂಚಿತರಾದ ಜನಗಳಿಗೆ ಸಂಬಂಧಿಸಿದ ಆಗಿರುವ ಅಸಮಾನತೆಯನ್ನು ಸೂಚಿಸುತ್ತದೆ. ಈ ಸಮುದಾಯಗಳು ಐತಿಹಾಸಿಕವಾಗಿ ವಂಚಿತರಾಗಿದ್ದು ಸಮಾಜದಿಂದ ಅವಗಣನೆಗೆ ಒಳಗಾಗಿರುವವರಾಗಿದ್ದಾರೆ. ಬಹಳ ಸನ್ನಿವೇಶಗಳಲ್ಲಿ ಈ ವರ್ಗದ ಜನರು ಶಾಲೆ ಮತ್ತು ಸಂಬಂಧಿತ ಅವಕಾಶಗಳಿಂದಲೂ ವಂಚಿತರಾಗಿದ್ದಾರೆ.

ಈ ಶೈಕ್ಷಣಿಕ ಅಸಮಾನತೆ ಎಂಬುದು ಇಂದಿಗೂ ನಡೆದುಕೊಂಡು ಬರುತ್ತಿರುವ ಒಂದು ಪ್ರಕ್ರಿಯೆ ಅಥವಾ ವ್ಯವಸ್ಥೆ. ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿ ಶಿಕ್ಷಣದ ಮೇಲೆ ಪ್ರಭಾವ ಬೀರುತ್ತದೆ. ಸಮಾಜದಲ್ಲಿ ಅನುಕೂಲಸ್ಥರು ಉತ್ತಮ ಶಾಲೆ ಅಥವಾ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವ ಸೌಲಭ್ಯವುಳ್ಳವರಾಗಿರುತ್ತಾರೆ. ಅನುಕೂಲವಿಲ್ಲದವರು ಕಡಿಮೆ ದರ್ಜೆಯ ಶಾಲಾ ಅವಕಾಶಗಳನ್ನು ಪಡೆಯುತ್ತಾರೆ. ಇದರಿಂದಾಗಿ ಮತ್ತೂ ಕೆಳಮಟ್ಟದ, ಅನನುಕೂಲ ಸ್ಥಿತಿಯನ್ನು ತಲುಪುತ್ತಾರೆ. ಇದಕ್ಕೆ ವಿರುದ್ಧವಾಗಿ ಶೈಕ್ಷಣಿಕವಾಗಿ ಮುಂದುವರೆದವರು ಹೆಚ್ಚಿನ ರಾಜಕೀಯ ಮತ್ತು ಆರ್ಥಿಕ ಅವಕಾಶಗಳಿಗೆ ಭಾಜನರಾಗಿ ಮತ್ತೂ ಹೆಚ್ಚು ಅನುಕೂಲಸ್ಥರಾಗುತ್ತಾರೆ. ಈ ರಚನೆಯು ಅವಕಾಶವಂಚಿತರ ಮೇಲೆ ಪ್ರತಿಕೂಲ ಪರಿಣಾಮವನ್ನುಂಟುಮಾಡುತ್ತದೆ. ಈ ಅಸಮಾನತೆಯನ್ನು ಹೋಗಲಾಡಿಸಬೇಕಾದರೆ, ಸಮಾಜದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಬದಲಾವಣೆಗಳಾಗಬೇಕು. ಈ ಬದಲಾವಣೆಗಳಾಗಬೇಕಾದರೆ ಅದಕ್ಕೆ ಶಿಕ್ಷಣವೊಂದೇ ಮೂಲಮಂತ್ರ.

ಶಿಕ್ಷಣದಲ್ಲಿ ಅಸಮಾನತೆಯು ದಾಖಲಾತಿ ಮತ್ತು ಮೇಲಿನ ತರಗತಿಗಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಮೇಲುನೋಟಕ್ಕೇ ಬಹಳ ಸ್ಪಷ್ಟವಾಗಿ ಕಾಣಬರುತ್ತದೆ. ಈ ಅಂತರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಅತ್ಯಂತ ಕಾಳಜಿಯ ಅಷ್ಟೇ ಅಪಾಯದ ಸಂಗತಿ. ಇದನ್ನು ಅಂತರರಾಷ್ಟ್ರೀಯ ಮಟ್ಟದ ದಾಖಲೆಗಳೂ ಗುರುತಿಸಿವೆ. ಅದಕ್ಕೆ ಸಂಬಂಧಿಸಿದ ಶಿಫಾರಸುಗಳನ್ನೂ ರಾಷ್ಟ್ರಮಟ್ಟದ ಕಾರ್ಯಕ್ರಮಗಳನ್ನೂ ಸೂಚಿಸಿವೆ. ಇದು ನಮ್ಮ ದೇಶದಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲೂ ಮಾನವ ಜನಾಂಗದ ಬೆಳವಣಿಗೆಗೆ ತಡೆಯೊಡ್ಡುತ್ತಿದೆ.

## ಶೈಕ್ಷಣಿಕ ಅಸಮಾನತೆಗೆ ಕಾರಣಗಳು

ಶೈಕ್ಷಣಿಕ ಅಸಮಾನತೆಗಳಿಗೆ ಅನೇಕ ಕಾರಣಗಳಿವೆ. ಅದು ರಾಜಕೀಯ, ಪರಿಸರಾತ್ಮಕ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಇತ್ಯಾದಿಯಾಗಿ ವಿಭಿನ್ನವಾಗಿರಬಹುದು. ಇವುಗಳಲ್ಲಿ ಪ್ರಮುಖವಾಗಿ ಸಾಮಾಜಿಕ, ಆರ್ಥಿಕ ಮತ್ತು ಲಿಂಗತ್ವಸಂಬಂಧಿ ಕಾರಣಗಳನ್ನು ತಿಳಿಯೋಣ.

## ಸಾಮಾಜಿಕ ಕಾರಣಗಳು

ಒಂದು ಸಮಾಜದ ಸಮೂಹದಲ್ಲಿನ ವಿವಿಧ ಸಾಮಾಜಿಕ ಸ್ಥಾನಮಾನದವರಿಗೆ ಇರುವ ಅಸಮಾನ ಅವಕಾಶಗಳು ಮತ್ತು ಪುರಸ್ಕಾರಗಳ ಸನ್ನಿವೇಶವೇ ಸಾಮಾಜಿಕ ಅಸಮಾನತೆ ಎನಿಸಿಕೊಳ್ಳುತ್ತದೆ. ಲಿಂಗ, ವರ್ಗ, ವಂಶ ಇತ್ಯಾದಿ ಸಾಮಾಜಿಕವಾಗಿ ಗುರುತಿಸಲಾದ ವರ್ಗಗಳ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಕಾರ್ಮಿಕ ಮಾರುಕಟ್ಟೆ ಹಾಗೂ ವರಮಾನದ ಇತರ ಆಧಾರಗಳು, ಶಿಕ್ಷಣ, ಮುಂತಾದ ಸಾಮಾಜಿಕ ಸರಕುಗಳು, ಆರೋಗ್ಯ ವ್ಯವಸ್ಥೆ, ರಾಜಕೀಯ ಪ್ರಾತಿನಿಧ್ಯ ಮತ್ತು ಭಾಗವಹಿಕೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಇರುವ ಅವಕಾಶದಲ್ಲಿ ವ್ಯತ್ಯಾಸದ ಅಸ್ತಿತ್ವವೇ ಸಾಮಾಜಿಕ ಅಸಮಾನತೆ.

ಸಾಮಾಜಿಕ ಸಂಪನ್ಮೂಲಗಳಿಗೆ ಇರುವ ಅಸಮಾನ ಅವಕಾಶಗಳ ವಿನ್ಯಾಸವೇ ಸಾಮಾಜಿಕ ಅಸಮಾನತೆ ಎಂದೂ ಹೇಳಬಹುದು. ಇದು ಪ್ರಮುಖವಾಗಿ ವ್ಯಕ್ತಿಯ ಸಂಪತ್ತು, ಅಧಿಕಾರ ಮತ್ತು ಗೌರವಗಳಿಗೆ ಇರುವ ಅವಕಾಶಗಳಲ್ಲಿನ ಭಿನ್ನತೆ ಎಂದೂ ಹೇಳಬಹುದು. ಸಾಮಾಜಿಕ ಅಸಮಾನತೆಯು ಲಿಂಗತ್ವ, ವಂಶ, ವಯಸ್ಸು, ಧರ್ಮ ಮತ್ತು ರಕ್ತಸಂಬಂಧಿಗಳಲ್ಲೂ ಇರಬಹುದು. ಈ ಸಾಮಾಜಿಕ ಅಸಮಾನತೆಯು ಸಾಮಾಜಿಕ ಘರ್ಷಣೆಗಳು, ಆತಂಕ ಇತ್ಯಾದಿಗಳಿಗೆ ಕಾರಣವಾಗಿ, ನಿಯಂತ್ರಣದ ಕೊರತೆ, ವ್ಯವಸ್ಥೆ ಮತ್ತು ಮೌಲ್ಯಗಳಲ್ಲಿನ ಸಡಿಲತೆ ಮತ್ತು ಸಾಮಾಜಿಕ ಅವ್ಯವಸ್ಥೆಯಲ್ಲಿ ಪರ್ಯವಸಾನವಾಗಬಹುದು.

ಈ ಸಾಮಾಜಿಕ ಅಸಮಾನತೆಯು ಸಮಾಜದಲ್ಲಿ ವ್ಯಕ್ತಿಗಳು ಮತ್ತು ಸಮೂಹಗಳಲ್ಲಿ ಸಮಾನ ಸಾಮಾಜಿಕ ಸ್ಥಾನಮಾನ, ಸಾಮಾಜಿಕ ವರ್ಗ, ಸಾಮಾಜಿಕ ಗುಂಪು ಇಲ್ಲದಿರುವಿಕೆಯನ್ನೂ ಸೂಚಿಸುತ್ತದೆ. ಇದು ಹಲವಾರು ಅಂಶಗಳನ್ನು ಒಳಗೊಳ್ಳುತ್ತದೆ. ಮತದಾನದ ಹಕ್ಕು, ವಾಕ್ ಮತ್ತು ಒಟ್ಟುಗೂಡುವ ಸ್ವಾತಂತ್ರ್ಯ, ಆಸ್ತಿ ಹಕ್ಕು, ಶಿಕ್ಷಣಕ್ಕೆ ಅವಕಾಶದ ಹಕ್ಕು, ಆರೋಗ್ಯ, ಸಮರ್ಪಕ ವಸತಿ, ಪ್ರಯಾಣ, ಮತ್ತು ಇತರ ಸಾಮಾಜಿಕ ಸರಕು ಸೇವೆಗಳ ಹಕ್ಕುಗಳಲ್ಲಿ ಇರುವ ಅಸಮಾನತೆಯನ್ನೂ ಒಳಗೊಳ್ಳುತ್ತದೆ. ಜೀವನ ಗುಣಮಟ್ಟ, ನೆರೆಕೆರೆಯ ಜೀವನ, ವೃತ್ತಿ, ವೃತ್ತಿ ಸಂತೃಪ್ತಿ, ಸಾಲಕ್ಕೆ ಅವಕಾಶ ಇತ್ಯಾದಿ ವಿಷಯಗಳಲ್ಲೂ ಕಾಣಬರುತ್ತದೆ. ಕೆಲವರು ಅವರ ಜೀವನ ಸನ್ನಿವೇಶಗಳ ಕಾರಣದಿಂದಾಗಿ ಅನನುಕೂಲಸ್ಥರು, ದೀನದಲಿತರು, ಇತ್ಯಾದಿಯಾಗಿ ಸಾಮಾಜಿಕವಾಗಿ ಪರಿಗಣಿತವಾಗಿದ್ದಾರೆ ಎಂಬ ನಂಬಿಕೆಯನ್ನೂ ಸಾಮಾಜಿಕ ಅಸಮಾನತೆಯು ಒಳಗೊಳ್ಳುತ್ತದೆ. ಈ ಅಸಮಾನತೆಯನ್ನು ಶಿಕ್ಷಣದಿಂದ ಮಾತ್ರ ಹೋಗಲಾಡಿಸಬಹುದು.

> ಲೀಲಾ ಮತ್ತು ಶೀಲಾ ಒಂದೇ ಶಾಲೆಯಲ್ಲಿ ಒಂದೇ ತರಗತಿಯಲ್ಲಿ ಓದುತ್ತಿದ್ದವರು. ಲೀಲಾ ಆರ್ಥಿಕವಾಗಿ ಅನುಕೂಲಸ್ಥ ಕುಟುಂಬದ ಹುಡುಗಿ. ಶೀಲಾ ಬಡಕುಟುಂಬದ ಹುಡುಗಿ. ಲೀಲಾಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ಉತ್ತಮವಾಗಿದ್ದುದರಿಂದ ಶಾಲೆಯಲ್ಲಿ ಅವಳಿಗೆ ವಿಶೇಷ ಗಮನವಿತ್ತು. ಅವಳನ್ನೇ ಎಲ್ಲ ಶೈಕ್ಷಣಿಕ ಮತ್ತು ಸಹ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಾಲುಗೊಳ್ಳಲು ಪ್ರೋತ್ಸಾಹಿಸುತ್ತಿದ್ದರು. ಈ ಅಭಿಪ್ರೇರಣೆಯ ಫಲವಾಗಿ ಅವಳು ಶೈಕ್ಷಣಿಕವಾಗಿಯೂ ಬೆಳೆದಳು. ಶೀಲಾಳಿಗೆ ತೋರಿದ ತಟಸ್ಥ ಧೋರಣೆಯಿಂದಾಗಿ ಅವಳಿಗೆ ಯಾವುದರಲ್ಲೂ ಆಸಕ್ತಿ ಉಂಟಾಗದೆ ಅಪಸಾಧನೆಯೊಂದಿಗೆ ಅರ್ಧದಲ್ಲಿಯೇ ಶಾಲೆಯನ್ನೂ ಬಿಟ್ಟಳು. ಇದು ಸಾಮಾಜಿಕ ಅಸಮಾನತೆಯ ಫಲ.

ಶೈಕ್ಷಣಿಕ ಅಸಮಾನತೆ ಉಂಟಾಗಲು ಮತ್ತೊಂದು ಕಾರಣ ಮೀಸಲಾತಿ ನೀತಿ. ಮೀಸಲಾತಿಯೊಳಗೆ ಬಾರದ ಬುದ್ಧಿವಂತ ಮಕ್ಕಳು ಕಠಿಣ ಸ್ಪರ್ಧೆಯನ್ನು ಎದುರಿಸಬೇಕಾಗುತ್ತದೆ. ವಿವಿಧ ರೀತಿಯ ಮೀಸಲಾತಿಗಳು

ರಾಜಕೀಯ ಪ್ರೇರಿತವಾಗಿದ್ದು ನಿಜವಾಗಿ ಶಿಕ್ಷಣ ನೀಡುವಲ್ಲಿ ಯಾವ ಪರಿಣಾಮವನ್ನೂ ಬೀರುವುದಿಲ್ಲ. 'ಮ್ಯಾನೇಜ್‌ಮೆಂಟ್ ಕೋಟಾ' ಅಥವಾ 'ಅಧಿಕ ಹಣ ಪಾವತಿ' ಸೀಟುಗಳೂ ಅಸಮಾನತೆಯನ್ನು ಸೃಷ್ಟಿಸುತ್ತವೆ. ವಿದ್ಯಾರ್ಥಿಗಳಿಗೆ ತಾವು ಸೀಟುಗಳನ್ನು ಹಣಕೊಟ್ಟು ಕೊಳ್ಳಬಹುದೆಂಬ ಭಾವನೆ ಬರುತ್ತದೆ. ಇದರಿಂದಾಗಿ ಶೈಕ್ಷಣಿಕವಾಗಿ ಅರ್ಹತೆಯುಳ್ಳ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗದಾಗುತ್ತದೆ.

## ಆರ್ಥಿಕ ಕಾರಣಗಳು

ಸಮಾಜದ ವಿವಿಧ ಗುಂಪುಗಳ ನಡುವೆ ಆದಾಯ ಮತ್ತು ಅವಕಾಶಗಳ ಅಸಮಾನ ವಿತರಣೆ ಅಥವಾ ಹಂಚಿಕೆಯೇ ಆರ್ಥಿಕ ಅಸಮಾನತೆ. ಇದು ಜಗತ್ತಿನ ಎಲ್ಲ ದೇಶಗಳಲ್ಲೂ ಕಂಡುಬರುವ ಪ್ರಮುಖ ಕಾಳಜಿ. ಸಾಮಾಜಿಕ ಶ್ರೇಣಿಯಲ್ಲಿ ಮೇಲೇಳಲಾರದಷ್ಟು ಮಟ್ಟಿಗೆ ಜನ ಬಡತನದಲ್ಲಿ ಸಿಲುಕಿಕೊಂಡಿರುತ್ತಾರೆ. ವ್ಯಕ್ತಿ–ವ್ಯಕ್ತಿಗಳ ನಡುವೆ ಆಸ್ತಿ, ಸಂಪತ್ತು ಮತ್ತು ಆದಾಯ ಇವುಗಳ ಹಂಚಿಕೆಯಲ್ಲಿರುವ ತಾರತಮ್ಯವೇ ಇದು. ಇದನ್ನು ಉಳ್ಳವ ಮತ್ತು ಇಲ್ಲದವರ ನಡುವಿನ ಅಂತರ ಎಂದೂ ವರ್ಣಿಸಲಾಗುತ್ತದೆ.

ಭಾರತದಲ್ಲಿ ಆರ್ಥಿಕ ಅಸಮಾನತೆಯು ಅತ್ಯಂತ  ಆತಂಕಕಾರಿಯಾಗಿದ್ದು, ಇದನ್ನು ನಿವಾರಿಸುವಲ್ಲಿ ಶಿಕ್ಷಣ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಹೆಚ್ಚು ಆದಾಯವಿರುವ ಮತ್ತು ಕಡಿಮೆ ಆದಾಯವಿರುವ ಕುಟುಂಬದ ಮಕ್ಕಳು ಒಟ್ಟಿಗೆ ಒಂದೇ ಶಾಲೆಯಲ್ಲಿ ಅಧ್ಯಯನ ಮಾಡುವುದನ್ನು ಕಲ್ಪಿಸಿಕೊಳ್ಳಿ. ಒಂದು ಮಗುವಿಗೆ ಟ್ಯೂಶನ್, ವರ್ಕ್ ಬುಕ್‌ಗಳು, ಮಲ್ಟಿ ಮೀಡಿಯಾ ಸಾಮಗ್ರಿಗಳು, ಸಲಕರಣೆಗಳು ಎಲ್ಲವೂ ಸಿಗಲು ಸಾಧ್ಯವಿದೆ. ಇನ್ನೊಂದು ಮಗುವಿಗೆ ಶಾಲೆಯಲ್ಲಿ ದೊರಕುವ ಕನಿಷ್ಠ ಸೌಲಭ್ಯಗಳನ್ನು ಬಿಟ್ಟು ಬೇರೇನನ್ನೂ ಪಡೆಯಲು ಸಾಧ್ಯವಿಲ್ಲ. ಇವರ ಸಾಧನೆಯಲ್ಲಿ  ಅಂತರ ಕಂಡುಬರುವುದಾದರೆ ಅದು ಸಹಜವೂ ಹೌದು; ಸ್ಪಷ್ಟವೂ ಹೌದು. ಇದಕ್ಕೆ ಮಗು ಯಾವ ವಿಧದಲ್ಲೂ ಕಾರಣವಲ್ಲ. ಕುಟುಂಬದ ಆರ್ಥಿಕತೆಯೊಂದೇ ಕಾರಣ. ಇದು ಮುಂದಿನ ಪರಿಣಾಮಗಳಾದ ಉತ್ತಮ ಕಾಲೇಜಿಗೆ ಪ್ರವೇಶ, ಉತ್ತಮ ಕೋರ್ಸಿಗೆ ಪ್ರವೇಶ, ಉತ್ತಮ ನೌಕರಿಯ ಲಭ್ಯತೆ, ಉತ್ತಮ ಗುಣಮಟ್ಟದ ಜೀವನ– ಈ ಎಲ್ಲದರ ಮೇಲೆ ಪರಿಣಾಮ ಬೀರುತ್ತದೆ.

## ಲಿಂಗತ್ವ ಅಸಮಾನತೆಯ ಕಾರಣಗಳು

ಶಿಕ್ಷಣದಲ್ಲಿನ ಅಸಮಾನತೆಗೆ ಸಮಾಜದಲ್ಲಿರುವ ಲಿಂಗತ್ವ ಅಸಮಾನತೆ ಮತ್ತೊಂದು ಪ್ರಮುಖ ಕಾರಣ. ಇದು ಬೇರೆ ಬೇರೆ ರೀತಿಗಳಲ್ಲಿ ಕಾಣಿಸಿಕೊಳ್ಳುತ್ತದೆಯಾದರೂ ಭಾರತದಲ್ಲಿನ ಹೆಣ್ಣುಮಕ್ಕಳ ಮತ್ತು ಮಹಿಳೆಯರ ಬದುಕಿನಲ್ಲಿ ಎದ್ದು ಕಾಣುತ್ತದೆ. ಅಲ್ಲದೆ ಅವರ ಜೀವಿತದ ಪೂರ್ಣ ಅವಧಿಯವರೆಗೆ ಪ್ರಭಾವ ಬೀರುತ್ತದೆ. ಹಲವಾರು ಸಂಶೋಧನಾ ಅಧ್ಯಯನಗಳು ಲಿಂಗತ್ವದ ಅಸಮಾನತೆಯು ಭಾರತದಲ್ಲಿ ಯಾವೆಲ್ಲ ರೀತಿಗಳಲ್ಲಿ ಪರಿಣಾಮಬೀರುತ್ತದೆ ಎಂಬುದನ್ನು ಬೆಳಕಿಗೆ ತಂದಿವೆ. 2013ರ 'Global Gender Gap Report' ದಾಖಲೆಯು ಭಾರತ ಲಿಂಗತ್ವ ಸಮಾನತೆಯನ್ನು ಸಾಧಿಸುವಲ್ಲಿ ಒಟ್ಟು 136 ದೇಶಗಳಲ್ಲಿ 101ನೇ ಸ್ಥಾನದಲ್ಲಿದೆ ಎಂದು ದಾಖಲಿಸಿತ್ತು. ಈ ದಾಖಲೆಯು ಆರ್ಥಿಕ ಭಾಗವಹಿಕೆ ಮತ್ತು ಅವಕಾಶ, ಆರೋಗ್ಯ ಮತ್ತು ಬದುಕುಳಿಯುವಿಕೆ, ಶೈಕ್ಷಣಿಕ ಸಾಧನೆ, ಮತ್ತು ರಾಜಕೀಯ ಸಬಲೀಕರಣ ಎಂಬ ನಾಲ್ಕು ಮಾನದಂಡಗಳ ಆಧಾರದ ಮೇಲೆ ಈ ತೀರ್ಮಾನಗಳನ್ನು ಪ್ರಕಟಿಸಿತ್ತು. ಇಂದಿಗೂ ಇದು ಅಷ್ಟೇನೂ ಆಶಾದಾಯಕವಾಗಿ ಬದಲಾಗಿರುವಂತೆ ಕಾಣುವುದಿಲ್ಲ. ಇದು ನಿಮ್ಮ ಗಮನಕ್ಕೂ ಬಂದಿರಬಹುದು.

ಹಲವಾರು ಅಂಶಗಳಲ್ಲಿ ಶೈಕ್ಷಣಿಕ ಅಸಮಾನತೆಯನ್ನು ಗುರುತಿಸಬಹುದು. ದಾಖಲಾತಿಗೆ ಸಂಬಂಧಿಸಿದಂತೆ ಹೆಣ್ಣುಮಕ್ಕಳ ದಾಖಲಾತಿಯಲ್ಲಿ ಶೇ. 39ರಷ್ಟು ಇತರ ಜಾತಿಗಳು, ಶೇ. 34ರಷ್ಟು ಪರಿಶಿಷ್ಟ ಜಾತಿ ಮತ್ತು ಜನಾಂಗದವರು, ಇತರ ಹಿಂದುಳಿದ ವರ್ಗದವರ ದಾಖಲಾತಿ ಶೇ. 22ರಷ್ಟು ಇದೆ. ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳ ಸಂಖ್ಯೆ ಇತರ ಎಲ್ಲ ವರ್ಗಗಳಿಗಿಂತ ಕಡಿಮೆ ಇದೆ.  ಪರಿಶಿಷ್ಟ ಜನಾಂಗದ ಹೆಣ್ಣುಮಕ್ಕಳ ದಾಖಲಾತಿಗೆ ಅತಿ ಹೆಚ್ಚು ಗಮನಕೊಟ್ಟಿದ್ದರೂ ಅದು ಶೇ. 50ಕ್ಕಿಂತ ಕಡಿಮೆಯೇ ಇದೆ.

ಲಿಂಗತ್ವ ತಾರತಮ್ಯ ಮಾನವ ಜನಾಂಗದ ಅಭ್ಯಾಸಗಳ ಪರಿಣಾಮವಷ್ಟೆ. ಇದು ಕಾಲಕಾಲಾಂತರದಿಂದ ಅಸ್ತಿತ್ವದಲ್ಲಿದೆ. ಒಂದು ಪ್ರದೇಶದ ಪ್ರಗತಿ ಹೆಚ್ಚಾದಂತೆ ಲಿಂಗತ್ವ ತಾರತಮ್ಯ ಕಡಿಮೆಯಾಗುತ್ತದೆ. ದೇಶದ ಪ್ರಗತಿ ಶಿಕ್ಷಣದಿಂದ ಮಾತ್ರ ಸಾಧ್ಯ. ಹೀಗೆ ಲಿಂಗತಾರತಮ್ಯ ಕಡಿಮೆಯಾಗಿ ಶಿಕ್ಷಣದಲ್ಲಿ ಅಸಮಾನತೆ ಕಡಿಮೆಯಾಗಬೇಕಾದರೆ ಅದು ಶಿಕ್ಷಣದಿಂದ ಸಾಧಿತವಾಗಬೇಕು.

ನಾವು ಹುಡುಗರು ಮತ್ತು ಹುಡುಗಿಯರಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣುತ್ತೇವೆ. ಹುಡುಗರು ಹೆಚ್ಚು ಧೈರ್ಯವಂತರೂ ಆಟಗುಳಿಗಳೂ ಆತ್ಮವಿಶ್ವಾಸವುಳ್ಳವರೂ ಸುಲಭವಾಗಿ ನಿಯಂತ್ರಣಕ್ಕೆ ಸಿಗದವರೂ ಆಗಿರುತ್ತಾರೆ. ಹುಡುಗಿಯರು ಹೆಚ್ಚಾಗಿ ಮೃದುಸ್ವಭಾವದವರೂ ತಾಳ್ಮೆಯುಳ್ಳವರೂ ನಿಯಂತ್ರಣಕ್ಕೆ ಸಿಗುವಂತಹವರೂ ಆಗಿರುತ್ತಾರೆ. ಮಕ್ಕಳೂ ಅವರವರ ಸಂಸ್ಕೃತಿಯಲ್ಲಿರುವ ವಯಸ್ಕ ಯುವಕ ಯುವತಿಯರಂತೆ ಆಗಲು ಅವರ ವರ್ತನೆಗಳನ್ನು ಅನುಕರಿಸುತ್ತಾರೆ. ಸಮಾಜವು ಹೆಣ್ಣು ಮತ್ತು ಗಂಡುಮಕ್ಕಳಲ್ಲಿ ವಿಭಿನ್ನ ರೀತಿಯ ವರ್ತನೆಗಳನ್ನು ಬಯಸಿದಲ್ಲಿ ಇದು ಹೆಣ್ಣುಮಕ್ಕಳು ಕಟ್ಟಿಕೊಳ್ಳುವ ಅನನ್ಯತೆಯಲ್ಲಿ ಕೆಳಮಟ್ಟದ ಆತ್ಮಗೌರವ ಮತ್ತು ಆತ್ಮವಿಶ್ವಾಸಗಳು ಮೂಡಿಬರುತ್ತವೆ. ಹಾಗಾಗಿ ಈ ಲಿಂಗತ್ವ ಅಸಮಾನತೆ ಕೊನೆಗೊಳ್ಳಬೇಕು. ಇದೂ ಶಿಕ್ಷಣದಿಂದ ಮಾತ್ರ ಸಾಧ್ಯ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಶಿಕ್ಷಣದಲ್ಲಿ ಅಸಮಾನತೆಗೆ ಕಾರಣವಾಗುವ ಕೆಲವು ಅಂಶಗಳನ್ನು ಮೇಲಿನ ವಾಕ್ಯವೃಂದಗಳಲ್ಲಿ ಚರ್ಚಿಸಲಾಗಿದೆ. ನಿಮ್ಮ ಅನುಭವದಲ್ಲಿ ಶಿಕ್ಷಣದಲ್ಲಿ ಅಸಮಾನತೆಗೆ ಕಾರಣವಾಗುವ ಇತರ ಅಂಶಗಳನ್ನು ಗುರುತಿಸಿ, ಟಿಪ್ಪಣಿ ಮಾಡಿಕೊಳ್ಳಿ.

## 4.4.3.2. ಶಿಕ್ಷಣದಲ್ಲಿ ಅಸಮಾನತೆಯನ್ನು ನಿವಾರಿಸಲು ಕ್ರಮಗಳು

ಶಿಕ್ಷಣದಲ್ಲಿ ಅಸಮಾನತೆಯನ್ನು ನಿವಾರಿಸಬೇಕಾದರೆ ಅದಕ್ಕೆ ಕಾರಣವಾದ ಅಂಶಗಳನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಅವುಗಳನ್ನು ಕೆಳಕಂಡಂತೆ ಗಮನಿಸಬಹುದು:

### ಕನಿಷ್ಟ ವೇತನ ನಿಗದಿ:

ಯಾವುದೇ ರೀತಿಯ ನೌಕರಿಯಾಗಲೀ, ಸಮರ್ಪಕ ಜೀವನಮಟ್ಟವನ್ನು ಸಾಗಿಸಲು ಅಗತ್ಯವಾದ ವೇತನ/ ಕೂಲಿಯನ್ನು ಕಡ್ಡಾಯವಾಗಿ ನಿಗದಿಮಾಡಬೇಕು. ಹೀಗೆ ಮಾಡಿದಾಗ, ಶಿಕ್ಷಣವೂ ಸೇರಿದಂತೆ ವಿವಿಧ ಅಗತ್ಯಗಳನ್ನು ಪೂರೈಸಿಕೊಂಡು ಗುಣಮಟ್ಟದ ಜೀವನಶೈಲಿಯನ್ನು ರೂಪಿಸಿಕೊಳ್ಳುವುದರ ಮೂಲಕ ಎಲ್ಲರಿಗೂ ಉತ್ತಮ ಜೀವನ ಸಾಗಿಸಲು ಸಾಧ್ಯವಾಗುತ್ತದೆ.

ಕನಿಷ್ಟ ವೇತನವನ್ನು ಕೇವಲ ನಿಗದಿಪಡಿಸಿದರೆ ಸಾಲದು, ಅದು ಚಾಲ್ತಿಯಲ್ಲಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಎಷ್ಟೋ ಸಂದರ್ಭಗಳಲ್ಲಿ ವಿವಿಧ ನೌಕರಿ/ ವೃತ್ತಿಗಳಿಗೆ ವೇತನ ನಿಗದಿ ಮಾಡಿದ್ದರೂ ಅವರಿಗೆ ಆ ವೇತನವನ್ನು ನೀಡಲಾಗುತ್ತಿಲ್ಲ. ನೌಕರರಿಂದ ನಿಗದಿತ ವೇತನವನ್ನು ನೀಡಲಾಗುತ್ತಿದೆ ಎಂದು ಪ್ರಮಾಣ ಪತ್ರ ಪಡೆದು ಕಡಿಮೆ ಹಣವನ್ನೇ ನೀಡಲಾಗುತ್ತಿದೆ. ಈ ರೀತಿಯ ಅನ್ಯಾಯಗಳಿಗೆ ತೀವ್ರವಾದ ಶಿಕ್ಷೆ ನೀಡುವುದರ ಮೂಲಕ ಇದಕ್ಕೆ ಕಡಿವಾಣ ಹಾಕಬೇಕು. ಇದು ಆರ್ಥಿಕ ಪ್ರಗತಿಯಲ್ಲಿ ಮೊದಲ ಹೆಜ್ಜೆ.

### ಸಾಮಾಜಿಕ ಸುಭದ್ರತೆ

ವ್ಯಾಪಕವಾದ ಸಾಮಾಜಿಕ ಸುಭದ್ರತಾ ಖಾತರಿ ಯೋಜನೆಗಳನ್ನು ರೂಪಿಸಿ ಪ್ರತಿ ವ್ಯಕ್ತಿಗೂ ಕನಿಷ್ಠ ಆರ್ಥಿಕ ಪ್ರಗತಿಯ ಮಟ್ಟವನ್ನು ನಿಗದಿಪಡಿಸಬೇಕು. ಈ ಯೋಜನೆಯು ಶಿಕ್ಷಣ, ವೃದ್ಧಾಪ್ಯ ಪಿಂಚಣಿ, ವೈದ್ಯಕೀಯ ಸೇವೆ, ಉದಾರವಾದ ನಿರುದ್ಯೋಗ ಬದಲಿ ಸೇವೆಗಳು/ ಸ್ಟೈಪಂಡ್‌ಗಳು, ರೋಗ ಮತ್ತು ಅಪಘಾತ ಪರಿಹಾರಗಳು, ಪ್ರಾವಿಡೆಂಟ್ ಫಂಡ್, ಸಾಮಾಜಿಕ ವಿಮಾ ವ್ಯವಸ್ಥೆ ಇವುಗಳನ್ನು ಉಚಿತವಾಗಿ ಒದಗಿಸುವ ಅವಕಾಶಗಳನ್ನು ಹೊಂದಿರಬೇಕು. ಹೀಗೆ ವರಮಾನ ಕಡಿಮೆ ಇರುವವರಿಗೆ ಮಹತ್ವದ ಪ್ರಯೋಜನಗಳನ್ನು ಉಂಟುಮಾಡಬಹುದು.

ಇವುಗಳಿಗೆ ಹಣಕಾಸಿಗೆ ಸಮನಾದ ಲಾಭಗಳಿರುತ್ತವೆ. ಸಾರ್ವಜನಿಕ ಉದ್ಯಾನವನಗಳು, ಗ್ರಂಥಾಲಯಗಳು, ಮ್ಯೂಸಿಯಂಗಳು, ಹವಾನಿಯಂತ್ರಿತ ಸಮುದಾಯ ಭವನ, ಸಮುದಾಯ ರೇಡಿಯೋ ಮತ್ತು ದೂರದರ್ಶನ, ರೆಫ್ರಿಜಿರೇಟರ್‌ಗಳು ಇವುಗಳನ್ನು ಉದಾರವಾಗಿ ನೀಡಿದರೆ ಆರ್ಥಿಕವಾಗಿ ಕೆಳಮಟ್ಟದಲ್ಲಿರುವವರೂ ಉತ್ತಮಮಟ್ಟದಲ್ಲಿರುವವರು ಅನುಭವಿಸುವ ಸೌಕರ್ಯಗಳನ್ನು ಪಡೆಯುವ ಅನುಭವಗಳನ್ನು ಪಡೆಯಲು ಸಾಧ್ಯಮಾಡಿಕೊಟ್ಟು ಅಂತರವನ್ನು ಕಡಿಮೆ ಮಾಡುತ್ತದೆ. ಇದು ಶಿಕ್ಷಣದಲ್ಲಿಯೂ ಸಮಾನತೆಯನ್ನು ತರುವಲ್ಲಿ ಸಹಾಯಮಾಡುತ್ತದೆ.

## ಅವಕಾಶಗಳಲ್ಲಿ ಸಮಾನತೆಯನ್ನು ಒದಗಿಸುವುದು

ಸರ್ಕಾರವು, ಉದ್ಯೋಗಾವಕಾಶಗಳಲ್ಲಿ ಅಥವಾ ವ್ಯಾಪಾರ ಕೈಗಾರಿಕೆಗಳನ್ನು ಸ್ವಂತವಾಗಿ ಸ್ಥಾಪಿಸಿಕೊಳ್ಳುವಲ್ಲಿ ಬಡವರಿಗೆ ಮತ್ತು ಶ್ರೀಮಂತರಿಗೆ ಸಮಾನವಾದ ಅವಕಾಶಗಳನ್ನು ಕಲ್ಪಿಸಿಕೊಡಲು ಯಾವುದಾದರೂ ಮಾರ್ಗೋಪಾಯಗಳನ್ನು ಗುರುತಿಸಿಕೊಳ್ಳಬೇಕು. ವೃತ್ತಿಯ ಆಯ್ಕೆ ವ್ಯಕ್ತಿಯದೇ ಆಗಿರುವಂತೆ ಪ್ರೋತ್ಸಾಹಿಸಬೇಕು. ಉದ್ಯೋಗ ಪಡೆಯುವಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ನೋಡಿಕೊಳ್ಳಬೇಕು. ಉದ್ಯೋಗ ನೀಡುವಲ್ಲಿ ಯಾವುದೇ ತಾರತಮ್ಯಗಳಾಗದಂತೆ ಗಮನ ಹರಿಸಬೇಕು. ವ್ಯಕ್ತಿಯ ವಿದ್ಯಾರ್ಹತೆ, ಶ್ರಮ, ಈವರೆಗೆ ಹೂಡಿದ ಹಣ, ಸಾಮರ್ಥ್ಯಗಳು, ಕೌಶಲಗಳು ಎಲ್ಲವನ್ನೂ ಗೌರವಿಸಿ ಎಲ್ಲರಿಗೂ ಗೌರವಯುತವಾದ ಉದ್ಯೋಗ ಸಿಗುವಂತೆ ಖಾತರಿಪಡಿಸಿಕೊಳ್ಳಬೇಕು. ತೆರೆದಿರುವ ಉದ್ಯೋಗದ ಸಂಖ್ಯೆ ಮತ್ತು ಆ ಕ್ಷೇತ್ರದಲ್ಲಿರುವ ಪದವೀಧರರ ನಡುವಿನ ಅನುಪಾತ ಹೆಚ್ಚು ಕಡಿಮೆ ಹೊಂದಿಕೊಳ್ಳುವಂತೆ ಗಮನಿಸಿಕೊಳ್ಳಬೇಕು. ಸಮಾಜದಲ್ಲಿರುವ ಅಗತ್ಯಗಳ ವಿಶ್ಲೇಷಣೆ ಮಾಡಿ ಅದಕ್ಕನುಗುಣವಾದ ಉದ್ಯೋಗಗಳನ್ನು ಸೃಷ್ಟಿಸಬೇಕು, ಇಲ್ಲವೇ ಉದ್ಯೋಗಗಳನ್ನು ಸೃಷ್ಟಿಸಿಕೊಳ್ಳಲು ಸಾಲ ಸೌಲಭ್ಯ, ಸರ್ಕಾರಿ ಜಂಟಿ ಹೂಡಿಕೆ ಇತ್ಯಾದಿ ವಿಧಾನಗಳ ಮೂಲಕ ಜನರನ್ನು ಸಬಲೀಕರಣಗೊಳಿಸಬೇಕು. ಚಿಕ್ಕ ಮಕ್ಕಳನ್ನು ಕೆಲಸಕ್ಕಿಟ್ಟುಕೊಂಡು ಅವರು ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಯಬೇಕು. ಸರ್ಕಾರವು ವಿಶೇಷ ವಿದ್ಯಾರ್ಥಿವೇತನಗಳನ್ನು ನೀಡಿ ವಿದ್ಯಾರ್ಥಿಗಳು ಕೇವಲ ಆರ್ಥಿಕ ಕಾರಣಗಳಿಂದಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗುವುದನ್ನು ಮತ್ತು ಪ್ರತಿಭೆ ವ್ಯರ್ಥವಾಗುವುದನ್ನು ತಡೆಯಬೇಕು.

ರಾಷ್ಟ್ರೀಯ ಶಿಕ್ಷಣ ನೀತಿಯೂ ಪ್ರಮುಖ ಮೌಲ್ಯಗಳಾದ ಲಿಂಗ ಸಮಾನತೆ, ಮಹಿಳಾ ವಿರೋಧಿ ಸಾಮಾಜಿಕ ಕೆಡುಕುಗಳು, ಸಣ್ಣ ಕುಟುಂಬದ ಮಾನಕಗಳು ಇವುಗಳನ್ನು ಒತ್ತಿ ಹೇಳಿದೆ. ಅಲ್ಲದೆ ಹೆಣ್ಣುಮಕ್ಕಳ ಸಾಮಾಜಿಕ, ಪೌಷ್ಟಿಕ ಮತ್ತು ಆರೋಗ್ಯ ಸ್ಥಿತಿಗಳನ್ನು ಉತ್ತಮಪಡಿಸಬೇಕಾದ ಅಗತ್ಯವನ್ನು ಎತ್ತಿ ತೋರಿಸಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಭಾಗವಾಗಿ ಶಾಲಾ ಪೂರ್ವ ಶಿಕ್ಷಣದ ಆವಶ್ಯಕತೆಯನ್ನು ಸ್ಪಷ್ಟಪಡಿಸಿದೆ. ಲಿಂಗಭೇದವನ್ನು ನಿವಾರಿಸಲು ಪಠ್ಯಪುಸ್ತಕಗಳ ಪರಿಷ್ಕರಣೆ, ಹಾಗೂ ಲಿಂಗಭೇದಮುಕ್ತ ಶಾಲಾ ವಾತಾವರಣದ ಅಗತ್ಯದ ಕುರಿತೂ ಪ್ರಸ್ತಾಪಿಸಿದೆ.

ಶೈಕ್ಷಣಿಕ, ಅಂತೆಯೇ ಇತರ ಅಸಮಾನತೆಗಳ ನಿವಾರಣೆಗೆ ಅಗತ್ಯವಾದ ಸರ್ಕಾರಿ ನೀತಿಗಳಿಗೇನೂ ಕಡಿಮೆಯಿಲ್ಲ. ಅವುಗಳ ಅನುಷ್ಠಾನದ ಕುರಿತಾಗಿ ವಿಶೇಷ ಗಮನ, ನ್ಯಾಯ ಇದುವರೆಗೆ ಒದಗಿಬರಲಿಲ್ಲ ಎಂಬುದೇ ಪ್ರಮುಖ ವಿಚಾರ. ಸಂವಿಧಾನಾತ್ಮಕ ವಿಧಿಗಳನ್ನೂ ಒಳಗೊಂಡಂತೆ ಈಗಾಗಲೇ ಹಲವಾರು ನೀತಿ/ನಿಯಮಗಳನ್ನು ಪ್ರಕಟಿಸಲಾಗಿದೆ:

- ಮಕ್ಕಳು ನಡೆದುಹೋಗಬಹುದಾದ ಮಿತಿಯಲ್ಲಿ ಶಾಲೆಗಳನ್ನು ಒದಗಿಸುವಿಕೆ, ಅತಿ ದೂರದ ಪ್ರದೇಶಗಳಿಗೆ ಉಪಗ್ರಹ ಶಾಲೆಗಳು;
- ಶಾಲಾ ಸಂಕೀರ್ಣದಲ್ಲಿಯೇ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಬೇಕಾದ ಅಗತ್ಯತೆ ಮತ್ತು ಸಂಬಂಧಿತ ಕ್ರಮಗಳು;
- ಶಾಲೆಗೆ ಹುಡುಗಿಯರು ಹೋಗಿಬರಲು ಅಪಾಯವಿರುವ ಸನ್ನಿವೇಶಗಳಲ್ಲಿ ಬೆಂಗಾವಲಿಗರಿಗೆ ಅವಕಾಶ;

- ಶಾಲಾ ವೇಳೆ ಮತ್ತು ಅವಧಿಯಲ್ಲಿ ನಮ್ಯತೆ, ಮಕ್ಕಳ ಅಗತ್ಯಕ್ಕನುಗುಣವಾಗಿ ಶಾಲಾ ವೇಳಾಪಟ್ಟಿಯನ್ನು ಹೊಂದಿಸಿಕೊಳ್ಳುವಿಕೆ;
- ಪರ್ಯಾಯ ಶಾಲೆಗಳ/ ಔಪಚಾರಿಕೇತರ ಶಿಕ್ಷಣ ಕೇಂದ್ರಗಳ ಸ್ಥಾಪನೆ, ಶಾಲೆ ಬಿಟ್ಟವರಿಗಾಗಿ ಲಘು ಅವಧಿ ಕೋರ್ಸುಗಳು, ವಸತಿ ಶಾಲೆಗಳು, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಂತರ್ಗತ ಶಿಕ್ಷಣ, ವಲಸೆ ಹೋಗುವವರ ಮಕ್ಕಳು ಮತ್ತು ಗುಡ್ಡಗಾಡು ಜನಾಂಗದವರ ಮಕ್ಕಳಿಗೆ ವಿಶೇಷ ಶಿಕ್ಷಣ ಸೌಲಭ್ಯಗಳು;
- ಬ್ರಿಡ್ಜ್ ಕೋರ್ಸುಗಳ ಮೂಲಕ ಮಕ್ಕಳು ಮೂಲವಾಹಿನಿಗೆ ಮರಳಿ ಬರುವಂತೆ ವ್ಯವಸ್ಥೆ;
- ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಶಿಕ್ಷಕರ ನೇಮಕಾತಿ; ಈ ಶಿಕ್ಷಕರಿಗೆ ವಿಶೇಷ ತರಬೇತಿ;
- ಅಕ್ಷರ ದಾಸೋಹ, ಆಹಾರ ಧಾನ್ಯಗಳು, ಸಮವಸ್ತ್ರ, ಪಠ್ಯಪುಸ್ತಕ, ನೋಟು ಪುಸ್ತಕ, ಹಾಜರಾತಿ ಪಾರಿತೋಷಕಗಳು, ಉಚಿತ ಬಸ್ ಪಾಸ್ ಇತ್ಯಾದಿ ಸೌಲಭ್ಯಗಳು;
- ಸಮುದಾಯದ ಭಾಗವಹಿಕೆಯಿಂದ ಶಾಲಾ ಸಬಲೀಕರಣ;
- ಶಿಕ್ಷಣದ ಗುಣಮಟ್ಟ ಹೆಚ್ಚಳ; ಆನಂದದಾಯಕ ಕಲಿಕಾ ಅಭ್ಯಾಸಗಳ ಅನ್ವಯ;
- ಶೈಕ್ಷಣಿಕ ಯೋಜನೆಗಳ ವಿಕೇಂದ್ರೀಕರಣ; ಇತ್ಯಾದಿ.

ಡಿಜಿಟಲ್ ಸಾಕ್ಷರತೆಯು ಸಾಂಪ್ರದಾಯಿಕ ಸಾಕ್ಷರತೆಯಷ್ಟೇ ಪ್ರಮುಖವಾದ ಅಗತ್ಯವೆನಿಸಿಕೊಳ್ಳುತ್ತಿದೆ. ಶೇ. 90ರಷ್ಟು ಉದ್ಯೋಗಗಳು ಬಹಳ ಶೀಘ್ರವೇ ನಾಜೂಕಾದ ಡಿಜಿಟಲ್ ಕೌಶಲಗಳ ಬೇಡಿಕೆಯನ್ನು ಒಡ್ಡುತ್ತವೆ. ಹೆಣ್ಣುಮಕ್ಕಳನ್ನು ಈ ಡಿಜಿಟಲ್ ಕೌಶಲಗಳಲ್ಲಿ ಕುಶಲಿಗಳನ್ನಾಗಿ ಮಾಡಿದರೆ ಅವರು ಹೆಚ್ಚು ಸ್ವಾವಲಂಬಿಗಳಾಗಿ ಪ್ರಗತಿಪರರಾಗಿ ಮುಂದುವರಿಯಲು ಸಾಧ್ಯವಾಗುತ್ತದೆ ಎಂದು ಕೆಲವು ಸಂಶೋಧನೆಗಳು ತಿಳಿಸಿವೆ.

ಲಿಂಗಸಮಾನತೆಯನ್ನು ಸಾಧಿಸುವಲ್ಲಿ ಶಿಕ್ಷಣ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಲಿಂಗ ಸಮಾನತೆಯಿಂದಾಗುವ ಪ್ರಯೋಜನಗಳನ್ನು ಮನದಟ್ಟುಮಾಡಬೇಕಾದುದು ಈ ದಿಸೆಯಲ್ಲಿ ಆಗಬೇಕಾದ ಕೆಲಸ. ಲಿಂಗ ಸಮಾನತೆಯ ವಿಚಾರವನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಮತ್ತು ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಅಗತ್ಯವಾದ ನಿಯಮಗಳನ್ನು ರೂಪಿಸುವುದು ಮಾತ್ರವಲ್ಲ, ಅದನ್ನು ಕಡ್ಡಾಯವಾಗಿ ಜಾರಿಗೆ ತರುವುದು ಇತ್ಯಾದಿ ಕ್ರಮಗಳು ಸಂವಿಧಾನದ ಸಮಾನತೆಯ ಆದರ್ಶಗಳನ್ನು ಸಾಧಿಸಲು ಅತ್ಯಂತ ಸಹಾಯಕವಾಗುತ್ತವೆ. ಇಂತಹ ಪ್ರಯತ್ನಗಳು ಶಿಕ್ಷಣ ಪಡೆದ ಸಮಾಜವನ್ನು ರೂಪಿಸುತ್ತದೆ ಕೂಡ. ಅಂತಿಮವಾಗಿ ಸಾಮಾಜಿಕ ಮನೋಧರ್ಮದಲ್ಲಿ ವ್ಯತ್ಯಾಸವಾಗಬೇಕಾದ ಅಗತ್ಯವೂ ಇದೆ.

ಭಾರತದಲ್ಲಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಏಕರೂಪದ ಪಠ್ಯಕ್ರಮವಿರುವುದಾದರೂ ಇರುವ ಪಠ್ಯಕ್ರಮವೇ ಲಿಂಗಭೇದವನ್ನು ಬೆಳೆಸುತ್ತದೆ. ಅಧ್ಯಾಪಕರು, ಶಾಲೆಯ ಸಿಬ್ಬಂದಿಗಳು ಬಳಸುವ ಅಭಿವ್ಯಕ್ತಿಗಳು, ಪಠ್ಯಪುಸ್ತಕಗಳು, ಕೊಡುವ ಉದಾಹರಣೆಗಳು, ದೈನಂದಿನ ಶಾಲಾ ಜೀವನ ಕ್ರಮಗಳು ಎಲ್ಲವೂ ಒಂದು ರೀತಿಯಲ್ಲಿ ಲಿಂಗತಾರತಮ್ಯವನ್ನು ಕೆಲವೊಮ್ಮೆ ಪ್ರತ್ಯಕ್ಷವಾಗಿ ಮತ್ತೆ ಕೆಲವು ಬಾರಿ ಪರೋಕ್ಷವಾಗಿ ತೋರಿಸುತ್ತವೆ. ಈ ಎಲ್ಲದರ ಬಗ್ಗೆ ಅತ್ಯಂತ ಹೆಚ್ಚಿನ ಸಂವೇದನಾಶೀಲತೆಯಿಂದ ಆಲೋಚಿಸಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಶಾಲೆ, ಅಧ್ಯಾಪಕರು ಮತ್ತು ಇತರ ಸಿಬ್ಬಂದಿ ವರ್ಗ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಜೊತೆಗೆ ಅಧ್ಯಾಪಕರಿಗೆ ಲಿಂಗ ಸಂವೇದನಾಶೀಲತೆಗೆ ಸಂಬಂಧಿಸಿದ ವಿಶೇಷ ತರಬೇತಿ ನೀಡಿ ಅವರು ಅರಿತೋ ಅರಿಯದೆಯೋ ಲಿಂಗ ತಾರತಮ್ಯದ ಬೆಳವಣಿಗೆಗೆ ಕಾರಣರಾಗುವುದನ್ನು ತಡೆಯಬೇಕಾಗಿದೆ. ಜೊತೆಗೆ

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಶಿಕ್ಷಕರ ನೇಮಕವೂ ಹೆಣ್ಣುಮಕ್ಕಳ ದಾಖಲಾತಿ ಮತ್ತು ಉಳಿಕೆಯನ್ನು ಹೆಚ್ಚಿಸುವುದರ ಮೂಲಕ ಇತ್ಯಾತ್ಮಕ ಪರಿಣಾಮವನ್ನು ಉಂಟುಮಾಡುತ್ತದೆ ಎಂದು ಅಧ್ಯಯನಗಳು ತೋರಿಸಿಕೊಟ್ಟಿವೆ.

ಮಹಿಳೆ ಕೇವಲ ಮನೆಗೆ ಸೀಮಿತಳಾದವಳಲ್ಲ; ಆಕೆ ಒಬ್ಬ ಶಿಕ್ಷಕಿಯಾಗಿ, ವೈದ್ಯೆಯಾಗಿ, ಪ್ರಾಧ್ಯಾಪಕಿಯಾಗಿ, ಇಂಜಿನಿಯರ್ ಆಗಿ, ವಿಜ್ಞಾನಿಯಾಗಿ ರಾಜಕೀಯ ಧುರೀಣೆಯಾಗಿ ಯಶಸ್ವಿಯಾಗಿದ್ದಾಳೆ ಎಂಬುದನ್ನು ಶಾಲೆ ಮುಖಾಮುಖಿಯಾಗಿ ತಿಳಿಸುವುದರ ಮೂಲಕ, ಶಾಲೆಗಳಲ್ಲಿ ಅದನ್ನು ಬಿಂಬಿಸುವ ಚಿತ್ರಗಳನ್ನು ಪ್ರದರ್ಶಿಸುವ ಮೂಲಕ, ಅವರ ಕುರಿತ ಪುಸ್ತಕಗಳನ್ನು ಶಾಲೆಯಲ್ಲಿರಿಸಿ ಅದನ್ನು ಓದುವಂತೆ ಮಕ್ಕಳನ್ನು ಪ್ರೋತ್ಸಾಹಿಸುವುದರ ಮೂಲಕ ಮಹಿಳೆಯರ ಬಗ್ಗೆ ಗೌರವವನ್ನು ಮೂಡಿಸುವುದರ ಜೊತೆಗೆ ಹೆಣ್ಣುಮಕ್ಕಳಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸಗಳನ್ನು ಹೆಚ್ಚಿಸಬೇಕು. ಲಿಂಗ ಸಂವೇದನಾಶೀಲತೆಯನ್ನೊಳಗೊಂಡ ಜೀವನ ಕೌಶಲದ ಉಪಕ್ರಮವನ್ನು ಬೋಧನೆಯಲ್ಲಿ ಅನ್ವಯಿಸಿಕೊಳ್ಳುವುದು ಅತ್ಯಂತ ಪ್ರಮುಖವಾದುದು.

ಇಂದಿನ ಹೆಣ್ಣುಮಕ್ಕಳು ಶಿಕ್ಷಣವನ್ನು ಬಯಸುತ್ತಾರೆಯೇ ವಿನಾ ವಿವಾಹವನ್ನಲ್ಲ; ಪ್ರೋತ್ಸಾಹಿಸಿದರೆ ಅವರು ಉತ್ತಮ ಶಿಕ್ಷಣ ಪಡೆಯಬಲ್ಲ ಸಾಮರ್ಥ್ಯವುಳ್ಳವರಾಗಿದ್ದಾರೆ ಎಂಬುದನ್ನು ಅನೇಕ ಅಧ್ಯಯನಗಳು ತೋರಿಸಿಕೊಟ್ಟಿವೆ.

ರೇಣು ಹದಿನಾಲ್ಕು ವರ್ಷದ ಹುಡುಗಿ, ಶ್ರಾವಸ್ತಿ ಜಿಲ್ಲೆಯ ನಾತ್‌ಪೂರ್ವ ಹಳ್ಳಿಯವಳು. ಅವಳು ಮೊನ್ನೆಮೊನ್ನೆಯವರೆಗೆ ಅವಳು ಇತರ ಮಕ್ಕಳೊಂದಿಗೆ ಆಡಿಕೊಂಡು ಖುಷಿಯಾಗಿದ್ದಳು. ಅವಳು ಮೈನೆರೆದಳೆಂಬ ಕಾರಣದಿಂದ ಅವರ ತಂದೆ ಈಗ ಅವಳಿಗೆ ವಿವಾಹಮಾಡಲು ನಿಶ್ಚಯಿಸಿದ್ದಾರೆ. ರೇಣುವಿಗೆ ಇದು ಇಷ್ಟವಿಲ್ಲ. ಅವಳು ಅದನ್ನು ಎಷ್ಟು ವಿಧದಲ್ಲಿ ತಿಳಿಸಿದರೂ ಅವರಿಗೆ ಅರ್ಥವಾಗುತ್ತಿಲ್ಲ. ಹೀಗಿರುವಾಗ ಅದೇ ಹಳ್ಳಿಯಲ್ಲಿ ಒಂದು ಮಹಿಳಾ ಸಬಲೀಕರಣಕ್ಕಾಗಿ ಹೋರಾಡುತ್ತಿರುವ ಸಂಸ್ಥೆ ಇರುವುದು ತಿಳಿದು ಬಂದಿತು. ರೇಣು ಅಲ್ಲಿಗೆ ಓಡಿಹೋದಳು. ಆಲ್ಲಿನ ಮಹಿಳಾ ಸದಸ್ಯರ ಸಹಾಯಪಡೆದು ಅವರನ್ನು ತಂದೆಯ ಬಳಿ ಕರೆತಂದಳು. ಅವರು ಅವಳ ತಂದೆಗೆ ರೇಣುವನ್ನು ಮದುವೆ ಮಾಡಿಕೊಟ್ಟರೆ ಆಗುವ ಅನಾಹುತಗಳನ್ನು ವಿವರಿಸಿದರು. ಅದು ಅವಳಿಗೆ ಹೇಗೆ ಮಾರಕವಾಗುತ್ತದೆ, ಇದರಿಂದ ಪೋಷಕರಿಗೆ ಸಿಗುವ ಶಿಕ್ಷೆಗಳೇನು ಎಂಬೆಲ್ಲ ವಿಷಯವನ್ನೂ ಮನದಟ್ಟು ಮಾಡಿದರು. ರೇಣುವಿನ ತಂದೆಗೆ ಎಲ್ಲವೂ ಅರ್ಥವಾಯಿತು. ಅವರೇ ಈಗ ರೇಣುವನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿದ್ದಾರೆ. ರೇಣು ಬಹಳ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದಾಳೆ.

ಸುಮಾರು 150 ದೇಶಗಳಲ್ಲಿ 30 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ನಡೆದ ಸಂಶೋಧನೆಗಳು, ಸಾಕ್ಷ್ಯಗಳು ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳು ಅಸಮಾನತೆಯನ್ನು ಗಮನಾರ್ಹ ಮಟ್ಟದಲ್ಲಿ ಕಡಿಮೆ ಮಾಡುತ್ತವೆ ಎಂಬುದನ್ನು ತೋರಿಸಿಕೊಟ್ಟಿವೆ. ಉದಾಹರಣೆಗೆ, ಸರ್ಕಾರವು ಉಚಿತವಾಗಿ ಸಾರ್ವಜನಿಕ ಗುಣಮಟ್ಟದ ಸೇವೆಗಳಲ್ಲಿ ಹಣ ಹೂಡಿಸಿದರೆ ಕುಟುಂಬಗಳು ಪಡೆಯುವ ಅತಿ ಅಲ್ಪ ಆದಾಯವನ್ನು ಅವುಗಳಿಗೆ ವ್ಯಯಮಾಡಬೇಕಾಗಿಲ್ಲ. ಇದರಿಂದ ಉತ್ಪಾದನೆ ಮತ್ತು ಅದರ ಗುಣಮಟ್ಟ ಎರಡೂ ಹೆಚ್ಚಾಗುತ್ತದೆ. ಸಾಮಾಜಿಕ ವ್ಯಯವು ಅಸಮಾನತೆಯನ್ನು ಶೇ. 20ರಷ್ಟು ಕಡಿಮೆಮಾಡುತ್ತದೆ ಎಂಬುದಕ್ಕೆ ನಿದರ್ಶನಗಳಿವೆ.

ಕೆಲಸಕ್ಕೆ ತಕ್ಕಂತೆ ಸಮರ್ಪಕ ವೇತನ ಮತ್ತು ಶಕ್ತಿಯುತವಾದ ನೌಕರ ಹಕ್ಕುಗಳ ಪಾಲನೆ ಅಸಮಾನತೆಯನ್ನು ಬಹಳಮಟ್ಟಿಗೆ ಕಡಿಮೆ ಮಾಡುತ್ತವೆ. ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗಿದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಕೆಳಗಿನ ಸಾಧನವನ್ನು ಬಳಸಿ ಐದು ಹುಡುಗಿಯರ ಕುರಿತು ಮಾಹಿತಿ ಸಂಗ್ರಹಿಸಿ. ಈ ಹೇಳಿಕೆಗಳಿಗೆ ಉತ್ತರ 'ಸತ್ಯವಲ್ಲ' ಎಂದಾದರೆ ವಿವರ ಸಂಗ್ರಹಿಸಿ.

ಕೆಳಗಿನ ಹೇಳಿಕೆಗಳನ್ನು ನಿಮ್ಮ ಜೀವನಾನುಭವಕ್ಕೆ ಹೊಂದಿಸಿ ಆಲೋಚಿಸಿ. ಈ ಹೇಳಿಕೆಗಳು ನಿಮ್ಮ ಬದುಕಿಗೆ ಸಂಬಂಧಿಸಿದಂತೆ 'ಸತ್ಯ'ವಾದರೆ ಮೊದಲನೇ ಕಾಲಂನಲ್ಲಿ, ಸತ್ಯವಲ್ಲವಾದರೆ ಎರಡನೇ ಕಾಲಂನಲ್ಲಿ '✓' ಚಿಹ್ನೆಯ ಮೂಲಕ ಸೂಚಿಸಿರಿ.

| | | ಸತ್ಯ | ಸತ್ಯವಲ್ಲ |
|---|---|---|---|
| | **ಹೆಣ್ಣು ಎಂಬ ಕಾರಣಕ್ಕಾಗಿ ________** | | |
| 1 | ನಾನು ಯಾವ ಅಸಮಾನತೆಯನ್ನೂ ಅನುಭವಿಸಿಲ್ಲ | | |
| 2 | ಯಾವ ಬೇಸರದ ಸನ್ನಿವೇಶಗಳನ್ನೂ ಎದುರಿಸಿಲ್ಲ | | |
| 3 | ಯಾವ ಸನ್ನಿವೇಶದಲ್ಲೂ ಅವಮಾನಿತಳಾಗಿಲ್ಲ | | |
| 4 | ಸ್ವಾತಂತ್ರ್ಯವನ್ನು ಕಳೆದುಕೊಂಡಿಲ್ಲ | | |

## 4.4.4. ಸಾರಾಂಶಿಸೋಣ

- ಸಮಾಜದಲ್ಲಿನ ಸದಸ್ಯರಲ್ಲಿ ಕೆಲವರಿಗೆ ಇತರರಿಗಿಂತ ಹೆಚ್ಚಿನ ಅವಕಾಶಗಳು, ಸಂಪತ್ತು ಇರುವ ನ್ಯಾಯವಲ್ಲದ ಸನ್ನಿವೇಶವನ್ನು ಅಸಮಾನತೆ ಎಂದು ಹೇಳಲಾಗುತ್ತದೆ. ಆರ್ಥಿಕ ದೃಷ್ಟಿಯಿಂದ, ಸಮಾಜದ ವಿವಿಧ ಗುಂಪುಗಳಲ್ಲಿ ಹಣ ಮತ್ತು ಅವಕಾಶಗಳನ್ನು ಸಮನಾಗಿ ಹಂಚಿಕೆಯಾಗಿಲ್ಲದಿರುವ ಸ್ಥಿತಿಯೇ ಅಸಮಾನತೆ.
- ಶೈಕ್ಷಣಿಕ ಸಂಪನ್ಮೂಲಗಳ ಅಸಮಾನ ಹಂಚಿಕೆಯೇ ಶೈಕ್ಷಣಿಕ ಅಸಮಾನತೆ. ಇದು ಶಾಲಾ ನಿಧಿಯನ್ನೂ ಒಳಗೊಂಡಂತೆ, ಆದರೆ ಅದಕ್ಕೆ ಮಾತ್ರ ಪರಿಮಿತವಾಗದೆ, ಅರ್ಹ ಹಾಗೂ ಅನುಭವಸ್ಥ ಶಿಕ್ಷಕರು, ಪುಸ್ತಕಗಳು, ತಂತ್ರಜ್ಞಾನ ಇವುಗಳಿಗೆ ಸಂಬಂಧಿಸಿದಂತೆ ಸಾಮಾಜಿಕವಾಗಿ ವಂಚಿತರಾದ ಜನಗಳಿಗೆ ಸಂಬಂಧಿಸಿದ ಆಗಿರುವ ಅಸಮಾನತೆಯನ್ನು ಸೂಚಿಸುತ್ತದೆ.
- ಈ ಶೈಕ್ಷಣಿಕ ಅಸಮಾನತೆ ಎಂಬುದು ಇಂದಿಗೂ ನಡೆದುಕೊಂಡು ಬರುತ್ತಿರುವ ಒಂದು ಪ್ರಕ್ರಿಯೆ ಅಥವಾ ವ್ಯವಸ್ಥೆ. ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿ ಶಿಕ್ಷಣದ ಮೇಲೆ ಪ್ರಭಾವ ಬೀರುತ್ತದೆ.
- ಈ ಶೈಕ್ಷಣಿಕ ಅಸಮಾನತೆಗೆ ಸಾಮಾಜಿಕ, ಆರ್ಥಿಕ, ಪರಿಸರ, ಲಿಂಗತ್ವ ಅಸಮಾನತೆ ಇತ್ಯಾದಿ ಕಾರಣಗಳಿವೆ.
- ಇವುಗಳೆಲ್ಲವನ್ನೂ ಶಿಕ್ಷಣದಿಂದ ಮಾತ್ರ ನಿವಾರಿಸಲು ಸಾಧ್ಯ.
- ಶಿಕ್ಷಣದಿಂದ ಆರ್ಥಿಕ, ಸಾಮಾಜಿಕ ಮತ್ತು ಲಿಂಗತ್ವ ಅಸಮಾನತೆಗಳನ್ನು ನಿವಾರಿಸಬೇಕು.
- ಆದುದರಿಂದ ಎಲ್ಲರಿಗೂ ಶಿಕ್ಷಣ ತಲುಪುವ ಕ್ರಮಗಳನ್ನು ಗಂಭೀರವಾಗಿ ಕೈಗೊಳ್ಳಬೇಕು.

## 4.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನೀವು ಗುರುತಿಸಿದ ಅಂಶಗಳ ಆಧಾರದ ಮೇಲೆ, ನೀವು ಮಾಡಿಕೊಂಡ ಟಿಪ್ಪಣಿಯನ್ನು ಬಳಸಿ 'ಶಿಕ್ಷಣದಲ್ಲಿ ಅಸಮಾನತೆಗೆ ಕಾರಣಗಳು' ಎಂಬ ವಿಷಯದ ಕುರಿತು ಒಂದು ಪ್ರಬಂಧವನ್ನು ತಯಾರಿಸಿ. ಅದನ್ನು ನಿಮ್ಮ ತರಗತಿಯಲ್ಲಿ ಮಕ್ಕಳೊಂದಿಗೆ, ಸಹಶಿಕ್ಷಕರೊಂದಿಗೆ, ಸಹಪಾಠಿಗಳೊಂದಿಗೆ ಹಂಚಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಉತ್ತರ 'ಸತ್ಯವಲ್ಲ' ಎಂದಾದರೆ ಕಾರಣ ತಿಳಿದು ನಿಮ್ಮ ಹಂತದಲ್ಲಿ ಸಹಾಯಮಾಡಬಹುದಾದ ಕಾರ್ಯಯೋಜನೆಯನ್ನು ಹಾಕಿಕೊಂಡು ಅನ್ವಯಿಸಿ.

## 4.4.6 ಘಟಕಾಂತ್ಯ ಅಭ್ಯಾಸಗಳು

1. ಶಿಕ್ಷಣದಲ್ಲಿ ಅಸಮಾನತೆಗೆ ಕಾರಣಗಳನ್ನೂ ಪರಿಹಾರ ಕ್ರಮಗಳನ್ನೂ ವಿವರಿಸಿ.

## 4.4.7. ಪರಾಮರ್ಶನ ಸೂಚಿ


1. NCTE (2003). Discrimination based on sex, caste, religion and disability.
2. Jacquelynne S. Eccles, Understanding Women's Educational and Occupational Choices, Psychology of Women Quarterly,18(1994), 585.

   Sarah Winslow (2010). Gender Iequality and Time Allocations Among Academic Faculty, Gender & Society.
3. http://www.legalservicesindia.com/article/1448/The-Role-of-Education-Sector-in-Removing-Gender-Inequality.html
4. https://inequalityproject.wordpress.com/inequality-in-education/
5. https://www.uniassignment.com/essay-samples/education/what-is-meant-by-educational-inequality-education-essay.php
6. https://en.reset.org/blog/education-inequality-india
7. https://www.weforum.org/agenda/2015/11/19-charts-that-explain-indias-economic-challenge/
8. https://www.thehindubusinessline.com/opinion/indias-high-inequality-is-hurting-growth/article9998048.ecehttps://
9. https://www.livemint.com/Opinion/DuRPMPSqaaqCDLoNMgRAbL/The-class-divide-in-Indian-education-system.html (for next lesson)
10. https://www.un.org/en/development/desa/policy/wess/wess_dev_issues/dsp_policy_01.pd
11. Moffitt, K. (2017). What Is Social Inequality in Sociology? - Definition, Effects & Causes. Retrieved from http://study.com/academy/lesson/what-is-socialinequality-in-sociology-definition-effects-causes.htm
12. Walker, D. C. (2007). New Dimensions of Social Inequality. Retrieved from http://www.ceelbas.ac.uk/research/socialinequality
13. http://www.cbgaindia.org/policy-brief/major-dimensions-of-inequalities-in-india-gender/
14. https://www.spi.ox.ac.uk/education-social-policies-and-inequalities

15. https://bold.expert/inequality-is-todays-greatest-challenge-to-fostering-learning/?gclid=CjwKCAjwhbHlBRAMEiwAoDA34y90TXfF72HiQYMEmObCFb14uQuFAlXizjxvEvNz9PZ73bChRvgbUBoCMbkQAvD_BwE

16. https://www.thecitizen.in/index.php/en/NewsDetail/index/8/5546/Why-We-Must-Pay-Attention-To-Inequality-For-Indias-Development

17. https://en.unesco.org/themes/inclusion-in-education

18. https://www.ey.com/gl/en/about-us/corporate-responsibility/ey-corporate-responsibility-reducing-inequality-in-educational-opportunity

19. https://www.pri.org/stories/2013-02-27/india-education-policy-increasing-inequality

20. https://www.pri.org/stories/2013-02-27/india-education-policy-increasing-inequality

21. https://www.countercurrents.org/sindhi030915.htm

22. https://www.newsclick.in/unescos-education-monitoring-report-points-growing-inequality-education-india

23. https://www.mapsofindia.com/my-india/education/gap-between-private-and-public-schools-how-it-is-hurting-india

24. http://schoolsofequality.com/why-inequality-in-india-is-on-the-rise/

25. https://en.wikipedia.org/wiki/Educational_equity

*************

# ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ: ಕಾಳಜಿಗಳು ಮತ್ತು ವಿಚಾರಗಳು

## ಘಟಕ–5 : ಶಾಲಾ ಶಿಕ್ಷಣದಲ್ಲಿ ಅಸಮಾನತೆ: ಸರ್ಕಾರಿ–ಖಾಸಗಿ ಶಾಲೆಗಳು, ಗ್ರಾಮ–ನಗರ ಶಾಲೆಗಳು, ಏಕೋಪಾಧ್ಯಾಯ ಶಾಲೆಗಳು, ಹಾಗೂ ಇತರ ರೀತಿಯ ಅಸಮಾನತೆಗಳು ಮತ್ತು ಈ ಅಸಮಾನತೆಗೆ ಕಾರಣವಾದ ಪ್ರಕ್ರಿಯೆಗಳು

### ಘಟಕದ ರಚನೆ


4.5.1. ಕಲಿಕೆಯ ಉದ್ದೇಶಗಳು

4.5.2. ಪೀಠಿಕೆ

4.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.5.3.1. ಶಾಲಾ ವಿಧಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4.5.3.2. ಶಾಲೆಗಳಲ್ಲಿನ ವ್ಯತ್ಯಾಸಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

4.5.4. ಸಾರಾಂಶಿಸೋಣ

4.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

4.5.6. ಘಟಕಾಂತ್ಯ ಅಭ್ಯಾಸಗಳು

4.5.7. ಪರಾಮರ್ಶನ ಸೂಚಿ


### 4.5.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಅಸಮಾನತೆಗೆ ಕಾರಣವಾಗುವ ವಿವಿಧ ರೀತಿಯ ಶಾಲೆಗಳನ್ನು ವಿವರಿಸುವರು;
- ವಿವಿಧ ರೀತಿಯ ಶಾಲೆಗಳ ನಡುವಣ ವ್ಯತ್ಯಾಸಗಳನ್ನು ವಿಶ್ಲೇಷಿಸುವರು; ಮತ್ತು
- ಶಾಲೆಗಳಲ್ಲಿ ಅಸಮಾನತೆಯನ್ನು ಹೋಗಲಾಡಿಸುವ ಮಾರ್ಗೋಪಾಯಗಳನ್ನು ಸ್ಪಷ್ಟಪಡಿಸುವರು.

### 4.5.2. ಪೀಠಿಕೆ

ಅಸಮಾನತೆ ಎಂಬುದು ಎಲ್ಲ ಸಮಾಜದಲ್ಲೂ ಕಾಣುವ ಅಂಶ ಎಂಬುದನ್ನು ನಾವು ಈ ಹಿಂದಿನ ಪಾಠಗಳಲ್ಲಿ ತಿಳಿದಿದ್ದೇವೆ. ಈ ಅಸಮಾನತೆಯ ಕಾರಣಗಳನ್ನೂ ವಿಶ್ಲೇಷಿಸಿದ್ದೇವೆ. ಇದರ ಪರಿಣಾಮಗಳನ್ನೂ ಮನಗಂಡಿದ್ದೇವೆ. ಇದು ನಮ್ಮ ಸಮಾಜದಲ್ಲೂ ಕಾಣುವ ಅಂಶ. ಇದು ಅನಾದಿ ಕಾಲದಿಂದಲೂ ಅದರ ಪರಿಣಾಮಗಳನ್ನು ಬೀರುತ್ತಲೇ ಇದೆ. ಸಮಾಜದ ಎಲ್ಲ ಸಂಸ್ಥೆಗಳಲ್ಲೂ ಈ ಅಸಮಾನತೆಯ ಅಂಶ ಇದೆ.

ಶಾಲೆಯೂ ಇದಕ್ಕೆ ಹೊರತಲ್ಲ. ಶಾಲೆಯಲ್ಲಿ ವಿವಿಧ ವಿಷಯಗಳಲ್ಲಿ ಅಸಮಾನತೆ ಇದ್ದು, ಇದಕ್ಕೆ ಕಾರಣಗಳೇನು ಮತ್ತು ಅದನ್ನು ಹೋಗಲಾಡಿಸಲು ಏನು ಮಾಡಬಹುದು ಇತ್ಯಾದಿ ಅಂಶಗಳನ್ನು ಈ ಘಟಕದಲ್ಲಿ ಚರ್ಚಿಸೋಣ.

## 4.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.5.3.1. ಶಾಲಾ ವಿಧಗಳು

ಭಾರತದ ಸನ್ನಿವೇಶದಲ್ಲಿ ಕಂಡುಬರುವ ವಿವಿಧ ರೀತಿಯ ಶಾಲೆಗಳು ಅಸಮಾನತೆಯನ್ನು ಹುಟ್ಟುಹಾಕಲು ಒಂದು ಪ್ರಮುಖ ಕಾರಣ. ಈ ವಿವಿಧ ರೀತಿಯ ಶಾಲೆಗಳು ಯಾವುವು, ಅವು ಹೇಗೆ ಅಸಮಾನತೆಯನ್ನು ಹುಟ್ಟುಹಾಕುತ್ತದೆ ಎಂಬುದನ್ನು ನೋಡೋಣ.

ನಮ್ಮ ಸಮಾಜದ ಮಕ್ಕಳು ವಿವಿಧ ಶಾಲೆಗಳಿಗೆ ಹೋಗುವುದನ್ನು ನಾವು ಗಮನಿಸಿದ್ದೇವೆ. ಈ ಪ್ರತಿ ಶಾಲೆಯನ್ನೂ ನಾವು ಕೆಲವು ಮಾನದಂಡಗಳ ಆಧಾರದ ಮೇಲೆ ವರ್ಗೀಕರಿಸಬಹುದು. ನಿಮ್ಮ ಶಾಲೆಯನ್ನೂ ಒಂದು ನಿರ್ದಿಷ್ಟ ವರ್ಗದ ಅಡಿಯಲ್ಲಿ ಇಡಲಾಗಿದೆ. ಅದು ಯಾವ ವರ್ಗ ಎಂಬುದನ್ನು ನೆನಪಿಸಿಕೊಳ್ಳಿ. ನಿಮ್ಮ ಶಾಲೆಯನ್ನು ಆ ವರ್ಗದಲ್ಲಿಡಲು ಆಧಾರವಾಗಿರುವ ಮಾನದಂಡ ಯಾವುದು ಎಂಬುದನ್ನೂ ಗಮನಿಸಿ.

ಶಾಲೆಯ ಮಾಲೀಕತ್ವದ ಆಧಾರದ ಮೇಲೆ ಶಾಲೆಗಳನ್ನು ವರ್ಗಾಯಿಸಿರುವುದುಂಟು. ಶಾಲೆಯನ್ನು ನಿರ್ವಹಿಸುವ ಸಂಸ್ಥೆ ಯಾವುದು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಶಾಲೆ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸರ್ಕಾರ ಈ ಮೂರರಲ್ಲಿ ಯಾರ ಆಡಳಿತಕ್ಕೆ ಸೇರುತ್ತದೆ ಎಂಬುದರ ಆಧಾರದ ಮೇಲೆ ಶಾಲೆಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ.

**ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು :** ಇವುಗಳು ಸರ್ಕಾರದಿಂದಲೇ ಸಂಪೂರ್ಣವಾಗಿ ಹಣಕಾಸಿನ ಒತ್ತಾಸೆ ಪಡೆದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಸಾರ್ವಜನಿಕ ವಲಯ ಅಥವಾ ಸ್ವಾಯತ್ತ ಸಂಘಟನೆಗಳಿಂದ ನಿರ್ವಹಿಸುವಂತಹವು. ಉದಾಹರಣೆಗೆ, ಕೇಂದ್ರೀಯ ವಿದ್ಯಾಲಯ, ಆಶ್ರಮ ಶಾಲೆಗಳು, ನವೋದಯ ಶಾಲೆಗಳು, ಸೈನಿಕ ಶಾಲೆಗಳು, ಮಿಲಿಟರಿ ಶಾಲೆಗಳು, ಏರ್ ಪೋರ್ಸ್ ಶಾಲೆಗಳು ಮತ್ತು ನೌಕಾ ಶಾಲೆಗಳು. ಕೇಂದ್ರೀಯ ವಿದ್ಯಾಲಯ ಸಂಘಟನೆಯ ಪ್ರಕಾರ ಒಟ್ಟು 1196 ಕೇಂದ್ರೀಯ ವಿದ್ಯಾಲಯಗಳಿದ್ದು, ಅವುಗಳಲ್ಲಿ ಮೂರು ಭಾರತದಿಂದ ಹೊರಗೆ ಇವೆ. ಇವುಗಳನ್ನು 25 ಪ್ರಾಂತಗಳಾಗಿ ವಿಂಗಡಿಸಿದ್ದು ಪ್ರತಿಯೊಂದೂ ಒಬ್ಬ ಡೆಪ್ಯುಟಿ ಕಮಿಷನರರ ನಾಯಕತ್ವದಲ್ಲಿ ನಡೆಯುತ್ತದೆ. ನವೋದಯ ವಿದ್ಯಾಲಯವು ಒಂದು ವಿಶಿಷ್ಟ ಪ್ರಯೋಗವಾಗಿದ್ದು, ಗ್ರಾಮೀಣ ಭಾಗಗಳಿಂದ ಪ್ರತಿಭಾವಂತ ಮಕ್ಕಳನ್ನು ಆಯ್ಕೆಮಾಡಿ ಅವರಿಗೆ ಗುಣಮಟ್ಟದ ಶಿಕ್ಷಣವನ್ನು ವಸತಿಯುಕ್ತ ಶಾಲಾ ವ್ಯವಸ್ಥೆಯಲ್ಲಿ ಕೊಡಲಾಗುತ್ತದೆ. ಇಂದು ಇಂತಹ 598 ಶಾಲೆಗಳಿವೆ.

**ಸ್ಥಳೀಯ ಮಂಡಳಿ ಶಾಲೆಗಳು :** ಇವು ಮುನ್ಸಿಪಲ್ ಸಭೆಗಳಿಂದ ಕಾರ್ಪೊರೇಷನ್‌ಗಳಿಂದ ಜಿಲ್ಲಾ ಪರಿಷತ್ತುಗಳಿಂದ ಪಂಚಾಯತ್ ಸಮಿತಿಗಳ ಅಧೀನದ ಆಡಳಿತದಲ್ಲಿರುತ್ತವೆ. ಉದಾಹರಣೆಗೆ ಮುನ್ಸಿಪಲ್ ಶಾಲೆಗಳು ಇತ್ಯಾದಿ.

**ಖಾಸಗಿ ಅನುದಾನಿತ ಶಾಲೆಗಳು :** ಇವುಗಳು ಖಾಸಗಿಯಾಗಿ ನಿರ್ವಹಿಸುವಂತಹವಾಗಿದ್ದು, ನಿಯತವಾಗಿ ನಿರ್ವಹಣಾ ಅನುದಾನವನ್ನು ಸರ್ಕಾರ, ಸ್ಥಳೀಯ ಮಂಡಳಿ ಅಥವಾ ಸಾರ್ವಜನಿಕ ಪ್ರಾಧಿಕಾರದಿಂದ ಪಡೆಯುತ್ತವೆ. ಇಲ್ಲಿನ ನೀತಿ ನಿಯಮಗಳು ಸರ್ಕಾರಿ ಶಾಲೆಗಳ ನೀತಿ ನಿಯಮಾವಳಿಗಳಿಗೆ ಸಮಾನವಾಗಿರುತ್ತದೆ. ಪಠ್ಯಕ್ರಮ, ಅಧ್ಯಯನ ಸಾಮಗ್ರಿಗಳು, ಪಠ್ಯವಸ್ತು, ಪರೀಕ್ಷೆ ಮುಂತಾಗಿ ಎಲ್ಲ ಅಂಶಗಳೂ ಸರ್ಕಾರಿ ನಿಯಮಾವಳಿಗನುಗುಣವಾಗಿರುತ್ತವೆ. ಹೈಸ್ಕೂಲು ತರಗತಿಗಳ ಪರೀಕ್ಷೆಗಳು ಸರ್ಕಾರಿ ಶಾಲೆಗಳ ಪರೀಕ್ಷೆಗಳಿಗನುಗುಣವಾಗಿ ನಡೆಯುತ್ತವೆ. ಶುಲ್ಕ, ಪಿ.ಟಿ.ಎ. ಶುಲ್ಕ ಇತ್ಯಾದಿಗಳನ್ನು ಸರ್ಕಾರಿ ನಿಯಮಗಳಿಗನುಗುಣವಾಗಿ ಸಂಗ್ರಹಿಸಲಾಗುತ್ತದೆ. ಶಿಕ್ಷಕರ ನೇಮಕವೂ ಸರ್ಕಾರದ ನೀತಿನಿಯಮಾವಳಿಗನುಗುಣವಾಗಿಯೇ ನಡೆಯುತ್ತದೆ.

**ಅನುದಾನ ರಹಿತ ಖಾಸಗಿ ಶಾಲೆಗಳು :** ಇವು ಒಬ್ಬ ವ್ಯಕ್ತಿಯಿಂದ ಅಥವಾ ಖಾಸಗಿ ಸಂಘಟನೆಯಿಂದ

ನಿರ್ವಹಿಸುವಂತಹವಾಗಿದ್ದು ಇದರ ಹಣಕಾಸು ವೆಚ್ಚವನ್ನು ಆಯಾ ಆಡಳಿತ ಮಂಡಳಿಯೇ ನೋಡಿಕೊಳ್ಳುತ್ತದೆ. ಇದಕ್ಕೆ ಸರ್ಕಾರ ಅಥವಾ ಸಾರ್ವಜನಿಕ ವಲಯದಿಂದ ಯಾವುದೇ ರೀತಿಯ ಹಣಕಾಸಿನ ಅನುದಾನವಾಗಲೀ ಒತ್ತಾಸೆಯಾಗಲೀ ಬೆಂಬಲವಾಗಲೀ ಇರುವುದಿಲ್ಲ. ವಿದ್ಯಾರ್ಥಿಗಳ ಶುಲ್ಕ ಸರ್ಕಾರಿ ಶಾಲೆಗಳಿಗಿಂತ ಭಿನ್ನವಾಗಿರುತ್ತದೆ. ಪ್ರವೇಶ ಪರೀಕ್ಷೆ ಅಥವಾ ಸಂದರ್ಶನ ಇತ್ಯಾದಿಗಳ ಮೂಲಕ ವಿದ್ಯಾರ್ಥಿಗಳನ್ನು ಶಾಲೆಗೆ ದಾಖಲಿಸಿಕೊಳ್ಳಲಾಗುತ್ತದೆ. ಇವು ಸಾಮಾನ್ಯವಾಗಿ ತಮ್ಮದೇ ಆದ ಪಠ್ಯಕ್ರಮವನ್ನು ಅನುಸರಿಸುತ್ತವೆ.

### ಶಿಕ್ಷಣ ಮಂಡಳಿಗಳು

ಶಾಲೆಗಳನ್ನು ವರ್ಗೀಕರಿಸುವ ಮತ್ತೊಂದು ಮಾನದಂಡವೆಂದರೆ ಅವು ಸಂಯೋಜಿತಗೊಂಡಿರುವ ಮಂಡಳಿಗಳು. ಈ ಮಂಡಳಿಗಳು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿವೆ. ಇವುಗಳಲ್ಲಿ ಪ್ರಮುಖವಾದವು:

### ರಾಷ್ಟ್ರೀಯ ಮಂಡಳಿಗಳು

ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್: Central Board of Secondary Education (CBSE): ಇದು 1962ರಲ್ಲಿ ಸ್ಥಾಪಿತವಾಯಿತು. ಇದು ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡಕ್ಕೂ ಸಂಯೋಜನೆಗೆ ಅವಕಾಶ ನೀಡುತ್ತದೆ. ಇಂದು ಸುಮಾರು 15,167 ಇಂತಹ ಶಾಲೆಗಳಿವೆ. ಈ ಮಂಡಳಿಯು 10 ಮತ್ತು 12ನೇ ತರಗತಿಗಳಿಗೆ All India Senior School Certificate Examination ಅನ್ನು ನಡೆಸುತ್ತದೆ.

ಕೌನ್ಸಿಲ್ ಆಫ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್ : (Council of Indian School Certificate Examinations) : ಇದು ಒಂದು ಖಾಸಗಿ ಸರ್ಕಾರಿ ಮಂಡಳಿ. ಇದು 10ನೇ ತರಗತಿಗೆ ICSE ಪರೀಕ್ಷೆಯನ್ನೂ 12ನೇ ತರಗತಿಗೆ ISC ಪರೀಕ್ಷೆಯನ್ನೂ ನಡೆಸುತ್ತದೆ. ಇದು 1956ರಲ್ಲಿ ಮೊದಲಾಯಿತು. ಸುಮಾರು 1900ಕ್ಕಿಂತ ಹೆಚ್ಚು ಶಾಲೆಗಳು ಈ ಮಂಡಳಿಗೆ ಸಂಯೋಜಿತಗೊಂಡಿವೆ. ಇದು ಮೂಲತಃ ಆಂಗ್ಲ–ಭಾರತೀಯರಿಗಾಗಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಲೋಕಲ್ ಪರೀಕ್ಷೆಗಳನ್ನು ಭಾರತದಲ್ಲಿ ನಡೆಸಲು ಸ್ಥಾಪಿತವಾದ ಮಂಡಳಿ.

### ಶಿಕ್ಷಣದ ರಾಜ್ಯ ಮಂಡಳಿಗಳು

### ರಾಜ್ಯ ಸರ್ಕಾರಿ ಮಂಡಳಿಗಳು:

ಇವು ರಾಜ್ಯದ ಸೆಕೆಂಡರಿ ಮತ್ತು ಉನ್ನತ ಸೆಕೆಂಡರಿ ಶಿಕ್ಷಣದ ಉನ್ನತಮಟ್ಟದ ರಾಜ್ಯ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತವೆ. ಇವುಗಳ ಪಠ್ಯವಸ್ತು ಭಾಗಶಃ ರಾಜ್ಯವನ್ನು ಕುರಿತ ಜ್ಞಾನವನ್ನು ನೀಡಲು ಮೀಸಲಾಗಿರುತ್ತದೆ. ಭಾರತದ ಬಹುಪಾಲು ಶಾಲೆಗಳು ರಾಜ್ಯ ಸರ್ಕಾರಿ ಮಂಡಳಿಗಳಿಗೆ ಸಂಯೋಜಿತಗೊಂಡಿವೆ. ಇದರಲ್ಲಿ ಅತ್ಯಂತ ಹಳೆಯದೆಂದರೆ, ಉತ್ತರ ಪ್ರದೇಶದ ಯು.ಪಿ. ಬೋರ್ಡ್ ಆಫ್ ಹೈ ಸ್ಕೂಲ್ ಅಂಡ್ ಇಂಟರ್ ಮೀಡಿಯಟ್ ಎಜುಕೇಷನ್.

**a. ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (National Institute of Open Schooling (NIOS)**

ಇದು ದೂರಶಿಕ್ಷಣದ ಶಿಕ್ಷಣ ಮಂಡಳಿ. ಇದು ಭಾರತದ ಸಂಯುಕ್ತ ಸರ್ಕಾರದ ಅಡಿಯಲ್ಲಿ ಕೆಲಸಮಾಡುವಂತಹುದು. ಇದು ಭಾರತ ಸರ್ಕಾರದ ಮಾನವ ಸಂಪನ್ಮೂಲ ಬೆಳವಣಿಗೆಯ ಸಚಿವಾಲಯದಿಂದ 1989ರಲ್ಲಿ ಪ್ರಾರಂಭವಾಯಿತು. ಇದಕ್ಕೆ ಮೊದಲು ನ್ಯಾಷನಲ್ ಓಪನ್ ಸ್ಕೂಲ್ ಎಂಬ ಹೆಸರಿತ್ತು. ಅತಿ ದೂರದಲ್ಲಿರುವವರಿಗೆ ಶಿಕ್ಷಣ ನೀಡುವುದು ಇದರ ಉದ್ದೇಶವಾಗಿತ್ತು. ಇದು ಸೆಕೆಂಡರಿ ಮತ್ತು ಉನ್ನತ ಸೆಕೆಂಡರಿ ಹಂತಗಳಲ್ಲಿ ಸಾಮಾನ್ಯ ಮತ್ತು ಶೈಕ್ಷಣಿಕ ಕೋರ್ಸುಗಳನ್ನು ನಡೆಸುವುದರ ಜೊತೆಗೆ ಹಲವಾರು ಔದ್ಯೋಗಿಕ, ಜೀವನ ಕೌಶಲಗಳ, ಮತ್ತು ಸಮುದಾಯ ಪ್ರೇರಿತ ಕೋರ್ಸುಗಳನ್ನು ನೀಡುತ್ತದೆ. ಸದ್ಯದಲ್ಲಿ ಇದರ ಅಡಿಯಲ್ಲಿ

3827 ಶೈಕ್ಷಣಿಕ ಕೇಂದ್ರಗಳೂ 1,830 ಔದ್ಯೋಗಿಕ ಕೇಂದ್ರಗಳೂ ಮತ್ತು 690 ಮಾನ್ಯತೆ ಪಡೆದ ಸಂಸ್ಥೆಗಳೂ ಇವೆ.

### ಅಂತರರಾಷ್ಟ್ರೀಯ ಮಂಡಳಿಗಳು

### International Baccalaureate Organisation (IBO):

ಇದು 1968ರಲ್ಲಿ ಪ್ರಾರಂಭವಾಯಿತು. ಜಿನೇವಾ, ಸ್ವಿಟ್ಜರ್ ಲ್ಯಾಂಡ್ ಆಧರಿತ ಅಂತರರಾಷ್ಟ್ರೀಯ ಸರ್ಕಾರೇತರ ಲಾಭರಹಿತ ಶಿಕ್ಷಣ ಸಂಸ್ಥೆ ಇದು. ಭಾರತದಲ್ಲಿ ಈ ಐಬಿ ವರ್ಲ್ಡ್ ಸ್ಕೂಲುಗಳು ಮೂರು ರೀತಿಯ ಕಾರ್ಯಕ್ರಮಗಳನ್ನು ನೀಡುತ್ತವೆ. ಅವೆಂದರೆ ಪ್ರೈಮರಿ ಈಯರ್ಸ ಪ್ರೋಗ್ರಾಂ, ಮಿಡಲ್ ಈಯರ್ಸ್ ಪ್ರೋಗ್ರಾಂ ಮತ್ತು ಐಬಿ ಡಿಪ್ಲೊಮಾ ಪ್ರೋಗ್ರಾಂಗಳು. ಭಾರತದಲ್ಲಿ 109 ಐಬಿ ಪ್ರೋಗ್ರಾಂ ನೀಡುವ ಶಾಲೆಗಳಿವೆ. ಈ ಕಾರ್ಯಕ್ರಮಗಳಿಗೆ 'ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟೀಸ' ನ ಮಾನ್ಯತೆ ಇದ್ದು ಇದು +2 ಹಂತಕ್ಕೆ ಸಮನಾಗಿದೆ.

Cambridge International Examinations (CIE): ಇದನ್ನು ಮೊದಲು ಕೇಂಬ್ರಿಡ್ಜ್ ಇಂಟರ್ ನ್ಯಾಷನಲ್ ಎಕ್ಸಾಮಿನೇಷನ್ಸ್ ಎಂದು ಕರೆಯಲಾಗುತ್ತಿತ್ತು. ಇದು 1858ರಲ್ಲಿ ಪ್ರಾರಂಭವಾಯಿತು. ಭಾರತದಲ್ಲಿ ಈ ರೀತಿಯ 310 ಶಾಲೆಗಳಿವೆ.

### ಇತರ ಶಾಲೆಗಳು

ಇದಲ್ಲದೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಶಾಲೆಗಳಿದ್ದು, ಅವುಗಳನ್ನು ನಗರ ಶಾಲೆಗಳು, ಗ್ರಾಮೀಣ ಶಾಲೆಗಳು ಎಂದೂ ಕರೆಯಲಾಗುತ್ತದೆ. ಇದರ ಜೊತೆಗೆ ಏಕೋಪಾಧ್ಯಾಯ ಶಾಲೆಗಳೂ ಇವೆ. ಹೀಗೆ ವಿವಿಧ ರೀತಿಯ ಶಾಲೆಗಳ ಪರಿಚಯ ಮಾಡಿಕೊಂಡ ನಂತರ ಈ ಶಾಲೆಗಳ ನಡುವಣ ವ್ಯತ್ಯಾಸವೇನು, ಅವುಗಳು ಅಸಮಾನತೆಗೆ ಹೇಗೆ ಕಾರಣವಾಗುತ್ತವೆ ಎಂಬುದನ್ನು ನೋಡೋಣ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

1. ಶಾಲೆಗಳನ್ನು ವರ್ಗೀಕರಿಸಲಾಗಿರುವ ಮೂರು ಮಾನದಂಡಗಳನ್ನು ಹೆಸರಿಸಿ.
2. ರಾಷ್ಟ್ರಮಟ್ಟದಲ್ಲಿ ಎಷ್ಟು ಹಂತದ ಶಾಲೆಗಳಿವೆ?
3. ಯಾವುದಾದರೂ ಎರಡು ರಾಷ್ಟ್ರೀಯ ಶಿಕ್ಷಣ ಮಂಡಳಿಗಳನ್ನು ತಿಳಿಸಿ.

## 4.5.3.2. ಶಾಲೆಗಳಲ್ಲಿನ ವ್ಯತ್ಯಾಸಗಳು

### ಸರ್ಕಾರಿ ಮತ್ತು ಖಾಸಗಿ ಶಾಲೆಗಳು

ಯಾವುದೇ ಶುಲ್ಕವಿಲ್ಲದೆ ಪ್ರಾಥಮಿಕ ಅಥವಾ ಸೆಕೆಂಡರಿ ಹಂತಗಳಲ್ಲಿ ಶಿಕ್ಷಣ ನೀಡುವ ಶಾಲೆಗಳು ಸರ್ಕಾರಿ ಶಾಲೆಗಳು. ಇವುಗಳನ್ನು ಸ್ಥಳೀಯ, ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ನಡೆಸಲಾಗುತ್ತದೆ. ಈ ಸರ್ಕಾರಿ ಶಾಲೆಗಳು ಸರ್ಕಾರದಿಂದಲೇ ನಿಯಂತ್ರಿತವಾಗುವುದರಿಂದ ಇದರ ಪಠ್ಯಕ್ರಮವು ರಾಜ್ಯ ಅಥವಾ ಕೇಂದ್ರ ಹಂತಗಳಲ್ಲಿ ನಿರ್ಧಾರವಾಗುತ್ತದೆ. ಎಲ್ಲ ಸರ್ಕಾರಿ ಶಾಲೆಗಳೂ ಒಂದೇ ಪಠ್ಯಕ್ರಮವನ್ನು ಅನುಸರಿಸುತ್ತವೆ. ಇವುಗಳಿಗೆ ಪ್ರವೇಶ ಮತ್ತು ಪರೀಕ್ಷೆಗಳನ್ನೂ ಸರ್ಕಾರವೇ ನಿಗದಿಪಡಿಸುತ್ತವೆ. ಆಯಾ ಭೌಗೋಳಿಕ ಪ್ರದೇಶದ ಅಥವಾ ಸ್ಥಳಿಯ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಕಾರ್ಯ ಶಾಲೆಗೆ ಸೇರಿದುದು. ಶಾಲೆಗೆ ಸಂಬಂಧಿಸಿದಂತೆ ತಂತ್ರಜ್ಞಾನ ಇತ್ಯಾದಿ ಅಂಶಗಳಲ್ಲಿ ವ್ಯತ್ಯಾಸವಿರುವುದಾದರೂ ಸಾಮಾನ್ಯವಾಗಿ ಸರ್ಕಾರಿ ಶಾಲೆಗಳಲ್ಲಿ ಸಿಗುವ ಸೌಲಭ್ಯಗಳು ಖಾಸಗಿ ಶಾಲೆಗಳಿಗಿಂತ ಕಡಿಮೆ. ಅಧ್ಯಾಪಕರ ನೇಮಕಾತಿ ಕಾಲಕಾಲಕ್ಕೆ ಆಗುವುದಿಲ್ಲ. ಸರ್ಕಾರಿ ಶಾಲೆಗಳು ಅರ್ಹತೆ ಇರುವ ಶಿಕ್ಷಕರನ್ನು ಮಾತ್ರ ದಾಖಲುಮಾಡಿಕೊಳ್ಳುವುದಾದರೂ ಇಲ್ಲಿ ಮಕ್ಕಳ ದಾಖಲಾತಿಯ ಸಂಖ್ಯೆ ಕಡಿಮೆ.

ಖಾಸಗಿ ಶಾಲೆಗಳಲ್ಲಿ ಕೆಲವು ಅನುದಾನಿತವಾದರೆ ಹೆಚ್ಚಿನವು ಯಾವುದೇ ಅನುದಾನವನ್ನು ಪಡೆಯುವುದಿಲ್ಲ. ಇವು ಖಾಸಗಿಯವರಿಂದ ನಿಯಂತ್ರಿತವಾಗಿರುತ್ತದೆ. ವಿದ್ಯಾರ್ಥಿಗಳ ಶುಲ್ಕ ಇದರ ಆದಾಯದ ಪ್ರಮುಖ ಮೂಲ. ಇವುಗಳಲ್ಲಿ ಸರ್ಕಾರಿ ಶಾಲೆಗಳಿಗಿಂತ ಉತ್ತಮ ಸೌಲಭ್ಯಗಳಿರುತ್ತವೆ. ಸರ್ಕಾರಿ ಶಾಲೆಗಳಿಗೆ ಹೋಲಿಸಿದರೆ ತಂತ್ರಜ್ಞಾನದ ಲಭ್ಯತೆ ಉತ್ತಮವಾಗಿರುತ್ತದೆ. ಇವೂ ಸಾಮಾನ್ಯವಾಗಿ ಸರ್ಕಾರ ನಿರ್ಧರಿಸಿದ ಪಠ್ಯಕ್ರಮವನ್ನೇ ಅನುಸರಿಸುತ್ತವೆ. ಬೋಧನಾ ವಿಧಾನವನ್ನು ಶಾಲಾ ಮಂಡಳಿಯೇ ನಿರ್ಧರಿಸುತ್ತದೆ. ಶಾಲಾ ಆಡಳಿತಗಾರರೇ ಶುಲ್ಕವನ್ನೂ ನಿಗದಿಮಾಡುತ್ತಾರೆ. ವಿದ್ಯಾರ್ಥಿಗೆ ದಾಖಲಾತಿಗೆ ಅರ್ಹತೆಯನ್ನು ಇವರೇ ನಿರ್ಧರಿಸುತ್ತಾರೆ. ಅಧ್ಯಾಪಕರ ಅರ್ಹತೆಯನ್ನೂ ಆಡಳಿತ ಮಂಡಳಿಯೇ ನಿರ್ಧರಿಸುತ್ತದೆ. ಸರ್ಕಾರಿ ಮತ್ತು ಖಾಸಗಿ ಶಾಲೆಯ ನಡುವಿನ ವ್ಯತ್ಯಾಸಗಳನ್ನು ಕೆಳಗಿನ ಶೀರ್ಷಿಕೆಗಳಡಿಯಲ್ಲಿ ಗುರುತಿಸಬಹುದು:

**ವಿದ್ಯಾರ್ಥಿಗಳ ಹಿನ್ನೆಲೆ :** ಸಂವಿಧಾನಾತ್ಮಕ ಅವಕಾಶದಂತೆ ಸರ್ಕಾರಿ ಶಾಲೆಗಳು ಎಲ್ಲ ವಿದ್ಯಾರ್ಥಿಗಳಿಗೂ ಶಿಕ್ಷಣವನ್ನು ಉಚಿತವಾಗಿ ನೀಡುತ್ತವೆ. ಹಾಗಾಗಿ ಇಲ್ಲಿ ಮಕ್ಕಳ ಆಯ್ಕೆಗೆ ಅವಕಾಶವಿಲ್ಲ. ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ದಾಖಲಿಸಿಕೊಳ್ಳುವುದು ಈ ಶಾಲೆಗಳ ಕರ್ತವ್ಯವಾಗಿರುತ್ತದೆ. ಖಾಸಗಿ ಶಾಲೆಗಳಿಗೆ ಈ ರೀತಿಯ ಕಟ್ಟಳೆ ಇಲ್ಲ. ಅವರು ಅವರ ಆಯ್ಕೆಯ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಬಹುದು. ಸಾಮಾನ್ಯವಾಗಿ ಖಾಸಗಿ ಶಾಲೆಗಳಿಗೆ ದಾಖಲಾಗಬಯಸುವ ವಿದ್ಯಾರ್ಥಿಗಳು ಉತ್ತಮ ಸಮಾಜೋ–ಆರ್ಥಿಕ ಮಟ್ಟದ ಮಕ್ಕಳಾಗಿರುತ್ತಾರೆ. ಈ ಮಕ್ಕಳ ಪೋಷಕರು ಸಾಮಾನ್ಯವಾಗಿ ಶಿಕ್ಷಣ ಪಡೆದವರಾಗಿರುತ್ತಾರೆ. ಹಾಗಾಗಿ, ಇಲ್ಲಿ ಕಲಿಕೆಗೆ ಉತ್ತಮ ಪ್ರೋತ್ಸಾಹವಿರುತ್ತದೆ ಮತ್ತು ಶಾಲಾ ಫಲಿತಾಂಶವೂ ಉತ್ತಮವಾಗಿರುತ್ತದೆ. ಇದೇ ಪೋಷಕರ ಅಪೇಕ್ಷೆಯೂ ಆಗಿರುತ್ತದೆ.

**ಬೋಧನಾ ಮಾಧ್ಯಮ :** ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದು ಎಲ್ಲ ಪೋಷಕರ ಅಂತಿಮ ಕನಸು. ಸರ್ಕಾರಿ ಮತ್ತು ಖಾಸಗಿ ಶಾಲೆಗಳ ನಡುವೆ ಇರುವ ಪ್ರಮುಖ ವ್ಯತ್ಯಾಸ ಎಂದರೆ ಬೋಧನಾ ಮಾಧ್ಯಮ. ಬಹಳಷ್ಟು ಖಾಸಗಿ ಶಾಲೆಗಳ ಬೋಧನಾ ಮಾಧ್ಯಮದ ಭಾಷೆ ಇಂಗ್ಲಿಷ್. ಈ ಶಾಲೆಗಳು ವಿದ್ಯಾರ್ಥಿಗಳ ದಿನನಿತ್ಯದ ಜೀವನದಲ್ಲಿ ಇಂಗ್ಲಿಷನ್ನು ಅನ್ವಯಿಸಲು ಪ್ರಯತ್ನಿಸುತ್ತವೆ. ಇದು ಉನ್ನತ ಶಿಕ್ಷಣದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ. ಇಂಗ್ಲಿಷ್ ಬಳಕೆ ಪೋಷಕರಿಗೂ ಮಕ್ಕಳಿಗೂ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನವನ್ನು ನೀಡುತ್ತದೆ. ಇದು ಪೋಷಕರಿಗೆ ಉತ್ತಮ ಆಕರ್ಷಣೆ. ಈ ಅವಕಾಶ ಸರ್ಕಾರಿ ಶಾಲೆಗಳಲ್ಲಿ ಕಡಿಮೆ. ಇದು ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಅಸಮಾನತೆಯನ್ನು ಉಂಟುಮಾಡುತ್ತದೆ. ಇದಕ್ಕೆ ಭಾಷೆ ಮೂಲ ಕಾರಣವಲ್ಲ. ಸ್ಥಳೀಯ ಭಾಷೆಗಳಲ್ಲಿ ಕಲಿತವರಿಗೂ ಉತ್ತಮ ರೀತಿಯ, ಉತ್ತಮ ಮಟ್ಟದ ಉದ್ಯೋಗಗಳನ್ನು ಸೃಷ್ಟಿಸುವುದು ಸಮಾಜದ ಕರ್ತವ್ಯ. ಆದರೆ ಹಾಗಾಗುತ್ತಿಲ್ಲ. ಸ್ಥಳೀಯ ಭಾಷೆಯಲ್ಲಿ ಕಲಿತವರು ಉದ್ಯೋಗವಿಲ್ಲದೆ ಅಥವಾ ಅತಿ ಕಡಿಮೆ ವರಮಾನ ಬರುವ ಉದ್ಯೋಗಗಳಲ್ಲಿ ಸಿಲುಕಿಕೊಂಡು ಕಷ್ಟಪಡುವ ಪರಿಸ್ಥಿತಿ ಇದೆ. ಭಿನ್ನ ಮಾಧ್ಯಮಗಳಲ್ಲಿ ಕಲಿತಿರುವ ಆದರೆ ಸಮಾನ ಕೋರ್ಸು ಪಾಸುಮಾಡಿರುವ ವ್ಯಕ್ತಿಗಳಿಗೆ ಇಂದು ಸಮಾನ ಕೆಲಸಗಳು ಸಿಗುತ್ತಿಲ್ಲ. ಇದಕ್ಕೆ ಪುನಃ ದೇಶೀಯ ಸ್ತರದಲ್ಲಿ ಉದ್ಯೋಗಗಳ ಸೃಷ್ಟಿಯಾಗದೇ ಇರುವುದು.

**ಶಿಸ್ತಿನೊಂದಿಗೆ ಕಲಿಕೆ:** ಗುಣಮಟ್ಟದ ಶಿಕ್ಷಣದೊಂದಿಗೆ ಖಾಸಗಿ ಶಾಲೆಗಳಲ್ಲಿ ಮಕ್ಕಳಲ್ಲಿ ಶಿಸ್ತು ಮೂಡಿಸಲು ವಿಶೇಷ ಗಮನ ಕೊಡಲಾಗುತ್ತದೆ. ಸಮಯಪ್ರಜ್ಞೆ, ಆರೋಗ್ಯ ಅಭ್ಯಾಸಗಳು ಮತ್ತು ಸಮವಸ್ತ್ರ ಇತ್ಯಾದಿಗಳನ್ನು ನಿಯಮಿತವಾಗಿ ಗಮನಿಸಿ ತಿದ್ದಲಾಗುತ್ತದೆ. ಪುಸ್ತಕಗಳನ್ನಿಟ್ಟುಕೊಳ್ಳುವ ರೀತಿ, ಬರೆವಣಿಗೆಯ ಅಭ್ಯಾಸಗಳು, ನಡತೆಯ ರೀತಿಗಳು ಇವುಗಳನ್ನು ವಿಶೇಷ ಗಮನದಿಂದ ಕಲಿಸಲಾಗುತ್ತದೆ. ಮಗುವಿನ ವ್ಯಕ್ತಿತ್ವವನ್ನು ಅರಳಿಸುವ ಅಭ್ಯಾಸಗಳಿಗೆ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದೆ. ಈ ಅಂಶಗಳನ್ನು ಸಾಮಾನ್ಯೀಕರಣ ಮಾಡಿ ಹೇಳಲಾಗುವುದಿಲ್ಲವಾದರೂ ಹೆಚ್ಚಿನ ಖಾಸಗಿ ಶಾಲೆಗಳಲ್ಲಿ ಈ ಸ್ಥಿತಿ ಇದೆ. ಇದೇ ರೀತಿಯ ಅಭ್ಯಾಸಗಳಿರುವ ಸರ್ಕಾರಿ ಶಾಲೆಗಳೂ ಇಲ್ಲದಿಲ್ಲ. ಆದರೆ ಅದರ ಸಂಖ್ಯೆ ಕಡಿಮೆ. ಹಲವಾರು ಕಾರಣಗಳಿಂದ ಈ ಅಂಶಗಳಿಗೆ ಸರ್ಕಾರಿ ಶಾಲೆಗಳಲ್ಲಿ ಗಮನ ಕಡಿಮೆ.

**ಸಹ ಪಠ್ಯ ಚಟುವಟಿಕೆಗಳು:** ಖಾಸಗಿ ಶಾಲೆಗಳಲ್ಲಿ ಹಲವು ಬಗೆಯ ಸಹಪಠ್ಯ ಚಟುವಟಿಕೆಗಳಿದ್ದು ಹೆಚ್ಚಿನ

ಸಂಖ್ಯೆಯಲ್ಲಿ ಮಕ್ಕಳು ಅವುಗಳಲ್ಲಿ ಭಾಗವಹಿಸುತ್ತಾರೆ. ಇವು ಕಲೆ, ಕ್ರೀಡೆ, ವಿಜ್ಞಾನ ಇತ್ಯಾದಿ ಅನೇಕ ಅಂಶಗಳಲ್ಲಿ ಮಕ್ಕಳು ಬೆಳೆಯುವಂತೆ ಮಾಡುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಧೈರ್ಯ, ಸಮಾಜವನ್ನೆದುರಿಸುವ ವಿಶ್ವಾಸ, ಸಂವಹನ, ಆತ್ಮವಿಶ್ವಾಸ, ಆತ್ಮ ಗೌರವ ಹೆಚ್ಚುತ್ತದೆ. ಸಂಗೀತ, ಸಾಹಿತ್ಯ, ಚಿತ್ರಕಲೆ, ನಾಟಕ, ಇವುಗಳಿಂದ ವಿದ್ಯಾರ್ಥಿಗಳಲ್ಲಿ ಬಹುವಿಧದ ಪ್ರತಿಭೆ ಕುಡಿಯೊಡೆಯುತ್ತದೆ. ಇಂತಹ ಚಟುವಟಿಕೆಗಳು ಸರ್ಕಾರಿ ಶಾಲೆಗಳಲ್ಲಿ ಕಡಿಮೆ ಸಂಖ್ಯೆಯಲ್ಲಿರುತ್ತವೆ. ಇದಕ್ಕೆ ವಿಶೇಷ ಕಾರಣಗಳಿರುತ್ತದೆ.

ಸ್ಪರ್ಧೆ ಎಂಬುದು ಎಷ್ಟು ಸರಿಯೋ ತಪ್ಪೋ ಅದು ಬೇರೆಯೇ ವಿಷಯ. ಆದರೆ ಅದು ಪೋಷಕರಿಗೆ ಮಕ್ಕಳಿಗೆ ಬೇಕಾದ ವಿಷಯ. ಹಾಗಾಗಿ ಖಾಸಗಿ ಶಾಲೆಗಳು ಅವುಗಳಿಗೆ ಪ್ರೋತ್ಸಾಹ ನೀಡುತ್ತವೆ. ಖಾಸಗಿ ಶಾಲೆಗಳಲ್ಲಿನ ಆಚಾರ ವಿಚಾರಗಳು ಬಹಳಮಟ್ಟಿಗೆ ಪೋಷಕರ ಇಷ್ಟಾನಿಷ್ಟಗಳಿಗನುಗುಣವಾಗಿರುತ್ತದೆ. ಏಕೆಂದರೆ ಶಾಲೆಗಳನ್ನು ಬೆಳೆಸುವವರು ಅವರೇ. ಹಾಗಾಗಿ ಆಯಾ ಸಮಾಜದ ಸಮಕಾಲೀನ ಅಂಶಗಳು ಅವು ಒಳ್ಳೆಯದಿರಲಿ ಇಲ್ಲದಿರಲಿ, ಖಾಸಗಿ ಶಾಲೆಗಳಲ್ಲಿ ಬಿಂಬಿತವಾಗುತ್ತದೆ. ಇದು ಮಕ್ಕಳಿಗೆ ಹೆಚ್ಚು ಆಕರ್ಷಕವಾಗುತ್ತವೆ. ಸರ್ಕಾರಿ ಶಾಲೆಗಳು ಕೆಲವು ವಿಷಯಗಳಲ್ಲಿ ಹಿನ್ನೆಡೆ ಕಾಣುತ್ತವೆ. ಹೀಗಾಗಿ, ಸಮಾಜದಲ್ಲಿಯೂ ಖಾಸಗಿ ಶಾಲೆಯಲ್ಲಿ ಶಿಕ್ಷಣ ಪಡೆಯುವುದು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುವುದಕ್ಕಿಂತ ಹೆಚ್ಚಿನ ಸ್ಥಾನಮಾನವನ್ನು ಒದಗಿಸಿಕೊಡುತ್ತದೆ. ಇದೂ ಅಸಮಾನತೆಗೆ ಕಾರಣವಾಗುವ ಅಂಶ.

**ಶೈಕ್ಷಣಿಕ ಗುಣಮಟ್ಟ:** ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಹೆಚ್ಚು ಕಡಿಮೆ ಒಂದೇ ಪಠ್ಯಕ್ರಮವನ್ನು ಅನುಸರಿಸಲಾಗುತ್ತದೆ. ಆದರೆ ಖಾಸಗಿ ಶಾಲೆಗಳ ಫಲಿತಾಂಶ ಸರ್ಕಾರಿ ಶಾಲೆಗಳ ಫಲಿತಾಂಶಕ್ಕಿಂತ ಉತ್ತಮವಾಗಿರುತ್ತದೆ. ನಾಲ್ಕನೇ ತರಗತಿಯ ಸರ್ಕಾರಿ ಶಾಲೆಯ ಮಕ್ಕಳು ಎರಡನೇ ತರಗತಿಯ ಪಠ್ಯವನ್ನು ಗ್ರಹಿಸುವಲ್ಲಿ ಮತ್ತು ಮೂರನೇ ತರಗತಿಯ ಒಂದು ಸರಳ ಗಣಿತ ಲೆಕ್ಕವನ್ನು ಮಾಡುವಲ್ಲಿ ಸಮರ್ಥರಾಗಿರುವುದಿಲ್ಲ ಎಂಬುದನ್ನು ಸಂಶೋಧನೆಗಳು ತೋರಿಸಿಕೊಟ್ಟಿವೆ. ಈ ಎರಡು ರೀತಿಯ ಶಾಲೆಗಳ ಮಕ್ಕಳ ಸಾಧನೆಯಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಖಾಸಗಿ ಶಾಲೆಗಳು ಮಕ್ಕಳನ್ನು ಹೆಚ್ಚಿನ ಶ್ರಮದಿಂದ ತಯಾರು ಮಾಡುತ್ತವೆ ಎಂದು ಪೋಷಕರು ನಂಬುತ್ತಾರೆ. ಇದು ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಜಗತ್ತನ್ನು ಎದುರಿಸಲು ಸಹಾಯಮಾಡುತ್ತವೆ. ಹೈಯರ್ ಸೆಕೆಂಡರಿ ತರಗತಿಯ ನಂತರ ವೃತ್ತಿಪರ ಕೋರ್ಸುಗಳ ಪ್ರವೇಶ ಪರೀಕ್ಷೆಯನ್ನು ಎದುರಿಸುವ ಸಾಮರ್ಥ್ಯ ಇದಕ್ಕೆ ಒಂದು ಉದಾಹರಣೆ.

**ಸೌಲಭ್ಯಗಳು:** ಬಹಳಷ್ಟು ಸರ್ಕಾರಿ ಶಾಲೆಗಳಲ್ಲಿ ಪೀಠೋಪಕರಣ, ವಿದ್ಯುಚ್ಛಕ್ತಿ, ಗಾಳಿ, ಬೆಳಕು ಮುಂತಾದ ಮೂಲಭೂತ ಸೌಕರ್ಯಗಳೂ ಇರುವುದಿಲ್ಲ. ಅವರಿಗಿರುವ ಆರ್ಥಿಕ ಸಂಪನ್ಮೂಲಗಳೂ ಕಡಿಮೆಯೇ. ಅವು ಸಾಮಾನ್ಯವಾಗಿ ಪಂಚಾಯಿತಿ ಅಥವಾ ಶಾಲಾ ನಿರ್ವಹಣಾ ಸಮಿತಿಗಳಿಂದ ಸಿಗುವ ದೇಣಿಗೆಯನ್ನು ಅವಲಂಬಿಸಿರುತ್ತವೆ. ಇದಕ್ಕೆ ವಿರುದ್ಧವಾಗಿ ಖಾಸಗಿ ಶಾಲೆಗಳು ಸೂಕ್ತ ಪರಿಸರವನ್ನು ಒದಗಿಸಿ ಕಲಿಕೆಗೆ ಅನುಕೂಲಮಾಡಿಕೊಡುತ್ತವೆ. ಸೂಕ್ತ ಪೀಠೋಪಕರಣಗಳು, ಪ್ರಯೋಗಾಲಯ ಸೌಲಭ್ಯಗಳು, ವಿವಿಧ ಋತುಮಾನಗಳಲ್ಲಿ ತೊಂದರೆಯಾಗದ ಕಟ್ಟಡಗಳು ಮಕ್ಕಳ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಕ್ಕೆ ಪೂರಕವಾಗಿರುತ್ತವೆ. ಖಾಸಗಿ ಶಾಲೆಗಳು ಇದಕ್ಕಾಗಿ ಸಾಕಷ್ಟು ಹಣವನ್ನು ಹೂಡುತ್ತವೆ. ಶಾಲೆ ಆಕರ್ಷಕವಾಗಿರುವಂತೆ ಮಾಡುತ್ತವೆ. ಇದು ಪೋಷಕರನ್ನು ಮತ್ತು ಮಕ್ಕಳನ್ನು ಆಕರ್ಷಿಸುತ್ತದೆ. ಈ ರೀತಿಯ ಶಾಲೆಗಳಿಗೆ ಪ್ರವೇಶ ಪಡೆಯಲಾಗದ ಮಕ್ಕಳು ಅಸಮಾನತೆಯ ಪರಿಣಾಮವನ್ನು ಅನುಭವಿಸುತ್ತಾರೆ.

**ಸಿಬ್ಬಂದಿಯ ಬದ್ಧತೆ:** ಬಹಳಷ್ಟು ಸನ್ನಿವೇಶಗಳಲ್ಲಿ ಖಾಸಗಿ ಶಾಲೆಗಳ ಸಿಬ್ಬಂದಿಗಳ ಬದ್ಧತೆ ಸರ್ಕಾರಿ ಶಾಲೆಗಳ ಸಿಬ್ಬಂದಿಗಳ ಬದ್ಧತೆಗಿಂತ ಹೆಚ್ಚಾಗಿರುತ್ತದೆ. ಇದು ಉತ್ತಮ ಫಲಿತಾಂಶಗಳನ್ನು ತರುವಲ್ಲಿ ಸಹಕಾರಿಯಾಗುತ್ತದೆ. ಖಾಸಗಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವೂ ಉತ್ತಮವಾಗಿರುತ್ತದೆ. ಪೋಷಕರಲ್ಲೂ ಬದ್ಧತೆ ಇರುತ್ತದೆ.

**ಸೂಕ್ತ ಗಮನ:** ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಶಿಕ್ಷಕ ಅನುಪಾತ ಕಡಿಮೆಯಾಗಿರುತ್ತದೆ. ಖಾಸಗಿ

ಶಾಲೆಗಳಲ್ಲಿ ಹಾಗಾಗುವುದಿಲ್ಲ. ಸರ್ಕಾರಿ ಶಾಲೆಗಳ ಅಧ್ಯಾಪಕರು ವಿದ್ಯಾರ್ಥಿಗಳಿಗೆ ವೈಯಕ್ತಿಕ ಗಮನ ಕೊಡಲಾಗುವುದಿಲ್ಲ. ಬಹಳಷ್ಟು ಸರ್ಕಾರಿ ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನೇಮಿಸಲಾಗುತ್ತದೆ. ಹಾಗಾಗಿ ಅವರಿಗೆ ಮಕ್ಕಳಿಗೆ ನ್ಯಾಯ ಒದಗಿಸಲು ಸಾಧ್ಯವಾಗುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಈ ರೀತಿಯ ಕೆಲಸಗಳಿಲ್ಲದಿರುವುದರಿಂದ ಅವರು ವಿದ್ಯಾರ್ಥಿಗಳಿಗೆ ಸಂಪೂರ್ಣ ಗಮನ ಕೊಡಲು ಸಾಧ್ಯವಾಗುತ್ತದೆ.

**ಶಾಲೆ ಇರುವ ಸ್ಥಳ:** ಸರ್ಕಾರಿ ಶಾಲೆಗಳು ನಗರ ಪ್ರದೇಶಗಳಿಗಿಂತ ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇರುತ್ತವೆ. ಖಾಸಗಿ ಶಾಲೆಗಳು ಗ್ರಾಮೀಣ ಪ್ರದೇಶಗಳಿಗಿಂತ ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಕಾಣಬರುತ್ತವೆ. ನಗರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಸಾರಿಗೆ ವ್ಯವಸ್ಥೆ ಸುಲಭವಾಗಿ ಸಿಗುತ್ತದೆ, ಇಲ್ಲವೇ ಶಾಲೆಯೇ ಅದನ್ನು ಒದಗಿಸುತ್ತದೆ. ಸರ್ಕಾರಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಸಾರಿಗೆ ಸೌಕರ್ಯವಿರುವುದಿಲ್ಲ. ಅವರು ಸಾರ್ವಜನಿಕ ಸಾರಿಗೆಯನ್ನು ಅವಲಂಬಿಸಬೇಕು, ಇಲ್ಲವೇ ನಡೆದು ಬರಬೇಕು. ಇದೂ ಅಸಮಾನತೆಗೆ ಕಾರಣವಾಗುತ್ತದೆ. ಗ್ರಾಮೀಣ ಪ್ರದೇಶದ ಮಕ್ಕಳು ಈ ಸುಭದ್ರತೆಯಿಂದ ವಂಚಿತರಾಗುತ್ತಾರೆ.

**ತಂತ್ರಜ್ಞಾನದ ಲಭ್ಯತೆ :** ಕೆಲವೇ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಆಧರಿತ ಶಿಕ್ಷಣದ ವ್ಯವಸ್ಥೆ ಇದೆ. ಖಾಸಗಿ ಶಾಲೆಗಳಲ್ಲಿ ಹೆಚ್ಚಿನ ಮಟ್ಟಿಗೆ ತಂತ್ರಜ್ಞಾನ ಆಧರಿತ ಶಿಕ್ಷಣ ಅಳವಡಿಸಲಾಗಿದೆ. ಇದರ ವೆಚ್ಚವನ್ನು ಪೋಷಕರೇ ಭರಿಸುತ್ತಾರೆ. ವಿದ್ಯಾರ್ಥಿಗಳಿಗೆ ಅಂತರ್ಜಾಲ, ಗಣಕಯಂತ್ರ ಇವುಗಳ ಬಳಕೆಗೆ ಅವಕಾಶವಿರುತ್ತದೆ. ಗ್ರಾಮೀಣ ಪ್ರದೇಶದ ಮಕ್ಕಳು ಇದರಿಂದಲೂ ವಂಚಿತರಾಗಿ ಅಸಮಾನತೆಯನ್ನು ಅನುಭವಿಸುತ್ತಾರೆ.

**ಸಂವಹನ ಸಾಧ್ಯತೆಗಳು:** ತಂತ್ರಜ್ಞಾನದ ಸಹಾಯದಿಂದ ಇಂದು ಸಂವಹನ ಅತಿ ಸುಲಭವಾಗಿದೆ. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯೂ ಪೋಷಕರಿಗೆ ಸಿಗುತ್ತದೆ. ಮನೆಯಿಂದ ಶಾಲೆಗೆ ಹೊರಟ ಮಗು ಬಸ್ಸಿನಲ್ಲಿ ಕುಳಿತದ್ದು, ಶಾಲೆ ತಲುಪಿದ್ದು, ಶಾಲೆ ಬಿಟ್ಟು ಹೊರಟದ್ದು, ಮಗುವಿನ ಕಲಿಕೆ, ಸಾಧನೆಗೆ ಸಂಬಂಧಪಟ್ಟ ವಿವರಗಳು ಕಾಲಕಾಲಕ್ಕೆ ಪೋಷಕರನ್ನು ತಲುಪುತ್ತವೆ. ಸರ್ಕಾರಿ ಶಾಲೆಗಳು ಈ ಹಂತವನ್ನು ತಲುಪಲು ಇನ್ನೂ ಬಹಳ ವರ್ಷಗಳೇ ಬೇಕು. ಇವುಗಳನ್ನು ಗ್ರಾಮೀಣ ಮಕ್ಕಳು ಎಣಿಸುವುದೂ ಅಸಾಧ್ಯ.

**ಪೋಷಕರ ಭಾಗವಹಿಸುವಿಕೆ:** ಖಾಸಗಿ ಶಾಲೆಗಳಲ್ಲಿ ಆಡಳಿತ ಮತ್ತು ಪೋಷಕರ ನಡುವೆ ತೆರೆದ ಸಂವಹನವಿರುತ್ತದೆ. ಪೋಷಕರನ್ನು ಮಕ್ಕಳ ಕಲಿಕೆಯಲ್ಲಿ ಒಳಗುಮಾಡುವುದು ಖಾಸಗಿ ಶಾಲೆಗಳ ಆದ್ಯತೆಯೂ ಆಗಿರುತ್ತದೆ. ಅಧ್ಯಾಪಕರು ಕೊಡುವ ಅನೇಕ ಕೆಲಸಗಳಲ್ಲಿ ಪೋಷಕರು ಮಕ್ಕಳಿಗೆ ಅತಿ ಹೆಚ್ಚು ಸಹಾಯ ಮಾಡುತ್ತಾರೆ. ತಿಳಿಯದುದನ್ನು ಕಲಿಸುತ್ತಾರೆ. ಕಲಿಸಲಾಗದಿದ್ದರೆ ಹೆಚ್ಚುವರಿ ಕೋಚಿಂಗ್ ಕೊಡಿಸುತ್ತಾರೆ. ಈ ಯಾವ ಸನ್ನಿವೇಶವೂ ಸರ್ಕಾರಿ ಶಾಲೆಗಳ ಮಕ್ಕಳಿಗೆ ಇಲ್ಲ. ಅಧ್ಯಾಪಕರು ಕಲಿಸಿದುದು ಅರ್ಥವಾದರೆ ಸರಿ, ಆಗದಿದ್ದರೆ ಯಾವ ರೀತಿಯ ಒತ್ತಾಸೆಯೂ ಇರುವುದಿಲ್ಲ. ಇದೂ ಅಸಮಾನತೆಗೆ ಕಾರಣವಾಗುತ್ತದೆ.

ಒಂದು ಅಂಶವನ್ನು ಎಚ್ಚರಿಕೆಯಿಂದ ಗಮನಿಸಬೇಕು. ಉತ್ತಮ ಗುಣಮಟ್ಟದ ಸರ್ಕಾರಿ ಶಾಲೆಗಳು ಇಲ್ಲವೆಂದಲ್ಲ. ಆ ಶಾಲೆಗಳಲ್ಲಿರುವ ಸಂಪನ್ಮೂಲಗಳ ಕೊರತೆಯಿಂದಾಗಿ ಅವರಿಗೆ ಉತ್ತಮ ಸಾಧನೆ ಮಾಡಲು ಸಾಧ್ಯವಾಗಿಲ್ಲ. ಅಲ್ಲದೆ, ಎಲ್ಲ ಖಾಸಗಿ ಶಾಲೆಗಳೂ ಮೇಲೆ ಹೇಳಿದ ಎಲ್ಲ ಅಂಶಗಳನ್ನೂ ಒಳಗೊಂಡಿರುತ್ತವೆ ಎಂದೇನೂ ಇಲ್ಲ. ಅಂದರೆ ಒಟ್ಟಾರೆಯಾಗಿ ಯಾವುದೇ ರೀತಿಯ ಸಾಮಾನ್ಯೀಕರಣ ಮಾಡುವುದು ತಪ್ಪಾದೀತು. ಆಯಾ ಶಾಲಾ ಸಿಬ್ಬಂದಿಗಳ ಮನೋಭಾವ ಉತ್ತಮ ಅಥವಾ ಕೆಳಮಟ್ಟದ ಸಾಧನೆಗೆ ಕಾರಣ ಎಂದಷ್ಟೇ ಹೇಳಬಹುದು.

## ನಗರ ಮತ್ತು ಗ್ರಾಮೀಣ ಶಾಲೆಗಳು

ನಗರ ಮತ್ತು ಗ್ರಾಮೀಣ ಶಾಲೆಗಳ ನಡುವಿನ ವ್ಯತ್ಯಾಸಗಳು ಮೇಲೆ ತಿಳಿಸಿದ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ನಡುವಿನ ವ್ಯತ್ಯಾಸಕ್ಕೆ ಸಮನಾಗಿರುತ್ತವೆ. ಏಕೆಂದರೆ ಗ್ರಾಮೀಣ ಪ್ರದೇಶದ ಹೆಚ್ಚು ಸಂಖ್ಯೆಯ ಶಾಲೆಗಳು ಸರ್ಕಾರಿ ಶಾಲೆಗಳು ಮತ್ತು ನಗರ ಪ್ರದೇಶದ ಹೆಚ್ಚು ಸಂಖ್ಯೆಯ ಶಾಲೆಗಳು ಖಾಸಗಿ ಶಾಲೆಗಳು.

ಈ ವ್ಯತ್ಯಾಸಗಳು ಹೇಗೆ ಅಸಮಾನತೆಯನ್ನು ಹುಟ್ಟುಹಾಕುತ್ತವೆ ಮತ್ತು ಇದನ್ನು ಹೇಗೆ ನಿವಾರಿಸಬಹುದು

ಎಂಬುದಷ್ಟೇ ನಾವು ಗಮನಿಸಬೇಕಾದ ಅಂಶ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

1. ನಿಮ್ಮ ಶಾಲೆಯ ಮಕ್ಕಳನ್ನು ಗಮನಿಸಿ. ಅವರು ಯಾವ ರೀತಿಯ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಪಟ್ಟಿಮಾಡಿ.
2. ನಿಮ್ಮ ಮಿತಿಯಲ್ಲಿ ಅವುಗಳನ್ನು ಹೋಗಲಾಡಿಸಲು ಎರಡು ಮಾರ್ಗೋಪಾಯಗಳೊಂದಿಗೆ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿ

## 4.5.4. ಸಾರಾಂಶಿಸೋಣ

- ಅಸಮಾನತೆ ಎಂಬುದು ಎಲ್ಲ ಸಮಾಜದಲ್ಲೂ ಕಾಣುವ ಅಂಶ. ಸಮಾಜದ ಎಲ್ಲ ಸಂಸ್ಥೆಗಳಲ್ಲೂ ಈ ಅಸಮಾನತೆಯ ಅಂಶ ಇದೆ. ಶಾಲೆಯೂ ಇದಕ್ಕೆ ಹೊರತಲ್ಲ.
- ಭಾರತದ ಸನ್ನಿವೇಶದಲ್ಲಿ ಕಂಡುಬರುವ ವಿವಿಧ ರೀತಿಯ ಶಾಲೆಗಳು ಅಸಮಾನತೆಯನ್ನು ಹುಟ್ಟುಹಾಕಲು ಒಂದು ಪ್ರಮುಖ ಕಾರಣ.
- ಪ್ರತಿ ಶಾಲೆಯನ್ನೂ ನಾವು ಕೆಲವು ಮಾನದಂಡಗಳ ಆಧಾರದ ಮೇಲೆ ವರ್ಗೀಕರಿಸಬಹುದು. ಶಾಲೆಯ ಮಾಲೀಕತ್ವದ ಆಧಾರದ ಮೇಲೆ ಶಾಲೆಗಳನ್ನು ವರ್ಗಾಯಿಸಿರುವುದುಂಟು. ಶಾಲೆಯನ್ನು ನಿರ್ವಹಿಸುವ ಸಂಸ್ಥೆ ಯಾವುದು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಶಾಲೆ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸರ್ಕಾರ ಈ ಮೂರರಲ್ಲಿ ಯಾರ ಆಡಳಿತಕ್ಕೆ ಸೇರುತ್ತದೆ ಎಂಬುದರ ಆಧಾರದ ಮೇಲೆ ಶಾಲೆಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ. ಅವುಗಳೆಂದರೆ, ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು, ಸ್ಥಳೀಯ ಮಂಡಳಿ ಶಾಲೆಗಳು, ಖಾಸಗಿ ಅನುದಾನಿತ ಶಾಲೆಗಳು, ಅನುದಾನ ರಹಿತ ಖಾಸಗಿ ಶಾಲೆಗಳು.
- ಶಾಲೆಗಳನ್ನು ವರ್ಗೀಕರಿಸುವ ಮತ್ತೊಂದು ಮಾನದಂಡವೆಂದರೆ ಅವು ಸಂಯೋಜಿತಗೊಂಡಿರುವ ಮಂಡಳಿಗಳು.  ಈ ಮಂಡಳಿಗಳು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿವೆ.
- ಈ ವಿವಿಧ ರೀತಿಯ ಶಾಲೆಗಳಲ್ಲಿ ಅನೇಕ ವ್ಯತ್ಯಾಸಗಳಿದ್ದು ಈ ಕಾರಣದಿಂದಾಗಿ ವಿದ್ಯಾರ್ಥಿಗಳ ಸಾಧನೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಉತ್ತಮ ಗುಣಮಟ್ಟವಿರುವ ಶಾಲೆಗಳಿಗೆ ಕಡಿಮೆ ಆರ್ಥಿಕ ಮಟ್ಟದ ವಿದ್ಯಾರ್ಥಿಗಳು ಪ್ರವೇಶ ಪಡೆಯಲಾಗದೆ, ಸರ್ಕಾರಿ ಶಾಲೆಗಳು ಸಮರ್ಪಕ ಸಿದ್ಧತೆಯ ಕೊರತೆಯಿಂದಾಗಿ ಮೇಲ್ಮಟ್ಟದ ಗುಣಮಟ್ಟವನ್ನು ತಲುಪಲಾರದೆ ಅಸಮಾನತೆ ತಲೆದೋರುತ್ತದೆ. ಇದಕ್ಕೆ ಪರಿಹಾರಗಳನ್ನು ಕುರಿತು ಗಂಭೀರವಾಗಿ ಆಲೋಚಿಸಿ ಅನ್ವಯಿಸಬೇಕು.

## 4.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4.5.3.1. ಕೆಳಗಿನ ಸ್ವ ಕಲಿಕಾ ಸಾಮಗ್ರಿಯನ್ನು ಗಮನಿಸಿಕೊಳ್ಳಿ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ನೀವು ತಯಾರಿಸಿದ ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸಿ ಕಂಡ ಫಲಿತಾಂಶಗಳನ್ನು ನೆರೆಕೆರೆಯ ಶಾಲೆಗಳ ಅಧ್ಯಾಪಕರೊಂದಿಗೆ ಹಂಚಿಕೊಳ್ಳಿ.

## 4.5.6. ಘಟಕಾಂತ್ಯ ಅಭ್ಯಾಸಗಳು

ಶಾಲಾ ಹಂತದಲ್ಲಿ ಅಸಮಾನತೆ ಉಂಟಾಗಲು ಕಾರಣವಾಗುವ ಅಂಶಗಳನ್ನು ವಿಶ್ಲೇಷಿಸಿ.

## 4.5.7. ಪರಾಮರ್ಶನ ಸೂಚಿ


1) https://www.quora.com/What-is-the-difference-between-a-government-school-and-a-private-school-in-India
2) https://www.mapsofindia.com/my-india/education/condition-of-govt-schools-in-india-quality-of-teachers-and-teaching
3) https://yourstory.com/2018/09/technology-teacher-absenteeism-uttarakhand (check for a case study)
4) https://www.britishcouncil.in/sites/default/files/indian_school_education_system_-_an_overview_1.pdf
5) http://vesyeola.com/blog/others/3266-urban-education-v-s-rural-education.html
6) https://www.mapsofindia.com/my-india/education/gap-between-private-and-public-schools-how-it-is-hurting-india
7) https://timesofindia.indiatimes.com/blogs/minorityview/time-to-end-the-menace-of-single-teacher-schools/
8) https://www.thehansindia.com/posts/index/Hans/2017-04-13/Single-teacher-schools-affecting-education/293057
9) https://archive.org/stream/TheSingleTeacherSchool-J.P.Naik/1.Jp-TheSingle-teacherSchool_djvu.txt
10) https://www.civilsocietyonline.com/column/back-to-school/schools-with-just-one-teacher/
11) https://www.teachermagazine.com.au/columnists/geoff-masters/big-five-challenges-in-school-education
12) https://www.edexlive.com/news/2019/jan/23/single-teacher-schools-ktaka-ranks-6-in-india-with-4700-such-schools-5123.html
13) https://www.livemint.com/Opinion/h5HSgEHIroT6PbmRFzHYnJ/Opinion-Reforms-to-save-government-schools-in-Karnataka.html
14) https://www.indiainfoline.com/article/news-top-story/education-gender-gap-and-rural-urban-differences-widespread-115070100222_1.html
15) http://vesyeola.com/blog/others/3266-urban-education-v-s-rural-education.html
16) https://women-s.net/difference-rural-and-urban-education/


*************

# ಬ್ಲಾಕ್–4 : ಸಮಕಾಲೀನ ಭಾರತದಲ್ಲಿ ಶಿಕ್ಷಣ: ಕಾಳಜಿಗಳು ಮತ್ತು ವಿಚಾರಗಳು

## ಘಟಕ–6: ಶಿಕ್ಷಣ ಮತ್ತು ಶೈಕ್ಷಣಿಕ ಅವಕಾಶಗಳ ಸಮಾನತೆಯ ನಿಹಿತಾರ್ಥಗಳು

**ಘಟಕದ ರಚನೆ**

4.6.1. ಕಲಿಕೆಯ ಉದ್ದೇಶಗಳು

4.6.2. ಪೀಠಿಕೆ

4.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

4.6.3.1. ಶಿಕ್ಷಣದಲ್ಲಿ, ಸಮಾನತೆ ಮತ್ತು ಸಮಾನಾವಕಾಶಗಳ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

4.6.3.2. ಶಾಲಾ ಮಟ್ಟದಲ್ಲಿ ಸಮಾನತೆ ಮತ್ತು ಸಮಾನಾವಕಾಶಗಳ ನಿಹಿತಾರ್ಥಗಳು

ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

4.6.4. ಸಾರಾಂಶಿಸೋಣ

4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

4.6.6. ಘಟಕಾಂತ್ಯ ಅಭ್ಯಾಸಗಳು

4.6.7. ಪರಾಮರ್ಶನ ಸೂಚಿ

### 4.5.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿಗಳು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಿಕ್ಷಣದಲ್ಲಿ ಸಮಾನತೆಗೆ ಪೂರಕವಾಗುವ ಅಂಶಗಳನ್ನು ವಿವರಿಸುವರು;
- ಶಾಲೆಗಳಲ್ಲಿ ಸಮಾನತೆಗೆ ಪೂರಕವಾಗುವ ಅಂಶಗಳನ್ನು ವಿವರಿಸುವರು;
- ಶಿಕ್ಷಣದಲ್ಲಿ ಸಮಾನತೆಯ ನಿಹಿತಾರ್ಥಗಳನ್ನು ವಿಶ್ಲೇಷಿಸುವರು; ಮತ್ತು
- ಶಾಲೆಗಳಲ್ಲಿ ಸಮಾನತೆಯ ನಿಹಿತಾರ್ಥಗಳನ್ನು ವಿಶ್ಲೇಷಿಸುವರು.

### 4.5.2. ಪೀಠಿಕೆ

ಶಿಕ್ಷಣದಲ್ಲಿನ ಅಸಮಾನತೆ ಹಲವಾರು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಮೇಲೆ ಪರಿಣಾಮಬೀರುತ್ತದೆ ಎಂಬುದನ್ನು ನಾವು ಗಮನಿಸಿದ್ದೇವೆ. ಶಿಕ್ಷಣ ಪಡೆದವರು ವ್ಯವಸ್ಥೆಯ ಬಹುಪಾಲು ಲಾಭಗಳನ್ನು ಬಳಸಿಕೊಂಡು ಅಧಿಕಾರದಲ್ಲಿರುವವರಿಂದ ಗರಿಷ್ಟಮಟ್ಟದ ರಿಯಾಯಿತಿಯನ್ನೂ ಪಡೆದುಕೊಳ್ಳುತ್ತಾರೆ. ಅವರಿಗೆ ಹೆಚ್ಚಿನ ಆರ್ಥಿಕ ಸ್ಥಾನಮಾನವಿದ್ದು ಸಮಾಜದಲ್ಲಿ ಬದಲಾವಣೆಗಳನ್ನು ತರುವಲ್ಲಿ ಅವರು ಕ್ರಿಯಾಶೀಲರಾಗಿರುತ್ತಾರೆ. ಶಿಕ್ಷಣ ಪಡೆದಿಲ್ಲದವರು ಸಮಾಜದ ಅವಕಾಶಗಳಿಂದ ವಂಚಿತರಾಗಿ, ಸಮಾಜದ ಅಂಚಿಗೆ ತಳ್ಳಲ್ಪಟ್ಟು ಅದೇ

ಕಾರಣದಿಂದ ಸೊರಗುತ್ತಾರೆ. ಶಿಕ್ಷಣದಲ್ಲಿನ ಅಸಮಾನತೆ ಕೆಲವರನ್ನು ಮಾತ್ರ ಸಬಲೀಕರಿಸಿ ಅವರು ಮಾತ್ರ ಸಂಪತ್ತನ್ನು ಸಂಗ್ರಹಿಸಿಕೊಳ್ಳುವಂತೆ ಮಾಡಿದೆ. ಇದರಿಂದಾಗಿ ಅವರು ಹೆಚ್ಚು ಅಧಿಕಾರ ಹೊಂದಿ ಅವರ ಆಸಕ್ತಿಗಳಿಗನುಗುಣವಾಗಿ ಆರ್ಥಿಕ ನೀತಿಗಳನ್ನು ಸರಿಹೊಂದಿಸಿಕೊಳ್ಳುತ್ತಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಸಮುದಾಯಗಳು ಶಿಕ್ಷಣವಿಲ್ಲದೆ ತುಳಿತಕ್ಕೆ ಮತ್ತು ಶೋಷಣೆಗೆ ಒಳಗಾಗಿವೆ. ಅಸಮಾನತೆ ಈ ವ್ಯಕ್ತಿಗಳ ಸಾಮರ್ಥ್ಯದಲ್ಲಿ ಬಹು ದೊಡ್ಡ ವ್ಯತ್ಯಾಸವನ್ನು ತೋರಿಸುತ್ತದೆ. ಇದರಿಂದಾಗಿ ಅವರಿಗೆ ಸಾಮಾಜಿಕ ಮತ್ತು ಆರ್ಥಿಕ ಚಲನೆ ಸಾಧ್ಯವಿಲ್ಲವಾಗುತ್ತದೆ. ಇದು ನಮ್ಮ ಸಂವಿಧಾನಾತ್ಮಕ ಮತ್ತು ಮಾನವೀಯ ಗುರಿಗಳಾದ ಸಮಾನತೆ, ಸಹಬಾಳ್ವೆ, ಮಾನವಗೌರವ ಇತ್ಯಾದಿಗಳನ್ನು ಸಾಧಿಸುವಲ್ಲಿ ಅಡ್ಡಿಯಾಗುತ್ತದೆ. ಹೀಗಾಗಿ ಈ ಅಸಮಾನತೆಯನ್ನು ಹೋಗಲಾಡಿಸುವುದು ಮತ್ತು ಸಮಾನತೆಯನ್ನು ಸ್ಥಾಪಸಿವುದು ಇಂದಿನ ಅವಶ್ಯಕತೆ ಮಾತ್ರವಲ್ಲ; ಅನಿವಾರ್ಯತೆಯೂ ಹೌದು. ಇದನ್ನು ಶಿಕ್ಷಣದಲ್ಲಿ ಸಮಾನತೆಯ ನಿಹಿತಾರ್ಥಗಳು ಮತ್ತು ಶಾಲೆಗಳಲ್ಲಿ ಸಮಾನತೆಯ ನಿಹಿತಾರ್ಥಗಳು ಎಂಬ ಎರಡು ಶೀರ್ಷಿಕೆಗಳಲ್ಲಿ ಚರ್ಚಿಸಬಹುದು.

## 4.6.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 4.6.3.1. ಶಿಕ್ಷಣದಲ್ಲಿ ಸಮಾನತೆ ಮತ್ತು ಸಮಾನಾವಕಾಶಗಳ ನಿಹಿತಾರ್ಥಗಳು

ಸಮಾನತೆಯ ನಿವಾರಣೆಯೇ ಶಿಕ್ಷಣದಲ್ಲಿ ಸಮಾನತೆಯ ಸ್ಥಾಪನೆ. ಅಸಮಾನತೆ ಇಲ್ಲದಿದ್ದರೆ ಸಮಾನತೆಯನ್ನು ಸಾಧಿಸುವ ಪ್ರಶ್ನೆಯೇ ಏಳುವುದಿಲ್ಲ. ನಾವು ಶಿಕ್ಷಣದಲ್ಲಿ ಅಸಮಾನತೆಯ ಪರಿಕಲ್ಪನೆಯನ್ನು ಈಗಾಗಲೇ ಚರ್ಚಿಸಿದ್ದೇವೆ. ಪ್ರಸ್ತುತ ಉದ್ದೇಶಕ್ಕಾಗಿ ಅದನ್ನು ಪುನರಾವರ್ತಿಸೋಣ. ಈ ಪರಿಕಲ್ಪನೆಗೆ ಹಲವಾರು ಆಯಾಮಗಳಿವೆ.

ಸಮಾಜದ ಎಲ್ಲ ವರ್ಗಗಳಿಗೂ ಶಿಕ್ಷಣಕ್ಕೆ ಸಮನಾದ ಅವಕಾಶವನ್ನು ನೀಡಿಲ್ಲದಿರುವ ವ್ಯವಸ್ಥೆಯೇ ಶಿಕ್ಷಣದಲ್ಲಿ ಅಸಮಾನತೆ ಅಥವಾ ಶೈಕ್ಷಣಿಕ ಅಸಮಾನತೆ. ಇದು ಸಾಮಾಜಿಕವಾಗಿ ಹೊರಗಿಡಲಾಗಿರುವ ಸಮುದಾಯಗಳಿಗೆ ಸಂಬಂಧಿಸಿದಂತೆ ಶಾಲಾ ಹಣಕಾಸು ನಿಧಿ, ಅರ್ಹ ಮತ್ತು ಅನುಭವಿ ಶಿಕ್ಷಕರು, ಪುಸ್ತಕ ಅಥವಾ ಗ್ರಂಥಗಳು, ತಂತ್ರಜ್ಞಾನ ಇವುಗಳನ್ನೂ ಒಳಗೊಂಡ, ಆದರೆ ಇವುಗಳಷ್ಟೇ ಅಲ್ಲದ ಎಲ್ಲ ಶೈಕ್ಷಣಿಕ ಸಂಪನ್ಮೂಲಗಳ ಅಸಮಾನ ಹಂಚಿಕೆ ಎಂದು ಹೇಳಬಹುದು. ಶಿಕ್ಷಣದಲ್ಲಿ ಸಮಾನತೆ ಎಂದರೆ ಬಹಳಮಟ್ಟಿಗೆ ಶಿಕ್ಷಣದಲ್ಲಿ ಅವಕಾಶಗಳ ಸಮಾನತೆ ಎಂದೇ ಬಹುಪಾಲು ಅರ್ಥವಾಗುತ್ತದೆ. ಅವಕಾಶಗಳ ಸಮಾನತೆಯನ್ನು ಮೀರಿಯೂ ಆಲೋಚಿಸಿದಾಗ ಶಿಕ್ಷಣದಲ್ಲಿ ಸಮಾನತೆಯನ್ನು ಸಾಧಿಸಿದಂತಾಗುತ್ತದೆ.

ಶೈಕ್ಷಣಿಕ ಸಮಾನತೆಯ ನಿಹಿತಾರ್ಥಗಳನ್ನು ಆಲೋಚಿಸುವಾಗ ನಾವು ಶೈಕ್ಷಣಿಕ ಅಸಮಾನತೆಯನ್ನು ಸೂಚಿಸುವ ಅಂಶಗಳಾವುವು ಎಂಬುದನ್ನು ಮೊದಲಿಗೆ ಗುರುತಿಸಿಕೊಳ್ಳಬೇಕು. ಆಗ ನಿಹಿತಾರ್ಥಗಳನ್ನು ಗುರುತಿಸಲು ಸುಲಭವಾಗುತ್ತದೆ. ಈ ಸೂಚಕಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತವೆ. ಬಹಳ ಸಲ ಶೈಕ್ಷಣಿಕ ಅವಕಾಶಗಳನ್ನು ಎಲ್ಲರಿಗೂ ಒದಗಿಸಿದರೆ ಸಮಾನತೆ ಸಾಧಿಸಿದಂತಾಯಿತು ಎಂಬ ರೀತಿಯಲ್ಲಿ ವ್ಯವಹಾರಗಳು ನಡೆಯುತ್ತಿರುತ್ತವೆ. ಅದು ಸರಿಯಲ್ಲ. ಅದರ ಜೊತೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ, ಕಲಿಕಾ ಗುರಿಗಳ ಸಾಧನೆ, ಅಪೇಕ್ಷಿತ ಕೌಶಲಗಳು ಮತ್ತು ಸಾಮರ್ಥ್ಯಗಳ ಗಳಿಕೆ, ಕಲಿಕಾ ತೃಪ್ತಿ, ಶಾಲಾ ನಂತರದ ಸಾಧನೆಗಳು ಇತ್ಯಾದಿ ಅನೇಕ ಅಂಶಗಳು ಅಪೇಕ್ಷಿತ ಮಟ್ಟದಲ್ಲಿದ್ದು ಈ ಎಲ್ಲ ಅಂಶಗಳಲ್ಲೂ ಸಮಾನತೆಯನ್ನು ಸಾಧಿಸುವುದನ್ನು ಶೈಕ್ಷಣಿಕ ಸಮಾನತೆ ಎಂದು ಪರಿಗಣಿಸಬಹುದು. ಈ ಯಾವೊಂದು ವಿಷಯದಲ್ಲಿ ಸಮಾನತೆ ಇಲ್ಲದಿದ್ದರೂ ಅದು ಸಮಾನತೆಯ ಅಪೂರ್ಣ ಸಾಧನೆ ಎಂದೇ ಹೇಳಬೇಕಾಗುತ್ತದೆ. ಕೇವಲ ಶೈಕ್ಷಣಿಕ ಸಾಧನೆಯೊಂದನ್ನೇ ಸಮಾನತೆಯ ಸೂಚಕವಾಗಿಟ್ಟುಕೊಳ್ಳುವಂತೆಯೂ ಇಲ್ಲ. ಇದು ವಿದ್ಯಾರ್ಥಿಯ ಒಟ್ಟು ಕಲಿಕೆಯನ್ನು ಗುರುತಿಸುತ್ತದೆಯೇ ವಿನಾ ಕಲಿಕೆಯ ಅನ್ವಯ ಸಾಮರ್ಥ್ಯವನ್ನು ತಿಳಿಸುವುದಿಲ್ಲ.

ಶೈಕ್ಷಣಿಕ ಅಸಮಾನತೆಗೆ ಕಾರಣಗಳನ್ನು ನಾವು ಹಿಂದಿನ ಘಟಕಗಳಲ್ಲಿ ಗುರುತಿಸಿದ್ದೇವೆ. ಈ ಅಂಶಗಳ ನಿಹಿತಾರ್ಥಗಳೇನು ಎಂಬುದನ್ನು ಗಮನಿಸೋಣ.

ಶಿಕ್ಷಣದ ಅವಕಾಶಗಳ ಆ ಮೂಲಕ ಶಿಕ್ಷಣದ ಸಮಾನತೆಯನ್ನು ಕುರಿತು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ನಡೆದು ಅನೇಕ ನಿಹಿತಾರ್ಥಗಳನ್ನು ಗುರುತಿಸಿ ಅದಕ್ಕನುಗುಣವಾದ ನೀತಿ ನಿಯಮಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಭಾರತವೂ ಈ ಚರ್ಚೆಗಳಲ್ಲಿ ಭಾಗವಹಿಸಿ, ಅಂತರರಾಷ್ಟ್ರೀಯವಾಗಿ ಗುರುತಿಸಿಕೊಂಡಿರುವ ಗುರಿ ಮತ್ತು ನೀತಿ ನಿಯಮಗಳಿಗೆ ಸಹಿ ಹಾಕುವುದರ ಮೂಲಕ ತನ್ನ ಭಾಗವಹಿಕೆಗೆ ಸಮ್ಮತಿ ಸೂಚಿಸಿದೆ. ಈಗ ಆಗಬೇಕಾಗಿರುವುದೆಂದರೆ ಭಾರತದಲ್ಲಿ ಈ ನೀತಿ ನಿಯಮಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಅದಕ್ಕನುಗುಣವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಗುರಿಸಾಧನೆ ಮಾಡುವುದು. ಶಿಕ್ಷಣದಲ್ಲಿ ತಾರತಮ್ಯಕ್ಕೆ ವಿರುದ್ಧವಾಗಿ ಯುನೆಸ್ಕೊ ಸಮಾಲೋಚನೆ (UNESCO Convention against Discrimination in Education ) ಮತ್ತು ಇತರ ಎಲ್ಲ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಒಪ್ಪಂದಗಳು, ಸಾಮಾಜಿಕವಾಗಿ ನಿಗದಿಪಡಿಸಿದ ಅಥವಾ ಗ್ರಹಿಸಲಾದ ವ್ಯತ್ಯಾಸಗಳಾದ ಲಿಂಗ, ವಾಂಶಿಕ/ ಸಾಮಾಜಿಕ ಮೂಲ, ಭಾಷೆ, ಧರ್ಮ, ರಾಷ್ಟ್ರೀಯತೆ, ಆರ್ಥಿಕ ಸ್ಥಿತಿ ಅಥವಾ ಸಾಮರ್ಥ್ಯ ಇವುಗಳ ಆಧಾರದ ಮೇಲೆ ಶಿಕ್ಷಣದ ಅವಕಾಶಗಳಿಂದ ವ್ಯಕ್ತಿಗಳನ್ನು ಯಾವುದೇ ರೀತಿಯಲ್ಲಿ ಹೊರಗಿಡುವಿಕೆಯನ್ನು, ನಿರ್ಬಂಧವನ್ನು ವಿರೋಧಿಸುತ್ತವೆ. ಸಮಾಜದ ಅಂಚಿನಲ್ಲಿರುವವರನ್ನು ಸಮಾಜ ಬಾಹಿರವಾಗಿರುವವರನನ್ನು ಗುಣಮಟ್ಟದ ಶಿಕ್ಷಣದೊಂದಿಗೆ ತಲುಪಬೇಕಾದರೆ ಅಂತರ್ಗತ ನಿಯಮಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ ಅನ್ವಯಿಸಿಕೊಳ್ಳಬೇಕಾಗುತ್ತದೆ. ಸಮಾಜದ ಅಂಚಿನಲ್ಲಿರುವವರನ್ನೂ ಒಳಗೊಂಡಂತೆ ಎಲ್ಲರಿಗೂ ಸಮರ್ಪಕ ಶಿಕ್ಷಣಕ್ಕೆ ಅವಕಾಶಗಳನ್ನೊದಗಿಸುವುದು ಮತ್ತು ಸಮತೆಯ ದೃಷ್ಟಿಯಿಂದ ಅಗತ್ಯವಾದ ಏರ್ಪಾಡುಗಳನ್ನು ಮಾಡುವುದೇ ಅಂತರ್ಗತ ಶಿಕ್ಷಣ. ಈ ಹಿನ್ನೆಲೆಯಲ್ಲಿ ಯುನೆಸ್ಕೊ (UNESCO) ಸಂಸ್ಥೆಯು ಕಲಿಕಾ ಸನ್ನಿವೇಶದಲ್ಲಿ ಎಲ್ಲ ಕಲಿಕಾರ್ಥಿಗಳ ಭಾಗವಹಿಕೆ ಮತ್ತು ಸಾಧನೆಗೆ ಉಂಟಾಗುವ ಅಡ್ಡಿಗಳನ್ನು ನಿವಾರಿಸುವ, ವಿಭಿನ್ನ ಅಗತ್ಯಗಳನ್ನು, ಸಾಮರ್ಥ್ಯಗಳನ್ನು ಮತ್ತು ವೈಲಕ್ಷಣ್ಯಗಳನ್ನು ಗೌರವಿಸುವ, ಎಲ್ಲ ರೀತಿಯ ತಾರತಮ್ಯವನ್ನು ನಿವಾರಿಸುವ ಅಂತರ್ಗತ ಶಿಕ್ಷಣ ವ್ಯವಸ್ಥೆಯನ್ನು ಮುಂದಿಟ್ಟಿದೆ.

ಶಿಕ್ಷಣದ ಅಸಮಾನತೆಯ ಜಾಗತಿಕ ದತ್ತಾಂಶ ಆಧಾರವು (World Inequality Database on Education) ಶಿಕ್ಷಣದ ಅವಕಾಶವನ್ನು ರೂಪಿಸುವಲ್ಲಿ ಜನರಿಗೆ ಅತಿ ಕಡಿಮೆ ನಿಯಂತ್ರಣವಿರುವ ಸಂಪತ್ತು, ಲಿಂಗತ್ವ, ವಂಶ, ಮತ್ತು ಪ್ರಾದೇಶಿಕತೆ ಇತ್ಯಾದಿ ಅಂಶಗಳ ಪ್ರಬಲ ಪ್ರಭಾವವನ್ನು ಗುರುತಿಸಿದೆ. ಈ ಕಾರಣದಿಂದಾಗಿ ಪ್ರಪಂಚ ವ್ಯಾಪಿಯಾಗಿ ಶಿಕ್ಷಣದಲ್ಲಿರುವ ಅಸಮಾನತೆಯ ಕಡೆಗೆ ಈ ದಾಖಲೆ ಗಮನಸೆಳೆಯುತ್ತದೆ. ಅದು ಗಮನಿಸಿರುವ ಕೆಲವು ಅಂಶಗಳು ಹೀಗಿವೆ:

## ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ

1999ರಲ್ಲಿ 39 ದೇಶಗಳಲ್ಲಿ ಗರಿಷ್ಟ ಬಡತನದಲ್ಲಿರುವ ಮಕ್ಕಳಲ್ಲಿ ಶೇ 50ಕ್ಕಿಂತ ಕಡಿಮೆ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದಾರೆ. 2000ದಿಂದ ಈಚೆಗೆ ದಾಖಲಾತಿಯ ಮಟ್ಟದಲ್ಲಿ ಹೆಚ್ಚಳ ಕಂಡುಬಂದಿದ್ದರೂ ಗಮನಾರ್ಹ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಾಗಿಲ್ಲ. ಈ ವಿಷಯಕ್ಕೆ ಅತಿ ಹೆಚ್ಚು ಗಮನ ಅವಶ್ಯಕ.

## ಸೆಕೆಂಡರಿ ಶಿಕ್ಷಣದ ಸಾರ್ವತ್ರೀಕರಣ

133 ದೇಶಗಳಲ್ಲಿ 58 ದೇಶಗಳಲ್ಲಿ ಶೇ 50ರಷ್ಟು ಯುವಕರು ಸೆಕೆಂಡರಿ ಶಿಕ್ಷಣ ಪೂರೈಸಿರುವುದಿಲ್ಲ. ಇತ್ತೀಚೆಗೆ ಭಾರತದಲ್ಲಿ ಮಾಧ್ಯಮಿಕ ಶಿಕ್ಷಾ ಅಭಿಯಾನದ ಮೂಲಕ ವಿದ್ಯಾರ್ಥಿಗಳನ್ನು ಸೆಕೆಂಡರಿ ಶಿಕ್ಷಣಕ್ಕೆ ಆಕರ್ಷಿಸುವ ಪ್ರಯತ್ನಗಳಾಗಿರುವುದಾದರೂ ಸಂಬಂಧಿಸಿದ ಗುರಿಯನ್ನು ಸಂಪೂರ್ಣವಾಗಿ ಸಾಧಿಸಲು ಸಾಧ್ಯವಾಗಿಲ್ಲ. ಶೀಘ್ರಗತಿಯಲ್ಲಿ ಗಂಭೀರವಾದ ಪ್ರಯತ್ನಗಳು ಈ ದಿಸೆಯಲ್ಲಿ ನಡೆಯಬೇಕಾಗಿದೆ. ಈ ಪ್ರಯತ್ನಗಳು ಸಮಾಜದ ಅಂಚಿನಲ್ಲಿರುವ ಕುಟುಂಬದ ಮಕ್ಕಳನ್ನು ಸೆಕೆಂಡರಿ ಶಿಕ್ಷಣಕ್ಕೆ ಕರೆತರುವಲ್ಲಿ ಯಶಸ್ವಿಯಾಗಬೇಕು.

## ಶಿಕ್ಷಣದಲ್ಲಿನ ಸಮಾನತೆಯ ಇತರ ನಿಹಿತಾರ್ಥಗಳು:

### ಅಸಮಾನತೆಯ ಸಮಸ್ಯೆ ಸಾರ್ವಜನಿಕರಿಗೆ ಸ್ಪಷ್ಟವಾಗಿ ಕಾಣುವಂತೆ ಮಾಡಬೇಕು:

ಅಸಮಾನತೆಯ ಸೂಚಕಗಳನ್ನು ನಿಗದಿಮಾಡಿ ಸಮಾಜದಲ್ಲಿ ಅಸಮಾನತೆ, ಅದರಲ್ಲೂ ಶೈಕ್ಷಣಿಕ ಅಸಮಾನತೆಯ ಪ್ರಮಾಣ ಎಷ್ಟು, ಅದರ ಪರಿಣಾಮಗಳೇನು ಎಂಬುದನ್ನು ಸಾರ್ವಜನಿಕರಿಗೆ ಮನಗಾಣಿಸಬೇಕು. ಶಿಕ್ಷಣಕ್ಕೆ ಅವಕಾಶ ನೀಡುವುದೊಂದನ್ನೇ ಸಮಾನತೆಯ ಅಂಶವಾಗಿ ಪರಿಗಣಿಸಲಾಗದು. ಎಲ್ಲ ಮಕ್ಕಳೂ ಸಮನಾದ ಗುಣಮಟ್ಟದ ಸಾಧನೆಯನ್ನು ಮಾಡುವಲ್ಲಿ ಸಫಲರಾಗಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಶಿಕ್ಷಣ ಪಡೆದ ಹಾಗೂ ಪಡೆಯದ ಸನ್ನಿವೇಶಗಳ ಸಾರ್ವಜನಿಕರೆದುರಿಗೆ ತೆರೆದಿಡಬೇಕು.

### ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಸಿಗುವ ಸೌಲಭ್ಯಗಳ ಕುರಿತು ಅಧ್ಯಾಪಕರು, ಸಮುದಾಯದ ಸದಸ್ಯರು ಮತ್ತು ಪೋಷಕರಿಗೆ ಅರಿವು ಮೂಡಿಸಬೇಕು:

ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳು ಅನೇಕ ಸೌಲಭ್ಯಗಳನ್ನು ಒದಗಿಸುತ್ತದೆ. ಆದರೆ ಇದಕ್ಕೆ ಸಂಬಂಧಸಿದ ವಿವರಗಳು ಪೋಷಕರಿಗಾಗಲೀ ಅಧ್ಯಾಪಕರಿಗಾಗಲೀ ಸಮುದಾಯದ ಸದಸ್ಯರಿಗಾಗಲೀ ತಿಳಿದಿರುವುದಿಲ್ಲ. ಇವುಗಳನ್ನು ಕ್ರೋಢೀಕರಿಸಿ ಅಗತ್ಯವಾದ ಅರಿವು ಮೂಡಿಸಬೇಕು. ಅಧ್ಯಾಪಕರು ಸಮುದಾಯದ ಸದಸ್ಯರನ್ನು ವಿಶೇಷವಾಗಿ ಭೇಟಿಮಾಡಿ ಸಮಾಜದ ಅಂಚಿನಲ್ಲಿರುವ ಮಕ್ಕಳ ಅಗತ್ಯವನ್ನು ಪೂರೈಸುವಲ್ಲಿ ಸಹಾಯಮಾಡುವಂತೆ, ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಸೇರಿಸುವಂತೆ, ಅಸಮಾನತೆಯನ್ನು ಕಡಿಮೆ ಮಾಡಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವಂತೆ ಅಭಿಪ್ರೇರಣೆ ನೀಡಬಹುದು.

### ಮಕ್ಕಳ ಬೆಳವಣಿಗೆಯ ಮಾಹಿತಿಯನ್ನು ಹೆತ್ತವರಿಗೆ ತಿಳಿಸಬೇಕು:

ಮಕ್ಕಳ ಸಾಧನೆಯ ಕುರಿತ ಮಾಹಿತಿ ಸಾಮಾನ್ಯವಾಗಿ ಪೋಷಕರಿಗೆ ಇರುವುದಿಲ್ಲ. ಕುಟುಂಬ ಮೂಲದ ಕಸುಬುಗಳನ್ನು ಮಾಡುವುದು ಶಿಕ್ಷಣ ಪಡೆಯಲು ಶಾಲೆಗೆ ಹೋಗುವುದಕ್ಕಿಂತ ಒಳ್ಳೆಯದು ಎಂದು ಅವರು ಕೆಲವೊಮ್ಮೆ ಅಂದುಕೊಳ್ಳುವುದುಂಟು. ಹಾಗಾಗಿ ಮಕ್ಕಳಲ್ಲಿ ಸಾಮರ್ಥ್ಯಗಳನ್ನು ಕೌಶಲಗಳನ್ನು ಬೆಳೆಸಿ, ಅದರ ಕುರಿತು ಅಧ್ಯಾಪಕರಿಗೆ ಮಾಹಿತಿ ನೀಡುವುದು ಒಳ್ಳೆಯದು. ಶಿಕ್ಷಣದ ಫಲಗಳನ್ನು ಕಡಿಮೆ ಸಮಯದಲ್ಲಿ ಮನಮುಟ್ಟಿಸಲು ಸಾಧ್ಯವಿಲ್ಲವಾದರೂ ತಮ್ಮ ಮಕ್ಕಳು ಧನಾತ್ಮಕವಾಗಿ ಬೆಳೆಯುತ್ತಿದ್ದಾರೆ ಎಂಬ ಅಂಶ ಅವರಿಗೆ ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸುತ್ತದೆ.

### ಸಮುದಾಯದೊಂದಿಗೆ ಆತ್ಮೀಯ ಸಂಬಂಧ ಬೆಳೆಸಿಕೊಳ್ಳಬೇಕು

ಸಮುದಾಯವು ಶಾಲಾ ವ್ಯವಸ್ಥೆಯ ಅವಿನಾಭಾವ ಅಂಗ ಎಂಬ ಭಾವನೆ ಬರುವಂತೆ ಅವರೊಂದಿಗೆ ಆತ್ಮೀಯ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವರಿಗೆ ಕೆಲವು ಪ್ರಮುಖ ಕೆಲಸಗಳನ್ನು ವಹಿಸಿ, ಅವರ ಕೊಡುಗೆಯನ್ನು ಪ್ರಶಂಸಿಸಬೇಕು. ಅವರು ಶಾಲೆಗೆ ಹತ್ತಿರವಾದಂತೆ ಶಿಕ್ಷಣದ ಪ್ರಾಮುಖ್ಯತೆ ಅವರಿಗೆ ಅರ್ಥವಾಗುತ್ತದೆ. ಅವರು ಸಮಾನತೆಯನ್ನು ಸಾಧಿಸಲು ಪೂರಕವಾದ ಸನ್ನಿವೇಶಗಳನ್ನು ಕಲ್ಪಿಸುವಲ್ಲಿ ಸಹಕರಿಸುತ್ತಾರೆ.

### ಸಂಶೋಧನೆಯನ್ನು ಪ್ರೋತ್ಸಾಹಿಸಬೇಕು

ಅಸಮಾನತೆಯನ್ನು ಹೋಗಲಾಡಿಸಬೇಕಾದರೆ ಅದಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಬೇಕು. ಸಮಾನತೆಯ ಸೂಚಕಗಳಾವುವು, ಸಮಾನತೆಗೆ ಅಡ್ಡಿ ಬರುವ ಅಂಶಗಳಾವುವು, ಈ ಅಂಶಗಳನ್ನು ನಿವಾರಿಸಲು ಪ್ರಯತ್ನಗಳು ಎಲ್ಲಿ ಪ್ರಾರಂಭವಾಗಬೇಕು ಎಂಬುದು ತಾನೇ ತಾನಾಗಿ ಗೊತ್ತಾಗುವುದಿಲ್ಲ. ಅದಕ್ಕೆ ಉದ್ದೇಶ ಪೂರ್ವಕ ಪ್ರಯತ್ನಗಳಾಗಬೇಕು. ಸಜ್ಜಿಕೆ ಸಿದ್ಧವಾಗಬೇಕು. ಇದು ಸಂಶೋಧನೆಯಿಂದ ಮಾತ್ರ ಸಾಧ್ಯ. ಅದರ ಆಧಾರದ ಮೇಲೆ ಅಗತ್ಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

## ವಿವಿಧ ನಿಯೋಗಗಳ ಸಹಕಾರ ಪಡೆಯಬೇಕು

ಕೇವಲ ಸರ್ಕಾರ ಮಾತ್ರ ಎಲ್ಲ ರೀತಿಯ ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಸಾಧಿಸಬೇಕು, ಎಂದು ಕೈಕಟ್ಟಿ ಕುಳಿತುಕೊಳ್ಳುವುದು ಸಲ್ಲದು. ಸರ್ಕಾರೇತರ ಸಂಸ್ಥೆಗಳು, ಸಮುದಾಯ, ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಕ್ಷೇತ್ರಗಳ ತಜ್ಞರು ಎಲ್ಲರೂ ಸೇರಿ ಕಾರ್ಯೋನ್ಮುಖರಾದಾಗ ಮಾತ್ರ ಶೈಕ್ಷಣಿಕ ಅವಕಾಶಗಳ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

## ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶಾಲಾ ಸಿಬ್ಬಂದಿಗೆ ತರಬೇತಿ ಕೊಡಬೇಕು.

ಸಮಾನ ಅವಕಾಶಗಳನ್ನು ಒದಗಿಸುವಲ್ಲಿ ಅಡ್ಡಿಬರುವ ಅಸಮಾನತೆ ಅಸ್ತಿತ್ವದಲ್ಲಿರಲು ಹಲವಾರು ಕಾರಣಗಳಿವೆ. ಕೆಲವನ್ನು ಶಾಲಾ ಸಿಬ್ಬಂದಿಗಳೇ ಪರಿಹರಿಸಬಹುದು. ಶಾಲೆ ವಿದ್ಯಾರ್ಥಿ ಸ್ನೇಹಿಯಾಗುವಂತೆ ಮಾಡಬೇಕು. ವಿದ್ಯಾರ್ಥಿಗಳು ಶಾಲೆಯನ್ನು ಪ್ರೀತಿಸುವಂತಾಗಬೇಕು. ಇದು ಸಾಧ್ಯವಾಗಬೇಕಾದರೆ ಶಾಲಾ ಸಿಬ್ಬಂದಿ ಮಕ್ಕಳನ್ನು ಪ್ರೀತಿಸಬೇಕು. ಅವರ ಕುರಿತ ನಿಜವಾದ ಕಾಳಜಿ ವಹಿಸಬೇಕು. ವಿಶೇಷ ಕಲಿಕಾ ಅನುಭವಗಳನ್ನು ವೈಯಕ್ತಿಕ ಅಗತ್ಯಗಳ ಹಿನ್ನೆಲೆಯಲ್ಲಿ ನೀಡಬೇಕು. ಶಿಕ್ಷಣ ನೀಡುವ ವಿಶೇಷ ಕಾರ್ಯಕ್ರಮಗಳನ್ನು ಯೋಜಿಸಬೇಕು. ಉದಾಹರಣೆಗೆ, ವಿದ್ಯಾರ್ಥಿಗಳಿಗೆ ಮನೆಯ ಹತ್ತಿರದಲ್ಲಿ ಶಾಲೆ ಇಲ್ಲವಾದರೆ ಪರ್ಯಾಯ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇಲ್ಲವೇ ಮಕ್ಕಳಿಗೆ ಸಾರಿಗೆ ವ್ಯವಸ್ಥೆಗೆ ಏರ್ಪಾಡು ಮಾಡಬೇಕು.

## ಅಗತ್ಯವಾದ ಬದಲಾವಣೆಗಳನ್ನು ಜಾರಿಗೆ ತರಲು ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು

ಸ್ಥಳೀಯ ಸನ್ನಿವೇಶದಲ್ಲಿರುವ ಮಕ್ಕಳ ಸಂಖ್ಯೆ, ಶಾಲೆಗೆ ಹೋಗುತ್ತಿರುವ, ಹೋಗದಿರುವ ಮಕ್ಕಳ ವಿವರಗಳು, ಶಿಕ್ಷಣಕ್ಕೆ ಲಭ್ಯವಿರುವ ಸವಲತ್ತುಗಳು ಒಟ್ಟಿನಲ್ಲಿ ಶೈಕ್ಷಣಿಕ ಅವಕಾಶಗಳು ಜನರನ್ನು ತಲುಪುತ್ತಿಲ್ಲದರ ಕುರಿತ ಮಾಹಿತಿ ಇವೆಲ್ಲವನ್ನೂ ತಂತ್ರಜ್ಞಾನದ ಮೂಲಕ ಸಂಗ್ರಹಿಸಿ ಅಗತ್ಯವಿದ್ದವರಿಗೆ ಕೊಡಬೇಕು. ಪ್ರತಿ ಮಗುವಿನ ಸಮಾಜೋ ಆರ್ಥಿಕ ಪರಿಸ್ಥಿತಿ, ಶಾಲೆಗೆ ಬಾರದಿರುವುದಕ್ಕೆ ಕಾರಣಗಳು ಎಲ್ಲವನ್ನೂ ದಾಖಲಿಸಬೇಕು. ಈ ಆಧಾರ ದತ್ತಾಂಶ ಅಸಮಾನತೆಯನ್ನು ನಿವಾರಿಸಲು ಸಹಾಯವಾಗುತ್ತದೆ.

## ಸಮಾನತೆಯನ್ನು ಕುರಿತ ಸಮಗ್ರ ದೃಷ್ಟಿಕೋನದಿಂದ ಕಾರ್ಯೋನ್ಮುಖರಾಗಬೇಕು

ಮಕ್ಕಳು ಶಾಲೆಗೆ ಸೇರುವಂತಾದರೆ ಸಮಾನತೆ ಸಾಧಿಸಿದಂತಾಯಿತು ಎಂದು ಭಾವಿಸಬಾರದು. ಸಮಾನತೆಯ ಪರಿಕಲ್ಪನೆ ಇಷ್ಟೇ ಆದರೆ ಅದು ಕಾಲ ಮತ್ತು ಶ್ರಮ ವ್ಯರ್ಥವಾದಂತೆ. ಸಮಾನತೆಯ ಗಮನ ಶಿಕ್ಷಣಕ್ಕೆ ಅವಕಾಶದ ಜೊತೆಗೆ ಸಮರ್ಪಕ ಗುಣಮಟ್ಟ, ವ್ಯಕ್ತಿಘನತೆ, ಆತ್ಮವಿಶ್ವಾಸ, ಆತ್ಮಗೌರವ, ಸರ್ವಾಂಗೀಣ ಬೆಳವಣಿಗೆ ಇವೆಲ್ಲವನ್ನೂ ಒಳಗೊಳ್ಳಬೇಕು. ಅದು ನಿಜವಾದ ಅರ್ಥದಲ್ಲಿ ಅಸಮಾನತೆಯನ್ನು ಹೋಗಲಾಡಿಸುತ್ತದೆ. ಪ್ರತಿ ಮಗುವು ಗರಿಷ್ಟ ಸಾಧನೆ ಮಾಡಲು ಸಾಧ್ಯವಾಗುವಂತೆ ಗಮನವಿಡಬೇಕು.

## ಸಮಾನತೆಯ ಅವಕಾಶಗಳ ಅಸ್ತಿತ್ವವನ್ನು ಕಾಲಕಾಲಕ್ಕೆ ಖಚಿತಪಡಿಸಿಕೊಳ್ಳಬೇಕು

ಒಂದು ಕಾಲಘಟ್ಟದಲ್ಲಿ ಸಮಾನತೆಯ ಸಾಧನೆಗೆ ಪ್ರಯತ್ನಗಳನ್ನು ಮಾಡಿದರೆ ಸಾಲದು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಮಾನತೆ ಸತತವಾಗಿ ಸಾಧಿತವಾಗುತ್ತಿದೆ ಎಂಬುದನ್ನು ಸರ್ಕಾರ ಖಚಿತಪಡಿಸಿಕೊಳ್ಳಬೇಕು.

## ಶೈಕ್ಷಣಿಕ ಅವಕಾಶಗಳು ಸೂಕ್ತವಾಗಿ ಸಲ್ಲುತ್ತಿದೆ ಎಂಬುದನ್ನು ನಿರ್ವಹಿಸಬೇಕು

ಸರ್ಕಾರವು ಶಿಕ್ಷಣಕ್ಕಾಗಿ ವಿಶೇಷ ಅವಕಾಶಗಳನ್ನು ಸವಲತ್ತುಗಳನ್ನು ಘೋಷಿಸಿದರೆ ಸಾಲದು; ಅದು ಸೂಕ್ತ ವ್ಯಕ್ತಿಗಳನ್ನು ಸೂಕ್ತ ಸನ್ನಿವೇಶಗಳಲ್ಲಿ ಸಮರ್ಪಕವಾಗಿ ತಲುಪುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಹಾಗಾಗುತ್ತಿಲ್ಲವಾದರೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

## ಶಾಲಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಅಗತ್ಯಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬೇಕು

ಇಡೀ ದೇಶದಲ್ಲಿ ಎಲ್ಲ ಶಾಲೆಗಳ ಕಾರ್ಯನಿರ್ವಹಣೆ ಒಂದೇ ರೀತಿಯಾಗಿರಬೇಕಾಗಿಲ್ಲ. ಆಯಾ ಪ್ರದೇಶಗಳಲ್ಲಿ ಮಕ್ಕಳ ಅನುಕೂಲಕ್ಕೆ ತಕ್ಕಂತೆ ಶಾಲಾ ವೇಳೆ, ಅವಧಿ, ಪಠ್ಯಕ್ರಮ ಇತ್ಯಾದಿಗಳನ್ನು ರೂಪಿಸಕೊಳ್ಳಬೇಕು. ಸಮುದ್ರತೀರದ ಪ್ರದೇಶ, ಮಲೆನಾಡು, ಬೆಟ್ಟಗುಡ್ಡ ಇತ್ಯಾದಿ ವಿವಿಧ ಸನ್ನಿವೇಶಗಳಲ್ಲಿ ವಾಸಿಸುವ ಮಕ್ಕಳ ಭವಿಷ್ಯದ ಅಗತ್ಯಗಳು ಭಿನ್ನವಾಗಿರುತ್ತವೆ. ಈ ಆಗತ್ಯಗಳಿಗನುಗುಣವಾಗಿ ಕಲಿಕಾ ಅನುಭವಗಳನ್ನು ನೀಡಬೇಕು. ಈ ವ್ಯವಸ್ಥೆ ಶಾಲೆಗಳನ್ನು 'ಮಕ್ಕಳ ಸ್ನೇಹಿ' ಅಥವಾ 'ವಿದ್ಯಾರ್ಥಿಸ್ನೇಹಿ'ಯಾಗಿಸುತ್ತದೆ.

## ಕಾನೂನಾತ್ಮಕವಾದ ಮತ್ತು ರಚನಾತ್ಮಕವಾದ ಬದಲಾವಣೆಗಳನ್ನು ಜಾರಿಗೆ ತರಬೇಕು

ಸಾರ್ವಜನಿಕ ಸೇವೆಯೊಳಗೆ, ವಿವಿಧ ಹಂತಗಳಲ್ಲಿ ಪ್ರತ್ಯೇಕವಾಗಿ ಭಾರತೀಯ ಶಿಕ್ಷಣ ಸೇವಾ ಹಂತಗಳನ್ನು ರೂಪಿಸಬೇಕು. ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಕಡ್ಡಾಯ ಮಾಡಬೇಕು. ಮಕ್ಕಳು ಶಾಲೆಯಲ್ಲಿರಬೇಕಾದ ಸಮಯದಲ್ಲಿ ಬೇರೆಡೆ ಕೆಲಸ ಮಾಡಿಸಿಕೊಳ್ಳುವವರನ್ನು ಶಿಕ್ಷಿಸಬೇಕು. ಸಾರ್ವಜನಿಕ–ಖಾಸಗಿ ಸಹಯೋಗವನ್ನು ಗಟ್ಟಿಗೊಳಿಸಿ, ಶಿಕ್ಷಕ ತರಬೇತಿ, ಶಾಲಾ ವ್ಯವಸ್ಥೆ, ತಂತ್ರಜ್ಞಾನದ ಬಳಕೆ ಇವು ಸಬಲಗೊಳ್ಳುವಂತೆ ನೋಡಿಕೊಳ್ಳಬೇಕು. ಇದು ಸಮಾನತೆಯನ್ನು ಸ್ಥಾಪಿಸುವಲ್ಲಿ ಪರೋಕ್ಷವಾಗಿ ನೆರವಾಗುತ್ತದೆ.

## ಶೈಕ್ಷಣಿಕ ಅಸಮಾನತೆಯನ್ನು ನಿವಾರಿಸುವುದಕ್ಕೆ ಗಂಭೀರವಾಗಿ ಬದ್ಧರಾಗಬೇಕು

ಶೈಕ್ಷಣಿಕ ಅಸಮಾನತೆಯ ಅಸ್ತಿತ್ವ ಮತ್ತು ಪರಿಣಾಮಗಳ ಕುರಿತು ಗಂಭೀರವಾದ ಚರ್ಚೆಗಳು ನಡೆದರೆ ಸಾಲದು. ಅದಕ್ಕೆ ಸೂಕ್ತವಾದ ಕಾರ್ಯಕ್ರಮಗಳ ನಿಜವಾದ ಅನುಷ್ಠಾನವಾಗಬೇಕು. ಅದಕ್ಕೆ ಅಗತ್ಯವಾದ ಹಣಕಾಸು ಕಾಲಕಾಲಕ್ಕೆ ನಿಯತವಾಗಿ ಆದ್ಯತೆಯ ಮೇರೆಗೆ ಬಿಡುಗಡೆಯಾಗಬೇಕು. ಸಂಬಂಧಪಟ್ಟ ವ್ಯಕ್ತಿಗಳು ಬದ್ಧತೆಯೊಂದಿಗೆ ಕೆಲಸ ಮಾಡಬೇಕು. ಆಗ ಮಾತ್ರ ಸಮಾನತೆಯ ಯಶಸ್ಸು ಕಾಣುತ್ತದೆ. ಸಂಶೋಧನೆಗಳ ಪ್ರಕಾರ ಅಸಮಾನತೆಯನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ ಅಧ್ಯಯನಕ್ಕೆ ಒಳಪಟ್ಟ 157 ದೇಶಗಳಲ್ಲಿ ಭಾರತ 147ನೇ ಸ್ಥಾನದಲ್ಲಿದೆ. ಅಲ್ಲದೆ ನೈಜೀರಿಯ, ಸಿಂಗಪುರ, ಭಾರತ ಮತ್ತು ಅರ್ಜೆಂಟೈನ ದೇಶಗಳು ಅಸಮಾನತೆಗೆ ಕೊಡುಗೆ ನೀಡುತ್ತಿವೆ.

## 'ಎಲ್ಲರಿಗೂ ಶಿಕ್ಷಣ' ಕಾಯಿದೆಯನ್ನು ನಿಜವಾದ ಅರ್ಥದಲ್ಲಿ ಜಾರಿಗೆ ತರುವ ಪ್ರಯತ್ನಗಳಾಗಬೇಕು:

ಎಲ್ಲರಿಗೂ ಶಿಕ್ಷಣ ಕಾಯಿದೆ ಎಂಬುದು ಎಲ್ಲ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ರೂಪಿಸಿಕೊಂಡಿರುವ ಜಾಗತಿಕ ಬದ್ಧತೆ. 2000ದಲ್ಲಿ 164 ಸರ್ಕಾರಗಳು ಜಾಗತಿಕ ಶಿಕ್ಷಣ ವೇದಿಕೆಯಲ್ಲಿ ಇದಕ್ಕೆ ಸಹಿ ಹಾಕಿವೆ. 2015ನೇ ವರ್ಷದ ಒಳಗೆ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡಬೇಕೆಂಬುದು ಈ ವೇದಿಕೆಯಲ್ಲಿ ರೂಪಿಸಿಕೊಂಡ ಗುರಿ. ಇದನ್ನು ಭಾರತವೂ ಒಪ್ಪಿಕೊಂಡಿದೆ. ಕಾಲದ ಗಡಿಯಿಂದಾಚೆಗೆ ನಾಲ್ಕು ವರ್ಷಗಳು ಕಳೆದಿದ್ದರೂ ಗುರಿಸಾಧನೆಯಾಗಿಲ್ಲ. ಇದನ್ನು ಸಾಧಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನೂ ಆದ್ಯತೆಯ ಮೇಲೆ ರೂಪಿಸಿಕೊಂಡು ಭಾರತದ ಎಲ್ಲ ಮಕ್ಕಳಿಗೆ ಶಿಕ್ಷಣ ಸಿಗುವಂತೆ ಏರ್ಪಾಡುಗಳಾಗಬೇಕು. ಇದಕ್ಕೆ ಅಗತ್ಯವಾದ ರಾಜಕೀಯ ಬದ್ಧತೆ ಬಲಗೊಳ್ಳಬೇಕು. ಸಂಪನ್ಮೂಲಗಳು ಸಿಗುವಂತಾಗಬೇಕು.

## ಗುಣಮಟ್ಟದ ಶಾಲಾಪೂರ್ವ ಕಾರ್ಯಕ್ರಮಗಳನ್ನು ಯೋಜಿಸಬೇಕು

ಶಾಲಾ ಪೂರ್ವ ವರ್ಷಗಳಲ್ಲಿ ಮುಂದುವರಿದ ಶಿಶುಪಾಲನಾ ಕಾರ್ಯಕ್ರಮವೇ ಮೊದಲಾದ ಶಿಕ್ಷಣ ಮಧ್ಯವರ್ತನ ಕಾರ್ಯಕ್ರಮಗಳು ಸಮಾಜೋ ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ಶೈಕ್ಷಣಿಕ ಮತ್ತು ಜೀವನ ಯಶಸ್ಸಿಗೆ ಗಮನಾರ್ಹವಾಗಿ ಸಿದ್ಧಗೊಳಿಸುತ್ತವೆ ಎಂಬ ಅರಿವು ಈ ನಿಟ್ಟಿನಲ್ಲಿ ಆಸಕ್ತರ ಜವಾಬ್ದಾರಿಯನ್ನು ಹೆಚ್ಚಿಸಿವೆ. ಕಡ್ಡಾಯ ಮತ್ತು ಗುಣಮಟ್ಟದ ಶಾಲಾ ಪೂರ್ವ ಕಾರ್ಯಕ್ರಮಗಳನ್ನು ಜವಾಬ್ದಾರಿಯಿಂದ ಯೋಜಿಸುವುದು ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸಿ, ಭವಿಷ್ಯದ ಶಿಕ್ಷಣಕ್ಕೆ ಬುನಾದಿಯಾಗುವುದರ ಮೂಲಕ ಅಸಮಾನತೆಯನ್ನು ಕಡಿಮೆಮಾಡುತ್ತದೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ಶೈಕ್ಷಣಿಕ ಸಮಾನತೆಯನ್ನು ಸಾಧಿಸಲು ನಿಮ್ಮ ಮಿತಿಯಲ್ಲಿ ಕೈಗೊಳ್ಳಬಹುದಾದ ಎರಡು ಕಾರ್ಯಗಳನ್ನು ಹೆಸರಿಸಿ ಅದನ್ನು ಯೋಜಿಸಿ, ಅನುಷ್ಠಾನಗೊಳಿಸಿ.

## 4.6.3.2. ಶಾಲಾ ಮಟ್ಟದಲ್ಲಿ ಸಮಾನತೆ ಮತ್ತು ಸಮಾನಾವಕಾಶಗಳ ನಿಹಿತಾರ್ಥಗಳು

ಒಟ್ಟು ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣದ ಅವಕಾಶಗಳ ಸಮಾನತೆ ಸಾಧಿತವಾಗಬೇಕಾದರೆ ಶಾಲಾ ಮಟ್ಟದಲ್ಲಿ ಇದಕ್ಕೆ ಸೂಕ್ಷ್ಮವಾದ ಗಮನ ಕೊಡಬೇಕು. ಶಿಕ್ಷಣ ಮಾನವನ ಮೂಲಭೂತ ಹಕ್ಕು. ವ್ಯಕ್ತಿಗಳ ಗುಣಮಟ್ಟದ ಬದುಕಿಗೆ ಮತ್ತು ಉತ್ಪಾದಕತೆಗೆ ಹಾಗೂ ಎಲ್ಲ ಸಮಾಜಗಳ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಇದು ಒಂದು ಮೂಲಭೂತ ಅವಶ್ಯಕತೆ ಕೂಡ. ಈ ಕಾರಣಕ್ಕಾಗಿಯೇ ಶಿಕ್ಷಣಕ್ಕಾಗಿ ನೀಡಬೇಕಾದ ಸಮಾನ ಅವಕಾಶದ ಕುರಿತು ಎಲ್ಲ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ದಾಖಲೆಗಳು ಒತ್ತಿ ಹೇಳುತ್ತವೆ. 1948ರ ಮಾನವ ಹಕ್ಕುಗಳ ಕುರಿತ ಸಾರ್ವತ್ರಿಕ ಘೋಷಣೆ ಮತ್ತು 1966ರ ಅಂತರರಾಷ್ಟ್ರೀಯ ಒಡಂಬಡಿಕೆಯ ದಾಖಲೆಗಳು ಶಿಕ್ಷಣವು ಎಲ್ಲರಿಗೂ ದೊರಕಬೇಕೆಂದು ಹೇಳುತ್ತವೆ. ಹೆಚ್ಚು ಶಿಕ್ಷಣ ಮತ್ತು ಉತ್ತಮ ಆರೋಗ್ಯ, ಹೆಚ್ಚಿನ ಆಯುಷ್ಯ ಇವುಗಳಿಗೆ ಧನಾತ್ಮಕ ಸಂಬಂಧವಿದೆ. ಹೀಗಾಗಿ ಎಲ್ಲರಿಗೂ ಶಿಕ್ಷಣಕ್ಕೆ ಸಮಾನ ಅವಕಾಶಗಳಿರಬೇಕು. ಶಿಕ್ಷಣದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು.

ಶಾಲಾ ಸನ್ನಿವೇಶದಲ್ಲಿ ಸಮಾನತೆಯನ್ನು ಕಾಪಾಡುವುದು ಎಂದರೆ ಸಮತೆಯನ್ನು ಕಾಪಾಡಲು ತೆಗೆದುಕೊಳ್ಳುವ ಕ್ರಮಗಳೇ ಅಗಿರುತ್ತವೆ. 'ಸಮತೆ' ಎಂದರೇನು ಎಂಬುದನ್ನು ನೀವು ಈಗಾಗಲೇ ಇತರ ಕೋರ್ಸುಗಳ ಅಧ್ಯಯನ ಸಂದರ್ಭದಲ್ಲಿ ಕಲಿತಿದ್ದೀರಿ. ಸಮಾನತೆಯನ್ನು ಸಾಧಿಸಲು ತೆಗೆದುಕೊಳ್ಳುವ ಪರಿಹಾರ ಕ್ರಮಗಳೇ 'ಸಮತೆ'. ಇದು ನ್ಯಾಯ, ಅವಕಾಶ ಮತ್ತು ಉತ್ತಮ ಸಾಧನೆಗೆ ಒದಗಿಸುವ ಕ್ರಮಗಳು.

ಶೈಕ್ಷಣಿಕ ಸಮತೆ ಸಾಮಾನ್ಯವಾಗಿ ಉತ್ತಮಿಕೆ ಮತ್ತು ಸಮತೆಗೆ ಸಂಬಂಧಿಸಿದುದು. ಶೈಕ್ಷಣಿಕ ಸಮತೆ ಎರಡು ಅಂಶಗಳನ್ನು ಆಧರಿಸಿರುತ್ತದೆ. ಮೊದಲನೆಯದು ನ್ಯಾಯಪರತೆ. ಅಂದರೆ ಶೈಕ್ಷಣಿಕ ಯಶಸ್ಸಿಗೆ ಅಗತ್ಯವಾದ ಸಾಮರ್ಥ್ಯಗಳನ್ನು ಪಡೆಯುವಲ್ಲಿ ವ್ಯಕ್ತಿಯ ವೈಯಕ್ತಿಕ ಸನ್ನಿವೇಶಗಳು ಅಡ್ಡಿಯಾಗಬಾರದು. ಎರಡನೆಯದು, ಅಂತರ್ಗತತೆ. ಅಂದರೆ ಶಾಲಾ ಸನ್ನಿವೇಶದಲ್ಲಿ ಎಲ್ಲರಿಗೂ ಅನ್ವಯಿಸುವ ಸಮಗ್ರ ಗುಣಮಟ್ಟ. ಇವೆರಡೂ ಅವಿನಾಭಾವ ಸಂಬಂಧವಿರುವ ಅಂಶಗಳು. ಶೈಕ್ಷಣಿಕ ಯಶಸ್ಸಿಗೆ ಅಡ್ಡಿಯಾಗುವ ಅಂಶಗಳು ಅಂತರ್ಗತತೆಯ ಸನ್ನಿವೇಶದಲ್ಲಿ ಇಲ್ಲವಾಗುವಂತೆ ಕ್ರಮಗಳನ್ನು ಕೈಗೊಳ್ಳುವುದೇ ಸಮತೆ.

ಕೆಲವರು ಇತರರಿಗಿಂತ ಹೆಚ್ಚು ಅನನುಕೂಲ ಸ್ಥಿತಿಯಲ್ಲಿರುತ್ತಾರೆ, ವ್ಯಕ್ತಿಗಳ ಈ ದುರದೃಷ್ಟ ಮತ್ತು ಅಸಾಮರ್ಥ್ಯಗಳಿಗೆ ಪರಿಹಾರಗಳನ್ನು ಸಜ್ಜುಗೊಳಿಸಬೇಕು ಎಂಬುದನ್ನು ಸಮತೆ ಗುರುತಿಸುತ್ತದೆ. ಉದಾಹರಣೆಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸರ್ಕಾರವು ವೃತ್ತಿಪರ ಪರೀಕ್ಷೆಗಳಿಗೆ ವಿಶೇಷ ಕೋಚಿಂಗ್ ಸೌಕರ್ಯಗಳನ್ನು ಉಚಿತವಾಗಿ ನೀಡುತ್ತದೆ. ಇದು ಸಮತೆಯ ಒಂದು ಉಪಕ್ರಮ. ಈ ವಿದ್ಯಾರ್ಥಿಗಳಿಗೆ ಕೊಡುವ ರಿಯಾಯತಿಗಳು, ಶಿಷ್ಯವೇತನಗಳು ಎಲ್ಲವೂ ಸಮತೆಯ ಮಾರ್ಗೋಪಾಯಗಳೇ. ಈ ಎಲ್ಲ ಸನ್ನಿವೇಶಗಳಲ್ಲೂ ಸಂಬಂಧಪಟ್ಟ ಸಂಸ್ಥೆಗಳು ಅವಕಾಶಗಳ ಸಮತೆ ನ್ಯಾಯಪರತೆಯ ಮಾರ್ಗ ಎಂದೇ ಭಾವಿಸುತ್ತವೆ.

ಶಾಲೆಗಳಲ್ಲಿ ಮತ್ತು ಶಿಕ್ಷಣದಲ್ಲಿ ಸಮಾನತೆಗೆ ಅಡ್ಡಿಬರುವ ನಾವು ಈಗಾಗಲೇ ಚರ್ಚಿಸಿದ್ದೇವೆ. ಆ ಕಾರಣಗಳಿಗೆ ಸಂಬಂಧಿಸಿದ ನಿಹಿತಾರ್ಥಗಳನ್ನು ಕೆಳಕಂಡಂತೆ ಗಮನಿಸಬಹುದು.

ಶ್ರೇಣೀಕರಣ ವ್ಯವಸ್ಥೆಯಲ್ಲಿ ವ್ಯಕ್ತಿಯ ಪ್ರಯತ್ನದಿಂದ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನ ಗಳಿಸಬಹುದಾದ ಸಾಮಾಜಿಕ ವರ್ಗದ ಕಡೆಗೆ ಸಮಾಜವನ್ನು ಪ್ರೋತ್ಸಾಹಿಸಬೇಕು. ವ್ಯಕ್ತಿಯ ಸಾಮಾಜಿಕ ಸ್ಥಾನಮಾನ ಏನೇ ಇರಲಿ, ಕುಟುಂಬದ ಸಾಮಾಜಿಕ ಸ್ಥಾನಮಾನವೇನೇ ಇರಲಿ, ವ್ಯಕ್ತಿ ಬೆಳೆಯಲು ವಿಕಾಸಹೊಂದಲು ಅಗತ್ಯವಾದ,

ಸಮಾಜದಲ್ಲಿ ಭಾಗವಹಿಸಲು ಪೂರಕವಾದ ಸವಲತ್ತುಗಳು ಮತ್ತು ಅವಕಾಶಗಳನ್ನು ಸಮಾನವಾಗಿ ಎಲ್ಲರಿಗೂ ಒದಗಿಸಿಕೊಡಬೇಕು.

ಶಿಕ್ಷಣ ನೀಡುವ ಸಂಸ್ಥೆಗಳು ಸಾಮಾಜಿಕವಾಗಿ ಆರ್ಥಿಕವಾಗಿ ಹೆಚ್ಚಿನ ಸ್ಥಾನಮಾನವಿರುವ ಕುಟುಂಬದ ಮಕ್ಕಳು ಮತ್ತು ಕಡಿಮೆ ಸ್ಥಾನಮಾನವಿರುವ ಕುಟುಂಬದ ಮಕ್ಕಳ ನಡುವೆ ಯಾವುದೇ ತಾರತಮ್ಯ ಮಾಡಬಾರದು. ಎಲ್ಲರಿಗೂ ಸಮನಾದ ಅವಕಾಶಗಳನ್ನ ಒದಗಿಸಿಕೊಡಬೇಕು.

ಅವಕಾಶವಂಚಿತರ ಕುಟುಂಬದ ಮಕ್ಕಳನ್ನು ಅವರ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು. ಅವರ ಸಂಸ್ಕೃತಿಗೆ, ಭಾವನೆಗಳಿಗೆ, ಭಾಷೆಗೆ ಯಾವುದೇ ಧಕ್ಕೆ ಬಾರದಂತೆ ಗೌರವದಿಂದ ಕಾಣಬೇಕು. ಪ್ರತಿಯೊಂದು ಮಗುವೂ ಅನನ್ಯವಾದುದು ಎಂಬ ಮೂಲಭೂತ ಸತ್ಯದ ಹಿನ್ನೆಲೆಯಲ್ಲಿ ಮಕ್ಕಳನ್ನು ಅರ್ಥಮಾಡಿಕೊಳ್ಳಬೇಕು.

ಅವಕಾಶವಂಚಿತ ಮಕ್ಕಳಿಗೆ ಶಾಲಾ ಸನ್ನಿವೇಶಗಳಿಗೆ, ಪಠ್ಯಕ್ರಮದ ಚಟುವಟಿಕೆಗಳಿಗೆ ಹೊಂದಿಕೊಳ್ಳಲು ಸುಲಭವಾಗುವಂತೆ ಹೆಚ್ಚುವರಿ ಕಲಿಕಾ ಅನುಭವಗಳನ್ನು ಕೊಡಬೇಕು. ಶಾಲೆಯ ಭಾಷೆ ಮತ್ತು ಕುಟುಂಬದ ಭಾಷೆಗಳು ಭಿನ್ನವಾದಾಗ ಶಾಲೆಯ ಭಾಷೆಗೆ ಹೊಂದಿಕೊಳ್ಳಲು ಪೂರಕವಾಗುವ ಅಭ್ಯಾಸಗಳನ್ನು ಕಲಿಸಬೇಕು. ಈ ಮಕ್ಕಳು ಅಧ್ಯಯನಕ್ಕೆ ಪೂರಕವಾದ ವಾತಾವರಣದಿಂದ ಬಂದಿರುವುದಿಲ್ಲವಾದುದರಿಂದ ಅವರಿಗೆ ಮೂಲಭೂತ ಕಲಿಕಾ ಕೌಶಲಗಳನ್ನೂ ಸಾವಧಾನವಾಗಿ, ತಾಳ್ಮೆಯಿಂದ ಕಲಿಸಬೇಕು. ಮನೆಯಲ್ಲಿ ಹೆಚ್ಚುವರಿ ಬೆಂಬಲ ಇರುವುದಿಲ್ಲವೆಂಬುದನ್ನು ಅರ್ಥಮಾಡಿಕೊಂಡು ಅವರಿಗೆ ಕಲಿಯಲು ಅಗತ್ಯವಾದ ವಾತಾವರಣವನ್ನು ಶಾಲೆಯಲ್ಲೇ ಸೃಷ್ಟಿಸಿ, ಅವರ ವಿದ್ಯಾಭ್ಯಾಸದ ಸಂಪೂರ್ಣ ಮೇಲ್ವಿಚಾರಣೆಯನ್ನು ಶಾಲಾ ಸಿಬ್ಬಂದಿಯೇ ವಹಿಸಿಕೊಳ್ಳಬೇಕು.

ಶಾಲೆಯಲ್ಲಿ ಸಮಾನತೆಯನ್ನು ಸಾಧಿಸುವುದು ಎಂದರೆ ಎಲ್ಲ ಮಕ್ಕಳಿಗೂ ದಾಖಲಾತಿಗೆ ಅವಕಾಶ ಕೊಡುವುದು ಮಾತ್ರವಲ್ಲ. ಎಲ್ಲರಿಗೂ ಅವರವರಿಗೆ ಅಗತ್ಯವಾದಷ್ಟು ಮಾನವೀಯ, ಸಾಮಾಜಿಕ, ಆರ್ಥಿಕ, ಪರಿಸರಾತ್ಮಕ, ಶೈಕ್ಷಣಿಕ, ಭಾವನಾತ್ಮಕ ಮತ್ತು ವೈಯಕ್ತಿಕ ಬೆಂಬಲವನ್ನು ಕೊಡುವುದು ಬಹಳ ಮುಖ್ಯವಾಗುತ್ತದೆ. ಶಾಲೆಯ ಸಿಬ್ಬಂದಿ ವರ್ಗದ ಪ್ರತಿಯೊಬ್ಬರೂ ಇದನ್ನು ಅರ್ಥಮಾಡಿಕೊಳ್ಳಬೇಕು

ಅವಕಾಶವಂಚಿತರನ್ನು ಗೌರವದಿಂದ ಕಂಡರೆ ಸಾಲದು. ಅವರ ಪೋಷಕರನ್ನೂ ಗೌರವಿಸಬೇಕು. ಅವರ ಜೊತೆಯಲ್ಲಿ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳಬೇಕು. ಅವರ ಮಕ್ಕಳ ಶಿಕ್ಷಣದಲ್ಲಿ ಅವರ ಪಾತ್ರವೇನು ಎಂಬುದನ್ನು ಮನದಟ್ಟು ಮಾಡಬೇಕು. ಶಾಲೆಯ ವಿಶೇಷ ದಿನಗಳಲ್ಲಿ ಅವರನ್ನು ಬರಮಾಡಿಕೊಳ್ಳಬೇಕು.

ಸಾಧ್ಯವಾದರೆ, ಅಗತ್ಯವಿರುವ ಕಡೆಗಳಲ್ಲಿ ಅವಕಾಶವಂಚಿತರ ಕುಟುಂಬಗಳ ಸದಸ್ಯರಿಗೆ 'ವಯಸ್ಕ ಶಿಕ್ಷಣ'ದ ಏರ್ಪಾಡು ಮಾಡಬೇಕು.

ವಿದ್ಯಾರ್ಥಿಗಳು ಸಹಪಾಠಿಗಳೊಂದಿಗೆ ಭೇದಭಾವವಿಲ್ಲದೆ ಬೆರೆಯುತ್ತಾರೆ. ಅದು ಅವರ ಸಹಜ ಸ್ವಭಾವ. ಇದಕ್ಕೆ ಯಾವುದೇ ಅಡೆತಡೆ ಬಾರದಂತೆ, ಶಾಲೆಯ ಸಿಬ್ಬಂದಿವರ್ಗದ ಕಡೆಯಿಂದ ಯಾವುದೇ ಋಣಾತ್ಮಕ ಪ್ರಭಾವ ಉಂಟಾಗದಂತೆ ನೋಡಿಕೊಳ್ಳಬೇಕು(ಉದಾಹರಣೆಗೆ, ಕೆಲವು ಶಾಲೆಗಳಲ್ಲಿ ಹಣವಂತರನ್ನು ಶಿಕ್ಷಕ ರಕ್ಷಕ ಸಂಘದ ಪದಾಧಿಕಾರಿಗಳನ್ನಾಗಿ ಮಾಡುವ ಪರಿಪಾಠವಿದೆ. ಅಂತಹ ಸನ್ನಿವೇಶಗಳು ಉಂಟಾಗಬಾರದು).

ಶಾಲೆಯ ಶಿಸ್ತು ನಿಯಮಗಳಿಗೆ ಹೊಂದಿಕೊಳ್ಳಲು ಕೆಲವು ಮಕ್ಕಳಿಗೆ ಸ್ವಲ್ಪ ಹೆಚ್ಚು ದಿನಗಳು ಬೇಕಾಗಬಹುದು. ಈ ನಮ್ಯತೆಯನ್ನು ಅಳವಡಿಸಿಕೊಳ್ಳಬೇಕು.

ಪೋಷಕರನ್ನು ಬಿಟ್ಟರೆ ಮಕ್ಕಳನ್ನು ಹೆಚ್ಚು ಪ್ರೀತಿಸುವವರು ಶಿಕ್ಷಕರು ಎಂಬ ಮಾತಿದೆ. ಇದನ್ನು ಸತ್ಯವಾಗಿಸುವಲ್ಲಿ ಅಗತ್ಯವಾದ ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಬೇಕು.

ಮಕ್ಕಳು ಪಾಠ ಓದಿಕೊಂಡು ಬರುತ್ತಿದ್ದಾರೆಯೇ ಎಂಬುದನ್ನು ಮಾತ್ರವಲ್ಲದೆ ಎಲ್ಲರೂ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ಶಿಸ್ತು, ಸಹಕಾರ, ಜವಾಬ್ದಾರಿಗಳನ್ನು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆಯೇ ಎಂಬುದರ ಕಡೆಗೆ ಗಮನವಿಡಬೇಕು.

ಸಾಮಾನ್ಯವಾಗಿ ಮಕ್ಕಳ ಸಾಧನೆ ಒಂದೇ ಮಟ್ಟದಲ್ಲಿರುವುದಿಲ್ಲ. ಸಾಮಾನ್ಯವಾಗಿ ಅನುಕೂಲಸ್ಥರಲ್ಲದ ಮಕ್ಕಳು ಶಾಲಾ ಸಾಧನೆಯಲ್ಲಿ ಹಿಂದಿರುತ್ತಾರೆ. ಇದಕ್ಕೆ ಕಾರಣವನ್ನು ಕಂಡುಹಿಡಿದು ಅದನ್ನು ನಿವಾರಿಸಲು ವಿಶೇಷ ಗಮನಕೊಡಬೇಕು. ಸಾಧನೆಯಲ್ಲೂ ಸಮಾನತೆಯನ್ನು ಸಾಧಿಸಬೇಕು.

ಆರ್ಥಿಕ ಅಸಮಾನತೆಯಿಂದಾಗುವ ಪರಿಣಾಮಗಳನ್ನು ಶಾಲೆ ಮತ್ತು ಶಾಲಾ ಸಿಬ್ಬಂದಿ, ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಸಮುದಾಯ ಇವು ಒಟ್ಟಾಗಿ ಸರಿದೂಗಿಸುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳು ಯಾವುದೇ ಹಿನ್ನೆಲೆಯಿಂದ ಬಂದವರಾಗಿರಲಿ, ಅವರಿಗೆ ಗರಿಷ್ಠ ಅಗತ್ಯವಾದ ಶೈಕ್ಷಣಿಕ ಅನುಭವಗಳನ್ನು, ಒಳಹರಿವುಗಳನ್ನು, ಶೈಕ್ಷಣಿಕ ಸೌಲಭ್ಯಗಳನ್ನು ಶಾಲೆಯಲ್ಲಿಯೇ ಒದಗಿಸಬೇಕು. ಸರ್ಕಾರ ಮತ್ತು ಸಮುದಾಯ ಈ ನಿಟ್ಟಿನಲ್ಲಿ ಶಾಲೆಗ ಅಗತ್ಯವಾದ ಅರ್ಹ ಮತ್ತು ಸಮರ್ಥ ಶಿಕ್ಷಕರ ನೇಮಕಾತಿ, ಹಣಕಾಸಿನ ಬೆಂಬಲ, ನೈತಿಕ ಬೆಂಬಲ, ವಿದ್ಯಾರ್ಥಿ ವೇತನಗಳು, ವಿದ್ಯಾರ್ಥಿ ಪ್ರೋತ್ಸಾಹಕಗಳು, ಇವುಗಳನ್ನು ಒದಗಿಸಬೇಕು. ಅವಕಾಶ ವಂಚಿತ ಪೋಷಕರಿಗೆ ನೇರವಾಗಿ ಆರ್ಥಿಕ ಸಹಾಯ ಒದಗಿಸಲಾಗದಿದ್ದರೂ ಅವರ ಮಕ್ಕಳಿಗೆ ಶೈಕ್ಷಣಿಕವಾಗಿ ಅಗತ್ಯವಾದ ಎಲ್ಲವನ್ನೂ ಶಾಲೆಯ ಮೂಲಕವೇ ಒದಗಿಸುವ ನಾಯಕತ್ವವನ್ನು ವಹಿಸಿಕೊಳ್ಳಬೇಕು. ಈಗಿರುವಂತೆ ಮಧ್ಯಾಹ್ನದ ಊಟ, ಪೌಷ್ಟಿಕ ಆಹಾರ ಒದಗಿಸುವಿಕೆ ಇತ್ಯಾದಿ ಕ್ರಮಗಳನ್ನು ಮುಂದುವರಿಸಬೇಕು. ಶಾಲಾ ವಿದ್ಯಾರ್ಥಿಗಳಿಗೆ ಸರ್ಕಾರ ಮತ್ತು ಇತರ ನಿಯೋಗಗಳಿಂದ ಸಿಗುವ ಎಲ್ಲ ರೀತಿಯ ಸವಲತ್ತುಗಳ ಮಾಹಿತಿ ಪಡೆದುಕೊಂಡು ಅದು ಅವರಿಗೆ ದೊರಕುವಂತೆ ಮಾಡಬೇಕು. ಕೆಲವು ಸವಲತ್ತುಗಳಿಗೆ ಸ್ವಲ್ಪ ಸಂಕೀರ್ಣವಾದ ಪ್ರಕ್ರಿಯೆಗಳಿರಬಹುದು. ಅದನ್ನು ಮಾಡಿಕೊಂಡು ಅವರು ಆಯಾ ಅವಕಾಶಗಳನ್ನು ಪಡೆಯುವಂತೆ ಶಾಲಾ ಸಿಬ್ಬಂದಿ ಸಹಾಯಮಾಡಬೇಕು.

ಸರ್ಕಾರವು ಅವಕಾಶವಂಚಿತರಿಗೆ ಮೀಸಲಾತಿ ಪಾಲಿಸುವುದು ಸರಿಯೇ. ಆದರೆ ಈಗಿನ ಮೀಸಲಾತಿ ಅರ್ಹತೆಯ ಅಡಿಯಲ್ಲಿ ಬಾರದ ಬುದ್ಧಿವಂತ ಬಡಮಕ್ಕಳು ಅಥವಾ ಮಧ್ಯಮ ವರ್ಗದ ವಿದ್ಯಾರ್ಥಿಗಳು ಅವಕಾಶ ವಂಚಿತರಾಗದಂತೆ ನೋಡಿಕೊಳ್ಳಬೇಕು.

ಶಾಲೆಯು ಹೆಣ್ಣು ಮತ್ತು ಗಂಡುಮಕ್ಕಳಿಬ್ಬರನ್ನೂ ಸಮಾನವಾಗಿ ಕಾಣಬೇಕು. ಎಲ್ಲರಿಗೂ ಎಲ್ಲ ರೀತಿಯ ಕೆಲಸಗಳನ್ನೂ ವಹಿಸಬೇಕು. ಧನಾತ್ಮಕ ಮೌಲ್ಯಗಳು ಯಾರಲ್ಲಿ ಕಂಡಬಂದರೂ ಅದನ್ನು ಮೆಚ್ಚಿಕೊಳ್ಳಬೇಕು. ಧೈರ್ಯವಂತಿಕೆ, ಸಾಹಸ, ಗಟ್ಟಿತನ, ಸಮಸ್ಯೆ ಎದುರಿಸುವ ಸಾಮರ್ಥ್ಯ, ಸಮಸ್ಯಾ ನಿವಾರಣೆ ಇತ್ಯಾದಿ ಮೌಲ್ಯಗಳನ್ನು ಗಂಡುಮಕ್ಕಳಲ್ಲಿ ಬಯಸಿ ಮೆಚ್ಚಿಕೊಳ್ಳುವ ಪರಿಪಾಠವಿದೆ. ಕರುಣೆ, ವಿನಯ, ಮೃದುತ್ವ, ವಚನ ಪಾಲನೆ, ಸಹಕಾರ ಇತ್ಯಾದಿ ವಿಷಯಗಳಿಗೆ ಹೆಣ್ಣುಮಕ್ಕಳನ್ನು ಮೆಚ್ಚಿಕೊಳ್ಳುವ ಸನ್ನಿವೇಶಗಳಿವೆ. ಮೌಲ್ಯಗಳು ಎಲ್ಲ ವ್ಯಕ್ತಿಗಳಿಗೂ ಸಮನಾದುದೇ. ಮೂಲಭೂತವಾಗಿ ಅಂದರೆ ಜನ್ಮಜಾತವಾಗಿ ಬಂದಿರುವ ಕೆಲವು ವ್ಯತ್ಯಾಸಗಳನ್ನು ಸಾಮರ್ಥ್ಯಗಳನ್ನು ಬಿಟ್ಟರೆ ಗಂಡು ಮತ್ತು ಹೆಣ್ಣುಮಕ್ಕಳಿಬ್ಬರೂ ಎಲ್ಲ ವಿಷಯಗಳಲ್ಲೂ ಸಮರ್ಥರು ಸಮಾನರು ಎಂಬುದನ್ನು ಅರಿತುಕೊಳ್ಳಬೇಕು. 'ಹುಡುಗಿಯಾಗಿ ನೀನು ಹೀಗೆ ಮಾಡಬಹುದೇ', 'ಹುಡುಗನಾಗಿ ನೀನು ಹೀಗೆ ಮಾಡಬಹುದೇ', ಹುಡುಗಿಯಾದರೂ ಅವಳು ಏನು ಸಾಧನೆ ಮಾಡಿದ್ದಾಳೆ ನೋಡಿ' ಇಂತಹ ಮಾತುಗಳನ್ನು ಆಡಬಾರದು. ಇದೇ ಭಿನ್ನ ಲಿಂಗ ವರ್ತನೆಗಳನ್ನು ಸಮಾಜದಲ್ಲಿ ಮುಂದುವರಿಸುತ್ತವೆ.

ಪೋಷಕರೂ ಮಗ ಮತ್ತು ಮಗಳು ಇಬ್ಬರನ್ನೂ ಸಮಾನವಾಗಿ ನೋಡಿಕೊಳ್ಳಬೇಕು, ಗೌರವಿಸಬೇಕು. ಇಬ್ಬರಿಗೂ ಶಿಕ್ಷಣ, ಕ್ರೀಡೆ, ಸಾಹಸ, ಕಲೆ ಇತ್ಯಾದಿ ಅವರವರಿಗೆ ಆಸಕ್ತಿ ಇರುವ ವಿಷಯಗಳಲ್ಲಿ ಶಿಕ್ಷಣ ಮತ್ತು ಅವಕಾಶಗಳು ಸಿಗುವಂತೆ ನೋಡಿಕೊಳ್ಳಬೇಕು. 'ಅವನಾದರೆ ಹುಡುಗ; ಹಾಗೆ ಮಾಡಿದರೂ ನಡೆಯುತ್ತದೆ, ನೀನು ಹುಡುಗಿ; ಹೀಗೆ ಮಾಡಬಾರದು' ಇತ್ಯಾದಿ ಮಾತುಗಳು ಸರಳವಾಗಿ ಕಂಡರೂ ಅಪಾಯಕಾರಿಯಾದ ಪರಿಣಾಮಗಳನ್ನು ಉಂಟುಮಾಡುತ್ತದೆ. ಹಾಗೆ ತಾಯಿಯಿಂದ ಹೇಳಿಸಿಕೊಂಡ ಮಗಳು ತನ್ನ ಮಗಳಿಗೂ ಅದನ್ನೇ ಹೇಳುತ್ತಾಳೆ. ಹಾಗಾಗಿ ಇಂತಹ ಪರಿಕಲ್ಪನೆಗಳು, ಅಭಿವ್ಯಕ್ತಿಗಳು ನಿಲ್ಲಬೇಕು. ಹುಡುಗಿಯರಿಗೆ ಶಿಕ್ಷಣ ಮತ್ತು ತರಬೇತಿಗಳಲ್ಲಿ ಹೂಡಿಕೆ ಅಗತ್ಯವಿಲ್ಲ; ಅವಳು ಮತ್ತೊಂದು ಕುಟುಂಬ ಸೇರುತ್ತಾಳೆ ಇತ್ಯಾದಿ ಆಲೋಚನೆಗಳು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಇಲ್ಲದಿಲ್ಲ. ಈ ರೀತಿಯ ಭಾವನೆಗಳನ್ನು ನಿವಾರಿಸಲು, ಹೆಣ್ಣುಮಕ್ಕಳನ್ನು

ಉತ್ತಮ ರೀತಿಯಲ್ಲಿ ಬೆಳೆಸಲು ಅಗತ್ಯವಾದ ಕ್ರಮಗಳನ್ನು ಶಾಲೆಯು ವಿವಿಧ ಕಾರ್ಯಕ್ರಮಗಳ ಮೂಲಕ ಪೋಷಕರಿಗೆ ಮನಗಾಣಿಸಬೇಕು. ಮಹಿಳೆಯರ ಸಾಧನೆಯನ್ನು ತೋರಿಸುವ ಪುಸ್ತಕಗಳನ್ನು ಚಿತ್ರಗಳನ್ನು ನುಡಿ ಫಲಕಗಳನ್ನು ಶಾಲೆಯಲ್ಲಿ ಕಾಣುವಂತೆ ಪ್ರದರ್ಶಿಸಬೇಕು. ಹುಡುಗಿಯರ ಕುರಿತು ಹುಡುಗರಿಗೆ ಧನಾತ್ಮಕ ಪರಿಕಲ್ಪನೆ ಉಂಟಾಗುವಂತೆ ಮಾದರಿಗಳನ್ನು ಮುಂದಿಡಬೇಕು. ಸಮಾಜ ಹುಡುಗಿಯರಿಗೆ ನಿರಾಕರಿಸಿರುವ ಸಾಮರ್ಥ್ಯಗಳು ಹುಡುಗಿಯರಲ್ಲಿ ಕಂಡುಬಂದರೆ–ಧೈರ್ಯ, ಸಾಹಸ, ನಾಯಕತ್ವ ಇತ್ಯಾದಿ– ಅದನ್ನು ವಿಶೇಷವಾಗಿ ಪ್ರಶಂಸಿಸಬೇಕು.

ವಿದ್ಯಾರ್ಥಿಗಳು ಕೆಲವೊಮ್ಮೆ ಶಾಲೆಗೆ ಬರುವುದಕ್ಕಿಂತ ಅಲ್ಲಲ್ಲಿ ಕೆಲಸ ಮಾಡಿಕೊಂಡು ಸಂಪಾದಿಸುವ ಆಯ್ಕೆಯನ್ನೇ ಇಷ್ಟಪಡುತ್ತಾರೆ ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಇದಕ್ಕೆ ಅನಾಕರ್ಷಕವಾದ ಶಾಲೆ ಮತ್ತು ಶಾಲಾ ಅಭ್ಯಾಸಗಳೇ ಕಾರಣ. ಶ್ರಮವಿಲ್ಲದೆ ಶಿಕ್ಷಣ ಬಾರದು ಎಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕಾದರೂ ಶಿಕ್ಷಣಕ್ಕೆ ಅಗತ್ಯವಾದ ಶ್ರಮ ಮನಸ್ಸಿಗೆ ಬಾರದಂತೆ ಹಗುರವಾಗಿ ಸಂತೋಷಕರವಾಗಿ ಮಾಡುವುದು ಶಾಲೆಯ ಕೆಲಸ. ಶಾಲೆ ಈ ಕೆಲಸವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಪ್ರೀತಿಯಿಂದ ಎಲ್ಲವನ್ನೂ ಗೆಲ್ಲಬಹುದು. ಮಕ್ಕಳನ್ನು ಪ್ರೀತಿಸಿದಾಗ, ಅವರೊಂದಿಗ ಒಳ್ಳೆಯ ವಾತ್ಸಲ್ಯಯುತವಾದ ಸಂಬಂಧಗಳನ್ನಿಟ್ಟುಕೊಂಡಾಗ ಬೇಡವೆಂದರೂ ಮಕ್ಕಳು ಶಾಲೆಗೆ ಬರುತ್ತಾರೆ. ಶಾಲೆ ಮಕ್ಕಳ ಮನಸ್ಸನ್ನು ಗೆಲ್ಲಬೇಕು. ಅತಿ ಕಠಿಣವಾದ ಅಭ್ಯಾಸಗಳು, ದಂಡನೆ ಅಥವಾ ಶಿಕ್ಷೆ ಇವುಗಳು ಶಾಲೆಯೊಳಗೆ ಇರಲೇ ಬಾರದು. ಕೆಲಸಮಾಡಲು ಕಲಿಯಲು ಹಿಂಜರಿಯುವ ಮಗುವಿಗೆ ಸೂಕ್ತವಾದ ಉಪಾಯಗಳನ್ನು ಕಂಡುಹಿಡಿದು ಅದು ಶಾಲೆಯನ್ನು ಇಷ್ಟಪಡುವಂತೆ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಮಗುವನ್ನು ಪ್ರಶಂಸಿಸಲು, ವಿದ್ಯಾರ್ಥಿಯನ್ನು ಕುರಿತ ಮೆಚ್ಚುಗೆಯನ್ನು ಸೂಚಿಸಲು ಸಿಗುವ ಎಲ್ಲ ಅವಕಾಶಗಳನ್ನೂ ಗರಿಷ್ಟ ಮಟ್ಟದಲ್ಲಿ ಬಳಸಿಕೊಳ್ಳಬೇಕು. ಅಂತಹ ಒಂದೇ ಒಂದು ಅವಕಾಶವನ್ನೂ ಕಳೆದುಕೊಳ್ಳಬಾರದು. ಈ ಮೆಚ್ಚುಗೆ ಮಕ್ಕಳನ್ನು ಶಾಲೆಯಲ್ಲಿರಿಸುತ್ತದೆ. ಇದರಿಂದ ಮಗು ಶಿಕ್ಷಣವನ್ನು ಮುಂದುವರಿಸುತ್ತದೆ. ಶಿಕ್ಷಣ ಪೂರ್ಣಗೊಳಿಸುತ್ತದೆ. ಇತರರಿಗೆ ಸಮನಾಗುತ್ತದೆ. ಹೀಗೆ ಶಾಲೆ ಮಗುವು ಇಷ್ಟಪಡುವ ತಾಣವಾಗಬೇಕು.

ವಿದ್ಯಾರ್ಥಿಗಳನ್ನು, ಅವರ ಅಭಿಪ್ರಾಯಗಳನ್ನು ಗೌರವಿಸಬೇಕು. ಅವರು ಕೊಡುವ ಸೂಚನೆಗಳನ್ನು ಸರಿಯಾಗಿದ್ದರೆ ಅನ್ವಯಸಿಕೊಳ್ಳಬೇಕು. ಇದು ವಿದ್ಯಾರ್ಥಿಗಳೇ ಸೂಚಿಸಿದ ವಿಚಾರ ಎಂದು ಹೇಳಿ ಅದು ಯಶಸ್ವಿಯಾದಾಗ ಅವರನ್ನು ಎಲ್ಲರೆದುರಿಗೆ ಪ್ರಶಂಸಿಸಬೇಕು. ಈ ರೀತಿ ಆತ್ಮಗೌರವ, ಆತ್ಮವಿಶ್ವಾಸ ಇವು ಜಾಗೃತವಾಗಿ, ಬೆಳೆಯಲು ಅನುವು ಮಾಡಿಕೊಡಬೇಕು. ಇಂತಹ ಅಂಶಗಳು ಮಕ್ಕಳನ್ನು ಶಾಲೆಗೆ ಕರೆತರುವುದಲ್ಲದೆ ಉಳಿಕೆಗೆ ಸಹಕಾರಿಯಾಗುತ್ತದೆ.

ಶಾಲೆಗಳಲ್ಲಿ ಸಮಾನತೆಯ ಸಾಧನೆ ಎಂದರೆ, ಸಮತೆಯ ಕ್ರಮಗಳ ಅನುಷ್ಠಾನವೇ. ಈ ಸಮತೆಯ ಕ್ರಮಗಳನ್ನು ಶಾಲೆಯಲ್ಲಿ ಅನುಸರಿಸುವುದರ ಮೂಲಕ ಶಾಲೆಗಳಲ್ಲಿ ಸಮಾನತೆಯನ್ನು ಸಾಧಿಸುವುದು ಹೇಗೆ ಎಂಬುದನ್ನು ಗಮನಿಸೋಣ.

ಕೆಳಕಂಡ ಅಂಶಗಳನ್ನೊಳಗೊಂಡ ತಪಶೀಲು ಪಟ್ಟಿಯ ಸಹಾಯದಿಂದ, ಸಮತೆಗೆ ಸಂಬಂಧಿಸಿದ ಅಂಶಗಳು ಶಾಲೆಯಲ್ಲಿದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಇಲ್ಲವಾದಲ್ಲಿ ಅವುಗಳು ಒಳಗೊಳ್ಳುವಂತೆ ಕ್ರಮಗಳನ್ನು ಕಾರ್ಯಕ್ರಮಗಳನ್ನು ಅನ್ವಯಿಸಿಕೊಳ್ಳಬಹುದು.

**ಅವಕಾಶಗಳ ಲಭ್ಯತೆ :**

1. ದಾಖಲಾತಿ ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿ ಅಥವಾ ಜನಾಂಗವನ್ನು ಆಧರಿಸಿರುವುದಿಲ್ಲ.
2. ಸಹಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಕೆ ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿ ಅಥವಾ ಜನಾಂಗವನ್ನು ಆಧರಿಸಿರುವುದಿಲ್ಲ.
3. ಶಾಲೆಯ ವಿವಿಧ ಕಾರ್ಯಗಳಲ್ಲಿ ಮಕ್ಕಳ ಭಾಗವಹಿಸುವಿಕೆ ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿ ಅಥವಾ ಜನಾಂಗವನ್ನು ಆಧರಿಸಿರುವುದಿಲ್ಲ.

**ಕಲಿಕೆಗೆ ಅವಕಾಶಗಳು:**

ಶಾಲೆಯು ಎಲ್ಲ ವಿದ್ಯಾರ್ಥಿಗಳಿಗೂ ಶೈಕ್ಷಣಿಕ ಯಶಸ್ಸನ್ನು ಸಾಧಿಸಲು ಅವಕಾಶಗಳನ್ನು ನೀಡುತ್ತದೆ.

1. ಪಠ್ಯಕ್ರಮವು ಸವಾಲಿನಿಂದ ಕೂಡಿದ್ದು, ಸಾಂಸ್ಕೃತಿಕವಾಗಿ ಸಮರ್ಪಕವಾದ ಕಲಿಕೆಯನ್ನು ಕಡ್ಡಾಯವಾಗಿ ಒಳಗೊಂಡಿರುತ್ತದೆ.
2. ಮಕ್ಕಳ ಭಾಗವಹಿಕೆ ಅವರ ಆರ್ಥಿಕ ಸ್ಥಿತಿ ಅಥವಾ ಜನಾಂಗವನ್ನು ಆಧರಿಸಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವಂತೆ, ಶಾಲಾ ಸಿಬ್ಬಂದಿ ಎಲ್ಲ ಮಕ್ಕಳಿಂದಲೂ ಹೆಚ್ಚಿನ ಮಟ್ಟದ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ.
3. ವಿವಿಧ ರೀತಿಯ ಕಲಿಕಾರ್ಥಿಗಳ ಅಗತ್ಯಗಳನ್ನು ಪೂರೈಸುವಂತೆ ಬೋಧನಾ ಮಾರ್ಗಗಳನ್ನು ಬದಲಿಸಿಕೊಳ್ಳಲು ಅಧ್ಯಾಪಕರಿಗೆ ತರಬೇತಿ ನೀಡಲಾಗಿದೆ.
4. ಅಧ್ಯಾಪಕರು ಮತ್ತು ಶಾಲೆಯ ಇತರ ಸಿಬ್ಬಂದಿ ವರ್ಗವು ಶೈಕ್ಷಣಿಕ ಯಶಸ್ಸಿಗೆ ಬೆಂಬಲವಾಗುವಂತೆ ಪೋಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ.

**ಅಂತರ್ಗತ ಸಮುದಾಯ:**

ಶಾಲಾ ಸಮುದಾಯವು ವಿಭಿನ್ನ ಅನುಭವಗಳೊಂದಿಗೆ ಅಂತರ್ಗತತೆಯ ಲಕ್ಷಣವನ್ನು ಹೊಂದಿದೆ ಮತ್ತು ಪರಸ್ಪರ ಗೌರವವನ್ನು ಹೆಚ್ಚಿಸುತ್ತದೆ.

1. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಕುಟುಂಬಗಳ ನಡುವೆ ಪರಿಚಯ ಮತ್ತು ಉತ್ತಮ ಸಂಬಂಧವಿದೆ. ವಿವಿಧ ಜನಾಂಗ, ವಂಶ ಮತ್ತು ಸಮಾಜೋ ಆರ್ಥಿಕ ಸಮುದಾಯ ಮತ್ತು ಹಿನ್ನೆಲೆಗಳಿಂದ ಬರುವ ಮಕ್ಕಳು ಮತ್ತು ಅಸಾಮರ್ಥ್ಯವಿರುವ ಮಕ್ಕಳು ಒಟ್ಟಾಗಿ ಕಲಿಯುವ, ಕಲೆಯುವ, ಕೆಲಸ ಮಾಡುವ ಮತ್ತು ಸಾಮಾಜೀಕರಣಗೊಳ್ಳುವ ರೀತಿಯ ಅಂತರ್ಗತ ಪರಿಸರ ಶಾಲೆಯಲ್ಲಿದೆ.
2. ವಿದ್ಯಾರ್ಥಿಗಳಂತೆಯೇ ಆಡಳಿತ ಮತ್ತು ಬೋಧಕ ವರ್ಗದಲ್ಲೂ ವೈವಿಧ್ಯತೆ ಇದ್ದು, ಅವರು ಮಕ್ಕಳಿಗೆ ಮಾದರಿಗಳಾಗಿ ವರ್ತಿಸುತ್ತಾರೆ ಮತ್ತು ಸಮಾನ ಅನುಭವಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ.
3. ಶಾಲಾ ಪಠ್ಯ, ಕಲಿಕಾ ಸಾಮಗ್ರಿ ಮತ್ತು ಭೌತಿಕ ಪರಿಸರದಲ್ಲಿ ವಿಭಿನ್ನ ಸಂಸ್ಕೃತಿಗಳ ಸಮನ್ವಯದಿಂದ ವಿದ್ಯಾರ್ಥಿಗಳ ಗುಂಪಿನ ವೈವಿಧ್ಯತೆಯು ಶಾಲಾ ಪರಿಸರದಲ್ಲಿ ವ್ಯಕ್ತವಾಗುತ್ತದೆ.

**ಸಮರ್ಪಕ ಶಿಸ್ತು**

1. ವಿವಿಧ ಸಾಮಾಜಿಕ ಗುಂಪುಗಳ ವಿದ್ಯಾರ್ಥಿಗಳಲ್ಲಿ ವಿವಿಧ ಮಟ್ಟದ ಶಿಸ್ತು ಕಾಣಿಸಿಕೊಳ್ಳುವುದಿಲ್ಲ.
2. ಘರ್ಷಣೆಯನ್ನು ಪರಿಹರಿಸುವ ಮಾರ್ಗಗಳು ಪುನಶ್ಚೇತನಕಾರಿಯಾದ ನ್ಯಾಯವನ್ನು ಮತ್ತು ಕಲಿಕಾ ಸಮುದಾಯದಿಂದ ಮಕ್ಕಳು ದೂರವಾಗದ ಮಾರ್ಗಗಳನ್ನು ಒಳಗೊಂಡಿರುತ್ತವೆ.
3. ಶಿಸ್ತು ಪೋಷಕ ಕ್ರಮಗಳು ಜನಾಂಗ, ವರಮಾನ, ಲಿಂಗ ಅಥವಾ ಯಾವುದೇ ರೀತಿಯ ಅಸಾಮರ್ಥ್ಯ ಸ್ಥಿತಿಗಳ ಆಧಾರದ ಮೇಲೆ ಜರುಗುವಂತಹುದ್ದಲ್ಲ.

**ಸಮುದಾಯದ ಭಾಗವಹಿಕೆ**

1. ಎಲ್ಲ ಕುಟುಂಬಗಳೂ ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸಿ ಕಾರ್ಯನಿರತವಾಗಿರುತ್ತವೆ.
2. ಕುಟುಂಬದ ಸದಸ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸಂವಹನ ನಡೆಯುತ್ತದೆ.

3. ಕುಟುಂಬದ ಸದಸ್ಯರು ಶಾಲಾ ಸಮುದಾಯದಲ್ಲಿ ಮತ್ತು ಮಕ್ಕಳ ಕಲಿಕೆಯಲ್ಲಿ ವಿವಿಧ ರೀತಿಯಲ್ಲಿ ಭಾಗವಹಿಸಲು ಶಾಲೆ ಅವಕಾಶ ಮಾಡಿಕೊಡುತ್ತದೆ.

4. ಶಾಲಾ ಸಂಬಂಧಿ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಮತ್ತು ಕಾರ್ಯಗಳಲ್ಲಿ ಪೋಷಕರ ನಾಯಕತ್ವ ಮತ್ತು ಭಾಗವಹಿಕೆ ಶಾಲಾ ಸಮುದಾಯದ ವೈವಿಧ್ಯತೆಯನ್ನು ಬಿಂಬಿಸುತ್ತದೆ.

## ಶೈಕ್ಷಣಿಕ ಸಾಧನೆ

1. ಶೈಕ್ಷಣಿಕ ಸಾಧನೆಯಲ್ಲಿ ಮತ್ತು ಫಲಿತಾಂಶಗಳಲ್ಲಿರುವ ತಾರತಮ್ಯವನ್ನು ಹೋಗಲಾಡಿಸುತ್ತದೆ.
2. ವಿದ್ಯಾರ್ಥಿಗಳ ಪರೀಕ್ಷಾ ಅಂಕಗಳು ಜನಾಂಗ, ಆರ್ಥಿಕ ಸ್ಥಿತಿಯನ್ನು ಮೀರಿ ಹೋಲುತ್ತದೆ.
3. ಭಾಗವಹಿಕೆ ಮತ್ತು ಯಶಸ್ಸು ಜನಾಂಗ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುವುದಿಲ್ಲ.
4. ಹಾಜರಾತಿ, ಯಶಸ್ವಿಯಾಗಿ ತರಗತಿಯನ್ನು ಮುಗಿಸುವುದು, ಶಾಲೆಯನ್ನು ಮಧ್ಯದಲ್ಲೇ ಬಿಡುವುದು ಇವುಗಳಿಗೂ ಜನಾಂಗ ಅಥವಾ ಆರ್ಥಿಕ ಸ್ಥಿತಿಗೂ ಸಂಬಂಧವಿಲ್ಲ.

## ಸಂಪನ್ಮೂಲಗಳು

ಶಾಲೆಯ/ಜಿಲ್ಲೆಯ ಸಂಪನ್ಮೂಲಗಳನ್ನು ಸಮನಾಗಿ ಹಂಚಲಾಗುತ್ತದೆ. ಈ ಸಂಪನ್ಮೂಲಗಳು ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಬೇಕಾದ ಅಗತ್ಯಗಳಿಗನುಗುಣವಾಗಿರುತ್ತವೆ.

1. ಶಾಲಾ ಸೌಕರ್ಯಗಳು ಮತ್ತು ತರಗತಿಗಳು ಹೆಚ್ಚಿನ ಆರ್ಥಿಕ ಸ್ಥಿತಿ ಇರುವ ವಿದ್ಯಾರ್ಥಿಗಳಿಗೂ ಕಡಿಮೆ ಆರ್ಥಿಕ ಸ್ಥಿತಿ ಇರುವ ವಿದ್ಯಾರ್ಥಿಗಳಿಗೂ ಸಮಾನವಾಗಿದೆ.
2. ಎಲ್ಲ ಮಕ್ಕಳಿಗೂ ಅಗತ್ಯವಾದ ಪುಸ್ತಕಗಳು, ತಂತ್ರಜ್ಞಾನ ಮತ್ತು ಇತರ ವಸ್ತುಗಳ ಸಮಪಾಲು ಸಿಗುತ್ತದೆ.
3. ವಿದ್ಯಾರ್ಥಿಗಳ ಕಲಿಕೆಯ ಮೇಲೆ ಗರಿಷ್ಠ ಪ್ರಭಾವ ಬೀರುವಂತೆ ಅತಿ ಹೆಚ್ಚಿನ ತರಬೇತಿ ಮತ್ತು ಅನುಭವಗಳನ್ನು ಪಡೆದ ಅಧ್ಯಾಪಕರ ನೇಮಕಾತಿ ಮಾಡಲಾಗಿದೆ.
4. ಖರ್ಚುವೆಚ್ಚದ ಪ್ರಕ್ರಿಯೆ ಅಂತರ್ಗತ ಸ್ವರೂಪದ್ದಾಗಿದ್ದು ಪಾರದರ್ಶಕವೂ ಸಮತೆಯ ಗುರಿಯನ್ನುಳ್ಳದ್ದೂ ಆಗಿದೆ.

## ಹಂಚಿಕೊಂಡ ಬದ್ಧತೆ

ಇಡೀ ಶಾಲಾ ಸಮುದಾಯವು ಶಿಕ್ಷಣದ ಸಮತೆಯ ಪ್ರಕ್ರಿಯೆಯ ಕಡೆಗೆ ಬದ್ಧವಾಗಿದ್ದು ಪ್ರಗತಿಯ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತದೆ.

1. ವಿವಿಧ ದೃಷ್ಟಿಕೋನವಿರುವ ಮತ್ತು ಅನುಭವವಿರುವ ಫಲಾನುಭವಿಗಳು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಗಳಾಗಿರುತ್ತಾರೆ.
2. ಶಾಲಾ ನಿಯಮಗಳು ಮತ್ತು ಅಭ್ಯಾಸಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಸಮತೆಯ ಪರಿಣಾಮ ಮಾಪನವನ್ನು ಅನ್ವಯಿಸಿಕೊಳ್ಳಲಾಗುತ್ತದೆ.
3. ಸಮುದಾಯದ ಫಲಾನುಭವಿಗಳು ಸಮತೆಯ ಅನ್ವಯದ ನಿರಂತರ ಅಳವಡಿಕೆಯ ಕುರಿತು ಜಾಗೃತರಾಗಿರುತ್ತಾರೆ ಮತ್ತು ಸಮತೆಯ ಬೆಳವಣಿಗೆಯಲ್ಲಿ ಕ್ರಿಯಾಶೀಲರಾಗಿರುತ್ತಾರೆ.

## ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಮೇಲೆ ಹೇಳಿರುವಂತೆ ಸಮತೆಯ ಸಾಧನೆಯ ಅಂಶಗಳನ್ನು ತಪಶೀಲು ಪಟ್ಟಿಯ ರೀತಿಯಲ್ಲಿ ಗುರುತಿಸಿಕೊಂಡು ಅವು ನಿಮ್ಮ ಶಾಲಾ ಸನ್ನಿವೇಶದಲ್ಲಿ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ಎಂಬುದನ್ನು ಗುರುತಿಸಿಕೊಂಡು ಅಗತ್ಯವಾಗಿ ಸಾಧಿಸಬೇಕಾದ ಅಂಶಗಳನ್ನು ಗುರುತಿಸಿಕೊಂಡು ಅವುಗಳನ್ನು ಸಾಧಿಸಲು ಕಾರ್ಯಯೋಜನೆ ರೂಪಿಸಿ, ಅನುಷ್ಠಾನಗೊಳಿಸಿ.

## 4.6.4. ಸಾರಾಂಶಿಸೋಣ

- ಸಮಾಜದ ಎಲ್ಲ ವರ್ಗಗಳಿಗೂ ಶಿಕ್ಷಣಕ್ಕೆ ಸಮನಾದ ಅವಕಾಶವನ್ನು ನೀಡಿಲ್ಲದಿರುವ ವ್ಯವಸ್ಥೆಯೇ ಶಿಕ್ಷಣದಲ್ಲಿ ಅಸಮಾನತೆ ಅಥವಾ ಶೈಕ್ಷಣಿಕ ಅಸಮಾನತೆ. ಇದು ಸಾಮಾಜಿಕವಾಗಿ ಹೊರಗಿಡಲಾಗಿರುವ ಸಮುದಾಯಗಳಿಗೆ ಸಂಬಂಧಿಸಿದಂತೆ ಶಾಲಾ ಹಣಕಾಸು ನಿಧಿ, ಅರ್ಹ ಮತ್ತು ಅನುಭವಿ ಶಿಕ್ಷಕರು, ಪುಸ್ತಕ ಅಥವಾ ಗ್ರಂಥಗಳು, ತಂತ್ರಜ್ಞಾನ ಇವುಗಳನ್ನೂ ಒಳಗೊಂಡ, ಆದರೆ ಇವುಗಳಷ್ಟೇ ಅಲ್ಲದ ಎಲ್ಲ ಶೈಕ್ಷಣಿಕ ಸಂಪನ್ಮೂಲಗಳ ಅಸಮಾನ ಹಂಚಿಕೆ ಎಂದು ಹೇಳಬಹುದು.
- ಶೈಕ್ಷಣಿಕ ಸಮಾನತೆಯ ನಿಹಿತಾರ್ಥಗಳನ್ನು ಆಲೋಚಿಸುವಾಗ ನಾವು ಈ ಶೈಕ್ಷಣಿಕ ಸಮಾನತೆಯನ್ನು ಅಡ್ಡಿಬರುವ ಅಂಶಗಳಾವುವು ಎಂಬುದನ್ನು ಮೊದಲಿಗೆ ಗುರುತಿಸಿಕೊಳ್ಳಬೇಕು.
- ಈ ಕುರಿತು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ನಡೆದು ಶಿಕ್ಷಣದಲ್ಲಿ ಸಮಾನತೆ ಮತ್ತು ಶೈಕ್ಷಣಿಕ ಅವಕಾಶಗಳ ಸಮಾನತೆಯ ಅನೇಕ ನಿಹಿತಾರ್ಥಗಳನ್ನು ಗುರುತಿಸಿ ಅದಕ್ಕನುಗುಣವಾದ ನೀತಿ ನಿಯಮಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈಗ ಆಗಬೇಕಾಗಿರುವುದೆಂದರೆ ಭಾರತದಲ್ಲಿ ಈ ನೀತಿ ನಿಯಮಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಅದಕ್ಕನುಗುಣವಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಗುರಿಸಾಧನೆ ಮಾಡುವುದು.
- ಶಿಕ್ಷಣದಲ್ಲಿನ ಅವಕಾಶಗಳ ಸಮಾನತೆಯ ಇತರ ನಿಹಿತಾರ್ಥಗಳು: ಅಸಮಾನತೆಯ ಸಮಸ್ಯೆ ಸಾರ್ವಜನಿಕರಿಗೆ ಸ್ಪಷ್ಟವಾಗಿ ಕಾಣುವಂತೆ ಮಾಡಬೇಕು, ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಸಿಗುವ ಸೌಲಭ್ಯಗಳ ಕುರಿತು ಅಧ್ಯಾಪಕರು, ಸಮುದಾಯದ ಸದಸ್ಯರು ಮತ್ತು ಪೋಷಕರಿಗೆ ಅರಿವು ಮೂಡಿಸಬೇಕು, ಮಕ್ಕಳ ಬೆಳವಣಿಗೆಯ ಮಾಹಿತಿಯನ್ನು ಹೆತ್ತವರಿಗೆ ತಿಳಿಸಬೇಕು: ಸಮುದಾಯದೊಂದಿಗೆ ಆತ್ಮೀಯ ಸಂಬಂಧ ಬೆಳೆಸಿಕೊಳ್ಳಬೇಕು, ಸಂಶೋಧನೆಯನ್ನು ಪ್ರೋತ್ಸಾಹಿಸಬೇಕು, ವಿವಿಧ ನಿಯೋಗಗಳ ಸಹಕಾರ ಪಡೆಯಬೇಕು, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶಾಲಾ ಸಿಬ್ಬಂದಿಗೆ ತರಬೇತಿ ಕೊಡಬೇಕು, ಅಗತ್ಯವಾದ ಬದಲಾವಣೆಗಳನ್ನು ಜಾರಿಗೆ ತರಲು ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು, ಸಮಾನತೆಯನ್ನು ಕುರಿತ ಸಮಗ್ರ ದೃಷ್ಟಿಕೋನದಿಂದ ಕಾರ್ಯೋನ್ಮುಖರಾಗಬೇಕು, ಸಮಾನತೆಯ ಅಸ್ತಿತ್ವವನ್ನು ಕಾಲಕಾಲಕ್ಕೆ ಖಚಿತಪಡಿಸಿಕೊಳ್ಳಬೇಕು, ಶಾಲಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಅಗತ್ಯಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬೇಕು, ಕಾನೂನಾತ್ಮಕವಾದ ಮತ್ತು ರಚನಾತ್ಮಕವಾದ ಬದಲಾವಣೆಗಳನ್ನು ಜಾರಿಗೆ ತರಬೇಕು, ಗುಣಮಟ್ಟದ ಶಾಲಾಪೂರ್ವ ಕಾರ್ಯಕ್ರಮಗಳನ್ನು ಯೋಜಿಸಬೇಕು.
- ಶಾಲೆಗಳಲ್ಲಿ ಅವಕಾಶಗಳ ಸಮಾನತೆಯ ಸಾಧನೆ–ನಿಹಿತಾರ್ಥಗಳು: ಶ್ರೇಣೀಕರಣ ವ್ಯವಸ್ಥೆಯಲ್ಲಿ ವ್ಯಕ್ತಿಯ ಪ್ರಯತ್ನದಿಂದ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನ ಗಳಿಸಬಹುದಾದ ಸಾಮಾಜಿಕ ವರ್ಗದ ಕಡೆಗೆ ಸಮಾಜವನ್ನು ಪ್ರೋತ್ಸಾಹಿಸಬೇಕು, ಶಿಕ್ಷಣ ನೀಡುವ ಸಂಸ್ಥೆಗಳು ಸಾಮಾಜಿಕವಾಗಿ ಆರ್ಥಿಕವಾಗಿ ಹೆಚ್ಚಿನ ಸ್ಥಾನಮಾನವಿರುವ ಕುಟುಂಬದ ಮಕ್ಕಳು ಮತ್ತು ಕಡಿಮೆ ಸ್ಥಾನಮಾನವಿರುವ ಕುಟುಂಬದ

ಮಕ್ಕಳ ನಡುವೆ ಯಾವುದೇ ತಾರತಮ್ಯ ಮಾಡಬಾರದು, ಅವಕಾಶವಂಚಿತ ಮಕ್ಕಳಿಗೆ ಶಾಲಾ ಸನ್ನಿವೇಶಗಳಿಗೆ, ಪಠ್ಯಕ್ರಮದ ಚಟುವಟಿಕೆಗಳಿಗೆ ಹೊಂದಿಕೊಳ್ಳಲು ಸುಲಭವಾಗುವಂತೆ ಹೆಚ್ಚುವರಿ ಕಲಿಕಾ ಅನುಭವಗಳನ್ನು ಕೊಡಬೇಕು, ಶಾಲೆಯಲ್ಲಿ ಅಸಮಾನತೆಯನ್ನು ನಿವಾರಿಸುವುದು ಎಂದರೆ ಎಲ್ಲ ಮಕ್ಕಳಿಗೂ ದಾಖಲಾತಿಗೆ ಅವಕಾಶ ಕೊಡುವುದು ಮಾತ್ರವಲ, ಎಲ್ಲರಿಗೂ ಅವರವರಿಗೆ ಅಗತ್ಯವಾದಷ್ಟು ಮಾನವೀಯ, ಸಾಮಾಜಿಕ, ಆರ್ಥಿಕ, ಪರಿಸರಾತ್ಮಕ, ಶೈಕ್ಷಣಿಕ, ಭಾವನಾತ್ಮಕ ಮತ್ತು ವೈಯಕ್ತಿಕ ಬೆಂಬಲವನ್ನು ಕೊಡಬೇಕು, ಸಮತೆಯ ಮಾರ್ಗೋಪಾಯಗಳನ್ನು ಕೂಲಂಕಷವಾಗಿ ಗುರುತಿಸಿ ಅನ್ವಯಿಸಿಕೊಳ್ಳಬೇಕು.

## 4.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು 1 ಮತ್ತು 2

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 1

ನೀವು ಯೋಜಿಸಿದ ಕಾರ್ಯಗಳಿಗೆ ಸಂಬಂಧಿಸಿದ ಅನುಭವಗಳನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

### ನಿಮ್ಮ ಪ್ರಗತಿಯನ್ನು ಗುರುತಿಸಿಕೊಳ್ಳಿ 2

ಈ ಕಾರ್ಯಯೋಜನೆಯನ್ನು ಕುರಿತ ನಿಮ್ಮ ಅನುಭವಗಳನ್ನು ಇತರ ಶಾಲೆಗಳ ಶಿಕ್ಷಕರೊಂದಿಗೆ ಹಂಚಿಕೊಳ್ಳಿ.

## 4.6.6.ಘಟಕಾಂತ್ಯ ಅಭ್ಯಾಸಗಳು

ಶಿಕ್ಷಣದಲ್ಲಿ ಅವಕಾಶಗಳ ಸಮಾನತೆ ಮತ್ತು ಶಾಲೆಗಳಲ್ಲಿ ಅವಕಾಶಗಳ ಸಮಾನತೆ–ಇವುಗಳ ನಿಹಿತಾರ್ಥಗಳನ್ನು ವಿವರಿಸಿ.

## 4.6.7. ಪರಾಮರ್ಶನ ಸೂಚಿ?


1. Equity Measures/ - Voices for Racial Justice/

   http://voicesforracialjustice.org/wp-content/uploads/2014/10/Equity-Measures.pdf/

2.. Ten Steps to/ Equity/ in Education- OECDhttps://www.oecd.org/education/school/ 39989494.pdf/

3. Educational/ equity/ - Wikipedia/ https://en.wikipedia.org/wiki/Educational_equity/


*************